
ಸಿ. ಚಂದ್ರಶೇಖರ್

ಅವರ ಕಲಾಕೃತಿಗಳ ಅಧ್ಯಯನ

(ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)



ಸಂಶೋಧಕರು

ವೈಶಾಲಿಬಾಯಿ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಿ. ಚಂದ್ರಶೇಖರ

ಅವರ ಕಲಾಕೃತಿಗಳ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕಿ

ವೈಶಾಲಿಬಾಯಿ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ
ಮತ್ತು
ವಿಶೇಷಾಧಿಕಾರಿಗಳು (ವಿಶ್ರಾಂತ)
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ
ಪ್ರಾದೇಶಿಕ ಕಛೇರಿ : ಬೆಂಗಳೂರು

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೨

ಪ್ರಮಾಣ ಪತ್ರ

ಸಿ ಚಂದ್ರಶೇಖರ ಅವರ ಕಲಾಕೃತಿಗಳ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ. ಎಸ್**.ಸಿ. **ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೬.೦೯.೨೦೧೭

ಸ್ಥಳ : ಕನ್ನಡ ವಿ.ವಿ., ಹಂಪಿ

(ವೈಶಾಲಿಬಾಯಿ)
ಸಂಶೋಧನ ವಿದ್ಯಾರ್ಥಿನಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ವೈಶಾಲಿಬಾಯಿ ಇವರು ಸಾದರಪಡಿಸಿದ **ಸಿ ಚಂದ್ರಶೇಖರ ಅವರ ಕಲಾಕೃತಿಗಳ ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೬.೦೯.೨೦೧೭

ಸ್ಥಳ : ಕನ್ನಡ ವಿ.ವಿ., ಹಂಪಿ

(ಪ್ರೊ. ಎಸ್. ಸಿ. ಪಾಟೀಲ)

ವಿಶೇಷಾಧಿಕಾರಿಗಳು (ವಿಶ್ರಾಂತ)

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ

ಪ್ರಾದೇಶಿಕ ಕಛೇರಿ : ಬೆಂಗಳೂರು



ಸಿ. ಚಂದ್ರಶೇಖರ್
ಅವರ ಕಲಾಕೃತಿಗಳ ಅಧ್ಯಯನ

ಪರಿವಿಡಿ

ಕಲಾವಿದ ಸಿ. ಚಂದ್ರಶೇಖರ



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಕಲೆ ಎನ್ನುವುದು ಮಾನವನ ವೈಶಿಷ್ಟ್ಯ. ಅಂತಯೇ ನಮ್ಮ ಸುತ್ತಲಿನ ನಿಸರ್ಗ ಹಾಗೂ ದೈನಂದಿನ ಜನಜೀವನಗಳು, ಜನಸಾಮಾನ್ಯರಲ್ಲಿ ಪ್ರಭಾವ ಬೀರುವಂತೆ ಕಲಾವಿದನ ಮನಸ್ಸಿನ ಮೇಲೂ ಪ್ರಭಾವ ಬೀರುತ್ತದೆ. ಆದರೆ ಕಲಾವಿದನಲ್ಲಿರುವ ಆತನ ಸಂವೇದನೆಯು ಹೊರಗಿನ ಈ ಘಟನೆಗಳಿಗೆ ಹಾಗೂ ದೃಶ್ಯಗಳಿಗೆ ಉಳಿದವರಿಗಿಂತ ಭಿನ್ನವಾಗಿ, ಹೆಚ್ಚು ತೀವ್ರವಾಗಿ ಸ್ಪಂದಿಸುತ್ತದೆ. ಈ ಸ್ಪಂದನ ಹಾಗೂ ತುಡಿತಗಳು ಅವನ ಕಲಾಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿಯೆನಿಸುತ್ತದೆ. ವಿವಿಧ ಕಲೆಗಳು ಮನುಷ್ಯನ ವಿವಿಧ ಇಂದ್ರಿಯಗಳಿಗೆ ಸಂಬಂಧಿಸಿ ತೃಪ್ತಿಕೊಡುತ್ತವೆ. ಹೀಗೆ ಸಂಗೀತ ಹಾಗೂ ಸಾಹಿತ್ಯಗಳು ಕಿವಿಗೆ ಸಂಬಂಧಿಸಿದ ಕಲೆಗಳಾಗಿವೆ. ಸಾಹಿತ್ಯವನ್ನು ಕಿವಿಯಿಂದ ಕೇಳುವಂತೆ ಕಣ್ಣಿನಿಂದ ಓದಿಯೂ ಸಂತಸ ಪಡಬಹುದು. ಆದರೆ ಸಂಗೀತಕ್ಕೆ ಕಿವಿಯೇ ಪ್ರಧಾನ ಇಂದ್ರಿಯವಾಗಿದೆ. ಇದರ ಹಾಗೆಯೇ ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳಂತಹ ಕಲೆಗಳು ಕಣ್ಣಿಗೆ ಸಂಬಂಧಿಸಿದವು. ಎಲ್ಲ ನಿಜವಾದ ಕಲೆಗಳೂ ಮೂಲತಃ ಸೌಂದರ್ಯಾನುಭೂತಿಗೆ ಕಾರಣವಾಗುತ್ತವೆ. ಈ ಆಧುನಿಕ ಕಾಲದಲ್ಲಿ ಕಲೆಗಳನ್ನು ಲಲಿತ ಹಾಗೂ ಲಲಿತೇತರ ಎಂದು ಎರಡು ಮುಖ್ಯ ವಿಭಾಗಗಳನ್ನು ಮಾಡಿ ಗುರುತಿಸಲಾಗುತ್ತದೆ.

ಲಲಿತಕಲೆಗಳಲ್ಲಿ ಒಂದು ಪ್ರಮುಖ ಪ್ರಕಾರವಾದ ಚಿತ್ರಕಲೆ ಎಂದರೇನು ಎನ್ನುವ ಬಗ್ಗೆ ಹಲವರಲ್ಲಿ ಗೊಂದಲವಿದೆ. ಏಕೆಂದರೆ ನಮ್ಮ ಪ್ರಾಚೀನರು ಸಾಮಾನ್ಯವಾಗಿ ಮಾಡಿದ ಕೆಲಸಗಳೆಲ್ಲವುಗಳಲ್ಲೂ ಪ್ರಯೋಜನವನ್ನೇ ಹೆಚ್ಚಾಗಿ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದರು. ಅಂತಯೇ ಚಿತ್ರಕಲೆಯೂ ಸೇರಿದಂತೆ ಇತರ ಕಲೆಗಳನ್ನೂ ಉಪಯೋಗದ ದೃಷ್ಟಿಯಿಂದಲೇ ಅವರು

ಗಮನಿಸಿದರು. ಅವರ ದೃಷ್ಟಿಯಲ್ಲಿ ಚೆನ್ನಾಗಿ, ಅಚ್ಚುಕಟ್ಟಾಗಿ ಮಾಡುವ ಕೆಲಸಗಳೆಲ್ಲವೂ ಕಲೆ ಎಂದು ಕರೆಸಿಕೊಳ್ಳಲ್ಪಡುತ್ತಿತ್ತು.

ಕಲೆಯ ಮುಖ್ಯ ಉದ್ದೇಶ ಸೌಂದರ್ಯ ಸೃಷ್ಟಿ. ತನ್ಮೂಲಕ ನೋಡುಗನಲ್ಲಿ ಸೌಂದರ್ಯಾನುಭವ ಉಂಟುಮಾಡುವುದು. ಒಂದು ಸುಂದರವಾದ ನಿಸರ್ಗ ದೃಶ್ಯವನ್ನು ನೋಡಿದಾಗ, ಅಲ್ಲಿರುವ ರಮ್ಯತೆಯನ್ನು, ವರ್ಣ ವೈಭವವನ್ನು, ಆಕಾರಗಳ ಏರಿಳಿತದ ಮೂಲಕ ಉಂಟಾಗುವ ಆಹ್ಲಾದಕರ ಅನುಭವವನ್ನು ಮೆಚ್ಚಿಕೊಂಡು ಅದು ಒದಗಿಸುವ ಸೊಗಸಿನಲ್ಲಿ ತಲ್ಲೀನವಾಗಬೇಕಾದುದು ಯಾವುದೇ ಕಲಾಸಕ್ತನ ಮೊತ್ತಮೊದಲ ಕೆಲಸ. ಅದಕ್ಕೆ ಬದಲಾಗಿ ಅಲ್ಲಿರುವಂತಹ ಮರಗಳಲ್ಲಿ ಶ್ರೀಗಂಧದ ಮರಗಳೆಷ್ಟಿವೆ? ತೇಗದ ಮರಗಳೆಷ್ಟಿವೆ? ಅವುಗಳನ್ನು ಕಡಿದು ಮಾರಿದರೆ ಎಷ್ಟು ಹಣ ದೊರೆಯಬಹುದು? ಎನ್ನುವ ಪ್ರಶ್ನೆ ಮೊದಲು ಎದುರಾಗಬಾರದು. ಹಾಗಾದಾಗ ಅದು ವ್ಯಾವಹಾರಿಕವೂ, ಪ್ರಾಯೋಜಕವೂ ಆಗುತ್ತದೆ. ಕಲೆಯ ಉದ್ದೇಶ ವ್ಯಾವಹಾರಿಕವಾದುದಲ್ಲ, ಅದರ ಮೊದಲ ಉದ್ದೇಶ ಸೌಂದರ್ಯಾತ್ಮಕವಾದುದು. ನಮ್ಮ ಭಾರತೀಯ ಕಾವ್ಯ ಮೀಮಾಂಸೆಯ ಸಂದರ್ಭದಲ್ಲೂ ಇದೇ ಅಭಿಪ್ರಾಯವನ್ನು ನಮ್ಮ ಅಲಂಕಾರಿಕರು ವ್ಯಕ್ತಪಡಿಸಿದ್ದಾರೆ. ಕಾವ್ಯದಿಂದ (ಕಲೆಯಿಂದ) ಎಲ್ಲರೂ ಪಡೆಯುವುದು ರಸಾಸ್ವಾದನೆಯೊಂದೇ. ಅದರಿಂದ ನಮಗೆ ತಿಳಿವಳಿಕೆಯೂ ಬರಬೇಕಾಗಿಲ್ಲ ಎಂದು ನಮ್ಮ ಪ್ರಾಚೀನ ಅಲಂಕಾರಿಕರಲ್ಲಿ ಒಬ್ಬನಾದ ಭಟ್ಟಲೊಲ್ಲಟನ ಅಭಿಪ್ರಾಯವಾಗಿರುವುದುಸ ಗಮನಾರ್ಹ. ಹೀಗೆ ಕಲೆಯಲ್ಲಿ ರಸಾನುಭವವೇ ಪರಮಗುರಿ. ಅದರ ಮೂಲಕ ತತ್ತ್ವಗಳನ್ನು, ನೀತಿಗಳನ್ನೂ ಹೇಳಬಹುದಾದರೂ ಅದು ದೃಶ್ಯ ಭಾಷೆಯ ಮಿತಿಗೆ ಒಳಪಟ್ಟಿರಬೇಕು. ಅದರ ಬದಲಿಗೆ ಅಮೋಘವಾದ ತತ್ವವನ್ನೋ, ನೀತಿಯನ್ನೋ ಮಾತ್ರ ಹೇಳಲು ತೊಡಗಿದರೆ ಅದು ಕಲೆಯಾಗಿ ಸೋತಿದೆ ಎನ್ನಬಹುದು.

ಕಲಾವಿದನ ಮನೋಧರ್ಮ ಅವನ ಸಾಮಾಜಿಕ ಆವರಣದಿಂದ ರೂಪಗೊಳ್ಳುತ್ತದೆ. ಅವನು ಪಡೆದ ಶಿಕ್ಷಣ, ಸಂಸ್ಕಾರಗಳು ಕೂಡಾ ಅವನ ಮನೋಧರ್ಮ ರೂಪಿಸುವಲ್ಲಿ ಸಹಕರಿಸುತ್ತವೆ, ಹೀಗೆ ತಾನು ಕಂಡ ಜಗತ್ತನ್ನು, ತಾನು ಅರ್ಥ ಮಾಡಿಕೊಂಡ ಜಗತ್ತನ್ನು ಅವನು ತನ್ನ ಮಾಧ್ಯಮದಲ್ಲಿ ರೂಪಿಸುತ್ತಾನೆ. ಈ ಕಾರಣಕ್ಕಾಗಿಯೇ ಪ್ರತಿಯೊಬ್ಬ ಕಲಾವಿದನ ಕೃತಿಯೂ ಉಳಿದವರಿಂದ ಭಿನ್ನವಾಗಿರುತ್ತದೆ. ಒಂದೇ ದೃಶ್ಯವನ್ನು ರಚಿಸಲು ಹಲವಾರು ಕಲಾವಿದರಿಗೆ ಹೇಳಿದರೆ ಅದು ಒಂದೇ ತೆರನಾಗಿಲ್ಲದಿರುವುದಕ್ಕೆ ಇದೇ ಕಾರಣ. ನಾಥನ್ ನೋಬ್ಲರ್ ಎಂಬುವವನು ಈ ವಿಚಾರವನ್ನು ಸ್ಪಷ್ಟಪಡಿಸುತ್ತ ಇದಕ್ಕೆ ದೃಕ್‌ಗ್ರಹಿಕೆ (perception) ಕಾರಣ ಎಂದು ಹೇಳುತ್ತಾನೆ. ಒಂದೇ ದೃಶ್ಯವನ್ನು ನೋಡುವ ವಿವಿಧ ಸಂಸ್ಕೃತಿಯಲ್ಲಿನ

ಜನರಲ್ಲಿ ಅವರವರ ಸಂಸ್ಕಾರದಿಂದ, ಅನುಭವದಿಂದ ಪ್ರಭಾವಿತಗೊಳ್ಳುವ ದೃಕ್‌ಗ್ರಹಿಕೆ ಬೇರೆ ಬೇರೆಯಾಗಿರುತ್ತದೆ. ಎದುರಿಗೆ ಕಾಣುವ ವಸ್ತುಗಳನ್ನು ಕುರಿತಂತೆ, ಮೌಲ್ಯಗಳು, ಮೆಚ್ಚುಗೆಗಳು ಬೇರೆ ಬೇರೆಯಾಗಿರುತ್ತದೆ. ಈ ಕಾರಣಕ್ಕಾಗಿಯೇ ಪ್ರತಿಯೊಬ್ಬ ಕಲಾವಿದನ ದೃಕ್ ಬಿಂಬಗಳು ವಿಭಿನ್ನವಾಗಿರುತ್ತವೆ. ಜಗತ್ತಿನಲ್ಲಿ ಈ ವರೆಗೆ ಕೋಟ್ಯಾಂತರ ಕಲಾಕೃತಿಗಳು ನಿರ್ಮಾಣವಾಗಿವೆ. ಅದರಲ್ಲೂ ಶತಶತಮಾನಗಳು ಕಳೆದಂತೆ ಚಿತ್ರಶೈಲಿಯಲ್ಲಿ, ನಿರ್ವಹಣೆಯಲ್ಲಿ, ತಂತ್ರದಲ್ಲಿ, ವಸ್ತುವಿನ ಆಯ್ಕೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಹೀಗೆ ಮಾನವನ ಮನಸ್ಸನ್ನು ರೂಪಿಸುವ ಸಂಸ್ಕೃತಿಗಳು ಬೇರೆಯಾದಂತೆ ಕಲೆಯ ರೂಪಗಳೂ ಬದಲಾಗಿವೆ.

ಕಲೆಯಲ್ಲಿ ಸಾಮಾನ್ಯವಾಗಿ ಈ ಅಂಶಗಳನ್ನು ಮುಖ್ಯವೆಂದು ಪರಿಗಣಿಸಲಾಗುತ್ತದೆ. ಅನುಭವವೊಂದು ಕಲಾವಿದನ ವೈಯಕ್ತಿಕದ್ದಾದರೂ ಅದು ಅವೈಯಕ್ತಿಕ ಅಥವಾ ಸಾರ್ವತಿಕಗೊಳ್ಳುವಂತಹ ಶಕ್ತಿಯುಳ್ಳದ್ದಾಗಿರಬೇಕು. ಅದರಂತೆಯೇ ಅನುಭವದ ಕಲ್ಪನೆ ಕೂಡಾ. ಒಬ್ಬ ವ್ಯಕ್ತಿಯು ಭಾವನೆಗಳನ್ನು ವ್ಯಕ್ತಪಡಿಸುವ ಕಲ್ಪನೆಯು ಉಳಿದ ಹಲವಾರು ಜನರ ಭಾವನೆಗಳನ್ನು ವ್ಯಕ್ತಪಡಿಸಬಲ್ಲ ಸಾಮಾನ್ಯ ಗುಣವನ್ನು ಗಳಿಸಿಕೊಳ್ಳುತ್ತದೆ. ಕಲೆಯು ವ್ಯಕ್ತಿಗತವಾಗಿ ಆರಂಭವಾದರೂ ಇತರ ಅನೇಕರಿಗೆ ಅರ್ಥಕೊಡುವಂತಹ, ಅನುಭವ ನೀಡುವಂತಹ ರೂಪವನ್ನು ತಳೆಯುತ್ತದೆ. ಹೀಗೆ ಕಲೆಯು ಇತರರೊಂದಿಗೆ ಸಂವಹನದ ವ್ಯವಸ್ಥೆಯೂ ಆಗುತ್ತದೆ. ಕಲಾಕೃತಿಯೊಂದನ್ನು ನೋಡಿದ ನಂತರವೂ ಅದರ ರೂಪ ಅಥವಾ ಪರಿಣಾಮಗಳು ಸಹೃದಯರ ಮನದಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತದೆ. ಈ ಅನುಭವಗಳು ಅಥವಾ ಅನಿಸಿಕೆಗಳು ಕಲಾವಿದನ ಅಪೇಕ್ಷಿತ ಒಂದು ಮಾಧ್ಯಮಕ್ಕೆ ನಿಷ್ಠೆಯುಳ್ಳದ್ದಾಗಿರುತ್ತದೆ. ಹೀಗೆ ತನ್ನ ಮಾಧ್ಯಮದ ಮೂಲಕ ಬೆಳದು ರೂಪುಗೊಳ್ಳುವ ತನಕ ಯಾವ ಕಲ್ಪನೆಯೂ ಕಲೆಯಾಗುವುದಿಲ್ಲ. ಮಾಧ್ಯಮ ಹಾಗೂ ಕಲ್ಪನೆಗಳ ಸಮ್ಮಿಲನ ಎಷ್ಟರ ಮಟ್ಟಿಗೆ ಆಗಿರುತ್ತದೆಂದರೆ ಮಾಧ್ಯಮದ ಸಾಧ್ಯತೆಯೇ ಕಲ್ಪನೆಯ ಸಾಧ್ಯತೆಯೂ ಆಗುತ್ತದೆ. ಅಂದರೆ ಕಲ್ಪನೆ ಹಾಗೂ ಮಾಧ್ಯಮಗಳು ಪರಸ್ಪರ ಸಹಕಾರಿಯಾಗಿರುತ್ತವೆ. ಹೀಗೆ ಪ್ರತಿಯೊಂದು ಮಾಧ್ಯಮದ ಸಾಧ್ಯತೆಗಳೂ ವಿಭಿನ್ನವಾಗಿರುತ್ತವೆ.

ಕಲ್ಪನೆಯಿಂದ ಸೃಷ್ಟಿಯಾದುದು ಮಾತ್ರ ಕಲೆ. ಕಲಾವಿದನ ಕಲ್ಪನೆಯು ಕಲಾಕೃತಿ ರಚನೆಯೊಂದಿಗೇ ಬೆಳೆಯುತ್ತದೆ. ಹೀಗೆ ಕಲ್ಪನೆ ಬೆಳೆದಲ್ಲಿ ಕಲೆಯಿದೆ. ಆದರೆ ಅದು ಯಾವುದಾದರೂ ಕಲಾತ್ಮಕ ಮಾಧ್ಯಮದ ಮೂಲಕ ಬೆಳೆಯಬೇಕು. ಬೆಳೆಯುವಾಗ ಆಯಾ ಮಾಧ್ಯಮದ ಕೆಲವು ಮಿತಿಗಳಿಗೆ ಒಲಪಟ್ಟು ಅದರ ವೈಶಷ್ಟ್ಯಗಳ ಲಾಭವನ್ನು ಪಡೆಯಬೇಕು. ಇಲ್ಲದಿದ್ದರೆ ಅದು ಕಲೆಯೆನಿಸಿಕೊಳ್ಳುವುದಿಲ್ಲ.

ಕಲಾವಿದನ ಸೃಷ್ಟಿಕ್ರಿಯೆಯಲ್ಲಿ ಅವನಿಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಅವನ ಅನುಭವಗಳನ್ನು ಹೀಗೆಯೇ ಸೃಷ್ಟಿಸಬೇಕೆಂಬ ಬಾಹ್ಯ ಒತ್ತಡಗಳಿರುವುದಿಲ್ಲ. ಹಾಗೆ ಸ್ವಾತಂತ್ರ್ಯವಿರದೇ ಇನ್ನಾರದೋ ಒತ್ತಡಗಳಿಂದ ಕಲಾಕೃತಿ ರಚನೆಯಾದರೆ ಅದು ಕೆಲವೊಮ್ಮೆ ಕಲೆಯಾಗದೇ ಇರಬಹುದು. ಹೀಗೆ ಯಾವುದೇ ಸೃಷ್ಟಿ ಕ್ರಿಯೆಯು ಸಹಜವಾಗಿ ಆರಂಭವಾಗಿರಬೇಕು. ಅಂದರೆ ಸೃಜನಶೀಲ ವ್ಯಕ್ತಿಗೆ ಸ್ವಾತಂತ್ರ್ಯ ಅನಿವಾರ್ಯವಾಗಿ ಇರಬೇಕು. ಸೃಷ್ಟಿಗೆ ಸ್ವಂತಿಕೆ ಅಥವಾ ಅನನ್ಯತೆಯಿರಬೇಕು. ಅದು ಇನ್ನಾರೋ ಮಾಡಿದುದರ ಅನುಕರಣೆಯಾಗಿರಬಾರದು. ಅನುಕರಣೆ ಕಲೆಯಲ್ಲ. ಈ ಕಲಾಕೃತಿ ಸೃಷ್ಟಿಯಲ್ಲಿ ಹೊಸತನವಿರಬೇಕು. ಈ ಕಲಾಕೃತಿ ಸೃಷ್ಟಿಯ ಪ್ರಕ್ರಿಯೆಯು ಒಂದು ಕ್ರೀಡೆಯಿದ್ದಂತೆ. ಕ್ರೀಡೆಯಲ್ಲಿನ ಆನಂದವೂ ಅದರಲ್ಲಿರುತ್ತದೆ.

ಕಲಾನುಭವವು ಮೂಲತಃ ಒಂದು ಭಾವನೇ ಆದರೂ ಅದು ಇತರ ಪ್ರಾಪಂಚಿಕ ಭಾವನೆಗಳಿಂದ ಬೇರೆಯಾದುದು ಎಂದು ಕ್ಲೈವ್‌ಬೆಲ್ ಹೇಳುತ್ತಾನೆ. ಈ ವಿಶಿಷ್ಟ ಭಾವವನ್ನು ಅನುಭವಿಸದೇ, ಕಲಾಕೃತಿಯನ್ನು ನೋಡುವಾಗ ಅದರಲ್ಲಿ ಕೇವಲ ಪ್ರಾಪಂಚಿಕ ಭಾವಗಳನ್ನು ನೋಡ ಹೊರಟರೆ ನಮಗೆ ನಿಜವಾದ ಕಲಾನುಭವ ಸಿದ್ದಿಸುವುದಿಲ್ಲ. ಕಲಾಕೃತಿಯನ್ನು ನೋಡುವಾಗ ಹೊಸದಾದ ಹಾಗೂ ವಿಶಿಷ್ಟವಾದ ಭಾವವನ್ನು ಅನುಭವಿಸದೇ, ಪ್ರಾಪಂಚಿಕ ಭಾವಗಳನ್ನೇ ಅದರಲ್ಲಿಯೂ ಕಾಣುವವರನ್ನು ಕ್ಲೈವ್‌ಬೆಲ್ ಕಟುವಾಗಿ ಟೀಕಿಸುತ್ತಾನೆ. "ಅವರು ಕಲಾಸೃಷ್ಟಿಯನ್ನು ಛಾಯಾಚಿತ್ರದಂತೆ ಪರಿಗಣಿಸುತ್ತಾರೆ; ಅದನ್ನು ನೋಡುವಾಗ ನೂತನ ಅಥವಾ ವಿಶಿಷ್ಟ ಅನುಭವದೆಡೆಗೆ ಸಾಗುವುದರ ಬದಲು ಪ್ರಾಪಂಚಿಕ ಅನುಭವಗಳನ್ನೇ ಅದರಲ್ಲಿ ಕಲ್ಪಿಸಿಕೊಂಡು ಅವುಗಳೆಡೆಗೇ ಸಾಗಿಹೋಗುತ್ತಾರೆ. ಈ ಕ್ಷುಲ್ಲಕವಾದ ಪ್ರಯೋಜನಕ್ಕೆ ಕಲೆಯನ್ನು ಬಳಸುವುದು ದಿನಪತ್ರಿಕೆಯನ್ನು ಓದಲು ದುರ್ಬೀನು ಬಳಸದಂತೆ. ಚಿತ್ರಕಲೆಯಂತೆಯೇ ಸಂಗೀತವನ್ನು ಅದರ ನಾದ ಸಂಯೋಜನಾ ಮಾಧುರ್ಯಕ್ಕೆ ಮೆಚ್ಚಬೇಕು" ಎಂದೂ ಅವನು ಹೇಳುತ್ತಾನೆ. ಇದರ ಉತ್ತುಂಗವನ್ನು ಅಮೂರ್ತ ಚಿತ್ರಗಳಲ್ಲಿ ಕಾಣಬಹುದು. ಹಲವು ಅಮೂರ್ತ ಚಿತ್ರಗಳಲ್ಲಿ ಅದರಲ್ಲೂ ಕ್ಯಾಂಡಿನ್‌ಸ್ಕಿ, ಪಾಲ್ ಕ್ಲೇ ಅವರ ಚಿತ್ರಗಳಲ್ಲಿ ಈ ಅಂಶಗಳೇ ಮುಖ್ಯವಾಗುತ್ತವೆ. ಕಲೆಯು ಅಭಿವ್ಯಕ್ತಿಯಾದರೂ, ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಕ್ರಿಯೆಗಳೆಲ್ಲವೂ ಕಲೆಯಲ್ಲ. ಕಲೆಗೂ ಇತರ ಕ್ರಿಯೆಗಳಿಗೂ ಇರುವ ಕ್ರಿಯೆಗಳಿಗೂ ಇರುವ ವ್ಯತ್ಯಾಸವನ್ನು ತಮ್ಮ 'ಸೌಂದರ್ಯ ಮೀಮಾಂಸೆ' ಪುಸ್ತಕದಲ್ಲಿ ಡಾ॥ ಶ್ರೀನಿವಾಸನ್ ಅವರು ಹೀಗೆ ವಿವರಿಸುತ್ತಾರೆ.

೧. ನಮ್ಮ ಸಂತೋಷದ ಉದ್ಗಾರ ಅಥವಾ ಸಂಕಟದ ನಿಟ್ಟುಸಿರು ಇವು ಕಲಯೆನಿಸುವುದಿಲ್ಲ. ಏಕೆಂದರೆ, ಇವು ನಿಜಜೀವನದಲ್ಲಿ ನಡೆಯುವ ಘಟನೆಗಳಿಗೆ ನಮ್ಮ ಸಹಜ ಪ್ರತಿಕ್ರಿಯೆ. ಆದರೆ ಕಲೆ ಕಲ್ಪಿತ; ಅಭ್ಯಾಸದಿಂದ ಬರತಕ್ಕದ್ದು.

೨. ನಾವು ಮಾರುಕಟ್ಟೆಯಲ್ಲಿ ಆಡುವ ಮಾತುಗಳಾಗಲಿ, ಒಬ್ಬ ಸೈನ್ಯಾಧಿಕಾರಿ ತನ್ನ ಸೈನ್ಯಕ್ಕೆ ಕೊಡುವ ಅಪ್ಪಣೆಯಾಗಲಿ ಕಲೆಯಲ್ಲ. ಏಕೆಂದರೆ, ಅವುಗಳ ಉದ್ದೇಶ ವ್ಯಾವಹಾರಿಕ. ಆದರೆ ಅವುಗಳನ್ನೇ ಬ್ಬ ಕಲಾವಿದನು ರಂಗಭೂಮಿಯ ಮೇಲೆ ನಟಿಸಿದಾಗ ಅವು ಕಲೆಯೆನಿಸುತ್ತವೆ. ಕಾರಣ, ರಸಾನುಭವವನ್ನುಂಟುಮಾಡುವುದೇ ನಟನೆಯ ಉದ್ದೇಶವಾಗಿರುತ್ತದೆ.

೩. ವೈಜ್ಞಾನಿಕ ವಾಕ್ಯಗಳನ್ನೂ ವಸ್ತುಗಳನ್ನೂ ಅವುಗಳ ಸಂಬಂಧಗಳನ್ನೂ ವಿವರಿಸುತ್ತವೆ; ಆದರೆ ಕಲೆಯು ಅವುಗಳನ್ನು ಕುರಿತು ವ್ಯಕ್ತಿಯಲ್ಲಿ ಬರುವ ಪ್ರತಿಕ್ರಿಯೆ, ಭಾವನೆಗಳನ್ನು ರಸವತ್ತಾಗಿ ಆನಂದಾಯಕವಾಗಿ ವ್ಯಕ್ತಪಡಿಸುತ್ತದೆ.

೪. ಕಲೆಯಲ್ಲಿ ವರ್ಣರೇಖೆ ಅಥವಾ ನಾದಸಂಯೋಜನೆಯು ಭಾವನೆಗಳನ್ನು ಅತವಾ ಅಂತರಾರ್ಥವನ್ನು ವ್ಯಕ್ತಪಡಿಸುವ ಮಾಧ್ಯಮವಗಿರುತ್ತದೆ; ಕಲೆಯಲ್ಲಿ ಇಂದ್ರಿಯಗಳಿಗೆ ಗೋಚರಿಸುವ ಈ ಮಾಧ್ಯಮಕ್ಕೆ ವಿಶಿಷ್ಟವಾದ ಪ್ರಾಮುಖ್ಯವಿದೆ. ಈ ಪ್ರಾಮುಖ್ಯವನ್ನು ನಾವು ಮನುಷ್ಯನ ಬೇರೆ ಕ್ರಿಯೆಗಳಲ್ಲಿ ನೋಡಲಾಗುವುದಿಲ್ಲ. ಉದಾಹರಣೆಗೆ, ವ್ಯಾವಹಾರಿಕ ಸಂಭಾಷಣೆಯಲ್ಲಿ ನಾವು ಪದಗಳನ್ನು ರಾಗವಾಗಿ ಉಚ್ಚರಿಸಬೇಕೆಂಬ ನಿಯಮವೇನೂ ಇಲ್ಲ; ಕಾರಣ, ಆದರಲ್ಲಿ ನಮಗೆ ವ್ಯಾವಹಾರಿಕ ಅರ್ಥ, ಉದ್ದೇಶ ಸಾಫಲ್ಯ ಮುಖ್ಯ. ಆದರೆ ಸಂಗೀತದಲ್ಲಿ ಅದೇ ಪದಗಳನ್ನು ರಾಗವಾಗಿ, ಕೇಳುವುದಕ್ಕೆ ಇಂಪಾಗಿ, ಉಚ್ಚರಿಸಬೇಕಾಗುತ್ತದೆ; ಇಲ್ಲದಿದ್ದರೆ ಅದು ಸಂಗೀತವೆನಿಸುವುದಿಲ್ಲ. ಹಾಗೆಯೇ, ನಿತ್ಯ ಜೀವನದಲ್ಲಿ ಒಂದು ವಸ್ತುವಿನ ಬಣ್ಣ ಅಥವಾ ನಮಗೆ ವ್ಯಾವಹಾರಿಕ ಉಪಯೋಗಕ್ಕೆ ಮಾತ್ರ ಸೂಚಕವಾಗಿರುತ್ತದೆ; ಆದರೆ ಅದೇ ವಸ್ತುವಿನ ಚಿತ್ರವನ್ನು ನೋಡುವಾಗ ಅದರ ಬಣ್ಣ ಮತ್ತು ಆಕಾರಗಳನ್ನು ನೋಡುವುದರಲ್ಲಿಯೇ ನಮಗೆ ಆನಂದದ ಅನುಭವವಾಗುತ್ತದೆ. ಈ ರೀತಿ ಕಲೆಯಲ್ಲಿ ಮಾಧ್ಯಮವು ಅತಿಮುಖ್ಯವಾದ್ದರಿಂದ ಕಲಾಕಾರನು ತನ್ನ ಭಾವನೆಗಳನ್ನು ಅದರ ಮೂಲಕ ವ್ಯಕ್ತಪಡಿಸುವ ಸಲುವಾಗಿ ಅದನ್ನು ಸಾಧ್ಯವಾದಷ್ಟೂ ಆಕರ್ಷಣೀಯವಾಗಿ, ಸುಂದರವಾಗಿ ರಚಿಸಲು ಪ್ರಯತ್ನಿಸುತ್ತಾನೆ. ಅನೇಕ ವೇಳೆ ಅತ್ಯಂತ ಸುಂದರವಾದ ಮಾಧ್ಯಮದ ಮೂಲಕ ಕಲಾಕಾರನು ತನ್ನ ವೀಕ್ಷಕರಿಗೆ ಸಾಮಾನ್ಯ ಸಂದರ್ಭಗಳಲ್ಲಿ ರಚಿಸದೇ ಹೋಗಬಹುದಾದ ಭಾವನೆಗಳನ್ನು ಅವರ ಮನಮುಟ್ಟುವಂತೆ, ಅವರಿಗೆ ರುಚಿಸುವಂತೆ ವ್ಯಕ್ತಪಡಿಸಲು ಶಕ್ತನಾಗುತ್ತಾನೆ. ತನ್ನ ಮಾಧ್ಯಮದ ವಿಷಯದಲ್ಲಿ ಕಲಾಕಾರನಿಗಿರುವ ಆಸಕ್ತಿ, ಕುಶಲತೆಗಳಿಂದಲೇ ಅವನ ಕಲೆಯು ಇತರ ಎಲ್ಲಾ ಮಾನವ ಕ್ರಿಯೆಗಳಿಂದಲೂ ಭಿನ್ನವಾದ, ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ.

೫. ಕಲೆಯಲ್ಲಿ ಬೇರೆಡೆಗಳಲ್ಲಿ ಕಾಣದಿರುವ ಭಾವರೂಪಕವಾದ ಸಂಬಂಧವನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಸಾಧಾರಣ ಸಂಭಾಷಣೆಯ ವಾಕ್ಯಗಳಲ್ಲಿ ವ್ಯಾಕರಣಬದ್ಧವಾದ

ಸಂಬಂಧವಿರುತ್ತದೆ; ಹಾಗೆಯೇ, ಬೌದ್ಧಿಕ ಪ್ರಬಂಧಗಳಲ್ಲಿ ತಾರ್ಕಿಕ ಸಂಬಂಧವಿರುತ್ತದೆ; ಆದರೆ, ಸಂಗೀತದಲ್ಲಿ ಇವಕ್ಕಿಂತಲೂ ಮೇಲಾಗಿ ರಾಗ ಅಥವಾ ಭಾವರೂಪಕವಾದ ಸಂಬಂಧವನ್ನು ಕಾಣುತ್ತೇವೆ. ಇತಿಹಾಸಕಾರನು ನಡೆದುಹೋದ ಘಟನೆಗಳ ಅಥವಾ ಯುದ್ಧಗಳನ್ನು ಕುರಿತು ಬರೆಯುವ ಚರಿತ್ರೆಯಲ್ಲಿ ನಮಗೆ ಕಂಡುಬರುವುದು ಕಾಲಾನುಕ್ರಮದಲ್ಲಿ ಸಂಭವಿಸಿದ ಘಟನೆಗಳ ಪರಂಪರೆ; ಆದರೆ ಒಬ್ಬ ಕವಿಯು ಅದೇ ಘಟನೆಗಳನ್ನು ತನ್ನದೇ ಆದ ಸಜೀವ ಭಾವದಲ್ಲಿ ಅಳವಡಿಸಿ ಅದಕ್ಕೆ ನವಚೇತನವನ್ನು ತುಂಬಿ ಜೀವಂತವನ್ನಾಗಿ ಮಾಡುತ್ತಾನೆ.

೬. ಒಬ್ಬ ವ್ಯಕ್ತಿಯು ತನ್ನ ಕಷ್ಟ ಸುಖಗಳನ್ನು ಒಬ್ಬ ಸ್ನೇಹಿತನೊಡನೆ ತೋಡಿಕೊಂಡರೆ ಅದು ಕಲೆಯೆನಿಸುವುದಿಲ್ಲ. ಏಕೆಂದರೆ, ಕಲಾಕಾರನು ಕಲೆಯಲ್ಲಿ ವ್ಯಕ್ತಪಡಿಸುವುದು ತನ್ನ ಸ್ವಂತ ಕಷ್ಟಸುಖಗಳನ್ನಲ್ಲ; ಭಾವಗಳನ್ನು ವ್ಯಕ್ತಪಡಿಸಬೇಕಾದರೂ, ಕಲಾಕಾರನು ಅವುಗಳನ್ನು ವೈಯಕ್ತಿಕ ಚೌಕಟ್ಟಿನಿಂದ ಬಿಡುಗಡೆ ಮಾಡಿ, ಯಾರಿಗಾದರೂ ಅನ್ವಯಿಸುವಂತೆ ಸಾಧಾರಣೀಕರಿಸಿ ವ್ಯಕ್ತಪಡಿಸುತ್ತಾನೆ. ಉದಾಹರಣೆಗೆ, ಕೆಲವು ಕತೆಗಾರರು ತಮ್ಮ ವ್ಯಯಕ್ತಿಕ ಅನುಭವ ಮತ್ತು ಪ್ರತಿಕ್ರಿಯೆಗಳನ್ನು ಕಾಲ್ಪನಿಕ ಘಟನೆ ಮತ್ತು ವ್ಯಕ್ತಿತ್ವಗಳ ಮೂಲಕ ವ್ಯಕ್ತಪಡಿಸಬಹುದು. ಇದರಿಂದ ಓದುಗನಿಗೆ ಕಥೆಯಲ್ಲಿ ಬರುವ ಅನುಭವಗಳನ್ನು ತನ್ನದಾಗಿಯೇ ಮಾಡಿಕೊಂಡು ಅನುಭವಿಸುವಂತಾಗುತ್ತದೆ.

ಸಾಮಾನ್ಯವಾಗಿ ಕಲಾವಿದರು ತಮ್ಮ ವೈಯಕ್ತಿಕ ಅನುಭವಗಳನ್ನು, ಧೋರಣೆಗಳನ್ನು ಅಭಿವ್ಯಕ್ತಿಸುತ್ತಿದ್ದು ಅದು ಹೆಚ್ಚಾಗಿ ಸ್ವಪ್ರೇರಿತವುಳ್ಳದ್ದಾಗಿರುತ್ತದೆ. ಅವರು ಹೊಸ ರೀತಿಯ ಅಭಿವ್ಯಕ್ತಿಗೆ ಪ್ರಯತ್ನಿಸುವುದರಿಂದ, ಅದು ಸಾಮಾನ್ಯವಾಗಿ ಆಯಾ ಸಮಾಜದ ಸಂಸ್ಕೃತಿಯ ಒಪ್ಪಿತ ಆದರ್ಶಗಳಿಂದ ಭಿನ್ನವಾಗಿರುವುದರಿಂದ ಆ ರೀತಿಯ ಸೃಷ್ಟಿಗಳು ಪರಕೀಯವೆನಿಸುವುದು ಸ್ವಾಭಾವಿಕ. ಸೃಜನಶೀಲ ಕಲಾವಿದರು ಚಲಾವಣೆಯಲ್ಲಿರುವ ಕಲಾಪ್ರಕಾರಗಳಲ್ಲಿನ ಶೈಲಿ, ತಂತ್ರ, ನಿರ್ವಹಣೆಗಳಿಗಿಂತ ಮುಂದೆ ಹೋಗಲು ಪ್ರಯತ್ನಿಸುತ್ತಾರೆ. ಈ ಕಾರಣಕ್ಕಾಗಿಯೇ ಹೆಚ್ಚಿನ ಸೃಜನಶೀಲ ಕಲಾವಿದರ ಕೃತಿಗಳನ್ನು ಬಹುತೇಕ ಜನ ಅರ್ಥಮಾಡಿಕೊಳ್ಳುವುದಿಲ್ಲ. ಏಕೆಂದರೆ ಈ ಮೊದಲೇ ಹೇಳಿದಂತೆ ಈ ಕಲಾವಿದರ ದೃಷ್ಟಿಕೋನ, ಸಂಕೇತಗಳು ಮತ್ತು ಶೈಲಿಗಳು ಈಗಾಗಲೇ ಒಪ್ಪಿತವಾದಂತಹ ಸಾಮಾಜಿಕ 'ನೋಡುವಿಕೆ' ಮತ್ತು ಅನುಭವಗಳಿಂದ ಭಿನ್ನವಾಗಿರುತ್ತದೆ. ತಮ್ಮ ಧೋರಣೆ, ಅನುಭವಗಳಿಂದ ಭಿನ್ನವಾದಂತಹ ಈ ಸೃಜನಶೀಲ ಸೃಷ್ಟಿಗಳನ್ನು ಒಪ್ಪಿಕೊಳ್ಳುವುದು ಬಹಳಷ್ಟು ಜನರಿಗೆ ಕಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಜನಪ್ರಿಯ ಕಲೆಗಳಂತೆ ಈ ಸೃಜನಶೀಲ ಕೃತಿಗಳು ಜನಪ್ರಿಯವಾಗುವುದು ವಿರಳ. ಇಂತಹ

ವಿರಳ ಸ್ಥಿತಿಯನ್ನು ಎದುರಿಸಿ ಇಂದು ಕರ್ನಾಟಕದ ಕಲಾವಲಯದಲ್ಲಿ ತಮ್ಮದೇ ಆದ ಸೃಜನಶೀಲ ಕಲಾಕೃತಿಗಳನ್ನು ನಿರ್ಮಿಸುವುದರೊಂದಿಗೆ ಅವರದೇ ಆದ ಛಾಪು ಮೂಡಿಸಿರುವ ಕಲಾವಿದರಾದ ಸಿ. ಚಂದ್ರಶೇಖರ ಕಲಾಕೃತಿಗಳ ಕುರಿತ ಅಧ್ಯಯನ ಇದಾಗಿದೆ.

ಕರ್ನಾಟಕ ಚಿತ್ರಕಲೆ ಮತ್ತು ಶಿಲ್ಪಕಲೆ ಕ್ಷೇತ್ರದಲ್ಲಿ ವಿಳಂಬವಾಗಿದೆಯಾದರೂ, ಕಲೆ, ಕಲಾವಿದರ ಕುರಿತಾಗಿ ಸಂಶೋಧನಾ ಅಧ್ಯಯನಗಳು ಇಂದು ವಿಶ್ವವಿದ್ಯಾಲಯ ಮಟ್ಟದಲ್ಲಿ ಆರಂಭವಾಗುವುದು ಸಂತಸ ತರುವ ಸಂಗತಿಯಾಗಿದೆ. ಅಸಂಖ್ಯಾತ ಕಲಾವಿದರು ಎಲೆಮರೆಯ ಕಾಯಿಯಂತೆ ಇಂದಿಗೂ ದುಡಿಯುತ್ತಿದ್ದಾರೆ. ಕಲೆಯು, ಕಲಾವಿದರು ಕರ್ನಾಟಕದ ಕೀರ್ತಿ ಪತಾಕೆಯನ್ನು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿದ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ.

ಈ ಪರಂಪರೆಯಲ್ಲಿ ಕರ್ನಾಟಕದ ಚಿತ್ರಕಲೆ ಪರಂಪರೆಯ ಏಳಿಗೆಗಾಗಿ ಹಲವಾರು ಕಲಾವಿದರು ತಮ್ಮ ಜೀವಮಾನವನ್ನೆ ಮುಡಿಪಾಗಿಟ್ಟಿರುವುದನ್ನು ಕಾಣುತ್ತೇವೆ. ಅಂಥವರಲ್ಲಿ ರವಿವರ್ಮ, ಎಸ್. ಎಂ. ಪಂಡಿತ್, ಎಂ. ಎ. ಚಟ್ಟಿ, ಆರ್. ಎಂ. ಹಡಪದ, ಜೆ. ಎಸ್. ಖಂಡೇರಾವ್, ಎಂ. ಬಿ. ಪಾಟೀಲ, ವಿ. ಬಿ. ಹಿರೇಗೌಡರ, ವಿಜಯ ಸಿಂಧೂರ, ಜಿ.ಎಸ್.ವಾಸುದೇವ, ಎಂ. ಎಫ್. ಹುಸೇನ್ ಹೀಗೆ ನೂರಾರು ಕಲಾವಿದರ ಪಟ್ಟಿಯನ್ನು ಹೆಸರಿಸಬಹುದು. ಈ ಪರಂಪರೆಯಲ್ಲಿ ಡಾ.ಸಿ.ಚಂದ್ರಶೇಖರವರು ಕೂಡ ಇದ್ದರು. ಪ್ರಸ್ತುತ ಸಿ. ಚಂದ್ರಶೇಖರವರ ಕುರಿತು ಕೆಲವೊಂದು ಸಣ್ಣಪುಟ್ಟ ಕಿರುಪ್ರಬಂಧಗಳು ಅಲ್ಲೊಂದು ಇಲ್ಲೊಂದು ಬಿಡಿ ಬಿಡಿ ಲೇಖನಗಳು ಬಂದಿವೆ. ಒಟ್ಟಾರೆ ಅವರ ಬದುಕು ಮತ್ತು ಕಲಾಕೃತಿಗಳ ಕುರಿತು ಸಮಗ್ರವಾಗಿ ಸಂಶೋಧನೆ ಇಲ್ಲಿಯವರೆಗೆ ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ನಾಡಿನ ದೃಶ್ಯಕಲಾ ಕ್ಷೇತ್ರಕ್ಕೆ ಸಿ. ಚಂದ್ರಶೇಖರವರ ಕೊಡುಗೆ ಅಪಾರ. ಕರ್ನಾಟಕದಲ್ಲಿ ಅಮೂರ್ತ ಕಲೆಗೆ ಹೊಸ ದೃಷ್ಟಿಯೊಂದನ್ನು ನೀಡುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಕ್ರಿಯಾಶೀಲ, ಸೃಜನಶೀಲ, ಚಿಂತನಾ ಪ್ರಧಾನ ಕಲಾವಿದ ಸಿ. ಚಂದ್ರಶೇಖರ ಅವರು ಚಿತ್ರಕಲಾ ಶಿಕ್ಷಕರಾಗಿ, ಮೈಸೂರು ವಿಶ್ವವಿದ್ಯಾಲಯ ಡೀನ್ ಆಗಿ, ಕರ್ನಾಟಕ ಕಲಾ ಚಳುವಳಿಯ ಮುಖ್ಯ ರೂವಾರಿಯಾಗಿ, ಸಾಮಾಜಿಕ ಚಿಂತಕರಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ, ನಾಡಿನ ಕಲಾಕ್ಷೇತ್ರಕ್ಕೆ ವಿಶಿಷ್ಟವಾದ ಸೇವೆ ಸಲ್ಲಿಸಿದ್ದಾರೆ. ಚಿತ್ರಯಾತ್ರೆ ಮೂಲಕ ಗ್ರಾಮೀಣ ಪ್ರದೇಶಗಳಿಗೆ ಚಿತ್ರಕಲೆಯನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಅವರ ಬದುಕು,

ಕಲಾಶಿಕ್ಷಣ, ವೃತ್ತಿಜೀವನ ಹಲವಾರು ಮಜಲುಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಸಿ. ಚಂದ್ರಶೇಖರ ಅವರು ತಮ್ಮ 'ಕಲಾದೃಷ್ಟಿ ಬದುಕಿನಲ್ಲಿ' ಜೀವನ ಮತ್ತು ಕಲೆಯ ಮುಖಾಮುಖಿ, ಹಾಗೆಯೇ ಸಮಾಜ ಮತ್ತು ಸಿ.ಚಂದ್ರಶೇಕರ ಅವರ ಕಲೆಯ ಮುಖಾಮುಖಿಯನ್ನು ಮಾಡುವ ಮೂಲಕ ಅವರ ಕಲಾದೃಷ್ಟಿ, ಕಲಾ ಪ್ರಭಾವವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗುತ್ತದೆ. ಆಧುನಿಕ ಕಲಾ ವೈವಿಧ್ಯತೆಯ ಬಗೆಗಿನ ಇತರ ಪ್ರಕ್ರಿಯೆ ಮತ್ತು ಅನುಸಂಧಾನ ಯಾವ ಬಗೆಯದು ಎನ್ನುವ ವಿಷಯಗಳ ಕಡೆಗೆ ವಿಶ್ಲೇಷಣೆಯನ್ನು ಬೆಳೆಸಲಾಗುವುದು. ಇಲ್ಲಿ ಸಿ. ಚಂದ್ರಶೇಖರವರ ಬದುಕಿನ ಚಿತ್ರಣದೊಂದಿಗೆ ಅವರ ವೈವಿಧ್ಯಮಯವಾದ ರೇಖಾಚಿತ್ರ, ವರ್ಣಚಿತ್ರ, ಶಿಲ್ಪಕಲಾಕೃತಿ, ಗ್ರಾಫಿಕ್-ಚಿತ್ರಗಳು ಇತ್ಯಾದಿ ಕಲಾಕೃತಿ ರಚನಾ ವಿಧಾನವನ್ನು ವಿಶ್ಲೇಷಿಸುವ ಉದ್ದೇಶ ಹೊಂದಲಾಗಿದೆ.

ಸಿ. ಚಂದ್ರಶೇಖರ ಅವರು ವರ್ಣಚಿತ್ರಗಳಂತೆ ರೇಖಾಚಿತ್ರದಲ್ಲಿ ಗಣನೀಯ ಕೆಲಸ ಮಾಡಿದ್ದುದನ್ನು ದಾಖಲಿಸುವ ಉದ್ದೇಶವು ಇಲ್ಲಿದೆ. ಸಿ. ಚಂದ್ರಸೇಖರ ಅವರು ಕಲಾ ಸಂಘಟಕರು, ಕರ್ನಾಟಕದಲ್ಲಿ ಕಲಾಚಟುವಟಿಕೆ ಕಲಾಚಳುವಳಿಯ ಮೂಲಕ ಹೊಸ ಕಲಾಕೃತಿಗಳನ್ನು ಸೃಷ್ಟಿಸಿದ್ದಾರೆ. ಛಿದ್ರಗೊಂಡ ಸಮಾಜವನ್ನು ಭಾವೈಕ್ಯತೆಯ ಹೊಲಿಗೆ ಮೂಲಕ ಒಂದುಗೂಡಿಸುವ ಚಿಂತನಶೀಲ ಸ್ಪಿಚ್ ಕಲಾವಿದರೆಂದೇ ನಾಡಿನುದ್ದಕ್ಕೂ, ದೇಶದುದ್ದಕ್ಕೂ ಪ್ರಸಿದ್ಧಿ ಹೊಂದಿದ್ದಾರೆ. ಇವರ ಕಲಾಕೃತಿಗಳ ವಸ್ತುವಿಷಯ ಮತ್ತು ಇವರ ಮೇಲಾದ ಪ್ರಭಾವ, ಪ್ರೇರಣೆ ಇತ್ಯಾದಿ ಅಂಶಗಳನ್ನು ಮತ್ತು ಅವರು ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ಇಂಥ ಕ್ರಿಯಾಶೀಲ ಕಲಾವಿದರ ಬಗ್ಗೆ ಮುಂದಿನ ಪೀಳಿಗೆಗೆ ಈ ಅಧ್ಯಾಯವು ಉಪಯೋಗವಾಬೇಕೆನ್ನುವ ಸದುದ್ದೇಶದಿಂದ ಹಿರಿಯ ಕಲಾವಿದ ಸಿ. ಚಂದ್ರಶೇಖರ ಅವರ ಒಟ್ಟಂದದ ವ್ಯಕ್ತಿ ಅಧ್ಯಯನವನ್ನು ಇಲ್ಲಿ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಅವರ ಕಲಾಕೃತಿಗಳು ದೃಶ್ಯಕಲಾ ಕ್ಷೇತ್ರದಲ್ಲಿ ಪಡೆದ ಸ್ಥಾನ, ಅವರ ಚಿತ್ರಗಳ ವೈವಿಧ್ಯತೆ, ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ತಂತ್ರ ಇತ್ಯಾದಿ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಹೊಂದಲಾಗಿದೆ.

ಅಧ್ಯಯನದ ಸ್ವರೂಪ

ಈ ಅಧ್ಯಯನವನ್ನು ಒಟ್ಟು ಎಂಟು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುವುದು. ಆಯಾ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಷಯವನ್ನು ಕುರಿತಾಗಿ ಸಂಕ್ಷಿಪ್ತ

ಸ್ವರೂಪದ ಅಂಶಗಳನ್ನು ಇಲ್ಲಿ ಹೇಳಿಕೊಡಲಾಗುವುದು. ಒಟ್ಟು ಅಧ್ಯಯನದ ಸ್ವರೂಪವನ್ನು ಕಟ್ಟಿಕೊಡುವ ಪ್ರಯತ್ನವಾಗಿದ್ದು, ಅಧ್ಯಯನಗಳು ಈ ಕೆಳಗಿನಂತಿವೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳ ಕುರಿತಾದ ವಿವರಣೆಯನ್ನು ನೀಡಲಾಗುವುದು.

ಅಧ್ಯಾಯ ಎರಡರಲ್ಲಿ ಸಿ.ಚಂದ್ರಶೇಖರ ಅವರ ಬಾಲ್ಯದ ಬದುಕು, ಬೆಳೆದ ಪರಿಸರ, ಕಲಾವಿದನಾಗಿ ಬೆಳೆಯಲು ಪ್ರೇರಣೆ ನೀಡಿದ ಪ್ರಸಂಗ, ಕಲಾ ವ್ಯಾಸಂಗ, ಕಲಾಶಿಕ್ಷಣ, ಕಲಾವಿದನಾಗಲು ಆಸಕ್ತಿ ಮೂಡಿದ ಪ್ರಸಂಗ, ಇದಕ್ಕೆ ಕಾರಣವಾದ ವ್ಯಕ್ತಿಗಳು, ಪ್ರೇರಣೆ ನೀಡಿದ ಕಲಾ ಗುರುಗಳು, ಚಿತ್ರಕಲಾ ಶಾಲೆಯ ಗುರುಗಳಾದ ಚಿಕ್ಕವೆಂಕಟಪ್ಪನವರು ಪ್ರಮುಖ ಪಾತ್ರವಹಿಸುತ್ತಾರೆ. ಮುಂದೆ ಕೇನ್ ಶಾಲೆಯಲ್ಲಿ ಸಿ ಚಂದ್ರಶೇಖರ ಅವರು ಹೆಚ್ಚಿನ ವ್ಯಾಸಂಗಕ್ಕಾಗಿ ಬಂಗಾಳದ ಕವಿ ರವೀಂದ್ರನಾಥ ಠಾಗೋರರ ಶಾಂತಿನಿಕೇತನಕ್ಕೆ ಹೋಗಿ ಚಿತ್ರಕಲೆಯನ್ನು ಕಲಿಯುತ್ತಿದ್ದ ಪದ್ಧತಿ, ಅಲ್ಲಿನ ಕಲಾ ಪರಿಸರ, ಸಹಪಾಠಿಗಳು, ಕಲಾವಿದನಾಗಿ ಬೆಳೆಯಲು ಕಲಾಶಲೆಯ ಪ್ರಭಾವ, ಪ್ರೇರಣೆ ಮುಂತಾದ ಕುರಿತು ಹೇಳಲಾಗಿದೆ. ಅಲ್ಲದೆ ಸಿ.ಚಂದ್ರಶೇಖರ ಅವರ ವೃತ್ತಿ ಜೀವನ ಮತ್ತು ನಂತರದ ನಿವೃತ್ತಿ ಜೀವನ, ನಿವೃತ್ತಿಯ ನಂತರದ ಕಲಾಬದುಕನ್ನು ಕುರಿತು ಎರಡು ಹಂತಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

ಮೊದಲ ಹಂತ ಕೇನ್ ಕಲಾಶಾಲೆಯ ಒಂದು ಬಗೆಯ ಗುರುಕುಲದಲ್ಲಿನ ವೃತ್ತಿಜೀವನ, ಅಲ್ಲಿ ಕೇವಲ ಚಿತ್ರ ಬರೆಯುವುದನ್ನು ಮಾತ್ರ ಹೇಳಿಕೊಡಲಿಲ್ಲ. ಸಾಮಾಜಿಕ ಜವಾಬ್ದಾರಿಗಳನ್ನು ಕಲಿಸಿಕೊಟ್ಟಿದ್ದು, ಸ್ವತಃ ಹಡಪದ ಅವರು ರಾಜಕೀಯ, ಆರ್ಥಿ, ಸಾಮಾಜಿಕ, ಸಾಹಿತ್ಯ, ನಾಟಕ, ಚಿತ್ರಕಲೆ, ಸಂಗೀತ ಮುಂತಾದ ವಿಚಾರ ಬಲ್ಲವರಾಗಿದ್ದರು. ಇವುಗಳ ಕುರಿತು ಹೇಳುತ್ತಿದ್ದರು. ಜೊತೆಗೆ ಆಯಾ ಕ್ಷೇತ್ರಗಳ ಪರಿಣಿತರನ್ನು ಆಹ್ವಾನಿಸಿ ಉಪನ್ಯಾಸ ನಡೆಸುತ್ತಿದ್ದರು. ಇದರಿಂದಾಗಿ ಸಿ.ಚಂದ್ರಶೇಖರ ಅವರು ವಿಶೇಷ ರೀತಿಯಾಗಿ ಬೆಳೆಯಲು ಸಾದ್ಯವಾಗಿರುವುದನ್ನು ಹೇಳಲಾಗಿದೆ.

ನಂತರ ಎರಡನೇ ಹಂತದಲ್ಲಿ ನಾಡಿನ ಪ್ರತಿಭೆಗಳನ್ನು ಗುರುತಿಸಿ ಸಾಕಿ–ಸಲುಹುವ ಕೆಲಸ ಮಾಡಿದ ದಿವಂಗತ ಹಡಪದರ ಗರಡಿಯಲ್ಲಿ ಬೆಳೆದ ಸಿ.ಚಂದ್ರಶೇಖರ ನಿರಂತರ ಹೊಸದನ್ನು ಕಲಿಯುತ್ತ, ಕಲಿಸುತ್ತ ಬಂದ ಕಲಾವಿದರು. ನಂತರ ಪ್ರಸಿದ್ಧ ಕಲಾವಿದರಾದ ಕೆ.ಕೆ.ಹೆಬ್ಬಾರ ಅವರ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿ ಬಂದ ಮೇಲೆ 'ನಮ್ಮ ಕರ್ನಾಟಕ ಕಲಾವಿದರು ಹೊರಗೆ ಹೋಗಿ ಕಲಿತು ಬರಬೇಕು' ಎಂಬ ಅವರ ಮಾತಿನ ಮೇರೆಗೆ ಸಿ.ಚಂದ್ರಶೇಖರ ಗ್ರಾಫಿಕ್ ಕಲೆಯಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಹೋಗಿ ಹೊಸ ಹೊಸ

ತಂತ್ರಗಳನ್ನು ಚಿತ್ರಕಲೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲಿ ನಡೆಯುತ್ತಿದ್ದ ದೊಡ್ಡ ದೊಡ್ಡ ಪ್ರೊಫೆಸರ್‌ಗಳ ಚಿತ್ರಕಲಾ ಚಿಂತನ-ಮಂಥನಗಳು ಕಲಾವಿದ ಸಿ.ಚಂದ್ರಶೇಖರ ಅವರನ್ನು ಭಿನ್ನವಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟ ಅಂಶಗಳನ್ನು ಹೇಳಲಾಗಿದೆ.

ಜೀವನ ನಿರ್ವಹಣೆಗಾಗಿ ಬೆಂಗಳೂರು ಕಾರ್ಪೊರೇಶನ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ೧೫ ವರ್ಷಗಳ ಕಾಲ ಕೆಲಸ ಮಾಡುತ್ತಿದ್ದ ಸಿ.ಚಂದ್ರಶೇಖರ ಅವರು ಶಾಂತಿನಿಕೇತನದಿಂದ ಹಿಂತಿರುಗಿ ಪುನಃ ಶಿಕ್ಷಕ ವೃತ್ತಿಯನ್ನೆ ಮುಂದುವರಿಸಿದರು. ಆದರೆ ಸಮಯವನ್ನು ತೀರಾ ಹಗುರವಾಗಿ ಕಳೆಯಲು ಇಷ್ಟಪಡದೆ ಸರಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಗ್ರಾಫಿಕ್, ಡ್ರಾಯಿಂಗ್, ಪೇಂಟಿಂಗ್ ವಿವಿಧ ಕಲಾಶಾಲೆಗಳಲ್ಲಿ ಉಪನ್ಯಾಸ, ಕಲಾಯಾತ್ರೆ, ಕ್ಯಾಂಪ್ ಮುಂತಾಗಿ ಸಾಂಸ್ಕೃತಿಕವಾಗಿ ತೊಡಗಿರುವುದನ್ನು ಹೇಳಲಾಗುವುದು. ಅರವತ್ತೊಂಬತ್ತು ವರ್ಷದ ಸಿ. ಚಂದ್ರಶೇಖರ ಅವರು ಈಗಲು ಕೂಡ ಸತತವಾಗಿ ಕಲಾಕೃತಿ ರಚಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜೊತೆಗೆ ಕಲಾಶಿಬಿರಗಳನ್ನು ನಡೆಸುವುದಲ್ಲದೆ ಕಲೆಗಳ ಹಾಗೂ ಕಲಾಕೃತಿಗಳ ಬಗ್ಗೆ ಉಪನ್ಯಾಸ ಮಾಡುವುದಲ್ಲದೆ ಕಲೆಗೆ ಮುಡುಪಾಗಿಟ್ಟ ಬದುಕು ಅವರದು. ಈ ಕುರಿತು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಸಿ. ಚಂದ್ರಶೇಖರ ಅವರ ರೇಖಾ ಮತ್ತು ವರ್ಣಚಿತ್ರಗಳ ಕುರಿತು ಅಧ್ಯಯನ ಮಾಡಲಾಗಿದೆ. ಸಿ. ಚಂದ್ರಶೇಖರರವರು ರಚಿಸಿದ ರೇಖಾಚಿತ್ರಗಳ ಬಗೆಗೆ ೧. ಪೆನ್ಸಿಲ್-ಮಾಧ್ಯಮ, ೨. ಚಾರ್ಕೋಲ್-ಮಧ್ಯಮ, ೩. ಇಂಕ್-ಮಾಧ್ಯಮ, ೪. ಪೆನ್-ಮಾಧ್ಯಮ. ದಿನನಿತ್ಯ ಅಭ್ಯಾಸಕ್ಕಾಗಿ ರಚಿಸಿದ ರೇಖಾಚಿತ್ರಗಳ, ವರ್ಣ ಕಲಾಕೃತಿಗಳ ನಿರ್ಮಾಣದ ಸಲುವಾಗಿ ಪೂರ್ವಭಾವಿಯಾಗಿ ಮಾಡಿಕೊಳ್ಳುವ ಪೂರ್ವಸಿದ್ಧತೆಯನ್ನು ಗಮನಿಸಿ ಅನೇಕ ರೇಖಾಚಿತ್ರಗಳು ರಚಿಸಿದ್ದಾರೆ. ಹಾಗೆಯೇ ಚಂದ್ರಶೇಖರ ಅವರ ವರ್ಣಚಿತ್ರಗಳಲ್ಲಿನ ಮಾಧ್ಯಮದ ವಿವಿಧ ವಿಷಯಗಳನ್ನು ಹೊಂದಿದೆ. ಒಟ್ಟಾರೆ ಇಲ್ಲಿ ರೇಖಾ ಮತ್ತು ವರ್ಣ ಕಲಾಕೃತಿಗಳ ರಚನಾ, ಹಿನ್ನೆಲೆ, ಉದ್ದೇಶ, ಸಮಯ, ಸಂದರ್ಭ ಬಳಸಿದಂತಹ ಮಾಧ್ಯಮ ಕಲಾಕೃತಿಗಳ ನಿರೂಪಣೆ ಮುಂತಾದವುಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಿ. ಚಂದ್ರಶೇಖರ ಅವರ ಮುದ್ರಣ ಕಲಾಕೃತಿಗಳ ವಿಂಗಡಣೆ ಮಾಡಿಕೊಂಡು ಲೀನೋಪ್ರಿಂಟ್, ಕಂಪ್ಯೂಟರ್ ಗ್ರಾಫಿಕ್, ಪ್ರಿಂಟ್, ಸೆರಿಗ್ರಾಫಿ ಮತ್ತು ಎಚ್ಚಿಂಗ್ ಓಗೆ ಈ ಎಲ್ಲಾ ಕಲಾಕೃತಿಗಳಲ್ಲಿ ಬಣ್ಣಗಳ ಬಳಕೆ, ವಸ್ತುವಿಷಯ ಕಲಾಕೃತಿಗಳ ರಚನಾ ಹಿನ್ನೆಲೆಯನ್ನು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಸಿ ಚಂದ್ರಶೇಖರ ಅವರ ಸಂಕೀರ್ಣ ಕಲಾಕೃತಿಗಳನ್ನು ಬಳಸಿಕೊಂಡು ಅವುಗಳಲ್ಲಿ ಕೋಲಾಜ ಚಿತ್ರಗಳು, ಮ್ಯೂರಲ್ ಚಿತ್ರಗಳು, ಶಿಲ್ಪಕಲೆ, ಫೋಟೋಗ್ರಾಫಿ ~~ಹೀಗೆ~~ ಹಲವಾರು ಚಿತ್ರಗಳನ್ನು ಸಂಗ್ರಹಿಸಿ ~~ಇವುಗಳ~~ ಬಗ್ಗೆ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಸಿ.ಚಂದ್ರಶೇಖರ ಅವರು ೧೯೮೩ರಲ್ಲಿ ನಡೆದ ಕಲಾಯಾತ್ರೆ ಕರ್ನಾಟಕದಲ್ಲಿ ಒಂದು ಕಲಾಂದೋಲನ ಮಾಡಿರುವ ಬಗ್ಗೆ ಗಮನಿಸಿ ಹಾಗೂ ಹದಿನಾರು ಜನ ಕಲಾವಿದರ ಜೊತೆಗೂಡಿ ಮಾಡಿದ ಕಲಾಯಾತ್ರೆ ಕರ್ನಾಟಕ ಚಿತ್ರಕಲೆ ಇಂದು ಯಾವ ರೀತಿ ಬೆಳೆಯಲು ಸಾಧ್ಯವಾಗಿದೆ. ವ್ಯಾಪಕ ಪ್ರೋತ್ಸಾಹ ನೀಡಿರುವುದರ ಬಗ್ಗೆ ಹಾಗೂ ನೂರಾರು ಚಿತ್ರಕಲಾ ವಿದ್ಯಾರ್ಥಿಗಳು, ಸಾವಿರಾರು ಜನ ಕಲಾವಿದರು ಬೆಳೆಯಲು ಸಾಧ್ಯವಾದ ಅಂಶಗಳನ್ನು ಹೇಳಲಾಗುವುದು. ಜೊತೆಗೆ ಸಮಕಾಲೀನ ದೃಶ್ಯಕಲಾ ಕ್ಷೇತ್ರದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಏಳರಲ್ಲಿ ಸಿ. ಚಂದ್ರಶೇಖರ ಅವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ ಕುರಿತು ಚರ್ಚಿಸಲಾಗಿದೆ. ಸಾಮಾನ್ಯವಾಗಿ ಎಲ್ಲ ಕಲಾವಿದರು ಇತರ ಕಲಾವಿದರಿಂದ ಅಥವಾ ತಾವು ಬದುಕಿದ ಪರಿಸರದಿಂದ ಬರುವ ಘಟನೆಗಳಿಂದ ಸುತ್ತಮುತ್ತಲಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುತ್ತಾರೆ. ಕಲಾವಿದರು ಕಲಾಕೃತಿಗಳನ್ನು ರಚಿಸುವುದರಲ್ಲಿ ತನ್ನದೆ ಆದ ತಂತ್ರಶೈಲಿಯನ್ನು ಸಹ ಹೊಂದಿರುತ್ತಾರೆ ಎಂಬ ಈ ಮಾತಿಗೆ ಸಿ. ಚಂದ್ರಶೇಖರ ಅವರು ಕೂಡ ಹೊರತಾಗಿಲ್ಲ. ಇಲ್ಲಿ ಪ್ರಮುಖವಾಗಿ ಇವರ ಕಲಾಕೃತಿಗಳ ಮೇಲೆ ಸಮಾಜದ ನೋವು, ನಲಿವುಗಳ ಜೊತೆ ವೈಯಕ್ತಿಕತೆಯ ಅಂಶ ಚಿತ್ರಗಳಲ್ಲಿ ಕಾಣಬಹುದು.

ಸಿ.ಚಂದ್ರಶೇಖರ ಅವರು ತುಂಬಾ ನಿಷ್ಠಾವಂತರು. ಇಲ್ಲಿ ಅವರು ಕಂಡಂತಹ ರೂಪಗಳ ಯಾವುದೇ ಒಂದು ಭಾಗವನ್ನು ಚಿತ್ರಿಸುವುದರಿಂದ ಚಿತ್ರದ ಅರ್ಥವಂತಿಕೆ ನೋಡುಗನಿಗೆ ಸುಲಭವಾಗಿ ದಕ್ಕುವಂಥದ್ದು ಕಾಣಬಹುದು. ಸಿ.ಚಂದ್ರಶೇಖರ ಅವರ ಕಲಾಕೃತಿಗಳಲ್ಲಿ ಪ್ರಧಾನ ಪಾತ್ರವಹಿಸುವುದೇನೆಂದರೆ ಸ್ಕೆಚ್ ಮತ್ತು ಬಣ್ಣಗಳ ವಿನ್ಯಾಸ ಮತ್ತು ಸ್ಪೇಸ್ ಇವುಗಳ ಮೂಲಕ ಸಿ.ಚಂದ್ರಶೇಖರ ಅವರ ಕಲಾಕೃತಿಗಳನ್ನು ಗುರುತಿಸಲಾಗುವುದು. ಅವರ ಕಲಾಕೃತಿಗಳ ಮೇಲೆ ಪ್ರತ್ಯೇಕ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿದ ಕುರಿತು ಇಲ್ಲಿ ಆಳವಾದ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿದ್ದು, ಮೇಲಿನ ಎಂಟು ಅಧ್ಯಾಯಗಳಿಂದ ಹೊರಬಂದ ಫಲಿತಗಳ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿದೆ.

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭಗೊಂಡಿರುವುದು ತೊಂಭತ್ತರ ದಶಕದಿಂದೀಚೆಗೆ, ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿಎಚ್.ಡಿಯಂತಹ ಪದವಿಯ ಹಿನ್ನೆಲೆಯಲ್ಲಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಯಲು ಮುಖ್ಯಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸ್‌ಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು. ವಿಶೇಷವಾಗಿ ಈ ಎಲ್ಲಾ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ಕಮರ್ಶಿಯಲ್ ಆರ್ಟಿಸ್ಟಾಗಿ ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿದ್ದರು. ಈ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿ ತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಡ್ಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿಯಲು ಕಾರಣವಾಯಿತು. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಪ್ರಾರಂಭಗೊಂಡಿದ್ದು, ಅವು ಹೆಚ್ಚಾಗಿ ಪದವಿಹಂತಕ್ಕೆ ಮಾತ್ರ ಸೀಮಿತಗೊಂಡು ಕಾರ್ಯನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು.

ಧಾರವಾಡ, ಗದಗ, ಗುಲಬರ್ಗಾ, ಮೈಸೂರು, ದಾವಣಗೆರೆ ಹಾಗೂ ಬೆಂಗಳೂರು ಈ ಕೆಲವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲಾ ಪದವಿ ಕೋರ್ಸ್‌ಗಳು ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಈ ಹಂತದಲ್ಲಿ ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಪ್ರಜ್ಞೆಯು ಕೊರತೆಯುಂಟಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನುಮಾತ್ರ ವಿದ್ಯಾರ್ಥಿಗಳು

ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್, ಪಿಎಚ್.ಡಿ. ಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯಲಿಲ್ಲ. ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು.

ತೊಂಭತ್ತರ ದಶಕದ ನಂತರದಲ್ಲಿ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್., ಪಿಎಚ್.ಡಿ ಸಂಶೋಧನ, ಅಧ್ಯಯನ ಪ್ರಾರಂಭಗೊಳ್ಳುವುದರ ಮೂಲಕ ಈ ವಾತಾವರಣ ಸ್ವಲ್ಪ ಬದಲಾಗಿ ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾಧ್ಯಯನಕ್ಕೆ ಅವಕಾಶ ದೊರೆಯಿತು. ಇಲ್ಲಿ ಸ್ನಾತಕೋತ್ತರ ಹಂತದಲ್ಲಿ ಪ್ರಾಯೋಗಿಕತೆಗೆ ಮತ್ತು ಸಿದ್ಧಾಂತ ಪತ್ರಿಕೆಗಳಿಗೆ ಸಮಾನಾವಕಾಶ ಸಿಕ್ಕ ಕಾರಣ ದೃಶ್ಯಕಲಾ ಸಂಶೋಧನೆಯ ಹೊಸಪರಂಪರೆಗೆ ಈ ವಿಶ್ವವಿದ್ಯಾಲಯ ಹೊಸದಾರಿಯನ್ನು ಹಾಕಿಕೊಟ್ಟಿತು. ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯಯನಕ್ಕೆ ಅವಕಾಶಗಳು ದೊರಕಿವೆ. ಈ ಕ್ಷೇತ್ರದಲ್ಲಿ ಸಂಶೋಧನಾಧ್ಯಯನವು ಈಗ ವಿಶ್ವವಿದ್ಯಾಲಯ ಮಟ್ಟದಲ್ಲಿ ಇನ್ನುಳಿದ ವಿಷಯಗಳಂತೆ ದೃಶ್ಯಕಲೆಗಳ ಸಂಶೋಧನೆಗೆ ಪ್ರಾಧಾನ್ಯ ಸಿಕ್ಕ ಕಾರಣವಾಗಿ ಈಗ ಸಾಕಷ್ಟು ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ. ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಎಚ್.ಡಿ. ಪ್ರಬಂಧಗಳು ೨. ಎಂ.ಫಿಲ್. ಪ್ರಬಂಧಗಳು ೩. ಡಿ.ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಡಾ. ಎಸ್. ಸಿ. ಪಾಟೀಲ ಅವರು ೧೯೮೩ರಲ್ಲಿ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ**[೧] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ಕಲಾವಿದರೊಬ್ಬರು ದೃಶ್ಯಕಲೆಯಲ್ಲಿ ನಡೆಸಿದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ.

೧೯೮೭ರಲ್ಲಿ ಡಾ. ಚೂಡಾಮಣಿ ನಂದಗೋಪಾಲರ **ಡ್ಯಾನ್ಸ್ ಆಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್**[೨] ಎಂಬ ಪಿಹೆಚ್.ಡಿ ಮಹಾಪ್ರಬಂಧವು

೦೧. ಎಸ್. ಸಿ. ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩.

೦೨. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್", ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೮೭

ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಪೂರಕವಾಗಿ ಚಿತ್ರಕಲೆಯ ಕುರಿತು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ "ಡಾ. ಬಿ. ಕೆ. ಹಿರೇಮಠರ **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೩] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಚರ್ಚೆಗೊಂಡಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಒಂದೆರಡು ಸಣ್ಣ ಪ್ರಯತ್ನಗಳಾಗಿವೆ.

೧. ಪಿಹೆಚ್.ಡಿ. ಮಹಾಪ್ರಬಂಧಗಳು

ಚಿತ್ರಕಲೆಯನ್ನೇ ಕುರಿತು ಕರ್ನಾಟಕದಲ್ಲಿ ಸಂಶೋಧನಾಧ್ಯಯನವು ಪೂರ್ಣಪ್ರಮಾಣದಲ್ಲಿ ಕಂಡುಬಂದಿರುವುದು ೧೯೯೧ರಲ್ಲಿ. ಇಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೪] ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ. ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೫], ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು**[೬], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೭], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ**[೮], ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೯], ಡಾ. ಗಿರೀಶ

---

೦೩. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೭

೦೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ. ೧೯೯೧.

೦೫. ಡಾ. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೮.

೦೬. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮.

೦೭. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೭.

೦೮. ಡಾ. ಯಾದಪ್ಪ ಪರದೇಶಿ :ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೦೯. ಡಾ. ಶಿವಾನಂದ ಬಂಟನೂರು : ಕರ್ನಾಟಕ ಜನಪದ ಶಿಲ್ಪಕಲೆ–ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨

ಅವರ **ಬುಡಕಟ್ಟು ಚಿತ್ರಕಲೆ**[೧೦], ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ**[೧೧], ಡಾ. ಶಂಕ್ರಪ್ಪ ಕೋಲ್ಕಾರ್ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೨], ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೩], ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೪], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦)**[೧೫], ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ**[೧೬], ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೧೭], ಇದು ಡಾ. ಎಸ್. ಸಿ. ಪಾಟೀಲ ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧವಾಗಿದೆ.

೨೦೦೪ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦)**[೧೮], ಡಾ. ಶಿವಕುಮಾರ. ಜಿ. ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೧೯], ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ**[೨೦], ೨೦೦೫ರಲ್ಲಿ ಡಾ. ಶಶಿಕಲಾ

---

೧೦. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ ಹಂಪಿ, ೨೦೦೨.

೧೧. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ. ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೨. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೩. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೪. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೫. ಡಾ. ವೀಣಾ ಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೬. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೧೭. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ, ೨೦೦೨.

೧೮. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೪

೧೯. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ೨೦೦೪.

೨೦. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಮೈಸೂರು ವಿ.ವಿ., ಮೈಸೂರು ೨೦೦೪.

ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೧], ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೨], ಡಾ. ಎಚ್. ಎನ್. ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೩], ಡಾ. ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ**[೨೪], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೫], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**[೨೬], ಡಾ. ಗೀತಾಂಜಲಿ ಬಿ. ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೨೭], ಡಾ. ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**[೨೮], ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್**[೨೯], ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೩೦], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**[೩೧], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ,**[೩೨] ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,**[೩೩] ಡಾ. ಮಂಟಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ,**[೩೪] ಡಾ. ರೆಹಮಾನ್ ಪಟೇಲ್ ಅವರ

---

೨೧. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ., ಹಂಪಿ–೨೦೦೪

೨೨. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ. ಹಂಪಿ–೨೦೦೪

೨೩. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೫.

೨೪. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ – ಕನ್ನಡ ವಿ.ವಿ. ಹಂಪಿ–೨೦೦೫.

೨೫. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೬

೨೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೭.

೨೭. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ಹಂಪಿ–೨೦೦೭.

೨೮. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ಮೈಸೂರು–೨೦೦೭.

೨೯. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮ.ಪ್ರ, ಗು.ವಿ.ವಿ, ಕಲಬುರಗಿ–೨೦೦೮.

೩೦. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೮.

೩೧. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೮.

೩೨. ಡಾ. ಟಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ–೨೦೦೯.

೩೩. ಡಾ. ಲಕ್ಷ್ಮೀಪತಿ ಜಿ. : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೯.

೩೪. ಡಾ. ಮಂಟಗಿ : ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ – ೨೦೦೯

ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ,[೩೫] ೨೦೧೦ರಲ್ಲಿ ಡಾ. ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,**[೩೬] ಡಾ. ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ,**[೩೭] ಡಾ. ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ.**[೩೮] ೨೦೧೧ರಲ್ಲಿ ಡಾ. ಕಾಶಿನಾಥ ಡಿ. ವಡ್ಡರ ಅವರ **ಶಾಂತಿನಿಕೇತನದ ಭಿತ್ತಿಚಿತ್ರಗಳು,**[೩೯] ಡಾ. ಸತೀಶಕುಮಾರ ವಲ್ಲ್ಯೇಪೂರೆ ಅವರ **ಜೆ. ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು,**[೪೦] ಡಾ. ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ,**[೪೧] ೨೦೧೨ರಲ್ಲಿ ಡಾ. ಭಾರತಿ ಮರವಂತಿ ಅವರ **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ,**[೪೨] ಡಾ. ಕಾಮಾಕ್ಷಿ ಸಿ. ಸೊಪ್ಪಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ,**[೪೩] ಡಾ. ಪರಶುರಾಮ ಪಿ. ಅವರ **ಕರ್ನಾಟಕದ ಕಲಾಗ್ಯಾಲರಿಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನ,**[೪೪] ಡಾ. ಷಾಹಿದ್ ಪಾಷಾ ಅವರ **ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು.**[೪೫] ೨೦೧೩ರಲ್ಲಿ ಡಾ. ಬಿ. ಎಲ್ ಲಮಾಣಿ ಅವರ **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,**[೪೬] ಡಾ. ರೇಣುಕಾ ಮಾರ್ಕಾಂಡೆಯವರ **ಕರ್ನಾಟಕದ ವೈಷ್ಣವಪರಂಪರೆಯ ಚಿತ್ರಕಲೆ,**[೪೭] ಡಾ. ಶಶಿಕಲಾ

---

೩೫. ಡಾ. ರೆಹಮಾನ ಪಟೇಲ : ಕರ್ನಾಟಕದ ಬಿದ್ರಿಕಲೆ–ಒಂದು ಅಧ್ಯಯನ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೯

೩೬. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೧೦

೩೭. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು–ಒಂದು ಅಧ್ಯಯನ, ಪಿಎಚ್.ಡಿ. ಮ.ಪ್ರ., ಕನ್ನಡ ವಿ.ವಿ. ಹಂಪಿ ೨೦೧೦

೩೮. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ, (ಅ.ಪ್ರ ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ. ಹಂಪಿ – ೨೦೧೦.

೩೯. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನಿಕೇತನದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ– ೨೦೧೧

೪೦. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮ.ಪ್ರ., ಗು.ವಿ.ವಿ., ಕಲಬುರಗಿ–೨೦೧೧.

೪೧. ಡಾ. ಶಂಕರ ಕುಂದಗೋಳ : "ಕರ್ನಾಟಕದ ಗಂಜೀಫಾ ಚಿತ್ರಕಲೆ" ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೧

೪೨. ಡಾ. ಭಾರತಿ ಮರವಂತಿ : "ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ ಮೈಸೂರು ವಿ.ವಿ. ೨೦೧೨

೪೩. ಡಾ. ಕಾಮಾಕ್ಷಿ ಸಿ. ಸೊಪ್ಪಣ : "ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೪. ಡಾ. ಪರಶುರಾಮ ಪಿ. : "ಕರ್ನಾಟಕದ ಕಲಾಗ್ಯಾಲರಿಗಳು – ಒಂದು ವಿಶ್ಲೇಷಣಾತ್ಮಕ ಅಧ್ಯಯನ", ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೫. ಡಾ. ಶಾಹೆದ್ ಪಾಷಾ : "ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು", ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೬. ಡಾ. ಬಿ.ಎಲ್. ಲಮಾಣಿ : "ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೪೭. ಡಾ. ರೇಣುಕಾ ಮಾರ್ಕಂಡೆ : "ಕರ್ನಾಟಕದ ವೈಷ್ಣವ ಪರಂಪರೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. [illegible]

ನಂದನಗೌಡ ಅವರ **ಕರ್ನಾಟಕದ ಹುದುಗು ಕಲೆ,**[೪೮] ಡಾ. ಕೃಷ್ಣೇಗೌಡ ಹೆಚ್. ಎನ್ ಅವರ **ಕರ್ನಾಟಕದ ಬೌದ್ಧ ಚಿತ್ರಕಲೆ,**[೪೯] ಡಾ. ಬಿ. ಎಂ. ಪಾಟೀಲ ಅವರ **ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ,**[೫೦] ಡಾ. ಕೃಷ್ಣವೇಣಿ ಅವರ **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,**[೫೧] ಡಾ. ರವಿ ವಸಾರಾಮ ನಾಯಕ ಅವರ **ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು,**[೫೨] ಡಾ. ಮಹಾಂತೇಶ ಎಂ. ಪಲದಿನ್ನಿ ಅವರ **ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು,**[೫೩] ಡಾ.ಪಿ.ಬಿ.ಗವಾನಿ ಅವರ **ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ,**[೫೪] ಡಾ. ಸುಚಿತ್ರಾ ಜಿ. ಲಿಂಗದಳ್ಳಿ ಅವರ **ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು,**[೫೫] ಡಾ. ಬಸವಯ್ಯ ಗವಿಮಠ ಅವರ **ಬಾಗಲಕೋಟ ಜಿಲ್ಲೆಯ ಚಿತ್ರಕಲೆ,**[೫೬] ಸುಬ್ಬಯ್ಯ ಮಹಾದೇವಯ್ಯ ನೀಲಾ ಅವರ **ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು – ಒಂದು ಅಧ್ಯಯನ,**[೫೭] ೨೦೧೫ರಲ್ಲಿ ಜ್ಯೋತಿ ಎಸ್. ವೈದ್ಯ ಅವರ **ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ,**[೫೮] ಪರಮಶಿವಂ ಅವರ **ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ್**[೫೯], ೨೦೧೬ರಲ್ಲಿ ಅಶೋಕ ಎಸ್. ಶಟಕಾರ ಅವರ **ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು**[೬೦], ೨೦೧೭ರಲ್ಲಿ ಬಸವರಾಜ ಅನಗವಾಡಿ ಅವರ **ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ,**[೬೧] ಸಂತೋಷಕುಮಾರ ಎಂ. ನಾಗರಾಳ ಅವರ **ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ**

---

೪೮. ಡಾ. ಶಶಿಕಲಾ ನಂದನಗೌಡ : "ಕರ್ನಾಟಕದ ಹುದುಗುಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೪೯. ಡಾ. ಕೃಷ್ಣೇಗೌಡ ಹೆಚ್. ಎನ್ : "ಕರ್ನಾಟಕದ ಬೌದ್ಧಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೫೦. ಡಾ. ಬಿ. ಎಂ. ಪಾಟೀಲ : "ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೫೧. ಡಾ. ಕೃಷ್ಣವೇಣಿ : "ಬಳ್ಳಾರಿ ಜಿಲ್ಲೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೫೨. ಡಾ. ರವಿ ವಸಾರಾಮ ನಾಯಕ : "ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೫೩. ಡಾ. ಮಹಾಂತೇಶ ಎಂ. ಪಲದಿನ್ನಿ : "ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು", ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೩
೫೪. ಡಾ. ಪಿ.ಬಿ. ಗವಾನಿ : "ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೩
೫೫. ಡಾ. ಸುಚಿತ್ರಾ ಜಿ. ಲಿಂಗದಳ್ಳಿ : "ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು", ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩
೫೬. ಡಾ. ಬಸವಯ್ಯ ಗವಿಮಠ : "ಬಾಗಲಕೋಟ ಜಿಲ್ಲೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೩
೫೭. ಸುಬ್ಬಯ್ಯ ಮಹಾದೇವಯ್ಯ ನೀಲಾ : "ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು ಒಂದು ಅಧ್ಯಯನ", ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೩
೫೮. ಜ್ಯೋತಿ ಎಸ್. ವೈಧ್ಯಾ : "ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫
೫೯. ಡಾ. ಪರಮಶಿವಂ : ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫
೬೦. ಡಾ. ಅಶೋಕ ಶಟಕಾರ : ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೬
೬೧. ಡಾ. ಬಸವರಾಜ ಅನಗವಾಡಿ : ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ. ೨೦೧೭

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)[೬೨]. ಜೈರಾಜ ಅವರ **ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ**[೬೩] ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಕೈಗೊಂಡಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್. ಪ್ರಬಂಧಗಳು ಹೀಗಿವೆ. ೨೦೦೧ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,**[೬೪] ೨೦೦೫ರಲ್ಲಿ ಬಂದ ಆನಂದ ಪೂಜಾರರ **ಕರಾವಳಿಯ ಕಾವಿ ಚಿತ್ರಕಲೆ**[೬೫] ಡಿ.ಎ. ಉಪಾಧ್ಯ ಅವರ **ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ,**[೬೬] ೨೦೧೦ರಲ್ಲಿ ಎಮ್.ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು,**[೬೭] ೨೦೧೩ರಲ್ಲಿ ಜಿ. ಎಸ್. ಭೂಸಗೊಂಡ ಅವರ **ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್. ಕೋಟ್ಯಾಳಕರ-ಒಂದು ಅಧ್ಯಯನ,**[೬೮] ಹೀಗೆ ಹಲವು ಡಿ.ಲಿಟ್ ಮಹಾಪ್ರಬಂಧಗಳು ಹೊರಬಂದಿವೆ. ಈ ಡಿ.ಲಿಟ್. ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಪರಿಗಣಿಸಿ, ಕನ್ನಡ ವಿಶ್ವವಿದ್ಯಾಲಯವು ತಜ್ಞರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್. ಸಂಶೋಧನ ಅಧ್ಯಯನಕ್ಕೆ ಅವಕಾಶವಿರುವುದು ಗಮನಾರ್ಹ ಅಂಶವಾಗಿದೆ.

೩. ಎಂ.ಫಿಲ್. ಅಧ್ಯಯನಗಳು

ಕರ್ನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು

---

೬೨. ಸಂತೋಷಕುಮಾರ ಎಂ. ನಾಗರಾಳ : ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ), ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೭

೬೩. ಜೈರಾಜ : ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೭

೬೪. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ. ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ. ಡಿ.ಲಿಟ್ ಮಹಾಪ್ರಬಂಧ. ಕನ್ನಡ ವಿ.ವಿ. ಹಂಪಿ ೨೦೦೧

೬೫. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ. ಕನ್ನಡ ವಿ.ವಿ. ಹಂಪಿ. ೨೦೦೫.

೬೬. ಡಾ. ಡಿ.ಎ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೫

೬೭. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ. ಕನ್ನಡ ವಿ.ವಿ. ಹಂಪಿ, ೨೦೧೦


೬೮. ಡಾ. ಜಿ. ಎಸ್. ಭೂಸಗೊಂಡ: ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್ ಕೋಟ್ಯಾಳಕರ - ಒಂದು ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೩

ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್. ಸಂಶೋಧನಾ ಅಧ್ಯಯನಗಳು ಹೀಗಿವೆ.

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ,**[೧೯] ೨೦೦೩ರಲ್ಲಿ ಎ.ಎಸ್. ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು,**[೨೦] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಬದುಕು,**[೨೧] ಶಂಕರ ಕುಂದಗೋಳರ **ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು,**[೨೨] ೨೦೦೬ ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **ವಿಜಯನಗರದ ಭಿತ್ತಿ ಚಿತ್ರಕಲೆ,**[೨೩] ರಾಜಕುಮಾರ ಎಸ್. ಕಾಳೆ ಅವರ **ಔಂಧ್ ಗ್ಯಾಲರಿ,**[೨೪] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು,**[೨೫] ಬಿ.ಎಂ. ಪಾಟೀಲರ **ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು,**[೨೬] ಉಮೇಶ ಎ.ಎಸ್. **ಕರ್ನಾಟಕ ಜೈನ ಚಿತ್ರಕಲೆ,**[೨೭] ರವಿ ವಸಾರಾಮ ನಾಯಕರ **ಕಿನ್ನಾಳ ಕಲೆ,**[೨೮] ಶಶಿಕಾಂತ ಬಸರಿಕಟ್ಟಿಯವರ **ಕಲಘಗಿಯ ಚಿತ್ರಕಲೆ,**[೨೯] ಶೈಲಾ ಬರಡೋಲರ **ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು,**[೩೦] ಎಂಬ ಪ್ರಬಂಧಗಳು ಹೊರಬಂದಿವೆ. ೨೦೦೮ರಲ್ಲಿ ಕೃಷ್ಣವೇಣಿ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೩೧] ಯೋಗೀಶ ಹೆಚ್. **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ**[೩೨] ಮಹಾಕೊಟೇಶ್ವರಗೌಡ ಪಾಟೀಲ **ಬೆಳಗಾವಿ ಜಿಲ್ಲೆಯ ಚಿತ್ರಕಲೆ,**[೩೩] ಸುರೇಶ ಬಡಿಗೇರರ **ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ,**[೩೪] ಸಂತೋಷಕುಮಾರ

---

೧೯. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೨.
೨೦. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್. ಪ್ರ, ಕನ್ನಡ ವಿ.ವಿ. ಹಂಪಿ – ೨೦೦೩
೨೧. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.
೨೨. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೦೬
೨೩. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬
೨೪. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭
೨೫. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭
೨೬. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೨೭. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೨೮. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೨೯. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭.
೩೦. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೩೧. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೩೨. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೩೩. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೩೪. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮



ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ,**[೮೫] ಜಯರಾಜ ಚಿಕ್ಕಪಾಟೀಲರ **ಕರ್ನಾಟಕದ ಜಾಹೀರಾತುಗಳಲ್ಲಿಸಾಂಸ್ಕೃತಿಕ ನೆಲೆಗಳು,**[೮೬] ಮಹೇಶ ಉಮತಾರ ಅವರ **ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ,**[೮೭] ಗಿರಿಜಾ ಬಿರಾದಾರರ **ವಿಜಾಪೂರ ಜಿಲ್ಲೆಯ ಚಿತ್ರಕಲೆ,**[೮೮] ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ,**[೮೯] ಕೃಷ್ಣಗೌಡ ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ,**[೯೦] ಮಹಾಂತೇಶ ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,**[೯೧] ಮತ್ತು ೨೦೦೯ ರಲ್ಲಿ ಕಾಂತರಾಜ ಅವರ **ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ,**[೯೨] ರಂಗಸ್ವಾಮಿ ಅವರ **ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ,**[೯೩] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೯೪] ೨೦೧೦ ರಲ್ಲಿ ಭಾನುಮತಿ ಕೆ.ಎಲ್. ಅವರ **ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು,**[೯೫] ದಿನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆಗಳು,**[೯೬] ವಾದಿರಾಜ ಎ. ಅವರ **ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು,**[೯೭] ಚಿಂತಾಮಣಿ ಅವರ **ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ.**[೯೮] ೨೦೧೨ರಲ್ಲಿ ಮಲ್ಲಿಕಾರ್ಜುನ ಕೆ.ಜಿ. ಅವರ **ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು,**[೯೯] ರಾಜೀವ್. ಎಂ.ವೈ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು,**[೧೦೦] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೧೦೧] ವೈಶಾಲಿ ಕೆ. ಕಾಂಬಳೆ ಅವರ

೮೫. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೮೬. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೮
೮೭. ಮಹೇಶ ಉಮತಾರ : ಬಿ.ಪಿ. ಬಾಯಿರಿ : ಕಲೆ ಮತ್ತು ಕಲಾಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೮೮. ಗಿರಿಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೮೯. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೯೦. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೯೧. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೯೨. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯
೯೩. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೯
೯೪. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೯
೯೫. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ : ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦
೯೬. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦
೯೭. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೧೦
೯೮. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೧೦
೯೯. ಮಲ್ಲಿಕಾರ್ಜುನ ಕೆ.ಜಿ. : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೦. ರಾಜೀವ ಎಂ.ವೈ. : ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೧. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

ಬೀದರ ಜಿಲ್ಲೆಯ ಚಿತ್ರಕಲೆ,[೧೦೨] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ,**[೧೦೩] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ,**[೧೦೪] ಸುರೇಂದ್ರನಾಥ ಡಿ.ಆರ್. ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ,**[೧೦೫] ಶ್ವೇತಾ ಡಿ.ಎಸ್. ಅವರ **ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ,**[೧೦೬] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ**[೧೦೭]. ೨೦೧೩ರಲ್ಲಿ ದಯಾನಂದ ಕೋಳಿ ಅವರ **ಕೊಪ್ಪಳ ಜಿಲ್ಲೆಯ ಚಿತ್ರಕಲೆ,**[೧೦೮] ಸವಿತಾ ಬಡಿಗೇರ ಅವರ **ಧಾರವಾಡ ಜಿಲ್ಲೆಯ ಚಿತ್ರಕಲೆ,**[೧೦೯] ಹೇಮಂತಕುಮಾರ ಅವರ **ಮೈಸೂರು ಜಿಲ್ಲೆಯ ಚಿತ್ರಕಲೆ,**[೧೧೦] ಬಸವರಾಜ ಕಲೆಗಾರ ಅವರ **ಯಾದಗಿರಿ ಜಿಲ್ಲೆಯ ಚಿತ್ರಕಲೆ**[೧೧೧], ೨೦೧೪ರಲ್ಲಿ ಡಿ. ಕೆ. ಕೀರ್ತಿವರ್ಮ ಅವರ **ಕೆ ರಾಮಚಂದ್ರನ್‌ರವರ ಕಲೆ ಮತ್ತು ಬದುಕು,**[೧೧೨] ವಿಶ್ವನಾಥ್ ಹೆಚ್. ಹಂಡಿ ಅವರ **ಕೆ. ವಿ. ಸುಬ್ರಹ್ಮಣ್ಯ ಅವರ ದೃಶ್ಯಕಲಾ ಸಾಹಿತ್ಯ,**[೧೧೩] ಗಾಯತ್ರಿ ಮಂತ ಅವರ **ಪಿ. ಎಸ್. ಕಡೇಮನಿಯವರ ಕಲೆ ಮತ್ತು ಬದುಕು,**[೧೧೪] ಎಲ್. ಟಿ. ಮಂಜುಳಾಬಾಯಿ ಅವರ **ಕೆ. ಜ್ಞಾನೇಶ್ವರ್‌ರವರ ಕಲೆ ಮತ್ತು ಬದುಕು,**[೧೧೫] ಸಾವಿತ್ರಿ ಟೆಂಕಲಿ ಅವರ **ಎಂ. ಆರ್. ಬಾಳೇಕಾಯಿಯವರ ಕಲೆ ಮತ್ತು ಬದುಕು,**[೧೧೬] ಖಾದರ್‌ಶಾಬ್ ಇ. ಗುಳೇದಗುಡ್ಡ ಅವರ **ಬಹುಮುಖ ಕಲಾಸಾಧಕ ವಿ.ಜಿ. ಅಂದಾನಿ,**[೧೧೭] ಮಾಯಾದೇವಿ ಮಮ್ಮಾ ಅವರ **ಎ. ಎಸ್. ಪಾಟೀಲ್‌ರವರ ಕಲೆ ಮತ್ತು ಬದುಕು,**[೧೧೮] ರಾಜಪ್ಪ ಹೆಚ್. ಅವರ **ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ,**[೧೧೯], ೨೦೧೫ರಲ್ಲಿ

---

೧೦೨. ವೈಶಾಲಿ ಕೆ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೩. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೪. ಎನ್. ಜಿ. ಅಂಬರೀಶ್ : ಕರ್ನಾಟಕದ ಅಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೫. ಸುರೇಂದ್ರನಾಥ ಡಿ. ಆರ್. : ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೬. ಶ್ವೇತಾ ಡಿ. ಎಸ್. : ರಾಜಾ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೭. ಮಹಾದೇವಪ್ಪಸಣತಂಗಿ : ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೮. ದಯಾನಂದ ಕೋಳಿ : ಕೊಪ್ಪಳ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೦೯. ಸವಿತಾ ಬಡಿಗೇರ : ಧಾರವಾಡ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೦. ಹೇಮಂತಕುಮಾರ : ಮೈಸೂರು ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೧. ಬಸವರಾಜ ಕಲೆಗಾರ : ಯಾದಗಿರಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೨. ಡಿ. ಕೆ. ಕೀರ್ತಿವರ್ಮ : ಕೆ. ರಾಮಚಂದ್ರನ್ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೩. ವಿಶ್ವನಾಥ ಹೆಚ್. ಹಂಡಿ : ಸುಬ್ರಹ್ಮಣ್ಯಂ ಅವರ ದೃಶ್ಯಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೪. ಗಾಯತ್ರಿ ಮಂತ : ಪಿ. ಎಸ್. ಕಡೇಮನಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೫. ಎಲ್. ಟಿ. ಮಂಜುಳಾಬಾಯಿ : ಕೆ. ಜ್ಞಾನೇಶ್ವರ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೬. ಸಾವಿತ್ರಿ ಟೆಂಕಲಿ : ಎಂ. ಆರ್. ಬಾಳೇಕಾಯಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೭. ಖಾದರ್‌ಶಾಬ್ ಇ. ಗುಳೇದಗುಡ್ಡ : ಬಹುಮುಖ ಕಲಾಸಾಧಕ ವಿ. ಜಿ. ಅಂದಾನಿ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೮. ಮಾಯಾದೇವಿ ಮಮ್ಮಾ : ಎ. ಎಸ್. ಪಾಟೀಲ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೧೯. ರಾಜಪ್ಪ ಹೆಚ್. : ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

ಅಶೋಕ ಎಂ. ನಡುವಿನಮನಿ ಅವರ **ಹೈದ್ರಬಾದ ಕರ್ನಾಟಕದ ಭಾವಚಿತ್ರಕಲಾವಿದರ ಒಂದು ಅಧ್ಯಯನ**[೧೨೦], ಆಸೆಂಗಪ್ಪ ರಾ. ಗುಳೇದಗುಡ್ಡ ಅವರ **ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿಮನೆತನದ ಕೊಡುಗೆ**[೧೨೧], ನಟರಾಜ ಶಿಲ್ಪಿ ಅವರ **ಕನಗನಹಳ್ಳಿಯ ಸ್ತೂಪ ಶಿಲ್ಪಗಳು**[೧೨೨], ಬಸವರಾಜ ರೊಳ್ಳಿ ಅವರ **ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ**[೧೨೩], ವೆಂಕಟೇಶ್ ಕುಮಾರ್ ಕೆ.ಎಚ್. ಅವರ **ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ**[೧೨೪], ವೆಂಕಟೇಶ ಪಾಟೀಲ ಅವರ **ದಶಕದ ದೃಶ್ಯಕಲಾ ಸಾಹಿತ್ಯ ವಿಮರ್ಶಾತ್ಮಕ ಅಧ್ಯಯನ**[೧೨೫], ಸಂತೋಷ ಬೇವಿನಮರದ ಅವರ **ಹಂಪಿ ಪರಿಸರದ ಹನುಮಾನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ)**[೧೨೬] ಈ ಎಂ.ಫಿಲ್ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ., ಮೈಸೂರು ವಿ.ವಿ., ಬೆಂಗಳೂರಿನ ಜೈನ ಡೀಮ್ಡ್ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. (ಬ್ಯಾಚ್ಯುಲರ್ ಆಫ್ ಫೈನ್ ಆರ್ಟ್ಸ್–ಡಿಗ್ರಿ), ಬಿ.ವಿ.ಎ. (ಬ್ಯಾಚ್ಯುಲರ್ ಆಫ್ ವಿಜ್ಯುವಲ್ ಆರ್ಟ್ಸ್ – ಡಿಗ್ರಿ) ಐದು ವರ್ಷಗಳ ದೃಶ್ಯಕಲೆಯ ಡಿಪ್ಲೊಮಾ ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿ, ಸದೃಢವಾಗಿ ಮುನ್ನಡೆಯುತ್ತಲಿರುವುದು ದೃಶ್ಯಕಲಾ ಕ್ಷೇತ್ರದಲ್ಲಾದ ಬಹುದೊಡ್ಡ ಬದಲಾವಣೆ ಎಂದರೆ ತಪ್ಪಾಗಲಾರದು.

---

೧೨೦. ಅಶೋಕ ಎಂ. ನಡುವಿನಮನಿ : ಹೈದ್ರಾಬಾದ ಕರ್ನಾಟಕದ ಭಾವಚಿತ್ರಕಲಾವಿದರು–ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

೧೨೧. ಆಸೆಂಗಪ್ಪ ರಾ. ಗುಳೇದಗುಡ್ಡ : ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿಮನೆತನದ ಕೊಡುಗೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

೧೨೨. ನಟರಾಜ ಶಿಲ್ಪ : ಕನಗನಹಳ್ಳಿಯ ಸ್ತೂಪಶಿಲ್ಪಗಳು, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡವಿ.ವಿ. ಹಂಪಿ. ೨೦೧೫

೧೨೩. ಬಸವರಾಜ ರೊಳ್ಳಿ : ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

೧೨೪. ವೆಂಕಟೇಶ ಕುಮಾರ ಕೆ.ಎಚ್. : ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

೧೨೫. ವೆಂಕಟೇಶ ಪಾಟೀಲ : ದಶಕದ ದೃಶ್ಯಕಲಾ ಸಾಹಿತ್ಯ ವಿಮರ್ಶಾತ್ಮಕ ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

೧೨೬. ಸಂತೋಷ ಬೇವಿನಮರದ : ಹಂಪಿ ಪರಿಸರದ ಹನುಮಾನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ). ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೫

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಸಮೀಕ್ಷೆ

೧೯೮೪, ೧೧ನೇ ನವೆಂಬರ್‌ನಲ್ಲಿ Deccan Herald ಪತ್ರಿಕೆ ಸಂಪಾದಕರು **"The Poetry of Surrealism"**[೧೨೭] ಲೇಖನವನ್ನು ಬರೆದಿದ್ದಾರೆ. ೧೯೯೫, ಜನವರಿಯಲ್ಲಿ ಅಂಬೇಡ್ಕರ್ ವಾಹಿನಿ ಪತ್ರಿಕೆಯಲ್ಲಿ **"ಅಪರೂಪದ ಗ್ರಾಫಿಕ್ ಕಲಾವಿದ"**[೧೨೮] ಎಂಬ ಲೇಖನವು ಪ್ರಕಟಗೊಂಡಿದೆ. ಇದೇ ಅವಧಿಯಲ್ಲಿ ಕೆ. ಜಿ. ನಾಗರಾಜನ್ ಅವರು Deccan Herald ಪತ್ರಿಕೆಯಲ್ಲಿ **"Visual Arts to March Ahead"**[೧೨೯] ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದ **"ಚಿತ್ರಯಾತ್ರೆ (ಬ್ರೌಚರ್)"**[೧೩೦]ಯಲ್ಲಿ ಕಲಾವಿದ ಚಂದ್ರಶೇಖರ್ ಅವರ ಸಂಕ್ಷಿಪ್ತ ಮಾಹಿತಿಗಳು ದೊರೆಯುತ್ತವೆ.

೧೯೯೫ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು **"ಕರ್ನಾಟಕ ಕಲಾ ಅಕಾಡೆಮಿಯ ೧೯೫೫-೯೫ನೇ ಸಾಲಿನ ಸಾಧನೆಗಳು"**[೧೩೧] ಎಂಬ ಗ್ರಂಥವನ್ನು ಕೆ. ಮುಕುಂದನ್ ಅವರು ಬರೆದಿದ್ದಾರೆ. ಇಲ್ಲಿ ಚಿತ್ರಕಲಾವಿದ ಸಿ. ಚಂದ್ರಶೇಖರ್ ಅವರ ಕಲಾಸಾಧನೆಯ ಕುರಿತಂತೆ ಸ್ಥೂಲ ಮಾಹಿತಿ ಲಭ್ಯವಿದೆ. ೧೯೯೬, ೧೭ನೇ ಸೆಪ್ಟೆಂಬರ್‌ನಲ್ಲಿ ಕನ್ನಡ ಪ್ರಭಾ ದಿನಪತ್ರಿಕೆಯ ಸಂಪಾದಕರು **"Feaste for eye's from Karnataka"**[೧೩೨] ಎಂಬ ಲೇಖನವನ್ನು ಬರೆದಿದ್ದಾರೆ.

೧೯೯೭, ೧೨ನೇ ಮೇನಲ್ಲಿ **"ಚಿತ್ರಕಲಾ ಅಭಿವೃದ್ಧಿ ಚಂದ್ರಶೇಖರ ಕೃಷಿ ಅಪೂರ್ವಂ"**[೧೩೩] ಎಂಬ ಲೇಖನವು ಈನಾಡು ಕರ್ನಾಟಕ ತೆಲುಗು ದಿನಪತ್ರಿಕೆಯಲ್ಲಿ ಮುದ್ರಣಗೊಂಡಿದೆ. ೧೯೯೯ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲಾವಿದ ಸಿ ಚಂದ್ರಶೇಖರ ಅವರಿಗೆ **ವಾರ್ಷಿಕ ಪ್ರಶಸ್ತಿ**[೧೩೪] ನೀಡುತ್ತದೆ. ಈ ಸಮಾರಂಭದ ಅಂಗವಾಗಿ ಮಾಡಿದ ಕ್ಯಾಟಲಾಗ್‌ನಲ್ಲಿ ಇವರ ಕುರಿತು ಲಘು ಮಾಹಿತಿ ದೊರೆಯುತ್ತದೆ.

---

೧೨೭. Editor : The Poetry of Surrealism, Deccan Herald, Daily News Paper, 1984
೧೨೮. ಸಂಪಾದಕರು : ಅಪರೂಪದ ಗ್ರಾಫಿಕ್ ಕಲಾವಿದ, ಅಂಬೇಡ್ಕರ್ ವಾಹಿನಿ ಪತ್ರಿಕೆ, ೧೯೯೫
೧೨೯. K G Nagarajan : Visual Arts to March Ahead, Deccan Herald, Daily News Paper, 1995
೧೩೦. ಸಂಪಾಕದರು : ಚಿತ್ರಯಾತ್ರೆ (ಬ್ರೌಚರ್), ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫
೧೩೧. ಸಂಪಾದಕರು : ಕರ್ನಾಟಕ ಕಲಾ ಅಕಾಡೆಮಿಯ ೧೯೫೫-೯೫ನೇ ಸಾಲಿನ ಸಾಧನೆಗಳು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫
೧೩೨. Editor : Feaste for eye's from Karnataka, Kannada Prabha Daily News paper, 1996
೧೩೩. ಸಂಪಾದಕರು : ಚಿತ್ರಕಲಾ ಅಭಿವೃದ್ಧಿ ಚಂದ್ರಶೇಖರ ಕೃಷಿ ಅಪೂರ್ವಂ, ಈನಾಡು ಕರ್ನಾಟಕದ ತೆಲುಗು ದಿನಪತ್ರಿಕೆ. ೧೯೯೭
೧೩೪. ಸಂಪಾದಕರು : ವಾರ್ಷಿಕ ಪ್ರಶಸ್ತಿ-೧೯೯೯-ಕ್ಯಾಟಲಾಗ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯

೨೦೦೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು **"ಕರ್ನಾಟಕ ಕಲಾವಿದರ ಪರಿಚಯಾವಳಿ – Who's who of Karnataka Artists"**[೧೩೫] ಎಂಬ ಕಲಾವಿದರ ಸಂಕ್ಷಿಪ್ತ ಪರಿಚಯಾವಳಿ ಕುರಿತು ಪ್ರಕಟಪಡಿಸಿದೆ. ೨೦೦೪ರಲ್ಲಿ ರಾಜಪ್ಪ ದಳವಾಯಿ ಅವರು ಬರೆದ **"ಸಿ ಚಂದ್ರಶೇಖರ"**[೧೩೬] ಕಿರುಗ್ರಂಥವು ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಪ್ರಕಟಿಸಿದ್ದಾರೆ. ೨೦೦೮, ೧೫ನೇ ಸೆಪ್ಟಂಬರ್‌ನಲ್ಲಿ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ **"ಗೋಡೆ ಮೇಲೆ ಮೀನ ಹೆಜ್ಜೆ ಮಳೆ ಹನಿ ಆಲದ ಎಲೆ"**[೧೩೭] ಎಂಬ ಲೇಖನವು ಪ್ರಕಟಗೊಂಡಿದೆ.

೨೦೦೯, ೩ನೇ ಮಾರ್ಚ್‌ನಲ್ಲಿ **"೬೦ ಪೂರೈಸುವ ಕಲಾವಿದರಿಗೆ ರೂಪು ರೇಖೆಯ ಕೊಡುಗೆ"**[೧೩೮] ಎಂಬ ಲೇಖನವು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಮುದ್ರಣಗೊಂಡಿದೆ. ಇದೇ ಅವಧಿಯಲ್ಲಿ ಕರ್ನಾಟಕ ಯುವ ಕಲಾವಿದರ ವೇದಿಕೆಯವರು **"ಕಲಾವಿದ ಸಿ. ಚಂದ್ರಶೇಖರ ಅರವತ್ತರ : ರೂಪು ರೇಖೆ"**[೧೩೯] ಕ್ಯಾಟಲಾಗನ್ನು ಬಿಡುಗಡೆ ಮಾಡಿದ್ದಾರೆ. ಇದು ಕಲಾವಿದ ಸಿ ಚಂದ್ರಶೇಖರ ಅವರ ೬೦ ವಯಸ್ಸು ಪೂರೈಸಿದ ಸವಿನೆನಪಿಗಾಗಿ ಏರ್ಪಡಿಸಿದ ಸಮಾರಂಭದಲ್ಲಿ ಬಿಡುಗಡೆಗೊಂಡಿದೆ. ಈ ಸಮಾರಂಭದ ಕುರಿತಂತೆ "೬೦ರ ರೂಪುರೇಖೆ" ಎಂಬ ಲೇಖನವು ಸುಧಾ ವಾರ ಪತ್ರಿಕೆಯಲ್ಲಿ ಗುಡಿಹಳ್ಳಿ ನಾಗರಾಜ ಅವರು ಸಿ ಚಂದ್ರಶೇಖರ ಅವರ ಕುರಿತು ಬರೆದಿದ್ದಾರೆ. ಇದೇ ಅವಧಿಯಲ್ಲಿ ಬಾಬುರಾವ್ ನಡೋಣಿಯವರ ತಮ್ಮ ಎಂ.ಫಿಎ. ಸ್ನಾತಕೋತ್ತರ ಪದವಿಯ ಭಾಗಶಃ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **"ಕಲಾವಿದ ಸಿ ಚಂದ್ರಶೇಖರ ಅವರ ಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ"**[೧೪೦] ಎಂಬ ಕಿರುಪ್ರಬಂಧವನ್ನು ಸಲ್ಲಿಸಿದ್ದಾರೆ.

ಕಲಾವಿದ ಸಿ ಚಂದ್ರಶೇಖರ ಅವರ ಕುರಿತು ಇಲ್ಲಿಯವರೆಗೆ ಗಂಭೀರವಾದ ಯಾವುದೇ ಅಧ್ಯಯನಗಳು ನಡೆದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಮೇಲಿನ ಲೇಖನಗಳು, ಕಿರುಗ್ರಂಥ ಮತ್ತು ಕ್ಯಾಟಲಾಗ್ ಹಾಗೂ ಕಿರುಸಂಶೋಧನಾ ಪ್ರಬಂಧ ಮುಂತಾದವುಗಳನ್ನು

೧೩೫. ಸಂಪಾದಕರು : ಕರ್ನಾಟಕ ಕಲಾವಿದರ ಪರಿಚಯಾವಳಿ–Who's who of Karnataka Artists, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೧

೧೩೬. ರಾಜಪ್ಪ ದಳವಾಯಿ : ಸಿ. ಚಂದ್ರಶೇಖರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೧೩೭. ಸಂಪಾದಕರು : ಗೋಡೆ ಮೇಲೆ ಮೀನ ಹೆಜ್ಜೆ ಮಳೆ ಹನಿ ಆಲದ ಎಲೆ, ಕನ್ನಡ ಪ್ರಭ ದಿನಪತ್ರಿಕೆ, ೨೦೦೮

೧೩೮. ಸಂಪಾದಕರು : ೬೦ ಪೂರೈಸುವ ಕಲಾವಿದರಿಗೆ ರೂಪುರೇಖೆಯ ಕೊಡುಗೆ, ಸಂಯುಕ್ತ ಕರ್ನಾಟಕ ದಿನಪತ್ರಿಕೆ. ೨೦೦೯

೧೩೯. ಅಧ್ಯಕ್ಷರು : ಕಲಾವಿದ ಸಿ. ಚಂದ್ರಶೇಖರ ಅರವತ್ತರ : ರೂಪುರೇಖೆ, ಕರ್ನಾಟಕ ಯುವ ಕಲಾವಿದರ ವೇದಿಕೆ, ಬೆಂಗಳೂರು. ೨೦೦೯

೧೪೦. ಬಾಬುರಾವ್ ನಡೋಣಿ : ಕಲಾಪಿದ ಸಿ. ಚಂದ್ರಶೇಖರ ಅವರ ಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ. ಅಪ್ರಕಟಿತ ಎಂ.ಫಿ.ಎ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯

ಗಮನಿಸದಾಗ ಚಂದ್ರಶೇಖರ ಅವರ ಕುರಿತು ಅಲ್ಲಲ್ಲಿ ಬಿಡಿಬಿಡಿಯಾದ ಅವರ ಜೀವನ ಮತ್ತು ಸಾಧನೆಯ ತುಣುಕು ವಿಷಯಗಳು ಮಾತ್ರ ಹೊರಬಂದಿದ್ದು, ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾದ ಕಲಾವಿದ ಸಿ ಚಂದ್ರಶೇಖರವರ ಸಮಗ್ರ ಬದುಕು ಮತ್ತು ಕಲಾಕೃತಿಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೊಳಪಡಿಸುವ ಅವಶ್ಯಕತೆ ಇತ್ತು. ಈ ಅವಶ್ಯಕತೆಯನ್ನು ಪೂರೈಸುವ ದಿಸೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಸಿ. ಚಂದ್ರಶೇಖರ ಅವರು ಒಬ್ಬ ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಲಾವಿದರು. ಚಿತ್ರಕಲೆ, ಗ್ರಾಫಿಕ್ ಕಲೆ, ಮ್ಯೂರಲ್‌ಗಳು, ಶಿಲ್ಪಗಳು ಹಾಗೂ ಕಲಾ ಸಂಘಟನೆ ಹೀಗೆ ಹಲವಾರು ರೀತಿಯಲ್ಲಿ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿ ಮಾಡಿದ್ದಾರೆ. ಕಲಾಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದ ಸಾಧಕರಿವರು. ಇಲ್ಲಿ ಪ್ರಸ್ತುತ ಅಧ್ಯಯನವು ಚಿತ್ರಕಲೆಯ ಅವರ ಸಮಗ್ರ ಸಾಧನೆಯನ್ನು ಕೇಂದ್ರೀಕೃತವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ. ಕಲಾವಿದ ಸಿ. ಚಂದ್ರಶೇಖರವರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ವಿಶೇಷವಾಗಿ ಅಧ್ಯಯನವಿದಾಗಿದ್ದರೂ, ಪ್ರಾಸಂಗಿಕವಾಗಿ ಕರ್ನಾಟಕ, ಕರ್ನಾಟಕೇತರ ಅವರ ಸಮಕಾಲೀನ ಕಲಾವಿದರ ಕಲಾಕೃತಿಗಳನ್ನು ಅಲ್ಲಲ್ಲಿ ಪೂರಕವಾಗಿ ಅಧ್ಯಯನಕ್ಕೆ ಬಳಸಿಕೊಂಡು ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನದ ವಿಧಾನ

ಯಾವುದೇ ಪ್ರಕಾರದ ಅಧ್ಯಯನದ ಹಿನ್ನೆಲೆಯಲ್ಲಿ ಸಂಶೋಧನೆಯ ಮಹಾಪ್ರಬಂಧ ಕಟ್ಟಿಕೊಡುವಲ್ಲಿ ಅಧ್ಯಯನವೊಂದಕ್ಕೆ ಅದರದ್ದೆ ಆದ ವಿಧಾನಗಳಿರುವುದುಂಟು. ಮತ್ತು ವಿದಾನ ಸಮರ್ಥವಾಗಿ ಪ್ರಬಂಧ ರಚಿಸುವಲ್ಲಿ ನೆರವಾಗುವುದು. ಹೀಗಾಗಿ ಅಧ್ಯಯನ ವಿಧಾನ ಬಹುಮುಖ್ಯವಾದ ಅಂಶವಾಗಿರುವುದು. ಸಿ. ಚಂದ್ರಶೇಖರ ಅವರ ಅರ್ಥ ಆಯಾಮವನ್ನು ವ್ಯಕ್ತಿಗತ ಅಧ್ಯಯನದ ನೆಲೆಯಲ್ಲಿ ಮಾಡಲಾಗುವುದು. ಪ್ರಸ್ತುತ-ಅಧ್ಯಾಯದಲ್ಲಿ ಎರಡು ರೀತಿಯ ಅಧ್ಯಯನದ ವಿಧಾನಗಳನ್ನು ಬಳಸಿಕೊಳ್ಳಲಾಗುವುದು.

೧. ಮೂಲ ಆಕರ ಸಾಮಗ್ರಿ   ೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಸ್ವತಃ ಕಲಾವಿದರ ಸಂದರ್ಶನ, ಅವರೊಂದಿಗಿನ ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣದೊಂದಿಗೆ ಸಂದರ್ಶನ

ಮಾಡಲಾಗುವುದು. ಸಿ. ಚಂದ್ರಶೇಖರ ಅವರ ಬಾಲ್ಯ ಪರಿಸರ ಪ್ರಾಥಮಿಕ ಕಲೆಯ ಕಡೆಗೆ ವಾಲಿದ ಸನ್ನಿವೇಶ, ಶಾಲಾ ಪರಿಸರ, ಕಲೆ ನೀಡಿದ ಗುರುಗಳು, ವ್ಯಕ್ತಿಗಳು, ಹುಟ್ಟೂರಾದ ಬೆಂಗಳೂರಿನ ಗೋಪಾಲಪುರದ ಪರಿಸರ ಹಾಗೂ ಸಿ.ಚಂದ್ರಶೇಖರ ಅವರ ಕೌಟುಂಬಿಕ ಹಿನ್ನೆಲೆ, ನಂತರ ಪ್ರೌಢಶಾಲಾ ವ್ಯಾಸಂಗ ಹಿನ್ನೆಲೆ, ಅನುಭವಗಳನ್ನು ಇಲ್ಲಿ ದಾಖಲಿಸಲಾಗುವುದು.

ಸಂದರ್ಶನ : ಸಿ. ಚಂದ್ರಶೇಖರ ಅವರ ಆಪ್ತ ಗೆಳೆಯರು, ಸಹಪಾಠಿಗಳು, ಶಿಷ್ಯಬಳಗ ಅವರ ಹತ್ತಿರದ ಸಂಬಂಧಿಕರಿಂದ ಪ್ರಶ್ನಾವಳಿಗಳ ಮೂಲಕ ಸಿ.ಚಂದ್ರಶೇಖರ ಅವರ ಕುರಿತು ಅಭಿಪ್ರಾಯ ಸಂಗ್ರಹಿಸಲಾಗುವುದು. ಇದಕ್ಕೆ ಮುಖ್ಯವಾಗಿ ಸಿ.ಚಂದ್ರಶೇಖರ ಅವರ ಕಲಾಕೃತಿಗಳ ಅಭಿವ್ಯಕ್ತಿಯ ಕುರಿತು ಅವರ ಅನಿಸಿಕೆಗಳನ್ನು ರಚನೆಯ ಹಿನ್ನೆಲೆ, ಪ್ರೇರಣೆ, ಪ್ರಭಾವಳಿಗಳನ್ನು ಸ್ವತಃ ಸಿ. ಚಂದ್ರಶೇಖರ ಅವರನ್ನು ಸಂದರ್ಶನ ಮಾಡಿ ಈ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು.

ಛಾಯಾಚಿತ್ರಣ : ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮತ್ತು ಇತರೆ ಮೂಲಗಳಿಮದ ಸಂಗ್ರಹಿಸಿದ ಕಲಾಕೃತಿಗಳ ಛಾಯಾಚಿತ್ರಣಗಳನ್ನು ಸಂಗ್ರಹಣೆ ಮಾಡಿಕೊಂಡು ಅಧ್ಯಯನ ಮಾಡುವುದು ಇಲ್ಲಿ ಮುಖ್ಯ ಅಂಶವಾಗುವುದು. ಸಿ. ಚಂದ್ರಶೇಖರವರ ನೂರಾರು ಕಲಾಕೃತಿಗಳು ನಾಡಿನ ವಿವಿದ ಕಡೆಗಳಲ್ಲಿ ಸಂಗ್ರಹಗೊಂಡಿವೆ. ಅನೇಕ ಕಲಾ ಗ್ಯಾಲರಿ, ಕಲಾಶಾಲೆ, ಅನೇಕ ಸಂಸ್ಥೆಗಳಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ಅಲ್ಲದೆ ಸಿ.ಚಂದ್ರಶೇಖರವರ ಸ್ವಗೃಹದಲ್ಲಿ ಅನೇಕ ಕಲಾಕೃತಿಗಳ ಛಾಯಾಚಿತ್ರಗಳನ್ನು ಸಂಗ್ರಹ್ ಮಾಡಿಕೊಳ್ಳಲಾಗುವುದು. ಹೀಗೆ ಸಿ. ಚಂದ್ರಶೇಖರ ಅವರ ಕಲಾಕೃತಿಗಳನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುವುದು.

೨. ಆನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ ಸಾಹಿತ್ಯ ಕೃತಿಗಳು, ಸಂಶೋಧನಾ ಮಹಾಪ್ರಬಂಧಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು ಮತ್ತು ಕಲಾವಿದರ ಕಲಾಕೃತಿಗಳ ಕುರಿತು ಬಂದ ಪತ್ರಿಕಾ ವರದಿಗಳು, ಪ್ರಕಟಿತ ಪುಸ್ತಕಗಳು, ಅಭಿನಂದನಾ ಗ್ರಂಥಗಳು, ಸಂಶೋಧನಾ ಲೇಖನಗಳು ಇತ್ಯಾದಿ ಹಲವಾರು ರೀತಿಯ ಆನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ಪ್ರಸ್ತುತ ಈ ಮಹಾಪ್ರಬಂಧವನ್ನು ಕಟ್ಟಿಕೊಡಲಾಗುವುದು.

ಅಧ್ಯಾಯ : ಎರಡು

ಸಿ. ಚಂದ್ರಶೇಖರ ಅವರ
ಬಾಲ್ಯ ಪರಿಸರ, ಕಲಾಶಿಕ್ಷಣ ಹಾಗೂ ವೃತ್ತಿಜೀವನ

ಅಧ್ಯಾಯ : ಎರಡು

ಸಿ ಚಂದ್ರಶೇಖರ ಅವರ ಬಾಲ್ಯಪರಿಸರ, ಕಲಾಶಿಕ್ಷಣ ಹಾಗೂ ವೃತ್ತಿ ಜೀವನ

ಮಾನವ ಪ್ರಕೃತಿಯ ಸಂವೇದನಾತ್ಮಕವಾದ ಒಂದು ಭಾಗವೇ ಆಗಿದ್ದು, ಪ್ರಕೃತಿಯ ಸಾಂಸ್ಕೃತಿಕ ವಿಶೇಷಣಗಳೆಲ್ಲವನ್ನೂ ತನ್ನಲ್ಲಿ ಮೈಗೂಡಿಸಿಕೊಂಡೇ ಬದುಕುತ್ತಾನೆ. ಆ ಬದುಕಿನಲ್ಲಿ ಅನೇಕ ಬಗೆಯ ವಿಸ್ಮಯಕಾರಿ ಸೃಜನಾತ್ಮಕ ಚಿಂತನೆಗಳು ಗರಿಗದರುತ್ತವೆ. ಆ ಒಂದು ಬಗೆಯ ಸೃಜನಾತ್ಮಕ ಅಲೆಗಳು ಅಕ್ಷರ, ಧ್ವನಿ, ಅಭಿನಯ ಮತ್ತು ದೃಶ್ಯಾತ್ಮಕ ರೂಪ ತಾಳುವುದರೊಂದಿಗೆ ಅಭಿವ್ಯಕ್ತಿಗೆ ಒಂದು ಸ್ಪಷ್ಟ ರೂಪನ ಪ್ರಕಟವಾಗುತ್ತದೆ. ಇಂತಹ ಅಭಿವ್ಯಕ್ತಿಗೆ ಆ ವ್ಯಕ್ತಿ ಬದುಕಿದ ಸುತ್ತಲಿನ ಪರಿಸರವೂ ಕಾರಣ[೧೧]. ಪರಿಸರದ ಕೂಸಾಗಿಯೇ ಚಿಗುರೊಡೆಯುವ ಮಾನವನ ಬೌದ್ಧಿಕತೆ ಅನೇಕ ಕಸರತ್ತುಗಳ ಮೂಲಕ ತನ್ನತನವನ್ನೂ ರೂಢಿಸಿಕೊಳ್ಳುತ್ತದೆ. ಅದೇ ಸಂದರ್ಭದಲ್ಲಿಯೇ ಭವಿಷ್ಯತ್ತಿನ ಮೊದಲ ಹೆಜ್ಜೆಗಳೂ ಕೂಡ ಬಾಲ್ಯದಲ್ಲಿಯೇ ಒಂದು ಸ್ಪಷ್ಟ ರೂಪ ತಾಳುವ ಕ್ರಿಯೆಗೆ ಉದಾಹರಣೆಯಾಗಿ ಅನೇಕ ಸೃಜನಶೀಲರೂ ನಮ್ಮ ನಡುವೆ ಬೆಳೆದಿದ್ದಾರೆ, ಬೆಳೆಯುತ್ತಲಿದ್ದಾರೆ.[೧೨] ಕಲಾವಿದ ಸಿ. ಚಂದ್ರಶೇಖರ್ ಅವರು ಈ ಮಾತಿಗೆ ಹೊರತಾದವರಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಬಾಲ್ಯದ ಜೀವನ ಆಟಪಾತ, ಭೌಗೋಳಿಕ, ಸಾಂಸ್ಕೃತಿಕ ಗಾಢವಾದ ಪರಿಣಾಮವನ್ನು ಬೀರುತ್ತದೆ. ಒಬ್ಬ ವ್ಯಕ್ತಿ ಬಾಲ್ಯದಲ್ಲಿ ಒಂದು ವಿಷಯದ ಕುರಿತು ಪ್ರೇರಿತಗೊಂಡಿದ್ದರೆ, ಮುಂದೆ ಬೆಳೆದು ದೊಡ್ಡವರಾದ ಮೇಲೆ ಆ ವಿಷಯದ ಕ್ಷೇತ್ರದಲ್ಲಿಯೇ ಮುಂದುವರೆಯಲು ಇಚ್ಛಿಸುವುದು ಸಹಜ. ಹೀಗೆ ಬಾಲ್ಯವೇ ವ್ಯಕ್ತಿಯೊಬ್ಬನಿಗೆ

೧೧. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೨

೧೨. ಡಾ. ರವೀಂದ್ರ ಎಸ್. ಕಮ್ಮಾರ : ಚಿತ್ರಕಲಾವಿದ ವಿ.ಜಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು. (ಅ.ಪ್ರ. ಪಿಎಚ್.ಡಿ. ಮ.ಪ್ರ), ಪು-೧೭

ಸ್ಫೂರ್ತಿದಾಯಕವಾಗಿರುತ್ತದೆ. ಬೆಲೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬ ಮಾತು ನಿಜವೆನಿಸುವುದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನೇಕರು ತಮ್ಮ ಬಾಲ್ಯದಲ್ಲಿಯೇ ಆ ಸಾಧನೆಯ ಲಕ್ಷಣಗಳನ್ನು ತೋರಿದವರಾಗಿದ್ದಾರೆ.

ಪ್ರಸ್ತುತ ಕಲಾವಿದರೊಬ್ಬರ ಜೀವನ ಮತ್ತು ಕಲಾಬದುಕಿನ ಕುರಿತಾದ ಅಧ್ಯಾಯನ ಇದಾಗಿರುವುದರಿಂದ ಇಲ್ಲಿ ಸಿ. ಚಂದ್ರಶೇಖರವರ ಬಾಲ್ಯ, ಪರಿಸರ, ಅವರ ಮನಸ್ಸು ಕಲೆಯ ಕಡೆಗೆ ಹೊರಳಿದ ಸಂದರ್ಭ, ಕಲಾ ಪರಿಸರ ಮುಂತಾದ ಅಂಶಗಳು ಕುರಿತಾದ ಅಧ್ಯಯನ ಮಹತ್ವದಾಗಿದೆ.

ಬೆಂಗಳೂರಿನ ಭೌಗೋಳಿಕ ಪರಿಸರ

ಸಿ. ಚಂದ್ರಶೇಖರ ಅವರು ಹುಟ್ಟಿದ ಇಂದಿನ ಬೆಂಗಳೂರಿನ ಗೋಪಾಲಪುರದ ಗ್ರಾಮೀಣ ಪ್ರದೇಶದಲ್ಲಿ. ಕರ್ನಾಟಕ ರಾಜ್ಯದ ರಾಜಧಾನಿಯಾಗಿದ್ದು, ರಾಜ್ಯದ ಆಡಳಿತ ಕೇಂದ್ರ ರಾಜಧಾನಿ ಈ ಮೊದಲು ೧೧ ತಾಲೂಕುಗಳನ್ನೊಳಗೊಂಡಿದ್ದ ಈ ರಾಜ್ಯಧಾನಿ ಬ್ರಹತ್ತಾಗಿ ಬೆಳೆದು ಬಂದುದರಿಂದ ೧೯೮೬ ಆಗಸ್ಟ್ ೧೫ ರಂದು ಆಡಳಿತಾನುಕೂಲಕ್ಕಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಬೆಂಗಳೂರು ನಗರ ಜಿಲ್ಲೆ ೩ ತಾಲೂಕುಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ೮ ತಾಲ್ಲೂಕುಗಳಿಂದ ಕೂಡಿದೆ. ಬೆಂಗಳೂರು ಉತ್ತರ ತಾಲೂಕು ಬೆಂಗಳೂರು ದಕ್ಷಿಣ ತಾಲೂಕು, ನಗರ, ಬೆಂಗಳೂರು, ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆ ಈ ಶೀರ್ಷಿಕೆಗಳಿಂದ ಕೂಡಿದೆ.[೧]

ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿ. ಇಂದು ಏಷ್ಯಾದಲ್ಲೇ ಅತೀ ವೇಗವಾಗಿ ವಿಸ್ತರಿಸುತ್ತಿರುವ ನಗರ ಇದಾಗಿದೆ. ಭಾರತದ ಸಿಲಿಕಾನ್ ಸಿಟಿ ಎಂಬ ಕೀರ್ತಿಯನ್ನು ಪಡೆದಿದೆ. ಭಾರತದ ಬೃಹತ್ ನಗರಗಳಲ್ಲಿ ಇದು ಐದನೇ ಸ್ಥಾನವನ್ನು ಪಡೆದಿದೆ.[೨]

ರಾಜಧಾನಿಯಾಗಿರುವ ಕಾರಣ ರಾಜಭವನ ಶಾಸನ ಸಭಾಭವನ ಮತ್ತು ಕಚೇರಿ, ಸಚಿವಾಲಯ ರಾಜ್ಯ ಸರಕಾರದ ಬಹುತೇಕ ಎಲ್ಲಾ ಇಲಾಖೆಗಳ ಮುಖ್ಯ ಕಚೇರಿಗಳು ಉಚ್ಚನ್ಯಾಯಾಲಯ, ರಾಜ್ಯ ಲೋಕ ಸೇವಾ ಆಯೋಗದ ಕಚೇರಿ, ರಾಜ್ಯ ಸರ್ಕಾರದಿಂದ ಸ್ಥಾಪಿತವಾಗಿರುವ ಕರ್ನಾಟಕ ವಿದ್ಯುತ್ಶಕ್ತಿ ಮಂಡಳಿ, ಚಲನಚಿತ್ರ ಮಂಡಳಿ, ರಸ್ತೆ ಸಾರಿಗೆ, ಹಣಕಾಸು, ಪ್ರವಾಸೋದ್ಯಮ ಮತ್ತು ರಕ್ಷಣಾ ಪಡೆಯ ಸಚಿವಾಲಯ, ವಿಮಾನದಳದ ಉಪಕೇಂದ್ರ,

೧. ಡಾ. ಎಲ್. ಎಸ್. ಶೇಷಗಿರಿರಾವ್ : ಬೆಂಗಳೂರು ದರ್ಶನ, ಪು-೧೬೫
೨. ಅದೇ.

ಇಸ್ರೊ, ಅಂಚೆ ಮತ್ತು ತಂತಿ ಇಲಾಖೆ, ವಾರ್ತಾ ಮತ್ತು ಪ್ರಸಾರ ಇಲಾಖೆ ಪ್ರಮುಖ ಔದ್ಯೋಗಿಕ ಮತ್ತು ವಾಣಿಜ್ಯ ಕೇಂದ್ರಗಳು ಹಾಗು ಬ್ರಿಟಿಷರ ಕಟ್ಟಡಗಳು ಈಗಿನ ಸರಕಾರಿ ಕಚೇರಿಗಳಾಗಿ ಮಾರ್ಪಟ್ಟಿವೆ. ಕಬ್ಬನ್‌ಪಾರ್ಕ್, ಲಾಲ್‌ಬಾಗ್, ವಿಶ್ವೇಶ್ವರಯ್ಯ ಮ್ಯೂಜಿಯಂ, ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದ ವಿಧಾನಸೌಧ ಇದು ಭಾರತದಲ್ಲಿಯೇ ಪ್ರಸಿದ್ಧಿ ಹೊಂದಿದ ಒಂದು ಸುಂದರ ವಾಸ್ತುಶೈಲಿಯ ಕಟ್ಟಡವಾಗಿದೆ.[೫]

ಹೈಕೋರ್ಟ್, ಮೆಜೆಸ್ಟಿಕ್, ರೈಲ್ವೆ ವಿಭಾಗ ಅಲ್ಲದೆ ಉದ್ಯಾನವನಗಳು ಸಾಂಸ್ಕೃತಿಕ ಕ್ಷೇತ್ರವಾದ ರವಿಂಧ್ರ ಕಲಾಕ್ಷೇತ್ರ, ಚಿತ್ರಕಲಾ ಪರಿಷತ್, ವೆಂಕಟಪ್ಪ ಆರ್ಟ್ ಗ್ಯಾಲರಿ, ಚೌಡಯ್ಯ ಸ್ಮಾರಕ ಭವನ, ಕಂಟೀರವ ಕ್ರೀಡಾಂಗಣ, ಕಂಠೀರವ ಸ್ಟುಡಿಯೋ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಇತ್ತೀಚೆಗೆ ಐಟಿಬಿಟಿ ಹೆಸರುವಾಸಿಯಾಗಿರುವ ತಾಂತ್ರಿಕ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಕ್ರಾಂತಿ ಮಾಡಿರುವ ಬೆಂಗಳೂರು ಮಹಾನಗರವಾಗಿ ಪರಿವರ್ತನೆಯಾದುದನ್ನು ನೋಡಬಹುದು.

ಬೆಂಗಳೂರು ನಗರದಲ್ಲಿ ೩ ವಿಶ್ವವಿದ್ಯಾಲಯಗಳು, ಅನೇಕ ಸಂಸ್ಥೆಗಳು ಸ್ಥಾಪಿತವಾಗಿವೆ. ಬೆಂಗಳೂರು ವಿಶ್ವವಿದ್ಯಾಲಯ, ಕಟ್ಟಿ ವಿಶ್ವವಿದ್ಯಾಲಯ, ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್, ಕೌನ್ಸಿಲ್ ಆಫ್ ಅಗ್ರಿಕಲ್ಚರ್ ಸಂಶೋಧನೆ ವತಿಯಿಂದ ನಡೆಯುತ್ತಿರುವ ಅಡುಗೆ, ಕ್ಷೀರೋದ್ಯಮ ಹಾಗೂ ಸಾಮಾನ್ಯ ಶಿಕ್ಷಣ ಪಾಲಿಟೆಕ್ನಿಕ್, ಎಂಜಿನಿಯರಿಂಗ್, ವೈದ್ಯಕೀಯ, ಹೋಮಿಯೋಪತಿ, ಭಾರತೀಯ ವೈದ್ಯಪದ್ಧತಿ, ದಂತವೈದ್ಯ, ಕಲಾವಿಜ್ಞಾನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ವಿಶ್ವೇಶ್ವರಯ್ಯ ಔದ್ಯಮಿಕ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಸರ್ಕಾರಿ ವಸ್ತುಸಂಗ್ರಹಾಲಯ, ಸಾಹಿತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ, ನಾಟಕ ಅಕಾಡೆಮಿ, ಸಂಗೀತ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಅನುವಾದ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್, ಇದಲ್ಲದೆ ಸರಕಾರಿ ವಸ್ತು ಸಂಗ್ರಹಾಲಯಕ್ಕೆ ಸೇರಿದಂತಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ಮತ್ತು ಇತರ ಖಾಸಗಿ ಭವನಗಳಲ್ಲಿ ಚಿತ್ರಕಲಾ ಪ್ರದರ್ಶನಕ್ಕೆ ಅವಕಾಶವಿದೆ.[೬]

ಬೆಂಗಳೂರಿನ ಪ್ರಾಚೀನತೆ

ಬೆಂಗಳುರು ಬಹು ಪ್ರಾಚೀನವಾದ ಸ್ಥಳ. ಇಲ್ಲಿನ ಸಿದ್ಧಾಪುರದ ಬಳಿ ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರೆತಿವೆ. ಕಬ್ಬಿಣ ಯುಗಕ್ಕೆ ಸೇರಿದ ಅವಶೇಷಗಳು ನಗರದ ಸುತ್ತಮುತ್ತಲ

೨೫. ಡಾ. ಎಚ್. ಎಸ್. ಶೇಷಗಿರಿರಾವ್ : ಬೆಂಗಳೂರು ದರ್ಶನ, ಪು-೧೬೮
೨೬. ಅದೇ.

ಸ್ಥಳಗಳಲ್ಲಿ ಕಂಡುಬಂದಿವೆ. ಇತಿಹಾಸ ಪ್ರಾರಂಭ ಕಾಲಕ್ಕೆ ಸಂಬಂಧಿಸಿದಂತೆ ಮೆಡಿಟೆರಿಯನ್ ಪ್ರದೇಶದಲ್ಲಿ ಬಳಕೆಯಲ್ಲದ ಕೆಲವು ರೀತಿಯ ಮಣ್ಣಿನ ಮಡಿಕೆಗಳು ಮೊದಲಾದ ಅರಸರ ನಾಣ್ಯಗಳು ಈ ಪ್ರದೇಶದಲ್ಲಿ ದೊರೆಕಿವೆ. ಇವು ಬೆಂಗಳೂರು ನಗರ ಪ್ರದೇಶದಲ್ಲಿ ದೊರಕಿವೆ. ಬೆಂಗಳೂರು ನಗರ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದಿಂದ ಅಂದರೆ ಕ್ರಿ.ಪೂ.೪೦೦೦ ವರ್ಷಗಳಿಂದ ಜನವಸತಿಯಿದ್ದ ಬಗ್ಗೆ ಹಾಗೂ ಈ ಪ್ರದೇಶ ದಕ್ಷಿಣ ಭಾರತದ ಇತರ ಪ್ರದೇಶಗಳಂತೆ ಹೊರನಾಡುಗಳೊಡನೆ ಹೊಂದಿದ ಸಂಪರ್ಕಗಳ ಬಗ್ಗೆ ಸ್ಪಷ್ಟ ಮಾಹಿತಿಗಳಾಗಿವೆ.

ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರ ಬಲ್ಲಾಳ ಬೇಟೆಗೆ ಹೋಗಿದ್ದಾಗ ಹಸಿವು, ಬಾಯಾರಿಕೆಗಳನ್ನು ತೀರಿಸಿಕೊಳ್ಳಲು ಒಂದು ಒಂಟಿ ಗುಡಿಸಲನ್ನು ತಲುಪಿದ. ಅರಸನು ಅಲ್ಲಿ ವಾಸವಾಗಿದ್ದ ಮುದುಕಿಯೊಬ್ಬಳು ಕುಡಿಯಲು ನೀರು ಹಾಗೂ ಬೆಂದಕಾಳನ್ನು ಚಕ್ರವರ್ತಿಗೆ ಕೊಟ್ಟು ಅವನ ಹಸಿವನ್ನು ನಿವಾರಿಸಿದಳು. ಈ ಅತಿಥ್ಯದಿಂದ ಸಂಪ್ರೀತನಾದ ಚಕ್ರವರ್ತಿ ಅವಳ ಗೌರವಾರ್ಥವಾಗಿ ಈ ಸ್ಥಳದಲ್ಲಿ ಊರೊಂದನ್ನು ಸ್ಥಾಪಿಸಿ ಅದಕ್ಕೆ ಬೆಂದಕಾಳೂರೆಂದು ಹೆಸರಿಟ್ಟ. ಅದೇ ಬೆಂಗಳೂರು ಆಗಿದೆ ಎಂಬುದು ಸ್ಥಳೀಯರ ಐತಿಹ್ಯ. ಆದರೆ ಬೆಂಗಳೂರಿನ ಬಳಿಯ ಬೇಗೂರಿನಲ್ಲಿ ದೊರೆತಿರುವ ೯ನೇ ಶತಮಾನದಲ್ಲಿ ರಚಿಸಿರುವ ಶಾಸನದಲ್ಲಿ ಬೆಂಗಳೂರು ಎಂಬ ಹೆಸರೇ ಕಂಡುಬಂದಿದೆ.[೭]

ವಿಜಯನಗರ ಅವನತಿಯ ತರುವಾಯ ಕರ್ನಾಟಕ ಚರಿತ್ರೆಯ ಅನೇಕ ನಗರಗಳು ಪ್ರಮುಖ್ಯತೆ ಪಡೆದವು. ಈ ನಗರಗಳ ಸಾಲಿನ್ಲಲಿ ಬೆಂಗಳೂರು ಪ್ರಮುಖವಾದುದ್ದು. ವಿಜಯನಗರ ಆಳ್ವಿಕೆ ಸಂದರ್ಭದ ಅಸ್ತಿತ್ವದಲ್ಲಿದ್ದರೂ ನಂತರದ ಅವಧಿಯಲ್ಲಿ ಸ್ವತಂತ್ರವಾಗಿ ಪ್ರಮುಖ ನಗರವಾಗಿ ಅಭಿವೃದ್ಧಿಯನ್ನು ಹೊಂದಿತ್ತು. ನಗರವು ದಖನ್ ಪ್ರಸ್ಥಭೂಮಿ, ನೀಲಗಿರಿ ಬೆಟ್ಟಗಳ ಸಾಲು ಮತ್ತು ಬಯಲು ನಾಡಸೀಮೆಗಳ ಅಂಚಿನಲ್ಲಿದೆ. ಪ್ರಾಚೀನ ಕಾಲದಿಂದಲು ಪ್ರಾಚೀನ ವಹಿವಾಟಿಗಾಗಿ ಇರುವ ಮುಖ್ಯ ಮಾರ್ಗಗಳು ಇಲ್ಲಿ ಸಂಬಂಧಿಸುತ್ತವೆ. ನಾಡಿನ ದಕ್ಷಿಣದಿಂದ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಚಲಿಸುವ ಮಾರ್ಗಗಳು ಬೆಂಗಳೂರು ನಗರಕ್ಕೆ ಸಂಧಿಸಿ ಮುನ್ನಡೆಯುತ್ತವೆ. ಬದಲಾದ ರಾಜಕೀಯ ವ್ಯವಸ್ಥೆ ಹಾಗೂ ಯುದ್ಧ ತಂತ್ರಗಳಿಂದಾಗಿ ನೈಸರ್ಗಿಕವಾಗಿ ರಕ್ಷಣೆಯನ್ನು ಒದಗಿಸುತ್ತಿದ್ದ ಬೆಟ್ಟ ಹಾಗೂ ದಟ್ಟ ಕಾಡುಗಳಲ್ಲಿ ಅರಸರು ಮಧ್ಯ ಕಾಲದಲ್ಲಿ ತಮ್ಮ ರಾಜಧಾನಿಯನ್ನು ನಿರ್ಮಿಸುತ್ತಿದ್ದುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ.[೮] ಮುಖ್ಯವಾಗಿ ಸಾಮಂತ ಅರಸರು ತಮ್ಮ ರಾಜ್ಯಗಳಲ್ಲಿ ಸಂಚರಿಸುತ್ತಿದ್ದ ವ್ಯಾಪಾರ ಮಾರ್ಗಗಳನ್ನು ನಿಯಂತ್ರಿಸುತ್ತಿದ್ದರು. ತಮ್ಮ

೦೭. ಡಾ. ಹಿ. ಚಿ. ರಾಮಚಂದ್ರಗೌಡ : ಕನ್ನಡ ವಿಷಯ ವಿಶ್ವಕೋಶ, ಪು-೨೦೨
೦೮. ಅದೇ.

ರಾಜ್ಯದ ಸೀಮಿತ ಆದಾಯದ ಜೊತೆಗೆ ಈ ಮಾರ್ಗಗಳನ್ನು ಬಳಸುತ್ತಿದ್ದ ವ್ಯಾಪಾರಿಗಳಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು.

ವಿಜಯನಗರೋತ್ತರ ಕಾಲದಲ್ಲಿ ವೃದ್ಧಿಸಿದ ವ್ಯಾಪಾರದ ಹಂಗು ಔದ್ಯೋಗೀಕರಣಕ್ಕೆ ಸಾಮಂತ ಅರಸರು ಸಂಪೂರ್ಣ ಹೊಣೆ ಹೊತ್ತಿದ್ದರು. ವ್ಯಾಪಾರ ಸಂವರ್ಧನೆ ಹಾಗೂ ಔದ್ಯೋಗೀಕರಣದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪ್ರದೇಶಗಳಲ್ಲಿ ಇವುಗಳಿಗೆ ಸಹಾಯಕವಾಗುವಂತೆ ನಗರವನ್ನು ಭೌಗೋಳಿಕ ಪ್ರದೇಶದಲ್ಲಿ ಆಯ್ಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ಅದೇ ರೀತಿ ೧೯ನೇ ಶತಮಾನದಲ್ಲಿ ಈ ನಗರವು ನಿರ್ಮಾಣವಾಗಿದೆ ಎಂಬುದಕ್ಕೆ ಸಾಕ್ಷಿ ಪುರಾವೆಗಳಿದ್ದು, ಈ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ವಾಣಿಜ್ಯ ಅಭಿವೃದ್ಧಿಗಳ ದೃಷ್ಟಿಯಿಂದ ಈ ನಗರವು ಯಶಸ್ವಿಯಾಗಿ ಬೆಳೆಯಲು ಸಾಧ್ಯವಾಯಿತೆನ್ನಬಹುದು. ಬೆಂಗಳೂರು ಸ್ಥಾಪನೆಗೆ ಆಯ್ದುಕೊಂಡ ಸ್ಥಳದಿಂದಾಗಿ ದಕ್ಷಿಣ ಭಾರತದ ದೊಡ್ಡ ನಗರ ಕೇಂದ್ರವಾಗಿ ಬೆಳೆಯಲು ಅನುಕೂಲವಾಯಿತು. ಈ ನಗರವನ್ನು ಆಯಾಕಟ್ಟಿನ ಸ್ಥಳದಿಂದಾಗಿ ದಕ್ಷಿಣ ಭಾರತದ ದೊಡ್ಡ ನಗರ ಕೇಂದ್ರವಾಗಿ ಬೆಳೆಯಲು ಅನುಕೂಲವಾಯಿತು. ಮತ್ತು ಈ ನಗರವನ್ನು ಆಳಿದ ದೇಶೀಯ ರಾಜರು ಅದರ ಬೆಳವಣಿಗೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ.[೧೯]

ಕಲಾವಿದ ಸಿ. ಚಂದ್ರಶೇಖರವರ ಜನನ ಮತ್ತು ಬಾಲ್ಯಪರಿಸರ

ಅಂದಿನ ಮೈಸೂರು ರಾಜ್ಯದಡಿಯಲ್ಲಿ ಬರುವ ಬೆಂಗಳೂರು ಪಟ್ಟಣವು ಪ್ರಮುಖ ನಗರ ಕೇಂದ್ರವಾಗಿತ್ತು. ಈ ಪಟ್ಟಣದ ಗೋಪಾಲಪುರದಲ್ಲಿ ೧೯೪೮, ೧೦ನೇ ಮಾರ್ಚ್ ರಂದು ಚಿಕ್ಕಯಲ್ಲಪ್ಪ ಹಾಗೂ ಚೌಡಮ್ಮಾ ದಂಪತಿಗಳಿಗೆ ಎರಡನೆಯ ಮಗನಾಗಿ ಕಲಾವಿದ ಸಿ. ಚಂದ್ರಶೇಖರ ಅವರು ಜನಿಸಿದರು. ಚಿಕ್ಕಯಲ್ಲಪ್ಪ ಹಾಗೂ ಚೌಡಮ್ಮ ಈ ದಂಪತಿಗಳಿಗೆ ೧ ಹೆಣ್ಣು ೨ ಗಂಡು ಒಟ್ಟು ಮೂರು ಜನ ಮಕ್ಕಳು. ಮೊದಲನೆಯವರು ಗಂಗಮ್ಮಾ (ಹೆಣ್ಣು ಮಗು), ಎರಡನೆಯವರು ಸಿ. ಚಂದ್ರಶೇಖರ ಹಾಗೂ ಮೂರನೆಯವರು ಗಂಗಾಧರ. ೧೯೪೦ರ ಸುಮಾರಿನಲ್ಲಿ ಬೆಂಗಳೂರು ನಗರ ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯನ್ನು ಹೊಂದಿತ್ತು. ಇವರ ತಂದೆಯು ಕಂಬಳಿ ನೆಯ್ಯುವ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದರು. Socialogist Party ನಲ್ಲಿ ಸೇರಿಕೊಂಡು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅನೇಕ ಸಾಮಾಜಿಕ ಸುಧಾರಣಾ ಕಾರ್ಯಗಳನ್ನು ಮಾಡುವಲ್ಲಿ ಮಗ್ನರಾಗಿದ್ದರು. Socialogist Party ಯಿಂದ ಚಂದ್ರಶೇಖರ ಅವರ ತಂದೆ ಎರಡು ಬಾರಿ ಮುನಿಸಿಪಲ್ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಅಲ್ಲದೆ ರೇಷನ್ ಅಂಗಡಿಯನ್ನು ನಡೆಸುತ್ತಿದ್ದರು. ಈ ರೇಷನ್ ಅಂಗಡಿಯ ಹಿಂಭಾಗದಲ್ಲಿ

೧೯ ಡಾ. ಬಿ. ಕೆ. ರಾಮಚಂದ್ರಗೌಡ : ಕನ್ನಡ ವಿಷಯ ವಿಶ್ವಕೋಶ, ಪು-೨೦೫

ವಂಶವೃಕ್ಷ

ವೀರಸೋಮಪ್ಪ ಚಿಕ್ಕಮನಿ

↓

ದೊಡ್ಡಸೋಮಪ್ಪ | ನಿಂಗಪ್ಪ | ಯಲ್ಲಪ್ಪ | ಚಿಕ್ಕಸೋಮಪ್ಪ | ಚಿಕ್ಕಯಲ್ಲಪ್ಪ ಹೆಂ. ಚೌಡಮ್ಮ

ಚಿಕ್ಕಯಲ್ಲಪ್ಪ ಹೆಂ. ಚೌಡಮ್ಮ ↓

ಗಂಗಮ್ಮ ಹೆಣ್ಣು ಮಗು | ಚಂದ್ರಶೇಖರ (ಕಲಾವಿದ) ಹೆಂ. ಜಯಶಂಕರಮ್ಮ | ಗಂಗಾಧರ

ಚಂದ್ರಶೇಖರ (ಕಲಾವಿದ) ಹೆಂ. ಜಯಶಂಕರಮ್ಮ ↓

ವೆಂಕಟೇಶ–ವನಜಾಕ್ಷಿ | ಅಂಬರೀಷ–ಶಶಿಕಲಾ | ಯಮುನಾ–ಗಂ.ದೇವರಾಜ | ಚಿಂತನ್ ಹೆಂ. ಚೈತ್ರಾ

ವೆಂಕಟೇಶ–ವನಜಾಕ್ಷಿ ↓ ಪ್ರಾರ್ಥನಾ, ರೋಹಣ

ಅಂಬರೀಷ–ಶಶಿಕಲಾ ↓ ನಯನ

ಯಮುನಾ–ಗಂ.ದೇವರಾಜ ↓ ವಿಶಾಕಾ, ಪರಿಣಿತ

ಕೆರೆಯೊಂದಿತ್ತು. ಆ ಕರೆಯ ಮಣ್ಣನ್ನು ತಂದು ಸಿ ಚಂದ್ರಶೇಖರ ಅವರು ಚಿಕ್ಕಂದಿನಿಂದಲೇ ಸಣ್ಣ ಸಣ್ಣ ಮೂರ್ತಿಗಳನ್ನು ಮಾಡುತ್ತಿದ್ದರು. ಕೆರೆಯ ಹತ್ತಿರ ದೇವಸ್ಥಾನವಿತ್ತು. ಜಾತ್ರೆಯ ಸಮಯದಲ್ಲಿ ನಾಟಕಗಳು ಅಲ್ಲಿ ನಡೆಯುತ್ತಿದ್ದವು. ಹರೀಶ್ಚಂದ್ರ ನಾಟಕ, ವಿಕ್ರಮಾದಿತ್ಯ ನಾಟಕ, ರಾಮಾಯಣ, ಮಹಾಭಾರತ ನಾಟಕಗಳನ್ನು ಆಡುತ್ತ ಇರುವಂತಹ ದಿನಗಳು. ಇವೆಲ್ಲವೂ ನೋಡಿ ಇವರು ಜೊತಗೆ ತಮ್ಮ ಸ್ನೇಹಿತ ಬಳಗದೊಂದಿಗೆ ಸೇರಿ ಸ್ಫೂರ್ತಿಗೊಂಡು ತಾವೂ ನಾಟಕದಲ್ಲಿನ ಪಾತ್ರದಾರಿಗಳಂತೆ ಉಡುಗೆ-ತೊಡುಗೆ ತೊಟ್ಟು ಹಾಗೇ ಸಂಭಾಷಣೆಗಳನ್ನು ಹೇಳಿಕೊಂಡು ಆಟವಾಡುತ್ತಿದ್ದರು. ಸಿ ಚಂದ್ರಶೇಖರ ಅವರು ತಮ್ಮ ಅಂಗಡಿಯ ಪಕ್ಕದಲ್ಲಿನ ದೇವಾಲಯದ ಅಂಗಳದಲ್ಲಿ ಸಿಮೆಂಟ್ ಗಾರೆಯ ಮೇಲೆ ಆಂಜನೇಯ, ಈಶ್ವರ, ಗಣಪತಿ ಮುಂತಾದ ಚಿತ್ರಗಳನ್ನು ರಚಿಸುತ್ತಿದ್ದರು. ಹೀಗೆ ಬಾಲ್ಯದಲ್ಲಿಯೇ ಕಲೆಯ ನಂಟನ್ನು ಅಂಟಿಸಿಕೊಂಡು ಬೆಳೆದುದಾಗಿ ತಿಳಿದುಬರುತ್ತದೆ. ಬೆಂಗಳೂರಿನ ಕೋಟೆ ಶಾಲೆಯಲ್ಲಿ ಚಂದ್ರಶೇಖವರ ಅವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಪೂರ್ಣಗೊಳ್ಳುತ್ತದೆ.[೧೦] ಈ ಹಂತದಲ್ಲಿ ಚಿತ್ರಕಲೆಯ ಕಡೆಗೆ ವಿಶೇಷವಾದ ಒಲವನ್ನು ತೋರಿಸುತ್ತಾರೆ. ಅನೇಕ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ, ಬಹುಮಾನಗಳನ್ನು ಪಡೆಯುತ್ತಾ, ಕಲೆಯ ಬಗೆಗಿನ ತಮ್ಮ ವಿಶಿಷ್ಟವಾದ ಮನೋಭಿಲಾಷೆಯನ್ನು ತೋರ್ಪಡಿಸುತ್ತ ಬಂದಿರುವುದು ಅವರು ಮುಂದೊಬ್ಬ ದೊಡ್ಡ ಕಲಾವಿದರಾಗಿ ಬೆಳೆಯುವ ಮುನ್ಸೂಚನೆಯನ್ನು ಆಗ ನೀಡಿದ್ದರೆಂಬುದನ್ನು ಅವರ ಸಹಪಾಠಿಗಳು ಚಂದ್ರಶೇಖರ ಅವರ ಕುರಿತು ವ್ಯಕ್ತಪಡಿಸುವ ಅಭಿಪ್ರಾಯಗಳಾಗಿವೆ.

ಕಲಾಶಿಕ್ಷಣ

ವಿದ್ಯಾಭ್ಯಾಸದಲ್ಲಿ ಕಲೆಯ ಪಾತ್ರ ಹಲವು ರೀತಿಗಳಲ್ಲಿ ಬರುತ್ತದೆ. ಮುಖ್ಯವಾಗಿ ಉಳಿದ ಶಿಕ್ಷಣದೊಂದಿಗೆ ಕಲಾಭ್ಯಾಸ, ಚಿತ್ರಕಲೆಯದೇ ಶಿಕ್ಷಣ ಹಾಗೂ ವಂಶಪರಂಪರಿಕವಾದ ಕಸಬುಗಾರಿಕೆಯ ಮೂಲದಿಂದ ಶಿಕ್ಷಣ ಕಂಡುಬರುತ್ತದೆ. ತೀರ ಪ್ರಾಚೀನ ಕಾಲದಿಂದಲೂ ವಿದ್ಯೆ ಕೆಲವೇ ವ್ಯಕ್ತಿಗಳಿಗೆ ಮೀಸಲಾಗಿದ್ದು, ಅದರ ಪ್ರಯೋಜನವೂ ಅವರಿಗೆ ದೊರಕುತ್ತಿತ್ತು. ಜಾತಿ, ಧರ್ಮ, ರಾಜಕೀಯಗಳಿಂದ ಅವು ತೀರ ಕಟ್ಟುಪಾಡಿನದಾಗಿತ್ತು. ವಿದ್ಯಾರ್ಥಿಯು ಗುರುವಿನ ಮನೆಯಲ್ಲಿಯೇ ವಾಸಮಾಡುತ್ತಾ, ಗುರುಸೇನೆ ಮಾಡುತ್ತ ವ್ಯಾಸಂಗ ಮಾಡಬೇಕಾಗಿತ್ತು. ಗುರು ಶಿಷ್ಯರಿಗೆ ನೇರವಾದ ಸಂಬಂಧವಿರುತ್ತಿದ್ದರಿಂದ ಶಿಷ್ಯನ ಗುಣಶೀಲಗಳನ್ನು ಉತ್ತಮ ಎಂದು ವಾದಿಸುವವರು ಇದ್ದಾರೆ. ಇದಕ್ಕೆ ಕಾರಣ ಗುರುವಿನ ಕಣ್ಮುಂದೆಯೇ ಯಾವಾಗಲೂ ಶಿಷ್ಯ ಇರುವುದರಿಂದ ಸಂದರ್ಭ ಬಂದಾಗಲೆಲ್ಲ ವಸ್ತುವಿಷಯಗಳ ಬಗ್ಗೆ ಅರಿತುಕೊಂಡು ಉತ್ತಮ ಕಲಾಕೃತಿಗಳನ್ನು ರಚಿಸುವುದಕ್ಕೆ ಮುಂದಾಗುತ್ತಾನೆ.[೧೧]

---

೧೦. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ, ಪು-೯

೧೧. ಅದೇ.



ಚಿತ್ರಕಲೆ ಜೀವನದ ಕೈಗನ್ನಡಿಯಷ್ಟೇ ಅಲ್ಲ. ಅದು ನಮ್ಮ ಬದುಕಿನ ಮುನ್ನಡೆಗೂ ಕಾರಣವಾಗಬಲ್ಲದು. ಒಂದು ರೀತಿಯಲ್ಲಿ ಚಿತ್ರಕಲೆ ಜೀವನದ ಪ್ರತಿಬಿಂಬ ಅಷ್ಟೇ ಅಲ್ಲ. ಅದು ಗತಿಬಿಂಬವೂ ಹೌದು. ಧರ್ಮ, ಮತ, ತತ್ವಗಳ ಪ್ರಚಾರಕ್ಕಾಗಿ, ಸಾಂಸ್ಕೃತಿಯ ಪ್ರಚಾರಕ್ಕಾಗಿ, ಜೀವನದರ್ಶನಕ್ಕಾಗಿ ಶಿಕ್ಷಣದಲ್ಲಿ ವಿಜ್ಞಾನ, ತಂತ್ರಜ್ಞಾನಕ್ಕಿಂತಲೂ ಚಿತ್ರಕಲೆಯ ಪಾತ್ರವು ತುಂಬಾ ಅವಶ್ಯಕವಿದೆ. ಜನಸಾಮಾನ್ಯರಿಗೆ ಸುಲಭವಾಗಿ ಅನುಭವವಾಗಬಲ್ಲ ಕಲಾಮಾಧ್ಯಮಗಳಲ್ಲಿ ಚಿತ್ರಕಲೆ ಪ್ರಮುಖವಾದದ್ದು. ಇದಕ್ಕೆ ಕಾಲ, ದೇಶ, ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿಯಿದೆ. ಹೀಗಾಗಿ ಚಿತ್ರಕಲೆಯನ್ನು ಅಂತಾರಾಷ್ಟ್ರೀಯ ಭಾಷೆಯೆಂದು ಕರೆಯಲಾಗುತ್ತದೆ.

ಬ್ರಿಟೀಷರು ಭಾರತಕ್ಕೆ ಬಂದ ನಂತರ ಕಲಾಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾದವು. ಬ್ರಿಟೀಷ ವ್ಯಾಪಾರಿಗಳಿಗಾಗಿ ಭಾರತೀಯ ಚಿತ್ರಕಲಾವಿದರು ವ್ಯಾಪಾರಿಗಳನ್ನು ಸಂತುಷ್ಟಗೊಳಿಸುವುದಕ್ಕಾಗಿ ಭಾರತೀಯ ಜನಜೀವನವನ್ನು ಪ್ರತಿಬಿಂಬಿಸುವ ಚಿತ್ರಕಲಾಕೃತಿಗಳ ರಚನೆಗೆ ತೊಡಗಿದರು. ಬ್ರಿಟೀಷ ಕಂಪನಿಯ ಜನರು ಭಾರತೀಯ ಕಲಾವಿದರ ದೃಷ್ಟಿಯನ್ನು ಜಲವರ್ಣ, ತಂತ್ರಗಳತ್ತ ತಿರುಗಿಸಿದರು. ಬ್ರಿಟೀಷ ಪ್ರಭುತ್ವವು ೧೯ನೇ ಶತಮಾನದ ಮಧ್ಯಭಾಗದಲ್ಲಿ ಕಲ್ಕತ್ತ, ಮುಂಬೈ, ಮದ್ರಾಸ್ ಮತ್ತು ಲಾಹೋರ್‌ಗಳಲ್ಲಿ ಕಲಾಶಾಲೆಗಳನ್ನು ಸ್ಥಾಪಿಸಿತ್ತು.[೧೨] ಈ ಕಲಾಶಾಲೆಗಳಲ್ಲಿ ಮೂಲಾಭ್ಯಾಸವನ್ನು ಪಾಶ್ಚಿಮಾತ್ಯ ಶೈಲಿಯಲ್ಲಿಯೇ ಮಾಡಿಸಲಾಗುತ್ತಿತ್ತು. ಇವರು ವ್ಯಾಪಾರಕ್ಕಾಗಿ ಬಂದು ಇಲ್ಲಿಯೇ ನೆಲಸಿದವರಲ್ಲದೆ ಕ್ರಮೇಣವಾಗಿ ಭಾರತದಲ್ಲಿ ಅವರ ಪ್ರಾಬಲ್ಯ ಹೆಚ್ಚುತ್ತ ತಮ್ಮ ಆಡಳಿತವನ್ನು ಭಾರತಾದ್ಯಂತ ವಿಸ್ತರಿಸಿದರು. ರಾಜಕೀಯ, ಸಾಂಸ್ಕೃತಿಕ ಆರ್ಥಿಕ ಮತ್ತು ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಮೇಲೂ ತಮ್ಮ ಹಿಡಿತವನ್ನು ಸ್ಥಾಪಿಸುವ ಉದ್ದೇಶದಿಂದ ಬ್ರಿಟೀಷರು ಶಿಕ್ಷಣದಂತಹ ಅವಶ್ಯಕವಾದ ವಾತಾವರಣವನ್ನು ಸೃಷ್ಟಿಸಿದರು.[೧೩]

ಕೆನ್ ಕಲಾಶಾಲೆಯಲ್ಲಿ ಚಿತ್ರಕಲಾ ಅಧ್ಯಯನ

"೧೯೬೮ರಲ್ಲಿ ಕೆನ್ ಕಲಾಶಾಲೆಯನ್ನು ಕಲಾವಿದ ಆರ್. ಎಂ. ಹಡಪದ್ ಅವರು ಆರಂಭಿಸಿದರು. ಇದರಿಂದ ಬೆಂಗಳೂರಿನ ಯುವ ಕಲಾಸಕ್ತರಿಗೆ ಹೊಸ ನೋಟವೊಂದು ದೊರೆಯುವಂತಾಯಿತು. ಜೊತೆಗೆ ಕೆನ್ ಕಲಾಶಾಲೆ ಒಂದು ಸಾಂಸ್ಕೃತಿಕ ಕೇಂದ್ರವೂ ಆಯಿತು. ಸಾಹಿತ್ಯ, ನಾಟಕಗಳಲ್ಲಿ 'ನವ್ಯತೆ' ಕಾಣಿಸಿಕೊಂಡಿದ್ದು ಆಯಾ ಕ್ಷೇತ್ರದ ಕಲಾವಿದರು ಪ್ರತಿ ನಿತ್ಯವೆಂಬಂತೆ ಶಾಲೆಯ ಆವರಣದಲ್ಲಿ ಸೇರುತ್ತಿದ್ದುದ್ದು, ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದುದು, ರಾಜ್ಯ, ಹೊರರಾಜ್ಯದ ಕಲಾವಿದರಿಂದ ಪ್ರಾತ್ಯಕ್ಷಿಕೆ ಇರಿಸುತ್ತಿದ್ದುದು. ಹಡಪದ್ ಅವರು ಕಲಾವಿದರಾಗಿ,

೧೨. ಪ್ರೊ. ಎಸ್. ಸಿ. ಪಾಟೀಲ : ದೃಶ್ಯಕಲಾ ಸಂವೇದನೆ, ಪು-೨
೧೩. ಅದೇ.

ಚಿಂತಕರಾಗಿ, ಗೆಳೆಯರಾಗಿ, ಉಪಾಧ್ಯಾಯರಾಗಿ, ಅದ್ಭುತವಾಗಿ ಬೆಳೆಯಲು ಕಾರಣವಾಯಿತು." ಸಿ ಚಂದ್ರಶೇಖರ ಅವರು ಜಿಡಿ ಆರ್ಟ್ ಡಿಪ್ಲೊಮಾ ಪದವಿಯನ್ನು ೧೯೭೩ರಲ್ಲಿ ಪಡೆದರು.

ಕಲಾಗುರು ನಾಡೋಜ ಆರ್. ಎಂ. ಹಡಪದ

"ಬಾದಾಮಿಯಲ್ಲಿ ಜನಿಸಿ, ಬಾಲ್ಯಾವಸ್ಥೆಯನ್ನು ನಿಕೃಷ್ಟ ಕುಲದವರು ಅನುಭವಿಸಲೇ ಬೇಕಾಗಿದ್ದು, ಕಹಿಯನ್ನೆಲ್ಲ ಅನುಭವಿಸಿ ಬೆಳೆದವರು ಹಡಪದ್ ಅವರು. ಜೊತೆಗೆ ನಿಸರ್ಗದೊಂದಿಗೆ, ಕುವೆಂಪುಗಿಂತಲೂ ಭಿನ್ನವಾದ ಹಸಿ ಹಸಿ ಒಡನಾಟ. ದಂಡಾವತಿಮಠದ ಹತ್ತಿರ ಹಾಗೂ ಮುಂಬೈಯ ಜೆ.ಜೆ. ಕಲಾಶಾಲೆಯಲ್ಲಿ ಕಲಾಭ್ಯಾಸ. ಅರವತ್ತರ ದಶಕದ ಕೊನೆಯಲ್ಲಿ ಬೆಂಗಳೂರಿನಲ್ಲಿ ನೆಲೆ. ಆಗಲೆ ಕೆನ್ ಕಲಾಶಾಲೆ ಸ್ಥಾಪನೆ. 'ನಾವು ನಾಲ್ವರು' ಎಂಬ, ಪ್ರಾಯಶಃ ಮೊದಲ ಆಧುನಿಕ ಕರ್ನಾಟಕದ ಕಲಾಗುಂಪಿನ ಸ್ಥಾಪನೆ. ಅಂದಿನಿಂದ ಅಕ್ಷರಶಃ ಅಲ್ಲಿಯೇ ವಾಸ ಮತ್ತು ಭೋದನೆ. ತೀರ ವೈಯಕ್ತಿಕ ದೃಷ್ಟಿಕೋನದ, ಅತೀವ ಸ್ವಾತಂತ್ರ್ಯದ ಕಲಾಬೋಧನೆ, ನಾಟಕ, ಸಾಹಿತ್ಯ, ರಂದವರೊಂದಿಗೆ ನಿರಂತರ ಒಡನಾಟ. ಜರ್ಮನಿಗೆ ಹಲವು ತಿಂಗಳ ಕಾಲ ಕಲಾಪ್ರವಾಸ. ಏನನ್ನೂ ಬರೆಯದೇ ಹೋದರೂ ದಣಿವರಿಯದ ಮಾತುಗಾರಿಕೆ, ಬಹುಪಾಲು ಕಲೆಯ ಬಗ್ಗೆ. ಮಾತು. ನಿಜ. ಇಷ್ಟು ಆತ್ಮಚರಿತ್ರೆಯ ವಿವರ ಹಡಪದ್‌ರ ಬಾಹ್ಯ ವಿವರವನ್ನು ಕುರಿತಂತೆ ಸತ್ಯವಾಗಿದೆ. ಜೊತೆಗೆ ಆಂತರಿಕವಾಗಿ ಅವರು ತೆಗೆದುಕೊಂಡ ಕೆಲವು ಮುಖ್ಯ ಸಾಮಾನ್ಯವಾಗಿ ರಾಷ್ಟ್ರಿ ನಿರ್ಧಾರಗಳು ಕರ್ನಾಟಕದ ಕಲಾಇತಿಹಾಸಕ್ಕೆ ಮುಖ್ಯ ತಿರುವುಗಳನ್ನು ನೇರವಾಗಲ್ಲದಿದ್ದರೂ, ಪರೋಕ್ಷವಾಗಿ ನೀಡಿದೆ.

ಸುಮಾರು ಎರಡೂವರೆ ದಶಕದ ಬೋಧನೆಯಲ್ಲಿ ಅವರು ವಿದ್ಯಾರ್ಥಿಗಳೊಂದಿಗೆ ಕುಳಿತು ಚಿತ್ರ ರಚಿಸಿದ್ದು ಅಥವಾ ಅಷ್ಟರಮಟ್ಟಿಗೆ 'ಮಾತ್ರ' ಅವರ ವಿದ್ಯಾರ್ಥಿಗಳಾಗಿದ್ದವರು. ಅವರನ್ನು ಅರ್ಥೈಸಿಕೊಂಡಿದ್ದಾರೆಯೇ ಎಂದೂ ಅನ್ನಿಸದಿರದು. ಬಾಯಿಮಾತಲ್ಲಿ ಸಲಹೆ ನೀಡುವುದಕ್ಕಿಂತಲೂ ಪ್ರತ್ಯಕ್ಷ ಕೃತಿರಚಿಸಿ ತೋರುವ ಗುರುವು ತುಂಬಿಕೊಡುವ ಆತ್ಮವಿಶ್ವಾಸ ಅನನ್ಯವಾದುದು. ೭೦ರ ದಶಕದಲ್ಲಿದ್ದ ಕಲಾಗುರುಗಳಲ್ಲಿ ಪ್ರಾತ್ಯಕ್ಷಿಕೆಯಾಗಿ ಕೃತಿರಚಿಸುತ್ತಿದ್ದವರಿದ್ದಾಗ್ಯೂ ತಮ್ಮದೇ ಕೃತಿಗಳೊಳಗಿನ ಆಲೋಚನೆಗಳನ್ನು ಮೌಖಿಕವಾಗಿ ಅಭಿವ್ಯಕ್ತಿಸಲಾಗದವರೇ ವಿಪುಲವಾಗಿದ್ದರು. ಹಡಪದ ಅವರು ಆಗ ಇವೆರಡನ್ನೂ ಬೆರೆಸುವ ಮೂಲಕ ಕಲೆಯ ಒಳಕ್ಕೆ ವೈಚಾರಿಕತೆಯನ್ನು ಎಳೆದು ತಂದರು. ಇದು ಅವರ ಎರಡನೆಯ ಅತಿಮುಖ್ಯ ಕೊಡುಗೆ. ಹಡಪದ್ ತಮ್ಮ ಈ ಪ್ರಾತ್ಯಕ್ಷಿಕೆಯ ಕೃತಿಗಳನ್ನು ಮತ್ತು ವೈಯಕ್ತಿಕ ಕ್ರಿಯಾತ್ಮಕ ಕೃತಿಗಳನ್ನು ಶಾಸ್ತ್ರೀಕವಾಗಿ ಬೇರ್ಪಡದಂತೆ ರೂಪಿಸಿದ್ದರಿಂದ ಚಿತ್ರಚೌಕಟ್ಟಿನೊಳಗಷ್ಟೇ ಚಿತ್ರವಿರಬೇಕೆಂಬ ಅರ್ಥದ

ರೆನಾಯಸಾನ್ಸ್ ಕಾಲದ ಅಲ್ಬರ್ಟಿಯ ಜನಪ್ರಿಯ ಮಾತು–ನಂಬಿಕೆಗಳನ್ನು ಸುಳ್ಳು ಮಾಡಿದಂತಾಯಿತು. ಈ ಮತ್ತು ಇನ್ನಿತರ ಕಾರಣಗಳಿಂದಾಗಿ ಹಡಪದ್‌ರವರು ಕಲಾಗ್ಯಾಲರಿ ಮತ್ತು ಮಾರುಕಟ್ಟೆಗಳಿಂದ ದೂರವುಳಿದಿದ್ದಾರೆ ಮತ್ತು ಕಲೆಯನ್ನು ಸರಕನ್ನಾಗಿ ಮಾರ್ಪಡಿಸುವ ನೇತ್ಯಾತ್ಮಕ ಸಾಮರ್ಥ್ಯವಿರುವ ಆ ವ್ಯವಸ್ಥೆಯಿಂದ ದೂರವುಳಿದಿರುವುದರಿಂದಾಗಿ ಇವರ ಕೃತಿಗಳಲ್ಲಿನ ವೈವಿಧ್ಯ ಇನ್ನೂ ಜೀವಂತವಿದೆ. ಭಾರತದ ಎಲ್ಲೆಡೆ ಕಲೆಯ ಬಹುಸುಶಿಕ್ಷಿತರಾಗಿ ಬಂದು ಮಾರುಕಟ್ಟೆಯ ತಲೆದೂರುವಿಕೆಯನ್ನು ಮೀರಿ, ಕಲಾಭಿವ್ಯಕ್ತಿಯಲ್ಲಿ ಸಾಮೂಹಿಕವಾಗಿ ತೊಡಗಿಸಿಕೊಳ್ಳುವ ಛಾತಿಯನ್ನು ಕೆಲವೊಮ್ಮೆ ತೋರುತ್ತಿರುವ ಕರ್ನಾಟಕದ ಯುವ ಕಲಾಪೀಳಿಗೆಯಂತೆಯೇ ಹಡಪದ್, ಯಾವುದೇ ಹೊರಗಿನ ಶಿಕ್ಷಣವಿಲ್ಲದೆಯೂ ಒಬ್ಬಂಟಿಯಾಗಿ, ಅದು ಬಹಳ ಹಿಂದಿನಿಂದಲೇ, ಹಾಗೆಯೇ ಉಳಿದುಬಿಟ್ಟಿದ್ದು, ಕಲಾವಿದರಾಗಿ ಮಾತ್ರವಲ್ಲ ಒಬ್ಬ ಸೂಕ್ಷ್ಮ ಕಲಾತತ್ವಜ್ಞಾನಿಯಾಗಿದ್ದರು."

ಕೆನ್ ಕಲಾಶಾಲೆಯ ಕಲಾವಾತಾವರಣ

ಕೆನ್ ಕಲಾಶಾಲೆ ಇಂದು ಚಾರಿತ್ರಿಕ ದೃಷ್ಟಿಯಿಂದ ಸಮಕಾಲೀನ ಕಲೆಯಲ್ಲಿ ಒಂದು ಪ್ರಮುಖ ಕಲಾಶಾಲೆಯಾಗಿದೆ. ಪ್ರಾರಂಭದಲ್ಲಿ ಸಣ್ಣದಾಗಿ ಪ್ರಾರಂಭವಾದ ಈ ಶಾಲೆ, ಇಂದು ರಾಜ್ಯದಲ್ಲಿ ಪ್ರಮುಖ ಕಲಾಶಾಲೆಗಳಲ್ಲಿ ಒಂದಾಗಿದೆ. ಹಡಪದ್ ಅವರು ಮುಂಬೈನಲ್ಲಿ ಯಾವ ಕಲಾಶಿಕ್ಷಣ ಪಡೆದುಕೊಂಡಿದ್ದರೋ, ಆ ಶಿಕ್ಷಣ ಪದ್ಧತಿ ಈ ಶಾಲೆಯ ಪಠ್ಯಕ್ರಮದಲ್ಲಿದ್ದರೂ, ವಿದ್ಯಾರ್ಥಿಯ ವೈಯಕ್ತಿಕ ಸೃಜನಶೀಲತೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಾಗೂ ಭಾರತದ ಇನ್ನಿತರ ಸ್ಥಳಗಳಲ್ಲಿ ಬದಲಾಗುತ್ತಿರುವ ಕಾಲಕ್ಕನುಸಾರವಾಗಿ ಕಲೆಗೆ ಹೆಚ್ಚು ಪ್ರಾಧಾನ್ಯತೆಕೊಟ್ಟು ಬೆಳಕಿಗೆ ತರುವಲ್ಲಿ ಅವರು ಹೆಚ್ಚು ಶ್ರಮ ವಹಿಸುತ್ತಾರೆ. ಅವರು ಯಾವುದೇ ಪ್ರಕಾರದ ಕಲಾಕೃತಿಗಳ ನಿರ್ಮಾಣ ಮಾಡಿದರೂ ಅವರು ಸ್ವತಂತ್ರವಾದ ವಿಚಾರಧಾರೆಯಿಂದ ನಿರ್ಮಾಣ ಮಾಡುತ್ತಾರೆ.

ಇದೇ ರೀತಿಯಲ್ಲಿ ತಾವು ಕಲಾಶಿಕ್ಷಣವನ್ನು ನೀಡುತ್ತಿರುವಂತಹ ವಿದ್ಯಾರ್ಥಿಗಳಿಗೂ ಇದೇ ಪ್ರಕಾರವಾದ ಆದರ್ಶಗಳನ್ನು ಹೊಂದಿರುವಂತಹ ಕಲಾ ಮಾರ್ಗದರ್ಶನವನ್ನು ನೀಡುವರು ಹಾಗೂ ಯಾವುದೇ ಕಾರಣಕ್ಕೂ ಯಾವುದೇ ಕಲಾವಿದರು ಇನ್ನೊಬ್ಬ ಕಲಾವಿದನ ಕಲಾಕೃತಿಗಳನ್ನು ನಕಲು ಮಾಡಬಾರದು ಎಂಬುದು ಅವರ ಪ್ರಮುಖ ವಿಚಾರಧಾರೆಯಾಗಿರುತ್ತದೆ. ಇದೇ ಒಂದು ಮುಖ್ಯ ಅಂಶದಿಂದಲೇ ಕರ್ನಾಟಕದಲ್ಲಿರುವಂತಹ ಇನ್ನಿತರ ಕಲಾಶಾಲೆಗಿಂತಲೂ ಕೆನ್ ಸ್ಕೂಲ್ ಆಫ್ ಆರ್ಟ್ ಬಹು ಉನ್ನತಮಟ್ಟದ ಪ್ರೌಢಿಮೆಯನ್ನು ಅಭಿವ್ಯಕ್ತ ಪಡಿಸುತ್ತದೆ ಹಾಗೂ ಇಲ್ಲಿರುವಂತಹ ಕಲಾವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ತಾನು ಅಪೇಕ್ಷಿಸುವಂತಹ ಹಾಗೂ ಎಲ್ಲಾ

ಪ್ರಕಾರದ ಅಭಿರುಚಿಗಳಿಗೆ ಸ್ಪಂದಿಸುವಂತಹ ಕಲಾ ರಚನೆಗಳೂ, ಮಾರ್ಗದರ್ಶನ ಮತ್ತು ಸರಿಯಾದ ಶಿಕ್ಷಣವು ದೊರಕುತ್ತಿರುವುದರ ಪರಿಣಾಮವಾಗಿ ಬಹು ಪಾಲು ವಿದ್ಯಾರ್ಥಿಗಳು ರಚಿಸುತ್ತಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಎಲ್ಲಾ ಪ್ರಕಾರದ ವಿಷಯಗಳ ಮೇಲೆ ತಮ್ಮ ಕಲಾಸಾಮರ್ಥ್ಯದ ಜ್ಞಾನವನ್ನು ಉಪಯೋಗಿಸಿಕೊಂಡು ಕಲಾಕೃತಿಗಳ ರಚನೆಗೆ ತೊಡಗುತ್ತಾರೆ.

ಕೆನ್ ಕಲಾಶಾಲೆಯವರು ಹಲವಾರು ವರ್ಷಗಳವರೆಗೆ ಚಿತ್ರಕಲೆಯ ಶಾಸ್ತ್ರೀಯ ಮತ್ತು ಸಮಕಾಲೀನ ಕಲೆಯಲ್ಲಿ ತರಬೇತಿಯನ್ನು ಹೊಂದುತ್ತಾರೆ. ಸಿ ಚಂದ್ರಶೇಖರವರ ಸಮಕಾಲೀನರಾದ ಎನ್ ಮರಿಶಾಮಾಚಾರ್, ಪ. ಸ. ಕುಮಾರ, ಅ.ಲ. ನರಸಿಂಹನ್, ಜಯಕುಮಾರ್, ಜೆ.ಎಂ.ಎಸ್. ಮಣಿ, ಚಿ. ಸು. ಕೃಷ್ಣಸೆಟ್ಟಿ ಮುಂತಾದ ಕಲಾಕ್ಷೇತ್ರದ ಗೆಳೆಯರೊಂದಿಗೆ ಕೆನ್ ಕಲಾಶಾಲೆಯ ಪ್ರಾಚಾರ್ಯರಾಗಿದ್ದ ಹಡಪದ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಡಿಪ್ಲೊಮಾ ತರಗತಿಗಳನ್ನು ಪೂರೈಸುತ್ತಾರೆ. ಆ ಹಂತದಲ್ಲಿ ಇವರಿಗೆ ಹಡಪದ ಅವರು ದೊಡ್ಡ ದೊಡ್ಡ ಸಾಹಿತಿಗಳನ್ನು, ಕವಿಗಳನ್ನು, ಕಲಾವಿದರುಗಳನ್ನು ತಮ್ಮ ಶಾಲೆಗೆ ಕರೆಯಿಸಿ ವಿಶೇಷವಾದ ಉಪನ್ಯಾಸಗಳನ್ನು, ಕಲಾಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುತ್ತಿದ್ದರು. ಮತ್ತು ಅಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಸಂವಾದ ಕಾರ್ಯಕ್ರಮಗಳನ್ನು ಪ್ರತಿವಾರವೂ ಹಮ್ಮಿಕೊಳ್ಳುತ್ತಿದ್ದುದು ವೈವಿಧ್ಯಮಯವಾಗಿ ಈ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಲಾಕ್ಷೇತ್ರದ ತಿಳುವಳಿಕೆಯನ್ನು ಹೊಂದಲು ಸಾಧ್ಯವಾಯಿತು.

"ನಮಗೆ ಹಡಪದ್ ಅವರೆ ಏಕೈಕ ಗುರು. ಕೆನ್ ಕಲಾಶಾಲೆ ಒಂದು ಬಗೆಯ ಗುರುಕುಲ. ಕೇವಲ ಚಿತ್ರ ಬರೆಯೋದನ್ನು ಮಾತ್ರ ಹೇಳಿಕೊಡಲಿಲ್ಲ. ಸಾಮಾಜಿಕ ಜವಾಬ್ದಾರಿಗಳನ್ನೂ ಕಲಿಸಿಕೊಟ್ಟಿತು. ಸ್ವತಃ ಹಡಪದ್ ಅವರು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತ್ಯ, ನಾಟಕ, ಚಿತ್ರಕಲೆ, ಸಂಗೀತ ಮುಂತಾದ ವಿಚಾರಗಳನ್ನು ಬಲ್ಲವರಾಗಿದ್ದರು. ಅವುಗಳನ್ನು ಕುರಿತು ಹೇಳುತ್ತಿದ್ದರು. ಜೊತೆಗೆ ಆಯಾ ಕ್ಷೇತ್ರಗಳ ಪರಿಣಿತರನ್ನು ಕರೆಸಿ ಉಪನ್ಯಾಸ ನೀಡಿಸುತ್ತಿದ್ದರು. ಇದರಿಂದಾಗಿ ನಾವು ಬೇರೆ ರೀತಿ ಬೆಳೆಯಲು ಸಾಧ್ಯವಾಯಿತು" ಎಂದು ಸ್ವತಃ ಸಿ. ಚಂದ್ರಶೇಖರ ಅವರು ತಮ್ಮ ಕಲಾಗುರುಗಳ ಮೇಲಿನ ಪ್ರೀತಿ ಮತ್ತು ಗೌರವದ ಮಾತುಗಳನ್ನು ಇಲ್ಲಿ ಮೆಲುಕು ಹಾಕುತ್ತಾರೆ.[೧೪]

ಡಾ. ಎಂ.ಎಚ್. ಕೃಷ್ಣಯ್ಯ, ಕ.ವೆಂ. ರಾಜಗೋಪಾಲ, ಅವರಂತಹ ಅನೇಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳು; ಎಂ.ಪಿ. ಪ್ರಕಾಶ್ ಅವರಂತಹ ರಾಜಕಾರಣಿಗಳು ಸಹ ಹಡಪದ ಅವರ ಆತ್ಮೀಯ ವಲಯದವರಾಗಿದ್ದರು. ನಿರಂತರ ಈ ಸಂಸ್ಥೆಗೆ ಸಂದರ್ಶನ

---

೧೪. ಸಂದರ್ಶನ : ಕಲಾವಿದ ಸಿ. ಚಂದ್ರಶೇಖರ ಅವರೊಂದಿಗೆ, ದಿ.೨೧.೦೮.೨೦೧೪

ನೀಡುತ್ತಿದ್ದರು. ಹೀಗೆ ಅನೇಕ ಸಾಹಿತಿಗಳ, ಕಲಾವಿದರಿಂದ ಕೆನ್ ಕಲಾಶಾಲೆ ಪ್ರಾಯೋಗಿಕವಾಗಿ ಮತ್ತು ಬೌದ್ಧಿಕವಾಗಿ ಕರ್ನಾಟಕದಲ್ಲಿ ವಿಶಿಷ್ಟ ಕಲಾಸಂಸ್ಥೆಯಾಗಿ ರೂಪುಗೊಂಡಿತ್ತು. ಅಂತಹ ಕಲೆಯ ವಾತಾವರಣದಲ್ಲಿ ಚಂದ್ರಶೇಖರ ಅವರ ಕಲಾಶಿಕ್ಷಣ ಬೆಳೆಯಿತು.[೧೪]

"ನಾಡಿನ ಪ್ರತಿಭೆಗಳನ್ನು ಗುರುತಿಸಿ ಸಾಕಿ ಸಲಹುವ ಕೆಲಸ ಮಾಡಿದ ದಿವಂಗತ ಹಡಪದ್‌ರ ಗರಡಿಯಲ್ಲಿ ಬೆಳೆದ ಚಂದ್ರಶೇಖರ ನಿರಂತರ ಹೊಸದನ್ನು ಕಲಿಯುತ್ತ, ಕಲಿಸುತ್ತಾ ಬಂದ ಕಲಾವಿದರು. ಮುಂದೆ ಪ್ರಸಿದ್ಧ ಕಲಾವಿದರಾದ ಕೆ.ಕೆ. ಹೆಬ್ಬಾರರು ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿ ಬಂದ ಮೇಲೆ ನಮ್ಮ ಕಲಾವಿದರು ಹೊರಗೆ ಹೋಗಿ ಕಲಿತು ಬರಬೇಕು ಎಂಬ ಅವರ ಮಾತಿನ ಮೇರೆಗೆ ಚಂದ್ರಶೇಖರ ಅವರು ಗ್ರಾಫಿಕ್ ಕಲೆಯಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಶಾಂತಿನಿಕೇತನಕ್ಕೆ ಹೋದರು. ಹೊರಗಡೆ ಹೋಗಿ ಕಲಿತು ಬಂದರೆ ಹೊಸ ಚಿಂತನೆಗಳು ಸಾಧ್ಯ ಎಂಬ ನಂಬಿಕೆಯಿಂದಲೇ ಅವರು ಈ ವ್ಯಾಸಂಗವನ್ನು ಕೈಗೊಂಡರು."[೧೫]

ಶಾಂತಿನಿಕೇತನದಲ್ಲಿ ಉನ್ನತ ಕಲಾಶಿಕ್ಷಣ

ನೋಬಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟಾಗೂರರವರು ೧೯೧೯ರಲ್ಲಿ ಕಲಾ ಭವನವನ್ನು ಶಾಂತಿನಿಕೇತನದಲ್ಲಿ ಸ್ಥಾಪಿಸಿದರು. ದೃಶ್ಯಕಲೆಯಲ್ಲಿ ಸಂಶೋಧನೆ ಮತ್ತು ಶಿಕ್ಷಣ ಕುರಿತು ಅಧ್ಯಯನ ಮಾಡಬೇಕೆಂಬ ಪ್ರಮುಖ ಉದ್ದೇಶ ಈ ಸಂಸ್ಥೆಯದಾಗಿದೆ. ಇಂದಿಗೂ ಇದೇ ಹಾದಿಯನ್ನೇ ಮುಂದುವರೆಸಿಕೊಂಡು ಬಂದಿದೆ. ಇಂದು ವಿಶ್ವಭಾರತಿ ವಿಶ್ವವಿದ್ಯಾಲಯದ ಅಡಿಯಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಭಾರತೀಯ ಪ್ರತಿಷ್ಠಿತ ಕಲಾಸಂಸ್ಥೆಗಳಲ್ಲಿ ಇದೊಂದಾಗಿದೆ. ಸಾಮಾನ್ಯವಾಗಿ ರಾಷ್ಟ್ರೀಯ ಕಲಾಶಾಲೆಗಳೆಲ್ಲವು ಯು.ಜಿ.ಸಿ.ಯ ನಿಯಮಗಳ ಪ್ರಕಾರ ಹಂತಹಂತವಾಗಿ ಬದಲಾವಣೆಗಳು ಹೊಂದಲಾಗಿವೆ. ಪಿ.ಯು.ಸಿ. ನಂತರ ಡಿಪ್ಲೊಮಾ ಪ್ರಥಮ ದರ್ಜೆಗೆ ಪ್ರವೇಶ ಪಡೆಯಲು ಅನುಮತಿ ಇದ್ದು(ಡಿಪ್ಲೊಮಾ ೫ ವರ್ಷದ ಗ್ರಾಫಿಕ್ ಕೋರ್ಸ್ ಇದಾಗಿದೆ) ಬಿ.ಎಫ್.ಎ.ಯು ಸಹ ೫ ವರ್ಷಗಳ ಕೋರ್ಸ್ ಇದಾಗಿದೆ. ಆದರೆ ೨೦೦೯ ರವರೆಗೆ ಈ ರೀತಿ ಶಿಕ್ಷಣ ಪದ್ಧತಿ ಇದ್ದು, ೨೦೧೦ ರಿಂದ ಬದಲಾವಣೆ ಹೊಂದಿ ಸೆಮಿಸ್ಟರ್ ಪ್ರಕಾರ ಅಳವಡಿಸಿಕೊಳ್ಳಲಾಗಿದೆ. ಪರೀಕ್ಷೆಗಳು ಮೂರು ಹಾಗು ಐದು ದಿವಸಗಳವರೆಗೆ ಗ್ರಾಫಿಕ್ ಪ್ರಿಂಟ್‌ನ ಪರೀಕ್ಷೆಗಳು ನಡೆಯುತ್ತಿದ್ದವು. ಆದರೆ ಈಗ ಸಧ್ಯದಲ್ಲಿ ಗ್ರಾಫಿಕ್ ಕಲಾಕೃತಿಗಳ ಪ್ರದರ್ಶನ ಮಾತ್ರ ನೆರವೇರಿಸಿಕೊಳ್ಳಲಾಗುತ್ತದೆ.

ಸಿ. ಚಂದ್ರಶೇಖರ ಅವರು ೧೯೭೮–೮೦ರಲ್ಲಿ ಪೋಸ್ಟ್ ಡಿಪ್ಲೊಮಾದಲ್ಲಿ ತೇರ್ಗಡೆಯಾಗಿ

---

೧೪. ಸಂದರ್ಶನ : ಬಿ. ಎಚ್. ಕೃಷ್ಣಯ್ಯ ಅವರೊಂದಿಗೆ ಸಂದರ್ಶನ. ದಿ. ೧೫.೧೧.೨೦೧೫
೧೫. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್. ಎಂ. ಹಡಪದ – ಒಂದು ಅಧ್ಯಯನ. ಪು–೨೦೦

ಹೊರಬಂದರು. ಹೊರಗಡೆ ಹೋಗಿ ಕಲಿತು ಬಂದರೆ ಹೊಸ ಚಿಂತನೆಗಳು ಸಾಧ್ಯ ಎಂಬ ನಂಬಿಕೆಯಿಂದಲೇ ಅವರು ಈ ವ್ಯಾಸಂಗವನ್ನು ಕೈಗೊಂಡರು. ಹೊಸ ತಂತ್ರಗಳನ್ನು ಚಿತ್ರಕಲೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲಿ ನಡೆಯುತ್ತಿದ್ದ ದೊಡ್ಡ ದೊಡ್ಡ ಪ್ರೊಫೆಸರ್‌ಗಳ ಚಿತ್ರಕಲಾ ಚಿಂತನ ಮಂಥನಗಳು ಕಲಾವಿದ ಚಂದ್ರಶೇಖರ ಅವರನ್ನು ವಿಭಿನ್ನವಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟವು. ಸೋಮನಾಥ ಹೊರೆ ಹಾಗೂ ಸನತಕರ ಅವರ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು.

ಬೆಂಗಳೂರಿನ ಕಾರ್ಪೊರೇಶನ್ ಹೈಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕರಾಗಿ

೧೯೭೪ರಲ್ಲಿ ಬೆಂಗಳೂರಿನ ಕಾರ್ಪೊರೇಶನ್ ಹೈಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡು ಕೆಲಸ ಮಾಡುತ್ತಿದ್ದ ಚಂದ್ರಶೇಖರ ಅವರು ಶಾಂತಿನಿಕೇತನದಿಂದ ಹಿಂತಿರುಗಿ ೧೯೮೦ರಲ್ಲಿ ಪುನಃ ಶಿಕ್ಷಕ ವೃತ್ತಿಯನ್ನೇ ಮುಂದುವರೆಸಿದರು. ಆದರೆ ತುಂಬಾ ದಿನಗಳು ಈ ವೃತ್ತಿ ಮುಂದುವರೆಯಲಿಲ್ಲ. ೧೯೮೩ರಲ್ಲಿ ಶಿಕ್ಷಕ ವೃತ್ತಿಗೆ ರಾಜಿನಾಮೆ ನೀಡಿ ಗ್ರಾಫಿಕ್ಸ್, ಡ್ರಾಯಿಂಗ್ಸ್, ಪೆಯಿಂಟಿಂಗ್ಸ್ ವಿವಿಧ ಕಾಲೇಜುಗಳಲ್ಲಿ ಉಪನ್ಯಾಸ, ಕಲಾಯಾತ್ರೆ, ಕ್ಯಾಂಪ್ ಮುಂತಾಗಿ ಸಂಪೂರ್ಣವಾಗಿ ಮತ್ತು ಸಾಂಸ್ಕೃತಿಕವಾಗಿ ತಮ್ಮನ್ನು ತೊಡಗಿಸಿಕೊಂಡರು.

ಕಲಾಸಂಘಟಕರಾಗಿ ಕಲಾವಿದ ಸಿ. ಚಂದ್ರಶೇಖರ

೧೯೮೩ರಲ್ಲಿ ನಡೆಸಿದ ಕಲಾಯಾತ್ರೆ ಕರ್ನಾಟಕದಲ್ಲಿ ಒಂದು ಕಲಾಂದೋಲನ ಮಾಡಿತು. ಹದಿನಾರು ಜನ ಕಲಾವಿದರ ಜೊತೆಗೂಡಿ ಮಾಡಿದ ಈ ಯಾತ್ರೆ ಕರ್ನಾಟಕದ ಚಿತ್ರಕಲೆ ಈ ರೀತಿ ಬೆಳೆಯಲು ವ್ಯಾಪಕ ಪ್ರೋತ್ಸಾಹ ನೀಡಿದೆ ಎಂಬುದರಲ್ಲಿ ಅನುಮಾನವಿಲ್ಲ. ಈ ಯಾತ್ರೆಯಿಂದ ನೂರಾರು ಚಿತ್ರಕಲಾ ವಿದ್ಯಾಲಯಗಳು, ಸಾವಿರಾರು ಜನ ಕಲಾವಿದರು ಬೆಳೆಯಲು ಸಾಧ್ಯವಾಯಿತು. ಮೊದಲಿಗೆ ಬೆಂಗಳೂರು, ಮೈಸೂರು, ಧಾರವಾಡ, ಗುಲಬರ್ಗಾ, ದಾವಣಗೆರೆಗಳಿಗೇ ಮೀಸಲಾಗಿದ್ದ ಚಿತ್ರಕಲಾ ಶಿಕ್ಷಣ, ಪ್ರದರ್ಶನ ಮುಂದೆ ತಾಲೂಕು ಮಟ್ಟದವರೆಗೂ ಹರಡಲು ಸಾಧ್ಯವಾದದ್ದು ಈ ಚಿತ್ರಕಲಾ ಯಾತ್ರೆ. ಕಾರಣ ಈ ಇಪ್ಪತ್ತು ವರ್ಷಗಳಲ್ಲಿ ಕಲೆಯನ್ನು ಆಸ್ವಾಧಿಸುವ ವರ್ಗದಲ್ಲೇ ಒಂದು ವ್ಯಾಪಕತೆ. ಅಂಥ ವ್ಯಾಪಕತೆ ಚಿತ್ರಕಲಾ ಶಿಕ್ಷಣದ ಬಗ್ಗೆಯೂ ಗಂಭೀರವಾಗಿ ಆಲೋಚಿಸಿತು. ಆದ್ದರಿಂದ ಯಾತ್ರೆಯ ಮೂಲಕ ಚಂದ್ರಶೇಖರ ಅವರು ಉಂಟು ಮಾಡಿದ ಚಿತ್ರಕಲಾ ಚಳವಳಿ ಬಹಳ ದೊಡ್ಡದು. ಕಲಾಸ್ವಾದನೆಯ ಚಿಂತನೆ ವಿಸ್ತಾರಗೊಂಡಂತೆ ಚಿತ್ರ ಬರೆಯುವ ಪ್ರಯೋಗಶೀಲತೆ ಕೂಡಾ ವಿಸ್ತಾಗೊಂಡಿತು. ಪುನಃ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾದ ಮೇಲೂ ಕಲಾಯಾತ್ರೆಗಳಿಗೆ ಚಾಲನೆಯನ್ನು ನಿಡಿದರು. ಒಂದು ರೀತಿಯಲ್ಲಿ ಕಲಾತ್ಮಕವಾಗಿ ಕರ್ನಾಟಕವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಚಂದ್ರಶೇಖರರ ಸಂಘಟನಾ ಶಕ್ತಿ ಬಹಳ ದೊಡ್ಡದು.

ಕಲಾಬದುಕು

ಚಿತ್ರಕಲಾವಿದ ಸಿ. ಚಂದ್ರಶೇಖರ ಅವರ ಚಿತ್ರಗಳಲ್ಲಿ ವಾಸ್ತವತೆಯ ಕಾಳಜಿ ಅಪಾರವಾಗಿರುತ್ತದೆ. ಆದರೆ ಅವರು ಆ ವಾಸ್ತವವನ್ನು ಹಾಗೇ ಇರಲು ಬಿಡದೆ ಆ ವಾಸ್ತವವನ್ನೇ ಸೃಜನಗೊಳಿಸುತ್ತಾರೆ. ಅದ್ಭುತ ಕಲಾವಿದನೆನ್ನಿಸಿಕೊಳ್ಳುವ ಅಚ್ಚರಿಗಿಂತ ವಾಸ್ತವತೆಯನ್ನು ಚಿಂತನೆಗೆ ಹಚ್ಚುವುದು ದೊಡ್ಡ ಕಲಾ ಜವಾಬ್ದಾರಿ. ವಾಸ್ತವವನ್ನು ಗ್ರಹಿಸುವಲ್ಲಿ ಅವರ ಚಿತ್ರಗಳು ಯಶಸ್ವಿಯಾದಂತೆಯೇ ಅದರಿಂದ ನಿಷ್ಪನ್ನವಾಗಬಲ್ಲ ಸಾಮಾಜಿಕ ಚಿಂತನೆಯು ಸರ್ವಕಾಲಕ್ಕೂ ಅನ್ವಯವಾಗುವ ಸತ್ಯಗಳನ್ನು ಒಳಗೊಳ್ಳುತ್ತವೆ. ಒಂದು ಮನುಷ್ಯಾಕೃತಿಯ ರಚನೆಯ ಸಾಧ್ಯತೆಗಳು ಅನಂತವಾದವು. ಆದರೆ ಆ ಚಿತ್ರಗಳು ಎಷ್ಟರ ಮಟ್ಟಿಗೆ ಮನುಷ್ಯನ ಒಳಜಗತ್ತನ್ನೋ, ಹೊರ ಜಗತ್ತನ್ನೋ ಅಥವಾ ಅವೆರಡರ ಅಂತರ್ ಸಂಬಂಧಗಳನ್ನು ನಿರೂಪಿಸುತ್ತದೆಂಬುದು ಮುಖ್ಯ.

ಅಂತಾರಾಷ್ಟ್ರೀಯ ಪ್ರತಿಷ್ಠಿತ ಕಲಾಪ್ರದರ್ಶನಗಳಾದ ಕ್ಯೂಬಾದ ಹವಾನ ಬೆನಾಲೆಯ ಕಲಾಪ್ರದರ್ಶನ, ಭೂಪಾಲದ ಅಂತಾರಾಷ್ಟ್ರೀಯ ಪ್ರಥಮ ಗ್ರಾಫಿಕ್ ಬೆನಾಲೆ, ಕೇಂದ್ರ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಅನೇಕ ಬಾರಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಇವುಗಳಲ್ಲದೆ ರಾಷ್ಟ್ರೀಯ ಮತ್ತು ರಾಜ್ಯದಲ್ಲಿ ಏಕವ್ಯಕ್ತಿ ಮತ್ತು ಸಾಮೂಹಿಕ ಪ್ರದರ್ಶನಗಳನ್ನು ನೀಡಿರುವುದಲ್ಲದೆ ಕರ್ನಾಟಕ ಕಲಾಮೇಳದ ಸಂಸ್ಥಾಪಕರಾಗಿ, ಕರ್ನಾಟಕ ಕಲಾಯಾತ್ರೆಯ ಸಂಚಾಲಕರಾಗಿ ನಾಡಿನ ಉದ್ದಗಲಕ್ಕೂ ಕಲಾಪ್ರದರ್ಶನಗಳನ್ನು ನಡೆಸಿ ಜನರ ಬಳಿ ಸಮಕಾಲೀನ ಕಲೆಯ ಮಹತ್ವವನ್ನು ಕೊಂಡೊಯ್ದ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ಹೀಗೆ ಅವರ ಕಲಾಜೀವನದ ಸಾಧ್ಯತೆಗಳು ಬಹುಮುಖಿಯಾದವುಗಳಾಗಿವೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ

೧೯೯೫ರಲ್ಲಿ ಸಿ. ಚಂದ್ರಶೇಖರ ಅವರು ಕರ್ನಾಟಕ ಸರ್ಕಾರದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಳ್ಳುತ್ತಾರೆ. ೧೯೯೫ರಿಂದ ೧೯೯೮ರವರೆಗಿನ ಅವಧಿಯಲ್ಲಿ ಸಿ ಚಂದ್ರಶೇಖರ ಅವರು ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿರುವ ಕೆಲಸಗಳು ತುಂಬಾ ಗಮನಾರ್ಹವಾದವುಗಳು. ಅವುಗಳಲ್ಲಿ ವಿಶೇಷ ಘಟಕ ಯೋಜನೆಯ ಅನುದಾನದಿಂದ ಅವರು ಮಾಡಿರುವ ಕೆಲಸಗಳು ಇಂದಿಗೂ ಸ್ತುತ್ಯಾರ್ಹ. ಹಾಗೆಯೇ ಹಳೆಯ-ಹೊಸದನ್ನು ಬೆಸೆದ ಯಶಸ್ಸು ಮತ್ತು ಚಿತ್ರಕಲೆಯ ರಚನೆ, ಚಿತ್ರಯಾತ್ರೆ, ಶಿಬಿರ, ಚಿತ್ರ ಚಿಂತನೆಗೆ ಹೊಸ ಸ್ವರೂಪವನ್ನು ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಲ್ಲದೆ ಅವರ ಅವಧಿಯಲ್ಲಿ ನಾಮಕರಣಗೊಂಡ ಅಕಾಡೆಮಿಯ ಸದಸ್ಯರು ಇವರ ಜೊತೆಗೆ ಕೈಜೋಡಿಸಿ ಅಕಾಡೆಮಿಯು ಕಲಾವಿದರಿಗಾಗಿ

ವಿನೂತನ ಯೋಜನೆಗಳನ್ನು ಹಮ್ಮಿಕೊಂಡು ಹೊಸ ದಿಕ್ಕಿನತ್ತ ಸಾಗಿದ್ದನ್ನು ನಾವು ಕಾಣುತ್ತೇವೆ. ಹಿಂದಿನಿಂದ ನಡೆದು ಬಂದ ವಾರ್ಷಿಕ ಪ್ರಶಸ್ತಿ, ವಾರ್ಷಿಕ ಕಲಾಪ್ರದರ್ಶನ, ಶಿಬಿರಗಳು (ಚಿತ್ರ ಮತ್ತು ಗ್ರಾಫಿಕ್) ಶಿಷ್ಯವೇತನ, ಸಂಘ–ಸಂಸ್ಥೆಗಳಿಗೆ ಧನಸಹಾಯ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ, ಪುಸ್ತಕ ಪ್ರಕಟಣೆಗಳ ಜೊತೆಗೆ ಇನ್ನೂ ಹೊಸದೇನನ್ನಾದರೂ ಮಾಡಬೇಕೆಂಬ ಹಂಬಲ ಅವರಲ್ಲಿತ್ತು. ಹೊಸ ಕಾರ್ಯಕ್ರಮ ಚಿತ್ರಯಾತ್ರೆ ಕೈಗೊಂಡರು. ಅದರಲ್ಲಿ ಕರ್ನಾಟಕದ ಹೆಸರಾಂತ ಐವತ್ತು ಜನ ಕಲಾವಿದರ ಐವತ್ತು ಕಲಾಕೃತಿಗಳ ಪ್ರದರ್ಶನವನ್ನು ಬಹಳ ಶ್ರಮಪಟ್ಟು ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮತ್ತು ತಾಲೂಕು, ಗ್ರಾಮ ಪ್ರದೇಶಗಳಿಗೂ ಕೊಂಡೊಯ್ದು ಪ್ರದರ್ಶಿಸಿದ ದಾಖಲೆ ಸಿ. ಚಂದ್ರಶೇಖರ ಅವರಿಗೆ ಸಲ್ಲುತ್ತದೆ. ಇವುಗಳಲ್ಲದೆ ಮತ್ತೆರಡು ವಿನೂತನ ಕಾರ್ಯಕ್ರಮಗಳನ್ನು ನೀಡಿ ಇತಿಹಾಸ ನಿರ್ಮಿಸಿದ್ದಾರೆ. ಐವತ್ತು ವರ್ಷಕ್ಕಿಂತ ಮೇಲ್ಪಟ್ಟು ವೃತ್ತಿಪರ ಕಲಾವಿದರಿಗೆ ಸೀನಿಯರ್ ಫೆಲೋಶಿಪ್ ಮೊತ್ತ ಎರಡು ವರ್ಷದ ಅವಧಿಗೆ ತಿಂಗಳಿಗೆ ರೂ. ೨೦೦೦/–ಗಳಂತೆ ಕೊಡಮಾಡಿದ್ದಾರೆ. ಐವತ್ತು ವರ್ಷಕ್ಕಿಂತ ಕಡಿಮೆ ಇರುವ ಕಲಾವಿದರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ. ೧೦೦೦/– ಗಳಂತೆ ಜ್ಯೂನಿಯರ್ ಫೆಲೋಶಿಪ್ ನೀಡಿ ಕಲಾವಿದರಿಗೆ ಪ್ರೋತ್ಸಾಹಿಸಿದ್ದಾರೆ. ಹೀಗೆ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಸಾಧನೆಗೈದಿದ್ದಾರೆ. ಪುಸ್ತಕ ಪ್ರಕಟಣಾ ವಿಭಾಗದಲ್ಲಿಯೂ ಅತ್ಯುತ್ತಮ ಕೆಲಸ ಮಾಡಿ, ಕಲಾವಿದರಿಗಾಗಿ ಕಲಾಇತಿಹಾಸದ ವಿಷಯಗಳನ್ನು ಮುಟ್ಟಿಸುವುದಕ್ಕೋಸ್ಕರ "ಕಲಾಮಾಲೆ"ಯನ್ನು ಸುಲಭ ದರದಲ್ಲಿ ತಂದು ಜನಸಾಮಾನ್ಯರಿಗೆ, ಕಲಾವಿದರಿಗೆ ಮುಟ್ಟಿಸುವಲ್ಲಿ ಸಾರ್ಥಕ ಕೆಲಸ ಕೈಗೊಂಡಿದ್ದಾರೆ. ಅವರ ಅವಧಿಯಲ್ಲಿ ಪ್ರಕಟಗೊಂಡ ಪುಸ್ತಕಗಳ ಪಟ್ಟಿ ಈ ಕೆಳಗಿನಂತಿವೆ.

೦೧. ಚಿತ್ರಯಾತ್ರೆ (ಕನ್ನಡ ಮತ್ತು ಇಂಗ್ಲೀಷ್)

೦೨. ಶಿಲ್ಪಕಲೆ

೦೩. ಸರ್ರಿಯಲಿಸಂ

೦೪. ಅಬ್‌ಸ್ಟ್ರಾಕ್ಟ್ ಕಲೆ

೦೫. ಜನಪದ ಕಲೆ

೦೬. ಚಿತ್ರಕಲೆ ಮತ್ತು ಮನೋವಿಕಾಸ

೦೭. ಚಿತ್ರಕಲೆ ಮತ್ತು ಸಂವಹನ

೦೮. ಪಾಪ್ ಕಲೆ

೦೯. ಗ್ರಾಫಿಕ್ ಕಲೆ

೧೦. ಭಾರತೀಯ ಚಿತ್ರಕಲೆ

೧೧. ಸಾಂಪ್ರದಾಯಿಕ ಶಿಲ್ಪಕಲೆ

೧೨. ಪೋಸ್ಟ್ ಮಾಡರ್ನಿಸಂ

೧೩. ದೃಶ್ಯಕಲೆಗಳ ಗುಣಗ್ರಹಣ

೧೪. ಇಂಪ್ರೆಷನಿಸಂ

೧೫. ದೃಶ್ಯಕಲೆ ಎಂದರೇನು?

೧೬. ಕಲಾವಿದರ ವಿಳಾಸ ಕೈಪಿಡಿ

೧೭. ಕಲಾಸಂವೇದನೆಯ ಒಳನೋಟಗಳು

೧೮. ಎಸ್. ಎಸ್. ಕುಕ್ಕೆ

೧೯. ದೇವಲಕುಂದ ವಾದಿರಾಜ

೨೦. ಮಧುಗಿರಿ ರಾಮು

೨೧. ಅ. ನ. ಸುಬ್ಬರಾವ್

೨೨. ಪೀಟರ್ ಎ. ಲೂಯಿಸ್

೨೩. ಆರ್. ಎಂ. ಹಡಪದ್

೨೪. ಕರ್ನಾಟಕದ ಭಿತ್ತಿಚಿತ್ರಗಳ ಪರಂಪರೆ

೨೫. ಚಿತ್ರಸೂತ್ರ

೨೬. ಯುಸೂಫ್ ಅರಕ್ಕಲ್

೨೭. ಫೋಟೋ ರಿಯಲಿಸಂ

ಈ ಮೇಲಿನ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಹಲವು ಸಮಸ್ಯೆಗಳು ಎದುರಾದಾಗ ಅವುಗಳನ್ನು ಸರಳ ರೀತಿಯಲ್ಲಿ ಪರಿಹಾರ ಕೈಗೊಂಡು ಹಿಂದುಳಿದವರ ಏಳ್ಗೆಗಾಗಿ ಕೆಲಸ ಮಾಡಿರುವುದು ಅವರ ಹೆಮ್ಮೆಯ ವಿಷಯವಾಗಿದ್ದು, ಇದಕ್ಕಾಗಿ ಆಗಿನ ಅಕಾಡೆಮಿಯ ಸದಸ್ಯರ ಸಹಕಾರವನ್ನು ನೆನೆಯುತ್ತಾರೆ. ಎಲ್ಲರ ಸಹಕಾರದೊಂದಿಗೆ ಅಕಾಡೆಮಿಯ ವಿನೂತನ ಯೋಜನೆಗಳನ್ನು ಜಾರಿಗೆ ತಂದು ಚಿತ್ರಯಾತ್ರೆಯ ಮೂಲಕ ಕಲಾಕೃತಿಗಳನ್ನು ನಗರಗಳಿಂದ ಗ್ರಾಮೀಣ ಪ್ರದೇಶಕ್ಕೆ ತಲುಪಿಸಿ ಪ್ರದರ್ಶಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಸರ್ಕಾರವು ಲಲಿತಕಲಾ ಅಕಾಡೆಮಿಯಲ್ಲೇ ಇದ್ದ ಶಿಲ್ಪಕಲೆಯನ್ನು ಪ್ರತ್ಯೇಕಿಸಿ, ಶಿಲ್ಪಕಲಾ ಅಕಾಡೆಮಿಯನ್ನು ಹೊಸದಾಗಿ ಸೃಷ್ಟಿಸಿದ್ದಕ್ಕಾಗಿ ನೋವಿನಿಂದ "ಲಲಿತಕಲೆಗಳು ಒಂದಡೆ ಇದ್ದು ಕೆಲಸ ಮಾಡಬೇಕು. ಚಿತ್ರ ಮತ್ತು ಶಿಲ್ಪ ಕಲಾವಿದನ ಅವಿಭಾಜ್ಯ ಅಂಗಗಳು, ಒಂದೇ ನಾಣ್ಯದ ಎರಡು ಮುಖಗಳಂತೆ, ಅವುಗಳನ್ನು ಬೇರ್ಪಡಿಸುವುದು ಸರಿ ಕಾಣೋದು ಇಲ್ಲ. ಲಲಿತಕಲೆಯಲ್ಲಿ ಶಿಲ್ಪಕಲೆಯೂ ಇರಬೇಕು, ಇಲ್ಲವೆ ಲಲಿತಕಲೆ ಎನ್ನುವುದನ್ನು ಹೊಡೆದು ಹಾಕಿ ಹೊಸದಾಗಿ ಚಿತ್ರಕಲಾ ಅಕಾಡೆಮಿ ಎಂದು ನಾಮಕರಣ ಮಾಡಬೇಕೆಂದು" ಹೇಳಿದ್ದಾರೆ. ಹೀಗೆ ತಮ್ಮ ಅಧಿಕಾರ ಅವಧಿಯಲ್ಲಿ ಕರ್ನಾಟಕದಲ್ಲಿ ಲಲಿತಕಲೆಗಳ ಸ್ವರೂಪವನ್ನು ಇನ್ನಷ್ಟು ಬೆಳೆಸಿದ ಮೇರು ವ್ಯಕ್ತಿತ್ವ ಇವರದಾಗಿದೆ.

"ತಮ್ಮ ಬದುಕಿನ ಸಂಕಷ್ಟಗಳನ್ನೇ ಕಲೆಯನ್ನಾಗಿಸಿದ ಕಲಾವಿದ ಚಂದ್ರಶೇಖರ ಅವರು ಇಂದು ಕಲಾ ಮತ್ತು ಸಾಮಾಜಿಕ ಸ್ಥಾನಮಾನಗಳು ದೊರೆತಿದ್ದರೂ ಈ ಹಿಂದೆ ಅವರು ಸವೆಸಿ ಬಂದ ದಾರಿ ಸುಗಮವಾದುದೇನಲ್ಲ. ಅವರ ಕರ್ತೃತ್ವ ಶಕ್ತಿ ಮತ್ತು ಛಲ ಚಿತ್ರಕಲಾ ಕ್ಷೇತ್ರದಲ್ಲಿ ಅವರನ್ನು ಬೆಳೆಸಿದವು. ಅವರ ಗೌರವಗಳ ಹಿಂದಿರುವ ಶ್ರಮ ಬಹಳ ದೊಡ್ಡದು. ಅದಕ್ಕೆ ಹೋಲಿಸಿದರೆ ಅವರು ಇನ್ನೂ ದೊಡ್ಡ ಗೌರವಗಳಿಗೆ ಅರ್ಹರಾಗಬೇಕಾಗಿರುವ ಕಲಾವಿದರು. ಕರ್ನಾಟಕ ಲಲಿತಕಲಾ ಚರಿತ್ರೆಯಲ್ಲಿ ಸಿ. ಚಂದ್ರಶೇಖರಂಥ ಕಲಾವಿದರಿದ್ದಾರೆಂಬುದು ಹೆಗ್ಗಳಿಕೆಯ ವಿಚಾರವೇ ಸರಿ. ಕರ್ನಾಟಕ ಲಲಿತಕಲೆಯನ್ನು ಸಮೃದ್ಧಗೊಳಿಸುವ ಮಹಾಪ್ರತಿಭೆಗಳ ಸಾಲಿನಲ್ಲಿ ಸಿ ಚಂದ್ರಶೇಖರ ಅವರು ಕೂಡಾ ಒಬ್ಬರು. ಅಷ್ಟೇ ಅಲ್ಲ ಪ್ರಮುಖರೂ ಹೌದು. ಅವರ ಕಲಾಕೃತಿಗಳ ಬಗ್ಗೆ ಕನ್ನಡ ಕಲಾವಿಮರ್ಶೆ ಹೆಚ್ಚಾಗಿ ತೊಡಬೇಕಾಗಿದೆ. ಸಂವೇದನಾಶೀಲ ಕಲಾವಿದ ಉಳಿಯುವುದು ಅವನು ಎಷ್ಟು ಮಹತ್ವದ ಕಲಾಕೃತಿ ನಿರ್ಮಾಣ ಮಾಡಿದ್ದಾನೆಂಬುದಕ್ಕಿಂತ ಆ ಕಲಾಕೃತಿಗಳ ಮಹತ್ವದ ಚರ್ಚೆಗಳಿಂದಾಗಿ ಕಲಾಕೃತಿಗಳನ್ನು ಚರ್ಚಿಸದಿದ್ದರೆ ಅವು ಉಳಿಯುವುದಾದರೂ ಹೇಗೆ?"[3] ಎಂಬ ಗಾಢ ಪ್ರಶ್ನೆ ಇಂದಿಗೂ ಕಲಾವಲಯದಲ್ಲಿ ಪ್ರಶ್ನಾರ್ಥಕವಾಗಿಯೇ ಉಳಿದುಕೊಂಡು ಬಂದಿದೆ.

ಒಟ್ಟಾರೆ ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ, ಸವಾಲುಗಳಿಗೆ ತನ್ನನ್ನು ಸಮ್ಮುಖನಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತ ಕಲಾವಿದನ ಧೋರಣೆ ಅಥವಾ ನಿಲುವು(*point of view*)ಗಳನ್ನು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕೃತಿಯು ಸಮಕಾಲೀನ ದಾಖಲೆಯಾಗಿ ಹೆಚ್ಚಿನ ಆಸಕ್ತಿಯಿಂದ ಅಥವಾ ನಿರ್ಲಕ್ಷ್ಯ, ನಿರ್ಲಿಪ್ತತೆಯಿಂದ ಸ್ಪಂದಿಸಿದ ಕಲಾವಿದನ ಕೃತಿಗಳು ಸಾಮಾನ್ಯ ನೆಲೆಯಾಗಬಲ್ಲವು. ಆದರೆ ಸಮಚಿತ್ತತೆಯಿಂದ ಅಂದಿನ ಎಲ್ಲವುಗಳ ಒಳನೋಟದ ಸಮಷ್ಟಿ (*wholeness*) ರೂಪವಾಗಿ ಅಭಿವ್ಯಕ್ತಿಸಿದಾಗ



ಕಲಾವಿದ ಸಿ. ಚಂದ್ರಶೇಖರ ದಂಪತಿಗಳು



ಕಲಾವಿದ ಸಿ. ಚಂದ್ರಶೇಖರ ಅವರ ಕುಟುಂಬ ಪರಿವಾರ

ತೀವ್ರತೆಯ ತುಡಿತವು ನಿಷ್ಕೃಷ್ಟತೆ(*precision*)ಯನ್ನು ಪಡೆಯಬಲ್ಲದು. ಕೇವಲ ಆ ಒಂದು ಕಾಲದ ಮೇಲ್ಪದರದ ವಸ್ತು, ಉಡುಪು ಜೀವನಶೈಲಿ ಇತ್ಯಾದಿಗಳ ಚಿತ್ರಣ ಸಾಂದರ್ಭಿಕವಾಗಿ ಮಾತ್ರ ಉಳಿಯಬಲ್ಲದು, ಅಂದಿನ ಇನ್ಯಾವುದೇ ವಿಶೇಷ ಸುಳಿವುಗಳನ್ನು, ಅನುಭವಗಳನ್ನು ನೀಡಲಾರದು. ಒಬ್ಬ ಕಲಾವಿದನು ಜೀವಿಸಿರುವ ಕಾಲದ ಸಾಮಾಜಿಕ ಸ್ಥಿತಿಗತಿಗಳು ಕಲೆಯ ವಿವಿಧ ವಸ್ತು ಆಶಯ-ನಿರ್ವಹಣೆಗಳನು ನಿರ್ಧರಿಸುತ್ತವೆ. ಅಂದರೆ ಒಂದು ನಿರ್ದಿಷ್ಟ ಕಾಲದ ಶಿಲ್ಪ-ಚಿತ್ರ-ಗ್ರಾಫಿಕ್ ಇತ್ಯಾದಿಗಳು ಸಮಕಾಲೀನ ಬದುಕಿನ ಪ್ರತಿಬಿಂಬಗಳಾಗಿರುತ್ತವೆ.

೬೯ ವರ್ಷಗಳು ಪೂರೈಸಿದರೂ ತಮ್ಮ ಕಲಾಸಕ್ತಿ ಮತ್ತು ಕಲೆಯ ಕುರಿತ ಜ್ಞಾನವನ್ನು ಎಲ್ಲರಿಗೂ ಹಂಚುತ್ತಾ ತಮ್ಮದೇ ಆದ ಸ್ಥಾನವನ್ನು ಭಾರತೀಯ ಕಲಾಕ್ಷೇತ್ರದಲ್ಲಿ ಗಿಟ್ಟಿಸಿಕೊಂಡ ಕಲಾವಿದ ಸಿ ಚಂದ್ರಶೇಖರ ಅವರು ಪ್ರಸ್ತುತ ವಿಶ್ರಾಂತ ಜೀವನವನ್ನು ಕಲಾಕೃತಿಗಳನ್ನು ನಿರ್ಮಿಸುವುದರೊಂದಿಗೆ, ಅನೇಕ ಕಲಾ ಉಪನ್ಯಾಸಗಳನ್ನು ನೀಡುತ್ತ, ಭಾಗವಹಿಸುತ್ತಾ ತಮ್ಮ ಕಲಾಬದುಕನ್ನು ಸಾಗಿಸುತ್ತಿದ್ದಾರೆ.

ಅಧ್ಯಾಯ : ಮೂರು

ಸಿ. ಚಂದ್ರಶೇಖರ ಅವರ ರೇಖಾ ಮತ್ತು ವರ್ಣಚಿತ್ರಗಳು

ಅಧ್ಯಾಯ : ಮೂರು

ಸಿ ಚಂದ್ರಶೇಖರ ಅವರ ರೇಖಾ ಮತ್ತು ವರ್ಣಚಿತ್ರಗಳು

"The world Drawing covers in general all those representation in which an image is obtained by making, whither simply or elaborately, upon a surface which constitutes the back ground. In this sense drawing is the basics of every pictorial experiance particularly that of painitng."

ರೇಖೆ ಮಾನವನ ಇತಿಹಾಸದಷ್ಟೇ ಪುರಾತನವಾದುದು. ಗೆರೆ ರೇಖೆಯಕ್ಕು, ಎಂದಿದ್ದಾನೆ. ಮಂಗರಾಜ ತನ್ನ ನಿಘಂಟಿನಲ್ಲಿ ಸಂಸ್ಕೃತಿ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು. ಇಂಗ್ಲೀಷಿನಲ್ಲಿ ಡ್ರಾಯಿಂಗ್. ಆಕ್ಸ್‌ಫರ್ಡ್ ಯುನಿವರ್ಸಲ್ ಡಿಕ್ಷನರಿಯ ಪ್ರಕಾರ ರೇಖಾಚಿತ್ರಗಳೆಂದರೆ, "ಲೇಖನಿ ಪೆನ್ಸಿಲ್ ಅಥವಾ ಕ್ರೇಯಾನ್‌ನಿಂದ ರೂಪಿಸಿರುವುದು ಎಂದು ಹೇಳುತ್ತಾ ಮುಂದೆ "ವರ್ಣಚಿತ್ರಣ ದಿಂದ ಭಿನ್ನವಾದ ರೀತಿಯಲ್ಲಿ ರೂಪ[1] ಎನ್ನುತ್ತದೆ.

ಸಂಪ್ರದಾಯ ಕಲಾವಿದರಿಗೆ ರೇಖಾಚಿತ್ರ ಕರಗತವಾಗಬೇಕಾದುದು ಅತ್ಯವಶ್ಯಕ. ಆ ನಂತರವಷ್ಟೇ ಬಣ್ಣ ತುಂಬುವ ಕೆಲಸ.[2] ಯಾವುದೇ ಅಕಾರಗಳನ್ನು ಮೊದಲಿಗೆ ರಚಿಸುವುದು ರೇಖಾ ಚಿತ್ರದಲ್ಲಿಯೇ ಆ ಕಾರಣ ರೇಖಾ ಚಿತ್ರವೇ ದೃಶಾನುಭವಕ್ಕೆ ಅದರಲ್ಲೂ ಚಿತ್ರಕಲೆಗೆ ತಳಹದಿ" ಎಂದು ವಿಶ್ವಕೋಶ ಹೇಳುತ್ತದೆ. *(Drawing is the basis of avery pictroial exprience, particularly that of painiting vinigil Grapttanalli Exyclopedia of*

೦೧. ಜಿ. ಬಿ. ಕೆ. ಶಾಸ್ತ್ರಿ (ಸಂ.) : ರೇಖಾಚಿತ್ರ, ಪು-೧
೦೨. ಚಿ. ಸು. ಕೃಷ್ಣಶೆಟ್ಟಿ : ಚಿತ್ರಚಿತ್ರ, ಪು-೯೯

world and porevi) ಅದಕ್ಕಿಂತ ೧೭೭೨ರಲ್ಲಿ ಐಸ್ಟರೊ ಎಂಬ ಕಲಾವಿದ 'ರೇಕಾಚಿತ್ರವೇ ವರ್ಣಚಿತ್ರದ ಜನಕ'(*Drawing the father of painting*) ಎಂದು ಉದ್ಘೋಷಿಸಿದ. ಭಾರತದಲ್ಲಿಯೂ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವಿದೆ. ಶಿಲ್ಪ ಶಾಸ್ತ್ರಗ್ರಂಥಗಳಲ್ಲಿ "ರೇಖಾ ಪ್ರಶಂಸಂತಿ ಆಚಾರ್ಯಃ" ಚಿತ್ರಕರ್ಮದಲ್ಲಿ ರೇಖಾಪಾತ್ರವೇ ಮೊದಲ ಹೆಜ್ಜೆ ಎಂದು ಪ್ರೊ ಎಸ್. ಕೆ. ರಾಮಚಂದ್ರರಾಯರು ಹೇಳುತ್ತಾರೆ. ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ ಭಿತ್ತಿಯ ಸಿದ್ಧತೆಯ ನಂತರ ಮೊದಲಿಗೆ ಹಾಕುವ ಕರಡು ನಕ್ಷೆಯನ್ನು 'ಆಕಾರ ಮಾತೃಕಾ ರೇಕಾ' ಎಂದೂ ಬಣ್ಣವನ್ನು ಕರೆದಿದೆ. ಅಂತಿಮ ರೇಖೆಯನ್ನು ಅರಗಿನ ಬಣ್ಣದಲ್ಲಿ ಹಾಕುತ್ತಿದ್ದು ಅದಕ್ಕೆ ಕಾವ್ಯಗಳ್ಲಲಿ "ಲಾಕ್ಷರಸ ರೇಖಾ ಶುದ್ಧಿ" ಎಂದು ಕರೆದಿದೆ.[೨] ವಿಷ್ಣು ಧರ್ಮೋತ್ತರ ಪುರಾಣದಲ್ಲಿ "ರೇಖಮ್ ಪ್ರಶಂಸತಾಚಾರ್ಯ" ಎಂದು ರೇಖೆಗಳು ನಿಪುಣ ಕಲಾವಿದನೊಬ್ಬನ ಅತ್ಯುನ್ನತ ಸಾಧನೆ ಎನ್ನುವ ಉಲ್ಲೇಖವಿದೆ.

"ಆಕ್ಸ್‌ಫರ್ಡ್ ಯುನಿವರ್ಸಲ್ ಡಿಕ್ಸನರಿ"ಯ ಪ್ರಕಾರ ರೇಖಾ ಚಿತ್ರಗಳೆಂದರೆ, 'ಲೇಖನಿ': ಪೆನ್ಸಿಲ್ ಅಥವಾ ಕ್ರೇಯಾನನಿಂದ ರೂಪಿಸುವುದು. "ಮಾರ್ಕಶೆಗಾಲ್ ದೃಷ್ಟಿಯಲ್ಲಿ ರೇಖಾಚಿತ್ರವು ಕಪ್ಪು ಮತ್ತು ಬಿಳಿ ವರ್ಣದ ತುಲನೆಯಿಂದ ಹುಟ್ಟಿ ಬಂದ ರಚನೆ" ಎಂದು ಇಂಗ್ರೆಸ್ ಹೇಳುತ್ತಾನೆ – ರೇಖೆಯೇ ರೇಖಾಚಿತ್ರ. ಅದೇ ನಮ್ಮ ಕಲೆಯ ಸರ್ವಸ್ವ".

"ಫ್ರೆಂಚ್ ಕಲಾವಿದ ಡೇಗಾನ್ – ರೇಖಾಚಿತ್ರ ಆಕಾರಗಳಿಗೆ ಸಂಬಂಧಿಸಿದ ಅಂಶ ಮಾತ್ರವೇ ಅಲ್ಲ. ಆ ಆಕಾರಗಳನ್ನು ನೋಡುವ ಹಾದಿಯೇ ಅದು" ಎಂದರೆ ಭಾರತದ ಶಿಲ್ಪಶಾಸ್ತ್ರದಲ್ಲಿ–"ರೇಖಾಂ ಪ್ರಶಂಸಂತಿ ಆಚಾರ್ಯ" ಎಂದು ಬಣ್ಣಿಸಿದ್ದಾರೆ.

ಚಿತ್ರಕರ್ಮದಲ್ಲಿ ರೇಖಾ ಪಾತ್ರವೇ ಮೊದಲ ಹೆಜ್ಜೆ ಎಂದು ಹೇಳುವುದಾಗಿ ಎಸ್. ಕೆ. ರಾಮಚಂದ್ರರಾಯರು ತಿಳಿಸುತ್ತಾರೆ. "ವಿಷ್ಣುಧರ್ಮೋತ್ತರ ಪುರಾಣ"ದಲ್ಲಿ–"ರೇಖಾಂ ಪ್ರಶಂಸತಾಚಾರ್ಯ" ಎಂದು, ರೇಖೆಗಳು ನಿಪುಣ ಕಲಾವಿದನೊಬ್ಬನ ಅತ್ಯುನ್ನತ ಸಾಧನೆ ಎನ್ನುವ ಉಲ್ಲೇಖವಿದೆ.

ಅತೀ ಕಡಿಮೆ ರೇಖೆಗಳಿಂದ ರಚಿಸಿದ ಉತ್ತಮ ಚಿತ್ರದ ಬಗ್ಗೆ ವಿದ್ 'ಸಾಲಭಂಜಿಕಾ'ದಲ್ಲಿ ವಿದೂಷಿಕ ಹೇಳಿದ್ದಾನೆ. ಲಿಪಿ ಲಘು ಲಿಖಿತೇಯಮ್ ದೃಶ್ಯತೇ ಪೂರ್ಣ ಮೂರ್ತಿಃ". ಕೆಲವೇ ರೇಖೆಗಳಿದ್ದರೂ ಪೂರ್ಣ ಮೂರ್ತಿಯ ಪೂರ್ಣ ಪರಿಣಾಮವನ್ನು ನೀಡುತ್ತದೆ.

ಇಂಗ್ಲೆಂಡಿನ ಜೋನಾಥನ್ ರಿಚರ್ಡ್ಸನ್ ಎಂಬಾತ – ರೇಖಾಚಿತ್ರದ ಮಹತ್ವದ ಕುರಿತು

---

೨೩. ಕೆ. ಜ್ಞಾನೇಶ್ವರ : ಶ್ರೀ [illegible] ರೇಖಾಚಿತ್ರಗಳು. ಪು–೧೯

ತನ್ನ ಥಿಯರಿಯನ್ನು ಮಂಡಿಸಿದ. "ಕಲಾವಿದ ತನ್ನ ಆಲೋಚನೆಗಳನ್ನು ಮನಸ್ಸಿನಲ್ಲಿ ಮೂಡಿದ ಬಿಂಬಗಳನ್ನು ಪೂರ್ಣ ಪ್ರಮಾಣದ ಮೂಲ ಕಲ್ಪನೆಗಳನ್ನು ಕೈಗಳ ಮೂಲಕ ಮೊಟ್ಟ ಮೊದಲಿಗೆ ರೂಪಿಸುವುದು. ರೇಖಾಚಿತ್ರದ ಮೂಲಕವೇ ಆಗಿದ್ದು, ಅದೇ ಚಿತ್ರಕಲೆಯ ಬಂಡವಾಳವೂ ಆಗಿರುತ್ತದೆ. ಹೀಗೆ ರೇಖೆ, ರೇಖಾಚಿತ್ರಗಳ ಬಗ್ಗೆ ಅನೇಕ ಉಲ್ಲೇಖಗಳು ದೊರಕುತ್ತವೆ.

ರೇಖಾಚಿತ್ರ ಎಂದಾಗ ರೇಖೆಗಳಿಂದ ಮೂಡಿಸಿದ ಚಿತ್ರ ಯಾವುದೇ ವಸ್ತುವಿನ ಅಥವಾ ಆಧಾರ ಭೂಮಿಕೆಯ ಮೈಮೇಲೆ ಅದು ಹಿನ್ನೆಲೆಯಾಗಿ ಮೇಲಾಡಿಸುವ ಗುರುತುಗಳು ಹಾಗೆ ಮೂಡಿದ ಗುರುತು. ಸರಳವಾಗಿರಬಹುದು. ವಿವರ ಪೂರ್ಣವಾಗಿರಬಹುದು. ಆದರೆ ಎರಡು ಆಯಾಮ ಮಾತ್ರ ಉಳ್ಳದಾಗಿರಬೇಕು"[೪] ಎಂಬ ಲಕ್ಷಣವನ್ನು ಹೊಂದಿದೆ. 'ರೇಖಾ' ಎಂಬ ಪದ ನಮ್ಮ ದೈನಂದಿನ ಬದುಕಿನಲ್ಲಿ ಬೇರೆ ಬೇರೆ ಸಂದರ್ಭದಲ್ಲಿಯೂ ಕಂಡುಬರುತ್ತದೆ. ಲಕ್ಷ್ಮಣರೇಖೆ, ಅದೃಷ್ಟರೇಖೆ, ಬಡತನದ ರೇಖೆ, ಹಸ್ತರೇಖೆ, ಗರುಡ ರೇಖೆ ಇತ್ಯಾದಿಯಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ.[೫] ರೇಖೆ ಎಂದರೆ ಬಿಂದುಗಳ ಚಲನೆಯಿಂದ ಉಂಟಾಗುವ ಪಥ. ಬಿಂದುವೊಂದು ಚಲಿಸಿದಂತೆ ಅದರ ಪಾತ್ರವೂ ರೇಖೆಯಾಗುತ್ತದೆ. ರೇಖೆಗೆ ಉದ್ದವಿದೆ. ಆದರೆ ಅಗಲ ಇಲ್ಲ. ಎರಡು ಬಿಂದುಗಳು ರೇಖೆಯ ಪರಿಮಿತಿಯಾಗಿದ್ದು, ಅದಕ್ಕೊಂದು ಸ್ಥಾನವಿದೆ. ಮತ್ತು ದಿಶೆಯಿದೆ.[೬] ರೇಖೆಗಳ ಕುರಿತು ಈ ಅಂಶಗಳು ಮಹತ್ವದ್ದಾಗಿದೆ.

ರೇಖಾಚಿತ್ರವು ಕಲೆಯ ಒಂದು ಪ್ರಕಾರ, ಅಲ್ಲದೆ ಅದು ಸಹಾಯಕ ಕಲೆ, ಕೆಲವರಿಗೆ ಅದು ಮೂಲಭುತವಾದ ಕಲೆಯು ಆಗಿದೆ. ರೇಖಾಚಿತ್ರ ಪ್ರತ್ಯಕವಾದ ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರವಾಗಿದೆ. ಚಿತ್ರಕ್ಕೆ ರೇಖೆಗಳು ಜೀವಂತಿಕೆಯನ್ನು ನೀಡುತ್ತವೆ. ಹಿಂದಿನ ನಮ್ಮ ಸಾಂಪ್ರದಾಯಿಕ ವರ್ಣಚಿತ್ರಗಳಲ್ಲಿ ರೇಖೇಗಳು ವರ್ಣಚಿತ್ರದ ಪಾರ್ಶ್ವಕಲೆಯೆನಿಸಿಕೊಂಡಿವೆ.[೭] ರೇಖೆ ದಕ್ಕದೆ ಕಲಾವಿದನಾಗಲು ಸಾಧ್ಯವಿಲ್ಲ ಎಂಬುದು ಜನಪ್ರಿಯ ನಂಬುಗೆ. ಬಿಂದುಗಳನ್ನು ಕೂಡಿಸುತ್ತಾ ಹೋದರೆ ರೇಖೆಯಾಗುತ್ತದೆ. ರೇಖೆಗಳು ಸೇರಿದಾಗ ರೂಪ ಆಕಾರ ಉತ್ಪತ್ತಿಯಾಗುತ್ತದೆ. ರೇಖಾಚಿತ್ರವೊಂದನ್ನು ಬಿಡಿಸುವಾಗ ಕಲಾವಿದನ ಸಂಬಂಧ ಬರೀ ಹಾಳೆಯೊಂದಿಗಷ್ಟೇ ಇರುವುದಿಲ್ಲ. ಅದು ಸುತ್ತಲಿನ ಜಗತ್ತನ್ನು ಸೂಕ್ಷ್ಮವಾಗಿ ನೋಡುವ ತರಬೇತಿ ಇದ್ದಂತೆ[೮] ಎಂಬ ಇತ್ಯಾದಿ ವಿವರಗಳು ರೇಖಾಚಿತ್ರಗಳ ಕುರಿತು ಕಂಡುಬರುತ್ತವೆ.

---

೦೪. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾಚಿತ್ರ, ಪು-೧೪

೦೫. ಅದೇ., ಪು-೪

೦೬. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೫೧

೦೭. ಬಿ. ವಿ. ಕೆ. ಶಾಸ್ತ್ರಿ (ಸಂ.) : ರೇಖಾಚಿತ್ರ, ಪು-೨

೦೮. ರವಿಕುಮಾರ ಕಾಶಿ : ರೇಖೆಯೊಂದಿಗೆ ವಿಹಾರ, ಮಯೂರ ಮಾಸಪತ್ರಿಕೆ, ಪು-೫೩, ೭. ಫೆಬ್ರವರಿ ೨೦೧೦

ಕಲಾವಿದನೊಬ್ಬ ತನ್ನ ಅಂತರಂಗದ ತುಮುಲಗಳ ಅಭಿವ್ಯಕ್ತಿಗೆ ರೇಖೆಗಳನ್ನು ದುಡಿಸಿಕೊಂಡಾಗ ಮೂರ್ತಗೊಳ್ಳುವ ರೂಪಗಳೇ ರೇಖಾಚಿತ್ರಗಳು. ಬಣ್ಣಗಳ ಅಡಂಬರ ವಿಲ್ಲದೆ ಯಾವ ಕಟ್ಟಳೆಗೂ ಒಳಪಡದೆ, ಸಹಜ ಸ್ಫೂರ್ತಿಯಿಂದ ಸೃಷ್ಟಿಗೊಳ್ಳುವ ಈ ರೇಖಾ ಚಿತ್ರಗಳು ಕಲಾವಿದನ ಒಳ ಜಗತ್ತಿನ ನೈಜ ನಿರೂಪಣೆಗಳಾಗಿರುತ್ತವೆ.[೨೯] ಕಡಿಮೆ ವಿವರಗಳಲ್ಲಿ ಅಧಿಕ ಭಾವವನ್ನು ಹೊರಸೂಸುವುದು ರೇಖೆಗೆ ಮಾತ್ರ ಸಾಧ್ಯ. ಒಂದು ಆಕೃತಿಯನ್ನು ಸಂಪೂರ್ಣವಾಗಿ ರೇಖಿಸಬಹುದು. ಇಲ್ಲವೆ ಒಡೆದು ಅತ್ಯಲ್ಪ ಸಂಖ್ಯೆಯ ರೇಖೆಗಳಲ್ಲಿ ಚಿತ್ರಿಸಬಹುದು. ಯಾವ ಅರ್ಥವನ್ನು ಭಾವವನ್ನು ಬೇರೆ ಬೇರೆ ಭಂಗಿಗಳಲ್ಲಿ ಪ್ರಧಾನವಾಗಿ ಎಷ್ಟು ಬೇಕೋ ಅಷ್ಟನ್ನೂ ಮಾತ್ರ ಚಿತ್ರಿಸಬಹುದು. ಇಂತಹ ರೇಖಾಚಿತ್ರವನ್ನು ನೋಡಿದಾಗ ಆಕೃತಿಯೊಂದು ಸ್ಫೋಟವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ ಅದರದೇ ಆದ ಒಂದು ಗುಣ. ಅಂತಹ ರೇಖೆಯಲ್ಲಿ ಮುಖ್ಯವಾಗಿ ಅಭಿವ್ಯಕ್ತಿಸುವುದು ಕಡಿಮೆ. ಗೆರೆಗಳಲ್ಲಿ ವಸ್ತುವಿನ ಬಹುಮುಖ್ಯವಾದ ಗುಣಲಕ್ಷಣಗಳನ್ನು ಮಾತ್ರ[೩೦] ಕೆಲವರು ರೇಖೆಗಳಲ್ಲೇ ಸಂಪೂರ್ಣ ರಾಮಾಯಣವನ್ನು ಹೇಳುವ ತಾಳ್ಮೆಯಾದರೆ ಮತ್ತೆ ಕೆಲವರ ಕಲ್ಲಿಪ್ತವಾಗಿ ಕೆಲವೇ ವಿವರಗಳಲ್ಲಿ ವಿಶ್ವವನ್ನು ಕಾಣಿಸುವ ಹುನ್ನಾರ. ಸಿ.ಚಂದ್ರಶೇಖರವರ ರೇಖೆಗಳಲ್ಲಿ ಕಾಣಬಹುದು.

ರೇಖೆಗಳಲ್ಲಿ ಕಲಾವಿದ ತಾನು ನೋಡಿದ ವಸ್ತುವಿನ ಬಗೆಗಿನ ಅವನ ಪ್ರತಿಕ್ರಿಯೆ ಮತ್ತು ಕುಂಚ. ಪೆನ್ಸಿಲು ಅಥವಾ ಪೆನ್ನುಗಳೊಂದಿಗೆ ಬೆಸೆದು ಕೂಡ ಅವನ ಕುಶಲತೆ ಅವುಗಳನ್ನು ದುಡಿಸಿಕೊಂಡ ರೀತಿ ಇವೆಲ್ಲಾ ಮುಖ್ಯವಾಗುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ನಿಸರ್ಗದಲ್ಲಿ ರೇಖೆ ಎಂಬ ಪದಾರ್ಥವೇ ಇಲ್ಲ ಅದು ಒಂದು ಕಲ್ಪನೆ. ವಸ್ತು ಒಂದು ಮುಗಿಯುತ್ತದೆ. ಇನ್ನೊಂದು ಪ್ರಾರಂಭವಾಗುತ್ತದೆ. ಒಂದೊಂದಕ್ಕೂ ಎಲೆಯಾಗಿರುವ ರೇಖೆಯೂ ಇಲ್ಲ. ಆದರೆ ಚಿತ್ರಕಾರನು ಈ ವಿಷಯವನ್ನು ರೇಖೆಯ ಮೂಲಕ ತಿಳಿಯಪಡಿಸುತ್ತಾನೆ. ಒಂದೊಂದೇ ವಸ್ತುವಿಗೆ ಮೊದಲು ಕೊನೆ ಎಂಬ ಭ್ರಮೆಯುಂಟು ಮಾಡುತ್ತಾನೆ. ಅವುಗಳ ವಿವರಗಳನ್ನು ವಿವಿಧ ಅಂಶಗಳನ್ನು ಸಾಂಕೇತಿಕವಾಗಿಯಾದರೂ ಚಿತ್ರಿಸಿ ನಿಜ ಸ್ಥಿತಿಯ ಕಲ್ಪನೆಯುಂಟು ಮಾಡಲು ಯತ್ನಿಸುತ್ತಾನೆ[೩೧] ಎಂಬ ಅಂಶಗಳು ಕಂಡುಬರುತ್ತವೆ. ರೇಖೆಯಲ್ಲಿ ಎರಡು ಮುಖ್ಯವಾದ ಪ್ರಕಾರಗಳಿವೆ. ಒಂದು ಸರಳ ರೇಖೆ. ಇನ್ನೊಂದು ವಕ್ರರೇಖೆ, ಸರಳ ರೇಖೆ ಎಂದರೆ ಬಿಂದು ಚಲಿಸುವಾಗ ತನ್ನ ದಿಕ್ಕನ್ನು ಬದಲಾಯಿಸದೇ ನೇರವಾಗಿ ಚಲಿಸುವ ಪಥಕ್ಕೆ ಸರಳರೇಖೆ ಎನ್ನುವರು. ಇದು ದಿಗ್ರಂತದ ಗಾಂಭೀರ್ಯ ಬೆಳವಣಿಗೆಯನ್ನು ವಿಶಾಲತೆಯನ್ನು ಪ್ರತಿನಿಧಿಸುತ್ತದೆ. ಸಿ.ಚಂದ್ರಶೇಖರವರ ವರ್ಣಚಿತ್ರಗಳಲ್ಲಿ ಈ ತೆರನಾದ ಸರಳ ರೇಖೆಯನ್ನು ಕಾಣಬಹುದು.

---

೨೯. ಡಾ. ಶಿವಾನಂದ ಎಚ್. ಬಂಟನೂರು : ದೃಷ್ಟಿ-ಸೃಷ್ಟಿ, ಪು-೬೯
೩೦. ಡಾ. ಎಸ್. ಸಿ. ಪಾಟೀಲ : ವರ್ಣಸಂಪದ, ಪು-೧೭
೩೧. ಅದೇ.

ವಕ್ರರೇಖೆ ಎಂದರೆ ಚಲಿಸುವಾಗ ಬಿಂದು ತನ್ನ ದಿಕ್ಕನ್ನು ಬದಲಾಯಿಸುತ್ತ ಹೋಗುವಾಗ ಉಂಟಾಗುವ ಪಥಕ್ಕೆ ವಕ್ರರೇಖೆ ಎನ್ನುವರು. ಇದು ದಿಗಂತದ ಗಾಂಭೀರ್ಯ ಬೆಳವಣಿಗೆಯನ್ನು, ವಿಶಾಲತೆಯನ್ನು ಪ್ರತಿನಿಧಿಸುತ್ತದೆ.[೧೨] ಇದರಲ್ಲಿ ಚಲನೆ, ಆಕರ್ಷಣೆ, ಬೆಡಗು ಬಿನ್ನಾಣಗಳಿದ್ದು, ಸೌಂದರ್ಯ ಪ್ರತೀಕವಾಗಿ ಈ ರೇಖೆಗಳು ಚಿತ್ರಕಲೆಯಲ್ಲಿ ಬಳಕೆಯಾಗುತ್ತವೆ. ಪಿ.ಚಂದ್ರಶೇಖರ ರವರ ಪೂರ್ಣಪ್ರಮಾಣದ ರೇಖಾಚಿತ್ರಗಳಲ್ಲಿ ಈ ಅಂಶಗಳನ್ನು ಕಾಣಬಹುದು. ಈ ರೀತಿಯಾಗಿ ಒಟ್ಟು ರೇಖಾಚಿತ್ರದ ಅರ್ಥವನ್ನು ವಿವರವಾಗಿ ಕಟ್ಟಿಕೊಡಲಾಗಿದೆ.

ಚಿತ್ರಕಲೆಯ ಇತಿಹಾಸ ಆರಂಭವಾಗುವುದೇ ರೇಖಾಚಿತ್ರಗಳಿಂದ. ದಕ್ಷಿಣ ಫ್ರಾನ್ಸ್ ಹಾಗೂ ಸ್ಪೇನ್‌ನಲ್ಲಿ ಹಬ್ಬಿರುವ ಕಾಂಟಬ್ರಿಯನ್ ಪರ್ವತ ಶ್ರೇಣಿಗಳಲ್ಲಿ ಪೂರ್ವ ಕ್ಯಾಲಿಯೋಲಿಥಿಕ್ ಕಾಲದ ಆದಿ ಬೇಟೆಗಾರರು ಗುಹೆಗಳ ಭಿತ್ತಿಯಲ್ಲಿ ರಚಿಸಿದ ಚಿತ್ರಗಳಲ್ಲಿ ರೇಖಾಚಿತ್ರದ ಅಂಶಗಳಿದ್ದು ಇವುಗಳೇ ಪ್ರಪಂಚದ ಆದಿ ರೇಖಾಚಿತ್ರಗಳೆಂದು ಗುರುತಿಸಿದ್ದಾರೆ.[೧೩] ಕರ್ನಾಟಕದಲ್ಲಿಯೂ ಕೂಡ ಅನೇಕ ಕಡೆ ಗುಹಾ ಮಾನವನ ರೇಖಾಚಿತ್ರಗಳು ಕಂಡುಬರುತ್ತಿದ್ದು ಮಾನವನ ಚಿತ್ರಕಲಾ ರೇಖಾ ಚಿತ್ರಗಳಿಂದಲೇ ಎನ್ನಬಹುದು. ಪ್ರಪಂಚದ ಎಲ್ಲ ಕಡೆಯ ಚಿತ್ರಕಲೆಯೂ ಮೂಲತಃ ರೇಖೆಯಿಂದ ಕಲ್ಪಿತವಾದುದು. ಮುಂದೆ ಪಾಶ್ಚಾತ್ಯ ದೇಶದಲ್ಲಿ ಪೂರ್ಣಪ್ರಧಾನವಾಗಿ ವರ್ಣಚಿತ್ರ ರಚನೆ ಬೆಳೆದು ಹರಡಿದರೂ ಕೂಡ ರೇಖೆಗೂ ಒಂದು ಸ್ಥಾನವಿದ್ದೇ ಇದ್ದಿತು. ಆದರೆ ಪೌರ್ವಾತ್ಯ ಚಿತ್ರ ಸಾಂಪ್ರದಾಯದಲ್ಲಿ ರೇಖೆ ಅತ್ಯಾವಶ್ಯಕವಾದ ಮಾಧ್ಯಮ. ಚಿತ್ರವೂ ಮೂಲತಃ ರೂಪುಗೊಳ್ಳುವುದೇ ರೇಖೆಯಿಂದ. ಅದರ ಒಳ ವಿವರಗಳು ಎದುರು ಕಾಣುವುದು ರೇಖೆಗಳ ಸಾಂಪ್ರದಾಯಿಕ ಕಲೆಯಲ್ಲಿ ರಚಿತವಾದುದು. ಕಿರುಚಿತ್ರವಾಗಲೀ, ಬೃಹತ್ ಭಿತ್ತ ಚಿತ್ರವಾಗಲಿ ಅದು ರೇಖೆಯ ಮೂಲಕವೇ. ಮುಖ್ಯವಾಗಿ ಭಾರತೀಯ ಸಾಂಪ್ರದಾಯಿಕ ಕಲೆಗಳು ರೇಖಾ ಪ್ರಧಾನವಾದವುಗಳಾಗಿವೆ.

ಭಾರತಕ್ಕೆ ಬ್ರಿಟಿಷರ ಆಗಮನದಿಂದ ಚಿತ್ರಕಲೆಯಲ್ಲಿ ಪಾಶ್ಚಾತ್ಯೀಕರಣ ಮೂಡಿತು. ಭಾರತೀಯ ಕಲಾವಿದ ಪಾಶ್ಚಾತ್ಯಕಲೆಗೆ ಪ್ರಭಾವಿತನಾದ ನಂತರ ಕಲ್ಕತ್ತಾ ಕಲಾಶಾಲೆಯ ಪ್ರಿನ್ಸಿಪಾಲರಾದ ಇ.ಬಿ.ಹ್ಯಾವೆಲ್ ಮತ್ತು ಅಬನೀಂದ್ರನಾಥ ಠಾಗೋರ್ ಅವರು ನಮ್ಮ ದೇಶಿಯ ಕಲಾಸತ್ವವನ್ನು ಪುನರುಜ್ಜೀವನಗೊಳಿಸಿದರು.[೧೪] ನಂತರ ಭಾರತೀಯ ಕಲಾ ಅಂತಃಸತ್ವವನ್ನು ಎತ್ತಿ ಹಿಡಿಯುವ ಧ್ಯೇಯ ಉದ್ದೇಶ ಈ ಕಲಾಶಾಲೆಯದು. ಇಲ್ಲಿ ಅನೇಕ ಪ್ರಸಿದ್ಧ ಕಲಾವಿದರು ಭಾರತೀಯ ಕಲಾ ಶ್ರೀಮಂತಿಕೆಯನ್ನು ಎತ್ತಿ ಹಿಡಿಯಲು ಪಣತೊಟ್ಟಂತೆ ಅನೇಕ ಪ್ರಯೋಗಗಳನ್ನು ಮಾಡಿ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿದರು.

೧೨. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೧೭

೧೩. ಅದೇ.

೧೪. ಡಾ. ಎಸ್. ಸಿ. ಪಾಟೀಲ, [illegible] (ಸಂ.) : [illegible], ಪು-೨೩೪

ಇ. ಬಿ. ಹ್ಯಾವೆಲ್ಲರಿಂದ ನಮ್ಮತನದ ಅರಿವನ್ನು ಅರಿತ ಬಂಗಾಳದ ಕಲಾವಿದರು ಅವನೀಂದ್ರನಾಥರ ನಾಯಕತ್ವದಲ್ಲಿ ಅಲ್ಲಿನ ಕಲೆಯ ಪುನರುಜ್ಜೀವನದಲ್ಲಿ ಭಾಗವಹಿಸಿದ ಕಲಾಕೃತಿಗಳು ಧಾರ್ಮಿಕ, ಪೌರಾಣಿಕ ಅಂಶಗಳನ್ನು ರೋಮ್ಯಾಂಟಿಕ್ ಆದ ರೇಖೆಗಳನ್ನು ಒಳಗೊಂಡಿವೆ. ಸಾಂದರ್ಭಿಕ ಚಿತ್ರಗಳಿಗೂ ಹತ್ತಿರವಾದ ಸೃಷ್ಟಿಗಳಿವು. ಗಗನೇಂದ್ರನಾಥ ಠಾಕೂರ್ ಮತ್ತು ವಿನೋದ ಬಿಹಾರಿ ಮುಖರ್ಜಿ, ರವೀಂದ್ರನಾಥ ಠಾಗೋರ್, ಅವರ ರೇಖೆಗಳು ಅಂತರಾಷ್ಟ್ರೀಯ ಮೌಲ್ಯಗಳನ್ನು ಹೊಂದಿತ್ತು. ಎಕ್ಸ್‌ಪ್ರೆಸ್‌ನಿಸಂಗೆ ಹತ್ತಿರವಾದ ಅಭಿವ್ಯಕ್ತಿಯಲ್ಲಿ ವಿಕೃತಗೊಂಡ ಆಕಾರಗಳ ರೇಖೆಗಳು ಗಮನಾರ್ಹ. ಜಾಮಿನಿರಾಯರಂಥವರ ಕೃತಿಗಳಲ್ಲಿ ಜಾನಪದ ಸತ್ವ ಹೊಸತನ ರೇಖೆಗಳಾಗಿ ಮೆರೆಯಿತು.[೧೫]

ಎನ್. ಎಸ್. ಬೇಂದ್ರೆಯವರ ಅಲಂಕೃತ ರೇಖೆಗಳು, ಕೆ.ಜಿ.ಸುಬ್ರಮಣ್ಯಯನ್ ಅವರ ವಿಡಂಬನಾ ರೇಖೆಗಳು. ಕೆ.ಎಚ್.ರಾಜಾ ಅವರ ದಿಟ್ಟ ಕುಂಚನೋಟಗಳು–ರೇಖೆಗಳು. ಕೆ. ಸಿ. ಎಸ್. ಫಣಿಕರ್ ಪಶ್ಚಿಮದ ಪ್ರಭಾವದ ಕ್ಯಾಲಿಗ್ರಾಫಿಯ ಜ್ಯಾಮಿತಿಯ ಅಲಂಕೃತ ರೇಖಾ ಕಲ್ಪನೆಗಳನ್ನು ನಾವು ಗಮನಿಸಬಹುದು. ಶೈಲಜಾ ಮುಖರ್ಜಿಯ ಚಲನಶೀಲ ಬಣ್ಣ ಕರೆದು ಸೃಷ್ಟಿಸಿದ ರೇಖೆಗಳು ಸುಂದರ ಸೃಜನಶೀಲ[೧೬] ಕೆ.ಕೆ.ಹೆಬ್ಬಾರರು ತಮ್ಮ ರೇಖೆಗಳಲ್ಲಿ ಸ್ವಂತಿಕೆಯನ್ನು ಸಾಧಿಸಿ ತೀವ್ರ ಸಂವೇದನಾ ಶೀಲ ಸೃಷ್ಟಿಗಳಿಂದ ಖ್ಯಾತರಾಗಿದ್ದರು. ಆರ್.ಎಸ್.ನಾಯಿಡು ಅವರ ವಿಡಂಬನಾಶೀಲ ರೇಖಾಚಿತ್ರಗಳು ಉತ್ತಮ ಕೊಡುಗೆ ನೀಡಿದವು. ಅದೇ ಕಾಲಕ್ಕೆ ಪ್ರಗತಿಪರ ಕಲಾವಿದರ ಗುಂಡಿನ ಜಿ.ಎಸ್.ಶೆಣೈ, ಭಾಸ್ಕರ್‌ರಾವ, ಯು.ರಮೇಶರಾವ್, ಎಸ್.ಜಿ.ವಾಸುದೇವ ಅವರ ರೇಖೆಗಳು ವಿಕೃತಿಯ ಸುಂದರ ಸೃಜನಶೀಲ ಕಲ್ಪನೆಗಳು, ಶಾಂತಿನಿಕೇತನ ಮತ್ತು ಬರೋಡಾಗಳಿಂದ ಸಮಕಾಲೀನ ಕಲಾತಂತ್ರಗಳನ್ನು ಕಲಿತು ಬಂದ ಚಂದ್ರನಾಥ; ಸಿ.ಚಂದ್ರಶೇಖರ, ಎನ್.ಮರಿಶಮಾ ಚಾರ್, ಶ್ಯಾಮ ಸುಂದರ, ರಾಮದಾಸ್ ಮೊದಲಾದವರ ಸೃಜನಶೀಲ ರೇಖೆಗಳಲ್ಲಿ ಹೊಸತನದ ತೀವ್ರತೆಯಿದ್ದಿತು. "ನಾವು ನಾಲ್ವರು" ನಾವು ಏಳು ಆದಾ ಗುಂಪಿನ ಪೀಟರ್ ಲೂಯಿಸ್, ಜಸುರಾಮ್, ಎಸ್.ಶ್ರೀಕಾಂತ ಶೆಟ್ಟಿಯವರ ರೇಖೆಗಳು ಎಕ್ಸ್‌ಪ್ರೆಷನಿಷ್ಟ್ ರೇಖೆಗಳಿಗೆ ಆಕರ್ಷಕವಾಗಿ ಅಂಟಿಕೊಂಡಿರುವಂಥವು ಎಂಬ ವಿವರಗಳು ಕರ್ನಾಟಕ ಕಲಾವಿದರ ರೇಖಾಚಿತ್ರ ಬೆಳವಣಿಗೆ ಕುರಿತು ಮಾಹಿತಿ ನೀಡಿದ್ದು ಮಹತ್ವಪೂರ್ಣವಾಗಿದೆ.

ಕರ್ನಾಟಕದ ಕಲಾವಿದರು ತಮ್ಮ ವಿಭಿನ್ನ ನೆಲೆಗಳ ಅಭಿವ್ಯಕ್ತಿ ರೇಖೆಗಳನ್ನು ಗಮನಾರ್ಹ ಹಾಗೂ ವಿಶಿಷ್ಟ ರೀತಿಯಾಗಿ ಅಳವಡಿಸಿದರು. ಕಲಾವಿದರ ಸಾಲಿಗೆ ಪಿ.ಆರ್. ತಿಪ್ಪೇಸ್ವಾಮಿ, ಎಂ.

---

೧೫. ಬಿ.ವಿ.ಕೆ. ಶಾಸ್ತ್ರಿ (ಸಂ.) : ರೇಖಾಚಿತ್ರ. ಪು–೭
೧೬. ಅದೇ. ಪು–೮

ಎಸ್. ಚಂದ್ರಶೇಖರ್, ಎಂ.ಟಿ.ವಿ. ಆಚಾರ್ಯ, ಮಧುಗಿರಿ ರಾಜು, ಹನುಮಯ್ಯ, ಸುಬ್ರಹ್ಮಣ್ಯರಾಜು, ಇನಾಮತಿ, ಎಸ್.ಆರ್. ಅಯ್ಯಂಗಾರ, ದಂಡಾವತಿಮಠ, ಮಿಣಜಿಗಿ, ನಂತರ ಆರ್. ಎಂ. ಹಡಪದ, ಜಿ.ವೈ. ಹುಬ್ಳೀಕರ್, ಎಸ್. ಜಿ. ವಾಸುದೇವ ಅವರ ರೇಖಾಚಿತ್ರಗಳು ವಿಕೃತಿಯ ಸುಂದರ ಸೃಜನಶೀಲ ಕಲ್ಪನೆಗಳು, ಎನ್. ಮರಿಶಾಮಾಚಾರ್, ರಾಮದಾಸ ಮೊದಲಾದವರ ಸೃಷ್ಟಿಯಲ್ಲಿ ಹೊಸತನದ ತೀವ್ರತೆ ಇದ್ದಿತು. ಪೀಟರ್ ಲೂಯಿಸ್, ಜಸುರಾವಲ್, ಎಸ್. ಶ್ರೀಕಾಂತ ಶೆಟ್ಟಿ ಇವರ ರೇಖೆಗಳು, ಎಕ್ಸ್‌ಪ್ರೆಷಿನಿಸ್ಟ್ ರೇಖೆಗಳಿಂದ ಆಕರ್ಷಕವಾಗಿ ಅಂಟಿಕೊಂಡಿರುವಂತವು. ಮುಂದಿನ ಕಲಾವಿದರ ಸಾಲಲ್ಲಿ ಕೆ.ಟಿ. ಶಿವಪ್ರಸಾದ, ವಿ.ಜಿ. ಅಂದಾನಿ, ಶೀಲಾಗೌಡ, ಎನ್. ಪುಷ್ಪಮಾಲಾ, ಬಿ.ವಿ. ಸುರೇಶ, ವಿ. ಯೂಸುಫ್ ಅರಕ್ಕಲ್, ಆರ್ ರಾಜ, ರಮೇಶರಾಜ, ಅಜಿತ ದುಬೆ, ರವಿಕುಮಾರ ಕಾಶಿ, ವಿಜಯ ಸಿಂಧೂರವರೊಂದಿಗೆ[೧೨] ಸಿ. ಚಂದ್ರಶೇಖರರವರು ಕೂಡಾ ಒಬ್ಬರು.

ಸಾಂಪ್ರದಾಯಿಕ ರಚನೆಗಳಿಗೆ ಆಧುನಿಕ ರಚನೆಗಳಿಗೆ ಬಹು ವ್ಯತ್ಯಾಸವಿದೆ. ಸಾಂಪ್ರದಾಯಿಕ ರಚನೆಗಳು ನೋಡುಗರಿಗೆ ತಕ್ಷಣ ಗ್ರಹಿಕೆಗೆ ಒಳಪಟ್ಟರೆ, ಆಧುನಿಕ ರಚನೆಗಳು ಚಿಂತನೆಗೆ ತೊಡಗಿಸುತ್ತವೆ. ಆಧುನಿಕ ರಚನೆಗಳನ್ನು ಆಸ್ವಾದಿಸಬೇಕೆಂದರೆ ಬೌದ್ಧಿಕ ಕಸರತ್ತು ಬಹುಮುಖ್ಯ. ಕಸರತ್ತಿನ ಮುಖಾಂತರ ಕಲಾ ರಚನೆಯೊಂದರ ಒಳಪ್ರವೇಶ ಸಾಧ್ಯ ಎಂಬುದನ್ನು ಅರಿತಿದ್ದ ಕೆ.ಕೆ.ಹೆಬ್ಬಾರ, ಹಡಪದರರ ನಂತರ ಸಿ. ಚಂದ್ರಶೇಖರವರು ಆಧುನಿಕ ರಚನೆಗಳತ್ತ ಬಲವು ತೋರಿಸಿದವರು ಅವುಗಳಲ್ಲೆ ನಿಜವಾದ ಸತ್ಯ ಬೌದ್ಧಿಕತೆಗಳು ಅಡಗಿರುವುದು ಅವುಗಳನ್ನು ಅರಗಿಸಿಕೊಂಡಾಗಲೇ ಕಲೆಯಲ್ಲಿ ಪ್ರಬುದ್ಧತೆಯನ್ನು ಸಾಧಿಸಬಹುದೆಂಬ ಸ್ಪಷ್ಟಗ್ರಹಿಕೆಗೆ ಒಳಗಾಗಿದ್ದರು. ವಾಸ್ತವವಾಗಿ ಪ್ರಾಕೃತಿಕ, ಚಾರಿತ್ರಿಕ, ಸಾಮಾಜಿಕ ಹೀಗೆ ಹಲವಾರು ಕ್ಷೇತ್ರಗಳಿಂದ ಪ್ರೇರಣೆ ಪಡೆದುದನ್ನು ಇವರ ರೇಖಾಚಿತ್ರಗಳಲ್ಲಿ ನೋಡಬಹುದು.

೩.೧.೧. ಮೊಟ್ಟೆಯ ಸರಣಿ ರೇಖಾಚಿತ್ರಗಳು

ಮೊಟ್ಟೆಯ ಸರಣಿ ಚಿತ್ರವನ್ನು ಸಿ.ಚಂದ್ರಶೇಖರವರು ೧೯೮೨ರ ಸಮಯದಲ್ಲಿ ಶ್ರೇಷ್ಠವಾದ ಕಲಾಕೃತಿಗಳನ್ನು ಕಲಾವಲಯಕ್ಕೆ ನೀಡಿರುವುದನ್ನು ಅವರ ಕಲಾ ಬದುಕು, ಕಲಾಕೃತಿಗಳ ಮೂಲಕ ನಾವು ಗಮನಿಸಬಹುದಾಗಿದೆ. ಮೊಟ್ಟೆ ಸರಣಿ ಹಾಗೂ ಸ್ಪಿಟ್ ಸರಣಿಯ ಕಲಾಕೃತಿಗಳು ಅವರಿಗೆ ಕಲಾವಲಯದಲ್ಲಿ ಅವರದೇ ಆದ ಛಾಪು ಮೂಡಿಸುವಲ್ಲಿ ಪ್ರಮುಖವಾಗಿವೆ.

ಚಿತ್ರ–೦೧

ಈ ಕಲಾಕೃತಿಯಲ್ಲಿ ಮೊಟ್ಟೆಯಾಕೃತಿಯೊಂದಕ್ಕೆ ಪೂರಕವೆಂಬಂತೆ ಹಲವಾರು ವಸ್ತುಗಳನ್ನು

---

೧೨. ಕೆ. ವಿ. ಸುಬ್ರಹ್ಮಣ್ಯಂ : ಕಲಾಸಂವೇದನೆಯ ಒಳನೋಟಗಳು, ಪು–೬೯

ಸಂಯೋಜಿಸಿರುವುದನ್ನು ಕಾಣುತ್ತೇವೆ. ಮೊಟ್ಟೆಗೆ ಸೀಳಿರುವ ಎರಡು ಭಾಗಕ್ಕೆ ರಿಪ್ಪರ್ ಹಾಕಿ ಮೊಳೆ ಹೊಡೆದಿರುವುದನ್ನು ಕಾಣುತ್ತೇವೆ. ಇದು ಸ್ಟಿಚ್ ಸರಣಿ ಚಿತ್ರಗಳಿಗೆ ಹತ್ತಿರವೆಂಬಂತೆ ತೋರುತ್ತಿದೆ. ಹಿನ್ನೆಲೆಯಲ್ಲಿ ದಟ್ಟ ಮತ್ತು ತಿಳಿ ಕಾಯಿಯಿಂದ ರಚನೆಯಾದ ತೆಳು ಹೊಲಿಗೆಗಳು ವಿವಿಧ ಆಯಾಮಗಳಲ್ಲಿ ಸಂಯೋಜನೆಗೊಂಡಿವೆ. ಇವುಗಳನ್ನು ಜೋಡಿಸುವ ಪ್ರಯತ್ನ ಈ ಕಲಾಕೃತಿಯನ್ನು ನಡೆದಿದೆ. ಮುನ್ನೆಲೆಯಲ್ಲಿ ದಟ್ಟ ಶಾಯಿಯಲ್ಲಿ ತೆಳು ಬೆಳಕಿನಲ್ಲಿ ಎರಡು ವೀರ್‍ಯಾಣು ಆಕೃತಿಯ ಸಸ್ಯಗಳು ಐದು ಮೆಟ್ಟಿಲುಗಳನ್ನು ಸಂಯೋಜಿಸಿದ್ದಾರೆ.

ಚಿತ್ರ-೦೨

ಕಲಾವಿದ ಸಿ. ಚಂದ್ರಶೇಖರವರ ಕಲಾಕೃತಿಗಳು ಕಲಾವಲಯದಲ್ಲಿ ವಿಭಿನ್ನ ನೆಲೆಯಲ್ಲಿ ಆಲೋಚಿಸುವಂತೆ ಮಾಡುತ್ತಿವೆ. ಅವರ ಮೊಟ್ಟೆ ಸರಣಿಯ ಚಿತ್ರಗಳಲ್ಲಿ ಈ ಕಲಾಕೃತಿಯು ಶ್ರೇಷ್ಠ ಕಲಾಕೃತಿಯಾಗಿದೆ. ಮೊಟ್ಟೆಯು ಸೃಷ್ಟಿಯ ಮೊದಲ ಘನಾಕೃತಿಯ ಅಕೃತಿಗಳಲ್ಲಿ ಒಂದಾಗಿದ್ದು, ಅನೇಕ ಸಾಂಕೇತಿಕ ರೂಪಗಳನ್ನು ಪಡೆದಿದೆ. ಗ್ರಾಫಿಕ್ ಮಾಧ್ಯಮದಲ್ಲಿ ರಚನೆಯಾದ ಈ ಕಲಾಕೃತಿಯು ೧೯೮೭ರಲ್ಲಿ ರಚನೆಯಾಗಿದೆ. ಈ ಕಲಾಕೃತಿಯಲ್ಲಿ ತೇಪೆಯ ಹೊಲಿಗೆಯನ್ನು ಪಡೆದ ಮೊಟ್ಟೆಯೊಂದು ಒಟ್ಟು ಸ್ಥಳಾವಕಾಶದ ಮಧ್ಯದಲ್ಲಿ ಸಂಯೋಜನೆಗೊಂಡಿವೆ. ಮೇಲ್ಬದಿಯ ಸ್ಥಳಾವಕಾಶದ ಕಾಲುಭಾಗದ ಸ್ಥಳಾವಕಾಶದಲ್ಲಿ ೧೨ ಮರುಗಳಾಕೃತಿಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಸಂಯೋಜಿಸಿ ಕೊಂಡಿರುವರು. ಕೆಳಬದಿಯಲ್ಲಿ ಮರದ ಹಲಿಗೆಯೊಂದರ ಮೇಲೆ ಹೊಟ್ಟೆಯೊಂದನ್ನು ಸಂಯೋಜಿಸಿದ್ದಾರೆ. ಅದರ ಮುಂಭಾಗದ ಮುನ್ನಲೆಯಲ್ಲಿ ಎಡಪಾರ್ಶ್ವದ ನೇರಕ್ಕೆ ಮರದ ದಿಮ್ಮೆಯಾಕೃತಿಯನ್ನು ರಚಿಸಿದ್ದು ಕೆಳಬದಿಯಲ್ಲಿ ಮೊಟ್ಟೆಯಾಕೃತಿಯನ್ನು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಅಸಂಬದ್ಧತೆ ಸರಣಿ ಚಿತ್ರಗಳಲ್ಲಿ ಈ ಕಲಾಕೃತಿಯು ಒಂದಾಗಿದ್ದು ಅವರ ಗ್ರಾಫಿಕ್ ಮಾಧ್ಯಮ ಶೈಲಿಯೇ ವಿಭಿನ್ನವೆನಿಸುತ್ತಿದೆ. ರೇಖಾಚಿತ್ರಗಳ ಸಾಮೀಪ್ಯಕ್ಕೆ ನೋಡುಗರನ್ನು ಸುಳಿದಾಡಿಸುವಂತಿದೆ. ರಭಸವಾದ ಚಿಕ್ಕ ಚಿಕ್ಕ ರೇಖೆಗಳು, ನೆರಳು ಬೆಳಕಿನ ಸಂಯೋಜನೆ ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಆಕೃತಿಗಳನ್ನು ಸಂಯೋಜಿಸುವ ವಿಧಾನ ಅವರ ಸೃಜನ ಶೀಲತೆಗೆ ಹಿಡಿದ ಕನ್ನಡಿಯಂತಿದೆ.

ಚಿತ್ರ-೦೩

ಸಿ. ಚಂದ್ರಶೇಖರವರ ರೇಖಾಚಿತ್ರಗಳ ಸರಣೀ ಕಲಾಕೃತಿಗಳಲ್ಲಿ ಬದುಕನ್ನು ದೃಶ್ಯಗೊಳಿಸುವ ನಿರಂತರ ಪ್ರಯೋಗಶೀಲತೆ ಅವರ ಚಿತ್ರಗಳ ಜೀವಾಳ. ಸರಣಿ ಚಿತ್ರಗಳನ್ನು ಮಾಡಿದಾಗಲೂ ಭಿತ್ತಿಯಲ್ಲಿನ ಸರಣಿತವನ್ನು ಗುರುತಿಸಬಹುದೇ ಹೊರತು ಒಂದೊಂದು ಪ್ರತ್ಯೇಕತೆ ಕಾಯ್ದುಕೊಂಡ

ಚಿತ್ರಗಳಾಗಿ ಸ್ವಂತ ಅಸ್ತಿತ್ವವನ್ನು ಹೊಂದಿರುತ್ತವೆ. ಇವರ ಕಲಾಕೃತಿಯಲ್ಲಿ ಮೌನದ ಸಾಂದ್ರತೆಯೇ ಹೆಚ್ಚು. ಈ ಅಂಶವನ್ನು ಕಲಾವಿದರಾದ ಸಿ. ಚಂದ್ರಶೇಖರವರು ತಮ್ಮ ಸರಣಿ ಕಲಾಕೃತಿಗಳಾದ ಸ್ಪಿತ್ ಪಿನ್ ಅಂಡ್ ಪೋಲ್ಡ್, ಪ್ಯಾರಡಾಕ್ಸ್‌ನಂತಹ ಸರಣಿ ಚಿತ್ರಗಳಲ್ಲಿ ಕಾಣಬಹುದಾಗಿದೆ. ಇವರ ಈ ಕಲಾಕೃತಿಯಲ್ಲಿ ಪಿಕಾಸೋರವರ ಜಾಮಿತಿಕ ಘನಾಕೃತಿಯನ್ನೊಳುವ ಆಕೃತಿಗಳ ಸಂಯೋಜನೆಯನ್ನು ಸಮೀಕರಿಸುವಂತಿದ್ದು, ಈ ಕಲಾಕೃತಿಯ ಆ ಕೃತಿಯು ಘನವಸ್ತುವಿನ ಗಟ್ಟಿ ಕಲ್ಲಿನಂತಿದ್ದು, ಇದರ ರಚನೆಯು ವಿಶಿಷ್ಟ ಶೈಲಿದಾಯಕವಾಗಿದೆ. ಘನಾಕೃತಿಯಲ್ಲಿಯ ಮಲಗಿರುವ ವ್ಯಕ್ತಿಯ ಆಕೃತಿಯನ್ನು ಚಿತ್ರಿಸಲಾಗಿದ್ದು ಒಂದೇ ಮಾನವಾಕೃತಿಯ ಮಲಗಿರುವ ವಿಭಿನ್ನ ಭಂಗಿಯಲ್ಲಿ ರಚಿಸಲಾಗಿದ್ದು ಆದಿಶೇಷ ಆಸನ ಭಂಗಿಯಲ್ಲಿದೆ. ಈ ಕಲಾಕೃತಿಯ ಆಕೃತಿಯ ಮಾನವನ ಮುಖ ಭವನ ಘನಾಕೃತಿಯ ಶಿಲ್ಪದ ರುಂಡವನ್ನು ತ್ರಿಕೋನಾಕೃತಿಯಲ್ಲಿ ಕೆತ್ತಿ ಕೂಡಿಸಿರುವಂತಿದ್ದು ಇದರಲ್ಲಿಯ ಉಬ್ಬು ತಗ್ಗು ರೇಖೆಗಳು ಅವರ ಮುಖಭಾವದ ವಯಸ್ಸಿನ ಅಂತರವನ್ನು ತೋರಿಸುವಂತಿದೆ.

ಚಿತ್ರ-೦೪

ಕಲಾವಿದರಾದ ಸಿ. ಚಂದ್ರಶೇಖರವರ ರೇಖಾಚಿತ್ರಗಳ ಸರಣಿ ಕಲಾಕೃತಿಗಳಲ್ಲಿ ಇದು ಒಂದು ಉತ್ತಮ ಕಲಾಕೃತಿಯಾಗಿದ್ದು, ಅವರ ಸೃಜನಶೀಲತೆಗೆ ಹಿಡಿದ ಕನ್ನಡಿಯಂತಾಗಿದೆ. ಯಾವಾಗಲೂ ಹೊಸ ಹೊಸ ಆಲೋಚನೆ, ಅಲ್ಲಿಯ ವಾಸ್ತವಾಂಶಗಳು, ಸಮಾಜವನ್ನು ನೋಡುವ ನೋಟ, ಅದನ್ನು ಕಲಾ ಮಾಧ್ಯಮದಿಂದ ತಿದ್ದುವ ಬಗೆ. ಕಲಾವಿದರು ಈ ಕಲಾಕೃತಿಯಲ್ಲಿ ಪ್ರಾಣಿಯ ಅರ್ಧ ದೇಹಾಕೃತಿಯನ್ನು ಮಾತ್ರ ಸಂಯೋಜಿಸಿಕೊಂಡಿದ್ದು ಅದೇ ಕಲಾಕೃತಿಯ ಪ್ರಮುಖ ಆಕೃತಿಯಾಗಿದೆ. ಮೇಕೆಯ ತಿಳಿಯ ಓತಾವನ್ನು ಅದರ ರುಂಡವನ್ನೇ ಚಿತ್ರಿಸಿದ್ದು ಇದು ನೈಜತೆಗಿಂತ ಭಿನ್ನನೆಲೆಯಲ್ಲಿ ನಿಲ್ಲುವುದು, ಎದುರು ನೋಟದ ಮುಖಭಾವವನ್ನು ಹೊಂದಿರುವ ಓತವು ತಲೆಯ ಮೇಲಿನ ಎರಡು ಕೋಡುಗಳು ವಿರುದ್ಧ ದಿಕ್ಕಿನಡೆ ಎಡ ಮತ್ತು ಬಲ ಪಾರ್ಶ್ವಕೆ ಕೆಳಮುಖವಾಗಿ ವೃತ್ತಾಕಾರದಲ್ಲಿ ಭಾಗಿರುವುದು. ಅದರ ಎರಡು ಕಿವಿಗಳು ಕೆಳಮುಖವಾಗಿ ಭಾಗಿರುವುದು. ಎರಡು ಕಣ್ಣುಗಳ ಹಣೆಯ ಮೇಲೆ ಚಿತ್ರಿಸಿ ಅವರ ವಿಭಿನ್ನ ಆಲೋಚನಾ ಕ್ರಮವನ್ನು ಪ್ರತಿಬಿಂಬಿಸುವಂತಿದೆ. ಇದರ ಮುಖವು ಕೆಳಬದಿಯಿಂದ ಸೀಳಿ ಮೇಲ್ಬದಿಗೆ ಚಲಿಸಿರುವಂತಿದ್ದು ಅದರ ಮೂಗಿನ ಒಳ್ಳೆ ಹಾಗೂ ಕಣ್ಣುಗಳು ವಿಭಾಗರೊಂಡಂತೆ ಚಿತ್ರಿಸಿದ್ದು ಅದರಲ್ಲಿಯ ರೇಖೆಗಳ ಪ್ರಯೋಗದಿಂದಾಗಿ ಅದರ ಕಣ್ಣುಗಳಲ್ಲಿ ಕರುಣೆ ಸಾಮ್ಯತೆಯನ್ನು ಕಾಣಬಹುದಾಗಿದೆ.

ಚಿತ್ರ-೦೫

ಕಲಾವಿದರಾದ ಸಿ. ಚಂದ್ರಶೇಖರವರು ರಚಿಸಿರುವ ರೇಖಾಚಿತ್ರಗಳ ಸರಣಿ ಕಲಾಕೃತಿಗಳ ಮುಂದುವರಿದ ಭಾಗವಾಗಿ ಈ ಕಲಾಕೃತಿಯನ್ನು ಚಿತ್ರಿಸಲಾಗಿದೆ. ಈ ಕಲಾಕೃತಿಯು ಮುನ್ನೆಲೆಯು

ಆಕೃತಿಯ ವಿಷಯಾಧಾರಿತವಾಗಿದ್ದು ಹಿನ್ನೆಲೆಯು ಸ್ಥಳಾವಕಾಶವು ಇದಕ್ಕೆ ಪ್ರಮುಖವೆನಿಸಲಾರದು. ಈ ಕಲಾಕೃತಿಯಲ್ಲಿಯ ಆಕೃತಿಯು ರೇಖಾ ಪ್ರಧಾನವಾದುದ್ದಾಗಿದ್ದು, ಪಾರ್ಶ್ವಭಂಗಿಯ ಮುಖಭಾವವನ್ನು ಹೊಂದಿದ್ದು ಘನಾಕೃತಿಯ ಮುಖ ಭಾವಾಕೃತಿಯ ಶಿಲ್ಪ ಕಲಾಕೃತಿಯಂತಿರುವ ಈ ರೇಖಾಚಿತ್ರವು ಮೇಲಿಂದ ಕೆಳಕ್ಕೆ ಚಲಿಸಿರುವ ಚಿಕ್ಕ ಚಿಕ್ಕ ಗೀಟು ರೇಖೆಗಳು ತಿಳಿ ಮತ್ತು ದಟ್ಟವಾಗಿ ಪ್ರಯೋಗಗೊಂಡಿವೆ. ವಯಸ್ಸಾದ ಮುದುಕನೋರ್ವ ಮೇಲ್ಮುಖವಾಗಿ ಮುಖವೆತ್ತಿ ಬಲಪಾರ್ಶ್ವದೆಡೆ ನೋಡುತ್ತಿರುವಂತಿದ್ದು. ಸದೃಢವಾದ ಮುಖ ಅರ್ಧತಲೆಯ ಹಣೆಯನ್ನು ಛೇದಿಸಿದಂತಿದ್ದು, ಕಣ್ಣುಗಳಲ್ಲಿ ಬಳಕೆಯಾದ ದಟ್ಟ ರೇಖೆಗಳು ಅವರ ನೋವನ್ನು ಪ್ರತಿನಿಧಿಸುವಂತೆ ಗೋಚರಿಸುತ್ತವೆ.

ಚಿತ್ರ-೦೬.

ವಿವಿಧ ಶೈಲಿಯ ಸರಣಿ ಚಿತ್ರಗಳಂತೆಯೇ ಈ ರೇಖಾಚಿತ್ರಗಳಿಗೂ ಕಲಾವಿದರಾದ ಸಿ. ಚಂದ್ರಶೇಖರವರು ಹೆಚ್ಚು ಗಮನವನ್ನೇರಿಸಿ ಸಮಾಜದ ವಿವಿಧ ವಿಷಯಾಧಾರಿತ ನೆಲೆಯಲ್ಲಿ ಕಲಾಕೃತಿಗಳನ್ನು ಸ್ಥಳಾವಕಾಶಕ್ಕೆ ತಕ್ಕಂತೆ ವಿವಿಧ ಪ್ರಾಣಿ ಮಾನವನ ಅನೇಕ ಭಂಗಿಗಳನ್ನು ಘನಾಕೃತಿಯ ಶಿಲ್ಪಾಕೃತಿಗಳಂತೆ ರೇಖೆಗಳ ಬಳಕೆಯಲ್ಲಿ ತೋರಿಸಿರುವುದನ್ನು ಕಾಮಬಹುದಾಗಿದೆ. ಇವು ರೇಖಾ ಚಿತ್ರಗಳಾಗಿದ್ದರು ಪೂರ್ಣರೇಖೆಯೊಂದಿಗೆ ಬಳಕೆಯಾದ ಕಲಾಕೃತಿಗಳಲ್ಲಿ ಚುಕ್ಕೆ, ಗೀಟುಗಳ ಮೂಲಕ ಕಪ್ಪು ಶಾಯಿಯಿಂದ ರಚನೆಯಾದ ಕಲಾಕೃತಿಗಳು ಈ ಸರಣಿ ಕಲಾಕೃತಿಗಳಾಗದ್ದಿ. ಈ ಕಲಾಕೃತಿಯಲ್ಲಿ ವಿಶಿಷ್ಟ ಶೈಲಿಯ ಜನಪದ ಗೊಂಬೆಯಾಕಾರವನ್ನು ಹೋಲುವ ಸೃಜನಾತ್ಮಕ ಅಪರೂಪದ ಪ್ರಾಮಿಯಾಕೃತಿಯ ಮುಖಭಾವವನ್ನು ಮಾತ್ರ ಘನಾಕೃತಿಯ ಶಿಲ್ಪದಂತೆ ಚಿತ್ರಿಸಿದ್ದು, ಈ ಕಲಾಕೃತಿಯ ವಿಶೇಷತೆ ಎಂದರೆ ಎದುರು ಮುಖಭಾವವನ್ನು ಹೊಂದಿದ್ದು ಹಣೆಯ ಮೇಲೆ ಎರಡು ಕಿವಿಗಳು ಎಡ ಮತ್ತು ಬಲಕ್ಕೆ ತಾಚಿದಂತಿದ್ದು ಅದರ ಮಧ್ಯ ಭಾಗದಲ್ಲಿ ಹೊಳೆಯುವ ಎರಡು ಕಣ್ಣುಗಳನ್ನು ಸಂಯೋಜಿಸಿರುವುದು ಇವರ ಸೃಜನಶೀಲತೆಯನ್ನು ತೋರಿಸುತ್ತಿದೆ. ಸೀಳಿದ ಮೂಗಿಗೆ ದಾರದಿಂದ ಹೋಲಿಗೆ ಹಾಕಲಾಗಿದ್ದು ತೆರೆದ ಮೂಗಿನ ಹೊಳ್ಳೆಗಳು ಅಗಲವಾದ ಬಾಯಿ ಈ ಕಲಾಕೃತಿಯ ವೈಶಿಷ್ಟ್ಯತೆಯನ್ನು ತೋರಿಸುತ್ತದೆ.

ಚಿತ್ರ-೦೭.

ಘನಾಕೃತಿಯ ಕಲಾಕೃತಿಯಲ್ಲಿ ಉಬ್ಬು ಶಿಲ್ಪಗಳಂತಿರುವ ರೇಖಾ ಪ್ರಧಾನ ಕಲಾಕೃತಿಯನ್ನು ಕಲಾವಿದರಾದ ಸಿ. ಚಂದ್ರಶೇಖರವರು ಸದಾ ಪ್ರಯೋಗಾತ್ಮಕ ಹಿನ್ನೆಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಮನುಷ್ಯನ ಇಂದ್ರಿಯಗಳ ಕ್ರಿಯಾ ಚೈತನ್ಯ


ಮತ್ತು ಅವುಗಳ ದ್ವಂದ್ವತೆಗಳನ್ನು ಮನುಷ್ಯ ಮಾನಸಿಕವಾಗಿ ಮತ್ತು ದೈಹಿಕವಾಗಿ ಜಗತ್ತಿನೊಂದಿಗೆ ಹೊಂದಿರುವ ಸಂಪರ್ಕಗಳ ನೆಲೆಗಳನ್ನು ಸಮೀಕರಿಸಲಾಗಿದೆ. ಈ ಸಮೀಕರಣ ಮುಖ್ಯಾವಿಗ ಮೂರ್ತ ಮತ್ತು ಅಮೂರ್ತ ವಸ್ತುಗಳೊಂದಿಗೆ ನಡೆಯುವುದರಿಂದ ಅವರ ಕಲಾಕೃತಿಗಳ ಕೇಂದ್ರ ಮನುಷ್ಯನೇ ಹೊರತು ಮನುಷ್ಯೇತರ ಸ್ಥಿತಿಗಳಲ್ಲ. ಈ ಕಲಾಕೃತಿಯಲ್ಲಿಯ ಆ ಕೃತಿಯು ಮಾನವಾಕೃತಿಯನ್ನು ಹೋಲುವ ಬಂಡೆಗಲ್ಲುಗಳ ಜೋಡಣೆಯೊಂದಿಗೆ ಕುಂತ ಭಂಗಿಯಲ್ಲಿರುವ ವ್ಯಕ್ತಿಯಂತೆ ಸಂಯೋಜಿಸಲಾಗಿದೆ. ಮೂರುಕಲ್ಲು ಬಂಡೆಗಳಿಂದ ಜೋಡಣೆಯಾಗಿದ್ದು ಚಿಕ್ಕ ಕಲ್ಲೊಂದನ್ನು ತಲೆಯಾ ಕೃತಿಯಲ್ಲಿ ಮೇಲ್ಬದಿಯಲ್ಲಿ ಸಂಯೋಜಿಸಿದ್ದಾರೆ. ಅಲ್ಲಲ್ಲಿ ಉಬ್ಬು ತಗ್ಗುಗಳಿಂದಾಗಿ ಅದರ ಮಧ್ಯಭಾಗದಲ್ಲಿ ಮಗುವಿನ ಮುಖಭಾವವನ್ನೋಳುವಂತ ಆ ಕೃತಿಯನ್ನು ಸಂಯೋಜಿಸಿ ಕಲಾಕೃತಿಯನ್ನು ಪೂರ್ಣಗೊಳಿಸಿರುವರು.

ಚಿತ್ರ-೦೮. ವಿಡಂಬನೆ

ರೇಖಾ ಚಿತ್ರ ಮಾಧ್ಯಮದ ಸರಣಿ ಚಿತ್ರಗಳ ಮುಂದುವರೆದ ಭಾಗವಾಗಿ ವಿಡಂಬನೆ ಎನ್ನುವ ಶೀರ್ಷಿಕೆಯ ಕಲಾಕೃತಿಯು ವಸ್ತು ವಿಷಯವನ್ನು ಸೃಜನಾತ್ಮಕವಾಗಿ ಕ್ರಿಯೆಗೊಳಿಸಿಕೊಂಡು ರೇಖಾಚಿತ್ರದಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಚಿತ್ರಕಲೆ ಯಾವುದೇ ಅರ್ಥಗಳನ್ನು ವರ್ಣಸಂಯೋಜನೆ ವ್ಯಕ್ತಿ, ಪ್ರಾಣಿ ಅಥವಾ ಸಸ್ಯ ಭಾವ ಮತ್ತು ವಸ್ತುಗಳಿಂದ ಸಂಯೋಜನೆಯಾಗಿರುತ್ತವೆ. ಇಂಥ ಪ್ರಕ್ರಿಯೆಯಲ್ಲಿ ಒಬ್ಬೊಬ್ಬ ಕಲಾವಿದರ ವಿಶಿಷ್ಟತೆ ಇರುತ್ತೆ. ಹಾಗೆಯೇ ಚಂದ್ರಶೇಖರ ಅವರಿಗೆ ಬಿನ್ನ ವಸ್ತು ಮತ್ತು ಭಿನ್ನತೆ ಮುಖ್ಯ. ಏಕೆಂದರೆ ಚಂದ್ರಶೇಖರರವರು ನಿಂತಿರು ನಿಲುವು ಸಿಂಪಿಗನ ಸ್ಥಾನದಲ್ಲಿ. ಕತ್ತರಿಸಿದ ಹಲವು ತುಂಡುಗಳನ್ನು ಹೋಲಿಯುವುದರಿಂದಲೇ ಹೊಸ ವಿನ್ಯಾಸವನ್ನು ಆತ ಸಾಧ್ಯಗೊಳಿಸುತ್ತಾನೆ.

ಈ ಕಲಾಕೃತಿಯಲ್ಲಿರುವ ಆಕೃತಿಗಳ ಮಾನವ ಹಾಗೂ ಪ್ರಾಣಿಗಳಾ ಕೃತಿಯಲ್ಲಿ ವಿವಿಧ ನೋಟ, ವಿವಿಧ ಭಂಗಿಯಲ್ಲಿ ಸಂಯೋಜಿಸಿರುವರು. ಹಿಂದಿನ ಎಲ್ಲಾ ಕಲಾಕೃತಿಗಳು ಅರ್ದ ದೇಹಾಕೃತಿ ಒಂದು ಅಥವಾ ಎರಡು ಆಕೃತಿಗಳ ಜೋಡಣೆ ಇತ್ತು. ಇಲ್ಲಿ ಅದಕ್ಕಿಂತ ಹೆಚ್ಚು ಆಕೃತಿಗಳು ಸಂಯೋಜನೆಗೊಂಡಿವೆ. ಎಡ ಪಾರ್ಶ್ವದಲ್ಲಿ ರುಂಡವಿಲ್ಲದ ಒಂದನ್ನೊಂದು ತಬ್ಬಿಕೊಂಡಿರುವ ಕುಳಿತ ಭಂಗಿಯ ಮಾನವಾಕೃತಿಗಳು. ಅದರ ಮಧ್ಯೆ ಅಪರೂಪದ ಕೀಟಾಕೃತಿ. ಬಲಪಾರ್ಶ್ವದಲ್ಲಿ ದೊಡ್ಡದಾದ ಮನುಷ್ಯನ ಮುಖಭಾವ ಅದಕ್ಕೆ ಹಸುವಿನ ಕಾಲುಗಳನ್ನು ಜೋಡಿಸಲಾಗಿದೆ. ದಷ್ಟಪುಷ್ಟವಾದ ದಡೂತಿ ದೇಹದ ವಿಭಿನ್ನ ದೇಹಾಕೃತಿಯ ಪ್ರಾಣಿ ಮಾನವನ ಸಂಯೋಜನೆಯ ಆಕೃತಿಗಳ ಕಲಾಕೃತಿ ಈ ರೇಖಾಚಿತ್ರವಾಗಿದೆ.

ಮೊಟ್ಟೆ ಸರಣಿಯ ಕಲಾಕೃತಿಗಳು



ಚಿತ್ರ-೦೧



ಚಿತ್ರ-೦೨

ರೇಖಾಚಿತ್ರಗಳು



ಚಿತ್ರ-೦೩



ಚಿತ್ರ-೦೪

ರೇಖಾಚಿತ್ರಗಳು



ಚಿತ್ರ-೦೫



ಚಿತ್ರ-೦೬

ರೇಖಾಚಿತ್ರಗಳು



ಚಿತ್ರ-೦೭



ಚಿತ್ರ-೦೮- ವಿಡಂಬನೆ

೩.೨. ಸಿ ಚಂದ್ರಶೇಖರ ಅವರ ವರ್ಣಕಲಾಕೃತಿಗಳು

'ಕಲೆ' ಎಂದರೆ ಇಂಗ್ಲಿಷಿನಲ್ಲಿ 'Art' ಎಂದು ಅರ್ಥ ಕೊಡುತ್ತದೆ. "ಕಲೆ ಮಾನವನ ಕ್ರಿಯಾಶಕ್ತಿಯ ಕುಶಲ ಅಭಿವ್ಯಕ್ತಿ". ಅಭಿವ್ಯಕ್ತಿಯು ಹಲವಾರು ರೀತಿಯಲ್ಲಿ ವ್ಯಕ್ತವಾಗಿದ್ದು, ಆಗಾಗ ಬದಲಾವಣೆ ಆಗುತ್ತಾ ಬಂದಿದೆ. ಮಾನವನಿಗೆ ಸುತ್ತಮುತ್ತಲಿನ ಪರಿಸರದಿಂದ ಕಲಾಪ್ರಜ್ಞೆ ಹೊರಹೊಮ್ಮಲು ಕಾರಣಗಳಾಗುತ್ತವೆ. ತನ್ನ ಪರಿಸರದಲ್ಲಿ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಉಂಟು ಮಾಡುತ್ತವೆಯೋ ಅವನ್ನು ಚಿತ್ರಿಸುತ್ತಾನೆ. ಮಾನವನು ವಿಕಾಸಗೊಂಡಂತೆ ಕಲೆ ಬದಲಾಗುತ್ತಾ ಬಂದಿದೆ. ಕಲೆ ಮಾನವನ ಜೀವನದ ಅಂಗವಾಗಿದ್ದು, ಕಲಾಸೃಷ್ಟಿ ಒಂದಲ್ಲಾ ಒಂದು ರೂಪದಲ್ಲಿ ನಡೆಯುತ್ತದೆ.

ಪ್ರಾಚೀನ ಶಾಸ್ತ್ರ ಗ್ರಂಥದಲ್ಲಿ ೬೪ ಕಲೆಗಳನ್ನು ಪಟ್ಟಿ ಮಾಡಲಾಗಿದೆ. ಆದರೆ 'ಲಲಿತ ವಿಸ್ತಾರ'ದಲ್ಲಿ ೮೬ರೆಂದು ಹೇಳಿರುವರು. 'ಸಮಯ ಸೂತ್ರ'ದಲ್ಲಿ ೮೭, 'ಕಾಮ ಸೂತ್ರ'ದಲ್ಲಿ ೬೪ ಕಲೆಗಳ ಉಲ್ಲೇಖವಿದೆ. 'ಚಿತ್ರ' ಎಂಬ ಪದಕ್ಕೆ ನಿಘಂಟಿನಲ್ಲಿ ಹದಿನಾರು ವಿವಿಧ ಅರ್ಥಗಳಿವೆ. 'ಚಿತ್ರ' ಎಂದರೆ ಆಶ್ಚರ್ಯ, ಅದ್ಭುತ ಎಂಬ ಅರ್ಥವೂ ವ್ಯಾಪಕವಾಗಿ ಬಳಕೆಯಲ್ಲಿವೆ.

ಚಿತ್ರ + ಕಲೆ = ಚಿತ್ರಕಲೆ – ಚಿತ್ರಕಲೆ ಎಂದರೆ ಸಂಕ್ಷೇಪಿಸಿ ಹೇಳುವುದಾದರೆ "ಒಂದು ಫಲಕದ ಮೇಲೆ ಬಣ್ಣದಿಂದ ಮೂಡಿಸಿದ ಒಂದು ಆಕೃತಿ" ಎಂದು ಹೇಳಬಹುದು.

ಯಾವುದೋ ಒಂದು ಅರ್ಥದಲ್ಲಿ ಫಲಕದ ಮೇಲೆ ಇರಿಸಿದ ಒಂದು ಗೆರೆ ಅಥವಾ ಬಿಂದುವೇ ಕಲಾಕೃತಿ ಆಗಬಹುದು. ಅವು ವಿನ್ಯಾಸ, ಗಾತ್ರ, ಬಣ್ಣ ಹಾಗೂ ಅವನ್ನು ಇರಿಸುವ ರೀತಿ ಮತ್ತು ಸ್ಥಳಗಳನ್ನು ಅನುಸರಿಸಿ ಕಲಾಕೃತಿಯ ಮೌಲ್ಯ ಹೇಳಬಹುದು. ಚಿತ್ರಕಲೆಗೆ ಸಂಬಂಧಸಿದಂತೆ ಶಾಸ್ತ್ರ ಹಾಗೂ ಕಾವ್ಯಗಳಲ್ಲಿ ಚಿತ್ರಿಸು, ವರ್ಣಿಸು, ರೂಪಿಸು, ಅಲೇಖ್ಯ ಇತ್ಯಾದಿ ಪದ ಪ್ರಯೋಗಗಳಿವೆ. ಶಾಸ್ತ್ರ ಗ್ರಂಥಗಳ ಪ್ರಕಾರ ಚಿತ್ರಕಲೆ ನಾಲ್ಕು ಹಂತಗಳಲ್ಲಿ ಆಗುವುದು.

೧. **ರೇಖಾವಾತ :** ಆಕೃತಿಯ ಹೊಸ ಮೈಯನ್ನು ಕೆಂಪು ಅಥವಾ ಕಪ್ಪು ಬಣ್ಣದ ದಪ್ಪ ಗೆರೆಯಿಂದ ನಿರ್ದೇಶಿಸಿಕೊಳ್ಳುವುದು.

೨. **ವರ್ತನ :** ಮುಖ್ಯವಾದ ವಿವರಗಳನ್ನು ಎದ್ದು ಕಾಣುವಂತೆ ಅಳವಡಿಸಿಕೊಳ್ಳುವುದು.

೩. **ಅಲಂಕಾರ :** ಚಿತ್ರಗಳಿಗೆ ಸೊಗಸು ಹೆಚ್ಚಿಸುವಂತೆ ವಿನ್ಯಾಸಗಳನ್ನು ತೋರಿಸುವುದು.

೪. **ವರ್ಣ :** ಬಣ್ಣಗಳನ್ನು ತುಂಬುವುದು ಎಂಬ ಅನೇಕ ಉಲ್ಲೇಖಗಳನ್ನು ಕಾಣುವೆವು.

ಈ ಗ್ರಂಥಗಳಲ್ಲಿ ಅನೇಕ ವಿಷಯಗಳ ಮಧ್ಯದಲ್ಲಿ ಚಿತ್ರಕಲೆಯ ಕುರಿತು ಹೇಳಿರುವುದುಂಟು. 'ಕಲ್ಲುವಗ್ಗ'ವೆಂಬ ಕ್ರಿಸ್ತಸಕದ ಆರಂಭದ ಗ್ರಂಥ, ಬೃಹತ್ ಸಂಹಿತಾ (೬ನೆಯ ಶತಮಾನ) ವಿಷ್ಣು ಧರ್ಮೋತ್ತರ ಪುರಾಣ (೩ನೆಯ ಶತಮಾನ) ಅಭಿಲಕ್ಷಿತಾರ್ಥ ಚಿಂತಾಮಣಿ (೧೧ನೆಯ ಶತಮಾನ) ಶಿಲ್ಪರತ್ನ (೧೬ನೆಯ ಶತಮಾನ) ಇತ್ಯಾದಿಗಳಲ್ಲದೆ ನಾರದ ಶಿಲ್ಪ, ಸಮಾರಾಂಗಣ ಸೂತ್ರಧಾರ, ಪಂಚದಶಿ, ಕಾಮಸೂತ್ರ, ಇತ್ಯಾದಿ ಹಲವಾರು ಗ್ರಂಥಗಳಲ್ಲಿ ಚಿತ್ರಕಲೆಯ ಬಗ್ಗೆ ಮಾಹಿತಿಗಳು ಕಂಡುಬಂದಿವೆ.

ಮಾನವನ ಜೀವನ ಹಿತಕ್ಕೆ ಮತ್ತು ತೃಪ್ತ ಜೀವನಕ್ಕೆ 'ಅನ್ನ' ಮಾತ್ರವಲ್ಲದೆ 'ಕಲೆ'ಯೂ ಮುಖ್ಯವೆಂಬುದನ್ನು ಸುಸಂಸ್ಕೃತ ಜೀವನವು ಸಿದ್ಧಪಡಿಸಿ ಇತಿಹಾಸವಾಗಿದೆ. ಕಲಾವಿಕಾಸದ ಬೆಳವಣಿಗೆಯಿಂದ ಮಾನವನ ಪ್ರಗತಿಯ ವಿವಿಧ ಹಂತಗಳು ಕಲೆಯಲ್ಲಿ ವ್ಯಕ್ತಗೊಂಡಿದೆ. ಆದಿ ಮಾನವನ ಕಾಲದಿಂದ ನಿರಂತರವಾಗಿ ಮುಂದೆ ವ್ಯವಸಾಯ, ಪಶುಪಾಲನೆಯ ನಾಗರಿಕತೆಯಲ್ಲಿ ಅವನ ನಿತ್ಯ ಜೀವನದ ಚಿತ್ರಗಳು ರಚಿಸಲ್ಪಟ್ಟಿವೆ.

ನಮ್ಮ ನಾಗರಿಕತೆಯೂ ಬೆಳದದ್ದು ಹೆಚ್ಚಾಗಿ ಜನನಿಬಿಡ ಕೇಂದ್ರಗಳಾದ ಪಟ್ಟಣಗಳಲ್ಲಿ, ರಾಜರು ಮತ್ತು ಶ್ರೀಮಂತರ ಆಶ್ರಯದಲ್ಲಿ ಎನ್ನಬಹುದು. ಮೊದಲು ರಾಜರ ಅರಮನೆಗಳಲ್ಲಿ ಶ್ರೀಮಂತರ ಸೌಧಗಳಲ್ಲಿ, ಧರ್ಮಾಸಕ್ತರ ಮನೆಗಳಲ್ಲಿ ಅಲಂಕರಣಕ್ಕಾಗಿ ಭಿತ್ತಿಚಿತ್ರಗಳೇ ಹೆಚ್ಚು ಬಳಕೆಯಾದವು. ಈ ಕೆಲಸಕ್ಕೆ ವೃತ್ತಿನಿರತ ಕಲಾವಿದರೂ ಬೆಳೆಯಲು ಅನುಕೂಲವಾಯಿತು. ಇದು ಸಂಪ್ರದಾಯಿಕವಾಗಿ ಬೆಳೆಯಿತು. ಈ ಕಲೆಯೂ ಬೆಳೆಯುತ್ತಾ ವಿದ್ಯೆಯಾಗಿ ಪರಿಣಮಿಸಿ ಇತರರೂ ಕಲೆಯಲು ಅನೇಕ ಕಲಾಶಾಸ್ತ್ರ ಗ್ರಂಥಗಳು ರಚಿಸಲ್ಪಟ್ಟವು.

'ಚಿತ್ರ ಲಕ್ಷಣ'ವೆಂಬ ಪ್ರಾಚೀನ ಬೌದ್ಧ ಗ್ರಂಥವು ಚಿತ್ರಕಲೆಯ ಸಂಪ್ರದಾಯ ನಿರೂಪಿಸಿದೆ. ಇದರಲಲಿ ರಾಜರಿಗೆ ಮತ್ತು ಸಾಮಾನ್ಯರಿಗೆ ಅನುಸರಿಸುವ ಪರಸ್ಪರ ಪ್ರಮಾಣ ಮತ್ತು ದೇಹಾಕಾರ ಪ್ರಮಾಣಗಳನ್ನು ತಿಳಿಸುತ್ತದೆ. ಕ್ರಿ.ಶ. ೫ನೇ ಶತಮಾನದಲ್ಲಿ ರಚಿಸಲ್ಪಟ್ಟ 'ವಿಷ್ಣು ಧರ್ಮೋತ್ತರ' ಎಂಬ ಗ್ರಂಥದಲ್ಲಿ ಭಿತ್ತಿಚಿತ್ರ ರಚನಾಕ್ರಮ ತಂತ್ರಗಳ ಉಲ್ಲೇಖ ಕಾಣುತ್ತವೆ. ಅದಕ್ಕೂ ಮೊದಲು ಕ್ರಿ.ಶ. ೩ನೇ ಶತಮಾನದಲ್ಲಿ ರಚಿಸಿದ 'ವಾತ್ಸಾಯನ ಕಾಮಸೂತ್ರ'ದಲ್ಲಿ ಚಿತ್ರ ಕಲೆಯ ಷಡಂಗಗಳು ವಿವರಿಸಲ್ಪಟ್ಟಿದ್ದು ಅವು ಇಂತಿವೆ.

೧. **ರೂಪಭೇದ** ದೇಹ ರಚನೆ, ವಿವರ, ಆಕಾರ, ರೇಖಾ ವಿನ್ಯಾಸ, ಕ್ರಮ, ವಾಸ್ತು ಶಿಲ್ಪಗಳ ವಿವರ.

೨. **ಪ್ರಮಾಣ** ಅಂದರೆ ದೇಹ ಪ್ರಮಾಣಗಳ ವಿವರ, ಅಸ್ಥಿಪಂಜರ, ರಚನೆ, ಮುನ್ನೆಲೆ, ಹಿನ್ನೆಲೆ.

೩. **ಭಾವ** ಅಂದರೆ ಮನಸ್ಸಿನ ಮೇಲಿರುವ ಪರಿಣಾಮ ಪ್ರಭಾವಗಳು.

೪. **ಲಾವಣ್ಯ** ಯೋಜನೆ ಅಂದರೆ ಸೌಂದರ್ಯ ನಿರೂಪಣೆ ಮತ್ತು ಲಾವಣ್ಯದ ರೀತಿ ವಿಧಾನ.

೬. **ವರ್ಣಿಕಾಭಂಗ** ಅಂದರೆ ಕಲಾಕೃತಿಗೆ ಉಪಯುಕ್ತ, ಸಾಮಗ್ರಿಗಳು, ವರ್ಣಗಳು ತಂತ್ರಗಳ ವಿವರ. ಹೀಗೆ ಭಾರತೀಯ ಚಿತ್ರಕಲಾ ಶಾಸ್ತ್ರದಲ್ಲಿ ಆರು ಅಂಗಗಳು ಇದ್ದದ್ದು ಕಂಡು ಬರುತ್ತದೆ.

ಮುಂದೆ 'ಭಗವದ್ಗೀತೆ'ಯಲ್ಲಿ ಉಷೆಯು ಕೃಷ್ಣನ ಮೊಮ್ಮಗನಾದ ಅನಿರುದ್ಧನ ಭಾವಚಿತ್ರವನ್ನು ನೋಡಿ ಪ್ರೇಮಿಸಿ ವಿವಾಹವಾದಳೆಂಬುದು ಭಾವಚಿತ್ರ ರಚನೆಯ ಉತ್ಕೃಷ್ಟತೆಯ ನಿದರ್ಶನ ಮಹಾಭಾರತದಲ್ಲೂ ಇರುವಂತೆ ಚಿತ್ರರಚನೆ, ವಾಸ್ತುಶಿಲ್ಪಗಳ ಅಸಂಖ್ಯ ಉದಾಹರಣೆಗಳು ಅಂದಿನ ಕಲೆಯ ಉನ್ನತ ಭಾವನೆಗಳ ಪ್ರತೀಕವಾಗಿವೆ. ೧೧ನೇ ಶತಮಾನದ 'ಅಭಿಲಾಷಿತಾರ್ಥ ಚಿಂತಾಮಣಿ' ಗ್ರಂಥದಲ್ಲಿ ವ್ಯಕ್ತಿ ಚಿತ್ರಣವು 'ವಿದ್ಧ' ಕಲೆಯೆಂದು, ಕಲ್ಪನಾ ಚಿತ್ರವು 'ಅವಿದ್ಧ' ಕಲೆಯೆಂದು ವರ್ಣಿಸಿವೆ.

ವಿದ್ಯಾರಣ್ಯರ 'ಪಂಚದಶಿ'ಯಲ್ಲಿ ಚಿತ್ರದ ಮೂಲ ಸಿದ್ಧತೆಯಿಂದ ಹಿಡಿದು ಮುಕ್ತಾಯದವರೆಗೂ ವರ್ಣನೆ ಇದೆ. ಇಂತಹ ಅನೇಕ ಗ್ರಂಥಗಳು ಭಾರತೀಯ ಕಲಾಸಂಪ್ರದಾಯವನ್ನು ಬೆಳೆಸಲು ಆಧಾರವಾಗಿದ್ದವು. ಈ ಕಲೆಗಳು ಬೇಲೂರು, ಹಳೇಬೀಡು, ಲೇಪಾಕ್ಷಿ, ಖಜುರಾಹೋ ಶಿಲ್ಪಗಳು ಈ ಕಲಾ ಸಂಪ್ರದಾಯಕ್ಕೆ ಸಾಕ್ಷಿಯಾಗಿವೆ.

ಎಂ.ಟಿ.ವಿ. ಆಚಾರ್ಯರರು ತಮ್ಮ ಕಲೆ ಮತ್ತು ನಾನು ಎಂಬ ಗ್ರಂಥದಲ್ಲಿ ಭಾರತದ ಕಲಾಚರಿತ್ರೆಯನ್ನು ಈ ರೀತಿ ಮಂಡಿಸಿದ್ದು – ಭಾರತದ ಕಲೆಯೂ ಕ್ರಿ.ಶ. ೭ನೇ ಶತಮಾನದವರೆಗೆ ರೂಪಿಸಲ್ಪಟ್ಟ ಅಜಂತೆಯ ಚಿತ್ರಕಲಾ ವೈಭವದ ಪ್ರತೀಕ. ಪಾಶ್ಚಾತ್ಯ ಕಲಾತಜ್ಞರನ್ನು ಅಚ್ಚರಿಗೊಳಿಸದವು. ಅಜಂತೆಯ ಬಹುಸಂಖ್ಯೆಯ ಚಿತ್ರಗಳು ಮತ್ತೆಲ್ಲಿಯೂ ಕಂಡು ಬರದೇ ಭಾರತೀಯ ಸಂಪ್ರದಾಯವನ್ನು ಎತ್ತಿ ಸಾರುತ್ತವೆ.

ಕ್ರಿ.ಶ. ೮ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಭಾರತದಲ್ಲಿ ಕಲೆಯ ಅವನತಿಯನ್ನು ಗುರುತಿಸಲಾಗಿದೆ. ಆ ಕಾಲದಲ್ಲಿ ಕಲಾಪೋಷಣೆಗೆ ಅಗತ್ಯವಾದ ಯಾವ ದಕ್ಷ ಆಡಳಿತವೂ ಇರಲಿಲ್ಲ. ಅಲ್ಲಲ್ಲಿ ಭಿತ್ತಿಚಿತ್ರಗಳು ನಂತರ ಜೈನರ ತಾಳೆಗರಿ, ದವಲಾ ಗ್ರಂಥಗಳಲ್ಲಿ ಚಿತ್ರ ರಚನೆ ಬಳಕೆ ಕಂಡುಬಂದಿದೆ. ೧೨ರಿಂದ ೧೪ನೇ ಶತಮಾನದಲ್ಲಿ ಅನೇಕ ರಾಜಾಶ್ರಯದಲ್ಲಿ

ಭಿತ್ತಿಚಿತ್ರಗಳು ತಾಳೆಗರಿ ಚಿತ್ರಗಳು, ಸೃಷ್ಟಿ ಆಕಾರ ಉತ್ತಮ ರೇಖಾವಿನ್ಯಾಸ, ನೈಸರ್ಗಿಕ ವರ್ಣಗಳ ಶೋಭೆ ಮುಂತಾದ ವೈಶಿಷ್ಟ್ಯದಿಂದ ಕೂಡಿಕೊಂಡು ವಜ್ರಲೇಪನ, ಚಿನ್ನದ ರೇಖೆಗಳ ಬಳಕೆಯೂ ಭಾರತೀಯ ಕಲೆಯ ಶ್ರೇಷ್ಠತೆಯನ್ನು ಸಾರುತ್ತವೆ.[೧೮]

ಮುಂದೆ ೧೬ನೇ ಶತಮಾನದಲ್ಲಿ ಭಾರತದಲ್ಲಿ ಮೊಗಲರ ಆಳ್ವಿಕೆ ಪ್ರಾರಂಭವಾಯಿತು. (ಕ್ರಿ.ಶ. ೧೫೫೦–೧೮೦೦) ಆಗ ಪರ್ಷಿಯಾದ ಕಲೆ ಮತ್ತು ಭಾರತೀಯ ಕಲೆ ಗುಣಲಕ್ಷಣಗಳು ಬೆರೆತವು. ಬಾಬರನ ಕಾಲದಲ್ಲಿ ಉನ್ನತಿ ಪಡೆದ ಈ ಕಲೆ ಮೊಗಲ್ ಶೈಲಿ ಎನಿಸಿತು. ಅಕ್ಬರ್, ಜಹಾಂಗೀರ್ ಕಾಲದಲ್ಲಿ ಇನ್ನೂ ಮುಂದುವರೆಯಿತು.[೧೯] ಈ ಕಾಲದಲ್ಲಿ ಭಾವಚಿತ್ರಗಳು, ರಾಜರ ಬೇಟೆಯ ಚಿತ್ರಗಳು, ರಾಜಸಭಾ ದೃಶ್ಯಗಳೂ ಪ್ರಕೃತಿಯ ಹಿನ್ನೆಲೆಯೊಂದಿಗೆ ಕಂಗೊಳಿಸಿದ್ದು ಈ ಕಲೆಯ ವೈಶಿಷ್ಟ್ಯ. ಕಲೆ ಮುಂದುವರೆದು ಹಿಂದೂ ರಾಜರ ಪೋಷಣೆಯಲ್ಲಿ ಜಯಪುರ, ಬಿಕನೀರ್, ಉದಯಪುರ ಮುಂತಾದೆಡೆ ದಖ್ಖನಿ ಶೈಲಿ ಹೋಲುವ ಚಿತ್ರಕಲೆಯು ಬೆಳೆದು ರಜಪೂತ ಶೈಲಿ, ಕಾಂಗ್ರಾ ಶೈಲಿ, ಪಹಾಡಿ ಶೈಲಿಗಳೆಂದು ಪ್ರಸಿದ್ಧವಾದವು. ಈ ಚಿತ್ರಗಳಲ್ಲಿ ರಾಮಾಯಣ, ಮಹಾಭಾರತದ ವಸ್ತುವಿಷಯಗಳು ಕಾಣುವೆವು. ರಾಗ-ರಾಗಿಣಿ ಚಿತ್ರಗಳು, ಸಂಗೀತದ ವಿವಿಧ ರಾಗ ಭಾವಗಳ ಚಿತ್ರಗಳೂ ಇಲ್ಲಿ ಕಾಣುತ್ತೇವೆ.

ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ, ಸವಾಲುಗಳಿಗೆ ತನ್ನನ್ನು ಸಮ್ಮುಖನಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತು ಅವನ ಧೋರಣೆ ಅಥವಾ ನಿಲುವು(*point of view*)ಗಳನ್ನು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕೃತಿಯು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ. ಅಂದಿನ ಆಗುಹೋಗುಗಳಿಗೆ ಅಗತ್ಯವಾದ ಹೆಚ್ಚಿನ ಆಸಕ್ತಿಯಿಂದ ಅಥವಾ ನಿರ್ಲಕ್ಷ್ಯ, ನಿರ್ಲಿಪ್ತತೆಯಿಂದ ಸ್ಪಂದಿಸಿದ ಕಲಾವಿದನ ಕೃತಿಗಳು ಸಾಮಾನ್ಯ ನೆಲೆಯವಾಗಬಲ್ಲವು. ಆದರೆ ಸಮಚಿತ್ತತೆಯಿಂದ ಅಂದಿನ ಎಲ್ಲವುಗಳ ಒಳನೋಟದ ಸಮಷ್ಟಿ ರೂಪವಾಗಿ ಅಭಿವ್ಯಕ್ತಿಸಿದಾಗ ತೀವ್ರತೆಯ ತುಡಿತವು ನಿಷ್ಕೃಷ್ಟತೆ (*precision*)ಯನ್ನು ಪಡೆಯಬಲ್ಲದು. ಕೇವಲ ಆ ಒಂದು ಕಾಲದ ಮೇಲ್ಪದರದ ವಸ್ತು, ಉಡುಪು, ಜೀವನಶೈಲಿ ಇತ್ಯಾದಿಗಳ ಚಿತ್ರಣ ಸಾಂದರ್ಭಿಕವಾಗಿ ಮಾತ್ರ ಉಳಿಯಬಲ್ಲದು, ಅಂದಿನ ಇನ್ಯಾವುದೇ ವಿಶೇಷ ಹೊಳಹುಗಳನ್ನು, ಅನುಭವಗಳನ್ನು ನೀಡಲಾರದು.. ವಿಜಯನಗರ ನಾಯಕರ ಭಿತ್ತಿಚಿತ್ರ ಕಲೆಯು ಸಮಕಾಲೀನತೆ ಈ ದೃಷ್ಟಿಯದು. "ಕಲಾಕೃತಿಗಳು ಒಂದು ಯುಗದ ಆಸಕ್ತಿ ಮತ್ತು ಕುತೂಹಲಗಳ ಮೊತ್ತವಾಗಿರುತ್ತದೆ" ಎಂಬ ಮಾತುಗಳು ಕಲಾಸೃಷ್ಟಿಯ ಮೂಲ ಮತ್ತು ಅದು ಮಾಡುವ ಪರಿಣಾಮಗಳ ಸಾಮಾಜಿಕ ಸ್ವರೂಪವನ್ನು ವ್ಯಕ್ತಪಡಿಸುತ್ತವೆ.

---

೧೮. ಎಂ. ಎಚ್. ಕೃಷ್ಣಯ್ಯ : ಕಲಾಸಂಸ್ಕೃತಿ, ಪು-೬

೧೯. ಅದೇ., ಪು-೭

ವರ್ಣ(*colour*)

ಚಿತ್ರಕಲೆಯಲ್ಲಿ ರೇಖೆಯಷ್ಟೇ ಮಹತ್ವ ವರ್ಣಗಳಿಗಿವೆ. ಯಾವುದೇ ವಸ್ತುವಿನ ಆಂತರಿಕ ಹಾಗೂ ಬಾಹ್ಯದ ನಿರೀಕ್ಷಣೆಯಿಂದ ಮನಸ್ಸಿನ ಮೇಲಾಗುವ ಪರಿಣಾಮವೇ ಭಾವ. ಆ ಭಾವವನ್ನು ವ್ಯಕ್ತಪಡಿಸಲು ಕೇವಲ ರೇಖೆಗಳು ಸಾಲದು. ನೋಡುಗನನ್ನು ಆಕರ್ಷಿಸುವುದು ಬಣ್ಣಗಳೇ. ಆದ್ದರಿಂದ ಬಣ್ಣಗಳಿಗೆ ತನ್ನದೇ ಆದ ವಿಶಿಷ್ಟತೆಗಳು ಕಾಣುವವು. ವರ್ಣಗಳಿಗೆ ತನ್ನದೆ ಆದ ಗುಣಗಳಿವೆ. ತಂಪು ವರ್ಣಗಳು, ಪ್ರಖರ ವರ್ಣಗಳು, ಸೌಮ್ಯ ವರ್ಣಗಳು, ಘಾಡ ವರ್ಣಗಳು, ಇತ್ಯಾದಿ ವರ್ಣಗಳು ನೋಡುಗನಲ್ಲಿ ವಿಶೇಷ ಭಾವ ಉಂಟು ಮಾಡುತ್ತವೆ. ವರ್ಣಗಳು ತಮ್ಮದೇ ಆದ ಸಾಂಕೇತಿಕ ಅರ್ಥವನ್ನು ಹೊಂದಿವೆ. ಒಂದೊಂದು ಬಣ್ಣವು ಒಂದೊಂದು ರೀತಿಯ ಭಾವೋದ್ವೇಗವನ್ನು ಮನಸ್ಸಿನಲ್ಲಿ ಮೂಡಿಸುತ್ತವೆ. ಕೆಂಪು ಆಕ್ರೋಶಕ್ಕೆ, ಹಳದಿ ಸಂತೋಷಕ್ಕೆ, ನೀಲಿ ಹಾತೊರೆಯುವಿಕೆಗೆ ಹೀಗೆ ಕಲಾವಿದರೂ ತಮ್ಮ ಕಲಾಕೃತಿಗಳಲ್ಲಿ ವರ್ಣ ಸಂಯೋಜನೆಯನ್ನು ಆಳ ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ ತಮ್ಮ ಭಾವನೆಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ದುಡಿಸಿಕೊಳ್ಳುತ್ತಾರೆ. ನಮಗೆ ತಿಳಿದಿರುವಂತೆ ನೀಲಿ, ಕೆಂಪು ಹಾಗೂ ಬಣ್ಣಗಳು ಮೂಲವರ್ಣಗಳು. ಇವುಗಳಲ್ಲಿ ಎರಡು ಬಣ್ಣಗಳ ಮಿಶ್ರಣದಿಂದ ಇನ್ನೂ ಮೂರು ಮಿಶ್ರವರ್ಣಗಳನ್ನು ತಯಾರಿಸಿಕೊಳ್ಳಬಹುದು. ಅವೆಂದರೆ ನೀಲಿ ಮತ್ತು ಕೆಂಪಿನಿಂದ ನೇರಳೆ, ಕೆಂಪು ಮತ್ತು ಹಳದಿಯಿಂದ ಕಿತ್ತಳೆ ಮತ್ತು ನೀಲಿ ಮತ್ತು ಹಳದಿಯಿಂದ ಹಸಿರು ಬಣ್ಣಗಳು ಉತ್ಪತ್ತಿಯಾಗುತ್ತವೆ. ಮಿಶ್ರವರ್ಣಗಳನ್ನು ಮತ್ತೆ ಮಿಶ್ರ ಮಾಡುವುದರಿಂದ ಕಪ್ಪು ಬಣ್ಣವೂ ಮೂಲ ಹಾಗೂ ಮಿಶ್ರ ವರ್ಣಗಳೆಲ್ಲೇ ಪರಸ್ಪರ ಏಕ ಅಥವ ಅನೇಕ ಬಣ್ಣಗಳನ್ನು ಹಲವಾರು ಪ್ರಮಾಣದಲ್ಲಿ ಮಿಶ್ರ ಮಾಡುತ್ತಾ ಅಗಣಿತ ವರ್ಣಛಾಯೆ(ಹ್ಯೂ)ಗಳನ್ನು ಪಡೆಯಬಹುದು. ಇವುಗಳಲ್ಲಿ ನೀಲಿ, ನೇರಳೆ, ಹಸಿರು ಬಣ್ಣಗಳನ್ನು ತಂಪು(ಕೂಲ್) ವರ್ಣಗಳೆಂದೂ, ಕೆಂಪು, ಕಿತ್ತಳೆ, ಹಳದಿ ಬಣ್ಣಗಳನ್ನು ಉಷ್ಣ(ವಾರಮ್) ವರ್ಣಗಳೆಂದೂ ಕರೆಯುತ್ತಾರೆ.

ಈ ರೀತಿ ಹೇಳಲು ಕಾರಣ ಈ ವರ್ಣಗಳು ಮನಸ್ಸಿನ ಮೇಲೆ ಬೀರುವ ಪರಿಣಾಮ. ಉದಾಹರಣೆಗೆ ರಕ್ತವರ್ಣವಾದ ಕೆಂಪು ಅಪಾಯ, ಭಯ, ಹಿಂಸೆ ಇತ್ಯಾದಿಗಳನ್ನು ಸೂಚಿಸುತ್ತದೆ. ಹಸಿರು ಫಲಸಮೃದ್ಧಿಯನ್ನು ಸೂಚಿಸುತ್ತದೆ. ದಟ್ಟವಾದ ಕೆಂಪು ವರ್ಣ ಕಣ್ಣಿಗೆ ಅಹಿತ ಎನ್ನಿಸಿದರೆ ಹಸಿರು ತಂಪಾಗಿ ಕಾಣಿಸುತ್ತದೆ. ಇದಲ್ಲದೆ ಸಾಮಾಜಿಕವಾಗಿ, ಸಾರ್ವತ್ರಿಕವಾಗಿ ಬಣ್ಣಗಳಿಗೆ ಕೆಲವು ಸಂಕೇತಗಳನ್ನು ಹೊಂದಿಸಲಾಗಿದೆ. ಬಿಳಿ ಬಣ್ಣ ಶಾಂತಿಯನ್ನು, ಕೇಸರಿ ತ್ಯಾಗವನ್ನು, ಕಪ್ಪು ದುಃಖ ಹೀಗೆ ಬಣ್ಣಗಳು ಸಾಮಾನ್ಯವಾಗಿ ಸ್ಫುರಿಸುವ ಕೆಲವು ಭಾವನೆಗಳಿಗೆ ಪೂರಕವಾಗಿ ಕಂಡುಬರುತ್ತದೆ. ಚಿತ್ರಫಲಕದಲ್ಲಿ ಇರಿಸಿದ ಬಣ್ಣಗಳಲ್ಲೂ ಕೆಂಪು ಇತ್ಯಾದಿ ಉಷ್ಣ ವರ್ಣಗಳು

ಹತ್ತಿರಕ್ಕೆ ಎದ್ದು ಬಂದಂತೆಯೂ ಹಸಿರು, ನೀಲಿ ಇತ್ಯಾದಿ ತಂಪು ಬಣ್ಣಗಳು ನಮ್ಮಿಂದ ದೂರದಲ್ಲಿ ಇರುವಂತೆಯೂ ಭಾಸವಾಗುತ್ತದೆ.

ರಸಗ್ರಹಣದ ದೃಷ್ಟಿಯಿಂದ ವರ್ಣಗಳು ನಮ್ಮ ಭಾವನೆಗಳನ್ನು ಉತ್ತೇಜಿಸುವ ಕ್ರಿಯೆಗೆ ಪೋಷಕವಾಗುವುದು ಒಂದಾದರೆ, ಬಣ್ಣಗಳ ಆಯ್ಕೆ, ನಿಯಂತ್ರಣ, ಹಚ್ಚುವಿಕೆಗಳಲ್ಲಿ ಕಲಾವಿದನಿಗೆ ಇರುವ ಹಿಡಿತ ಹಾಗೂ ನಿರ್ವಹಣಾ ಕೌಶಲ್ಯಗಳು ಇನ್ನೊಂದು ಮುಖ್ಯ ಅಂಶವಾಗುತ್ತದೆ. ತೈಲವರ್ಣಗಳು ಅಪಾರದರ್ಶಕವಾಗಿದ್ದರೆ, ಜಲವರ್ಣ ಪಾರದರ್ಶಕವಾಗಿದ್ದು ತೀರ ತೆಳುವಾದ ಸೂಕ್ಷ್ಮವಾದ ಕೃತಿಗಳ ರಚನೆಗೆ ಸೂಕ್ತ. ಅದೇ ಆಕ್ರಿಲಿಕ್ ವರ್ಣಗಳು ಜಲವರ್ಣದ ಅನುಭವವನ್ನು, ತೈಲವರ್ಣದ ಕೆಲವು ಗುಣಗಳನ್ನು ಹೊಂದಿರುವಂತಹದು ಎಂದರೆ ಕಲಾವಿದ ವರ್ಣ ಮಾಧ್ಯಮವನ್ನು ಬಳಸಿಕೊಂಡಿರುವ ರೀತಿ, ಚಿತ್ರ ಫಲಕದಲ್ಲಿ ಅಕ್ಕಪಕ್ಕಗಳಲ್ಲಿ ಇರುವ ಆಕೃತಿಗಳಿಗೆ ಬಳಸಿರುವ ವರ್ಣ ವೈವಿಧ್ಯತೆ, ನೋಡಲು ಕಣ್ಣುಗಳಿಗೆ ಆಯಾಸವಾಗದಂತೆ ಹಿತಮಿತವಾಗಿ–ರುವಿಕೆಗಳೆಲ್ಲವೂ ಆ ಒಂದು ಕೃತಿಯನ್ನು ವೀಕ್ಷಿಸಿ ಸೌಂದರ್ಯಾನುಭವವನ್ನು ಸವಿಯಲು ನೆರವಾಗುವಂತೆ ಮಾಡುತ್ತವೆ.

ಆಧುನಿಕ ಕಲೆಯಲ್ಲಿ ಬಣ್ಣ

ಆಧುನಿಕ ಚಿತ್ರಕಲೆಯಲ್ಲಿ ಬಣ್ಣಗಳ ಪಾತ್ರ ಪ್ರಮುಖವಾದುದು. ಕಳೆದ ಶತಮಾನದ ಅಂತ್ಯದಲ್ಲಿ ಯೂರೋಪಿನಲ್ಲಿ ಚಿತ್ರ ಕಲೆಯಲ್ಲಿ ಹೊಸ ಕ್ರಾಂತಿ ಆಯಿತು. ವಸ್ತುವಿನ ಮೇಲೆ ಪ್ರತಿಫಲಿಸುವ ನೆರಳು-ಬೆಳಕುಗಳ ಪರಿಣಾಮದಿಂದಾಗಿ ಆಯಾ ವಸ್ತುಗಳಲ್ಲಿ ಕಾಣಬರುವ ಬಣ್ಣಗಳ ಬಗ್ಗೆ ಕಲಾವಿದರು ಆಳವಾದ ಅಧ್ಯಯನ ಮಾಡಿ ಚಿತ್ರರಚಿಸ ತೊಡಗಿದರು. ಉದಾಹರಣೆಗೆ ಆಕಾಶದಲ್ಲಿ ತೇಲಾಡುವ ಮೋಡಗಳ ಮೇಲೆ, ಅನಂತವಾದ ಭೂದೃಶ್ಯದ ಮೇಲೆ ವಿವಿಧ ಕಾಲದಲ್ಲಿ, ಋತುಮಾನಗಳಲ್ಲಿ ಬೀಳುವ ಬಿಸಿಲು ಹಾಗೂ ಕ್ಷಣಕ್ಷಣಕ್ಕೆ ಬದಲಾಗುವ ಬೆಳಕಿನಿಂದಾಗಿ ಅವುಗಳ ಬಣ್ಣಗಳಲ್ಲಿ ಕಂಡುಬರುವ ವೈವಿದ್ಯತೆಯನ್ನು ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಹಿಡಿದಿರಿಸಿದರು. ಮುಂದೆ ಕೃತಿ ರಚನೆಯಲ್ಲಿ ಇನ್ನಷ್ಟು ಬದಲಾವಣೆಗಳಾಯಿತಾದರೂ ಬಣ್ಣಗಳನ್ನು ವೈವಿಧ್ಯಮಯವಾಗಿ ಇರಿಸುವುದೇ ಪ್ರಮುಖ ಅಂಶವಾಯಿತು. ಆದುದರಿಂದ ಆಧುನಿಕ ಚಿತ್ರಗಳಲ್ಲಿ ಒಂದು ನಿಶ್ಚಿತವಾದ, ಗುರುತಿಸಬಹುದಾದ ಆಕಾರಗಳಿರುವಂತೆಯೇ, ಬಣ್ಣದ ಅಮೂರ್ತ ಹರಹುಗಳೂ ಪ್ರಧಾನವಾಗಿ ಕಂಡುಬರುತ್ತದೆ.

ಅಮೂರ್ತ ಚಿತ್ರಕಲೆ ನೋಡುವ ರೀತಿ

ಸಾಮಾನ್ಯ ಜನರ ದೃಷ್ಟಿಯಲ್ಲಿ ಅಮೂರ್ತ ಕಲೆಯೆಂದರೆ ಏನು? ಎಂಬ ಪ್ರಶ್ನೆ

ಉದ್ಭವಿಸುವುದು ಸಹಜ. ಅದಕ್ಕೆ ಅಷ್ಟೇ ಸರಳ ಹಾಗೂ ನೇರವಾದ ಉತ್ತರ: ಅಮೂರ್ತವೆಂದರೆ ವಾಸ್ತವವನ್ನು ಯಥಾವತ್ತಾಗಿ ಪ್ರತಿನಿಧಿಸದೇ ಇರುವ ಪ್ರಯತ್ನ. ಸರಿ ಹೀಗೆಂದು ಹೇಳಿದ ಮಾತ್ರಕ್ಕೆ ಏನನ್ನೂ ಹೇಳಿದಂತಾಗುವುದಿಲ್ಲ. ಯಾಕೆಂದರೆ ಜನಸಾಮಾನ್ಯರ ಸಾಂಸ್ಕೃತಿಕ ಸಂದರ್ಭದಲ್ಲಿ ಅರ್ಥವಾಗದ್ದನ್ನು, ಅರ್ಥೈಸಲು ಸಾಧ್ಯವಾಗದ್ದನ್ನು, ಸರಳವಾಗಿ ಗ್ರಹಿಕೆಗೆ ದಕ್ಕುವುದನ್ನು ಅಮೂರ್ತ ಎಂದು ಕರೆಯುವ ಪರಿಪಾಠವಿದೆ. ಅಂದರೆ ಅರ್ಥವಿಲ್ಲದ್ದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ್ದನ್ನೇ ಅಮೂರ್ತ ಎನ್ನುವುದಾದರೆ ಅಮೂರ್ತ ಚಿತ್ರಕಲೆಗೆ ಅರ್ಥ ಮತ್ತು ಮೌಲ್ಯಗಳೇನಾದರೂ ಇರಲು ಸಾಧ್ಯವೇ?

ಚಿತ್ರಕಲೆಯ ಸಂದರ್ಭದಲ್ಲಿ ಅಮೂರ್ತವೆಂದರೆ ಅದು ನಿಜವಾಗಿಯೂ ಅಷ್ಟು ಅಸ್ಪಷ್ಟವಾಗಿರಬೇಕಿಲ್ಲ. ಯಾಕೆಂದರೆ ಅಮೂರ್ತ ಚಿತ್ರಕಲೆಗೂ ತನ್ನದೇ ಆದ ನೆಲೆ-ನಿಲುವುಗಳಿರುತ್ತವೆ. ಅದು ಬಹು ವಿಶಿಷ್ಟವಾದ ಅನುಭವವನ್ನು ಅಷ್ಟೇ ವಿಶಿಷ್ಟವಾದ ಬಣ್ಣ, ರೇಖೆ, ನೆರಳು-ಬೆಳಕಿನ ಮೂಲಕ ಪ್ರತಿನಿಧಿಸುತ್ತದೆ. ಹಾಗಾಗಿ ಒಂದು ವಾಸ್ತವವಾದಿ ಪೇಂಟಿಂಗ್‌ನ್ನು ಅರ್ಥೈಸಿಕೊಂಡು ವ್ಯಾಖ್ಯಾನಿಸುವ ವಿಧಾನಗಳಿರುವಂತೆಯೇ ಅಮೂರ್ತ ಚಿತ್ರಕಲಾಕೃತಿಯನ್ನು ಕೂಡ 'ಓದಿ' ಅರ್ಥಗ್ರಹಣ ಮಾಡಿಕೊಳ್ಳಲು ನಿರ್ದಿಷ್ಟ ದಾರಿಗಳಿವೆ.

ಸಮಕಾಲೀನ ಸಂದರ್ಭದ, ತೋರಿಕೆಗೆ ಅಗ್ರಾಹ್ಯವಾಗಿರುವ ಅಮೂರ್ತ ಚಿತ್ರಕಲಾಕೃತಿಗಳನ್ನು ಅರ್ಥೈಸಿಕೊಳ್ಳಲು ನಾವು ಚಿತ್ರಕಲೆಯ ಚರಿತ್ರೆ, ನಡೆದುಬಂದ ದಾರಿ, ಸಾಧಿಸಿದ ಪ್ರಗತಿ, ದಾಟಿಬಂದ ಹಲವಾರು ಘಟ್ಟಗಳು, ಅಳವಡಿಸಿಕೊಂಡ ಹತ್ತಾರು ಅಭಿವ್ಯಕ್ತಿಯ ಶೈಲಿ, ವಿಧಾನಗಳು-ಮುಂತಾದವುಗಳನ್ನು ಆಮೂಲಾಗ್ರ ಅರಿತರೆ ಅಮೂರ್ತ ಚಿತ್ರಕಲೆಯ ಆಳಕ್ಕೆ ಇಳಿದು ಅದರ ಧ್ವನಿ, ಧಾಟಿ, ಅರ್ಥಸಾಧ್ಯತೆಯ ಪರಂಪರೆ-ಇತ್ಯಾದಿಗಳನ್ನು ಬಹು ಸುಲಭವಾಗಿ ಮನೋಗತ ಮಾಡಿಕೊಳ್ಳಬಹುದು. ಆದರೆ ಈ ಮೂಲಭೂತವಾದ ಅರಿವನ್ನು ಪಡೆದುಕೊಳ್ಳಲು ನಾವು ಒಂದು ದೀರ್ಘವಾದ ದಾರಿಯನ್ನೇ ಕ್ರಮಿಸಬೇಕಾಗುತ್ತದೆ.

ವಿಶೇಷವಾಗಿ ಆಧುನಿಕ ಕಲಾಚರಿತ್ರೆಯ ಹಲವು ಮಗ್ಗಲುಗಳನ್ನು ಅರ್ಥಮಾಡಿಕೊಂಡರೂ ಸಾಕು, ಅಮೂರ್ತ ಚಿತ್ರಕಲೆಯ ವಿವಿಧ ಆಯಾಮಗಳ ಗ್ರಹಿಕೆ ಸಾಧ್ಯವಾಗುತ್ತದೆ. ಅಂದರೆ ಕಳೆದ ೩೦೦ ವರ್ಷಗಳ ಅವಧಿಯಲ್ಲಿ ಚಿತ್ರಕಲಾ ಚರಿತ್ರೆಯ ಕ್ಷೇತ್ರದಲ್ಲಿ ಕಾಣಿಸಿಕೊಂಡ ವಾಸ್ತವವಾದ (*Realism*), ಮುದ್ರಾವಾದ (*Impressionism*), ಅಭಿವ್ಯಕ್ತಿವಾದ (*Expressionism*), ಮುದ್ರಾವಾದೋತ್ತರ ಹಾಗೂ ಕ್ಯೂಬಿಸಂ (*Post Impressionism, Cubism*), ಅತೀವಾಸ್ತವವಾದ (*Surrealism*), ಅಮೂರ್ತ ಅಭಿವ್ಯಕ್ತವಾದ (*Abstract*

Expessionism)–ಮುಂತಾದ ಕಲಾಪಂಥ ಹಾಗೂ ಶೈಲಿಯ ಆಂದೋಲನಗಳನ್ನು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಅರ್ಥಮಾಡಿಕೊಂಡರೆ ಅಮೂರ್ತ ಚಿತ್ರಕಲೆಯನ್ನು ಅರ್ಥಮಾಡಿಕೊಳ್ಳುವುದು ಅಂಥ ಕಷ್ಟದ ಕೆಲಸವೇನಲ್ಲ. ಆದ್ದರಿಂದಲೇ ಕಲಾರಸಿಕರು, ಕಲಾತಜ್ಞರು ಹಾಗೂ ಕಲಾವಿಮರ್ಶಕರ ಕ್ಷೇತ್ರದಲ್ಲಾದರೂ ಅಮೂರ್ತ ಚಿತ್ರಕಲೆ ೨೦ನೇ ಶತಮಾನದ ಅತ್ಯಂತ ಜನಪ್ರಿಯ ಹಾಗೂ ಪ್ರೌಢಕಲಾಂದೋಲನವಾಗಿ ಪರಿಣಮಿಸಿತು.

ಚಿತ್ರಕಲಾ ಪರಂಪರೆಯಲ್ಲಿ ಅಭಿವ್ಯಕ್ತಿಯ ಹೊಸ ಸಾಧ್ಯತೆಯನ್ನು ಅಪೂರ್ವವಾಗಿ ವಿಸ್ತೃತಗೊಳಿಸಿದ ಅಮೂರ್ತ ಚಿತ್ರಕಲೆ ಎಲ್ಲೆಲ್ಲೂ ಜನಸಾಮಾನ್ಯರಿಗೆ ಅರ್ಥ ಮತ್ತು ಗ್ರಹಿಕೆಯ ಸಮಸ್ಯೆ–ಸವಾಲುಗಳನ್ನು ಒಡ್ಡುತ್ತಲೇ ಬಂದಿರುವುದುಂಟು. ವಾಸ್ತವವಾದಿ ಚಿತ್ರಕಲಾ ವಿಧಾನದಿಂದ ಬಹುದೂರ ನಡೆದು ಬಂದಿರುವ ಅಮೂರ್ತ ಚಿತ್ರಕಲಾ ಆಂದೋಲನವು ನೂರಾರು ಜಾಗತಿಕ ಮಟ್ಟದ ಕಲಾವಿದರ ಮೂಲಕ ಸೃಷ್ಟಿಸಿರುವ ಸಾವಿರಾರು ಅಮೂರ್ತ ಕಲಾಕೃತಿಗಳು ಕಲಾಪರಿಣಿತರ ಹಾಗೂ ವಿಮರ್ಶಕರ ಅಮಿತ ಪ್ರಶಂಸೆಗೆ ಒಳಗಾಗಿದ್ದರೂ ಜನಸಾಮಾನ್ಯರು ಅಮೂರ್ತ ಚಿತ್ರಕಲಾ ಕೃತಿಗಳ ಆಸ್ವಾದನೆಯಲ್ಲಿ ಹಿಂದೆ ಬಿದ್ದಿರುವುದನ್ನು ನೋಡುತ್ತೇವೆ.

ಈ ದೃಷ್ಟಿಯಿಂದ ಅಮೂರ್ತ ಚಿತ್ರಕಲಾಕೃತಿಗಳನ್ನು ಅರ್ಥೈಸಿಕೊಳ್ಳುವ, ತನ್ಮೂಲಕ ರಸಾನುಭೂತಿಗೆ ದಾರಿಕಂಡುಕೊಳ್ಳುವ ಕುರಿತು ಲಿನ್ ತಾಯೆತ್ಸ್ ದಾಖಲಿಸಿರುವ ಅನುಭವಗಳನ್ನು ಗಮನಿಸಬೇಕು: 'ನಾನು ಅಮೂರ್ತ ಚಿತ್ರಕೃತಿಯೊಂದನ್ನು ಪೇಂಟ್ ಮಾಡುವಾಗ ಒಂದು ಭೂದೃಶ್ಯದ್ದೋ ಅಥವಾ ಆಕೃತಿಯದ್ದೋ ಸಾದೃಶ್ಯತೆಯನ್ನು ಹಿಡಿದಿಡಲು ಯತ್ನಿಸುವುದಿಲ್ಲ, ವಾಸ್ತವವನ್ನು ಯಥಾವತ್ತಾಗಿ ಅನುಕರಿಸಿ ಅದರ ತದ್ರೂಪವನ್ನು ಬಣ್ಣ, ರೇಖೆಗಳಲ್ಲಿ ಸೃಷ್ಟಿಸುವುದು ನನ್ನ ಉದ್ದೇಶವಾಗಿರುವುದಿಲ್ಲ. ಏಕೆಂದರೆ ನನ್ನ ಚಿತ್ರಕಲಾ ರಚನೆಯ ವಿಷಯ ಒಂದು ದೃಶ್ಯ ಅಥವಾ ಆಕೃತಿಯಾಗಿರದೇ ಪೇಂಟಿಂಗ್ ಮಾಡುವುದೇ ಅದರ ವಿಷಯವಾಗಿರುತ್ತದೆ.

'ಇಷ್ಟಾಗಿಯೂ ಕೆಲವು ನೋಡುಗರು ನನ್ನ ಕಲಾಕೃತಿಯನ್ನು ನೋಡಿದೊಡನೆಯೇ ಅದರಲ್ಲಿ ಯಾವುದೋ ಒಂದು ವಾಸ್ತವಿಕ ಪ್ರತಿಮೆಯನ್ನು ಹುಡುಕಲೆತ್ನಿಸುತ್ತಾರೆ. ಒಮ್ಮೊಮ್ಮೆ ಯಾವುದೋ ಒಂದು ಆಕೃತಿಯನ್ನು ಗುರುತಿಸಿ ಖಚಿತಪಡಿಸಿಕೊಳ್ಳುತ್ತಾರೆ. ಹೀಗೆಂದ ಮಾತ್ರಕ್ಕೆ ಅಮೂರ್ತ ಕಲಾವಿದನು ತನ್ನ ಕೃತಿಯಲ್ಲಿ ಯಾವುದೇ ದೃಶ್ಯ ಅಥವಾ ಆಕೃತಿಯ ಸೃಷ್ಟಿಯ ಉದ್ದೇಶ ಇಟ್ಟುಕೊಂಡಿರದಿದ್ದರೂ ನೋಡುಗರು ಅದರಲ್ಲಿ ಪ್ರತಿಮೆಯನ್ನು, ಆಕೃತಿಯನ್ನು ಅಥವಾ ಕೆಲವು ವಸ್ತುಳನ್ನು ನೋಡಲು ಹವಣಿಸಿದರೆ ಅದೇನು ಅಂಥ ಅಪರಾಧವೇನಲ್ಲ. ಆದರೆ ಹಾಗೆ ನಿರ್ದಿಷ್ಟವಾದ ವಸ್ತುಗಳನ್ನು ಮಾತ್ರ ಗುರುತಿಸಿ ನೋಡಲು ಯತ್ನಿಸುವವರು ಆ ಕಲಾಕೃತಿ ಧ್ವನಿಸಬಹುದಾದ ಇನ್ನೂ ಹೆಚ್ಚಿನ ಅರ್ಥಸಾಧ್ಯತೆಯನ್ನು ಕಂಡುಕೊಳ್ಳುವ ಅವಕಾಶಕ್ಕೆ ಎರವಾಗುತ್ತಾರೆ.

'ಅಮೂರ್ತ ಕಲಾಕೃತಿಯೊಂದನ್ನು ವೀಕ್ಷಿಸುವಾಗ ಅದರಲ್ಲಿ ಅವರು ಗುರುತಿಸಿ ಹೆಸರಿಸ-ಬಹುದಾದ ಒಂದು ಆಕೃತಿಯನ್ನೋ, ಹೂವನ್ನೋ ಅಥವಾ ಭೂದೃಶ್ಯವನ್ನೋ- ಹೀಗೆ ಒಂದು ಮೂರ್ತ ವಸ್ತುವನ್ನು ಪ್ರತಿನಿಧಿಸುವ ಸಾಧನವನ್ನಾಗಿ ಆ ಕಲಾಕೃತಿಯನ್ನು ಮಾರ್ಪಡಿಸುವುದರಲ್ಲಿಯೇ ತಮ್ಮ ಶಕ್ತಿಯನ್ನು ವ್ಯಯ ಮಾಡುವ ಪ್ರೇಕ್ಷಕರು ಆ ಕಲಾಕೃತಿಯ ಅನಂತ ಅರ್ಥ ಶ್ರೀಮಂತಿಕೆಯಿಂದ ವಂಚಿತರಾಗಿರುತ್ತಾರೆ.'

ಒಂದು ಚಿತ್ರಕಲಾ ಕೃತಿಯನ್ನು ನೋಡಿದಾಗ ವಸ್ತುತಃ ನಾವು ಕಾಣುವುದೇನು? ಬಣ್ಣ, ರೂಪ, ಆಕೃತಿ, ಗೆರೆ, ಮೈವಳಿಕೆ-ಮುಂತಾದವುಗಳೆಲ್ಲವೂ ಭೌತಿಕಾಂಶಗಳಾಗಿದ್ದು, ಅವು ಒಗ್ಗೂಡಿ ಒಂದು ಪ್ರತಿಮೆಯನ್ನು ರೂಪಿಸುತ್ತವೆ. ದಟ್ಟ, ಕಪ್ಪು ಹಾಗೂ ಭಾರವಾದ ರೂಪಗಳ ಆಯ್ಕೆ ನಮ್ಮ ಮೇಲೆ ವಿಷಣ್ಣಭಾವದ ಛಾಯೆಯನ್ನು ಅಚ್ಚೊತ್ತಬಹುದು. ಹಗುರವಾದ, ಉತ್ಸಾಹ ಉಕ್ಕಿಸುವ, ಅನಿರ್ವಚನೀಯ, ಆತ್ಮವಿಶ್ವಾಸ ಒಸರಿಸುವ ಪ್ರತಿಮೆಗಳು ನಿಗೂಢತೆಯ ಅನುಭವವನ್ನು ತಂದುಕೊಡಬಹುದು. ಸಂತುಲಿತ, ಸಮಸ್ಥಿತಿಯ, ಸಂಯಮದ ರೂಪಗಳು ನಮ್ಮೊಳಗೆ ಶಾಂತಿಯ ಭಾವವನ್ನು ಸ್ಫುರಿಸಬಹುದು.

ರೂಪ, ಆಕಾರ, ಬಣ್ಣ ಮತ್ತು ಗೆರೆಗಳು ತಮ್ಮೊಳಗೇ ಮತ್ತು ತಮ್ಮದೇ ಆದ ಅರ್ಥವನ್ನು ಹೊಮ್ಮಿಸಬಲ್ಲವು. ಈ ಎಲ್ಲವೂ ನಾವು ಗುರುತಿಸಿ ಗ್ರಹಿಸಬಹುದಾದ ವಸ್ತುವೊಂದನ್ನು ಸೃಷ್ಟಿಸದೇ ಇದ್ದಾಗ್ಯೂ ನಾವು ಈ ಎಲ್ಲ ಅಂಶಗಳೆಡೆಗೆ ಭಾವನಾತ್ಮಕವಾಗಿ ಪ್ರತಿಕ್ರಿಯಿಸುತ್ತೇವೆ. ಇಂಥ ಪ್ರಗಾಢವಾದ ಕೆಂಪು ವರ್ಣದಲ್ಲಿ ಚಿತ್ರಿಸಲ್ಪಟ್ಟ ಒರಟು-ಒರಟಾದ ವಕ್ರೋಪವಕ್ರವಾದ ರೂಪಗಳು ನಮ್ಮೊಳಗೆ ಎಬ್ಬಿಸಬಹುದಾದ ಭಾವನೆಗಳು ಒಂದು ರೀತಿಯವಾಗಿದ್ದರೆ, ಬಹು ಮಾರ್ದವತೆಯಿಂದ ಕೂಡಿದ ಹಳದಿ ಮತ್ತು ಬಿಳಿ ಬಣ್ಣಗಳಲ್ಲಿ ಚಿತ್ರಿಸಲಾದ ವೃತ್ತೀಯ ವಕ್ರವಿನ್ಯಾಸಗಳು ಇದಕ್ಕಿಂತ ತೀರ ಭಿನ್ನವಾದ ಅನುಭವವನ್ನು ನೀಡುತ್ತವೆ.

ಕಲಾವಿದನ ಇನ್ನೊಂದು ಸಾಧನ-ಸಲಕರಣೆಯೆಂದರೆ, ಅವಕಾಶ ಅಥವಾ ಅವಕಾಶದ ಭ್ರಮೆಯನ್ನು ನಿರ್ಮಿಸುವ ಕಲಾಕೌಶಲ್ಯ. ಒಂದು ಅಮೂರ್ತ ಕಲಾಕೃತಿಯನ್ನು ವೀಕ್ಷಿಸುವಾಗ ಭೂದೃಶ್ಯದ ರಸಾನುಭೂತಿಯ ಸಂದರ್ಭದಲ್ಲಿ ಸಂಭವಿಸುವಂತೆಯೇ ನಾವು ತ್ರಿ-ಆಯಾಮದ ಅವಕಾಶದ ಆಚೆಗೆ ಸೆಳೆಯಲ್ಪಡುತ್ತೇವೆಯೇ? ಆ ಕಲಾಕೃತಿಯ ಚೌಕಟ್ಟಿನಾಚೆಗೆ ಎಳೆಯಲ್ಪಡುತ್ತೇವೆಯೇ? ಎಂಬುದು ಇನ್ನೊಂದು ಮಹತ್ವದ ಪ್ರಶ್ನೆ. ಕಲಾವಿದನು ತನ್ನ ಕೌಶಲ್ಯದ ಸಾಧನವನ್ನು ಬಳಸಿ ಆಳದ ಪರಿಪ್ರೇಕ್ಷದ ಘನರೂಪಾಕೃತಿಯ ಅಷ್ಟೇ ಅಲ್ಲ, ಇತರ 'ಅವಕಾಶದ' ಸಂಬಂಧಗಳನ್ನು ಸೃಷ್ಟಿಸಿ ನಿಯಂತ್ರಿಸುತ್ತಾನೆ. ಒಂದು ಕಲಾಕೃತಿಯ ಒಟ್ಟು ಸಂಯೋಜನೆ

ಅಥವಾ ವಿನ್ಯಾಸವು ವೀಕ್ಷಕರ ದೃಷ್ಟಿಗೆ ಮಾರ್ಗದರ್ಶನ ಮಾಡುತ್ತದೆ. ನೀವು ಎಂದಾದರೊಮ್ಮೆ ಒಂದು ಪೇಂಟಿಂಗ್ ಅಥವಾ ಫೋಟೋಗ್ರಾಫ್ ನೋಡಿ ಅದರ ಒಟ್ಟು ಸಂತುಲನೆ ತಾಳತಪ್ಪಿದೆ ಎಂಬ ಭಾವಕ್ಕೆ ಪಕ್ಕಾಗಿದ್ದೀರಾ? ಒಬ್ಬ ನುರಿತ ಫೋಟೋಗ್ರಾಫರ್‌ನ ಕೃತಿಯ ಸಂಯೋಜನೆಯ ಗುಣಕ್ಕೂ ಹವ್ಯಾಸಿ ಫೋಟೋಗ್ರಾಫರ್‌ನ ಚಿತ್ರದಲ್ಲಿ ಕಂಡುಬರುವ ಸಂಯೋಜನೆಯ ಗುಣಕ್ಕೂ ಭಾರೀ ವ್ಯತ್ಯಾಸವಿರುವುದನ್ನು ಗಮನಿಸಬಹುದು. ವೃತ್ತಿಪರತೆಯ ತಜ್ಞ ಫೋಟೋಗ್ರಾಫರ್ ತಾನು ಸೆರೆ ಹಿಡಿಯುವ ಚಿತ್ರದಲ್ಲಿ ಸಂಯೋಜನೆಯ ಸಂತುಲನೆ ಏರುಪೇರಾಗದಂತೆ ಎಚ್ಚರವಹಿಸಿರುತ್ತಾನೆ. ಆದರೆ ಹವ್ಯಾಸಿ ಫೋಟೋಗ್ರಾಫರ್‌ನಲ್ಲಿ ಈ ಎಚ್ಚರದ ಗೈರುಹಾಜರಿಯಿಂದಾಗಿ ಅವನು ಸೃಷ್ಟಿಸಿದ ಕೃತಿ ಸಂತುಲನೆ, ಸಮ್ಮಿತಿಗಳನ್ನು ಕಳೆದುಕೊಳ್ಳುತ್ತದೆ. ಪರಿಣಾಮವಾಗಿ ಆ ಸಂಯೋಜನೆಯ ವಿನ್ಯಾಸ ವಿರೂಪಗೊಳ್ಳುತ್ತದೆ. ಸಂಯೋಜನೆಯು ಕಲಾವಿದ್ಯಾರ್ಥಿಗೆ ಕಲಿಸಲ್ಪಡುವ ಹಲವಾರು ಮೂಲಭೂತ ಸಾಧನಗಳಲ್ಲಿ ಒಂದು. ಅದರ ಉದ್ದೇಶ ಚಾಕ್ಷುಷ ಅಂಶಗಳ (*Visual Elements*) ಸಂತುಲನೆ ಸಾಧಿಸುವ ಕಲೆಯನ್ನು ಕರಗತಗೊಳಿಸುವುದು. ಯಾವುದೇ ಸಂಯೋಜನೆಯಲ್ಲಿ ಸಂತುಲನೆ ತುಸು ತಾಳ ತಪ್ಪಿದರೂ ಸಾಕು, ಕಲಾಕೃತಿ ಬೇಜಾರಿನ ಆಗರವಾಗುತ್ತದೆ. ಕಲಾಕೃತಿಯ ಎಡ–ಬಲ, ತಳ–ತುದಿ ಎಲ್ಲವೂ ಕಿಂಚಿತ್ ದೋಷವಿಲ್ಲದ ಸಂತುಲನೆಯನ್ನು ಸಮ್ಮಿತಿಯನ್ನು ಸಾಧಿಸಿದರೆ ಅದು ಅತುಲಾಸಕ್ತಿಯ ಆಕರವಾಗುತ್ತದೆ.

ಯಾವುದೇ ಒಂದು ಸಂಯೋಜನೆಯಲ್ಲಿ ನಿರ್ದುಷ್ಟತೆಯನ್ನು ಸಾಧಿಸುವುದು ಅಥವಾ ಗತಿಶೀಲ ಕರ್ಷಣವನ್ನು (*Dynamic Tension*) ಕಾಯ್ದುಕೊಳ್ಳುವುದೂ ಕೂಡ ಪೇಂಟರ್‌ನ ಆದ್ಯ ಕರ್ತವ್ಯವಾಗಿರುತ್ತದೆ. ಉದಾಹರಣೆಗೆ; ಒಂದು ಕ್ಯಾನವಾಸಿನ ಮೇಲೆ ಮೂಡಿನಿಂತ ಕಲಾಕೃತಿಯ ಎಡತಳದ ಮೂಲೆಯ ಮೇಲೆ ಒಂದು ನೀಲಿ ಬ್ರಶ್ ಸ್ಟ್ರೋಕ್ ಸೇರಿಸಿದರೆ, ಒಡನೆಯೇ ಆ ಕ್ಯಾನವಾಸಿನ ಬಲ ಮೇಲ್ತುದಿಯ ಮೂಲೆಯಲ್ಲಿ ಯಾವುದೋ ಒಂದು ಸೂಕ್ತ ಬದಲಾವಣೆಯನ್ನು ಮಾಡಬೇಕಾಗುತ್ತದೆ. ನಾವು ಯಾವುದೇ ಒಂದು ಸಂಯೋಜನೆಯನ್ನು ವೀಕ್ಷಿಸುವಾಗ ಇಡೀ ಕ್ಯಾನವಾಸಿನಲ್ಲಿರುವ ಎಲ್ಲವನಸ್ನೂ ಬದಿಗಿರಿಸಿ ಒಂದೇ ಭಾಗದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುವುದಿಲ್ಲ. ನಾವು ಇಡೀ ಕಲಾಕೃತಿಯನ್ನು ಸಮಗ್ರವಾಗಿಯೇ ನೋಡಿ ಒಟ್ಟಂದದಲ್ಲಿ ಗ್ರಹಿಸುತ್ತೇವೆ.

ಶಕ್ತಿಯೆಂಬ (*Energy*) ಪರಿಕಲ್ಪನೆಯೊಂದು ಕಲೆಯ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿದೆ. ಈ ಶಕ್ತಿಯೇ ಎಲ್ಲ ಒಳ್ಳೆಯ ಕಲೆಯ ಜೀವದ್ರವ್ಯವಾಗಿರುತ್ತದೆ. ಆದರೆ ಈ ಶಕ್ತಿಯನ್ನು ಸುಲಭವಾಗಿ ನಿರೂಪಿಸಲಾಗುವುದಿಲ್ಲ. ವಾಸ್ತವವಾಗಿ ಒಂದು ಚಿತ್ರಕಲಾಕೃತಿಗೆ ಜೀವಂತಿಕೆಯನ್ನು ತಂದುಕೊಟ್ಟು ಅದು ನಮ್ಮೊಂದಿಗೆ ಮಾತಾಡುವಂತೆ ಮಾಡುವುದೇ ಈ ಶಕ್ತಿ. ಅಷ್ಟೇಯಲ್ಲ ಈ ಶಕ್ತಿಯೇ ಒಬ್ಬ

ಕಲಾವಿದನ ಕಲಾಕೃತಿಗೆ ಸ್ವೋಪಜ್ಞತೆಯನ್ನು ಪ್ರಧಾನಿಸುತ್ತದೆ. ಮಿಗಿಲಾಗಿ ಅದು ಒಬ್ಬ ಕಲಾವಿದನ ಕಲಾಕೃತಿಗೆ ಅನನ್ಯತೆಯ ಗುಣಲಕ್ಷಣಗಳನ್ನು ಸಮನಿಸುತ್ತದೆ. ಹಾಗಾದರೆ ಈ ಶಕ್ತಿಯ ಉಗಮ ಆಗುವುದಾದರೂ ಎಲ್ಲಿಂದ? ಶಕ್ತಿಯ ಸೃಷ್ಟಿಯ ಪ್ರಕ್ರಿಯೆ ಹಾಗೂ ಪರಿಕರಗಳು ಯಾವುವು? ಎಂಬ ಪ್ರಶ್ನೆಗಳೇಳುವುದು ಸಹಜ. ಕಲಾವಿದನ ವಸ್ತುಗಳು ಹಾಗೂ ಸಲಕರಣಗಳೇ ಶಕ್ತಿಯನ್ನು ಸೃಜಿಸುತ್ತವೆ. ಈ ವಿದ್ಯಮಾನದಲ್ಲಿ ಅಂತಿಮ ಸೃಷ್ಟಿಯಾಗುವ ಕಲಾಕೃತಿಯು ಅದರ ಸೃಷ್ಟಿಗೆ ಬಳಸಲಾಗಿರುವ ಸಾಧನ ಹಾಗೂ ವಿವಿಧ ಅಂಗಗಳ ಒಟ್ಟು ಮೊತ್ತಕ್ಕಿಂತಲೂ ಭಿನ್ನವಾಗಿರುತ್ತದೆ. ಇದನ್ನು ಸಂಗೀತದ ನಿದರ್ಶನದೊಂದಿಗೆ ಸ್ಪಷ್ಟಪಡಿಸಿಕೊಳ್ಳಬಹುದು. ಒಂದು ಸಂಗೀತದ ಸಂಯೋಜನೆಯು ಅದರ ಅಂಗಗಳಾಗಿರುವ ಸ್ವರಗಳ ಮೊತ್ತವಲ್ಲ. ಅಂತೆಯೇ ಒಂದು ಕಲಾಕೃತಿಯು ಅದರ ನಿರ್ಮಾಣಕ್ಕೆ ಬಳಸಲಾಗಿರುವ ಹಲವು ಪರಿಕರ, ಸಾಧನ-ಸಲಕರಣೆಗಳ ಅಂತಿಮ ಮೊತ್ತವಲ್ಲ. ಅದು ಈ ಮೊತ್ತಕ್ಕಿಂತ ಭಿನ್ನವಾಗಿರುತ್ತದೆ ಮತ್ತು ಮಿಗಿಲಾಗಿರುತ್ತದೆ. ಆದ್ದರಿಂದ ನಾವು ಒಂದು ಅಮೂರ್ತ ಚಿತ್ರಕೃತಿಯನ್ನು ನೋಡುವಾಗ ಒಮ್ಮೇಲೇ ನಾವು ಗುರುತಿಸಿ ಗ್ರಹಿಸಬಹುದಾದ ಯಾವುದೋ ಒಂದು ರೂಪ ಅಥವ ಆಕೃತಿ, ವ್ಯಕ್ತಿ ಅಥವಾ ವಸ್ತುವಿನ ಹುಡುಕಾಟಕ್ಕೆ ತೊಡಗಬಾರದು. ನಮಗೆ ಚಿರಪರಿಚಿತವಾಗಿರುವ ಈ ಪ್ರಪಂಚದಲ್ಲಿಯ ವಸ್ತು ವಿಶೇಷಗಳ ಪ್ರತಿಕೃತಿಯೊಂದನ್ನು ಅಮೂರ್ತ ಚಿತ್ರದಲ್ಲಿ ಶೋಧಿಸಲು ಹವಣಿಸಬಾರದು. ಬದಲಾಗಿ ಕಲಾವಿದನು ಸೃಷ್ಟಿಸಿರುವ ಹೊಸ ಪ್ರಪಂಚದೊಳಗೆ ಸುಮ್ಮನೆ ಹೊಕ್ಕುಬಿಡಬೇಕು ಅಥವಾ ಹಾಗೆ ಒಳತೂರಿಕೊಂಡು ಹೋಗಲು ಯತ್ನಿಸಬೇಕು. ಪ್ರವೇಶ ದೊರೆತೊಡನೆಯೇ ನಿರಂಬಳರಾಗಿ ಸಾವಧಾನ ಚಿತ್ತದಿಂದ ಅನವಸರದ ಗತಿಯಲ್ಲಿ ಚಿತ್ರದ ಮೇಲ್ಮೈಯುದ್ದಗಲಕ್ಕೂ ದೃಷ್ಟಿಯನ್ನು ಹರಿದಾಡಿಸಬೇಕು. ಅಲ್ಲಿ ದೃಗ್ಗೋಚರವಾಗುವ ವೈವಿಧ್ಯಮಯ ಬಣ್ಣ, ರೂಪ, ಆಕೃತಿ ಹಾಗೂ ಸೂಕ್ಷ್ಮ ನೇಯ್ಗೆಯ ಮೈವಳಿಕೆಗಳನ್ನು ನೇರವಾಗಿ ನಮ್ಮೊಳಗೆ ತುಂಬಿಕೊಳ್ಳಬೇಕು. ಅವುಗಳಿಗೆ ಹೃನ್ಮನಗಳಿಂದ ಪ್ರತಿಕ್ರಿಯಿಸಬೇಕು. ಆ ಚಿತ್ರ ಸೃಷ್ಟಿಸುವ ಅವಕಾಶದ ಭ್ರಮೆಯೆಡೆಗೆ ಆಕರ್ಷಿತರಾಗಿ ಅಲ್ಲಿಯ ಗೆರೆಗಳ ಕ್ರಿಯೆ ಹಾಗೂ ಬಣ್ಣ ಸೃಷ್ಟಿಸುವ ಭಾವದ ಪರಿಸರದಲ್ಲಿ ಮುಳುಗಬೇಕು. ನಂತರ ನಾಲ್ಕಾರು ಹೆಜ್ಜೆ ಹಿಂದೆ ಸರಿದು ದೂರದಿಂದ ಆ ಕಲಾಕೃತಿಯೆಡೆಗೆ ಮತ್ತೊಮ್ಮೆ ತದೇಕಚಿತ್ತದಿಂದ ದಿಟ್ಟಿಸಬೇಕು. ಈಗ ಆ ಇಡೀ ಕಲಾಕೃತಿ ನಮ್ಮ ಭಾವಕೋಶದ ಮೇಲೆ ಉಂಟುಮಾಡುವ ಪರಿಣಾಮವನ್ನು ಪ್ರಥಕ್ಕರಿಸುವ ಗೋಜಿಗೆ ಹೋಗದೇ ಅದರ ಸಮಗ್ರ ಸಾವಯವದ ರಸಾನುಭೂತಿಗೆ ಯತ್ನಿಸಬೇಕು.

ಕ್ರಮೇಣ ಸಾವಕಾಶವಾಗಿ ಮುಂದಡಿಯಿಡುತ್ತಾ ಆ ಕಲಾಕೃತಿಯ ಉದ್ದಗಲಕ್ಕೂ ಕಾಣಸಿಗುವ ಬ್ರಶ್ ಸ್ಟ್ರೋಕ್‌ಗಳ ಸಂಕೀರ್ಣ ಸೂಕ್ಷ್ಮತೆಗಳನ್ನು ಶೋಧಿಸಬೇಕು. ಪೇಂಟಿನ ದಪ್ಪತನ ಹಾಗೂ

ಸಂಯೋಜನೆಯ ವಿವರಗಳನ್ನು ಪರಿವೀಕ್ಷಿಸಬೇಕು. ವಿವಿಧ ಭಾಗಗಳನ್ನು ಒಗ್ಗೂಡಿಸಿ ಪರಸ್ಪರ ಹೆಣೆದು, ನೇಯ್ದು ಹೇಗೆ ಒಂದು ಇಡೀ ಕಲಾಕೃತಿಯನ್ನು ಸೃಷ್ಟಿಸಲಾಗಿದೆ ಎಂಬುವುದನ್ನು ಗುರುತಿಸಬೇಕು. ಈ ಪ್ರಕ್ರಿಯೆಯಲ್ಲಿ ಮುಖ್ಯವಾದ ಸಂಗತಿಯೆಂದರೆ, ಕಾಲ. ಒಂದು ಅಮೂರ್ತ ಕಲಾಕೃತಿಯನ್ನು ನೋಡಿ ಆಸ್ವಾದಿಸಲು, ಅರ್ಥೈಸಿಕೊಳ್ಳಲು ಸಾಕಷ್ಟು ಸಮಯ ಬೇಕು. ಒಂದೇ ಹೊಳಹಿನಲ್ಲಿ ನೋಡಿ ಒಂದು ಕಲಾಕೃತಿಯನ್ನು ಅರ್ಥಮಾಡಿಕೊಳ್ಳಲಾಗದು. ಇನ್ನು ಅದರ ಆಂತರ್ಯದ ರಸಾನುಭೂತಿಯ ಮಾತಂತೂ ದೂರವೇ ಉಳಿಯಿತು. ಒಂದು ಉತ್ತಮ ಕಲಾಕೃತಿಯು ನಮ್ಮ ಕಣ್ಣಿನ ಮೂಲಕ ಒಳನುಸುಳಿ ಕ್ರಮೇಣ ಆಳಕ್ಕೆ ಇಳಿದು, ಅದು ಒಳಗಿನಿಂದಲೇ ಬೆಳೆಯುತ್ತಾ ವಿಶಿಷ್ಟ ಅನುಭವವಾಗಿ ಹೊರಹೊಮ್ಮಬೇಕು. ಒಂದು ಕಲಾಕೃತಿಯನ್ನು ನೋಡಿದಷ್ಟೂ ಅದರ ಬಗ್ಗೆ ನಮ್ಮ ಆಸಕ್ತಿ ವರ್ಧಿಸಬೇಕು. ಅದರ ಕುರಿತಿರುವ ನಮ್ಮ ರುಚಿ ಅಭಿರುಚಿಗಳು ತಮ್ಮ ಉತ್ಕಟಾವಸ್ಥೆಗೆ ತಲುಪಿದಾಗಲೇ ನಾವು ಆ ಕಲಾಕೃತಿ ಕೊಡಬಹುದಾದ ಪರಮಾನಂದಕ್ಕೆ ಭಾಜನರಾಗುತ್ತೇವೆ. ಇದು ಸಾಧ್ಯವಾಗಬೇಕಾದರೆ ನಾವು ಆ ಕಲಾಕೃತಿಯೊಂದಿಗೆ ಉಳಿಯಬೇಕು. ಆಗಲೇ ಅದು ನಮ್ಮೊಳಗೆ ಬೆಳೆಯುತ್ತದೆ. ಇಷ್ಟಾಗಿಯೂ ಅಮೂರ್ತ ಚಿತ್ರಕಲಾಕೃತಿಗಳಲ್ಲಿ ಪ್ರಾಣಿ, ಪಕ್ಷಿ, ಗಿಡ, ಮರಗಳು ಅವ್ಯಕ್ತ ರೂಪದಲ್ಲಿ ಮೂಡಿಬರಬಹುದು. ಹಾಗೆ ಮೂಡಿದಾಗ ಅದರಲ್ಲಿ ಅಸಹಜವಾದುದ್ದೇನೂ ಇರುವುದಿಲ್ಲ. ಅದು ಆಕಾಶದಲ್ಲಿ ಯಾವುದೇ ನಿರ್ದಿಷ್ಟ ರೂಪ, ಆಕೃತಿಗಳಿಲ್ಲದ ಮೋಡದ ಸಮುಚ್ಚಯಗಳು ಒಮ್ಮೊಮ್ಮೆ ನಾವು ಗುರುತಿಸಿ ಗ್ರಹಿಸಬಹುದಾದ ರೂಪ, ಆಕೃತಿಗಳಷ್ಟೇ ಸಹಜ. ಆದರೆ ಈ ವಾಸ್ತವ ಪ್ರಪಂಚದಿಂದ ನಮ್ಮ ದೃಷ್ಟಿಯ ಬೇರುಗಳನ್ನು ಕಿತ್ತಿ ಕಲಾವಿದನು ಸೃಷ್ಟಿಸಿದ ಪ್ರಪಂಚದಲ್ಲಿ ನೆಟ್ಟರೆ ಅಮೂರ್ತ ಕಲಾಕೃತಿಯೊಂದು ನಾವು ಎಂದೂ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಅರ್ಥ ಸಾಧ್ಯತೆಯ ಹೊನಲನ್ನೇ ಹರಿಸಿಬಿಡಬಲ್ಲದು.

ಅಮೂರ್ತ ಚಿತ್ರಕಲೆಯನ್ನು ಅರ್ಥ ಮಾಡಿಕೊಳ್ಳುವ ಹಾದಿ ಹಲವಾರು. ಹಾಗೆ ನೋಡಿದರೆ ಅಮೂರ್ತ ಕಲೆಯ ಅರ್ಥಗ್ರಹಣದ ಪ್ರಕ್ರಿಯೆ ಅಷ್ಟು ಸಂಕೀರ್ಣವಾದುದ್ದೇನಲ್ಲ. ಒಂದರ್ಥದಲ್ಲಿ ಅದು ಸರಳವಾದುದ್ದೇ. ಅದಕ್ಕೆ ಬೇಕಾಗುವ ಮುಖ್ಯ ಸಂಗತಿಗಳೆಂದರೆ ಮುಕ್ತ ಮನಸ್ಸು ಹಾಗೂ ಭಾರೀ ಕಲ್ಪನಾ ಶಕ್ತಿ.

ಒಂದು ಅಮೂರ್ತ ಚಿತ್ರಕಲಾಕೃತಿಯ ಅರ್ಥದ ಕುರಿತು ಇದಮಿತ್ಥಂ ಎಂದು ಒಂದೇ ವಿವರಣೆಯನ್ನು ಕೊಟ್ಟು ಅದೇ ಅಂತಿಮವೆಂದು ಹೇಳಲಾಗದು. ಯಾವುದೇ ಅಮೂರ್ತ ಕೃತಿಯ ಅರ್ಥದಲ್ಲಿ ಸರಿಯಾದ ಅರ್ಥ ಅಥವಾ ತಪ್ಪಾದ ಅರ್ಥ ಎನ್ನುವುದಕ್ಕೆ ಅವಕಾಶವಿರುವುದಿಲ್ಲ. ಅಮೂರ್ತ ಕಲೆಯ ಬಗೆಗಿನ ಅತ್ಯಂತ ಸುಂದರ ಹಾಗೂ ಮನೋಹರವಾದ

ಸಂಗತಿಯೆಂದರೆ ಆ ಕಲೆಯ ಸಂದರ್ಭದಲ್ಲಿ ಹಲವಾರು ನಿರೂಪಣೆ ಹಾಗೂ ವ್ಯಾಖ್ಯಾನಗಳಿಗೆ ಮುಕ್ತ ಅವಕಾಶವಿರುತ್ತದೆ. ಪ್ರತಿಯೊಬ್ಬ ನೋಡುಗನು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿರುತ್ತದೆ. ಯಾಕೆಂದರೆ ಯಾವುದೇ ಅಮೂರ್ತ ಚಿತ್ರಕಲಾಕೃತಿಯು ದಿಗ್ಗನೆ ಜಿಗಿದೆದ್ದು, 'ಇಗೋ ನನ್ನ ಅರ್ಥ, ಇದೇ ನನ್ನ ಸತ್ವಸಾರದ ಸರ್ವಸ್ವ' ಎಂದು ಇಡೀ ಪ್ರಪಂಚಕ್ಕೆ ಸಾರಿ ಹೇಳುವುದಿಲ್ಲ. ಇದಕ್ಕೆ ಪ್ರತಿಯಾಗಿ, ಈಗಾಗಲೇ ಹೇಳಿರುವಂತೆ ಅಮೂರ್ತ ಕಲಾಕೃತಿಯ ರಸಗ್ರಹಣ ಹಾಗೂ ಅರ್ಥಗ್ರಹಿಕೆಗೆ ಮುಖ್ಯವಾಗಿ ಬೇಕಾಗುವುದು ಒಂದು ಮುಕ್ತವಾದ ಹಾಗೂ ಅದಮ್ಯ ಕುತೂಹಲಭರಿತ ಮನಸ್ಸು. ನೋಡುಗನು ಕಲಾಕೃತಿಯ ಒಳಗೆ ಪ್ರವೇಶಿಸಿ ಅದರ ಪ್ರಭಾವದಗುಂಟ ತೇಲುತ್ತಾ ಅದು ಒಯ್ದೆಡೆಗೆ ಹೋಗುವ ಸಮರ್ಪಣಾ ಭಾವದ ನಿಲುವು ತಳೆಯಬೇಕು. ಅಮೂರ್ತ ಕಲಾಕೃತಿಯು ಅದರ ಕುರಿತು ನಾವು ನಮ್ಮದೇ ಆದ ರೀತಿಯಲ್ಲಿ ಶೋಧನೆಗೆ ತೊಡಗಲು ವಿಪುಲ ಸ್ವಾತಂತ್ರ್ಯ ಒದಗಿಸುತ್ತದೆ. ಹಾಗಾಗಿ ನಾವು ನಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಗ್ರಹಿಸಿ ನಮ್ಮ ಸ್ವಂತದ ಅರ್ಥವನ್ನು ಅದಕ್ಕೆ ಕೊಡಬಹುದು.

ಇದೊಂದು ಅತ್ಯಂತ ತೀವ್ರವಾದ ವೈಯಕ್ತಿಕ ಪ್ರಕ್ರಿಯೆ. ಪರಿಣಾಮವಾಗಿ ಈ ಪ್ರಕ್ರಿಯೆಯೂ ಕಲಾಕೃತಿಯ ಬಗ್ಗೆ ನೋಡುಗನ ಅನುಭವದ ಸಿರಿಯನ್ನು ಸಂವರ್ಧಿಸುತ್ತದೆ. ಹೀಗೆಂದ ಮಾತ್ರಕ್ಕೆ ಒಂದು ಅಮೂರ್ತ ಚಿತ್ರಕಲಾಕೃತಿಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬಹುದೆಂಬುದು ಇದರ ಅರ್ಥವಲ್ಲ. ಯಾಕೆಂದರೆ ಅಮೂರ್ತ ಕಲಾಕೃತಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿ, ಸಾಮರ್ಥ್ಯ ಪ್ರತಿಯೊಬ್ಬರಲ್ಲೂ ಸಹಜವಾಗಿಯೇ ಇಳಿದು ಬಂದಿರುವುದಿಲ್ಲ. ಆದ್ದರಿಂದಲೇ ಕೆಲವು ಜನರು ಅಮೂರ್ತ ಕಲಾಕೃತಿಯೊಂದನ್ನು ನೋಡಿ ತಲೆ ಕೆರೆದುಕೊಂಡು ಕೊನೆಗೂ ಅದರ ತಳಬುಡ ಗೊತ್ತಾಗದೇ ಇದ್ದಾಗ, 'ಇದರಲ್ಲೇನು ಮಹಾ ಇದೆ? ನಮ್ಮ ಐದು ವರ್ಷದ ಹುಡುಗ ಇದಕ್ಕಿಂತಲೂ ಚೆನ್ನಾಗಿ ಬಣ್ಣ ಬಳಿಯಬಲ್ಲ' ಎಂದು ಜಿಗುಪ್ಸೆಯಿಂದ ಮೂಗು ಮುರಿಯಬಹುದು.

ಸಾಮಾನ್ಯವಾಗಿ ಜನರು ಅರ್ಥಮಾಡಿಕೊಳ್ಳದ ಅಥವಾ ತಪ್ಪಾಗಿ ಅರ್ಥ ಮಾಡಿಕೊಳ್ಳುವ ಸಂಗತಿಯೊಂದಿದೆ. ಅದೇನಂದರೆ ಅತ್ಯುತ್ತಮ ಅಮೂರ್ತ ಚಿತ್ರಕಲಾವಿದರು ಸಾಮಾನ್ಯರಲ್ಲ, ಅವರು ಅಸಾಮಾನ್ಯರು, ಅನನ್ಯ ಪ್ರತಿಭಾವಂತರು; ಶ್ರೇಷ್ಠ ಡ್ರಾಯಿಂಗ್ ಕೌಶಲ್ಯ, ಸಂಯೋಜನೆಯ ಸೂಕ್ಷ್ಮಾತಿಸೂಕ್ಷ್ಮ ಪ್ರಜ್ಞೆ ಮತ್ತು ಬಣ್ಣ ಬೆಳಕುಗಳ ಆಳವಾದ ಜ್ಞಾನುಳ್ಳವರಾಗಿರುತ್ತಾರೆ ಎಂಬುದು ಬಹಳ ಜನರಿಗೆ ಗೊತ್ತಿರುವುದಿಲ್ಲ.

ನಿಜವೆಂದರೆ ಬಹುಸಂಖ್ಯಾತ ಅಮೂರ್ತ ಚಿತ್ರಕಲಾವಿದರು ವಾಸ್ತವ ಚಿತ್ರಗಳ ಶ್ರೇಷ್ಠ ಪರಿಣತಿಯನ್ನು ಪಡೆದುಕೊಂಡಿರುತ್ತಾರೆ. ವಾಸ್ತವವಾದಿ ಪರಂಪರೆಯಲ್ಲಿ ಒಂದು ಗುಲಾಬಿಯ

ಚಿತ್ರವನ್ನೋ ಅಥವಾ ಒಬ್ಬ ವ್ಯಕ್ತಿಯ ಭಾವಚಿತ್ರವನ್ನೋ ರಚಿಸಲು ಮನಸ್ಸು ಮಾಡಿದರೆ ಅವು ವಾಸ್ತವಕ್ಕೆ ಅದ್ಭುತ ಕನ್ನಡಿ ಹಿಡಿದಂತೆ ಮೆರೆಯುವ ಕಲಾಕೃತಿಗಳಾಗಬಲ್ಲವು. ಆದರೆ ಅಮೂರ್ತ ಚಿತ್ರಕಲಾವಿದರು ತಮಗಿರುವ ಆ ಸಾಮರ್ಥ್ಯವನ್ನು ಬದಿಗಿರಿಸಿಯೇ ಅಮೂರ್ತ ಕಲಾಕೃತಿಗಳ ರಚನೆಗೆ ತೊಡಗುತ್ತಾರೆ. ವಾಸ್ತವದ ಬದಲಾಗಿ ತಮ್ಮ ಸೃಜನಶೀಲ ಶಕ್ತಿಯನ್ನು ಸಾಕಷ್ಟು ಹಿಗ್ಗಿಸುತ್ತಾ ಹೊಸ ಚಾಕ್ಷುಷ ಅನುಭವ ನೀಡಬಲ್ಲ ಅನನ್ಯ ಪ್ರಭವದ ಅಮೂರ್ತ ಕೃತಿಯ ರಚನೆಗೆ ಕೈ ಹಾಕುತ್ತಾರೆ.

ಅಮೂರ್ತ ಕಲೆಯ ವಿಶಿಷ್ಟತೆಯೆಂದರೆ ಅದು ನೋಡುಗರೊಳಗೆ ಏಕ್‌ದಮ್ ಉಮ್ಮಳಿಸುವ ಒಂದು ತಳಮಳವನ್ನು ಸೃಷ್ಟಿಸುತ್ತದೆ. ಯಾಕೆಂದರೆ ನೋಡಿದೊಡನೇ ತಟ್ಟನೇ ಅದು ತನ್ನ ಅರ್ಥ ಸಾಧ್ಯತೆಗಳನ್ನೆಲ್ಲಾ ನೋಡುಗರ ಮುಂದೆ ಬಿಚ್ಚಿಡುವುದಿಲ್ಲ. ಆ ಕೃತಿಯ ವಸ್ತು, ವಿಷಯ ಏನಾಗಿರಬಹುದು? ಎಂಬ ಪ್ರಶ್ನೆಯ ಕಿಡಿಯನ್ನು ಭುಗಿಲೆಬ್ಬಿಸುತ್ತದೆ. ಆ ಕಡೆಯಿಂದ, ಈ ಕಡೆಯಿಂದ ನೋಡಿದರೂ ತಮ್ಮ ಗ್ರಹಿಕೆಗೆ ನಿಲುಕದೇ ಇದ್ದಾಗ ಆ ಕೃತಿಯು ಯಾವುದೇ ಒಂದು ನಿರ್ದಿಷ್ಟ ವಸ್ತು ಅಥವಾ ವಿಷಯದ ಬಗ್ಗೆ ಇರಲಿಕ್ಕಿಲ್ಲವೆಂದು ಭಾವಿಸಿ ನಿರ್ಲಿಪ್ತರಾಗುತ್ತಾರೆ. ಇದಕ್ಕೆ ಮೂಲ ಕಾರಣ ಆ ಕಲಾಕೃತಿಯಲ್ಲಿ ಅವರು ತಮಗೆ ಈಗಾಗಲೇ ಪರಿಚಿತರವಿರುವ ಯಾವುದಾದರೊಂದು ವಸ್ತುವಿನ ರೂಪ–ಆಕೃತಿಯನ್ನು ಹುಡುಕಲಾರಂಭಿಸಿರುತ್ತಾರೆ. ಕೊನೆಗೆ ಅವರಿಗೆ ಏನೂ ಲಭಿಸುವುದಿಲ್ಲ. ಕಾರಣವಿಷ್ಟೆ ಅಮೂರ್ತ ಚಿತ್ರ ಕಲಾಕೃತಿಯು ನಾವು ಗುರುತಿಸಿ ಗ್ರಹಿಸಬಹುದಾದ ಮೂರ್ತ ವಸ್ತು, ವಿಷಯಗಳ ಬಗ್ಗೆ ಇರುವುದಿಲ್ಲ. ಅಂದ ಮಾತ್ರಕ್ಕೆ ಅಮೂರ್ತ ಕಲಾಕೃತಿಗೆ ಯಾವುದೇ ವಸ್ತುವಿರುವುದಿಲ್ಲ, ಅದು ಶೂನ್ಯವನ್ನು ಬಿಂಬಿಸುತ್ತದೆ ಎಂದರ್ಥವಲ್ಲ. ಶೂನ್ಯವೇ ಅಮೂರ್ತ ಕೃತಿಯ ವಸ್ತುವೆಂದು ಭಾವಿಸುವುದು ಗೊಂದಲಕ್ಕೆಡೆಮಾಡಬಲ್ಲದು. ಕೆಲವರನ್ನು ಅದು ಹೆದರಿಸಿ ಓಡಿಸಲೂಬಹುದು. ತಾವು ನೋಡುವ ಕಲಾಕೃತಿಗೆ ತಮ್ಮದೇ ಅರ್ಥಕೊಟ್ಟು ವ್ಯಾಖ್ಯಾನಿಸಲಾಗದವರು ಆ ಕಲಾಕೃತಿಯ ಭೀಕರತೆಗೆ ಭಯಪಡುವುದು ಸಹಜ.

ನಿಜವೆಂದರೆ, ಅಮೂರ್ತ ಚಿತ್ರಕಲೆಯು ವಸ್ತು ಶೂನ್ಯವಲ್ಲ. ಅದು ಯಾವುದರ ಬಗ್ಗೆಯೂ ಹೇಳುವುದಿಲ್ಲವೆಂಬುದು ಸುಳ್ಳು. ಯಾಕೆಂದರೆ ಮೂಲತಃ ಅಮೂರ್ತ ಚಿತ್ರಕೃತಿಯು ಒಂದು ರೂಪದ ಬಗ್ಗೆ ಇರಬಲ್ಲದು. ಹಾಗಾಗಿ ಅದು ರೂಪ, ಬಣ್ಣ, ಗೆರೆ, ನೇಯ್ಗೆ ಹಾಗೂ ಸಂಯೋಜನೆಯ ಒಂದು ಪ್ರಕ್ರಿಯೆಯಾಗಿರುತ್ತದೆ. ಇವೆಲ್ಲವೂ ಪ್ರಥಮತಃ ಒಂದು ಕಲಾಕೃತಿಯ ವಿಧ್ಯುಕ್ತ ಗುಣಗಳಾಗಿರುತ್ತವೆ. ಯಾಕೆಂದರೆ ಇವೆಲ್ಲವೂ ಒಗ್ಗೂಡಿಯೇ ಒಂದು ಕಲಾಕೃತಿಯ ಮಾಟ ಹಾಗೂ ನೋಟವನ್ನು ವಿವರಿಸುತ್ತವೆ. ಅಮೂರ್ತ ಕಲೆಯೆಂದರೆ ಎಲ್ಲ ವಿಧ್ಯುಕ್ತ ಗುಣಗಳ (*Formal Qualities*) ಸಂಯೋಜನೆ. ಅದಕ್ಕೆ ಅರ್ಥ ಬರುವುದೂ ಕೂಡ ಈ

ವಿಧ್ಯುಕ್ತ ಗುಣಗಳಿಂದಲೇ. ಈ ಗುಣಗಳೇ ಒಂದು ದೃಗ್ಗೋಚರ ಅನುಭವವನ್ನು ಸೃಷ್ಟಿಸಲು ಬಳಸಲ್ಪಡುತ್ತವೆ. ಒಟ್ಟಾರೆಯಾಗಿ ಹೇಳುವುದಾದರೆ ಅಮೂರ್ತ ಚಿತ್ರಕಲೆಯ ಮೂಲಕ ಒಂದು ಅರ್ಥ ಹುಡುಕುವ ಹವ್ಯಾಸದ ಹಳವಂಡದಲ್ಲಿ ಬೀಳುವುದರಿಂದಲೇ ನೋಡುಗರು ಗೊಂದಲಗೊಳ್ಳುತ್ತಾರೆ. ನಂತರ ಏನೂ ಅರ್ಥವಾಗದಿದ್ದುದಕ್ಕೆ ಗೊಣಗುಟ್ಟುತ್ತಾರೆ. ಹೀಗೆ ಗೊಣಗುಟ್ಟುವವರಿಗೆ ಪಾಬ್ಲೋ ಪಿಕಾಸೋನ ಈ ಮಾತುಗಳು ಸೂಕ್ತವಾದ ಉತ್ತರ ನೀಡಬಲ್ಲವು: 'ಪ್ರತಿಯೊಬ್ಬರೂ ಕಲಾಕೃತಿಯನ್ನು ಅರ್ಥಮಾಡಿಕೊಳ್ಳ ಬಯಸುತ್ತಾರೆ. ಅಂತೆಯೇ ಅವರು ಹಕ್ಕಿಯ ಹಾಡೊಂದನ್ನು ಅರ್ಥಮಾಡಿಕೊಳ್ಳಲು ಯಾಕೆ ಯತ್ನಿಸಬಾರದು? ಚಿತ್ರಗಳನ್ನು ವಿವರಿಸಲು ಅಥವಾ ಅವುಗಳಲ್ಲಿ ನಿರ್ದಿಷ್ಟವಾದ ಅರ್ಥ ಹುಡುಕಲು ಯತ್ನಿಸುವವರು ಸಾಮಾನ್ಯವಾಗಿ ತಪ್ಪು ದಿಕ್ಕಿನಲ್ಲಿ ಹೆಜ್ಜೆಯಿಡುತ್ತಾರೆ.'

ಪಿಕಾಸೋನ ಮಾತು ತುಂಬಾ ಅರ್ಥಗರ್ಭಿತವಾದ್ದುದು. ಯಾವುದೇ ಕಲಾಕೃತಿಯನ್ನು ಶಬ್ದಗಳ ಮೂಲಕ ಸಂಪೂರ್ಣವಾಗಿ ವಿವರಸಲಾಗುವುದಿಲ್ಲ. ಯಾಕೆಂದರೆ ಒಂದು ಕಲಾಕೃತಿಯು ಜನರ ಮೇಲೆ ಬೀರುವ ಪ್ರಭಾವ, ಉಂಟು ಮಾಡುವ ಪರಿಣಾಮ ಶಬ್ದಾತೀತವಾದುವು. ಜೊತೆಗೆ ಅವು ಅತ್ಯಂತ ವೈಯಕ್ತಿಕ ಸ್ವರೂಪದವುಗಳಾಗಿದ್ದು ಶಬ್ದಾತೀತ ಸಾಧನಗಳ ಮೂಲಕ ಮಾತಾಡುತ್ತವೆ. ಆದ್ದರಿಂದಲೇ ಕಲೆಯೆಂಬುವುದು ಅರ್ಥದ ಅರವಟ್ಟಿಗೆಯಲ್ಲ. ಬದಲಾಗಿ ಅದೂ ಒಂದು ಅನುಭವದ ಕಂತೆ. ಎಲ್ಲವನ್ನೂ ಶಬ್ದಗಳ ಮೂಲಕವೇ ಅರ್ಥ ಮಾಡಿಕೊಳ್ಳಬೇಕೆಂಬ ಹಂಬಲ ನಮ್ಮನ್ನು ಎಲ್ಲಿಗೋ ಒಯ್ದು ತಲುಪಿಸುತ್ತದೆ. ಇದಕ್ಕೆ ಪ್ರತಿಯಾಗಿ ಒಂದು ಕಲಾಕೃತಿ ಪ್ರಧಾನಿಸುವ ಅನುಭವವನ್ನು ಒಂದು ಅನುಭವವನ್ನಾಗಿಯೇ ಗ್ರಹಿಸಿ ಸ್ವೀಕರಿಸಿದರೆ ಅದು ನಮ್ಮನ್ನು ನಮ್ಮ ಅನುಭವಲೋಕದ ಉದಾತ್ತ ಮಟ್ಟಕ್ಕೇರಿಸಬಹುದು.

ಒಂದು ಅಮೂರ್ತ ಚಿತ್ರಕಲಾಕೃತಿಯೆಡೆಗೆ ನೋಡುವ ನಮ್ಮ ದೃಷ್ಟಿ ನಾವು ಸ್ವರಮೇಳ ಒಂದಕ್ಕೆ ಕಿವಿಗೊಟ್ಟು ಕೇಳುವ ಪ್ರಕ್ರಿಯೆಗೆ ಸಮನಾಗಿರಬೇಕು. ನಾವು ಒಂದು ಸಂಗೀತದ ರಾಗವನ್ನು ಆಲಿಸುವಾಗ ಅದರ ವಿವಿಧ ಸ್ವರಗಳನ್ನು ಪ್ರತ್ಯೇಕಿಸಿ ಬಿಡಿ–ಬಿಡಿಯಾಗಿ ಆಸ್ವಾದಿಸುವುದಿಲ್ಲ. ಅವು ಒಗ್ಗೂಡಿ ಒಂದು ಹೊನಲಾಗಿ ನಮ್ಮ ಮೇಲೆ ಹರಿದು ಬರುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಅದೇ ರೀತಿಯಾಗಿ ಒಂದು ಅಮೂರ್ತ ಚಿತ್ರಕಲಾಕೃತಿಯ ವಿವಿಧಾಂಗಗಳನ್ನು ಪ್ರತ್ಯೇಕಿಸಿ ನೋಡದೇ ಅದು ಇಡಿಯಾಗಿ ಹೊಮ್ಮಿಸುವ ವಿಶಿಷ್ಟ ಅನುಭವದ ಪರಿಪಾಕ ನಮ್ಮಾತ್ಮವನ್ನು ಆವರಿಸುವುದಕ್ಕೆ ಇಂಬುಗೊಡಬೇಕು. ನಮ್ಮ ಕಣ್ಣುಗಳು ಪೇಂಟಿಂಗಿನ ಉದ್ದಗಲಕ್ಕೂ ಹರಿದಾಡಬೇಕು. ಅದರ ಮೂಲೆ–ಮೂಲೆಗಳಲ್ಲೂ ಇಣುಕಬೇಕು. ಅಲ್ಲಲ್ಲಿ ಮುಂಬರಿದು ಹೊರಳಿ ತಿರುಗಬೇಕು. ಚಕ್ಕನೆ ನಿಂತು ಒಳಮುಖಿಗಳಾಗಿ ನಿರೂಪಿಸಬೇಕು. ಕಲಾಕೃತಿಯ ಮೇಲ್ಮೈಯನ್ನು

ದಾಟಿ ಅದರ ಮೈವಳಿಕೆಯನ್ನು ಸ್ಪರ್ಶಿಸುತ್ತಾ ಬಣ್ಣ, ಗೆರೆಗಳ ಆಳಕ್ಕೆ ಇಳಿಯಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಕಣ್ಣುಗಳು ಕಲಾಕೃತಿಯ ತುಂಬ ನರ್ತಿಸಬೇಕು. ಕ್ರಮೇಣ ಕಲಾಕೃತಿ ರೂಪ, ಆಕಾರ ಇತ್ಯಾದಿಗಳನ್ನು ಗ್ರಹಿಸುವ ಗೋಜಿಗೆ ಹೋಗದೇ ಅದು ನಮ್ಮ ಆಳಕ್ಕೆ ಇಳಿಸಿಕೊಳ್ಳುವ ಹವಣಿಕೆಯ ಕೈಬಿಟ್ಟು ಕಲಾಕೃತಿಯೇ ನಮ್ಮನ್ನು ತನ್ನೊಳಗೆ ಎಳೆದುಕೊಂಡು ತಲ್ಲೀನಗೊಳಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಕಲಾಕೃತಿಯಿಂದ ಏನನ್ನೂ ನಿರೀಕ್ಷಿಸದೇ ಅದು ನಮ್ಮೊಳಗೆ ಸ್ಫುರಿಸುವ ಭಾವ–ಭಾವನೆಗಳು, ಸ್ಮೃತಿ–ಸಂಸ್ಕೃತಿಗಳು ಪರಸ್ಪರ ತೆಕ್ಕೆಗೆ ಬಿದ್ದು ಹೊಸ ಅನುಭವ–ಅನುಭೂತಿ ಆವಿರ್ಭವಿಸಲು ದಾರಿ ಮಾಡಿಕೊಡಬೇಕು. ಕಲಾಕೃತಿಯ ಬಣ್ಣ, ರೂಪಗಳು, ಬಳಸಲ್ಪಟ್ಟ ಪರಿಕರಗಳು, ಅದರ ನೇಯ್ಗೆ, ಮೈವಳಿಕೆ–ಎಲ್ಲವೂ ಒಂದರೊಡನೊಂದು ಕ್ರಿಯಿಸುವುದನ್ನು ಗಮನಿಸಬೇಕು.

ಹೀಗೆ ಸಾಕಷ್ಟು ಹೊತ್ತು ಕಳೆದು ಕ್ರಮೇಣ ಆ ಕಲಾಕೃತಿ ನಮ್ಮೊಂದಿಗೆ ಸಂವಾದಕ್ಕೆ ತೊಡಗುವಂಥ ಮನೋಭೂಮಿಕೆಯನ್ನು ಸೃಷ್ಟಿಸಿಕೊಳ್ಳಬೇಕು. ಈ ರೀತಿಯಾಗಿ ನಾವು ಅಮೂರ್ತ ಕಲಾಕೃತಿಯನ್ನು ಅರ್ಥೈಸಿಕೊಳ್ಳಲು ಒಂದು ಹೊಸ ತಯಾರಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಅಮೂರ್ತ ಕೃತಿಯು ಅದರ ಹಿಂದೆಯಿರುವ ಅರ್ಥವನ್ನು ಅನ್ವೇಷಿಸುವಂತೆ ನಮ್ಮನ್ನು ಆಮಂತ್ರಿಸುತ್ತದೆ. ಆ ಆಮಂತ್ರಣಕ್ಕೆ ಓಗೊಟ್ಟು ಸ್ಪಂದಿಸುವುದೆಂದರೆ ಸಾಂಪ್ರದಾಯಿಕ ಕಲಾಕೃತಿಗಳಾದ ಸ್ಥಿರ ಚಿತ್ರಗಳು, ಭಾವಚಿತ್ರಗಳು, ಭೂದೃಶ್ಯ, ನಿಸರ್ಗದೃಶ್ಯದಂಥ ಪ್ರಾತಿನಿಧಿಕ ಕಲಾಕೃತಿಗಳನ್ನು ಅರ್ಥಮಾಡಿಕೊಳ್ಳುವಂಥ ಸರಳ ಕ್ರಿಯೆಯಲ್ಲ. ಹಾಗಾಗಿ ಇದಕ್ಕೆ ಒಂದು ಪೂರ್ವಭಾವಿ ಸಿದ್ಧತೆಯ ಅವಶ್ಯಕತೆಯಿರುತ್ತದೆ.

ವಾಸ್ತವವಾದಿ ಚಿತ್ರಗಳಿರಲಿ, ಅಮೂರ್ತ ಚಿತ್ರಗಳಿರಲಿ, ಯಾವುದೇ ಕಲಾಕೃತಿಯು ಒಂದು ನಿರ್ದಿಷ್ಟವಾದ ಚಾರಿತ್ರಿಕ ಘಟ್ಟ, ಸಮಾಜಿಕ ಪರಿಸರ ಮತ್ತು ವಿಶೇಷ ಕಲಾಸೃಷ್ಟಿಯ ವಿಶಿಷ್ಟ ಸಂದರ್ಭದಲ್ಲಿಯೇ ಜನ್ಮತಾಳುತ್ತದೆ. ಕಲಾಕೃತಿಯಂತೆಯೇ ಅದನ್ನು ಸೃಷ್ಟಿಸುವ ಕಲಾವಿದನೂ ಕೂಡ ತನ್ನ ಚರಿತ್ರೆಯ ಘಟ್ಟ ಮತ್ತು ಸಾಮಾಜಿಕ ಪರಿಸರದಿಂದಲೇ ರೂಪಿಸಲ್ಪಟ್ಟಿರುತ್ತಾನೆ. ಎಲ್ಲ ಕಲಾವಿದರ ವ್ಯಕ್ತಿತ್ವಗಳು, ಅವರು ಸೃಷ್ಟಿಸುವ ವಿಶೇಷ ಅಭಿವ್ಯಕ್ತಿಯ ವಿಧಾನಗಳು, ಅನುಸರಿಸುವ ಶೈಲಿ, ಕಟ್ಟಿಕೊಳ್ಳುವ ಪಂಥ ಎಲ್ಲವೂ ಆಯಾ ಚಾರಿತ್ರಿಕ ಘಟ್ಟದ ಯುಗಧರ್ಮಕ್ಕನುಗುಣವಾಗಿಯೇ ರೂಪುಗೊಳ್ಳುತ್ತವೆ.

ಕಲಾವಿದನಾಗಲೀ, ಅವನು ಸೃಷ್ಟಿಸುವ ಕಲಾಕೃತಿಯಾಗಲೀ ನಿರ್ವಾತದಲ್ಲಿ ನಿರ್ಮಾಣ–ವಾಗುವುದಿಲ್ಲ. ಆಕಾಶದಿಂದ ಬೀಳುವುದೂ ಇಲ್ಲ, ಭೂಮಿಯಿಂದ ಏಳುವುದೂ ಇಲ್ಲ. ಕಲೆ–

ಕಲಾವಿದ ಇಬ್ಬರೂ ಆಯಾ ಇತಿಹಾಸದ ಮಜಲಿನ ಒಂದು ನಿರ್ದಿಷ್ಟವಾದ ಸಮಾಜದಲ್ಲಿಯೇ ಜನ್ಮ ತಳೆಯುವುದರಿಂದ ಆ ಸಮಾಜದ ಆಗು-ಹೋಗುಗಳು, ತಾತ್ವಿಕ ಚಿಂತನ ಪಂಥಗಳು, ರಾಜಕಾರಣ ತುಮುಲ-ತಾಕಲಾಟಗಳು, ಅರ್ಥವ್ಯವಸ್ಥೆಯ ಘರ್ಷಣೆಗಳು, ಧರ್ಮ, ಜಾತಿ, ಮತ, ಪಂಥಗಳ ನಡುವಿನ ಕರ್ಷಣೆಗಳು ಕಲೆ ಮತ್ತು ಕಲಾವಿದನ ಮೇಲೆ ಪ್ರಭಾವ ಬೀರದೇ ಇರುವುದಿಲ್ಲ. ಆದ್ದರಿಂದ ಯಾವುದೇ ಒಬ್ಬ ಕಲಾವಿದ ಹಾಗೂ ಅವನ ಕಲಾಕೃತಿ ಅಷ್ಟೇ ಯಾಕೆ ಆ ಕಾಲಘಟ್ಟದಲ್ಲಿ ಕಾಣಿಸಿಕೊಳ್ಳುವ ಕಲಾಪಂಥ-ಇವೆಲ್ಲವುಗಳನ್ನು ನಿರ್ದುಷ್ಟವಾಗಿ ಅರ್ಥೈಸಿಕೊಳ್ಳಬೇಕಾದರೆ ಆ ಸಮಾಜದ ಇಡೀ ಚರಿತ್ರೆಯನ್ನೇ ನಾವು ಅಧ್ಯಯನಿಸಬೇಕಾಗುತ್ತದೆ. ಚಾರಿತ್ರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿಯೇ ನಾವು ಕಲಾಪಂಥಗಳ, ಅವುಗಳು ಸೃಷ್ಟಿಸುವ ವಿವಿಧ ಶೈಲಿಗಳ ಮೂಲ-ಚೂಲಗಳನ್ನು ಅರ್ಥೈಸಿಕೊಳ್ಳಬೇಕು.

ಚರಿತ್ರೆಯ ಚೌಕಟ್ಟಿನಾಚೆಗೆ ನಿಂತು ಕಲೆಯನ್ನಾಗಲೀ, ಕಲಾವಿದನನ್ನಾಗಲೀ ಗ್ರಹಿಸಲು ಯತ್ನಿಸುವುದು ನಿರರ್ಥಕ. ಯಾಕೆಂದರೆ ಎಲ್ಲವೂ ಚರಿತ್ರೆಯ ಗರ್ಭದೊಳಗಿಂದ ಹೊರಬಂದ ಕೂಸುಗಳೇ. ಈ ಮಾತು ಕಲೆಗೂ ಅನ್ವಯಿಸುತ್ತದೆ. ಕಲಾವಿದನನ್ನು ಒಳಗೊಳ್ಳುತ್ತದೆ. ಈ ದೃಷ್ಟಿಯಿಂದ ಅಮೂರ್ತ ಚಿತ್ರಕಲಾ ಪಂಥವು ೨೦ನೇ ಶತಮಾನದ ೨ನೆಯ ೩ನೆಯ ದಶಕಗಳಲ್ಲಿ ಕಾಣಿಸಿಕೊಂಡು ಆ ಕಾಲಘಟ್ಟದ ಸಾಮಾಜಿಕ ವಾಸ್ತವಕ್ಕೆ ಅಭಿವ್ಯಕ್ತಿ ನೀಡಲೂ ಸಮರ್ಥವಾಗಿ ಯತ್ನಿಸಿದ್ದುದು ಶ್ಲಾಘನೀಯವೇ. ಆದರೆ ಅಮೂರ್ತ ಶೈಲಿ ಒಂದು ಪರಂಪರೆಯಾಗಿ ಮುಂದುವರಿಯಲು ಸಾಧ್ಯವಿಲ್ಲ. ಸಾಧ್ಯವಾಗುವ ಅವಶ್ಯಕತೆಯೂ ಇಲ್ಲ. ಯಾವ ಶಾಸ್ತ್ರ ಏನು ಹೇಳಿದರೇನು ಅವರವರ ಶಾಸ್ತ್ರ ಅವರವರ ಕಾಲಕ್ಕೆ ಮಾತ್ರ ಎಂಬ ಕುವೆಂಪು ಅವರ ಮಾತು ತುಂಬಾ ಅರ್ಥಪೂರ್ಣವಾಗಿವೆ.

ಒಬ್ಬ ಕಲಾವಿದನು ಜೀವಿಸಿರುವ ಕಾಲದ ಸಾಮಾಜಿಕ ಸ್ಥಿತಗತಿಗಳು ಕಲೆಯ ವಿವಿಧ ವಸ್ತು ಆಶಯ-ನಿರ್ವಹಣೆಗಳನ್ನು ನಿರ್ಧರಿಸುತ್ತವೆ. ಅಂದರೆ ಒಂದು ನಿರ್ದಿಷ್ಟ ಕಾಲದ ಶಿಲ್ಪ-ಚಿತ್ರ-ಗ್ರಾಫಿಕ್ ಇತ್ಯಾದಿಗಳು ಸಮಕಾಲೀನ ಬದುಕಿನ ಪ್ರತಿಬಿಂಬಗಳಾಗಿರುತ್ತವೆ. ಕಲೆಗಳಲ್ಲಿ ಸಮಕಾಲೀನತೆಯ ಪ್ರಸ್ತುತತೆ ಅಗತ್ಯವಾಗಿ ಇರಲೇಬೇಕಾದ ಒಂದು ಮೌಲ್ಯ. ಪಿಕಾಸೋ '*I have no style*' ಎನ್ನುವಷ್ಟು ಎಲ್ಲ ಶೈಲಿಗಳನ್ನೂ ಮೀರಿದ ಸೃಷ್ಟಿಕಾರ, ತನ್ನ ಕಾಲಕ್ಕೆ ಅದ್ಭುತವಾಗಿ ಸ್ಪಂದಿಸಿದವ.

"There is no past or future in art, if a work of art cannot always live in the present, it must not be considered at all" ಎಂದು ಹೇಳುವ ಅವನ

ಮಾತುಗಳಲ್ಲಿ ಸಮಕಾಲೀನತೆಯ ಅಗತ್ಯದ ಅರಿವಾಗುತ್ತದೆ. ಹರ್ಬರ್ಟ್ ರೀಡ್ 'ತಿಟಟ ಣಾಂ ಜೆಂಡಿಟ' ಎಂಬ ಪದಪುಂಜವನ್ನು ಅತ್ಯಂತ ಗಮನಾರ್ಹ ರೀತಿಯಲ್ಲಿ ಬಳಸಿದ್ದಾನೆ. ಈ ರೂಪಿಸುವ ನಿರ್ಧಾರ ಆಯಾ ಕಾಲದ ಗುಣಧರ್ಮಗಳನ್ನು ಅವಲಂಭಿಸಿರುತ್ತದೆ. ಸಮಾಜದಿಂದ ಪಡೆದ ಅನುಭವಕ್ಕೆ ತನ್ನದೇ ಆದ ವಯಯಕ್ತಿಕತೆಯ *identity*ಯನ್ನು ಸಾಧಿಸಲು *'will to form'* ಇರಲೇಬೇಕಾಗುತ್ತದೆ. ಆಗ ಕಲಾವಿದನ ಸಮಕಾಲೀನ ಅನುಭವ ಸಾಂದರ್ಭಿಕ ಸೃಷ್ಟಿಯಿಂದ(*illustration*) ಮೇಲೇರಿ ಸೃಜನಶೀಲತೆಯನ್ನು ಪಡೆದುಕೊಂಡು ಹೊಸದೃಷ್ಟಿಯ ಮರುಸೃಷ್ಟಿಯಾಗಿ ರೂಪಾಂತರಗೋಳ್ಳುತ್ತದೆ. ಆದುದರಿಂದ *will to form* ಹಿನ್ನೆಲೆಗೆ ಕಲಾವಿದನ ಸಮಕಾಲೀನ ಸಂದರ್ಭದ ಗ್ರಹಿಕೆಯ ತೀವ್ರತೆಯೂ ಅಗತ್ಯ.

ಸಮಕಾಲೀನ ಎಂದರೆ ಒಂದು ನಿರ್ದಿಷ್ಟ ಕಾಲವೆಂದು ಹೇಳಬಹುದಾದರೂ ಇದು ಭೂ, ಭವಿಷ್ಯತ್ ಮತ್ತು ವರ್ತಮಾನಗಳನ್ನೂ ಮೀರಿದಂತೆ ಕಾಣುವ ಒಂದು ನಿರ್ದಿಷ್ಟ ಕಾಲ. ಸಮಕಾಲೀನ ಕಲೆ, ಸಮಕಾಲೀನ ಸಾಹಿತ್ಯ, ಬದುಕು, ನಡೆ–ನುಡಿ ಇತ್ಯಾದಿ; ಪಿಕಾಸೋ ಸಮಕಾಲೀನರು, ಅವನೀಂದ್ರನಾಥ್ ಠಾಕೂರರ ಸಮಕಾಲೀನರು ಇತ್ಯಾದಿ. ಹಾಗೆಯೇ ನಮ್ಮ ಸಮಕಾಲ ಎಂದರೆ ಪ್ರಸ್ತುತ ವರ್ತಮಾನ ಕಾಲ, ನಮ್ಮ ಸಮಕಾಲೀನ ಕಲೆ ಇಂದಿನ ನಮ್ಮ ಸಂದರ್ಭದ ಕಲೆ. ಪಿಕಾಸೋ ಸಮಕಾಲೀನ ಕಲೆ ಎಂದರೆ ಪಿಕಾಸೋ ಸೃಷ್ಟಿಸುತ್ತಿದ್ದ ಕಾಲದಲ್ಲಿಯೆ ಸೃಷ್ಟಿಯಾದ ಇತರರ ಕಲೆ ಮತ್ತು ಅದು ಆ ಸಮಯದವಿಶೇಷತೆಯನ್ನು ಬದುಕಿನ ಲಯದ ತೀವ್ರತೆಯನ್ನು ಹಿಂದಿಗಿಂತಲೂ ಭಿನ್ನವಾದ ಅಂದಿವ ಸಂದರ್ಭಕ್ಕೆ ಸಲ್ಲವಂಥ ಹೊಸ ದೃಷ್ಟಿಕೋನವನ್ನು ಹೊಂದಿದ ಕಲೆ ಎಂದು ಹೇಳಬಹುದು. ಆದರೆ ಹೇಗೆ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸೃಷ್ಟಿಯಾದ ಕಲೆಯೆಲ್ಲವೂ ಸಮಕಾಲೀನ ಕಲೆಯಾಗುವುದು ಸಾಧ್ಯವಿಲ್ಲ. ಹಿಂದಿನ ಅಥವಾ ಭೂತಕಾಲದ ಕಲೆಯನ್ನು ನಕಲು ಮಾಡುವ ಕಲಾವಿದನೊಬ್ಬ ಆ ಕೃತಿಗೆ ತನ್ನ, ತನ್ನ ಕಾಲದ ಹೊಸತು ಏನನ್ನೂ ಸೇರ್ಪಡೆ ಮಾಡುವ ಪ್ರಯತ್ನ ಮಾಡಿರದಿದ್ದಲ್ಲಿ ಅದು ಸೃಷ್ಟಿಯಾದ, ಕಾಲಕ್ಕೆ ಸಲ್ಲದ ಹಿಂದಿನ ಕಾಲವೊಂದರ ಸೃಷ್ಟಿಯ ನಕಲು ಮಾತ್ರ ಆಗುತ್ತದೆ.

ವಿಜಯ ಹಾಗರಗುಂಡಗಿ, ರಘುಪತಿ ಭಟ್ ನಮ್ಮ ಸಮಕಾಲೀನ ಕಲಾವಿದರಾದರೂ ನಮ್ಮ ಕಲೆಯನ್ನು ಸೃಷ್ಟಿಸುವ ಕಲಾವಿದರಲ್ಲ. ವಿಜಯ ಹಾಗರಗುಂಡಗಿ ವಿಜಯನಗರ–ಸುರಪುರ ಸಂಪ್ರದಾಯ ಚಿತ್ರಕಲೆಯ ನಕಲು ಮಾಡಿದರೆ, ರಘುಪತಿ ಭಟ್ ಮೈಸೂರು ಚಿತ್ರಸಂಪ್ರದಾಯ ಮೂಲದ ಗಂಜೀಫಾಕಲೆಯಲ್ಲ. ಆದರೆ ಸಾಂಪ್ರದಾಯಿಕ ಸೌಂದರ್ಯದ ವಿಶಿಷ್ಟ ಪ್ರಕಾರದ ಕೃತಿಗಳವು. ಆ ಶೈಲಿಗೆ ಅವರ ಸಂದರ್ಭದ ಅನುಭವಗಳನ್ನು ಲೇಪಿಸಿದರೆ ಅವು ಸಮಕಾಲೀನವಾಗಬಲ್ಲವು.

ಇನ್ನೊಂದು ದೃಷ್ಟಿಯಲ್ಲಿ ೧೯೫೪ರಲ್ಲಿ ಹಲವಾರು ಶತಮಾನಗಳ ಹಿಂದಿನ ಮಧ್ಯಯುಗದ ಖಜುರಾಹೋ ದೇವಲಾಯದ ಬೆತ್ತಲೆ ಹೆಣ್ಣುಗಳನ್ನು ಹುಸೇನಎ ರೇಖಿಸಿರುವ ರೀತಿ ಮೂಲದ ಶಿಲ್ಪಿಗಳಿಗಿಂತಲೂ ಭಿನ್ನ. ಇಲ್ಲಿ ಸಮಾಕಾಲೀನ ದೃಷ್ಟಿಕೋನದ ಹೊಸನೋಡವಿದೆ. ಲಿಯೋನಾರ್ಡೋ ಡಾ ವಿಂಚಿಯ *The last supper, ೧೯೯೩ ರಲ್ಲಿ ಹುಸೇನ್‌ರಿಂದ ಸೃಷ್ಟಿಯಾಗಿದುವ The last supper blue red ಕೃತಿಗಳು.* ಹಾಗೆಯೆ ಹಲವು ಶತಮಾನಗಳಿ ಹಿಂದಿನ ಚಿಕಣಿ ಚಿತ್ರಕಲೆಯ ರಾಗಮಲಾ ಕೃತಿಗಳು ಹಾಗೂ ಹುಸೇನರ ದೀಪಕ್ ರಾಗ್ ಮತ್ತು ಮೇಘಮಲ್ಹಾರ್ ಕೃತಿಗಳು, ಅಜಂತಾದ ಬುದ್ಧನ ಜನನದ ಭಿತ್ತಿಚಿತ್ರ ಮತ್ತು ಹುಸೆನರ ಬುದ್ಧ ಜನನದ ಚಿತ್ರಗಳು ತಮ್ಮ ಕಾಲದ ಸಮಕಾಲೀನತೆಯನ್ನು ಕಾಯ್ದುಕೊಂಡಿವೆ.

ನಮ್ಮ ಹಿರಿಯ ಕಲಾವಿದರಲ್ಲೊಬ್ಬರಾದ ವೈ. ಸುಬ್ರಹ್ಮಣ್ಯರಾಜು ಪಿಕಾಸೋನ (೧೮೮೧–೧೯೭೩) ಸಮಕಾಲೀನರೂ ಆಗಿದ್ದವರು. ಪಿಕಾಸೋ ಆಫ್ರಿಕನ್ ಪ್ರಿಮಿಟೀವ್ ಶಿಲ್ಪಗಳನ್ನು ತನ್ನದನ್ನಾಗಿಸಿಕೊಂಡು ಸಮಕಾಲೀನ ಯ ಮುದ್ರೆಯನ್ನು ಇತ್ತಿದರೆ ಸುಬ್ರಹ್ಮಣ್ಯರಾಜು ತಮ್ಮ ಹಿಂದಿನ ಒಂದು ಸಂಪ್ರದಾಯವನ್ನು ಮುಂದುವರೆಸಿದರು. ಆದರೆ ಸಮಕಾಲೀನತೆಯನ್ನು ಅದಕ್ಕೆ ಲೇಪಿಸಲೇ ಇಲ್ಲ. ಹಿಂದಿನ ಮಣ್ಣಿನ ಬಣ್ಣಗಳ ಸ್ಥಳವನ್ನು ಇಂದಿನ ಬಣ್ಣಗಳು ಆಕ್ರಮಿಸಿಕೊಂಡಿರಬಹುದು. ಸೃಷ್ಟಿಯ ದೃಷ್ಟಿ ಹೊಸದಲ್ಲ, ಆದರೆ ಜಾಮಿನಿರಾಯ್‌ರವರು (೧೮೮೭–೧೯೭೨) ಪಿಕಾಸೋ ಮತ್ತು ಸುಬ್ರಹ್ಮಣ್ಯರಾಜುರವರ ಸಮಕಾಲೀನರು. ಅಮಕಾಲೀನ ಕಲಾವಿದರೂ ಸಹ. ಪಟಚಿತ್ರ, ಕಸೂತಿ, ಕವುದಿಗಳ ಅಲಂಕೃತ ವಿನ್ಯಾಸ, ಕಾಳಿಘಾಟ್ ಚಿತ್ರಗಳು ಇತ್ಯಾದಿಗಳು ಹೊಸತನದಿಂದ ಅವರ ಕೃತಿಗಳಲ್ಲಿ ಕಾಣಿಸಿಕೊಂಡವು. ೧೯೭೦ರ ಸುಮಾರಿನಲ್ಲಿ ಸೃಷ್ಟಿಯಾದ ಮರದ ಶಿಲ್ಪಗಳು ಅವರ ಸಮಕಾಲೀನ ಚಿಂತನೆಗೆ ಹಾಗೂ ರೀಡ್ ಹೇಳುವ *will to form* ಒತ್ತಡಕ್ಕೆ ಉದಾಹರಣೆಗಳಿಂತಿವೆ. (೧೯೫೩ರಲ್ಲಿ ನ್ಯಾಯಾರ್ಕ್‌ನ ವಿಮರ್ಶಕರಿಂದ ಭಾರತದ ಪಿಕಾಸೋ ಎಂದು ಅವರು ಕರೆಸಿಕೊಂಡರು).

ಪಿಕಾಸೋನಂಥ ಸಮಕಾಲೀನ ದೃಷ್ಟಿಯ ನೋಡುವ ರೀತಿಯನ್ನೇ ನಾವು ಕಾಲಕಾಲಕ್ಕೆ ನೋಡುತ್ತ ಬಂದಿರುವುದು. ಸಾವಿರಾರು ವರ್ಷಗಳ ಹಿಂದೆ ಗುಹೆಗಳ ಗೋಡೆಗಳನ್ನು ಕೆರೆದು, ತಂದುಕೊಂಡ ರೇಖೆ, ಮಣ್ಣಿನ ಬಣ್ಣಗಳನ್ನು ಇತಿಹಾಸ ಪೂರ್ವ ಕಲಾವಿದ ಬಳಸಿದನು. ಮತ್ತೊಂದು ಕಾಲಕ್ಕೆ ದೇವಾಲಯ, ಚರ್ಚ್‌ಗಳನ್ನು, ಭಿತ್ತಿಚಿತ್ರಗಳಿಂದ ಅಲಂಕರಿಸಿದನು. ಮಗದೊಂದು ಕಾಲಕ್ಕೆ ಕಾಗದ, ಕ್ಯಾನ್‌ವಾಸ್, ಗಾಜು ಇತ್ಯಾದಿಗಳ ಅವಕಾಶದಲ್ಲಿ (*space*) ಹಲವು ಬಣ್ಣಗಳಿಂದ ಚಿತ್ರಿಸಿದನು. ಮಣ್ಣು, ಮರ, ಎಲುಬು, ಕಲ್ಲು, ಫೈಬರ್ ಗಾಜು, ಪರಿಸರ, ಬಳಸಿ ಬಿಸಾಡಿದ ಕಸ, ಚೂರುಪಾರುಗಳಿಂದ ಶಿಲ್ಪಗಳನ್ನು ಸೃಷ್ಟಿಸಿದನು. ಕಂಪ್ಯೂಟರ್ ಇ ಕಸವೂಸಹ

ದುಡಿಸಿಕೊಳ್ಳಲ್ಪಡುತ್ತಿದೆ. ಕೆಲಮೊಮ್ಮೆ ಮಿಶ್ರಮಾಧ್ಯಮ; ಹೀಗೆ ಆಯಾಕಾಲ ಅವನಿಗೆ ಎಂಥ ಮಾಧ್ಯಮಗಳನ್ನು ಕೊಟ್ಟವೋ ಅವುಗಳನ್ನು ದುಡಿಸಿಕೊಳ್ಳಲು ಸಮರ್ಥನಾಗಿ, ಇಂದ್ರಿಯ ಗ್ರಹಿಕೆಗಳ (*sense perceptions*) ಕಾರಣದಿಂದ, ಸೃಷ್ಟಿಸಲೇಬೇಕಾಗಿ ಬಂದ ಒತ್ತಡದಿಂದ ಅಭಿವ್ಯಕ್ತಿಸಿದನು. ಹಿಂದಿಗಿಂತಲೂ ಅನನ್ಯವಾದ ಸೃಷ್ಟಿಗಳಿಗೆ ಕಾರಣನಾದನು. ಇದು ಎಲ್ಲ ಕಾಲಗಳಲ್ಲೂ ಸಾಧ್ಯವಾಗಿದೆ. ಈ ಕಾರಣದಿಂದಲೇ ನಾವು ಕಲಾ ಇತಿಹಾಸದ ಉದ್ದಕ್ಕೂ ಇಂದಿಗೂ ವಿಶಿಷ್ಟಪೂರ್ಣವಾದ, ತಮಗೆ ತಾವೆ ಆಯಾ ಕಾಲಕ್ಕೆ ಬೇರೆಯೇ ಆಗಿ ನಿಲ್ಲುವ ಸೃಷ್ಟಿಗಳನ್ನು ಕಾಣವುದು ಸಾಧ್ಯವಾಗಿರುವುದು.

ಕ್ರಿಸ್ತಪೂರ್ವ ೨೫೦೦ದಿಂದ ೧೦೦೦ ವರ್ಷಗಳ ನಡುವೆಯ ಇತಿಹಾಸ ಪೂರ್ವಕಾಲದ ಫ್ರಾನ್ಸ್, ಪೋರ್ಚುಗಲ್, ಸಿಸಿಲಿ ಮತ್ತು ರಷ್ಯಾ ಹಾಗೂ ನಮ್ಮ ದೇಶದ ಮಧ್ಯಪ್ರದೇಶದ ಭೀಂಬೇಟ್ಕಾ, ಹೋಶಂಗಾಬಾದ್, ಪಚ್‌ಮಡಿ ಅಲ್ಲದೆ ನಮ್ಮ ರಾಜ್ಯದ ಹಲವಾರು ಸ್ಥಳಗಳಲ್ಲಿರುವ ಗುಹೆ, ಬಂಡೆಯಾಸ್ರಯ ಇತ್ಯದಿಗಳಲ್ಲಿ ಚಿತ್ರಿಸಿರುವ ಪ್ರಾಣಿಗಳ ಮತ್ತು ಮನುಷ್ಯರ ಚಿತ್ರಣಕ್ಕೂ, ಆನಂತರದ ಹಲವು ಶತಮಾನಗಳಲ್ಲಿ ಹಾಗೂ ಇಂದಿನ ವಿವಿಧ ಕಲಾವಿದರ ಅಭಿವ್ಯಕ್ತಿಗಳಲ್ಲಿ ಕಾಣಿಸಿಕೊಳ್ಳುವ ಅದೇ ಪ್ರಾಣಿಗಳು ವಿಭಿನ್ನವಾಗಿ ಚಿತ್ರಿಸಿಕೊಂಡಿರುವುದಕ್ಕೆ ಬೇರೆ ಬೇರೆ ಹೊಳಹುಗಳ ಅನುಭವ ವೀಡುವುದಕ್ಕೆ, ಆಯಾ ಕಾಲದ ಕಲಾವಿದರ ಅಭಿವ್ಯಕ್ತಿಯ ದರ್ಶನ ಹಾಗೂ ದೃಷ್ಟಿಗಳಲ್ಲಿನ ನಾವೀನ್ಯತೆಯೇ ಕಾರಣ. ಹೀಗಾಗಿ *Mother and child* ವಸ್ತುವನ್ನೇ ಗಮನಿಸೋಣ.

ಯಾವ ಕಾಲದಲ್ಲಿ ಅದನ್ನು ಚಿತ್ರಿಸಿಲ್ಲ? ಆದರೂ ಸಾವಿರಾರೂ ವರ್ಷಗಳಿಂದಲೂ ಅದು ಹೊಸ ಹೊಸ ಕಲ್ಪನೆ ರೂಪಗಳನ್ನು ಪಡೆದು ಆಯಾ ಕಾಲಕ್ಕೆ ಸಲ್ಲುವಂತೆ ಸೃಷ್ಟಿಯಾಗುತ್ತಲೇ ಇದೆ. ಅವು ಸೃಷ್ಟಿಯಾದ ಕಾಲದ ಸಂವೇದನೆಯನ್ನೂ ಪ್ರಕಟಿಸುತ್ತವೆ. *Venus and Eros* ತಾಯಿ ಮಗುವಿಗೆ ಕಲ್ಪನೆಯು *virgin Mary with her child Eros* ಆಗಿ ಕಾಣಿಸಿಕೊಂಡಂತೆ ಹೆನ್ರಿಮೂರ್ ಮೊದಲಾದವರ *mother and child* ಆಯಿತು. ಹಾಗೆಯೇ ಜಾಮಿನಿ ರಾಯ್ 'ತಾಯಿಮಗ', ಹುಸೇನರ ಮದರ್ ಥೆರೆಸಾ, ಹೆಬ್ಬಾರರ *Mother* ಇತ್ಯಾದಿಗಳೇ ಅಲ್ಲದೆ ವೆಂಕಟಾಚಲಪತಿಯವರ *Mother and child* ಹಾಗೂ ಭೂಪಾಲ್‌ನ ಜಿ. ರಘುರವರಿಂದಲೂ *Mother and child* ಟೆರಾಕೋಟಾದಲ್ಲಿ ಸೃಷ್ಟಿಯಾಗಿದೆ. ೨೦೧೫ರ ಸಂದರ್ಭದಲ್ಲಿ ಕಿನ್ನಾಳ, ಚನ್ನಪಟ್ಟಣಗಳ ಕರಕುಶಲ ಕಲಾವಿದರಿಂದಲೂ 'ತಾಯಿ ಮತ್ತು ಮಗು' ಗೊಂಬೆಗಳು ಮೂಡಿಬಂದಿದ್ದವು. ಹೇಗೆ ಒಂದು ರೀತಿಯಲ್ಲಿ ಪುರ್ನಸೃಷ್ಟಿ ಚಿತ್ರಿಸಲು ವಸ್ತುಗಳು ಬಹಳ ಕಡಿಮೆ. ಈಗಾಗಲೇ ಚಿತ್ರಿಸಿರುವುದನ್ನೇ ಮತ್ತೆ ಮತ್ತೆ ಪುನರಾವೃತ್ತಿ ಮಾಡಲಾಗುತ್ತೆದೆ.

ಒಂದು ಕಡೆ ಪಿಕಾಸೋ *"What could I possibly add? Every thing has*

been said" ಎಂದು ತೋಳಲಾಡಿದ್ದಾನೆ. ಆದರೂ ಕೆಲವರು ರೀಡ್ ಹೇಳುವ ವಿಶಿಷ್ಟ ಒತ್ತಡದಿಂದ ಅದ್ಭುತಗಳನ್ನು ಸಾಧಿಸಿಬಿಡುತ್ತಾರೆ. ಹಿಂದಿನ ರೂಪಕಲ್ಪನೆಗಳಿಗೆ ಹೊಸತವನ್ನು ಅಂದರೆ ಒಂದು ರೀತಿಯಲ್ಲಿ *new intensity in feeling* ಕಸಿಮಾಡುವುದರಿಂದ ತಾವೇ ಹಿಂದೆಂದೂ ಯಾರೂ ಕಲ್ಪಿಸದ ರೂಪಿಸದ ಸೃಷ್ಟಿಗೆ ಕಾರಣರಾಗಿ ಬಿಡುತ್ತಾರೆ. ಹಳೆಯ ಬೂಟು, ಆಲೂಗಡ್ಡೆಗಳನ್ನು ತಿನ್ನುತ್ತಿರುವವರನ್ನು ವ್ಯಾನ್‌ಗಾಗ್ ಚಿತ್ರಿಸಿದ ರೀತಿ ಅಂಥದ್ದು. ಹೆಣ್ಣಿನ ಅಳುವಿಗೆ ಪಿಕಾಸೋ (೧೯೩೭ರಲ್ಲಿ) ನೀಡಿದ ರೂಪವು ಅಷ್ಟೇ. ಈ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡೇ ಕೆ.ಜಿ. ಸುಬ್ರಮಣಿಯನ್ "ಒಂದು ಕಲಾ ಚಡುವಟಿಕೆಯು ಅದೆಷ್ಟೇ ಸಣ್ಣದಾದರೂ ಇತಿಹಾಸದ ಹೊರೆಯನ್ನು ಕಿತ್ತೊಗೆಯುವುದಾದರೆ ಅದೇ ಒಂದು ಮಹತ್ತರ ಸಾಧನೆ" ಎಂದುಹೇಳಿರಬೇಕು. ಇಲ್ಲಿ ಚಾರಿತ್ರಿಕ ಪ್ರಜ್ಞೆಯ ಬಗ್ಗೆ ಸುಲಿವು ಕೊಡುತ್ತಲೆ ಆ ಪ್ರಜ್ಞೆಯಲ್ಲಿ ಭೂತಕಾಲದ–ಭೂತಕಾಲೀನ ಗುಣವೆ ಅಲ್ಲದೆ ಅದರ ವರ್ತಮಾನ ಕಾಲದ ಗ್ರಹಿಕೆಯೂ ಸಹ ಇರಬೇಕು ಎನ್ನುವ ಸುಬ್ರಮಣಿಯನ್‌ರ ಚಿಂತನೆಯ *presentetnees of past* ಕಲ್ಪನೆ, ಈ ಹಿಂದೆ ಉದ್ದರಿಸಿದ ಪಿಕಾಸೋನ"ಒಂದು ಕಲಾಕೃತಿ ತನ್ನ ವರ್ತಮಾನದಲ್ಲಿ ಸಂಪೂರ್ಣವಾಗಿ ಜೀವಿಸದೆ ಹೋದಲ್ಲಿ ಅದನ್ನು ಗಮನಿಸಲೇಬಾರದು" ಎಂಬ ಮಾತುಗಳನ್ನು ಬೆಂಬಲಿಸುವಂತಿದೆ.

ರವೀಂದ್ರನಾಥ್ ಠಾಕೂರ್ ೧೯೪೧ರಲ್ಲಿ ಜಾಮಿನಿ ರಾಯ್‌ಗೆ ಬರೆದ ಪತ್ರದಲ್ಲಿ ಹೇಳುತ್ತಾರೆ–*"From primordial times man has been giving himself things to see, Thus the mind of man today is stored with the memory of a tremoudous diversity of forms and impression".* ಆದರೆ ಸಮಕಾಲೀನವಾಗಿರಬೇಕು ಎಂಬ ಕಾರಣಕ್ಕೆ ಸುತ್ತ ನಡೆದದ್ದನ್ನೆಲ್ಲಾ ಹಸಿಹಸಿಯಾಗಿ ಅಥವಾ ಕುಶಲತೆಯಿಂದ ಚಿತ್ರಿಸಿದರೆ ಅವು ಸಾಂದರ್ಭಿಕ ಚಿತ್ರಗಳಾಗುತ್ತವೆ.

ಆಂಧ್ರಪ್ರದೇಶದ ಕೊಂಡಪಲ್ಲಿಯ ಸಂಪ್ರದಾಯ ಗೊಂಬೆಗಳಲ್ಲಿ ಪ್ರಧಾನಿಯಾಗಿದ್ದ ನರಸಿಂಹರಾವ್, ಅರ್ಥಸಚಿವರಾಗಿದ್ದ ಮನ್‌ಮೋಹನ್ ಸಿಂಗ್ ಕಾಣಿಸಿಕೊಂಡಿರುವುದು, ಶಿವಾಜಿನಗರದ ದೇವಾಲದ ಗಾರೆಯ ದೇವತೆಗಳ ಸಾಲಿನಲ್ಲಿ ಮಹಾತ್ಮ ಗಾಂಧಿಯ ಶಿಲ್ಪ ರೂಪುಗೊಂಡಿರುವುದು, ಇಂದಿನ ಪಟಚಿತ್ರಗಳಲ್ಲಿ, ಕಾಳಿಘಾಟ್ ಚಿತ್ರಗಳಲ್ಲಿ ಹಾಗೂ ನಮ್ಮ ತೊಗಲು ಗೊಂಬೆಗಳಲ್ಲಿ ಸಮಕಾಲೀನ ಜೀವನ ಕಾಣಿಸಿಕೊಂಡಿರುವುದು, ಸಲ್ವೇಡರ್ ಡಾಲಿ ಮತ್ತು ಚೀನಾದ ರರಾಜಧಾನಿಯ ಚೌಕವೊಂದರಲ್ಲಿ ಅಲ್ಲಿನ ಸರ್ಕಾರ ಪ್ರತಿಭಟಿಸುತ್ತಿದ್ದ ಯುವ ಜನತೆಯ ಮೇಲೆ ದಬ್ಬಾಳಿಕೆ ನಡೆಸಿದಾಗ ಹುಸೇನ್ *Illustrated weekly of India* ಚಿತ್ರ

ರಚಿಸಿಕೊಟ್ಟದ್ದು ಹಾಗಯೇ ಸಫ್ದರ್ ಹಶ್ಮಿ ಕೊಲೆಯಾದಾಗ ತೈಲವರ್ಣ ಕೃತಿ ರಚಿಸಿದ್ದು, ೧೯೪೬-೪೭ರಲ್ಲಿ ಬಂಗಾಳದಲ್ಲಿ ಶ್ರೀಮಂತ ರೈತರ ವಿರುದ್ಧದ ಟೆಭಗಾ ರಥತರ ಚಳವಳಿ ಕಮ್ಯುನಿಸ್ಟ್ ಪಕ್ಷದ ಪೋಷಣೆಯಲ್ಲಿ ನಡೆದಾಗ ಆ ಪಕ್ಷಕ್ಕಾಗಿ ಸೋಮನಾಥ್ ಹೋರ್ ದಾಖಲಿಸಿದ ರೇಖಾ ಚಿತ್ರಗಳು, ಕರ್ನಾಟಕದ ಹಾಸನದ ರೈತರ ಬವಣೆಯನ್ನು ಕೆ. ಟಿ. ಶಿವಪ್ರಸಾದ ಅವರು ಛಾಯಾಗ್ರಹಿಸಿದ್ದು, ಕರ್ನಾಟಕದ ಸಂದರ್ಭದಲ್ಲಿ ಚಿ. ಸು. ಕೃಷ್ಣಸೆಟ್ಟಿಯವರ ತುರ್ತು ಪರಿಸ್ಥಿತಿಯ ಮತ್ತು ರೂಪಾಂತರ ಮಾಲೆಯ ಹಲವು ಗ್ರಾಫಿಕ್ ಕೃತಿಗಳು, ಜಾನ್‌ದೇವರಾಜ್‌ರ ಹಲವು ಚಿತ್ರ-ಶಿಲ್ಪಗಳಲ್ಲಿ ಇರುವ ಸಮಕಾಲೀನತೆಯು ಇದೇ ಹಾದಿಯದು. ಇವೆಲ್ಲ ಸಮಕಾಲೀನ ಕಲೆಯಾಗಿವೆ ಎಂಬುದು ಮುಖ್ಯ.

ಕಲಾ ಇತಿಹಾಸದ ಉದ್ದಕ್ಕೂ ಸೃಷ್ಟಿಯಾದ ಹಲವಾರು ಕಲಾಕೃತಿಗಳು ಮುಖ್ಯವಾಗಿ ತಮ್ಮ ಸಮಕಾಲೀನತೆಯ ದಟ್ಟ ಹೊಳಹನ್ನು ಹೊದ್ದ ಕಾರಣದಿಂದಲೇ ಇಂದಿಗೂ ನಮ್ಮನ್ನು ಗಾಢವಾಗಿ ಸ್ಪಂದಿಸುವ ಸಾಮರ್ಥ್ಯವನ್ನು ಹೊಂದಿವೆ. ೧೭ನೆಯ ಶತಮಾನದ ಹಾಲೆಂಡ್‌ನ *Materialistic society*ಯ ವ್ಯಾಪಾರಿ ಮನೋಭವ ದುಡಿಸಿಕೊಂಡಿರುವ ರೆಂಬ್ರಾಂಟ, ವಾಕಿನ್ಸ್, ಡೇಗಾಸ್ ಮೊದಲಾದವರ ಕೆಲವು ಕೃತಿಗಳು, ಯಾಂತ್ರಿಕ ಯುಗದ ಕಾರ್ಮಿಕರ ಗೌರವ ಸೂಚಕ ಲೆಗರ್‌ನ ಕೆಲವು ಕೃತಿಗಳು, ಕೈಗಾರಿಕಾ ನಗರೀಕೃತ ಸಮಾಜದ ವಿಕೃತ (*distorted*) ಬದುಕಿನ ಅಭಿವ್ಯಕ್ತಿಯ ಎಡ್ವರ್ಡ್ ಮಂಕ್ ಕೃತಿಗಳು, ಗೋಯಾನ *The Disasters of War(1810-15), The Battle of the Amazon (1618)* ದೈಹಿಕ ದುಡಿಮೆಯನ್ನು ಉನ್ನತ ಚಟುವಟಿಕೆಯೆಂದು ಆಚರಿಸುವ ರಿವೇರಾ, ಒರೊಝ್ಕೊರವರುಗಳ ಅಭಿವ್ಯಕ್ತಿಗಳು, ಈ ಶತಮಾನದ ಮೊದಲ ಭಾಗದಲ್ಲಿ ರಷ್ಯಾದ ಕೈಗಾರಿಕಾ ಕ್ರಾಂತಿ ಕಲಾವಿದರ *Beauty of speed and energy* ಎಂಬ ಹೊಸ ದೃಷ್ಟಿಕೊನಕ್ಕೆ ಕಾರಣವಾಗಿ ಸೃಷ್ಟಿಯಾದ ಜಿಯಾಕೊಮೊ ಬಲ್ಲಾ, ಅಂಬೆರ್‌ಟೊ ಬಕ್ಕಿಯೋನಿ ಮೊದಲಾದವರ ಕೃತಿಗಳು, ೨೦ನೆಯ ಶತಮಾನದ ಬದುಕಿನ ಭೀತಿ,ಥರಥರಿಕೆಯ ಸಮಕಾಲೀನ ಪರಾಮರ್ಶೆಯ ಬೆಕ್‌ಮ್ಯಾನ್ ಕೃತಿಗಳು, ಬೇಕನ್ ರೋಡಿನ್, ಮೂರ್, ಪಿಕಾಸೋ, ಡಾಲಿ, ಪೋಲಾಕ್, ಡೇವಿಡ್‌ಹಾಕ್ನೆ, ಆಚಿಡಿ ವಾರ್ಹೋಲ್, ನಮ್ಮಲ್ಲಿ ಶೆರ್‌ಗಿಲ್, ರವೀಂದ್ರನಾಥ್ ಠಾಗೂರ್, ಜಾಮಿನಿ ರಾಯ್, ರಾಮ್‌ಕಿಂಕರ್ ಬೈಜ್, ಪಣಿಕ್ಕರ್, ಕೃಷ್ಣರೆಡ್ಡಿ, ಹುಸೇನ್, ಹೆಬ್ಬಾರ್, ರಝಾ, ಕೆ.ಜಿ. ಸುಬ್ರಮಣಿಯನ್, ಹಡಪದ್, ಪೀಟರ್ ಲೂಯಿಸ್, ಯೂಸೂಫ್, ಪ್ರಭು ಹರಸೂರು, ಚಂದ್ರನಾಥ್, ಪುಷ್ಪಮಾಲಾ, ಶೀಲಾಗೌಡ, ಶಾಂತಾಮಣಿ, ಶ್ಯಾಮ್‌ಸುಂದರ್, ಮೊದಲಾದವರ ಕೃತಿಗಳು ನೆನಪಾಗುತ್ತವೆ.

ಸಿ. ಚಂದ್ರಶೇಖರ ಅವರು ತಮ್ಮ ಕಲಾಬದುಕಿನುದ್ದಕ್ಕೂ ಹಲವಾರು ರೀತಿಯ, ಹಲವು ಬಗೆಯ ಕಲಾಕೃತಿಗಳನ್ನು ಅನೇಕ ಸಂದರ್ಭಗಳಲ್ಲಿ ವಿವಿಧ ಮಾಧ್ಯಮಗಳನ್ನು ಬಳಸಿ ಸಾಮಾಜಿಕ

ಪ್ರಜ್ಞೆ, ಕಾಳಜಿ ಮತ್ತು ವೈಚಾರಿಕತೆ ಹಿನ್ನೆಲೆಯಲ್ಲಿ ಕಲಾಕೃತಿ ರಚನೆ ಮಾಡಿದ್ದಾರೆ. ಚಂದ್ರಶೇಖರ ಅವರು ಸುಮ್ಮನೆ ಚಿತ್ರಗಳನ್ನು ಬರೆಯುವವರಲ್ಲ. ವಿದ್ಯಾರ್ಥಿ ಜೀವನದಲ್ಲಿ ರಚಿಸಿದ ಕಲಾಕೃತಿಗಳು ಒಂದು ಹಂತದವರೆಗೆ ಒಂದು ಪೀಳಿಗೆಯನ್ನು ಪ್ರೇರೇಪಿಸುವ ಮತ್ತು ಆಕರ್ಷಿಸುವಂತಹ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಇನ್ನೊಂದು ಹಂತದಲ್ಲಿ ವ್ಯಕ್ತಿ ಜೀವನದ ಕೃತಿಗಳೊಂದಿಗೆ ಚಿತ್ರ ರಚನೆ ಉತ್ಕೃಷ್ಟ ಅಂಶಗಳನ್ನು ಒಳಗೊಂಡಂತೆ ಕಲಾಕೃತಿಗಳು ರಚಿಸಿದ್ದು ಕಂಡುಬರುತ್ತದೆ. ಅಂದರೆ ಚಿತ್ರ ರಚನೆಯ ಪೂರ್ವ ಮೀಮಾಂಸೆ ವಾಸ್ತವವಾಗಿ ಸಮಸ್ಯೆಯ ಗ್ರಹಿಕೆ ಸ್ವರ್ಧಾತ್ಮಕ ರೂಪ ಪಡೆಯದೇ ಶಬ್ದಗಳಲ್ಲಿ ಮನಸ್ಸಿನಲ್ಲಿ ಧ್ವನಿ ರೂಪ ಬೆಳೆಯುತ್ತಾ ಹೋಗುತ್ತದೆ. ಅಂತಹ ರೂಪಗಳನ್ನು ಚಿತ್ರಕಲಾವಿದರಿಗಷ್ಟೆ ಅಲ್ಲ ಇಡೀ ಜಗತ್ತಿಗೆ ಗ್ರಹಿಸಲು ಯೋಗ್ಯವಾದ ಮಾಧ್ಯಮ ಒಂದರ ಹುಡುಕಾಟಕ್ಕೆ ತೊಡಗಿದೆ. ನಿರಂತರ ಚಲನೆಯಲ್ಲಿ ಬಣ್ಣಗಳ ರೂಪ ಕೊಡಬಲ್ಲಂತಹ ಕೃತಿಯೊಂದು ನಿರ್ಮಾಣವಾಗುತ್ತದೆ. ಇಂತಹ ಮಾಧ್ಯಮ ಮತ್ತು ಕಲಾವಿದನ ಸಾಮಾಜಿಕ ಚಿಂತನೆಯ ಒತ್ತಡಗಳಿಗೆ ಹೇಗೆ ಪರಿವರ್ತಿತ ರೂಪ ಪಡೆದರೆ ಎಲ್ಲವನ್ನು ಮುಟ್ಟುವ ಕಲಾಕೃತಿ ರಚನೆಯಾಗಬಲ್ಲದೆಂಬ, ಚಿತ್ರ ಮೀಮಾಂಸೆಯ ಹಿನ್ನೆಲೆಯಲ್ಲಿ ಅವರ ಚಿತ್ರಗಳು ತನ್ನದೇ ಆದ ರೂಪವನ್ನು ಪಡೆಯುತ್ತವೆ.[೨೦]

ಉದಾ: ಮೊಟ್ಟೆ, ಕಲ್ಲು, ಪುಸ್ತಕ, ಕಲ್ಲು ಹೂ ಮುಂತಾದ ಜಗತ್ಪ್ರಸಿದ್ಧ ರೂಪಗಳನ್ನು ಬಳಸುತ್ತಾರೆ. ಇಂಥ ಮಾಧ್ಯಮಗಳು ಸಹ ಕಲಾವಿದ ಬೆಳೆದಂತೆ ಸಮಸ್ಯೆಗಳ ತೀಕ್ಷ್ಣತೆ ಅಧಿಕವಾದಂತೆಲ್ಲ ಮನೋಗ್ರಹಿಕೆಗೆ ಬಂದ ಸಮಸ್ಯೆಗಳನ್ನು ಹೇಳುವ ಬದಲು ಆ ಸಮಸ್ಯೆಗಳಿಂದ ಹೊರಬರಬಲ್ಲ ಹೊಸ ಸಾಧ್ಯತೆಗಳನ್ನು ಚಂದ್ರಶೇಖರರ ಚಿತ್ರಗಳು ಮಂಡಿಸುತ್ತವೆ. ಇನ್ನು ಮುಂದುವರಿದು ಹೇಳುವುದಾದರೆ, ಸ್ವಿಚ್‌ಸರಣಿ ಚಿತ್ರಗಳಲ್ಲಿ ಮನುಷ್ಯ ಸಂಬಂಧಗಳು ತಮ್ಮೊಳಗೆ ವೈರುಧ್ಯತೆಗಳನ್ನು ಸೃಷ್ಟಿಸುತ್ತಿದ್ದರು. ಹೊಂದಾಣಿಕೆಗಳೊಂದಿಗೆ ಬದುಕು ಸಾಗುತ್ತದೆ. ಕೆಲವೊಮ್ಮೆ ಅಂಥ ಹೊಂದಾಣಿಕೆಯನ್ನೆ ಪ್ರಧಾನವಾಗಿ ಭದ್ರಪಡಿಸುತ್ತಾ ಹೋಗುವುದನ್ನು ಕಾಣಬಹುದಾಗಿದೆ.[೨೧] ಇಂಥ ಕ್ರಿಯೆ ಹೊಂದಾಣಿಕೆ ಸತ್ಯವೆನಿಸಿದಾಗ ಆಗುವ ಪ್ರಕ್ರಿಯೆ ಇಲ್ಲದಿದ್ದರೆ ಹೊಂದಾಣಿಕೆ ಕಳಚುವ ಸಾಧ್ಯತೆಗಳಿರುತ್ತವೆ. ಅದ್ದರಿಂದ ವಿಶ್ವಾತ್ಮಕ ರೂಪಗಳ ಆಯ್ಕೆಯಲ್ಲಿ ಕಲಾವಿದರು ಮೊದಲಿಗೆ ಗೆದ್ದು ಬಿಟ್ಟಿರುತ್ತಾರೆ.

ಸಾಮಾನ್ಯ ಜನರಿಗೂ ಸಹ ತಮಗೆ ಪರಿಚಿತವಾದ ಸಾಮಗ್ರಿಯ ರೂಪಗಳು ಸುಲಭವಾಗಿ ಮನದಾಳದಲ್ಲಿ ಶಾಶ್ವತಗೊಳ್ಳುತ್ತವೆ. ಹಾಗೆ ನೋಡಿದರೆ ನಿಸರ್ಗ ದೊಳಗಿರುವುದೆಲ್ಲ, ಮನುಷ್ಯನಿಗೆ

೨೦. ಸಾಂಪ್ರ ದಳವಾಯಿ : ಸಿ. ಚಂದ್ರಶೇಖರ, ಪು-೨೨
೨೧. ಅದೇ.

ಪರಿಚಯವಿರುವಂತಹದ್ದೆ. ಆದರೆ ಕಲಾವಿದನಾದವರು ಅದನ್ನು ಸಂಯೋಜಿಸುವಾಗ ಸ್ಪಷ್ಟ ರೂಪಗಳನ್ನು ಅಮೂರ್ತಗೊಳಿಸುತ್ತಾನೆ. ಈ ವಿಷಯದಲ್ಲಿ ಸಿ.ಚಂದ್ರಶೇಖರ ತುಂಬಾ ನಿಷ್ಣಾತರು, ಇಲ್ಲಿ ಅವರು ಕಂಡಂತಹ ರೂಪಗಳ ಯಾವುದೋ ಒಂದು ಭಾಗವನ್ನು ಚಿತ್ರಿಸುವುದರಿಂದ ಚಿತ್ರದ ಅರ್ಥವಂತಿಕೆ ನಮಗೆ ಸುಲಭವಾಗಿ ದಕ್ಕುವಂತಿರುವುದಿಲ್ಲ. ಅಲ್ಲಿ ಪ್ರಧಾನ ಪಾತ್ರವಹಿಸುವುದೇನೆಂದರೆ ಬಣ್ಣಗಳ ವಿನ್ಯಾಸ ಮತ್ತು ಸ್ಪೇಸ್ ಇ ಎರಡರ ಮೂಲಕ ಚಂದ್ರಶೇಖರ ಅವರ ಚಿತ್ರಗಳು ಹೊಸ ಹೊಸ ಅರ್ಥ ಸಾಧ್ಯತೆಗಳನ್ನು ನಮ್ಮ ಮುಂದೆ ಮೂಡಿಸುತ್ತವೆ. ಅವರು ವಾಸ್ತವತೆಯನ್ನು ಅವಾಸ್ತವಿಕತೆಯೊಳಗೆ ಸಂಲಗ್ನಗೊಳಿಸುವುದರಿಂದ ಮತ್ತು ಎರಡು ವಸ್ತುಗಳನ್ನು ಭಿನ್ನ ಸ್ವರೂಪದಲ್ಲಿ ಇಟ್ಟಾಗ ಅದಕ್ಕೆ ಅರ್ಥಗಳು ಬೇರೆ ಬೇರೆಯಾಗಿ ಮೂಡತೊಡಗಿರುವುದನ್ನು ಇವರ ಕಲಾಕೃತಿಗಳಲ್ಲಿ ನೋಡಬಹುದು. ಇದರಿಂದಾಗಿ ನೋಡುವ ಮತ್ತು ಸಮಾಜದ ನೋವು ಅವನ ವೈಯಕ್ತಿಕತೆಯ ನೋವು ನಲಿವುಗಳ ಜೊತೆ ಸ್ಪಂದಿಸುತ್ತವೆ. ಆದ್ದರಿಂದ ಚಿತ್ರಕಲೆಯ ವೈಯಕ್ತಿಕತೆಯನ್ನು ಕಳಚಿ ಸಾಮೂಹಿಕಗೊಳಿಸಿದ ಕೀರ್ತಿ ಈ ಕಲಾವಿದರಿಗೆ ಸಲ್ಲುತ್ತದೆ.[೨೨]

ಇವರ ಕಲಾಕೃತಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಒಂದು ಕಡೆ ತನ್ನ ಪರಂಪರೆಯ ಮೂಲಗಳು ಮತ್ತು ಅವುಗಳಿಂದ ಪ್ರೇರಿತವಾದ ಸಂವೇದನೆಗಳನ್ನು ಬೆಳೆಸುತ್ತಾ ಹೋಗುವುದು ಮತ್ತೊಂದು ಕಡೆ ಅಂಥ ಮೂಲಗಳು ಸಾಮಾಜಿಕ ಸಂದರ್ಭದಲ್ಲಿ ಪಡೆಯುವ ಅರ್ಥ ಸಾಧ್ಯತೆಗಳಾವುವು ಎಂಬುದನ್ನು ನಿಷ್ಕರ್ಷಕ್ಕೆ ಒಳಪಡಿಸುವುದು ಈ ಎರಡು ಬಗೆಯ ಪ್ರಕ್ರಿಯೆ ಏಕ ಕಾಲಕ್ಕೆ ನಡೆಯುತ್ತಿರುತ್ತದೆ. ಮುಂದುವರಿದು ಆಳದಲ್ಲಿ ಸಾಮಾಜಿಕ ಅಸಮಾನತೆಗಳ ಬಗ್ಗೆ ಅಸಹನೆಯೂ ವ್ಯಕ್ತವಾಗಿರುತ್ತದೆ. ಈ ಮನೋಭಾವ ಹೆಚ್ಚು ಢಾಳವಾಗಿ ಕಾಣುವುದಿಲ್ಲ. ಬದಲಿಗೆ ವರ್ಣಗಳ ತೀರಾ ತೆಳು ಸಂಯೋಜನೆಯಂತೆ ಎಳೆಮಿಂಚಿನ ಪಲುಕಿನ ರೀತಿ ಸ್ಮೃತಿಪಟಲದಲ್ಲಿ ಹಾಯ್ದುಹೋಗುತ್ತದೆ. ಇದರಿಂದ ಚಿತ್ರ ಸಾಂಕೇತಿಸುವ ಬದುಕಿನ ಸಾರದ ಸಾಧ್ಯತೆ ವೈವಿಧ್ಯತೆಯನ್ನು ಪಡೆಯುತ್ತದೆ. ಇಂಥ ವೈವಿಧ್ಯತೆ ಪುನಃ ಎರಡು ಪಾತಳಿಗಳ ಮೇಲೆ ಬದುಕನ್ನು ವ್ಯಾಖ್ಯಾನಿಸುತ್ತದೆ. ಅದು ಬದುಕನ್ನು ಕಟ್ಟಿಕೊಡುತ್ತಾ ಹೋಗುವ ಒಂದು ರೂಪವಾಗುತ್ತಿದ್ದಾಗಲೇ ಸಹಜವಾಗಿಯೇ ಅದೊಂದು ಸಂಸ್ಕೃತಿಯ ವಿಮರ್ಶೆಯಾಗಿರುತ್ತದೆ.[೨೩] ಏಕೆಂದರೆ ವಿಮರ್ಶನ ಪ್ರಜ್ಞೆ ಕೆಲಸ ಮಾಡದೆ ಒಂದು ಚಿತ್ರ ರಚನೆಯೇ ಸಾಧ್ಯವಿರುವುದಿಲ್ಲ. ಇಂಥ ವಿಮರ್ಶನ ಪ್ರಜ್ಞೆಯೇ ಸೃಜನಶೀಲತೆಯ ತಳಹದಿ ಆದ್ದರಿಂದಲೇ ಚಂದ್ರಶೇಖರರ ಕೃತಿಗಳು ಸಾಮಾಜಿಕ ಅರಿವಿನ ಮುಖ್ಯ ಮಾಧ್ಯಮಗಳಾಗುತ್ತವೆ.

---

೨೨. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ. ಪು-೨೨

೨೩. ಅದೇ.

ಒಂದು ರೀತಿಯಲ್ಲಿ ಅವರ ಚಿತ್ರಗಳಲ್ಲಿ ವೈಯಕ್ತಿಕ ಅಮೂರ್ತತೆಗಿಂತ ಸಾಮೂಹಿಕ ಅಮೂರ್ತತೆಯನ್ನು ಕಾಣುತ್ತೇವೆ. ವಾಸ್ತವವಾಗಿ ಅಮೂರ್ತತೆ ಎರಡು ವೈಯಕ್ತಿಕತೆಯಿಂದ ಪಾರಾಗಲು ಸಿ. ಚಂದ್ರಶೇಖರ ಎರಡನೆ ವರ್ಗಕ್ಕೆ ಸೇರುತ್ತಾರೆ, ಬದುಕನ್ನು ಎಂದಿಗೂ ಸ್ಪಷ್ಟಗೊಳಿಸ ಲಾಗುವುದಿಲ್ಲ ಎಂಬ ಗ್ರಹಿಕೆಯೇ ಅಮೂರ್ತ ಕಲೆಯ ಜೀವಾಳ. ಬಹುಶಃ ಅಮೂರ್ತತೆಗೆ ವರ್ಣ ಸಂಯೋಜನೆಯಲ್ಲೆ ಹೆಚ್ಚು ಅವಕಾಶವಿರುವುದು ಇಂಥ ಅವಕಾಶವನ್ನು ನಿಯಂತ್ರಿತ ಸ್ವಾತಂತ್ರ್ಯದಲ್ಲಿ ಬಳಸಿಕೊಂಡಿದ್ದಾನೋ ಅಥವಾ ಸ್ವೇಚ್ಛೆಯಾಗಿ ಬಳಸಿದ್ದಾನೋ ಎಂಬುದರ ಆಧಾರದ ಮೇಲೆ ಒಬ್ಬ ಕಲಾವಿದ ನಮ್ಮೆದುರು ಉಳಿಯುವ ಅಳಿಯುವ ನೆಲೆಯಲ್ಲಿರುತ್ತಾನೆ. ಅಂತರ್ಮುಖತೆಯ ಅತಿರೇಕದಲ್ಲಿ ಅಮೂರ್ತಕಲೆ ಪಡೆದ ಸ್ವರೂಪ ಬೆಳೆಯದು. ವ್ಯಕ್ತಿ ವೈಶಿಷ್ಟ್ಯ ಅಧಿಕವಾಗಿ ಅವನ ಅಂತರಂಗದ ಕೂಟವಾಗಿ ಹೊರಹೊಮ್ಮಿದ ಈ ನೆಲೆ ಮೂರ್ತತೆಯನ್ನು ಹೆಚ್ಚು ಅಮೂರ್ತತೆಗೊಳಿಸುತ್ತ ಸಹಜವಾಗಿಯೇ ಪಾರ್ಶ್ವಿಕಗೊಂಡ ಇಂಥ ನೆಲೆಯ ವಿರುದ್ಧ ವಾಗಿಯೇ ಚಿತ್ರಕಲೆ ತನ್ನ ಸಾಮಾಜಿಕ ಮುಖವನ್ನು ಹೆಚ್ಚು ಚಲನೆಯಲ್ಲಿ ನಡೆಸಿತು. ಇದರಿಂದ ಚಿತ್ರಕಲೆಯೇ ಹೊಸ ರೂಪವನ್ನು ಪಡೆಯಿತು.

ಈ ನಿಟ್ಟಿನಲ್ಲಿ ಚಂದ್ರಶೇಖರರ ಸಾಧನೆ ತುಂಬಾ ದೊಡ್ಡದು. ಇವರ ಚಿತ್ರಗಳಲ್ಲಿ ಸಂಯೋಜನೆ ಎಂಬುದಕ್ಕೆ ಎರಡು ಅರ್ಥಗಳಿವೆ. ಒಂದು ವರ್ಣಗಳದ್ದು ಮತ್ತೊಂದು ವಸ್ತುಗಳದ್ದು. ಇವರ ಎಲ್ಲಾ ಚಿತ್ರಗಳ ಪ್ರಧಾನ ಆಶಯ ಎರಡು ವಸ್ತುಗಳನ್ನು ಭದ್ರಪಡಿಸುವುದು. ಇಲ್ಲಿಯೇ ಕಲಾವಿದ ಗೆದ್ದಿರುವುದು ಕೂಡಿಸಲು ಸಾಧ್ಯವಿರುವ ಮತ್ತು ಸಾಧ್ಯವಿರದ ವಸ್ತುಗಳ ಸಂಯೋಜನೆಯೇ ಒಂದು ಭಿನ್ನ ಅನುಭವವನ್ನು ನೀಡುತ್ತದೆ. ಪ್ರಾಥಮಿಕ ಹಂತದಲ್ಲಿ ಸರ್ವೇಸಾಮಾನ್ಯವಾಗಿ ಕೊಡಿಸಬಹುದೆಂದ ವಸ್ತುಗಳಿದ್ದರೆ ಮುಂದಿನ ಹಂತದಲ್ಲಿ ಸಾಧ್ಯವಿರದ ವಸ್ತುಗಳ ಕೂಟವು ನಮಗೆ ಸಹಜವಾಗಿಯೇ ಭಿನ್ನ ಅನುಭವ ನೀಡಲು ಯೋಗ್ಯವಾದುದ್ದಾಗುತ್ತದೆ. ಹೀಗೆ ಸೇರಿಸುವ ಮತ್ತು ಭದ್ರಪಡಿಸುವ ನೆಲೆಗಳ ಸಂಯೋಜನೆಯಲ್ಲಿ ಚಂದ್ರಶೇಖರರ ಯಶಸ್ಸಿದೆ ಎಂದೆನಿಸುತ್ತದೆ. ಇದಕ್ಕೆ ಸ್ವಿಚ್ ಸರಣಿಯ ಚಿತ್ರಗಳು ಸಾಕ್ಷಿಯಾಗಿವೆ.[೨೪]

ಇಂಥ ಸಂಯೋಜನೆಗೆ ಮತ್ತೊಂದು ಮುಖವೆಂದರೆ ಅಸಂಬದ್ಧತೆ ಇದೊಂದು ಮೂಲಸ್ಥಾಯಿ ಯಾಗಿ ಈ ಕಲಾವಿದರಲ್ಲಿ ಬಳಕೆಯಾಗಿದೆ ಎಂಬುದನ್ನು ಗ್ರಹಿಕೆಗೆ ಅಸಂಬದ್ಧತೆ ಈ ಹಂತದಲ್ಲಿ ಬದುಕನ್ನು ಹಿಡಿಯಲು ಯತ್ನಿಸಿದ ಕಲಾವಿದನ ಗೆಲುವನ್ನು ವಾಸ್ತವ ಬದುಕು ಏಕಮುಖಿ ಚಿಂತನೆಯದಲ್ಲ ಬಹುಮುಖಿಯಾದುದು. ಅದು ಬಹುಮುಖಿ ಸಂಸ್ಕೃತಿಯ ನಿಷ್ಪನ್ನ. ಆದ್ದರಿಂದ ತುಂಬಾ ಸಹಜವಾಗಿಯೇ ಉದ್ಭವವಾಗುವ ಸಮಸ್ಯೆಯೆಂದರೆ ಅಸಂಬದ್ಧತೆ. ಇದಕ್ಕೆ

೨೪. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ. ಪು-೧೨

ದ್ವಂದ್ವದ ಮತ್ತೊಂದು ಸಾಧ್ಯತೆಯಿದೆ. ಇಲ್ಲಿ ಸಂಬಂಧಗಳ ಬಿರುಕು ಮುಖ್ಯವಾದುದಾಗಿದೆ.[೨೫] ಇವೆಲ್ಲವುಗಳ ಸಂಕೀರ್ಣ ಅಭಿವ್ಯಕ್ತಿಯ ರೂಪಗಳೇ ಚಂದ್ರಶೇಖರರ ವರ್ಣಚಿತ್ರಗಳ ಜೀವಾಳ. ಇನ್ನು ಕಲಾ ನೈಪುಣ್ಯತೆಯ ಸಂಯೋಜನೆಯ ಹಿನ್ನೆಲೆಯಲ್ಲಿ ಅವರು ಭಿನ್ನ ಭಿನ್ನ ಮಾಧ್ಯಮಗಳನ್ನು ಬಳಸುತ್ತಾರೆ. ವರ್ಣಚಿತ್ರಗಳು ಇದ್ದಂತೆ ಅವರು ಅಚ್ಚು ಚಿತ್ರಗಳನ್ನು ಅಷ್ಟೇ ಸಮರ್ಥವಾಗಿ ಬಳಸಬಲ್ಲರು. ಅದೇ ಕಾರಣ ಅವರು ಗ್ರಾಫಿಕ್ ಕ್ಷೇತ್ರದಲ್ಲಿ ತುಂಬಾ ನೈಪಣ್ಯತೆ ಇರುವವರು. ಅಲ್ಲದೆ ಸಂಸ್ಕೃತಿ ನಿಷ್ಪವಾದ ಪುರಾಣ ಪತ್ರಿಕೆಗಳನ್ನು ಆಹಾರವಾಗಿ ಬಳಸುತ್ತಾರೆ. ಉದಾ: ಗುಲಾಬಿ ಹೂ ಸೂಸುವ ಅರಸ ಭಾರತದ ಮಧ್ಯಯುಗದ ಚಿತ್ರಕಲೆಯ ಅದರಲೂ ಮೊಘಲ್ ಚಿತ್ರಕಲೆಯ ಸಾಮಾನ್ಯವಾದ ಒಂದು ಭಂಗಿ. ಚಂದ್ರಶೇಖರ ಚಿತ್ರಗಳಲ್ಲೂ ಅಂತ ಒಬ್ಬ ಗುಲಾಬಿ ಹೂ ಸೋಸು ವ್ಯಕ್ತಿ ಬರುತ್ತಾನೆ. ಆದರೆ ಆಗ ಮೊಘಲ್ ದೊರೆ ಅಲ್ಲ ಆತ ಸಾಮಾನ್ಯವಾಗಿ ನಮ್ಮೆಲ್ಲರ ಪ್ರತಿನಿಧಿ. ದುರಂತವೆಂದರೆ ಅವನ ಮೂಗು ಚಿಕಿತ್ಸೆಗೊಳಗಾಗಿಯೇ ಇಲ್ಲದೆ ಗ್ರಹಿಕೆಯ ಶಕ್ತಿಯಿಲ್ಲದೆಯೋ, ಹೊಲಿಗೆಗೆ(ಸ್ಟಿಚ್) ಬಳಕೆಗಾಗಿ ಬಿಟ್ಟಿರುತ್ತದೆ. ಸಿದ್ದಮಾದರಿಯೊಂದಕ್ಕೆ ನೆನಪು ಸಾಧ್ಯ ಆದರೆ ಸಮಕಾಲೀನವಾಗಿ ಚಿತ್ರಿತವಾಗಿರುವ ಇವರ ಕಲಾಕೃತಿಗಳಲ್ಲಿ ಅರ್ಥ ವೈವಿಧ್ಯಮಯವಾದುದು.[೨೬]

ಚಿತ್ರಕಲೆ ಯಾವುದೇ ಅರ್ಥಗಳನ್ನು ವರ್ಣಸಂಯೋಜನೆ, ವ್ಯಕ್ತಿ, ಪ್ರಾಣಿ ಅಥವಾ ಸಸ್ಯ ಮತ್ತು ವಸ್ತುಗಳ ಸಂಯೋಜನೆಯಿಂದಲೇ ನಿಷ್ಪನ್ನಗೊಳಿಸಬೇಕು. ಇಂತ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಕಲಾವಿದನು ತನ್ನ ಮೆಚ್ಚಿನ ಭಾಗಕ್ಕೆ ಮಹತ್ವವನ್ನು ಕೊಡುತ್ತಾನೆ. ಕಲಾವಿದ ಎಂ.ಎಫ್.ಹುಸೇನರಿಗೆ ಹಿಂಡು ಕುದುರೆ ಅಥವಾ ಒಂಟೆ ಕುದುರೆ ಹೆಚ್ಚು ಇಷ್ಟ. ಜಿ.ಎಸ್.ವಾಸುದೇವ ಅವರಿಗೆ ಅತಿ ಚಿಕ್ಕ ಜೀವ ಜಂತು ಇಷ್ಟ. ಹೀಗೆ ಭಾರತದಲ್ಲಿ ಹಲವಾರು ಕಲಾವಿದರು ಹಲವಾರು ರೀತಿಯ ವಿಶೇಷ ವಸ್ತುಗಳಿಗೆ ಕಲಾಕೃತಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಇದೇ ರೀತಿ ಸಿ.ಚಂದ್ರಶೇಖರ ಅವರಿಗೆ ಭಿನ್ನ ವಸ್ತು ಮುಖ್ಯ. ಏಕೆಂದರೆ ಚಂದ್ರಶೇಖರ ನಿಂತಿರುವ ನಿಲುವು ಸಿಂಪಿಗನ ಸ್ಥಾನದಲ್ಲಿ ಕತ್ತರಿಸಿದ ಹಲವು ತುಂಡುಗಳನ್ನು ಹೊಲಿಯುವುದರಿಂದಲೇ ಹೊಸ ವಿನ್ಯಾಸವನ್ನು ಆತ ಸಾಧ್ಯಗೊಳಿಸುತ್ತಾನೆ.[೨೭] ಅದು ಅವನ ಕೆಲಸ. ಆದರೆ ಕಲಾವಿದನಾಗಿ ಸ್ಟಿಚ್‌ನೆಲೆಯಲ್ಲಿ ಭಿನ್ನ ಸಾಂಸ್ಕೃತಿಕ ಅರ್ಥಗಳನ್ನು ಹೊರಡಿಸುವಲ್ಲಿ ಕ್ರಿಯಾಶೀಲರಾಗುವುದನ್ನು ಕಾಣಬಹುದಾಗಿದೆ.

'ಕನ್ನಡಕವಿಲ್ಲದೆ ಸ್ಪಷ್ಟ ನೋಡದ ಹಂಬಲಾದ ಸಂಕೇತವಾಗಿ ಕನ್ನಡಕ ಬರುತ್ತದೆ.

---

೨೫. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ, ಪು-೧೨

೨೬. ಅದೇ., ಪು-೧೩

೨೭. ಅದೇ.

ಸಂಕೇತಗಳು ಅರ್ಥವಾಗುತ್ತಾ ಬೆಳೆಯುತ್ತಾ ಹೋಗುವುದೇ ಚಿತ್ರಕಲೆಯ ಮುಖ್ಯ ಉದ್ದೇಶವಾಗಿರುವುದರಿಂದ ಕ್ಯಾನ್ವಾಸಿನ ಮೇಲೆ ಹಲವು ಸಂಪುಟಗಳ ಮಾತುಗಳನ್ನು ಹಿಡಿದಿಡಬೇಕಾಗಿರುವ ಸವಾಲು ಕಲಾವಿದನಿಗಿರುತ್ತದೆ. ಆದ್ದರಿಂದಲೇ ಆತನ ಬಣ್ಣಕ್ಕೆ ಹಲವು ಸಂಪೂರ್ಣ ಜೈವಿಕ ಸ್ಥಿತಿಯನ್ನು ಪಡೆಯುತ್ತದೆ. ಏಕಮುಗ್ಗುಲಲ್ಲಿ ಮನುಷ್ಯನ ಗ್ರಹಿಕೆಗೆ ಸಿಕ್ಕುವ ಶಾರೀರಿಕ ಕೋನವನ್ನು ತೋರಿಸುವಲ್ಲಿ ಹಲವು ಜನ ಕಲಾವಿದರು ಯಶಸ್ಸು ಸಾಧಿಸಬಹುದು. ಆದರೆ ಅವುಗಳಿಗಿರುವ ಅರ್ಥಗಳ ವೈವಿಧ್ಯತೆ ಕೆಲವೇ ಕಲಾವಿದರಿಗೆ ಮಾತ್ರ ಸಾಧ್ಯ. ಅಂತಹ ಕಲಾವಿದರಲ್ಲಿ ಸಿ. ಚಂದ್ರಶೇಖರ ಕೂಡ ಒಬ್ಬರು. ಅವರ ಪ್ರಮುಖ ಕೆಲವು ಸಾಂಸ್ಕೃತಿಕ ಚಿಂತನೆಗಳನ್ನು ಅವರ ವರ್ಣಚಿತ್ರಗಳ ಆಧಾರದಿಂದ ಮುಂದಿನಂತೆ ಗ್ರಹಿಸಬಹುದು. ಈ ಕೆಲವು ಅಂಶಗಳನ್ನು ಅವರು ಜೀವನದುದ್ದಕ್ಕೂ ನಡೆಸುತ್ತಾ ಬಂದ ಚಿತ್ರಕಲೆಯ ಪ್ರಯೋಗಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.[೨೮]

ಕಲಾವಿದರಾಗಿ ಅವರು ಸಮಾಜದೊಳಗಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಬದುಕಿನ ಚಲನಶೀಲ ಗ್ರಹಿಕೆಯಾಗಿ ವ್ಯಕ್ತವಾಗುವ ವೈಚಾರಿಕತೆಗಳ ರೂಪಗಳನ್ನು ಆಧರಿಸಿ ಅವರ ಚಿತ್ರಗಳನ್ನು ಉಂಟು ಮಾಡುವ ಪರಿಣಾಮಗಳು ಗಮನಾರ್ಹವಾದವು. ವಾಸ್ತವಿಕವಾಗಿ ಭಾರತದೊಳಗೆ ಜೀವನ ತಕ್ಕಡಿಯಲ್ಲಿ ಒಂದು ಕಡೆ ಹಸಿವಿದೆ, ಬಹಳಷ್ಟು ಸಂದರ್ಭದಲ್ಲಿ ಇವು ಬೇರೆ ಬೇರೆಯಾಗಿಯೇ ನಿಲ್ಲುತ್ತವೆ. ಎಷ್ಟೋ ಬಾರಿ ಮನುಷ್ಯನ ಅಳಿವು-ಉಳಿವಿನ ನೆಲೆಗಳು ಇವೇ ಆಗಿರುತ್ತವೆ. ಇವೆರಡರ ಕೊಂಡಿಯಾಗಿ ಜನರಿಗೆ ಪರಿಚಿತ ವಸ್ತುಗಳೊಂದಿಗೆ ಪಡೆಯುವ ಚಿತ್ರಗಳ ಆಕಾರಗಳಲ್ಲಿ ಮೂಲಸ್ಥಾಯಿಯಾಗಿ ಜೀವನ ಗ್ರಹಿಕೆಯೇ ಒಂದು ಬ್ರಹ್ಮಾಂಡವಾಗಿ ಅನಾವರಣಗೊಳ್ಳುತ್ತದೆ.[೨೯] ತೀರಾ ಸೂಚ್ಯವಾಗಿಯೇ ಮತ್ತೊಂದು ಅರ್ಥವನ್ನು ಹೊರಹೊಮ್ಮಿಸುವ ಕಲಾವಿದನ ಇಂಥ ನೆಲೆಯಲ್ಲೆ ಬಹು ಅರ್ಥಗಳ ಧ್ವನಿಗಳೂ ಜೊತೆಯಾಗುತ್ತವೆ. ಆದ್ದರಿಂದಲೇ ಚಂದ್ರಶೇಖರ ಅವರ ಚಿತ್ರಗಳಲ್ಲಿ ಸಾಮಾಜಿಕ ಅರಿವು ಎಂಬುದನ್ನು ಒಂದು ಪ್ರಜ್ಞಾಭಿತ್ತಿಯೇ ಹೊರತು ಅದೊಂದು ವಾಗ್ವಾದವಲ್ಲ. ಅದನ್ನು ಮೀರಿದ ಮೌನವೂ ಆಗಿ ಕೆಲವೊಮ್ಮೆ ನಿಲ್ಲುವ ಸಾಧ್ಯತೆಗಳಿವೆ.

ಹಸಿವು ಮತ್ತು ಜ್ಞಾನಗಳ ಇಂಥ ಮುಖಾಮುಖಿಯೇ ಈ ದೇಶದ ಸಾಮಾಜಿಕ ಆವರಣವನ್ನೆಲ್ಲ ಬಯಲು ಮಾಡುತ್ತದೆ. ಆದ್ದರಿಂದ ಚಿತ್ರದೊಳಗೆ ಸಮಸ್ಯೆ ಅನಾವರಣ ಮುಖ್ಯವಾಗುತ್ತದೆ. ವಾಸ್ತವವಾಗಿ ಕಲಾವಿದ ಮಾಡಬೇಕಾಗಿರುವುದೇ ಇದನ್ನು. ವರ್ಣಚಿತ್ರದ ಮಾತು ಆರಂಭವಾಗುವುದೇ ಇದರಿಂದ. ಅದಕ್ಕೆ ಕೊಂಡಿಯೋಪಾದಿ ನಡೆಯುತ್ತಾ ಹೋಗುವ ಅರ್ಥದ ಅನಂತ ಸಾಧ್ಯತೆಗಳು ಕಾಲಕಾಲಕ್ಕೆ ಹೊಸ ರೂಪ ಪಡೆಯುತ್ತಲೇ ಇರುತ್ತವೆ. ಕಾಲದ

---

೨೮. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೧೭

೨೯. ಪ್ರೊ. ಎಂ. ಎಸ್. ಕೃಷ್ಣಯ್ಯ (ಸಂ.) : ಕಲೆ ಮತ್ತು ರಸಸ್ವಾದನೆ, ಪು-೮೪

ಅಗತ್ಯತೆಗಳಿಗೆ ಒಂದರ ಬದಲು ಮತ್ತೊಂದು ವಸ್ತು ತುಂಬುವ ಸಾಧ್ಯತೆಗಳನ್ನು ಕಲಾವಿದ ಶೋಧಿಸುತ್ತಾ ನಡೆಯುವುದನ್ನು ಕಾಣುತ್ತೇವೆ. ಇಲ್ಲಿ ವ್ಯಕ್ತಿಯ ಸಾಮಾಜಿಕ ಆವರಣದ ಸ್ವರೂಪವನ್ನು ವೈವಿಧ್ಯಮಯವಾಗಿ ಬೆಳಸುತ್ತಾ ಹೋಗುವುದನ್ನು ಕಾಣಬಹುದು.

ಸಾಮಾಜಿಕ ಸಂದರ್ಭದ ಮುಖ್ಯ ವಸ್ತುವಾಗಿ ಮನುಷ್ಯನನ್ನು ಸೃಷ್ಟಿಸಲಾಗಿದೆ. ಇಲ್ಲಿ ಮನುಷ್ಯನ ಇಂದ್ರಿಯಗಳ ಕ್ರಿಯಾಚೈತನ್ಯ ಮತ್ತು ಅವುಗಳ ದ್ವಂದ್ವಗಳಂತೆಯೇ ಮನುಷ್ಯ ಮಾನಸಿಕವಾಗಿ ಮತ್ತು ದೈಹಿಕವಾಗಿ ಜಗತ್ತಿನೊಂದಿಗೆ ಹೊಂದಿರುವ ಸಂಪರ್ಕಗಳ ನೆಲೆಗಳನ್ನು ಸಮೀಕರಿಸಲಾಗಿದೆ. ಈ ಸಮೀಕರಣ ಮುಖ್ಯವಾಗಿ ಹಾಗೂ ಅಮೂರ್ತ ವಸ್ತುಗಳೊಂದಿಗೆ ನಡೆಯುವುದರಿಂದ ವ್ಯಕ್ತಿಯ ಆಂತರಿಕ ಅಭಿವ್ಯಕ್ತಿಯೇ ಮುಖ್ಯವಾದರು, ಅದು ಅತಿನೆಲೆಯಲ್ಲಿ ವಿಜೃಂಭಿಸಿದ್ದರಿಂದ ಅದರ ಬಗ್ಗೆ ಅತಿವ್ಯಾಖ್ಯಾನ ಮತ್ತು ಅದಲ್ಲದೆ ಗ್ರಹಿಕೆಗೆ ಸಾಧ್ಯವಿಲ್ಲವೆಂಬ ನೆಲೆ ಕಲಾಸ್ವಾದನೆಯಲ್ಲಿ ಸ್ಥರಗಳನ್ನು ಏರ್ಪಡಿಸಿತು. ಅದೆ ಅಂಥಸ್ತರಗಳನ್ನು ಭ್ರಷ್ಟಗೊಳಿಸುವಲ್ಲಿ ಸಿ. ಚಂದ್ರಶೇಖರ ತಮ್ಮ ಕಲೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಅಮೂರ್ತತೆ ಎಂಬುದು ವರ್ಣಚಿತ್ರಕಲೆಯ ಮೂಲಕವೇ ಬಂದದ್ದು ನಂತರ ಸಾಹಿತ್ಯವು ಇದನ್ನು ಒಳಗೊಂಡಿತ್ತು. ಕರ್ನಾಟಕದಲ್ಲಿ ನವ್ಯಕಲೆಗೂ ನವ್ಯ ಸಾಹಿತ್ಯಕ್ಕೂ ಕಾಲಮಾನದ ವ್ಯತ್ಯಾಸವಿರಲಿಲ್ಲ. ಮಾರ್ಡನಿಸಂ ಒಟ್ಟೊಟ್ಟಿಗೆ ನಡೆದಿರುವುದನ್ನು ಕಾಣುತ್ತೇವೆ. ಬಹುಶಃ ನವ್ಯ ಕಲೆಯ ಪರಿವರ್ತಿತ ರೂಪವಾಗಿ ಚಂದ್ರಶೇಖರ ಚಿತ್ರಗಳನ್ನು ನಾವು ಅಭ್ಯಾಸ ಮಾಡಬೇಕಾಗುತ್ತದೆ. ಕಾರಣ ಅವರು ಸಂಕ್ರಮಣ ಕಾಲವನ್ನೇ ತಮ್ಮ ಚಿತ್ರಗಳಲ್ಲಿ ಚಿತ್ರಿಸಿದ್ದಾರೆ. ನವ್ಯ ಕಲೆ ಸಹ ಆ ಮೂಲಕ ಹೊಸ ಸತ್ವವನ್ನು ಪಡೆಯಲು ಸಾಧ್ಯವಾಯಿತು. ಅಮೂರ್ತಕಲೆಯ ಎರಡು ನೆಲೆಗಳೆಂದರೆ ಚಂದ್ರವೊಂದು ಮಾಹಿತಿಯಾಗದಂತೆ ಗೆಲುವು ಸಾಧಿಸುವುದು. ಮತ್ತೊಂದು ವ್ಯಾಖ್ಯಾನಿಸಿದ ಮಾತುಗಳಿಗೆ ಚಿತ್ರದಲ್ಲಿ ಸಾಕ್ಷಿ ಇಲ್ಲದಿದ್ದರು ಇದೆ ಎಂಬ ಭಾವನೆಯನ್ನು ಹುಟ್ಟಿಸುವುದು. ಈ ಎರಡನೇ ಅಂಶವೇ ಅಮೂರ್ತಕಲೆಯನ್ನು ಗೆಲ್ಲಿಸುವುದು ಅಲ್ಲದೆ ಬದುಕನ್ನು ಗ್ರಹಿಸುವ ಮಹತ್ವ ಮಾಧ್ಯಮ ಕೂಡ ಆಗಿರುವುದರಿಂದ ತಾರ್ತಿಕ ಜ್ಞಾನ ಇಲ್ಲದೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೆಂಬ ಭಾವನೆಯನ್ನು ಮೂಡಿಸಿತು. ಆದರೆ ಅದರ ಹಂಗು ತೊರೆದು ಚಂದ್ರಶೇಖರ ಕಲಾಕೃತಿಗಳು ಬೆಳೆದದ್ದು ಸಮಾಜ ಮುಖಿಯಾಗಿ ಇಂದು ವೃಷ್ಟಿಸಮಷ್ಟಿಯಾದ ನೆಲೆ.[೩೦]

ಕಲಾಕೃತಿಗಳನ್ನು 'ತಯಾರಿಕೆ' ಎಂದು ತಿಳಿಯದೇ 'ಕಲಾಕೃತಿ' ಎಂದು ತಿಳಿದೇ ಗಂಭೀರವಾದ ಪ್ರಯೋಗಶೀಲತೆಯಲ್ಲಿ ತೊಡಗಿರುವ ಅವರ ಕಲಾಗಂಭೀರತೆ ಮೆಚ್ಚತಕ್ಕದ್ದು.

೩೦. [illegible] ದಳವಾಯಿ : ಸಿ ಚಂದ್ರಶೇಖರ, ಪು–೧೬

ಒಬ್ಬ ಕಲಾವಿದ ಯಾಂತ್ರಿಕ ಆಗಲಾರ, ಎಂಬುದೇ ಅವನ ಸೃಜನಶೀಲತೆಯ ಸವಾಲಾಗಿರುತ್ತದೆ. ಏಕೆಂದರೆ ವಾಣಿಜ್ಯಕರಣದ ಎಲ್ಲಾ ಹಿಡಿತಗಳಿಂದಲೂ ನಿರಂತರವಾಗಿ ಕಲಾವಿದ ತಪ್ಪಿಸಿಕೊಳ್ಳುತ್ತಲೇ ಇರಬೇಕಾಗುತ್ತದೆ. ಕಂಡುಕೊಂಡಿದ್ದೇನೆ. ಮೂರು ಸರಣಿ ಚಿತ್ರಗಳಿಗೆ ಒಂದು ವಿಕಾಸಶೀಲತೆ ಇದೆ. ಅದರಲ್ಲಿ ಗ್ರಾಫಿಕ್ಸ್ ತಂತ್ರಜ್ಞತೆ ಪ್ರಧಾನವಾಗಿದ್ದಾಗ 'ಸ್ವಿಚ್' ಸರಣಿಯ ಪ್ರಾಧಾನ್ಯತೆ. ಜೀವನ ಗ್ರಹಿಕೆಯ ಗಂಭೀರ್ಯತೆಯಲ್ಲಿ ಪಿನ್ ಅಂಡ್ ಫೋಲ್ಡ್ ಹಾಗೆ ಜೀವನದ ತಾತ್ವಿಕ ಜಿಜ್ಞಾಸೆಯ ಕಾಲಕ್ಕೆ ಪ್ಯಾರಾಡಾಕ್ಸ್ ಸರಣಿ ಚಿತ್ರಗಳನ್ನು ಅನ್ವಯಿಸಿ ಹೇಳಬಹುದು.[೩೧] ಇವೆಲ್ಲವುಗಳ ಭಿತ್ತಿ ಮೌನ.

ಆಂತರಿಕ ದೃಷ್ಟಿಯ ಕೇಂದ್ರ ಅವರ ಚಿತ್ರಗಳ ಮುಖ್ಯ ಗ್ರಹಿಕೆ. ಚಚೌಕದ ಚಿತ್ರಕ್ಕೆ ಕಂಪಾಸ್ ಕೋನ ನಿರ್ಧರಿಸತೊಡಗಿದರೆ ಅದು ಮನುಷ್ಯನ ಬದುಕಿಗೆ ತನ್ನ ಕೇಂದ್ರವನ್ನು ಗುರುತಿಸಿಕೊಳ್ಳುತ್ತದೆ. ವಿಭಿನ್ನ ಕೋನಗಳನ್ನು ಒಟ್ಟು ಶಕ್ತಿಯೂ ಆ ಚಿತ್ರಗಳಿಗಿವೆ. ಆದ್ದರಿಂದಲೇ ಅತ್ಯಾಧುನಿಕ ಬದುಕಿನೊಳಗೆ ಅದಿಮಾನವನ ಗುಹಾಚಿತ್ರಗಳ ಮಾದರಿಯ ಹಿಂದೆ ಕಾಲದ ಚರ್ಚೆಯನ್ನು ನೋಡಿದೆವು. ಆದರೆ ಕಾಲದ ಸಮಯ ಅನಿರ್ದಿಷ್ಟತೆಯಲ್ಲಿ ಕಾಲವನ್ನು ಗಣನೆಗೊಳಿಸುವ ಪ್ರಯತ್ನಗಳು ಇಲ್ಲಿ ನಡೆದಿವೆ. ಇಂದು ಯಾಂತ್ರಿಕತೆಯನ್ನು ಮೀರಿದ ಗ್ರಹಿಕೆ, ವಾಸ್ತವವನ್ನು ಹೀಗೆ ಅಪ್ರಮಾಣ-ಗೊಳಿಸುವುದೇ ಕಲೆಯ ಮುಖ್ಯ ಕೆಲಸ. ಅದು ಗಡಿಯಾರವಲ್ಲ. ದಿನ, ಮಾಸಿಕ, ವರ್ಷಗಳ ಗಣನೆಯಿಲ್ಲ ಕಾಲವನ್ನು ಭಗ್ನಗೊಳಿಸಿ ತಾನೇ ಒಂದು ಸರ್ವಕಾಲಿಕ ವಾಗುವ ಗುಣ ಚಂದ್ರಶೇಖರರ ಚಿತ್ರಗಳಲ್ಲಿ ಢಾಳವಾಗಿ ಕಾಣುತ್ತದೆ. ಆದ್ದರಿಂದಲೇ ಅವು ವರ್ಣಮಾಹಿತಿಯಾಗುವುದಿಲ್ಲ ಬದಲಿಗೆ ವರ್ಣಾನುಭವವಾಗುತ್ತವೆ.

ಕರ್ನಾಟಕದ ಅಮೂರ್ತಕಲೆಗೆ ಹೊಸದೃಷ್ಟಿಯೊಂದನ್ನು ಬೆಳೆಸಿದ ಕೀರ್ತಿ ಅವರಿಗೆ ಸಲ್ಲಬೇಕು. ಏಕೆಂದರೆ ಪಾಶ್ಚಾತ್ಯ ದೃಶ್ಯಕಲಾ ತಂತ್ರಗಳನ್ನು ಅನುಸರಿಸುವಲ್ಲಿಯೇ ಹೆಚ್ಚಿನದನ್ನು ಸಾಧಿಸಹೊರಟ ಅಮೂರ್ತ ಕಲೆ ನಮ್ಮ ಸಮಕಾಲೀನ ಸಾಮಾಜಿಕ ಬದುಕಿನಿಂದ ವ್ಯತಿರಿಕ್ತವಾಗಿ ಇರಲಿಕ್ಕೆ ಬಂದಂತಿತ್ತು.[೩೨] ಇವರ ಕಲಾಕೃತಿಗಳ ಕೇಂದ್ರವಸ್ತು ಮನುಷ್ಯನೇ ಹೊರತು ಮನುಷ್ಯರ ಸ್ಥಿತಿಗಳಲ್ಲಿ ವ್ಯಕ್ತಿ ಮತ್ತು ಜಗತ್ತಿನ ಅನಂತತೆಗಳನ್ನು ಬಿಡಿಯಾಗಿ ಕೆಲವೊಮ್ಮೆ ಹಿಡಿಯಾಗಿ ರೂಪಿಸುವ ನೆಲೆಗಳು ಸಂಯೋಜಿತವಾದಂತೆ ಕೆಲವೊಮ್ಮೆ ಪ್ರತ್ಯೇಕಗೊಂಡಂತೆ ಚಿತ್ರಿತವಾಗುತ್ತದೆ. ಅಲ್ಲದೆ ಭವಿಷ್ಯದ ಅನಂತತೆ ಕಡೆ ಹೆಚ್ಚು ಕೈಚಾಚಿರುವ ಸ್ಥಿತಿಯೂ ಇದೆ. ಇದಕ್ಕೆ ಮತ್ತೊಂದು ಸಾಮಾಜಿಕ ಕಾರಣವೂ ಇದೆ. ಸಮಕಾಲೀನ ಬದುಕಿನ ಸಂದಿಗ್ಧಗಳಿಗೆ ಬಿಡುಗಡೆಯ ಸಾಧ್ಯತೆಗಳೆರಡು

೩೧. ನಾಡಪ್ಪ ಪಳನಾಡು : ಸಿ. ಚಂದ್ರಶೇಖರ. ಪು–೧೬, ೧೭
೩೨. ಅದೇ. ಪು–೧೯

ಒಂದು ಭೂತ ಇಲ್ಲದ ಭವಿಷ್ಯ ಬಹಳಷ್ಟು ಸಾರಿ ನಿಂತ ಸಮಕಾಲೀನತೆಯನ್ನು ಭೂತಗೊಳಿಸುವಲ್ಲಿ ಕಲೆ ಬೇಗ ಯಶಸ್ವಿಯಾಗುತ್ತದೆ.[೩೩] ಮತ್ತು ಅದು ತುಂಬಾ ಸುಲಭವಾದದ್ದು ಸಹ. ಆದರೆ ಭವಿಷ್ಯಗೊಳಿಸಲು ಕಷ್ಟವೆಂದಲ್ಲ ಮತ್ತು ಹಾಗೆ ಯಾಂತ್ರಿಕಗೊಳಿಸಿದ್ದ ಕಲಾಕೃತಿಯು ಆಗಲಾರದು. ಆದರೆ ಸಮಕಾಲೀನ ಬದುಕು ನೀಡಿದ ಅನುಭವ ದ್ರವ್ಯದಿಮದ ಭವಿಷ್ಯಗೊಂಡ ಬದುಕು ಹೆಚ್ಚು ಅರ್ಥಪೂರ್ಣ ಅದೇ ಕಲೆ ಮಾಡಬೇಕಾಗಿರುವ ಕೆಲಸವು ಕೂಡ. ಆದರೆ ವರ್ತಮಾನ ಭೂತಗಳ ಶರೀರದ ಮೇಲೆ ನಿಂತಿರುವ ಮೆದುಳೇ ಭವಿಷ್ಯ. ಈ ಮೂರು ಕಾಲಗಳನ್ನು ಅರ್ಥಪೂರ್ಣವಾಗಿ ಒಂದುಗೂಡಿಸಿದ್ದಾರೆ ಸಿ.ಚಂದ್ರಶೇಖರ.

ಬದುಕನ್ನು ದೃಶ್ಯಗೊಳಿಸುವ ನಿರಂತರ ಪ್ರಯೋಗಶೀಲತೆ ಅವರ ಚಿತ್ರಗಳ ಜೀವಾಳ. ಸರಣೆ ಚಿತ್ರಗಳನ್ನು ಮಾಡಿದಾಗಲೂ ಭಿತ್ತಿಯಲ್ಲಿ ಸರಣೆತನವನ್ನು ಗುರುತಿಸಬಹುದೇ ಹೊರತು ಒಂದೊಂದು ಪ್ರತ್ಯೇಕತೆ ಕಾಯ್ದುಕೊಂಡ ಚಿತ್ರಗಳಾಗಿ ಸ್ವಂತ ಅಸ್ತಿತ್ವವನ್ನು ಹೊಂದಿರುತ್ತದೆ. ವಾಸ್ತವವಾಗಿ ಸರಣೆ ಎಂಬುದು ಭಿತ್ತಿ ಮಾತ್ರ ಒಂದಷ್ಟು ಜೀವನಾನುಭವಗಳನ್ನು ಅಡಕ ಮಾಡಿಕೊಳ್ಳಲಿಕ್ಕಿರುವ ಒಂದು ಪ್ರಾಥಮಿಕ ಸಿದ್ಧತೆಯಷ್ಟೆ. ಆದರೆ ಒಂದೊಂದು ಚಿತ್ರವೂ ಬೆಳೆಯುತ್ತಾ ಹೋಗುತ್ತದೆ. ಈ ಮೌನದ ಸಾಂದ್ರತೆ ಎಷ್ಟು ಹೆಚ್ಚಾಗುತ್ತಾ ಹೋಗುತ್ತೋ ಅಷ್ಟೂ ಕಲಾವಿದನ ಬದುಕಿನ ಗ್ರಹಿಕೆಗೆ ಸಂಕೀರ್ಣವಾಗುತ್ತದೆ. ಈ ಅಂಶವನ್ನು ನಾನು ಚಂದ್ರಶೇಖರರ 'ಸ್ಟಿಚ್'ಪಿನ್ ಅಂಡ್ ಫೋಲ್ಡ್ ಪ್ಯಾರಡಾಕ್ಸ್ ಸರಣೆ ಚಿತ್ರಗಳಲ್ಲಿ ಬಹುಶಃ ಇಂಥ ಸವಾಲು ಅವರನ್ನು ಕೇವಲ ದೃಶ್ಯ ಕಲಾವಿದನಷ್ಟೆ ಆಗಲು ಬಿಡದೆ ಅದರಾಚೆಗಿನ ಜೀವನ ಸಂಶೋಧಕನಾಗುವಂತೆ ಒತ್ತಾಯಿಸಿದೆ. ಇಂಥ ಸಂಶೋಧನೆ ಸೃಜನಶೀಲತೆಗೆ ಹೊಸ ಮೆರುಗನ್ನು ನೀಡಬಲ್ಲದು, ಈ ಬಗೆಯ ಗ್ರೇಡ ಎಸ್ಕೇಫ್ ಕಲೆಯನ್ನು ಹೆಚ್ಚು ಜೀವನ ಸಾಂದ್ರಗೊಳಿಸುವಂತೆ ಮಾಡುತ್ತದೆ.

ಇವರ ಕಲಾಕೃತಿಗಳನ್ನು ಕಲಾಕೃತಿಗಳ ವಿಮರ್ಶಾ ಪರಿಭಾಷೆಯ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ಯಾವುದೇ ಒಂದು ಕ್ರಮ ವಿಪರ್ಯಾಸವೊಂದು ಎದ್ದು ಕಾಣುತ್ತಿರುತ್ತದೆ. ಅದೊಂದು ಹೊಸ ದರ್ಶನ. ಮೊದಲ ಹಂತದಲ್ಲಿ ಹಲವು ವೈಚಿತ್ರ್ಯಗಳಿಗಾಗಿ ಅದು ಮನ ಸೆಳೆಯುತ್ತದೆ. ಮೊದಲದು ಕಲಾಕೃತಿಯಾಗಿ ಗೆದ್ದಿದೆ. ಎರಡನೇ ಹಂತದಲ್ಲಿ ಅದು ಇತರ ಕಲಾಕೃತಿಗಳಿಗಿಂತ ಭಿನ್ನವಾದದ್ದೇನನ್ನೂ ಹೇಳುತ್ತದೆ. ಆ ಹೇಳುವಿಕೆ ಏನು? ಎಂಬುದೇ ಅವರ ಕಲಾಕೃತಿಗಳ ಶಕ್ತಿ ಮನಸ್ಸಿಗೆ ಆನಂದವನ್ನು ನೀಡಿ ಆಯಿತು ಮುಂದೇನು? ಈ ಸಂಶೋಧನೆಗೆ ಅವರ ಕಲಾಕೃತಿಗಳು ಒತ್ತಾಯಿಸುತ್ತವೆ. ಈ ಒತ್ತಾಯಗಳಿಗೆ ಸ್ಪಂದನ ನಾವು ಸಮಾಜವನ್ನು ಹೇಗೆ ಗ್ರಹಿಸಿದ್ದೇವೆ ಎಂಬುದನ್ನು ಅವಲಂಭಿಸಿರುತ್ತದೆ.[೩೪]

೩೩. ರಾಜಪ್ಪ ದಳವಾಯಿ : ಸಿ. ಚಂದ್ರಶೇಖರ. ಪು–೧೬
೩೪. ಅದೇ. ಪು–೧೭

ಚಿತ್ರಕಲೆ ಕಲೆಯಾಗಿ ಮಾತ್ರ ಇರಬೇಕೆ? ಅದು ಸಮಾಜ ವಿಮರ್ಶೆಯಾಗಬೇಕು? ಈ ಹಿಂದೆ ನಾನು ಪ್ರಸ್ತಾಪಿಸಿದ್ದೇನೆ. ಕಲೆಯಾಗುವುದೇ ಸಮಾಜ ವಿಮರ್ಶೆಯ ಮೂಲಕ ಇವರ ಕಲಾಕೃತಿಗಳಲ್ಲಿ ಸಾಮಾಜಿಕ ವೈಪರಿತ್ಯವೊಂದು ತಟ್ಟನೆ ಕಣ್ಣಿಗೆ ಹೊಡೆಯುತ್ತದೆ. ಕಾರಣ ಈ ಚಿತ್ರಗಳು ಇತರ ಕಲಾವಿದರ ಚಿತ್ರಗಳಂತಲ್ಲ, ಭಿನ್ನವಾದ ಅಥೋಲೋಕದ ವಿಷಯಗಳನ್ನು ಹೇಳುತ್ತಿವೆ. ಇದುವರೆಗೆ ಅನುಭವಕ್ಕೆ ಬರದ ಮತ್ತೇನನ್ನೋ ಇವು ಸೂಚಿಸುತ್ತವೆ. ಆ ಮೂಲಕ ನಮ್ಮ ಚಿತ್ರವನ್ನು ಸಾಮಾಜಿಕ ಚಿತ್ರಗಳತ್ತ ಕರೆದೊಯ್ಯುವ ಕೆಲಸವನ್ನು ಇವರ ಕಲಾಕೃತಿಗಳು ಮಾಡುತ್ತವೆ. ಆದ್ದರಿಂದಲೆ ಇಲ್ಲಿಯ ಕಲೆಯ ನೆಲೆ ಸಮಾಜ ಮುಖಿಯಾದುದು.[೩೫] ಈ ಕೆಲವು ಮುಖ್ಯ ಅಂಶಗಳನ್ನು ನಾನು ಚಂದ್ರಶೇಖರರ ಕಲಾಕೃತಿಗಳ ಅಧ್ಯಯನದಿಂದ ಕಂಡುಕೊಂಡು ಸಾಮಾನ್ಯ ಅಂಶಗಳು ಈ ನಿಟ್ಟಿನಲ್ಲಿ ಅವರ ಕಲಾಕೃತಿಗಳ ಅಧ್ಯಯನದ ಸಾಧ್ಯತೆಗಳು ಮುಖ್ಯ ಎಂದು ಗಮನಿಸಿದೆ. ಪ್ರಮುಖವಾಗಿ ಈ ಕೆಲವು ಅಂಶಗಳು ಕಲಾಕೃತಿಯ ಒಳಪ್ರವೇಶಕ್ಕೆ ಮಾರ್ಗದರ್ಶನ ನೀಡಬಲ್ಲವು. ಏಕೆಂದರೆ ಕೇವಲ ಕಲಾವಸ್ತುವಿನ ಅಧ್ಯಯನ ನಮ್ಮ ಸಮಕಾಲೀನ ಸಾಮಾಜಿಕ ವಿಮರ್ಶೆಯೂ ಆಗಿರುವುದರಿಂದ ಕಲಾಕೃತಿಗಳು ಬಿಟ್ಟುಕೊಟ್ಟ ಫಲಿತಗಳು ನಮ್ಮ ಕಲಾಮೀಮಾಂಸೆಯನ್ನು ಬೆಳೆಸುತ್ತದೆ. ಆದ್ದರಿಂದ ಚಂದ್ರಶೇಖರರ ಕಲಾಕೃತಿಗಳ ಅಧ್ಯಯನವೆಂದರೆ ಪ್ರಯೋಗಶೀಲ ಮಾದರಿಗಳ ಅಧ್ಯಯನವೆಂದೇ ನನ್ನ ಅಭಿಪ್ರಾಯ.[೩೬]

ಸಿ. ಚಂದ್ರಸೇಖರರವರ ವರ್ಣಚಿತ್ರಗಳು ಮ್ಯೂರಲ್‌ಗಳು, ಗ್ರಾಫಿಕ್ ಚಿತ್ರಗಳು, ಶಿಲ್ಪಗಳು ಮುಂತಾದ ಹಲವು ಕಲಾಮಾಧ್ಯಗಳಲ್ಲಿ ತಮ್ಮ ಸಂವೇದನೆಗಳನ್ನು ಅಭಿವ್ಯಕ್ತಿಸಿದ್ದಾರೆ. ಒಟ್ಟಾರೆಯಾಗಿ ಅದನ್ನು ಸಾಮಾಜಿಕ ಸಂವೇದನೆ ಎಂಬ ಪರಿಕಲ್ಪನೆಯಲ್ಲಿ ಹಿಂದೆ ವಿಶ್ಲೇಷಿಸಿದ್ದೇನೆ. ಕಲೆ ಕಲೆಗಾಗಿ ಅಲ್ಲ ಸಮಾಜಕ್ಕೆ ಎಂಬ ನಿಲುವಿನ ಕಲಾಭಿವ್ಯಕ್ತಿ ಚಂದ್ರಶೇಖರ ಅವರದು ಅಲ್ಲಿ ನಾವು ಕಾಣಬಹುದಾದ ಮುಖ್ಯ ಅಂಶಗಳೆಂದರೆ ಅಸಹನೆ, ವಿಶಾದ, ಮರುಕ, ಅನುಕಂಪೆಯ ಅಪೇಕ್ಷೆ, ವ್ಯಂಗ್ಯ ಮುಂತಾದ ಹಲವು ಭಾವಗಳ ಸಾಮಾಜಿಕ ಅಸಮಾನತೆಯ ಪ್ರತೀಕಗಳಾಗುತ್ತವೆ. ಆ ಮೂಲಕವಾಗಿ ಕಲಾಕೃತಿಗಳು ನಡೆಸುವ ಅನುಸಂಧಾನ ಸ್ತರರೂಪಿ ಸಮಾಜದ ಕಲಾತ್ಮಕ ಅಭಿವ್ಯಕ್ತಿಯಾಗಿದೆ.[೩೭] ಈ ಚಿತ್ರಗಳು ಬೇರೆಯವರ ಚಿತ್ರಗಳಿಂದ ಭಿನ್ನ ಆಗಿವೆ ಎಂದು ಕಲಾಕೃತಿಗಳ ಗ್ರಹಿಕೆಯಿಂದ ತಿಳಿದುಬರುತ್ತದೆ. ಆದ್ದರಿಂದ ಅವರ ಕಲಾಕೃತಿಗಳ ಪ್ರತ್ಯೇಕ ಅಧ್ಯಯನವೂ ಮುಖ್ಯವಾದ ವಿಷಯ. ಅವರ ಜಿಡಿ ಮತ್ತು ಸರಣಿ ಚಿತ್ರಗಳು ಕಲಾ ರಸಿಕನ ಮನದಾಳದಲ್ಲಿ ಎಂದೂ ಮರೆಯಲಾರದವು. ಕಾರಣ ಅವುಗಳ ಭಿನ್ನ ಸ್ವರೂಪವು ಉಳಿದ ವರ್ಣಚಿತ್ರಗಳಿಂದ

೩೫. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ, ಪು-೧೭
೩೬. ಅದೇ., ಪು-೧೭
೩೭. ಅದೇ.

ಪ್ರತ್ಯೇಕಿಸಿಕೊಳ್ಳುವ ಪ್ರತಿಭೆಯನ್ನು ತಮ್ಮ ಗರ್ಭದಲ್ಲಿ ಅಡಗಿರುತ್ತವೆ. ಅಲ್ಲದೆ ಅವುಗಳಲ್ಲಿನ ವಿನ್ಯಾಸ ನಮಗೆ ಬೇರೊಂದು ಅನುಭವಗಳನ್ನು ನೀಡುವ ಬಲವುಳ್ಳವಾಗಿವೆ. ಆದ್ದರಿಂದ ಅವುಗಳ ವಿವರವಾದ ಅಧ್ಯಯನ ಮುಖ್ಯವೆನಿಸಿದೆ. ಯಾವುದೇ ಕಲಾವಿದನ ಕಲಾಕೃತಿಗಳಿಗೆ ಅಧ್ಯಯನದಂಥ ಗೌರವ ಬೇರೊಂದಿಲ್ಲ. ಅದು ಸಮಾಜದ ಗೌರವವಾಗಿರುತ್ತದೆ.[೩೮] ಆದರೆ ನಮ್ಮ ಕಲ ಮೀಮಾಂಸೆ ಬಾಲ್ಯದಲ್ಲಿರುವುದರಿಂದ ಸಹಜವಾಗಿಯೇ ಅಧ್ಯಯನದ ಕೊರತೆಯಿದೆ ಆದ್ದರಿಂದಲೆ ಈ ಬಗೆಯ ಅಧ್ಯಯನ ಪ್ರಯೋಜನಕಾರಿ ಒಬ್ಬ ಕಲಾವಿದ ತನ್ನ ಕಲಾಕೃತಿಗಳ ಕಾಲಕ್ಕೆ ಗೆಲ್ಲುತ್ತಾನೆಂಬುದಕ್ಕೆ ಸಿ. ಚಂದ್ರಶೇಖರರ ಕಲಾಕೃತಿಗಳು ಸ್ಪಷ್ಟ ಸಾಕ್ಷಿಯಾಗಿವೆ. ಬಹುಮಾಧ್ಯಮಗಳ ಕಲಾವಿದರಾಗಿ ಇಂದು ಬಹುದೊಡ್ಡ ಪ್ರತಿಭಾವಂತರಾದ ಅವರ ಕಲಾಕೃತಿಗಳ ವಿಮರ್ಶೆ ಎಂದರೆ ಪ್ರತಿನಿಧಿಕವಾಗಿ ಅದು ನಮ್ಮ ಸಂಸ್ಕೃತಿ ವಿಮರ್ಶೆಯೇ ಆಗುತ್ತದೆ. ಇಂಥ ಸಾಮಾಜಿಕ ಅರಿವು ಅವರ ಕಲಾಕೃತಿಗಳಿಗೆ ಬೇರೆ ರಕ್ತ ಸತ್ವವನ್ನು ನೀಡಿವೆ. ಇವರ ಕಲಾಕೃತಿಗಳಲ್ಲಿ ಸಹಜತೆಯಿದೆ. ಅನುಭವದ ಸಾಚಾತನವಿದೆ. ಅದಕ್ಕೆ ಈ ನೆಲದ ಸಂಬಂಧವಿದೆ. ಹೊಕ್ಕುಳ ಬಳ್ಳಿಯನ್ನು ಹುಡುಕುತ್ತ ಹೋದರೆ ಅದರ ಮೂಲ ನಮ್ಮ ಸಂಸ್ಕೃತಿಯಲ್ಲಿ ಸಿಗುತ್ತದೆ. ಹಾಗೆಂದು ಇಂಥ ಸಾಮಾಜಿಕ ಅರಿವನ್ನು ಒರಟಾಗಿ ಹೇಳುವ ಕಲಾವಿದರಲ್ಲಿ ಚಂದ್ರಶೇಖರರು ಎಲ್ಲವನ್ನು ಭೂಮಿಯಂತೆ ಹೀರಿಕೊಂಡು ಬೀಜಮೊಳತಂತೆ ಎಲ್ಲೋ ಚಿಗುರಿ ಬಿಡುತ್ತದೆ. ಕಲಾವಂತಿಕೆಯಿಂದ ಚಂದ್ರಶೇಖರರ ಕಲಾಕೃತಿಗಳು ಮೊದಲು ಕಲಾಕೃತಿಗಳು ಹಾಗೆಯೇ ನಂತರವೂ ಕಲಾಕೃತಿಗಳು. ಅವರು ಪ್ರಮುಖ ನಾಲ್ಕು ಸರಣಿ ಚಿತ್ರಗಳನ್ನು ಮೊದಲಿಗೆ ಗಮನಿಸೋಣ ಸೆಟೈರ್ ಸೀರಿಸ್, ಸ್ವಿಚ್ ಸೀರಿಸ್, ಮೆಲ್ಡಿಂಗ್ ಗ್ಲೋ ಸೀರಿಸ್ ಮತ್ತು ಪ್ಯಾರಾಡಾಕ್ಸ್ ಸೀರಿಸ್‌ಗಳು ಒಂದೊಂದು ವಿಭಿನ್ನ ಮಾಧ್ಯಮ ಮತ್ತು ಅನುಭವ ನೀಡುವ ಚಿತ್ರಗಳಾಗಿವೆ. ಸೆಟೈರ್ ಸೀರಿಸ್‌ನಲ್ಲಿ ಅಮೂರ್ತ ವಸ್ತುಗಳನ್ನು ಮೂರ್ತಿಕರಿಸುವ ಶೋಧನೆಯಲ್ಲಿ ತೊಡಗಿದರೆ ಸ್ವಿಚ್ ಸೀರಿಸ್ ಅಸಾಧ್ಯ ವಸ್ತುಗಳ ಜೋಡಣೆಯ ತತ್ವಜ್ಞಾನವನ್ನು ಮಂಡಿಸುತ್ತವೆ.[೩೯]

ಸಂಯೋಜನೆ (*Composition*)

ಸಿ.ಚಂದ್ರಶೇಖರ ಅವರ ಕಲಾಕೃತಿಗಳನ್ನು ಅಧ್ಯಯನ ಮಾಡುವ ಮೊದಲಿಗೆ ಇಲ್ಲಿ ಸಂಯೋಜನೆ ಎಂಬ ಪದದ ಹುಟ್ಟು ಅರ್ಥ ಅದರ ರೂಪು ರೇಷೆ ಮುಂತಾದವುಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

'ಸಂಯೋಜನ್' ಎಂಬ ಶಬ್ದವನ್ನು ಇಂಗ್ಲೀಷ್‌ನಲ್ಲಿ *Composition* ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಯುಜ್ ಎಂದರೆ ಸೇರಿತು, ಕುಡಿಸು, ಜೋಡಣೆ ಕ್ರಮವಾಗಿ

೩೮. ರಾಜಪ್ಪ ದಳವಾಯಿ : ಸಿ. ಚಂದ್ರಶೇಖರ, ಪು-೧೨೮
೩೯. ಅದೇ.

ಇರಿಸು ಎಂದರ್ಥ. ಸಂಯೋಜನೆ ಎಂದಾಗ ಕಲೆಯ ಸಂದರ್ಭದಲ್ಲಿ ಒಂದು ಕಲಾಕೃತಿಯಲ್ಲಿ ಅದರ ಅಂಗಭಾಗಗಳನ್ನು ಒಟಂದದ ದೃಷ್ಟಿಯಿಂದ ಕಲಾತ್ಮಕವಾಗಿ ಒಂದು ಪೂರ್ಣ ರೂಪವಾಗಿ ಅಳವಡಿಸುವುದು.[೪೦] ಒಟ್ಟಾಗಿ ಹೇಳುವುದಾದರೆ ಬರಿ ಮೊತ್ತವಲ್ಲ; ಅದನ್ನು ಮೀರಿದ ಅನುಭವ. ಪ್ರೊ ಎಂ.ಎಚ್.ಕೃಷ್ಣಯ್ಯನವರು ಹೇಳುವಂತೆ "ಉತ್ತಮ ಸಂಯೋಜೆಯ ಗುಣ ಯಾವುದು? ಹೇಗಿದೆ? ಎಂಬುದು ಅನುಭವ ವೇದ್ಯವೇ ಹೊರತುಪಡಿಸಿ ವಿವರಣೆಗೆ ದಕ್ಕುವುದಿಲ್ಲ. ಏಕೆಂದರೆ ಉತ್ತಮ ಸಂಯೋಜನೆ ಸಾಧ್ಯತೆಗಳು ಅಪಾರವಾದದ್ದು"[೪೧] ಎಂಬ ಮಹತ್ವದ ಅಂಶಗಳು ಕಂಡುಬರುತ್ತವೆ. "ನೋಡಲು ದೃಷ್ಟಿಗೆ ಹಿತವಾಗಿರುವಂತೆ ಇರಿಸುವುದೇ ಸಂಯೋಜನೆಯಾಗುತ್ತದೆ" ಎಂದು ಆ.ಲ.ನರಸಿಂಹನವರು ಅಭಿಪ್ರಾಯಪಡುತ್ತಾರೆ.

ಸಿ. ಚಂದ್ರಶೇಖರರವರ ಕಲಾಕೃತಿಗಳಲ್ಲಿ ಸಂಯೋಜನೆ ಕುರಿತು ಹೇಳುವಂತೆ "ಕಲಾವಿದನು ಚಿತ್ರಿಸುವ ವಸ್ತುವಿಗೆ ಸಂಬಂಧಿಸಿದಂತೆ ಪೂರಕವಾಗಿ ಇತರ ಆಕೃತಿಗಳನ್ನು ಹೊಂದಿಸಿ ಚಿತ್ರ ರಚಿಸುವ ಕಲಾತ್ಮಕತೆಗೆ ಸಂಯೋಜನೆ ಎಂದು ಕರೆಯುತ್ತಾರೆ. ಚಿತ್ರ ಸಂಯೋಜನೆಯು ಚಿತ್ರಕಲೆಯ ಎಲ್ಲಾ ವಿಷಯಗಳಲ್ಲಿ ಅತಿಪ್ರಾಮುಖ್ಯ ಹಾಗೂ ಮಹತ್ವದ ವಿಷಯವಾಗಿರುತ್ತದೆ. ಕಲಾವಿದನ ಬುದ್ಧಿ ಮತ್ತೆಯ ಚಿತ್ರ ಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ ಕ್ರಿಯಾತ್ಮಕ ಅಭಿವ್ಯಕ್ತಿ ಕೌಶಲ್ಯಗಳು ಚಿತ್ರ ಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತವೆ.[೪೨]

ಸಂಯೋಜನೆಯ ಪರಿಕಲ್ಪನೆ ಆಧುನಿಕವೇನಲ್ಲ. ಐತಿಹಾಸಿಕ ಭಿತ್ತಿಚಿತ್ರಗಳಲ್ಲಿ ಇತಿಹಾಸ ಪೂರ್ವ ಗುಹೆಗಳ ಭಿತ್ತಿಯಲ್ಲಿಯೂ ಕೂಡಾ ಸಂಯೋಜನೆಯುಂಟು. ಚಿತ್ರ ಸಂಯೋಜನೆಯು ಸಾಂಪ್ರದಾಯಿಕವಾಗಿರಲಿಲ್ಲ. ಆಧುನಿಕವಾಗಿರಲಿಲ್ಲ. ಆಧುನಿಕ ಪಂಥಗಳಿಗನುಸಾರವಾಗಲಿ ಸಮಕಾಲೀನ ಕೃತಿಯಾಗಿರಲಿ ಅದರಲ್ಲಿ ಚಿತ್ರ ಸಂಯೋಜನೆಯ ಮೂಲ ತತ್ವಗಳಾಗಲಿ ನಿಯಮ ನಿಬಂಧನೆಗಳಾಗಲಿ ಇಲ್ಲದೆ ಹೋದಲ್ಲಿ ಅದೊಂದು ಪರಿಪೂರ್ಣ ಕಲಾಕೃತಿಯಾಗಲಾರದು[೪೩] ಎಂಬ ಮಾತು ಪ್ರಸ್ತುತವಾಗಿದೆ. ಪಾಶ್ಚಿಮಾತ್ಯರಲ್ಲಿ ಯಾವ ಬಗೆಯ ಭಾವನೆಯ ಆಕಾರಗಳನ್ನು ಯಾವ ಕಥಾ ಸಂದರ್ಭದಲ್ಲಿ ಹೇಗೆ ಇರಿಸಬೇಕೆಂಬ ಅವುಗಳಿಗೆ ಪೂರಕವಾಗಿ ಹಿನ್ನೆಲೆ ಮುನ್ನಲೆಗಳನ್ನು ತುಂಬಬೇಕೆಂಬ ಬಗ್ಗೆ ಒಂದು ನಿಶ್ಚಿತ ತತ್ವ(ಥಿಯರಿಗಳನ್ನು ಪ್ರತಿಪಾದಿಸಿದೆ. ಸಾಮಾನ್ಯ ಅಡ್ಡ ಅಗಲವಿರುವ ಫಲಕದಲ್ಲಿ ದೃಷ್ಟಿ ಅಡ್ಡಕ್ಕೆ ಹಾಯುವುದರಿಂದ ಆಕಾರಗಳನ್ನು ಸಾಲಾಗಿ ಇರಿಸಬೇಕೆಂದೂ ಎತ್ತರ ಹೆಚ್ಚಿರುವ ಫಲಕದಲ್ಲಿ ದೃಷ್ಟಿ ಕೆಳಗಿನಿಂದ ಮೇಲೆ ಹಾಯುವುದ

೪೦. ಪ್ರೊ. ಎಂ. ಎಚ್. ಕೃಷ್ಣಯ್ಯ (ಸಂ.) : ಕಲೆ ಮತ್ತು ರಸಸ್ವಾದನೆ, ಪು-೮೪

೪೧. ಅದೇ.

೪೨. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪು-೩೩೨

೪೩. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-[illegible]

ರಿಂದಲೂ ಚೌಕವಾದ ಆಕೃತಿಯಲ್ಲಿ ವೃತ್ತಾಕಾರವಾಗಿ ದೃಷ್ಟಿ ಹರಿಯುವುದರಿಂದ ಇವುಗಳಿಗೆ ಪೂರಕವಾಗಿ ಆಕೃತಿಗಳನ್ನು ಇರಿಸಬೇಕೆಂದೂ ಹೇಳಿಕೆಗಳಿವೆ. ಆಕೃತಿಗಳು ಉದ್ದವಾಗಿದ್ದರೆ ಮುಖಂಡನಂತೆ ಕಾಣುವುದೆಂದು, ಅಡ್ಡವಾಗಿದ್ದರೆ ಮಲಗಿದ ವಿಶ್ರಾಂತ ಸ್ಥಿತಿಯೆಂಬುದು ಮೂಲೆಯಿಂದ ಮೂಲೆಗೆ ಅಡ್ಡ ಹಾಯ್ದಿದ್ದರೆ, ಹಾರಾಟದ ಅನುಭವ ನೀಡುವುದೆಂದೂ, ತ್ರಿಕೋನವಾಕಾರದ ರಚನೆಯಲ್ಲಿ ಬಲಿಷ್ಟತೆಯನ್ನು ಕಾಣಬಹುದೆಂದು ವ್ಯಾಖ್ಯಾನಗಳಿವೆ ಎಂಬ ವಿವರಣೆ ಸಂಯೋಜನೆಯ ಲಕ್ಷಣಗಳನ್ನು ಹೇಳುತ್ತದೆ.

ಇಂಗ್ಲೀಷಿನಲ್ಲಿ 'ಬಣ'(ವರ್ಣ) ಎಂಬುದನ್ನು *colour* ಎಂಬ ಶಬ್ದದಿಂದ ಕರೆದರೆ ಅದರ ಸೂಕ್ಷ್ಮ ವ್ಯತ್ಯಾಸವನ್ನು ವರ್ಣಛಾಯೆ(*hue*) ಎಂಬ ಪದದಿಂದ ಕರೆಯುತ್ತಾರೆ.[೪೪] ಚಿತ್ರಕಲೆಯಲ್ಲಿ ಬಣ್ಣವು ಕಲಾಕೃತಿಯ ಜೀವಾಳ. ಕಲಾವಿದನ ಭಾವನೆಗಳಿಗೆ ಜೀವ ತುಂಬುವ ಪ್ರಾಣವಾಯು ಚಿತ್ರಕಲಾವಿದರು ಬಳಸುವ ಬಣ್ಣಗಳನ್ನು ಎಣ್ಣೆ ಬಣ್ಣ, ನೀರು ಬಣ್ಣ, ಹುಡಿ ಬಣ್ಣ, ಪೋಷ್ಟರ್ ಬಣ್ಣ, ಪೇಸ್ಟಲ್ ಬಣ್ಣ, ಆಕ್ರಾಲಿಕ್ ಬಣ್ಣ ಮುಂತಾಗಿ ಕರೆಯಲಾಗುತ್ತದೆ. ಬಣ್ಣಗಳ ವೈವಿಧ್ಯತೆಗಳಿಗನು ಗುಣವಾಗಿ ಕಲಾವಿದರು ವಿವಿಧ ತಂತ್ರ ಹಾಗೂ ವಿಧಾನಗಳಲ್ಲಿ ಚಿತ್ರಿಸುತ್ತಾರೆ. ಈ ಬಣ್ಣಗಳು ಕಲಾವಿದರ ಭಾವಾಭಿವ್ಯಕ್ತಿಗಳಿಗೆ ಸರಳವೂ ಸುಲಭವೂ ಆದ ಮಾಧ್ಯಮಗಳಾಗಿರುತ್ತವೆ. ಬಹು ಪುರಾತನ ಕಾಲದಿಂದ ಇಂದಿನವರೆಗೂ ಬಣ್ಣಗಳನ್ನು ಕಲಾವಿದರೂ ಬಳಸುತ್ತಿದ್ದಾರೆ[೪೫] ಎಂದು ಈ ಮಾತು ಬಣಗಳ ಮಹತ್ವ ಸಾರುತ್ತದೆ.

ಬಣ್ಣಗಳನ್ನು ಮೂಲ ಬಣ್ಣಗಳನ್ನು ಪೂರಕ ಬಣ್ಣಗಳು, ವಿರೋಧ ಬಣ್ಣಗಳು, ಗಾಢ ಬಣ್ಣಗಳು, ತೆಳು ಬಣ್ಣಗಳು, ತಂಪು ಗಣ್ಣಗಳು, ಪ್ರಖರ ಬಣ್ಣಗಳು ಪಾರದರ್ಶಕ ಬಣ್ಣಗಳು, ಅಪಾರದರ್ಶಕ ಬಣ್ಣಗಳೆಂದು ಕರೆಯಲಾಗುತ್ತದೆ. ಹಸಿರು, ನೀಲಿ, ಕೆಂಪು, ಹಳದಿ, ಕೇಸರಿ, ಬೂದು ಹಾಗೂ ಶಾಮ ಬಣ್ಣಗಳು ಮೂಲ ಬಣ್ಣಗಳೆಂದು ಸಾಮಾನ್ಯವಾದ ಒಂದು ತಿಳುವಳಿಕೆಯಿದೆ. ಈ ಎಲ್ಲ ಬಣ್ಣಗಳು ಕಾಮಲಬಿಲ್ಲಿನ ಬಣ್ಣಗಳಾಗಿರುತ್ತವೆ. ಆದರೆ ಬಣ್ಣಗಳ ಉತ್ಪತ್ತಿ ಸಂದರ್ಭದಲ್ಲಿ ನೀಲಿ, ಹಳದಿ ಹಾಗೂ ಕೆಂಪು ಬಣ್ಣಗಳು ಮಾತ್ರ ಮೂಲ ಬಣ್ಣಗಳೆಂದು ನಿರ್ಧರಿಸಲಾಗಿದೆ. ಈ ಮೂರು ಬಣ್ಣಗಳೇ ಮೂಲಬಣ್ಣಗಳು ಇವುಗಳ ಮಿಶ್ರಣದಿಂದ ನೂರಾರು ಸಾವಿರಾರು ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ.[೪೬]

ಸಿ.ಚಂದ್ರಶೇಖರ ಅವರು ಬೇರೆ ಬೇರೆ ಮಾಧ್ಯಮಗಳನ್ನು ಬಳಸಿ ತನ್ನ ಕಲಾಕೃತಿಗಳಿಗೆ

೪೪. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪು-೩೨೯

೪೫. ಕೆ. ವಿ. ಕಾಳೆ : ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪು-೫೫

೪೬. ಅದೇ., ಪು-೧೨

ಉನ್ನತ ಸ್ಥರಕ್ಕೇರಿಸಿದ್ದಾರೆ. ಆದರೆ ಹೆಚ್ಚಾಗಿ ತೈಲ ಮಾಧ್ಯಮವು ಅವರ ಕಲಾಕೃತಿಗಳಿಗೆ ಒಗ್ಗಿದೆ ಎಂದು ಹೇಳಬಹುದು.

ತೈಲ ಚಿತ್ರ ರಚನೆಯ ಪ್ರಾರಂಭವಾದುದು ಹದಿನೈದನೆಯ ಶತಮಾನದ ಪ್ರಾರಂಭದಲ್ಲಿ. ಆಗ ರಟ್ಟರಿವೆ(ಕ್ಯಾನ್ವಾಸ್) ಬಟ್ಟೆಯ ಮೇಲೆ ಸುಣ್ಣ ಅಥವಾ ಪ್ಲಾಸ್ಟರ್ ಆಫ್ ಪ್ಯಾರಿಸ್ ಲೇಪಿಸುತ್ತಿದ್ದರು. ಮೊಟ್ಟೆಯ ಬಿಳಿಯ ಭಾಗದೊಂದಿಗೆ ಬಣ್ಣವನ್ನು ಬೆರೆಸಿ ಕಲಾಕೃತಿಯನ್ನು ರಚಿಸುತ್ತಿದ್ದು ಇದನ್ನು ಟೆಂಪರಾ ಎಂದು ಕರೆಯುತ್ತಿದ್ದರು.[೪೭]

ಇದರ ಮೇಲೆ ಮೆರುಗೆಣ್ಣೆಯನ್ನು ಲೇಪಿಸಿದರೆ ತೈಲಚಿತ್ರ ಸಿದ್ಧವಾಗುತ್ತಿತ್ತು. ೧೯ನೆಯ ಶತಮಾನದವರೆಗೂ ಚಿತ್ರವನ್ನು ಒಂದು ಬಣ್ಣದಲ್ಲಿ ರಚಿಸಿ ಅದರ ಮೇಲೆ ಪಾರದರ್ಶಕ ಹೊಳಪು ಕೊಡುವ ಬಣ್ಣವನ್ನು ಲೇಪಿಸುತ್ತಿದ್ದರು. ತೈಲ ಚಿತ್ರ ರಚನೆಯ ಪ್ರಾರಂಭದಲ್ಲಿ ವರ್ಣದ್ರವ್ಯದ ಪುಡಿಯನ್ನು ಅಮೃತ ಶಿಲೆಯ ಮೇಲೆ ಅರೆದು ಅದಕ್ಕೆ ಸ್ವಲ್ಪ ತೈಲವನ್ನು ಸೇರಿಸಿ, ಬೇಕಾದ ತೈಲವರ್ಣವನ್ನು ತಯಾರಿಸಿಕೊಳ್ಳುತ್ತಿದ್ದರು. ಈಗ ತೈಲ ವರ್ಣ ಟ್ಯೂಬ್‌ಗಳಲ್ಲಿ ದೊರೆಯುತ್ತದೆ. ಬಣ್ಣವನ್ನು ತೆಳುಮಾಡಿಕೊಳ್ಳಲು ಟರ್ಪೆಂಟೈನ್ ಮತ್ತು ನಾಗರಸೆ ತೈಲವನ್ನು ಉಪಯೋಗಿಸುತ್ತಾರೆ. ತೈಲವರ್ಣ ಆರುವುದು ವಿಧಾನ. ಬೇಡವಾದ ವರ್ಣವನ್ನು ತೆಗೆದು ಬೇರೆ ಬಣ್ಣವನ್ನು ಉಪಯೋಗಿಸಬಹುದು. ಕಲಾವಿದ ತನಗೆ ಬೇಕಾದ ರೀತಿಯಲ್ಲಿ ತೆಳುವಾದ ಪಾರದರ್ಶಕವಾಗಿ ಇಲ್ಲವೆ ಮಂದವಾಗಿಯೂ ಉಪಯೋಗಿಸಬಹುದು. ತೈಲ ಚಿತ್ರಗಳು ಬಹಳ ಕಾಲದವರೆಗೂ ಇರುತ್ತವೆ. ತೈಲ ಚಿತ್ರಗಳ ಪರಿಚಯ ಭಾರತಕ್ಕೆ ಮಧ್ಯಯುಗದಿಂದಲೇ ಆದಂತೆ ಕಂಡುಬರುತ್ತದೆ.[೪೮]

ಮೊಘಲ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರು ಅಲ್ಲಿಂದ ತಂದ ಚಿತ್ರಗಳಲ್ಲಿ ತೈಲ ಚಿತ್ರಗಳೂ ಇದ್ದಿರಬಹುದು. ನಂತರ ಕಾಲದಲ್ಲಿ ಭಾರತದಲ್ಲಿ ವಿದೇಶಿ ಕಲಾವಿದರು ತೈಲ ವರ್ಣದಲ್ಲಿ ಚಿತ್ರಿಸಿರುವುದನ್ನು ಗೋವಾ ಮುಂತಾದೆಡೆಗಳಲ್ಲಿ ಕಾಣಬಹುದು. ಭಾರತೀಯ ಕಲಾವಿದರಲ್ಲಿ ರಾಜಾ ರವಿವರ್ಮನಿಂದ ತೈಲಚಿತ್ರ ರಚನೆ ವ್ಯಾಪಕವಾಗಿ ಆರಂಭಗೊಂಡಿತೆಂದು ಹೇಳಬಹುದು.[೪೯] ಸಿ.ಚಂದ್ರಶೇಖರ ಅವರು ಸಹ ೮೦ರ ದಶಕದಿಂದ ತೈಲವರ್ಣದ ಕಲಾಕೃತಿಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದು ಸಾಮಾಜಿಕ ಹಿನ್ನೆಲೆಯಲ್ಲಿ ವಿಭಿನ್ನ ಶೈಲಿ ಹಾಗೂ ವಿಷಯಾಧಾರಿತ ಕಲಾಕೃತಿಗಳು ರಚನೆಗೊಂಡಿವೆ. ತೈಲವರ್ಣದಲ್ಲಿ ಸಿ.ಚಂದ್ರಶೇಖರ ಅವರು

---

೪೭. ಕೆ. ವಿ. ಕಾಳೆ : ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪು-೨೦
೪೮. ಶಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪು-೧೭೭
೪೯. ಅದೇ.

ಆಧುನಿಕ ಸಂವೇದನೆಯ ಸಂಯೋಜನಾ ಕಲಾಕೃತಿಗಳೊಂದಿಗೆ ವುಮೆನ್‌ಸೀರಿಸ್ ಭಾವಚಿತ್ರಗಳನ್ನು ರಚಿಸಿದ್ದಾರೆ. ಇತರ ಮಾಧ್ಯಮಗಳಿಗಿಂತ ತೈಲವರ್ಣದಲ್ಲಿ ಬಹುಸಂಖ್ಯೆಯ ಕಲಾಕೃತಿಗಳು ಸೃಷ್ಟಿಯಾಗಿದ್ದು ಕಾಣಬಹುದು. ಅವರ ಕಲಾಜೀವನದ ಸಾಧ್ಯತೆಗಳು ಬಹುಮುಖಿಯಾದವು. ಅವರ ಚಿತ್ರಗಳಲ್ಲಿ ವಾಸ್ತವತೆಯ ಕಾಳಜಿ ಅಪಾರವಾಗಿರುತ್ತದೆ. ಆದರೆ ಅವರು ಆ ವಾಸ್ತವವನ್ನು ಹಾಗೇ ಇರಲು ಬಿಡದೆ ಆ ವಾಸ್ತವವನ್ನೇ ಸೃಜನಗೊಳಿಸುತ್ತಾರೆ. ಅದ್ಭುತ ಕಲಾವಿದನೆನ್ನಿಸಿಕೊಳ್ಳುವ ಅಚ್ಚರಿಗಿಂತ ವಾಸ್ತವತೆಯನ್ನು ಚಿಂತನೆಗೆ ಹಚ್ಚುವದು ದೊಡ್ಡ ಕಲಾ ಜವಾಬ್ದಾರಿ. ವಾಸ್ತವವನ್ನು ಗ್ರಹಿಸುವಲ್ಲಿ ಅವರ ಚಿತ್ರಗಳು ಯಶಸ್ವಿಯಾದಂತೆಯೇ ಅದರಿಂದ ನಿಷ್ಪನ್ನವಾಗಬಲ್ಲ ಸಾಮಾಜಿಕ ಚಿಂತನೆಯು ಸರ್ವಕಾಲಕ್ಕೆ ಅನ್ವಯವಾಗುವ ಸತ್ಯಗಳನ್ನು ಒಳಗೊಳ್ಳುತ್ತವೆ. ಒಂದು–ಮನುಷ್ಯಾಕೃತಿಯು ರಚನೆಯ ಸಾಧ್ಯತೆಗಳು ಅನಂತವಾದವು ಆದರೆ ಆ ಚಿತ್ರ ಎಷ್ಟರಮಟ್ಟಿಗೆ ಮನುಷ್ಯನ ಒಳಜಗತ್ತನ್ನು ಹೊರಜಗತ್ತನ್ನು ಅಥವಾ ಅವೆರಡರ ಅಂತರ್ ಸಂಬಂಧಗಳನ್ನು ನಿರೂಪಿಸುತ್ತದೆಂಬುದು ಮುಖ್ಯ.

ಸಿ.ಚಂದ್ರಶೇಖರ ಅವರು ಸುಮ್ಮನೆ ಚಿತ್ರಗಳನ್ನು ಬರೆಯುವವರಲ್ಲ. ಅವರ ಚಿತ್ರರಚನೆಯ ಪೂರ್ವ ಮೀಮಾಂಶೆ ಬಹುಮುಖಿಯಾದುದು. ವಾಸ್ತವವಾಗಿ ಸಮಸ್ಯೆಯ ಗ್ರಹಿಕೆ ಸ್ಪಷ್ಟಾತ್ಮಕ ರೂಪ ಪಡೆಯದೇ ಶಬ್ದಗಳಲ್ಲಿ, ಮನಸ್ಸಿನಲ್ಲಿ ಧ್ವನಿರೂಪ ಬೆಳೆಯುತ್ತಾ ಹೋಗುತ್ತದೆ. ಅಂಥ ರೂಪಗಳನ್ನು ಕೇವಲ ಚಿತ್ರಕಲಾ ಕ್ಷೇತ್ರದವರಿಗಷ್ಟೇ ಅಲ್ಲ ಇಡೀ ಜಗತ್ತಿಗೆ ಗ್ರಹಿಸಲು ಯೋಗ್ಯವಾದ ಮಾಧ್ಯಮವೊಂದರ ಹುಡುಕಾಟಕ್ಕೆ ತೊಡಗಿದ ನಿರಂತರತೆಯ ಮೂಸೆಯಲ್ಲಿ ಬಣ್ಣಗಳಲ್ಲಿ ರೂಪ ಕೊಡಬಲ್ಲಂಥ ಕೃತಿಯೊಂದು ನಿರ್ಮಾಣವಾಗುತ್ತದೆ. ಇಂಥ ಮಾಧ್ಯಮ ಮತ್ತು ಕಲಾವಿದನ ಸಾಮಾಜಿಕ ಚಿಂತನೆಯ ಒತ್ತಡಗಳಿಗೆ ಹೇಗೆ ಪರಿವರ್ತಿತ ರೂಪ ಪಡೆದರೆ ಎಲ್ಲರನ್ನು ಮುಟ್ಟುವ ಕಲಾಕೃತಿಯಾಗಬಲ್ಲದೆಂಬ ಚಿತ್ರಮೀಮಾಂಸೆಯ ಹಿನ್ನೆಲೆ ಅವರ ಚಿತ್ರಗಳು ತನ್ನದೇ ಆದ ರೂಪ ಪಡೆಯುತ್ತದೆ. ಉದಾ: ಮೊಟ್ಟೆ, ಕಲ್ಲು, ಪುಸ್ತಕ, ಹೊ. ಮುಂತಾದ ಜಗತ್‌ಪ್ರಸಿದ್ಧ ರೂಪಗಳನ್ನು ಬಳಸುತ್ತಾರೆ. ಇಂಥ ಮಾಧ್ಯಮಗಳು ಸಹ ಕಲಾವಿದ ಬೆಲೆದಂತೆ ಸಮಸ್ಯೆಗಳ ತೀಕ್ಷ್ಣೆ ಅಧಿಕವಾದಂತೆಲ್ಲ ಮನೋಗ್ರಹಿಕೆಗೆ ಬಂದ ಸಮಸ್ಯೆಗಳನ್ನು ಹೇಳುವ ಬದಲು ಆ ಸಮಸ್ಯೆಗಳಿಂದ ಹೊರಬಲ್ಲ ಸಾಧ್ಯತೆಗಳನ್ನು, ಸಿ.ಚಂದ್ರಶೇಖರರ ಚಿತ್ರಗಳು ಮಂಡಿಸುತ್ತವೆ. ಇನ್ನೂ ಮುಂದುವರಿದು ಹೇಳುವುದಾದರೆ, ಸ್ಟಿಚ್ ಸರಣಿ ಚಿತ್ರಗಳಲ್ಲಿ ಮನುಷ್ಯನ ಸಂಬಂಧಗಳು ನಮ್ಮೊಳಗೆ ವೈರುಧ್ಯತೆಗಳನ್ನು ಸೃಷ್ಟಿಸುತ್ತಿದ್ದರು ಹೊಂದಾಣಿಕೆಗಳೊಂದಿಗೆ ಬದುಕು ಸಾಗುತ್ತಿರುತ್ತದೆ. ಕೆಲವೊಮ್ಮೆ ಅಂಥ ಹೊಂದಾಣಿಕೆಯನ್ನೆ ಪ್ರಧಾನವಾಗಿ ಭದ್ರಪಡಿಸುತ್ತಾ ಹೋಗುವುದನ್ನು ಕಾಣಬಹುದಾಗಿದೆ.[೫೦]

---

೫೦. [illegible] ದಳವಾಯಿ : ಸಿ. ಚಂದ್ರಶೇಖರ, ಪು-೬೦

ಇಂಥ ಕ್ರಿಯೆ ಹೊಂದಾಣಿಕೆ ಸತ್ಯವೆನಿಸಿದಾಗ ಆಗುವ ಪ್ರಕ್ರಿಯೇ ಇಲ್ಲದಿದ್ದರೆ ಹೊಂದಾಣಿಕೆ ಕಳಚುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ವಿಶ್ವಾಸಾತ್ಮಕ ರೂಪಗಳ ಆಯ್ಕೆಯಲ್ಲಿ ಕಲಾವಿದರು ಮೊದಲಿಗೇ ಗೆದ್ದು ಬಿಟ್ಟಿರುತ್ತಾರೆ. ಜನಗಳಿಗೂ ಸಹ ತಮಗೆ ಪರಿಚಿತವಾದ ಸಾಮಗ್ರಿಯ ರೂಪಗಳು ಸುಲಭವಾಗಿ ಮನದಾಳದಲ್ಲಿ ಶಾಶ್ವತಗೊಳ್ಳುತ್ತದೆ. ಹಾಗೆ ನೋಡಿದರೆ ನಿಸರ್ಗದೊಳಗಿರುವುದೆಲ್ಲ ಮನುಷ್ಯನಿಗೆ ಪರಿಚಯವಿರುವಂಥಹದ್ದೆ. ಆದರೆ ಕಲಾವಿದನಾದವನು ಅದನ್ನು ಸಂಯೋಜಿಸುವಾಗ ಸ್ಪಷ್ಟ ರೂಪಗಳನ್ನು ಅಮೂರ್ತಗೊಳಿಸುತ್ತಾನೆ. ಈ ವಿಷಯದಲ್ಲಿ ಸಿ.ಚಂದ್ರಶೇಖರ ತುಂಬಾ ನಿಷ್ಣಾತರು.[೫೧] ಇಲ್ಲಿ ಇವರು ಕಂಡಂಥ ಯಾವುದೋ ಒಂದು ಭಾಗವನ್ನು ಚಿತ್ರಿಸುವುದರಿಂದ ಚಿತ್ರದ ಅರ್ಥವಂತಿಕೆ ನಮಗೆ ಸುಲಭವಾಗಿ ದಕ್ಕುವಂತಿರುವುದಿಲ್ಲ. ಅಲ್ಲಿ ಪ್ರಧಾನ ಪಾತ್ರವಹಿಸುವುದೆಂದರೆ ಬಣ್ಣಗಳ ವಿನ್ಯಾಸ ಮತ್ತು ಸ್ಪೇಸ್. ಈ ಎರಡರ ಮೂಲಕ ಚಂದ್ರಶೇಖರ ಅವರ ಚಿತ್ರಗಳು ಹೊಸ ಹೊಸ ಅರ್ಥಸಾಧ್ಯತೆಗಳನ್ನು ನಮ್ಮ ಮುಂದೆ ಮೂಡಿಸುತ್ತವೆ. ಅವರು ವಾಸ್ತವತೆಯನ್ನು ಅವಾಸ್ತವಿಕತೆಯೊಳಗೆ ಸಂಲಗ್ನಗೊಳಿಸುವುದರಿಂದ ಮತ್ತು ಎರಡು ವಸ್ತುಗಳನ್ನು ಭಿನ್ನ ಸ್ವರೂಪದಲ್ಲಿ ಇಟ್ಟಾಗ ಅದಕ್ಕೆ ಅರ್ಥಗಳು ಬೇರೆ ಬೇರೆಯಾಗಿ ಮೂಢ ತೊಡಗುತ್ತವೆ. ಇದರಿಂದಾಗಿ ನೋಡುಗ ಮತ್ತು ಸಮಾಜದ ನೋವು ಅವನ ವಯಕ್ತಿಕತೆಯ ನೋವು ನಲಿವುಗಳ ಮೇಲೆ ಸ್ಪಂದಿಸುತ್ತದೆ. ಅದರಿಂದ ಚಿತ್ರಕಲೆಯ ವಯಕ್ತಿಕತೆಯನ್ನು ಕಳಚಿ ಸಾಮೂಹಿಕಗೊಳಿಸಿದ ಕೀರ್ತಿ ಈ ಕಲಾವಿದರಿಗೆ ಸಲ್ಲುತ್ತದೆ. ಇವರ ಕಲಾಕೃತಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಒಂದು ಕಡೆ ತನ್ನ ಪರಂಪರೆಯ ಮೂಲಗಳ ಮತ್ತು ಅವುಗಳಿಂದ ಪ್ರೇರಿತವಾದ ಸಂವೇದನೆಗಳನ್ನು ಬೆಳೆಸುತ್ತಾ ಹೋಗುವುದು. ಮತ್ತೊಂದು ಕಡೆ ಅಂಥ ಮೂಲಗಳು ಸಾಮಾಜಿಕ ಸಂದರ್ಭದಲ್ಲಿ ಪಡೆಯುವ ಅರ್ಥ ಸಾಧ್ಯತೆಗಳಾವುವು ಎಂಬುದನ್ನು ನಿಷ್ಕರ್ಷಕ್ಕೆ ಒಳಪಡಿಸುವುದು. ಈ ಎರಡೂ ಬಗೆಯ ಪ್ರಕ್ರಿಯೆ ಏಕಕಾಲಕ್ಕೆ ನಡೆಯುತ್ತಿರುತ್ತದೆ. ಮುಂದುವರಿದು ಆಳದಲ್ಲಿ ಸಾಮಾಜಿಕ ಅಸಮಾನತೆಗಳ ಬಗ್ಗೆ ಅಸಹನೆಯೂ ವ್ಯಕ್ತವಾಗಿರುತ್ತದೆ.[೫೨] ಈ ಮನೋಭಾವ ಹೆಚ್ಚು ಢಾಳವಾಗಿ ಕಾಣುವುದಿಲ್ಲ. ಬದಲಿಗೆ ವರ್ಣಗಳ ತೀರಾ ತೆಳು ಸಂಯೋಜನೆಯಂತೆ ಎಳೆಮಿಂಚಿನ ಪಲುಕಿನ ರೀತಿ ಸ್ಮೃತಿಪಟಲದಲ್ಲಿ ಹಾಯ್ದು ಹೋಗುತ್ತದೆ. ಇದರಿಂದ ಚಿತ್ರ ಸಾಂಕೇತಿಸುವ ಬದುಕಿನ ಸಾರದ ಸಾಧ್ಯತೆ ವೈವಿಧ್ಯತೆಯನ್ನು ಪಡೆಯುತ್ತದೆ. ಇಂಥ ವೈವಿಧ್ಯತೆ ಪುನಃ ಎರಡು ಪಾತಳಿಗಳ ಮೇಲೆ ಬದುಕನ್ನು ವ್ಯಾಖ್ಯಾನಿಸುತ್ತದೆ. ಅದು ಬದುಕನ್ನು ಕಟ್ಟಿಕೊಡುತ್ತಾ ಹೋಗುವ ಒಂದು ರೂಪವಾಗುತ್ತಿದ್ದಾಗಲೇ ಸಹಜವಾಗಿಯೇ ಅದೊಂದು ಸಂಸ್ಕೃತಿಯ ವಿಮರ್ಶೆಯಾಗಿರುತ್ತದೆ. ಏಕೆಂದರೆ ವಿಮರ್ಶನ ಪ್ರಜ್ಞೆ ಕೆಲಸ ಮಾಡದೆ ಒಂದು ಚಿತ್ರ ರಚನೆಯೇ

೫೧. [illegible] : ಸಿ. ಚಂದ್ರಶೇಖರ, ಪು-೧೧
೫೨. ಅದೇ, ಪು-೧೨

ಸಾಧ್ಯವಿರುವುದಿಲ್ಲ. ಇಂಥ ವಿಮರ್ಶನ ಪ್ರಜ್ಞೆ ಕೆಲಸ ಮಾಡದೆ ಒಂದು ಚಿತ್ರ ರಚನೆಯೇ ಸಾಧ್ಯವಿರುವುದಿಲ್ಲ. ಇಂಥ ವಿಮರ್ಶನ ಪ್ರಜ್ಞೆಯೇ ಸೃಜನಶೀಲತೆಯ ತಳಹದಿ. ಆದ್ದರಿಂದಲೇ ಚಂದ್ರಶೇಖರರ ಕೃತಿಗಳು ಸಾಮಾಜಿಕ ಅರಿವಿನ ಮುಖ್ಯ ಮಾಧ್ಯಮಗಳಾಗುತ್ತವೆ. ಒಂದು ರೀತಿಯಲ್ಲಿ ಅವರ ಚಿತ್ರಗಳಲ್ಲಿ ವೈಯಕ್ತಿಕ ಅಮೂರ್ತತೆಗಿಂತ ಸಾಮೂಹಿಕ ಅಮೂರ್ತತೆಯನ್ನು ಕಾಣುತ್ತೇವೆ. ವಾಸ್ತವವಾಗಿ ಅಮೂರ್ತತೆ ಎರಡು ರೀತಿಯಲ್ಲಿ ಕಲಾವಿದನಿಗೆ ವರದಾನ. ಒಂದು, ವಾಸ್ತವತೆಯಿಂದ ಪಾರಾಗಲು, ಎರಡು, ವೈಯಕ್ತಿಕತೆಯಿಂದ ಪಾರಾಗಲು. ಚಂದ್ರಶೇಖರ್ ಎರಡನೇ ವರ್ಗಕ್ಕೆ ಸೇರುತ್ತಾರೆ. ಬದುಕನ್ನು ಎಂದಿಗೂ ಸ್ಪಷ್ಟಗೊಳಿಸಲಾಗುವುದಿಲ್ಲ ಎಂಬ ಗ್ರಹಿಕೆಯೇ ಅಮೂರ್ತ ಕಲೆಯ ಜೀವಾಳ. ಬಹುಶಃ ಅಮೂರ್ತತೆಗೆ ವರ್ಣ ಸಂಯೋಜನೆಯಲ್ಲೇ ಹೆಚ್ಚು ಅವಕಾಶವಿರುವುದು.[೫೩] ಇಂತ ಅವಕಾಶವನ್ನು ನಿಯಂತ್ರಿತ ಸ್ವಾತಂತ್ರ್ಯದಲ್ಲಿ ಬಳಸಿಕೊಂಡಿದ್ದಾನೊ ಅಥವಾ ಸ್ವೇಚ್ಛೆಯಾಗಿ ಬಳಸಿದ್ದಾನೊ ಎಂಬುದರ ಆಧಾರದ ಮೇಲೆ ಒಬ್ಬ ಕಲಾವಿದ ನಮ್ಮೆದುರು ಉಳಿಯುವ ಅಳಿಯುವ ನೆಲೆಯಲ್ಲಿರುತ್ತಾನೆ. ಅಂತರ್ಮುಖತೆಯ ಅತಿರೇಕದಲ್ಲಿ ಅಮೂರ್ತ ಕಲೆ ಪಡೆದ ಸ್ವರೂಪ ಬೇರೆಯದು. ವ್ಯಕ್ತಿ ವೈಶಿಷ್ಟ್ಯ, ಅಧಿಕವಾಗಿ, ಅವನ ಅಂತರಂಗದ ಕೂಟವಾಗಿ ಹೊರಹೊಮ್ಮಿದ ಈ ನೆಲೆ ಮೂರ್ತತೆಯನ್ನು ಹೆಚ್ಚು ಅಮೂರ್ತಗೊಳಿಸಿತು. ಸಹಜವಾಗಿಯೇ ಪಾರ್ಶ್ವಿಕಗೊಂಡ ಇಂಥ ನೆಲೆಯ ವಿರುದ್ಧವಾಗಿಯೇ ಚಿತ್ರಕಲೆ ತನ್ನ ಸಾಮಾಜಿಕ ಮುಖವನ್ನು ಹೆಚ್ಚು ಮುಂಚಲನೆಯಲ್ಲಿ ನಡೆಸಿತು. ಇದರಿಂದ ಚಿತ್ರಕಲೆಯೇ ಹೊಸ ರೂಪವನ್ನು ಪಡೆಯಿತು. ಈ ನಿಟ್ಟಿನಲ್ಲಿ ಚಂದ್ರಶೇಖರರ ಸಾಧನೆ ತುಂಬಾ ದೊಡ್ಡದು. ಇವರ ಚಿತ್ರಗಳಲ್ಲಿ ಸಂಯೋಜನೆ ಎಂಬುದಕ್ಕೆ ಎರಡು ಅರ್ಥಗಳಿವೆ. ಒಂದು, ವರ್ಣಗಳದ್ದು. ಮತ್ತೊಂದು ವಸ್ತುಗಳದ್ದು. ಇವರ ಎಲ್ಲಾ ಚಿತ್ರಗಳ ಪ್ರಧಾನ ಆಶಯ ಎರಡು ವಸ್ತುಗಳನ್ನು ಭದ್ರಪಡಿಸುವುದು. ಇಲ್ಲಿಯೇ ಕಲಾವಿದ ಗೆದ್ದಿರುವುದು. ಕೂಡಿಸಲು ಸಾಧ್ಯವಿರುವ ಗುಲಾಬಿ ಮೂಸುವ ರಾಜ ಭಾರತದ ಮಧ್ಯಯುಗೀನ ಚಿತ್ರಕಲೆಯ ಅದರಲ್ಲೂ ಮೊಘಲ್ ಚಿತ್ರಕಲೆಯ ಸಾಮಾನ್ಯವಾದ ಒಂದು ಭಂಗಿ. ಚಂದ್ರಶೇಖರರ ಚಿತ್ರಗಳಲ್ಲೂ ಅಂಥ ಒಬ್ಬ ಗುಲಾಬಿ ಹೂ ಮೂಸುವ ವ್ಯಕ್ತಿ ಬರುತ್ತಾನೆ. ಆದರೆ ಆತ ಮೊಗಲ್ ದೊರೆ ಅಲ್ಲ. ಆತ ಸಾಮಾನ್ಯ, ನಮ್ಮೆಲ್ಲರ ಪ್ರತಿನಿಧಿ. ದುರಂತವೆಂದರೆ ಅವನ ಮೂಗು ಚಿಕಿತ್ಸೆಗೊಳಗಾಗಿಯೊ ಇಲ್ಲವೇ ಗ್ರಹಿಕೆಯ ಶಕ್ತಿಯಿಲ್ಲದೆಯೋ ಹೊಲಿಗೆಗೆ(ಸ್ಟಿಚ್‌ಗೆ) ಒಳಗಾಗಿ ಬಿಟ್ಟಿರುತ್ತದೆ. ಸಿದ್ಧಮಾದರಿಯೊಂದಕ್ಕೆ ನೆನಪು ಸಾಧ್ಯ. ಆದರೆ ಸಮಕಾಲೀನವಾಗಿ ಚಿತ್ರಿತವಾಗಿರುವ ಇವರ ಕಲಾಕೃತಿಗಳಲ್ಲಿನ ಅರ್ಥ ವೈವಿಧ್ಯಮಯವಾದುದು.

೫೩. ಸಂದರ್ಶನ : ಎಂ.ಎಚ್. ಕೃಷ್ಣಯ್ಯ ಅವರೊಂದಿಗೆ, ದಿ. ೨೦.೦೪.೨೦೧೪

ಚಿತ್ರಕಲೆ ಯಾವುದೇ ಅರ್ಥಗಳನ್ನು ವರ್ಣಸಂಯೋಜನೆ, ವ್ಯಕ್ತಿ, ಪ್ರಾಣಿ ಅಥವಾ ಸಸ್ಯ ಭಾವ ಮತ್ತು ವಸ್ತುಗಳ ಸಂಯೋಜನೆಯಿಂದಲೆ ನಿಷ್ಪನ್ನಗೊಳಿಸಬೇಕು.[೫೪] ಇಂತ ಪ್ರಕ್ರಿಯೆಯಲ್ಲಿ ಒಬ್ಬೊಬ್ಬ ಕಲಾವಿದನೂ ತನ್ನ ಮೆಚ್ಚಿನ ಭಾಘಕ್ಕೆ ಮಹತ್ವವನ್ನು ಕೊಡುತ್ತಾನೆ. ಕಲಾವಿದ ಎಫ್.ಎಂ.ಹುಸೇನರಿಗೆ ಹಿಂಡು ಕುದುರೆ ಅಥವಾ ಒಂಟಿ ಕುದುರೆ ಹೆಚ್ಚು ಇಷ್ಟ. ಕಲಾವಿದ ವಾಸುದೇವ ಅವರಿಗೆ ಅತಿಚಿಕ್ಕ ಜೀವ ಜಂತುಗಳು ಹೆಚ್ಚು ಇಷ್ಟ. ಹಾಗೆಯೇ ಚಂದ್ರಶೇಖರ ಅವರಿಗೆ ಭಿನ್ನ ವಸ್ತು ಮತ್ತು ಭಿನ್ನತೆ ಮುಖ್ಯ. ಏಕೆಂದರೆ ಚಂದ್ರಶೇಖರ ನಿಂತಿರುವ ನಿಲುವು ಸಿಂಪಿಗನ ಸ್ಥಾನದಲ್ಲಿ. ಕತ್ತರಿಸಿದ ಹಲವು ತುಂಡುಗಳನ್ನು ಹೊಲಿಯುವುದರಿಂದಲೇ ಹೊಸ ವಿನ್ಯಾಸವನ್ನು ಆತ ಸಾಧ್ಯಗೊಳಿಸುತ್ತಾನೆ.[೫೫] ಅದು ಅವನ ಕೆಲಸ. ಆದರೆ ಕಲಾವಿದನಾಗಿ ಸ್ಟಿಚ್ ನೆಲೆಯಲ್ಲಿ ಭಿನ್ನ ಸಾಂಸ್ಕೃತಿಕ ಅರ್ಥಗಳನ್ನು ಹೊರಡಿಸುವಲ್ಲಿ ಕ್ರಿಯಾಶೀಲರಾಗುವುದನ್ನು ಕಾಣಬಹುದಾಗಿದೆ. ಕನ್ನಡಕವಿಲ್ಲದ ಸ್ಪಷ್ಟ ನೋಟದ ಹಂಬಲದ ಸಂಕೇತವಾಗಿ ಕನ್ನಡಕ ಬರುತ್ತದೆ. ಸಂಕೇತಗಳು ಅರ್ಥವಾಗುತ್ತಾ ಬೆಳೆಯುತ್ತಾ ಹೋಗುವುದೇ ಚಿತ್ರಕಲೆಯ ಮುಖ್ಯ ಉದ್ದೇಶವಾಗಿರುವುದರಿಂದ ಕ್ಯಾನ್ವಾಸಿನ ಮೇಲೆ ಹಲವು ಸಂಪುಟಗಳ ಮಾತುಗಳನ್ನು ಹಿಡಿದಿಡ ಬೇಕಾಗಿರುವ ಸವಾಲು ಕಲಾವಿದನಿಗಿರುತ್ತದೆ. ಆದ್ದರಿಂದಲೇ ಆತನ ಬಣ್ಣಕ್ಕೆ ಹಲವು ಅರ್ಥಗಳಿರುತ್ತವೆ. ಅವನು ಬಳಸುವ ವಸ್ತು ಜೀವಿಗಳ ಚಿತ್ರ ಚಪ್ಪಟೆಯಾಗಿರುವುದಿಲ್ಲ. ಅವು ಸಂಪೂರ್ಣ ಜೈವಿಕ ಸ್ಥಿತಿಯನ್ನು ಪಡೆಯುತ್ತದೆ. ಏಕಮಗ್ಗುಲಲ್ಲೆ ಮನುಷ್ಯನ ಗ್ರಹಿಕೆಗೆ ಸಿಕ್ಕುವ ಶಾರೀರಿಕ ಕೋನವನ್ನು ತೋರಿಸುವಲ್ಲಿ ಹಲವು ಜನ ಕಲಾವಿದರು ಯಶಸ್ಸು ಸಾಧಿಸಬಹುದು. ಆದರೆ ಅವುಗಳಿಗಿರುವ ಅರ್ಥಗಳ ವೈವಿಧ್ಯತೆ ಕೆಲವೇ ಕಲಾವಿದರಿಗೆ ಮಾತ್ರ ಸಾಧ್ಯ. ಅಂಥ ಕಲಾವಿದರಲ್ಲಿ ಚಂದ್ರಶೇಖರ ಕುಡ ಒಬ್ಬರು. ಅವರ ಪ್ರಮುಖ ಕೆಲವು ಸಾಂಸ್ಕೃತಿಕ ಚಿಂತನೆಗಳನ್ನು ಅವರ ವರ್ಣಚಿತ್ರಗಳ ಆಧಾರದಿಂದ ಮುಂದಿನಂತೆ ಗ್ರಹಿಸಬಹುದು. ಈ ಕೆಲವು ಅಂಶಗಳನ್ನು ಅವರು ಜೀವನದುದ್ದಕ್ಕೂ ನಡೆಸುತ್ತಾ ಬಂದ ಚಿತ್ರಕಲೆಯ ಪ್ರಯೋಗಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಕಲಾವಿದರಾಗಿ ಅವರು ತೆಗೆದುಕೊಳ್ಳುವ ಪ್ರತಿಮೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸಮಾಜದೊಳಗಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಬದುಕಿನ ಚಲನಶೀಲ ಗ್ರಹಿಕೆಯಾಗಿ ವ್ಯಕ್ತವಾಗುವ ವೈಚಾರಿಕತೆಗಳ ರೂಪಗಳನ್ನು ಆಧರಿಸಿದ ಅವರ ಚಿತ್ರಗಳು ಉಂಟು ಮಾಡುವ ಪರಿಣಾಮಗಳು ಗಮನಾರ್ಹವಾದವು. ವಾಸ್ತವವಾಗಿ ಭಾರತದೊಳಗೆ ಜೀವನ ತಕ್ಕಡಿಯಲ್ಲಿ ಒಂದು ಕಡೆ ಹಸಿವಿಗೆ ಮತ್ತೊಂದು ಕಡೆ ಜ್ಞಾನವಿದೆ. ಕೆಲವೊಮ್ಮೆ ಎರಡೂ ಒಟ್ಟಾಗುತ್ತವೆ.[೫೬]

---

೫೪. ರಾಜಪ್ಪ ದಳವಾಯಿ : ಸಿ ಚಂದ್ರಶೇಖರ, ಪು-೧೩

೫೫. ಅದೇ.

೫೬. ಅದೇ.

ಆದರೆ ಬಹಳಷ್ಟು ಸಂದರ್ಭದಲ್ಲಿ ಇವು ಬೇರೆ ಬೇರೆಯಾಗಿಯೇ ನಿಲ್ಲುತ್ತವೆ. ಎಷ್ಟೋ ಬಾರಿ ಮನುಷ್ಯನ ಅಳಿವು-ಉಳಿವಿನ ನೆಲೆಗಳೂ ಇವೇ ಆಗಿರುತ್ತವೆ.[೨೭] ಇವೆರಡರ ಕೊಂಡಿಯಾಗಿ ಜನರಿಗೆ ಪರಿಚಿತ ವಸ್ತುಗಳೊಂದಿಗೆ ಪಡೆಯುವ ಚಿತ್ರಗಳ ಆಕಾರಗಳಲ್ಲಿ ಮೂಲಸ್ಥಾಯಿಯಾಗಿ ಜೀವನ ಗ್ರಹಿಕೆಯೇ ಒಂದು ಬ್ರಹ್ಮಾಂಡವಾಗಿ ಅನಾವರಣಗೊಳ್ಳುತ್ತದೆ.

ಬಹುಶಃ ಚಂದ್ರಶೇಖರ ಮನೆಮಾತಾದುದು ಮತ್ತು ಮಹತ್ವದ ಕಲಾವಿದರೆನಿಸಿದ್ದು ಈ ಸರಣಿ ಚಿತ್ರಗಳ ಮೂಲಕ ಕೇವಲ ಮಾತ್ರ ಹೊಲಿಗೆ ಹಾಕಿಗೊತ್ತಿದ್ದ ಮನುಷ್ಯಾನುಭವವನ್ನು ತಮ್ಮ ಕಲಾಕೃತಿಗಳ ಮೂಲಕ ಸಂಸ್ಕೃತಿಯ ಹೊಸ ಶೋಧವಾಗಿ ಬೆಳೆಸಿದ ಕೀರ್ತಿ ಅವರದು. ಮಾನವಾನುಭವದ ಪುನರುತ್ಥಾನವನ್ನೇ ಈ ಸರಣಿ ಚಿತ್ರಗಳಲ್ಲಿ ದರ್ಶಿಸಬಹುದಾಗಿದೆ. ಕಲಚಿ ಹೋಗಬಹುದಾದ, ಮರುಚಿ ಹೋಗಬಹುದಾದ, ಹರಿದು ಹೋಗಬಹುದಾದ ಎಲ್ಲವುಗಳಿಗೇ ಸ್ಟಿಚ್ ಸರಣಿ ಚಿತ್ರಗಳು ಅಭಿವ್ಯಕ್ತಿಸಿರುವ ಅನುಭವ ವಿಭಿನ್ನವಾದುದು. ವಿವಿಧ ಬಣ್ಣಗಳ ಸಂಯೋಜನೆ ಮತ್ತು ಸಾಂದ್ರತೆಗಳ ಮೂಲಕ ನಮಗೆ ಎದುರಾಗುವ ಚಿತ್ರಗಳು ಸಾಂಪ್ರದಾಯಿಕ ಕಲಾಕೃತಿಗಳ ನೋಟ ಮತ್ತು ಅಲೋಚನಾ ಕ್ರಮವನ್ನೇ ಬದಲಿಸಿದವೆಂದರೆ ತಪ್ಪಾಗಲಾರದು. ಗ್ರಾಫಿಕ್ ಮತ್ತು ವರ್ಣ ಸಂಯೋಜನೆಗಳೆರಡರಲ್ಲೂ ಯಶಸ್ಸು ಕಂಡಿರುವ ಈ ಕಲಾವಿದ ಸರಣಿ ಚಿತ್ರಗಳ ಜಗತ್ತಿನಲ್ಲಿ ಹೊಸ ಚಲನೆಯುಂಟು ಮಾಡಿದ ಕಲಾಕೃತಿಗಳಾಗಿವೆ. ಪ್ರಸ್ತುತ ಕಲಾವಿದ ಸಿ. ಚಂದ್ರಶಖೇರ ಅವರು ರಚಿಸಿರುವ ಸರಣಿ ಕಲಾಕೃತಿಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿ ಅವುಗಳ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

೩.೨.೧. ವುಮೆನ್ ಸಿರೀಸ್‌ನ ಸರಣಿ ಚಿತ್ರಗಳು

ಚಿತ್ರ-೦೧. ಜಲಧಾರಿಣಿ

ಮಹಿಳೆಯರ ಸರಣಿ ಚಿತ್ರಗಳನ್ನು ಕಲಾವಿದರಾದ ಸಿ.ಚಂದ್ರಶೇಖರವರು ತಮ್ಮದೇ ಶೈಲಿಯ ಮೂಲಕ ಕಲಾವಲಯಕ್ಕೆ ಕಲಾಕೃತಿಯ ಮೂಲಕ ಕೊಡುಗೆ ನೀಡಿದ್ದಾರೆ. ಮಹಿಳೆಯರ ಸರಣಿ ಚಿತ್ರಗಳಲ್ಲೊಂದಾದ ಜಲಧಾರಿಣಿಯ ಕಲಾಕೃತಿಯು ಚೆನ್ನಾಗಿ ಮೂಡಿಬಂದಿದ್ದು, ಈ ಕಲಾಕೃತಿಯನ್ನು ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಕ್ಯಾನ್ವಾಸಿನ ಮಧ್ಯಭಾಗದಲ್ಲಿ ಅಡ್ಡಲಾಗಿ ತ್ರಿಕೋನಾಕೃತಿಯ ಜ್ಯಾಮಿತಿಯಲ್ಲಿ ವಿವಿಧ ಆಕೃತಿಗಳನ್ನು ಸಂಯೋಜಿಸಿದ್ದು ಇದರಲ್ಲಿ ಒಂದು ಮಾನವಾಕೃತಿ ಮೂರು ನೀರು ತುಂಬುವ ಪಾತ್ರೆಯಾಕೃತಿಗಳನ್ನು ಕ್ಯಾನ್ವಾಸಿನ ತ್ರಿಭುಜಾಕೃತಿಯಲ್ಲಿ ಸಂಯೋಜಿಸಲಾಗಿದೆ.

---

೨೭. ರಾಜಪ್ಪ ದಳವಾಯಿ : ಸಿ. ಚಂದ್ರಶೇಖರ, ಪು-೧೩

ಜಲಧಾರಿಣಿ ಸ್ತ್ರೀಯನ್ನು ಕ್ಯಾನ್ವಾಸಿನ ಎಡಬದಿಯಿಂದ ಒಟ್ಟು ಸ್ಥಳಾವಕಾಶದ ಮಧ್ಯದವರೆಗೆ ಪಾರ್ಶ್ವ ಭಂಗಿಯಲ್ಲಿ ದೇಹದ ಅರ್ಧಬಲಭಾಗವನ್ನು ಸ್ಥಳಾವಕಾಶದ ಕೆಳಬದಿಯಿಂದ ಮುಕ್ಕಾಲು ಭಾಗದವರೆಗೆ ಸಂಯೋಜಿಸಿದ್ದಾರೆ. ನೀಳವಾದ ಮೈಕಟ್ಟನ್ನು ಹೊಂದಿರುವ ಸ್ತ್ರೀಯು ನೀಲವಾದ ಕೇಶರಾಶಿಯೊಂದಿಗೆ ಮುಖವನ್ನು ಮುಕ್ಕಾಲು ಭಾಗ ಚಿತ್ರಿಸಿರುವ ಕಲಾವಿದರು ಕಣ್ಣುಗಳಲ್ಲಿ ವಿಶೇಷ ಶೈಲಿಯನ್ನು ಅಳವಡಿಸಿಕೊಂಡು ಕಣ್ಣು ಮತ್ತು ಉಬ್ಬುಗಳು ಮುಖದಿಂದ ಹೊರ ಚಾಚಿರುವಂತೆ ಚಿತ್ರಿಸಲಾಗಿದೆ. ಸಾಂಪ್ರದಾಯಿಕ ಶೈಲಿಯ ಹತ್ತಿರಕ್ಕೆ ನೆನಪಿಸುವಂತಿವೆ. ಕಣ್ಣುಗಳಲ್ಲಿ ಸೌಮ್ಯತೆಯ ಭಾವವನ್ನು ಸೂಸುತ್ತಿದ್ದು ವರ್ಣಗಾರಿಕೆಯಲ್ಲಿ ಹಿನ್ನಲೆಯ ವರ್ಣದೊಂದಿಗೆ ತಿಲಿವರ್ಣ ಮಿಶ್ರಣಗೊಂಡು ಪ್ರತ್ಯೇಕಿಸುವಂತಿದೆ. ಕೇಸರಿ, ಬಿಳಿ, ಮಿಶ್ರಿತ ಸೀರೆಯನ್ನುಟ್ಟಿದ್ದ ಹಸಿರು ಬಿಲಿ ಮಿಶ್ರಿತ ರವಿಕೆಯನ್ನುಟ್ಟು ಸ್ತ್ರೀಯು ತನ್ನ ನೀಳವಾದ ಕೈಯಲ್ಲಿ ನೀರಿನ ಬಿಂದಿಗೆಯನ್ನಿಡಿದು ದೊಡ್ಡ ಪಾತ್ರೆಗೆ ನೀರನ್ನು ಹಾಕುತ್ತಿರುವಂತಿದೆ. ಹಿನ್ನೆಲೆಯ ಸ್ಥಳಾವಕಾಶದ ತುಂಬೆಲ್ಲ ನೀಲಿ, ಹಸಿರು, ಕಡು, ನೀಲಿ, ಹಳದಿ, ಕೆಂಪು ವರ್ಣಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಲಾಗಿದೆ. ಹಿನ್ನೆಲೆಯ ದೃಶ್ಯವು ಮರದ ಬೆಳಕಿನಿಂದ ಆವರಿಸಿದಂತಾಗಿದ್ದು, ಸೂರ್ಯಾಸ್ತ ಅಥವಾ ಸೂರ್ಯೋದಯದ ದೃಶ್ಯದಂತಿದ್ದು ಹಿನ್ನೆಲೆಯಲ್ಲಿ ಸ್ವಚ್ಚಾಕೃತಿಯ ನಗರ ಪ್ರದೇಶವೊಂದು ಗೋಚರಿಸುವಂತೆ ಚಿತ್ರಿಸಲಾಗಿದೆ.

ಚಿತ್ರ–೨.

ಮಹಿಳೆಯರಕ ಸರಣಿ ಚಿತ್ರಗಳಲ್ಲಿ ಸಿ.ಚಂದ್ರಶೇಖರವರು ಕಂಡುಕೊಂಡ ದಾರಿ ಅಭಿವ್ಯಕ್ತಿಸುವ ಶೈಲಿ ವಿಭಿನ್ನ. ಒಂದೊಂದು ಕಲಾಕೃತಿಗಳು ಒಂದೊಂದು ವಿಭಿನ್ನ ಅನುಭವಗಳನ್ನು ನೀಡುತ್ತವೆ. ಈ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ ಕ್ಯಾನ್ವಾಸ್ ಮೇಲೆ ರಚನೆಗೊಂಡಿದೆ. ಸಂಯೋಜನಾ ದೃಷ್ಟಿಯಿಂದ ನೋಡಿದರೆ ಉದ್ದವಾಗಿ ಒಂದೇ ಮಾನವಾಕೃತಿಯನ್ನು ಕ್ಯಾನ್ವಾಸಿನ ಸ್ಥಳಾವಕಾಶದ ತುಂಬೆಲ್ಲ ಸಂಯೋಜಿಸಲಾಗಿದೆ. ಈ ಕಲಾಕೃತಿಯಲ್ಲಿ ಮಹಿಳೆಯೋರ್ವಳನ್ನು ಎಡಪಾರ್ಶ್ವ ಭಂಗಿಯಲ್ಲಿ ನಗ್ನವಾಗಿ ಚಿತ್ರಿಸಲಾಗಿದೆ. ಸ್ಥಳಾವಕಾಶದ ಮೇಲ್ಭಾಗದಿಂದ ಅರ್ಧದವರೆಗೆ ಮುಖ ಮತ್ತು ಕೇಶರಾಶಿಯನ್ನು ಚಿತ್ರಿಸಿದ್ದು ಉಳಿದ ಭಾಗಗಳಲ್ಲಿ ಅವಳ ಲಗ್ನವಾದ ದೇಹಸಿರಿಯ ಅರ್ಧಭಾಗವನ್ನು ಸಂಯೋಜಿಸಲಾಗಿದೆ.

ಚಪ್ಪಟ್ಟೆಯಾಕಾರದ ಮುಖದಲ್ಲಿ ನೀಳವಾದ ಮೂಗನ್ನು ಕೆಳಬದಿಯಲ್ಲಿ ಕೆಂಪುವರ್ಣದ ಹೊರ ಉಬ್ಬಿದ ತುಟಿಗಳನ್ನು ಮೊನಚುಗೊಂಡ ಕಣ್ಣಿನ ಉಬ್ಬು ಅಗಲವಾದ ಕಣ್ಣುಗಳಲ್ಲಿ ಶುಭ್ರ ವರ್ಣದ ಬಳಕೆಯೊಂದಿಗೆ ಮೊನಚುಗೊಂಡ ಕಣ್ಣು ದೃಷ್ಟಿ ಅವಳಲ್ಲಿಯ ಮೂಕವೇದನೆಯನ್ನು

ಹೊರ ಹಾಕುವಂತಿದೆ. ಕೇಶರಾಶಿಗಳು ಕುಂಚದ ವೇಗವನ್ನು ಸ್ಪಷ್ಟಪಡಿಸುವಂತಿವೆ. ತಿಳಿ, ದಟ್ಟನೀಲಿ ವರ್ಣಗಳು ಕೇಶರಾಶಿಯಲ್ಲಿ ಮೇಳೈಸಿಕೊಂಡಿವೆ. ಅವಳ ನಗ್ನ ಅರ್ಧದೇಹವು ಸಂಕುಚಿತ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಂತಿದೆ. ಹಿನ್ನೆಲೆಯ ಸ್ಥಳಾವಕಾಶದ ತುಂಬೆಲ್ಲ ಕಡುಗೆಂಪು, ಕಡು ನೀಲಿ ವರ್ಣಗಳ ಬಳಕೆಯ ಈ ಆಕೃತಿಗೆ ಪೂರಕವಾಗಿ ಲೇಪಿಸಿದ್ದು ವಾಷ್ ಮೆಥಡ್ ಪದ್ಧತಿಯಲ್ಲಿ ಈ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೦೩

ಮಹಿಳೆಯ ಸರಣಿ ಚಿತ್ರಗಳ ಸಾಲಿನಲ್ಲಿರುವ ಏಡ್ಸ್‌ಗೆ ಸಂಬಂಧಿಸಿದ ಕಲಾಕೃತಿ ಇದಾಗಿದ್ದು ವಿಭಿನ್ನ ಶೈಲಿಯಲ್ಲಿ ರಚನೆಗೊಂಡಿದೆ. ಈ ಕಲಾಕೃತಿಯಲ್ಲಿ ಮಾನವಾಕೃತಿಯ ಅಕೃತಿಯೊಂದು ಕ್ಯಾನ್ವಾಸಿನ್ ಸ್ಥಳಾವಕಾಶದ ಮಧ್ಯಭಾಗದಲ್ಲಿ ಕೆಳಭಾಗದಿಂದ ರಚನೆಯಾಗಿದೆ. ಇವರ ಮಹಿಳಾ ಸರಣಿ ಚಿತ್ರಗಳಲ್ಲಿ ಒಂದೇ ಮಾನವಾಕೃತಿಯು ಅದು ಅರ್ಧ ಆಕೃತಿಯ ಪಾರ್ಶ್ವಭಂಗಿಯಲ್ಲಿ ರಚನೆಯಾಗಿದೆ. ಏಡ್ಸ್ ಮಹಾಮಾರಿ ರೋಗಕ್ಕೆ ಬಲಿಯಾದ ಸ್ತ್ರೀಯೊಬ್ಬಳ ಹೀನಾಯ ಸ್ಥಿತಿಯನ್ನು ತಮ್ಮ ಕಲಾಕೃತಿಯಲ್ಲಿ ಸಂಯೋಜಿಸಿದ್ದಾರೆ. ಸ್ತ್ರೀ ಆಕೃತಿಯ ಹಿನ್ನೆಲೆಯಲ್ಲಿ ಆಯತಾಕಾರದ ವಸ್ತುವೊಂದು ಯಥಾದರ್ಶನದ ಹಿನ್ನೆಲೆಯೊಂದಿಗೆ ತಿಳಿವರ್ಣಗಳ ಬಳಕೆಯೊಂದಿಗೆ ಚಿತ್ರಿಸಿದ್ದು ಅದರಲ್ಲಿ ದಟ್ಟವರ್ಣಗಳ ಬಳಕೆಯು ವಿವಿಧ ದಿಕ್ಕಿನೆಡೆ ಚಲಿಸಿದಂತೆ ಚಿತ್ರಿಸಿದ್ದಾರೆ. ಸ್ತ್ರೀಯ ಕೇಶರಾಶಿಯು ಹಿಂಬದಿಯ ಸ್ಥಳಾವಕಾಶದವರೆಗೆ ವಕ್ರರೇಖೆಗಳಂತೆ ಅವಳ ದೇಹವು ರೋಗದಿಂದ ತೇಜತನವನ್ನು ಕಳೆದುಕೊಂಡು ದೇಹದ ಮೇಲೆಲ್ಲಾ ಪ್ರಕೃತಿಯಾಕಾರದ ತಿಳಿವರ್ಣ ಲೇಪನವಾಗಿದೆ. ನೀಳವಾದ ಮುಖದ ಗುಳಿಬಿದ್ದ ಕಣ್ಣು ದೇಹದ ನಗ್ನಸ್ಥಿತಿಯಲ್ಲಿ ಚಿತ್ರಿಸಲಾಗಿದೆ. ಆಯತಾಕಾರದ ಪಟ್ಟಿಕೆಯ ಹಿಂಬದಿಯಲ್ಲಿ ಅಂಡಾಕಾರದ ಅಕೃತಿ ಇದ್ದು ಅದರಲ್ಲಿ ಅಂಡಾಣು ವಿರ್ಯಾಣುಗಳ ಸಮ್ಮಿಲನವನ್ನು ಲೈಂಗಿಕತೆಯ ಸಂಕೇತವಾಗಿ ಚಿತ್ರಿಸಿರುವಂತಿದ್ದು ದಟ್ಟವರ್ಣಗಳ ಮಧ್ಯೆ ಕೆಂಪು, ಹಣದಿ ಬಿಳಿವರ್ಣ ಪ್ರಯೋಗವಿದೆ. ಹಿನ್ನೆಲೆಯ ಅವಕಾಶವು ದಟ್ಟ ವರ್ಣಗಳಿಂದ ಪೂರ್ಣಗೊಳಿಸಲಾಗಿದೆ.

ಚಿತ್ರ-೦೪.

ಮಹಿಳೆಯರ ಸರಣಿ ಚಿತ್ರಗಳಲ್ಲಿ ಕಲಾವಿದರು ಮಹಿಳೆಯ ಅರ್ಧದೇಹಾಕೃತಿಯನ್ನು ಮಾತ್ರ ಚಿತ್ರಿಸಿರುವುದನ್ನು ಹಿಂದಿನ ಎಲ್ಲಾ ಕಲಾಕೃತಿಯಲ್ಲಿ ನಾವು ಗಮನಿಸುತ್ತ ಇದ್ದೇವೆ. ಇದು ಅವರ ಕಲಾಕೃತಿಗಳಲ್ಲಿ ಆಕೃತಿಗಳ ಬಾಹ್ಯ ರೇಖೆಗಳನ್ನು ಮೊದಲಿಗೆ ದಟ್ಟವರ್ಣಗಳಿಂದ ಸಿದ್ಧಪಡಿಸಿಕೊಂಡು ನಂತರ ವರ್ಣಗಳಿಂದ ಕಲಾಕೃತಿಗಳನ್ನು ಪೂರ್ಣಗೊಳಿಸುವ ಕಲಾವಂತಿಕೆ

ಇವರದ್ದಾಗಿದೆ. ಈ ಕಲಾಕೃತಿಯಲ್ಲಿ ಮೂರು ಪಟ್ಟಿಕೆಗಳನ್ನು ತಯಾರಿಸಿಕೊಂಡಿದ್ದು ಬಲ ಮತ್ತು ಎಡ ಬದಿಯ ಪಟ್ಟಿಕೆಗಲಲ್ಲಿ ಮತ್ತೆರಡು ಪಟ್ಟಿಕೆಗಳಾಗಿ ವಿಂಗಡಿಸಿಕೊಂಡಿರುವರು ಬಲಬದಿಯ ಪಟ್ಟಿಕೆಯ ದಪ್ಪ ವರ್ಣದ ಚಿಕ್ಕ ಪಟ್ಟಿಕೆಯಾಗಿದೆ. ಮಧ್ಯದ ಮಟ್ಟಿಕೆಯು ಹಸಿರು ವರ್ಣಗಳ ಸಂಯೋಜನೆಯ ಅರ್ಧವೃತ್ತಾಕೃತಿಗಳಲ್ಲಿ ಪಟ್ಟಿಕೆಯ ತುಂಬ ಸಂಯೋಜಿಸಲಾಗಿದೆ. ಈ ಪಟ್ಟಿಕೆಯ ಮುನ್ನಲೆಯಲ್ಲಿ ಮೂಲವನ್ನಿಡಿದು ಕುಳಿತ ಮಹಿಳೆಯಾಕೃತಿಯನ್ನು ಸಂಯೋಜಿಸಲಾಗಿದೆ. ಈ ಸ್ತ್ರೀಯು ತಿಳಿ ನೀಲಿ ಮಿಶ್ರಿತ ಬಿಳಿಬಣ್ಣದೊಂದಿಗೆ ಮೈಬಣ್ಣ ಲೇಪಿತಗೊಂಡಿದೆ. ನೀಳಕಾಯದ ಸುಂದರಿ ದಟ್ಟವಾದ ಕೇಶರಾಶಿಯೊಂದಿಗೆ ಯೋಚನೆ ಮಗ್ನಳಾಗಿರುವಂತೆ ಚಿತ್ರಿಸಲಾಗಿದೆ. ಕೆಂಪುವರ್ಣ ರವಿಕೆ ಜಾಂಬಳಿವರ್ಣದ ಮೇಲ್ವಸ್ತ್ರವನ್ನು ಸುತ್ತಿಕೊಂಡಿದ್ದು, ಜಾಂಬಳಿ, ನೀಲಿ, ಮಿಶ್ರಿತ ಪಟ್ಟಿಕೆಯಾಕೃತಿಯ ಲಂಗವನ್ನುಟ್ಟಿದವಳು ಶುಭ್ರವರ್ಣದ ಮೇಲವು ಅವಳ ಕೈಯಾಸರೆಯಲ್ಲಿ ಮುದುಡಿಕೊಂಡು ಕುಳಿತಿರುವುದು ಬಲಬದಿಯ ಪಟ್ಟಿಕೆಯಲ್ಲಿ ಜಾಂಬಳಿ, ನೀಲಿ ಮಿಶ್ರಿತ ಪಟ್ಟಿಕೆಯಾಗಿದ್ದು ಈ ಪಟ್ಟಿಕೆಯ ಮೇಲ್ಭಾಗದಲ್ಲಿ ವೃತ್ತಾಕಾರದ ಚಂದ್ರಾಕೃತಿಯೊಂದು ಮೋಡದ ಮರೆಯಲ್ಲಿ ಗೋಚರಿಸುತ್ತಿದ್ದು ಕೆಳಬದಿಯಲ್ಲಿ ಲತೆಯೊಂದು ಕೋಲಿನ ಸಹಾಯದಿಂದ ಮೇಲೇರಿದಂತಿದ್ದು ಎಲೆಗಳನ್ನು ವಿವಿಧ ದಿಕ್ಕಿನಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಗಮನಿಸಿದರೆ ಮಹಿಳೆಯರನ್ನು ಲತೆಗೆ ಓಲಿಸುವ ವಾಡಿಕೆಯನ್ನುಂಟು ಸೌಮ್ಯತೆ ಮೃದತ್ವದ ಸಂಕೇತವಾಗಿ ಕಲಾವಿದರು ಲತೆ ಮತ್ತು ಮೊಲವನ್ನು ಸಾಂಕೇತಿಕವಾಗಿ ಗುರುತಿಸಿರುವುದನ್ನು ಕಾಣಬಹುದು.

ಚಿತ್ರ–೦೫.

ಅಲಂಕೃತ ಆಕೃತಿಯು ಇದಾಗಿದ್ದು ಒಟ್ಟು ಸ್ಥಳಾವಕಾಶದಲ್ಲಿ ಮೂರು ಉದ್ದ ಪಟ್ಟಿಕೆಗಳನ್ನು ತಯಾರಿಸಿಕೊಂಡಿದ್ದು ಬಲ ಮತ್ತು ಮಧ್ಯದ ಪಟ್ಟಿಕೆಗಳು ದಟ್ಟವರ್ಣಗಳ ಬಳಕೆಯೊಂದಿಗೆ ವಿಭಜನೆಗೊಂಡಿದ್ದು ಎಡಪಟ್ಟಿಕೆಯು ತಿಳಿವರ್ಣಗಳಿಂದ ಸಂಯೋಜನೆಗೊಂಡಿದೆ. ಇಲ್ಲಿಯ ವರ್ಣ ಬಳಕೆಯ ಪದ್ಧತಿಯು ಅಜಂತಾ ಭಿತ್ತಿ ಚಿತ್ರಾಕೃತಿಯ ಪದ್ಧತಿಯಂತೆ ಇದ್ದು ಆದರೆ ಇಲ್ಲಿಯ ಆಕೃತಿಯಲ್ಲಿ ದಟ್ಟವಾದ ಬಾಹ್ಯ ರೇಖೆಗಳ ಬಳಕೆ ಇಲ್ಲ. ಕಲಾವಿದರು ತಮ್ಮ ಕಲಾಕೃತಿಯಲ್ಲಿ ಸೌಮ್ಯ ವರ್ಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದು ಪ್ರಖರ ವರ್ಣಗಳ ಬಳಕೆಯಿಂದ ಸ್ವಲ್ಪ ವಿಮುಖರಾದಂತೆ ತೋರುತ್ತಿದೆ. ಈ ಕಲಾಕೃತಿಯಲ್ಲಿ ಮಹಿಳೆಯ ಮುಖಭಾವವು ಪಾರ್ಶ್ವಾಕೃತಿಯಲ್ಲಿದ್ದು ಉಳಿದ ದೇಹಾಕೃತಿಯು ಎದುರು ನೋಟದ್ದಾಗಿದೆ. ಅರ್ಧದೇಹಾಕೃತಿಯ ಮಹಿಳೆಯು ಕೇಶಾಲಂಕೃತಗೊಂಡು ಮುಡಿಯಲ್ಲಿ ಕೆಂಪುವರ್ಣದ ಹೂವೊಂದನ್ನು ಮುಡಿದುಕೊಂಡಿರುವರು ಬಲಗೈಯಲ್ಲಿ ಅಲಂಕೃತ ಜಡೆಯನ್ನು ಹಿಡಿದುಕೊಂಡು ಮುಂಬದಿಗೆ

ಮಂದನೋಟವನ್ನು ಬೀರುವಂತಿದೆ. ಇವಳ ದೇಹವರ್ಣವು ರಾಜವರ್ಣದಿಂದ ಕಂಗೊಳಿಸುತ್ತಿದ್ದು ಕಿವಿಯಲ್ಲಿ ವೃತ್ತಾಕಾರದ ಆಭರಣವನ್ನು ಧರಿಸುವುದನ್ನು ಕಾಣಲಾಗಿದೆ. ತಿಳಿ, ನೀಲಿ, ಹಸಿರು ಮಿಶ್ರಿತ ಮೇಲುಡುಗೆಯಲ್ಲಿ ಇದ್ದು ಅದರ ಪಾರದರ್ಶಕತೆಯಲ್ಲಿ ಸ್ತನಗಳು ಸೌಂದರ್ಯತೆಯನ್ನು ಪ್ರತಿಬಿಂಬಿಸುವಂತಿವೆ. ಕೆಂಪುವರ್ಣದ ಪಟ್ಟಿಕೆಗಳು ಆವಸ್ತ್ರಕ್ಕೆ ಮೆರಗು ನೀಡುವಂತಿವೆ. ಸೌಂದರ್ಯ ಮಹಿಳೆಯ ಕೇಶಾಲಂಕೃತವಾದ ಆಕೃತಿಯು ಅವರ ಮಹಿಳಾ ಸರಣಿ ಚಿತ್ರಗಳಲ್ಲಿ ಅತ್ಯುತ್ತಮ ಕಲಾಕೃತಿಯಲ್ಲಿ ಇದು ಒಂದಾಗಿದೆ.

ಚಿತ್ರ–೦೬.

ಅಕ್ರಾಲಿಕ್ ವರ್ಣಮಾಧ್ಯಮದಲ್ಲಿ ರಚನೆಗೊಂಡ ಕಲಾಕೃತಿಯು ಇದಾಗಿದ್ದು, ಇದು ವಾಪ್ ಮೆಥಡ್ ಶೈಲಿಯಲ್ಲಿ ರಚನೆಗೊಂಡಿದ್ದು. ಒಟ್ಟು ಸ್ಥಳಾವಕಾಶದ ಮೇಲ್ಭಾಗದ ಕೆಳಬದಿಯಿಂದ ಸಂಯೋಜನೆಗೊಂಡು ಮಹಿಲೆಯ ಮುಖಭಾವವು ಬಲ ಪಾರ್ಶ್ವಕೃತಿಯಲ್ಲಿ ಸಂಯೋಜನೆಗೊಂಡಿದೆ. ಒಟ್ಟು ಸ್ಥಳಾವಕಾಶದ ತುಂಬೆಲ್ಲ ಹರಡಿಕೊಂಡಿರುವಂತೆ ಇದ್ದು, ನೀಲಿ, ತಿಳಿ, ನೀಲಿ ಗುಲಾಬಿವರ್ಣ ಬಳಕೆಯೊಂದಿಗೆ ರಚನೆಗೊಂಡ ಮಹಿಳೆಯಾಕೃತಿಯ ತುಂಬ ಚೆನ್ನಾಗಿ ಮೂಡಿ ಬಂದಿದೆ. ಹಿಂಬದಿ ಮತ್ತು ಮುನ್ನೆಲೆಗೆ ಹರಡಿಕೊಂಡಿರುವ ಕೇಶರಾಶಿಗಳು ಅಗಲವಾದ ಕಣ್ಣುಗಳು, ನೇರ ದೃಢ ರೇಖೆಯಿಂದ ಆಕೃತಿ ಪಡೆದು ಕಣ್ಣಿನ ಉಬ್ಬು ಹನೆಯ ಮೇಲೆ ಕಂದು ಗೆಂಪು ಸಿಂಧೂರ, ತಿಲಕ, ಶುಭ್ರವರ್ಣ ಮೂಗುನತ್ತು, ಚೂಪಾದ ಮುಂಚಾಚಿದ ಮಂದಹಾಸ ಬೀಸುವ ತುಟಿಗಳು ಅಗಲವಾದ ಮುಖಭಾವವನ್ನು ಹೊಂದಿರುವ ಮಹಿಳೆಯ ಚಿತ್ರಾಕೃತಿಯು ತಲೆಯ ಮೇಲ್ಬದಿಯಲ್ಲಿ ಧರಿಸಿರುವ ಅರಳಿರುವ ಹೂವೊಂದು ಸೌಂದರ್ಯ ಭರಿತವಾಗಿರುವುದನ್ನು ಸೂಚಿಸುತ್ತದೆ. ಕೆಳಬದಿಯಲ್ಲಿ ತಾಜಾತನದ ಎರಡು ಎಲೆಗಳನ್ನು ಚಿತ್ರಿಸಿದ್ದಾರೆ. ಇವರ ಕಲಾಕೃತಿಯಲ್ಲಿ ಹೂ ಎಲೆಗಳಿಗೆ ಮಹಿಳೆಯನ್ನು ಹೋಲಿಕೆ ಮಾಡುವ ಮತ್ತು ಸೌಂದರ್ಯವನ್ನು ವರ್ಣಿಸುವ ಬಗೆ ಇದಾಗಿದೆ.

ಚಿತ್ರ–೦೭

ಸಿ.ಚಂದ್ರಶೇಖರವರು ರಚಿಸಿರುವ ಮಹಿಳೆಯ ಚಿತ್ರಗಳಲ್ಲಿ ಒಂದಾದ ಈ ಕಲಾಕೃತಿಯ ಹಿಂದಿನ ಎಲ್ಲಾ ಕಲಾಕೃತಿಗಳಿಗಿಂತಲೂ ಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ಈ ಕಲಾಕೃತಿಯಲ್ಲಿ ಆಕೃತಿಗಳ ಸಂಯೋಜನೆಯೇ ಶೈಲಿಯದ್ದಾಗಿದೆ. ಪಿಕಾಸೋ ಅವರ ಕ್ಯೂಬಿಕ್ ಶೈಲಿಯ ರಚನೆಯನ್ನು ನೆನಪಿಸುವ ಶೈಲಿಯಂಥಿದ್ದು ಮೇಲ್ನೋಟಕ್ಕೆ ಒಂದೇ ಒಂದೇ ಮಹಿಳಾಕೃತಿಯಂತಿದ್ದು ಎರಡು ಮುಖಭಾವಗಳನ್ನು ಸಂಯೋಜಿಸಿ ರಚಿಸಲಾಗಿದೆ. ಇದರಲ್ಲಿ ಪಾರ್ಶ್ವ ಮುಖಭಾವವನ್ನು ಮತ್ತು

ಎದುರು ಮುಖವನ್ನು ಹೊಂದಿರುವ ಎರಡು ಎರಡು ಮಹಿಳೆಯಾಕೃತಿಯನ್ನು ಹೊಂದಿರುವ ಆಕೃತಿಗಳನ್ನು ಒಂದೇ ಆಕೃತಿಯಲ್ಲಿ ಸಂಯೋಜಿಸಿದ್ದು ವಿಶೇಷವೆನಿಸಿದೆ. ಒಂದೇ ಅಗಲವಾದ ಹಣೆ ಮುಖದ ತುಂಬ ಆವರಿಸಿಕೊಂಡಿರುವ ಕಣ್ಣುಗಳು ಪಾರ್ಶ್ವ ಆಕೃತಿಯ ಮೂಗು ನೀಳವಾಗಿದ್ದು ಅದರ ಕೆಲಬದಿಯ ದಟ್ಟವರ್ಣದ ಬಾಹ್ಯರೇಖೆಯೊಂದು ಮುಖಭಾವಗಳನ್ನು ವಿಭಾಗಿಸುವಂತೆ ಎಳೆಯಲಾಗಿದೆ. ಮುಗ್ಧನೋಟವನನು ಬೀರುವ ಕಣ್ಣುಗಳು ಬಲಿಬದಿಯ ಕಣ್ಣುಬ್ಬು ಕೆಳಭಾಗದಿಂದ ಅರ್ಧ ಮುಖಾವೃತ್ತಿಯ ತಿಳಿನೀಲಿ ವರ್ಣದಿಮದ ಲೇಪಿತಗೊಂಡಿದ್ದು ಉಳಿದಂತೆ ಹಳದಿ, ನೀಲಿ, ಬಿಳಿ, ವರ್ಣಗಳ ಬಳಕೆಯೊಂದಿಗೆ ರಚನೆಗೊಂಡಿದೆ. ಮುಖದ ಎರಡು ಬದಿಯಿಂದ ನೀಳವಾದ ಕೇಶರಾಶಿಯು ವಕ್ರ ರೇಖೆಗಳಂತೆ ಕೆಳಭಾಗಕ್ಕೆ ಚಲಿಸಿರುವ ಈ ಆಕೃತಿಯ ಸ್ಥಳಾವಕಾಶದ ಹಿನ್ನೆಲೆಯಲ್ಲಿ ನೀಲಿ, ಹಸಿರು ವರ್ಣದ ಎಲೆಗಳು ಅಲ್ಲಲ್ಲಿ ಸಂಯೋಜನೆಗೊಂಡಿವೆ. ಇದಕ್ಕೆ ದಟ್ಟವರ್ಣದ ಬಾಹ್ಯ ರೇಖೆಗಳನ್ನು ಸದೃಢತೆಯಿಂದ ಎಳೆಯಲಾಗಿದೆ. ಬಲಪಾರ್ಶ್ವದ ಕೆಳಬದಿಯಲ್ಲಿ ನೈದಿಲೆಯ ಹೂವೊಂದು ಅರಳಿದಂತೆ ಚಿತ್ರಿಸಲಾಗಿದ್ದು ಮೇಲ್ಬದಿಯ ಬಲಪಾರ್ಶ್ವದಲ್ಲಿ ಎರಡು ಹೂವಾಕೃತಿಗಳನ್ನು ರಚಿಸಲಾಗಿದೆ. ಕಿವಿಯಲ್ಲಿ ರಿಂಗಾಕೃತಿಯ ಆಭರಣವನ್ನು ಸ್ವರ್ಣವರ್ಣದಲ್ಲಿ ರಚಿಸಲಾಗಿದೆ. ಒಟ್ಟಾರೆ ಈ ಕಲಾಕೃತಿಯಲ್ಲಿ ಮಹಿಳೆಯನ್ನು ಪ್ರಕೃತಿಗೆ ಓಲಿಕೆ ಮಾಡುವ ಪ್ರಯತ್ನ ಇದಾಗಿದೆ.

ನಂತರ ಬೆಂಗಳೂರಿನ ಹಲವಾರು ಕಲಾ ಶಾಲೆಗಳಿಂದ ಬಂದ ಅಧ್ಯಾಪಕರು ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳು ಸಿ. ಚಂದ್ರಶೇಖರ ಅವರನ್ನು ಹಾಗೂ ಎಂ.ಎಚ್.ಕೃಷ್ಣಯ್ಯ ಅವರನ್ನು ಒಂದೊಂದಾಗಿ ಪ್ರಶ್ನಿಸಿ ಪ್ರತಿ ಉತ್ತರ ಪಡೆಯುತ್ತಾ ಸಿ.ಚಂದ್ರಶೇಖರರ ಚಿತ್ರಕಲೆಯ ಕಡೆಗೆ ಬಂದ ಒಲವು ಅಲ್ಲದೆ ಕಲಾಕೃತಿಗಳು ರಚಿಸಲು ಸ್ಫೂರ್ತಿಗೊಂಡ ಕ್ಷಣಗಳು ಸ್ಟೂಡಿಯೋನಲ್ಲಿ ಕೆಲಸ ಮಾಡುತ್ತಿರುವಾಗ ಕಂಡ ಘಟನೆಗಳು ಕಲಾಕೃತಿಗಳಲ್ಲಿ ಅವುಗಳ ಅಂಶಗಳು ಕಾಣಬಹುದು. ಹೀಗೆ ಒಟ್ಟಾರೆಯಾಗಿ ಈ ಕಲಾಕೃತಿಗಳು ರಚಿಸಿದ ಉದ್ದೇಶ, ಆ ಸಮಯದ ಸಾಮಾಜಿಕ ಸ್ಥಿತಿ, ಆ ಸಮಯದಲ್ಲಿನ ಕಡು ಬಡತನ, ದಲಿತರಿಗೆ ಶಿಕ್ಷಣದ ಕೊರತೆ, ಬದುಕಿನ ಹಾಗೂ ಸಾವಿನ ನಡುವಿನ ತೊಳಲಾಟ, ಬೌದ್ಧಧರ್ಮದಲ್ಲಿ ತತ್ವಗಳ ಅನುಕರಣೆ ಈ ಕಲಾಕೃತಿಗಳಲ್ಲಿ ಕಾಣಬಹುದು. ಬಡವರ ಗುಡಿಸಲುಗಳು ಬೆಂಗಳೂರು ಮಹಾನಗರದಲ್ಲಿ ಇರಬಾರದು ಎಂಬ ಸತ್ಯ ಸಿ.ಚಂದ್ರಸೇಖರ ಅವರ ಕಲಾಕೃತಿಗಳಾದ ಗೋಲ್ಡನ್ ಸ್ವೀಚ್ ಸರಣಿ ಚಿತ್ರಗಳಿಂದ ತಿಳಿದು ಬರುತ್ತದೆ. ಅಲ್ಲದೆ ಗುಡಿಸಲುಗಳಿಗೆ ಗೋಲ್ಡನ್ ಸ್ವೀಚ್‌ಗಳು ಹಾಕಿದ ಉದ್ದೇಶ ಬೆಂಗಳೂರಿನ ರೋಡ್‌ಗಳ ಆಚೆ ಇಚೆ ಗುಡಿಸಲುಗಳೆ ಬೇಡ ಎಂಬ ತಾತ್ಪರ್ಯಗಳಿಂದ ತಿಳಿದುಬರುತ್ತದೆ.

ವರ್ಣಚಿತ್ರಗಳು



ಚಿತ್ರ-೦೧. ಜಲಧಾರಿಣ

ವರ್ಣಚಿತ್ರಗಳು



ವುಮೆನ್ ಸೀರಿಸ್ ಕಲಾಕೃತಿಗಳು ಚಿತ್ರ-೦೧.



ವುಮೆನ್ ಸೀರಿಸ್ ಕಲಾಕೃತಿಗಳು ಚಿತ್ರ-೦೨.


ವರ್ಣಚಿತ್ರಗಳು



ಚಿತ್ರ-೦೪.

ಮೆನ್ ಸೀರಿಸ್ ಕಲಾಕೃತಿಗಳು

ವರ್ಣಚಿತ್ರಗಳು



ವುಮೆನ್ ಸೀರಿಸ್ ಕಲಾಕೃತಿಗಳು ಚಿತ್ರ-೦೫



ವುಮೆನ್ ಸೀರಿಸ್ ಕಲಾಕೃತಿಗಳು ಚಿತ್ರ-೦೬

ವರ್ಣಚಿತ್ರಗಳು



ಚಿತ್ರ-02

ನ್ ಸೀರಿಸ್ ಕಲಾಕೃತಿಗಳು

ಸಮಾಜದಲ್ಲಿನ ಅಸಮಾನತೆಯ ಕಡೆಗೆ ಸಂಬಂಧಪಟ್ಟ ಹಾಗೆ ಬದುಕಿನಲ್ಲಿ ಬವಣೆಗಳಿಗೆ ಸಂಬಂಧಪಟ್ಟ ಹಾಗೆ ಸಂಕಷ್ಟಗಳ ಒಂದು ಬಗೆಯ ತಣ್ಣನೆಯ ಆಕ್ರೋಶ ಹೋರಾಟ ಅಂತ ಅಲ್ಲ, ಸಂಘರ್ಷಕ್ಕೆ ಆ ಕುದಿತಗಳೆಲ್ಲಾ ಆ ಕಲಾರಚನೆಗಳಲ್ಲಿ ಕಾಣಬಹುದು. ತುಂಬಾ ಸಮಯದಿಂದ ಬಹಳ ತೀವ್ರವಾಗಿ ಪ್ರತಿಕ್ರಿಯಿಸಿದ, ಬಹಳ ಸಮಯದಿಂದ ಮನಸ್ಸಿನ ಕುದಿಯನ್ನು ಆಕ್ರೋಶವನ್ನು ಕಲಾಕೃತಿಗಳಲ್ಲಿ ಅಭಿವ್ಯಕ್ತಪಡಿಸುವುದಕ್ಕೆ ಸಾಧ್ಯವಾಯಿತು. ವಸ್ತುವಿನ ಸೌಂದರ್ಯ ಕಲಾತ್ಮಕವಾಗಿ ಹೊಸ ದೃಷ್ಟಿಯಲ್ಲಿ ರೂಪ ನಿರ್ವಹಣೆಯಲ್ಲಿ ಅಭಿವ್ಯಕ್ತಿ ನಿರ್ವಹಿಸುತ್ತಾರೆ ಎನ್ನುವುದು ಆರ್ಟಿಸ್ಟಿಕ್ ಆಗಿ ಈ ನೋವನ್ನು, ಈ ಕೋಪವನ್ನು ಹೇಗೆ ವ್ಯಕ್ತಪಡಿಸಬೇಕು ಎನ್ನುವ ರೀತಿಯಲ್ಲಿ ಮತ್ತೆ *Composition* ರೀತಿಯಲ್ಲಿ ಅವರು ತಂದಿರುವುದನ್ನು ಕಾಣುತ್ತೇವೆ. ಕಾಲದೇಶಗಳನ್ನು(*Time & Spece*) ದೃಶ್ಯ ರೂಪಗಳನ್ನಾಗಿ ಪರಿವರ್ತಿಸುತ್ತಾರೆ.

Visual Methaphals ನಲ್ಲಿ ಸೂಚನೆ ಸಂಕೇತವಾಗಿ ಪರಿವರ್ತಿತವಾಗುತ್ತೆ. ಈ ಎಲ್ಲಾ ಅಂಶಗಳು(*Visual Methaphals* ನಲ್ಲಿ) ಬಿಳಿ ಹಾಳೆ ಅಥವಾ ಕ್ಯಾನವಾಸ್‌ನಿಂದ ಸಾಧ್ಯವಾಗುತ್ತದೆ. ದಿನನಿತ್ಯ ನಾವು ನಿರ್ಲಕ್ಷಿಸುವ ನಗಣ್ಯ ಎನ್ನುವಂತಹ ಕ್ಷುಲ್ಲಕ ವಸ್ತುವನನು ಸಿ.ಚಂದ್ರಶೇಖರರ ಕಲಾಕೃತಿಗಳಲ್ಲಿ ಕಾಣುತ್ತೇವೆ. ಪ್ರಾರಂಭದ ರೇಖಾಚಿತ್ರಗಳನ್ನು ಗಮನಿಸಿದರೆ ಒಂದು ರೇಖೆಯನ್ನು ಬೇರ್ಪಡಿಸಲು ಆಗದಂತಹ ರೇಖಾ ಸಮೂಹ ನಿರ್ಮಾಣ ಮಾಡಿದಂತಹ ಆಕೃತಿಯ ಪ್ರಕಾರಗಳನ್ನು ನಿರ್ಮಾಣ ಮಾಡಿದಂತಹ ಚಿತ್ರಗಳನ್ನು ನೋಡಿದಾಗ ರೇಖಾಚಿತ್ರಗಳಲ್ಲಿ ವಿಶೇಷತೆ ಕಂಡುಬರುತ್ತದೆ.

೩.೨.೨ ಆ್ಯಪಲ್ ಸರಣಿ ಚಿತ್ರಗಳು

ಚಿತ್ರ–೦೧.

ಸಿ. ಚಂದ್ರಶೇಖರವರ ಆ್ಯಪಲ್ ಸರಣಿಯ ಈ ಕಲಾಕೃತಿಯು ೧೯೮೫ರಲ್ಲಿ ರಚಿಸಲಾಗಿದೆ. ಈ ಕಲಾಕೃತಿಯನ್ನು ತೈಲಮಾಧ್ಯಮದಿಂದ ಕ್ಯಾನ್ವಾಸ್ ಮೇಲೆ ಚಿತ್ರಿಸಿದ್ದಾರೆ. ಈ ಕಲಾಕೃತಿಯಲ್ಲಿ ಪ್ರಕೃತಿಯನ್ನು ಹೆಣ್ಣಿಗೆ ಹೋಲಿಸಿರುವುದು ಕಂಡುಬರುತ್ತದೆ. ದಟ್ಟ ಮತ್ತು ತಿಳಿವರ್ಣಗಳನ್ನು ಬಳಸಿದ್ದು, ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜಿಸಿದ್ದು, ನೀಲಿ ಮತ್ತು ಕೆಂಪು ವರ್ಣದ ಸ್ತ್ರೀಯಾಕೃತಿಗಳು ಎಡ ಮತ್ತು ಬಲ ಪಾರ್ಶ್ವ ಆಕೃತಿಯಲ್ಲಿದ್ದು, ಮೇಲ್ಬದಿಯ ಸ್ಥಳಾವಕಾಶದ ಆಕಾಶದಲ್ಲಿ ತೇಲಾಡುವ ಸ್ಥಿತಿಯಲ್ಲಿ ಕತ್ತರಿಸಿದ ಸೇಬು ಹಣ್ಣಿನಾಕೃತಿಯನ್ನು ಸಂಯೋಜಿಸಲಾಗಿದೆ.

ಚಿತ್ರ–೦೨.

ಸಿ. ಚಂದ್ರಶೇಖರವರ ಆ್ಯಪಲ್ ಸರಣಿಯ ಎರಡನೆಯ ಕಲಾಕೃತಿ ಇದಾಗಿದ್ದು, ೧೯೮೫ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಒಟ್ಟು ಸ್ಥಳಾವಕಾಶದ ಕ್ಯಾನ್ವಾಸಿನ

ಮೇಲೆ ಅಗತ್ಯಕ್ಕೆ ತಕ್ಕಂತೆ ಒಂದು ಸೇಬು ಹಣ್ಣನ್ನು ಕತ್ತರಿಸಿ ಅದರ ಒಂದು ಚಿಕ್ಕ ಭಾಗವನ್ನು ಅಚ್ಚುಕಟ್ಟಾಗಿ ಸಂಯೋಜಿಸಿಕೊಂಡು ತಿಳಿ ಹಸಿರು, ಗಾಢ ಕೆಂಪು ವರ್ಣಗಳಿಂದ ಪ್ರಸ್ತುತ ಕಲಾಕೃತಿಯು ಆಕರ್ಷಣಾತ್ಮಕವಾಗಿ ಮೂಡಿಬಂದಿದೆ. ಮಹಿಳೆಯ ಭಾವಚಿತ್ರವು ಕ್ಯಾನ್ವಾಸಿನ ಸ್ಥಳಾವಕಾಶಕ್ಕೆ ತಕ್ಕಹಾಗೆ ಸಂಯೋಜಿಸಲಾಗಿದೆ.

ಚಿತ್ರ-೦೩.

ಕಲಾವಿದ ಸಿ. ಚಂದ್ರಶೇಖರ ಅವರ ಆ್ಯಪಲ್ ಸರಣಿಯ ಮೂರನೆಯ ಕಲಾಕೃತಿ ಇದಾಗಿದೆ. ಇದನ್ನು ೧೯೮೫ರಲ್ಲಿ ಚಿತ್ರಿಸಲಾಗಿದೆ. ಈ ಕಲಾಕೃತಿಯು ತೈಲವರ್ಣ ಮಾಧ್ಯಮದಿಂದ ರಚಿಸಲಾಗಿದೆ. ಇಲ್ಲಿ ದಟ್ಟವಾದ ನೀಲಿ, ತಿಳಿ ನೀಲಿ ವರ್ಣವನ್ನು ಬಳಸಿಕೊಂಡು ಚಿತ್ರದ ಹಿಂಭಾಗ ದೂರದಲ್ಲಿ ಆಕಾಶವು ಕಂಡಂತೆ ಸಂಯೋಜಿಸಲಾಗಿದೆ. ಒಂದು ಅರ್ಧ ಪಾರ್ಶ್ವ ಭಾಗವಾಗಿರುವ ಭಾವಚಿತ್ರವನ್ನು ಚಿತ್ರಿಸಿ, ಇದರ ಹಿನ್ನೆಲೆಯಲ್ಲಿ ದಟ್ಟ ಹಸಿರು ಬಣ್ಣವನ್ನು ಬಳಸಿಕೊಳ್ಳಲಾಗಿದೆ. ಹಿಂಭಾಗದಲ್ಲಿ ಹಂಪಿಯ ಗೋಡೆಗಳನ್ನು ದೂರದಿಂದ ನೋಡಿದಂತೆ ಭಾಸವಾಗುತ್ತದೆ.

೩.೨.೪೩ ಫಿಯರ್ ಸರಣಿ ಚಿತ್ರಗಳು

ಫಿಯರ್ ಸರಣೀಯ ಕಲಾಕೃತಿಯನ್ನು ಕಲಾವಿದರಾದ ಸಿ. ಚಂದ್ರಶೇಖರ ಅವರು ೧೯೮ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವರು. ದಿ ಸ್ಟಿಚ್ ಪೆನ್ ಆ್ಯಂಡ್ ಪ್ಲೋಲ್ಡ್. ಹೀಗೆ ಹಲವು ಸರಣಿ ಕಲಾಕೃತಿಗಳಲ್ಲಿ ಫಿಯರ್ ಸರಣಿ ಕಲಾಕೃತಿಯು ಪ್ರಸಿದ್ಧ ಕಲಾಕೃತಿಯಾಗಿದದು, ಇದರಲ್ಲಿಯ ವಿಷಯ ವಸ್ತು ವರ್ಣಗಾರಿಕೆ, ನೈಪುಣ್ಯತೆಗಳೆಲ್ಲ ಹಿಂದಿನ ಸರಣಿ ಕಲಾಕೃತಿಗಳಿಗಿಂತಲೂ ಭಿನ್ನ ನೆಲೆಯಲ್ಲಿ ನಿಲ್ಲುವಂತಹದ್ದು. ಇವರ ಕಲಾಕೃತಿಯ ವಿಶಿಷ್ಟತೆ ಎಂದರೆ ವರ್ಣಗಳ ಬಳಕೆಯು ಮತ್ತು ವಸ್ತು ವಿಷಯಕ್ಕೆ ತಕ್ಕಂತೆ ಆಕೃತಿಗಳನ್ನು ಸಂಯೋಜಿಸಿಕೊಂಡು ತಮ್ಮದೆ ಕಲಾಶೈಲಿಯ ಮೂಲಕ ಕಲಾವಲಯಕ್ಕೆ ತಮ್ಮನ್ನು ತಾವು ಕ್ರಿಯಾಶೀಲರಾಗಿ ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಚಿತ್ರ-೦೧.

ಆಯತಾಕಾರದ ಒಟ್ಟು ಸ್ಥಳಾವಕಾಶದಲ್ಲಿ ಒಂದು ಮಾನವಾಕೃತಿಯನ್ನು ಸೂಚ್ಯವಾಗಿ ಅರ್ಧ ಮುಖಾಕೃತಿಯನ್ನು ಒಟ್ಟು ಸ್ಥಳಾವಕಾಶದ ಮಧ್ಯದ ಮೇಲ್ಭಾಗದಲ್ಲಿ ಸಂಯೋಜಿಸಿದ್ದು, ಇದಕ್ಕೆ ದಟ್ಟ ಮತ್ತು ತಿಳಿ ಹಳದಿ ವರ್ಣದ ಬಟ್ಟೆಯನ್ನು ಹಿನ್ನೆಲೆಯ ಆಕೃತಿಯ ತುಂಬ

ವರ್ಣಚಿತ್ರಗಳು



ಚಿತ್ರ-೦೧

ಆ್ಯಪಲ್ ಸರಣಿಯ ಕಲಾಕೃತಿಗಳು

ವರ್ಣಚಿತ್ರಗಳು



ಆ್ಯಪಲ್ ಸರಣಿಯ ಕಲಾಕೃತಿಗಳು ಚಿತ್ರ-೦೨



ಆ್ಯಪಲ್ ಸರಣಿಯ ಕಲಾಕೃತಿಗಳು ಚಿತ್ರ-೦೩

ಮುಚ್ಚಿರುವಂತಿದ್ದು. ಅದರ ರಭಸವಾದ ಕುಂಚದ ಎಳೆತಗಳು. ಪ್ರಖರ ವರ್ಣಗಳು ವಿನ್ಸಂಟ್ ವ್ಯಾನ್‌ಗಾರರ ವರ್ಣ ತಂತ್ರಗಾರಿಕೆಯನ್ನು ನೆನಪಿಸುವಂತಿದೆ. ಸಮಾಜದ ಹೊರ ಪ್ರಪಂಚದ ಕೆಲ ಘಟನೆಗಳಿಂದ ಏನು ತೋಚದೆ ಬಟ್ಟೆಯೊಂದರ ಮಧ್ಯೆ ಅವಿತು ಕುಳಿತಿರುವುದನ್ನು ಕಾಣಬಹುದಾಗಿದೆ. ಅವಳ ಬಲಗಣ್ಣೊಂದು ಮಾತ್ರ ಚಿತ್ರಿಸಿದ್ದು ಅದು ಅವಳು ಪಡುತ್ತಿರುವ ಕಷ್ಟ ದುಃಖಗಳನ್ನು ಸಮಾಜದಲ್ಲಿ ಪ್ರತಿಬಿಂಬಿಸುವಂತಿದೆ. ಮಹಿಳೆಯ ಹರಿದ ಬಟ್ಟೆಯನ್ನು ಸಂಪೂರ್ಣವಾಗಿ ಮುಚ್ಚುವ ಪ್ರಯತ್ನದಂತೆ ಕೆಂಪು ವರ್ಣದ ದಾರದ ಹೊಲಿಗೆಯಿಂದ ಬೆಸೆಯುವ ಪ್ರಯತ್ನ ಮಾಡಿರುವುದನ್ನು ಕಾಣಬಹುದಾಗಿದೆ. ಉಳಿದಂತೆಲ್ಲ ದಟ್ಟ ನೀಲಿ, ಕೆಂಪು ಹಳದಿಯ ವರ್ಣವನ್ನು ಸ್ಥಳಾವಕಾಶಕ್ಕೆ ತಕ್ಕಂತೆ ಬಣ್ಣವನ್ನು ಲೇಪಿಸಲಾಗಿದ್ದು, ಒಟ್ಟಾರೆಯಾಗಿ ಕಲಾವಿದರು ತಮ್ಮ ಗ್ರಹಿಕೆಗೆ ಬಂದುದನ್ನು ಕಲಾಕೃತಿಯಲ್ಲಿ ಮೂಡಿಸಿದ್ದಾರೆ. ತೈಲ ಮಾಧ್ಯಮ ಶೈಲಿಯಲ್ಲಿ ಕಲಾವಲಯಕ್ಕೆ ಅಗತ್ಯವಾದ ಅಮೂಲ್ಯವಾದ ಹಲವಾರು ಕಲಾಕೃತಿಗಳನ್ನು ನೀಡಿರುವರು ಅಂತವುಗಳ ಸಾಲಿಗೆ ತೈಲವರ್ಣ ಮಾಧ್ಯಮದಲ್ಲಿ ಪ್ರಸಿದ್ಧವಾದ ಫಿಯರ್ ಸರಣಿ ಕಲಾಕೃತಿಗಳು ಪ್ರಮುಖವಾಗಿವೆ.

ಚಿತ್ರ-೦೨.

ಕಲಾವಿದರಾದ ಸಿ. ಚಂದ್ರಶೇಖರವರು ರಚಿಸಿರುವ ಶೆಲ್ ಕಲಾಕೃತಿಯು ರೇಖಾ ಪ್ರಧಾನವಾಗಿದ್ದು, ಹಿಂದಿನ ಕಲಾಕೃತಿಯ ರಚನಾ ಶೈಲಿಯ ಮುಂದುವರಿದ ಭಾಗವಾಗಿದೆ. ಈ ಎಲ್ಲಾ ಕಲಾಕೃತಿಯಲ್ಲಿ ಹಿನ್ನೆಲೆಯ ಸ್ತಳಾವಕಾಶಕ್ಕೆ ಅಷ್ಟೇನು ಮಹತ್ವ ನೀಡದೆ ಪ್ರಧಾನ ಆಕೃತಿಯಲ್ಲಿಯೇ ಆ ವಿಷಯ ವಸ್ತುವಿನ ಸಂಪೂರ್ಣತೆಯ ತೋರಿಸುವ ಪ್ರಯತವನ್ನು ಮಾಡಲಾಗಿದೆ. ಪಿಯರ್ ಚಿತ್ರ ಇಡೀ ಸಮಾಜ ಹೆಣ್ಣನ್ನು ನಡೆಸಿಕೊಳ್ಳುತ್ತಿವು ಮನೋಭಾವಕ್ಕೆ ಅತ್ಯುತ್ತಮ ವಿಮರ್ಶೆಯೋಪಾದಿಯಲ್ಲಿದೆ. ಬೃಹದಾಕಾರದ ಮುಸಿಕಿನೊಳಗೆ ಹಲವು ಹೆಮ್ಣುಗಳಿಗೆ ಅಂದರೆ ತಾಯಿ ಮಗುವಿನ ಅನನ್ಯತೆಯನ್ನು ಪ್ರತಿಬಿಂಬಿಸುವಂತಿದ್ದು ಈ ಕಲಾಕೃತಿಯ ಆಕೃತಿಗಳು ಅಗತ್ಯಕ್ಕೆ ತಕ್ಕಂತೆ ಸಂಯೋಜನೆಗೊಂಡಿವೆ. ಈ ಕಲಾಕೃತಿಯಲ್ಲಿ ಮೂರು ಮಾನವಾಕೃತಿಗಳು ಸಂಯೋಜನೆಗೊಂಡಿದೆ. ಇದರಲ್ಲಿ ಕುಬ್ಬಾ ಕೃತಿಯ ಹಡೂತಿ ದೇಹದ ಸದೃಢ ದೇಹಾಕಾಯದ ಸ್ತ್ರೀಯು ಎರಡು ಮಕ್ಕಳನ್ನು ಕಂಕುಳಲ್ಲಿ ಎತ್ತಿಕೊಂಡಿರುವಂತಿದ್ದು, ಸ್ತ್ರೀಯ ಆಕೃತಿಯು ಅರ್ಧ ದೇಹಾಕೃತಿಯಲ್ಲಿದ್ದು ಇದು ಉಬ್ಬು ಶಿಲ್ಪಾ ಕೃತಿಯಲ್ಲಿದ್ದಂತೆ ಚಿತ್ರಿಸಲಾಗಿದ್ದು ಇದರಲ್ಲಿಯ ರೇಖೆಗಳು ಅಡ್ಡಲಾಗಿ ಸಮನಾಂತರವಾಗಿ ಚಲಿಸಿರುವಂತೆ ಗೀಚು ರೇಖೆಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಚಿತ್ರ-೦೩

೧೯೯೮ರಲ್ಲಿ ರಚಿಸಲಾದ ಈ ಕಲಾಕೃತಿಯು ತೈಲವರ್ಣ ಮಾಧ್ಯಮದ ಕ್ಯಾನ್ವಾಸ್ ಮೇಲೆ ಆಯತಾಕಾರದ ಸ್ಥಳಾವಕಾಶದಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಹಿಂದಿನ ಕಲಾಕೃತಿಯಂತೆಯೇ

ವರ್ಣಚಿತ್ರಗಳು



ಫಿಯರ್ ಸರಣಿಯ ಕಲಾಕೃತಿಗಳು

ಚಿತ್ರ-೦೧



ಫಿಯರ್ ಸರಣಿಯ ಕಲಾಕೃತಿಗಳು

ಚಿತ್ರ-೦೨

ಈ ಕಲಾಕೃತಿಯು ಅರ್ಧಮುಖ ಭಾವಾಕೃತಿಯನ್ನು ಹೊಂದಿದೆ. ಹಿಂದಿನ ಫಿಯರ್ ಸರಣಿಯ ಮೊದಲ ಕಲಾಕೃತಿಯಲ್ಲಿ ಈಗಿನ ಕಲಾಕೃತಿಯಲ್ಲಿ ಹೋಲಿಕೆಗಳು ಸ್ಥಳಾವಕಾಶದ ಆಯ್ಕೆ, ಆಕೃತಿಗಳ ಸಂಯೋಜನೆ ವರ್ಣಗಳ ಬಳಕೆಯಿಂದ ಏಕಪ್ರಕಾರವೆನಿಸಿದರೂ ವರ್ಣ ಪ್ರಕಾರದಲ್ಲಿ ಮೊದಲಿನ ಕಲಾಕೃತಿಯಲ್ಲಿ ಪ್ರಖರ ವರ್ಣವೇ ಪ್ರಧಾನವಾಗಿಸಿಕೊಂಡು ಸೌಮ್ಯ ವರ್ಣಗಾರಿಕೆಯಿಂದ ಅದರ ಭಾವನೆ ವಿವಿಧ ಆಯಾಮಗಳನ್ನು ಕಲಾಕೃತಿಯಲ್ಲಿ ಪ್ರತಿಬಿಂಬಿಸುವ ಪ್ರಯತ್ನ ಮಾಡಲಾಗಿದೆ.

ಒಟ್ಟು ಸ್ಥಳಾವಕಾಶಕ್ಕೆ ತಕ್ಕಂತೆ ಆಯಾತಾಕರಾದ ಸ್ಥಳದಲ್ಲಿ ಒಂದು ಮಾನವಾಕೃತಿಯನ್ನು ಮುಸುಕುದಾರಿಯಾಗಿ ಬಿಳಿಯ ಬಟ್ಟೆಯೊಂದನ್ನು ದೇಹದ ತುಂಬೆಲ್ಲ ಆವರಿಸಿಕೊಂಡಿರುವಂತೆ ಕುಳಿತ ಭಂಗಿಯಲ್ಲಿ ನೇರ ಭಾವಾಕೃತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಹಿನ್ನೆಲೆಯ ಸ್ಥಳಾವಕಾಶವನಲು ದಟ್ಟ ವರ್ಣ ಲೇಪನದಿಂದ ಪೂರ್ಣಗೊಳಿಸಿದ್ದು, ಮುನ್ನಲೆಯ ಪ್ರಧಾನ ಪುರುಷ ಆಕೃತಿಯನ್ನು ಬಲ ಪಾರ್ಶ್ವದ ಅದರ ಮುಖ ಭಾವಾಕೃತಿಯನ್ನು ಚಿತ್ರಿಸಿದ್ದ ಮಾನವಾಕೃತಿಯು ಅಗಲವಾದ ಅರಳಿದ ಕಣ್ಣುಗಳಲ್ಲಿ ಭಯದ ಭಾವಾಭಿವ್ಯಕ್ತಿ ಇದ್ದು ಇದರಲ್ಲಿ ನೆರಳು ಬೆಳಕಿನ ತೀವ್ರತೆಯನ್ನು ಪ್ರತಿಬಿಂಬಿಸಲಾಗಿದೆ. ಮುಖದ ಮುಂಭಾಗದ ಹರಿದ ಬಟ್ಟೆಯನ್ನು ದಟ್ಟವರ್ಣದ ದಾರದಿಂದ ಬೆಸೆಯುವ ಪ್ರಯತ್ನ ಮಾಡಲಾಗಿದೆ. ಅದರು ಬಟ್ಟೆಯು ತನ್ನ ಮೊದಲ ಆಕೃತಿಯಿಂದ ಬದಲಾಗದಿರುವುದನ್ನು ಕಲಾಕೃತಿಯಲ್ಲಿ ಕಲಾವಿದರು ಸಮಾಜದ ವ್ಯವಸ್ಥೆಯನ್ನು ಈ ಕಲಾಕೃತಿಯ ಆಕೃತಿಯ ಮೂಲಕ ಕಲಾವಲಯಕ್ಕೆ ತೆರೆದಿಡುವ ಪ್ರಯತ್ನ ಮಾಡಲಾಗಿದೆ.

೩.೨.೪. ಹ್ಯಾಂಗಿಂಗ್ ಲೈನ್ ಸರಣಿ ಚಿತ್ರಗಳು

ಚಿತ್ರ–೦೧.

೨೦೦೦ದ ಸಂದರ್ಭದಲ್ಲಿ ಉದುರುವ ರೇಖೆಗಳು ಎನ್ನುವ ಸರಣಿ ಚಿತ್ರಗಳನ್ನು ಕ್ಯಾನ್ವಾಸಿನ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವುದನ್ನು ಅವರ ಕಲಾಕೃತಿಯ ಅಂಕಿ ಅಂಶದಿಂದ ಕಾಣಬಹುದಾಗಿದೆ. ಕಲಾವಿದಾರದ ಸಿ. ಚಂದ್ರಶೇಖರವರು ಉದುರುವ ರೇಖೆಗಲು ಎನ್ನುವ ಕಲಾಕೃತಿಯಲ್ಲಿಯ ವಿಷಯ ವಸ್ತುವನ್ನು ನಿಸರ್ಗದ ವೈಪರಿತ್ಯವನ್ನು ಅದರ ವಿವಿಧ ಆಯಾಮಗಳನ್ನು ತಮ್ಮ ಕುಂಚ, ವರ್ಣದಿಂದ ಚಿತರಿಸಿರುವುದನ್ನು ಕಾಣಬಹುದಾಗಿದೆ. ಕ್ಯಾನ್ವಾಸಿನ ಸ್ಥಳಾವಕಾಶದಲ್ಲಿ ಉದುರುವ ರೆಖೆಗಳ ವಿಷಯಕ್ಕೆ ತಕ್ಕಂತೆ ರೇಖೆಗಳ ಎಳೆತವನ್ನು ವಿವಿಧ ವರ್ಣಗಳ ಬಳಕೆಯೊಂದಿಗೆ ಸಂಯೋಜಿಸಲಾಗಿದೆ. ಚೌಕಾಕಾರದ ಕ್ಯಾನ್ವಾಸ್ ಸ್ಥಳಾವಕಾಶದಲ್ಲಿ ಒಟ್ಟು ಸ್ಥಳಾವಕಾಶದ ತುಂಬೆಲ್ಲ ವಿವಿಧ ಬಗೆಯ ವರ್ಣಗಳಿಂದ ರಭಸತೆಯನ್ನು ಒಳೊಂಡ ರೇಖೆಗಲು ಕೆಳ ಬದಿಯ ಸ್ಥಳವಾಕಶದ ಮಧ್ಯಭಾಗದಿಂದ ಛೇದಿಸಿಕೊಂಡು ಮೇಲ್ಭಾಗದ ಸ್ಥಳಾವಕಾಶದವರೆ ಬೆಳೆದು ನಿಂತಂತ ಲಿಂಗಾಕೃತಿಯ

ವರ್ಣಚಿತ್ರಗಳು



ಚಿತ್ರ-೦೧

ಹ್ಯಾಂಗಿಂಗ್ ಲೈನ್ಸ್ ಸರಣಿಯ ಕಲಾಕೃತಿಗಳು

ರೇಖೆಗಳ ಸಮೂಹಗಳು ಮೇಲ್ತುದಿಯವರೆಗೆ ಬೆಳೆದು ಕೇಂದ್ರೀಕರಿಸಿರುವವು. ಕ್ಯಾನ್ವಾಸಿನ ಹಿನ್ನೆಲೆಯ ಸ್ಥಳಾವಕಾಶದ ತುಂಬೆಲ್ಲ ಕಡುಗೆಂಪು, ಕಪ್ಪುವರ್ಣವನ್ನು ವಾಸ್ ಶೈಲಿಯಲ್ಲಿ ಲೇಪಿಸಿಕೊಂಡು ಅದರ ಮುನ್ನೆಲೆಯಲ್ಲಿ ನೀಲಿ, ತಿಳಿನೀಲಿ, ಹಳದಿ, ಕೆಂಪು, ಕಡುಗೆಂಪು, ಹಸಿರು, ತಿಳಿಹಸಿರು, ಬಿಳಿವರ್ಣಗಳ ಮಿಶ್ರಮಣವು ಆಕೃತಿಗೆ ತಕ್ಕಂತೆ ಸಂಯೋಜಿಸಲಾಗಿದೆ. ನಿಸರ್ಗದ ದೃಶ್ಯಾವಳಿಗಳನ್ನೊಳುವ ಇವರ ಆಕೃತಿಯಲ್ಲಿಯ ಪ್ರಯೋಗಾತ್ಮಕ ಹಿನ್ನೆಲೆಯೇ ವಿಭಿನ್ನ ಮೇಲ್ಭಾಗದಿಂದ ಒಟ್ಟು ಸ್ಥಳಾವಕಾಶದ ಮಧ್ಯಬಾಗದವರೆಗೆ ವಿವಿಧ ವರ್ಣದ ಆಕಾಶವನ್ನೊಲ್ಲುವ ರೆಖೆಗಳ ಪ್ರಯೋಗಗೊಂಡಿರುವುದನ್ನು ಕಾಣಬಹುದು.

ಇಲ್ಲಿಯ ರೇಖೆಗಳು ಒ್ಟು ಸ್ಥಳಾವಕಾಶದಲ್ಲಿ ಅಡ್ಡಲಾಗಿ ಎದುರುಬದುರಾಗಿ ಚಲಿಸಿರುವುದು ತಿಳಿ, ದಟ್ಟವರ್ಣಗಳ ಶುಭ್ರತೆಯ ಎಳೆತಗಲು ತಳುಕು ಬಳಿಕಿನೊಂದಿಗೆ ರಭಸವಾಗಿ ಚಲಿಸಿರುವಂತೆ ಕಾಣುತ್ತವೆ. ಇದರ ಸೂಕ್ಷ್ಮತೆಯನ್ನು ಗಮನಿಸಿದಾಗ ಸಮುದ್ರದಾಳದಲ್ಲಿಯ ಜಲಚರ ಜೀವಿಗಳು ಸಂಚರಿಸುವ ವೇಗ, ದಿಕ್ಕಿನಂತೆಯೇ ಇಲ್ಲಿಯ ರೇಖೆಗಳು ಸಮತಟ್ಟಾಗಿ ಚಲಿಸಿರುವುದನ್ನು ಕಾಣಬಹುದು. ಅಲ್ಲದೆ ಮುನ್ನಲೆಯ ಆಕೃತಿಯೊಂದ್ದು ಹಿನ್ನೆಲೆಯ ಸಮತಟ್ಟಾದ ರೇಕೆಗಳನ್ನು ಛೇದಿಸಿಕೊಂಡು ಮೇಲ್ಮುಖವಾಗಿ ಚಲಿಸಿರುವಂತಿದ್ದು ದಟ್ಟ, ತಿಳಿನೀಲಿ, ಕಡುಗೆಂಪು, ಹಳದಿ, ಹಸಿರು, ಬಿಳಿವರ್ಣಗಳೊಂದಿಗೆ ಸಂಯೋಜನೆಗೊಂಡಿದೆ. ಗುಮ್ಮಟಾಕಾರದ ಆಕೃತಿಯೊಂದು ಕೆಳಬದಿಯ ದಟ್ಟವರ್ಣದ ರೇಖೆಗಲು ಮೆಲ್ಮುಖವಾಗಿ ಚಲಿಸಿ ಒಟ್ಟು ಸ್ಥಳಾವಕಾಶದ ಮೇಲ್ಭಾಗಕ್ಕೆ ಚಲಿಸಿದಂತೆ ತಿಳಿವರ್ಣದೊಂದಿಗೆ ವಿಕಾಸತೆಯನ್ನು ತೋರಿಸುತ್ತಿದೆ. ರೇಖೆಗಳು ಒಂದರ ಮೇಲೊಂದರಂತೆ ಚಲಿಸಿದ್ದು, ಬಿಳಿವರ್ಣದ ಮೇಲ್ತುದಿಗೆ ಎಲ್ಲಾ ರೇಖೆಗಳು ಕೇಂದ್ರೀಕೃತಗೊಳ್ಳವಂತಿದ್ದು, ಕಲಾವಿದರಾದ ಸಿ. ಚಂದ್ರಶೇಖರ ಅವರ ವಿಭಿನ್ನ ಕಲಾಶೈಲಿಯ ಸರಣಿ ಕಲಾಕೃತಿಗಳಲ್ಲಿ ಇದೊಂದು ಶ್ರೇಷ್ಠ ಕಲಾಕೃತಿಯಾಗಿರುವುದು ಕಾಣಬಹುದಾಗಿದೆ.

೩.೨.೫. ಪ್ಯಾರಡಕ್ಸ್ ಸರಣಿ ಚಿತ್ರಗಳು

ಚಿತ್ರ–೦೧.

೧೯೯೮ರಲ್ಲಿ ರಚಿಸಲಾದ ಪ್ಯಾರಡಾಕ್ಸ್ ಸರಣೀ ಚಿತ್ರಗಳು ೧೯೯೪ರಲ್ಲಿ ರಚಿಸಲಾದ ಸ್ಟಿಲ್ ಅಂಡ್ ಲೈಫ್ ಸರಣಿ ಚಿತ್ರಗಳಷ್ಟೇ ವಿಶಿಷ್ಟ ಶೈಲಿಯ ಕಲಾಕೃತಿಗಳಾಗಿದ್ದು, ಆಯಾ ಕಾಲಘಟ್ಟಕ್ಕೆ ತಕ್ಕುದಾಗಿ ಸ್ಥಳೀಯ ವಿಷಯ ವಸ್ತುಗಳನ್ನು ಆಯ್ದುಕೊಂಡು ಸಾಮಾಜಿಕವಾಗಿ ಜಾಗೃತಗೊಳಿಸುವಂತ ಕಾರ್ಯವನ್ನು ಚಿತ್ರಕಲೆಯ ಮೂಲಕ ತೊಡಗಿಕಂಡವರ ಕಲಾವಿದರಾದ ಸಿ. ಚಂದ್ರಶೇಖರ ಅವರು ಶೈಲವರ್ಣ ಮಾಧ್ಯಮದಲ್ಲಿ ವಿಭಿನ್ನ ನೆಲೆಯಲ್ಲಿ ಆಲೋಚಿಸಿ ಆಕೃತಿಗಳನ್ನು

ಸಂಯೋಜಿಸಿಕೊಂಡು ಕ್ಯಾನ್ವಾಸನ ಸ್ಥಳಾವಕಾಶದಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಇವರ ಎಲ್ಲಾ ಸರಣಿ ಕಲಾಕೃತಿಗಳಲ್ಲಿ ತಮ್ಮದೇ ಶೈಲಿಯ ಸಾಂಕೇತಿಕವೆಂಬಂತೆ ಹೊಲಿಗೆಯ ಮೂಲಕ ತೇಪೆ ಹಾಕುವುದನ್ನು ಪ್ರತಿ ಕಲಾಕೃತಿಯ ಯಾವುದಾದರೂ ಸ್ಥಳಾವಕಾಶದಲ್ಲಿ ಕಾಣಬಹುದಾಗಿದೆ. ಪ್ರಸಕ್ತ ಕಲಾಕೃತಿಯಲ್ಲಿ ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಸೂಚ್ಯವಾದ ವಿಷಯ ವಸ್ತುಗಳನ್ನು ಆಯ್ದುಕಂಒಡು ಆಕೃತಿಗಳಾಗಿ ಪರಿವರ್ತಿಸಿರುವುದನ್ನು ಕಾಣಲಾಗಿದೆ.

ಈ ಕಲಾಕೃತಿಯಲ್ಲಿ ತಿಳಿ ಮತ್ತು ದಟ್ಟವರ್ಣಗಳು ಓಪೆಕ್ ಮಾದರಿಯಲ್ಲಿ ಲೇಪನಗೊಂಡಿದೆ. ಒಟ್ಟು ಸ್ಥಳಾವಕಾಶದ ಮುಕ್ಕಾಲು ಭಾಗದಷ್ಟು ತಿಳಿ ಕೆಂಪು, ತಿಳಿ ಹಸಿರು, ದಟ್ಟ ವರ್ಣಗಳ ಮಿಶ್ರಣದೊಂದಿಗನ ಆಯತಾಕಾರದ ಪಟ್ಟಿಕೆಯೊಂದು ಕೆಳಬದಿಯ ಕಾಲುಭಾಗದ ಸ್ಥಳಾವಕಾಶದಿಂದ ಮೇಲ್ಭಾಗಕ್ಕೆ ತಲಿಸಿ ಛೇದಿಸಿದಂತಿದ್ದು. ಈ ಕಲಾಕೃತಿಯ ಸ್ಥಳಾವಕಾಶದ ತುಂಬೆಲ್ಲ ಆಕೃತಿಯನ್ನು ಸಂಯೋಜಿಸಲಾಗಿದೆ. ಮುನ್ನೆಲೆಯಲ್ಲಿ ರಾಷ್ಟ್ರೀಯತೆಯ ಸಾಂಕೇತಿಕವಾಗಿ ತ್ರಿವರ್ಣಧ್ವಜದ ಸಂಕೇತಿ ವರ್ಣಗಳಾದ ಕೇಸರಿ(ಕೆಂಪು), ಬಿಳಿ, ಹಸಿರು ವರ್ಣಗಳು ಎಡ ಮತ್ತು ಬಲ ಪಾರ್ಶ್ವಕ್ಕೆ ರಭಸವಾಗಿ ಚಲಿಸಿರುವಂತೆ ಎಳೆಯಲಾಗಿದೆ.

ಆಯಾತಾಕರಾದ ಪಟ್ಟಿಗೆಯೊಂದನ್ನು ಬಿಗಿಯಾಗಿ ವರ್ಣದ ವಸ್ತ್ರದಿದಂ ಸುತ್ತವರಿದಿರುವಂತೆ ಚಿತ್ರಿಸಿದ್ದು, ಅದರ ಮೇಲ್ಭಾಗದಲ್ಲಿ ಅಡ್ಡಲಾಗಿ ತಿಳಿವರ್ಣದ ದಾರಾಕೃತಿಯಲ್ಲಿ ನೇರವಾಗಿ ಚಲಸಿದ್ದು ಅದಕ್ಕೆ ಅಡ್ಡಲಾಗಿ ಹತ್ತು ತಿಳಿ ರೇಖೆಗಳು ಹೊಲಿಗೆಯ ರೂಪದಲ್ಲಿ ಚಲಿಸಿರುವವು. ಅದರ ಮೇಲ್ಭಾಗದ ಮದ್ಯದಲ್ಲಿ ಹರಿದಿರುವ ವಸ್ತುವಿಗೆ ಮೂರು ಹೊಲಿಗೆಯನ್ನು ಹಾಕಿದ್ದಾರೆ. ಕೆಳಬದಿಯ ಬಲಪಾರ್ಶ್ವದಲ್ಲಿ ಆಯಾತಾಕಾರದ ವಸ್ತುವು ಕತ್ತರಿಸಿಕೊಂಡು ಹಿನ್ನೆಲೆಯ ದಟ್ಟತೆಯನ್ನು ಕಾಣುತ್ತಿದ್ದು ಅದನ್ನು ತೇಪೆಯ ಮೂಲಕ ಸರಿಪಡಿಸುವ ಹಂತವಾಗಿ ತಿಳಿವರ್ಣದ ಮೂರು ಹೊಲಿಗೆಯನ್ನು ಹಾಕಲಾಗಿದೆ.

ಎಡ ಪಾರ್ಶ್ವದ ಕೆಳಭಾಗದಲ್ಲಿ ಸ್ಪಷ್ಟವಾದ ತಿಳಿಗೆಂಪುವರ್ಣದ ದೊಡ್ಡ ಕೋಡುಗಳನ್ನು ಒಳಗೊಂಡ ಗೂಳಿಯೊಂದು ದಷ್ಟಪುಷ್ಟವಾಗಿರುವಂತೆ ಚಿತ್ರಿಸಲಾಗಿದೆ. ಹೊಲಿಗೆಯ ಸಾಂಕೇತಿಕವು ರಾಷ್ಟ್ರದಲ್ಲಿಯ ಅಸಮಾನತೆ, ತಳ ಮತ್ತು ಮೇಲ್ವರ್ಗದ ತಾರತಮ್ಯತೆಯನ್ನು ತೊಡೆದು ಹಾಕಿ ಹೊಲಿಗೆಯ ಮೂಲಕ ಬೆಸೆಯುವ ಕಾರ್ಯವಾಗಿದೆ. ಇದು ಆದಿಮಾನವರ ಆಲದ ಸಂಕೇತವಾಗಿ ಸಾಂಕೇತಿಕ ಆಕೃತಿಗಳನ್ನು ಅಲ್ಲಲ್ಲಿ ತೋರಿಸಲಾಗುವುದು. ಇವೆಲ್ಲವುಗಳ ನಡುವೆ ಹಿನ್ನೆಲೆಯಲ್ಲಿ ದಟ್ಟವರ್ಣಗಳು ಸಂಪೂರ್ಣವಾಗಿ ಓಪೆಕ್ ಮಾದರಿಯಲ್ಲಿ ಲೇಪಿಸಿದ್ದು ಅದರ ಮೇಲ್ಪದರಾಗಿ ತಿಳಿ ಮತ್ತು ದಟ್ಟ ನೀಲಿ ವರ್ಣಗಳ ಬಳಕೆಯನ್ನು ಮಾಡುವುದರ ಮೂಲಕ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ವರ್ಣಚಿತ್ರಗಳು



ಚಿತ್ರ-೦೧

ಪ್ಯಾರಡಾಕ್ಸ್ ಸರಣಿಯ ಕಲಾಕೃತಿಗಳು

ವರ್ಣಚಿತ್ರಗಳು



ಚಿತ್ರ-೦೨

ಪ್ಯಾರಡಕ್ಸ್ ಸರಣಿಯ ಕಲಾಕೃತಿಗಳು

೩.೨.೭. ಪಿನ್ & ಬೋಲ್ಡ್ ಸರಣಿ ಚಿತ್ರಗಳು

ಚಿತ್ರ–೦೧.

ಈ ಕಲಾಕೃತಿಯ ನೋಡಿದಾಕ್ಷಣ ಒಂದು ಬಗೆಯ ಸರ್‍ರಿಯಾಲಿಸ್ಟಿಕ್ ಅನುಭವ ಆಗುತ್ತದೆ. ಕನಸಿನಾಚೆಗೂ ಇರುವ ಬಗೆಗಳು ನಮ್ಮ ಮುಂದೆ ಇಟ್ಟಂತೆ ಕಾಣುತ್ತೇವೆ. ಕಲಾವಿದರಾದ ಸಿ. ಚಂದ್ರಶೇಖರ ಅವರು ಪಿನ್ ಆ್ಯಂಡ್ ಪೋಲ್ಡ್ ಸಿರೀಸ್ ಸರಣಿಯ ಕಲಾಕೃತಿಯನ್ನು ತೈಲವರ್ಣ ಮಾಧ್ಯಮದಲ್ಲಿ ೧೯೬೫ರ ಕಾಲಘಟ್ಟದಲ್ಲಿ ರಚಿಸಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಇವರು ರಚಿಸಿರುವ ಅನೇಕ ಸರಣಿ ಕಲಾಕೃತಿಗಳಲ್ಲಿ ಪಿನ್ ಆ್ಯಂಡ್ ಪೋಲ್ಡ್ ಸೀರಿಸ್ ಕಲಾಕೃತಿಯ ಪ್ರಸಿದ್ಧವಾದ ಕಲಾಸರಣಿಗಳನ್ನು ೧೯೬೫ರಲ್ಲಿ ರಚಿಸಿದ ತೈಲವರ್ಣದ ಕಲಾಕೃತಿ ಇದಾಗಿದ್ದು ಅವರ ವಿವಿಧ ವರ್ಣ ಮಾಧ್ಯಮದ ಕಲಾಕೃತಿಯಲ್ಲಿ ಈ ಸರಣಿಯ ಕಲಾಕೃತಿಯು ವಿಭಿನ್ನ ನೆಲೆಯಲ್ಲೆ ನಿಲ್ಲುವುದು.

ಚಿತ್ರ–೦೧.

ಕಲಾವಿದರಾದ ಸಿ. ಚಂದ್ರಶೇಖರ ಅವರು ತಳ ಸಮುದಾಯದ ಬದುಕಿನ ವಿವಿಧ ಆಯಾಮಗಳನ್ನು ಹತ್ತಿರದಿಂದಲೇ ಕಂಡು ಅದರ ಬಗೆಗೆ ಆಳವಾದ ಅಧ್ಯಯನವನ್ನು ನಡೆಸಿರುವರು. ತಳಸಮುದಾಯದ ಬದುಕು ಮತ್ತು ಹರಿದು ಹಂಚಿಹೋದ ಸಮಾಜವನ್ನು ಉತ್ತಮ ಸಮಾಜವಾಗಿ ಪರಿವರ್ತಿಸಿ. ಅದನ್ನು ಹೊಲಿಗೆಯ ಮೂಲಕ ಸರಿಪಡಿಸಿ. ಸ್ವಾಸ್ಥ ಸಮಾಜದ ಪರಿಕಲ್ಪನೆಯನ್ನು ತಮ್ಮೀ ಸರಣಿಯ ಕಲಾಕೃತಿಗಳ ಮೂಲಕ ಸೆರೆಹಿಡಿಯುವ ಪ್ರಯತ್ನವನ್ನು ಕಲಾವಿದರು ಮಾಡಿರುವುದನ್ನು ಗಮನಿಸಲೇಬೇಕಾಗುವುದು. ಇವರು ರಚಿಸಿರುವ ಈ ಕಲಾಕೃತಿಯಲ್ಲಿ ಸೂಜಿ ಮತ್ತು ದಾರ ಬಟ್ಟೆಗಳೇ ಆಕೃತಿಗಳು. ನಾಲ್ಕು ದೊಡ್ಡ ಆಕಾರದ ಒಟ್ಟು ಸ್ಥಳಾವಕಾಶದ ಮೇಲ್ವರ್ಗದಿಂದ ಕೆಳ ಸ್ಥಳಾವಕಾಶವನ್ನು ಭೇದಿಸಿಕೊಂಡು ಸಾಗಿದಂತೆ ಗುಂಡುಸೂಜಿಗಳನ್ನು ಚಿತ್ರಿಸಲಾಗಿದೆ. ನಾಲ್ಕು ದೊಡ್ಡ ಗುಂಡು ಸೂಜಿಗಳಲ್ಲಿ ಎಲ್ಲವೂ ಸ್ಪಷ್ಟವಾಗಿದ್ದು ಎಡ ಪಾರ್ಶ್ವದಿಂದ ಎರಡನೆಯ ತಿಳಿನೀಲಿ ವರ್ಣದ ಸೂಜಿಯು ಸಧೃಡವಾಗಿ ಅಂಕುಡೊಂಕಿಲ್ಲದೆ ನೇರವಾಗಿ ತಿಳಿ ದಟ್ಟವರ್ಣದ ನಾಶಿ ವರ್ಣದ ವಸ್ತ್ರವನ್ನು ನಾಲ್ಕು ಹಂತಗಳಲ್ಲಿ ಭೇದಿಸಿಕೊಂಡು ಕೆಳಭಾಗದ ಕಟ್ಟಿಗೆಯ ಪೀಠವನ್ನು ಭೇದಿಸಿಕೊಂಡು ನಿಂತಂತೆ ತೋರುವುದು. ಕೆಳಗಿನ ಪೀಠವು ಓಲಂಪಿಕ್ ಸ್ಪರ್ಧೆಯಲ್ಲಿ ವಿಜಯಿಯಾದ ಸ್ಪರ್ಧಿಗಳನ್ನು ನಿಲ್ಲಿಸಿ ಪದಕ ತೊಡಿಸುವ ಪೀಠದಂತಿದೆ. ಇಲ್ಲಿ ನಾಲ್ಕು ಸೂಜಿಯು ಭೇದಗೊಂಡ ಆಕೃತಿಗಳು ಮಾನವಾಕೃತಿಗಳಂತೆ ಸೂಕ್ಷ್ಮವಾಗಿ ಕಾಣುತ್ತಿದ್ದು, ಇದರಲ್ಲಿ ತಿಳಿನೀಲಿ, ನಾಶಿ ಕಡುಕೆಂಪು ಮತ್ತು ದಟ್ಟ ನೀಲಿಯ ಆಕೃತಿಗಳು ಪಟ್ಟಿಕೆಯ ಕೃತಿಯರಾಗಿ ಸಂಯೋಜನೆಗೊಂಡಿವೆ. ಇವುಗಳ ಸೂಜಿಯಗುಂಡು ಮಾನವನ ತಲೆಯಾಕೃತಿಗಳಂತೆ

ಸಂಯೋಜನೆಯಾಗಿದೆ. ಬಲ ಬದಿಯ ಪಾರ್ಶ್ವದ ದಟ್ಟ ನೀಲಿಯ ಆಕೃತಿಯಲ್ಲಿ ಅಡ್ಡವಾಗಿ ತ್ರಿವರ್ಣ ಧ್ವಜದಂತೆ ಇದು ಭಾರತೀಯತೆಯನ್ನು ಪ್ರತಿಬಿಂಬಿಸುವಂತಿದೆ. ಹಿನ್ನೆಲೆಯ ವೇದಿಕೆಯಲ್ಲಿ ತಿಳಿ ವರ್ಣದ ವಸ್ತ್ರವೊಂದಕ್ಕೆ ಗುಂಡುಪಿನ್‌ಗಳಿಂದ ಸ್ಟಿಚ್ ಮಾಡಿರುವಂತೆ ಚಿತ್ರಿಸಲಾಗಿದೆ. ಇದರ ಹಿನ್ನೆಲೆಯಲ್ಲಿ ಕೇಸರಿ, ನಶಿಯ ಮಿಶ್ರಣದ ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜನೆಯಾಇಗದೆ. ಬಲಪಾರ್ಶ್ವದ ಪಟ್ಟಿಕೆಯ ಹಿನ್ನೆಲೆಯಲ್ಲಿ ದಟ್ಟವರ್ಣವನ್ನು ಲೇಪಿಸಿ ಪೂರ್ಣಗೊಳಿಸಲಾಗಿದೆ. ಕೆಳಬದಿಯಲ್ಲಿ ಹಸಿರುವರ್ಣವನ್ನು ಅಗತ್ಯಕ್ಕೆ ತಕ್ಕದಾಗಿ ಬಳಕೆ ಮಾಡಲಾಗಿದ್ದು, ಇಲ್ಲಿಯ ಎಲ್ಲಾ ಆಕೃತಿಗಳಿಗೆ ಹೊಲಿಗೆಗಳನ್ನು ಹಾಕುವುದರ ಮೂಲಕ ಒಂದಕ್ಕೊಂದು ಸಂಬಂಧವನ್ನು ಬೆಸೆಯುವಂತೆ ಮಾಡಲಾಗಿದೆ.

ಚಿತ್ರ-೦೨.

ಪಿನ್ ಆ್ಯಂಡ್ ಪೋಲ್ಡ್ ಸರಣಿಯ ಕಲಾಕೃತಿಗಳಲ್ಲಿ ಇದು ಒಂದು ಉತ್ತಮ ಕಲಾಕೃತಿಯಾಗಿದ್ದು, ಕಲಾವಿದರಾದ ಸಿ. ಚಂದ್ರಶೇಖರ ಅವರು ಆಯತಾಕಾರದ ಸ್ಥಳಾವಕಾಶದಲ್ಲಿ ದಿನನಿತ್ಯದ ಮನೆ ಬಳಕೆಯ ವಸ್ತುಗಳನ್ನು ತಮ್ಮ ಕಲಾಕೃತಿಯ ಮೂಲ ಆಕೃತಿಗಳನ್ನಾಗಿ ಒಟ್ಟು ಸ್ಥಳಾವಕಾಶಕ್ಕೆ ತಕ್ಕಂತೆ ಸಂಯೋಜಿಸಿ ಕೊಂಡಿರುವುದನ್ನು ಕಾಣಬಹುದಾಗಿದೆ. ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿರುವ ಈ ಕಲಾಕೃತಿಯಲ್ಲಿ ಸಮಾಜದ ತಳಸಮುದಾಯದ ಬದುಕಿನ ವಿವಿಧ ಆಯಾಮಗಳು ಬಳಕೆಯ ವಸ್ತುಗಳನ್ನೇ ಸಾಂಕೇತಿಕವಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ತಳ ಸಮುದಾಯದ ಸ್ಥಿತಿಗತಿಗಳನ್ನು ಅವರ ಬಾಂಧವ್ಯತೆಯನ್ನು ಆ ಸಮುದಾಯವನ್ನು ಉತ್ತಮ ಸಮಾಜದೆಡೆ ಸಮಾಜದ ಮುಖ್ಯವಾಹಿನಿಗೆ ಕೊಂಡೊಯ್ಯುವ ಪ್ರಯತ್ನವಾಗಿ ಕಲಾವಿದರು ಸೂಜಿದಾರ, ಹೊಲಿಗಂಬಂತಹ ಅಸ್ತ್ರವನ್ನು ಬಳಸಿರುವುದು ಕಂಡುಬರುತ್ತದೆ.

ಸಾಮಾನ್ಯ ವರ್ಗಕ್ಕೆ ದಿನನಿತ್ಯ ಅಗತ್ಯವಾಗಿ ಬೇಕಾಗಿರುವ ವಸ್ತುಗಳಾಗಿದ್ದು, ಮಾನ ಮಾರ್ಯದೆಯನ್ನು ಕಾಪಾಡುವ ಬಟ್ಟೆಗಳನ್ನು ಸಂರಕ್ಷಿಸುವ, ಹೊಲಿಗೆಯ ಮೂಲಕ ತೇಪೆ ಹಾಕಿ ತಮ್ಮ ತೊಡುಗೆಗಳನ್ನು ಕಾಪಾಡುವ ಈ ಸೂಜಿದಾರಗಳು ಕಲಾಕೃತಿಯ ಮೂಲ ವಸ್ತುಕೃತಿಗಳಾಗಿವೆ. ಒಟ್ಟು ಸ್ಥಳಾವಕಾಶದ ಮಧ್ಯಭಾಗದಲ್ಲಿ ದೊಡ್ಡದಾದ ತಿಳಿ ಜಾಂಬಳಿ ವರ್ಣದ ಗುಂಡು ಸೂಜಿಯನ್ನು ಮೇಲಬದಿಯಲ್ಲಿರುವ ತಿಳಿವರ್ಣದ ಆರು ಮಡಿಕೆಯ ಕಾಗದದ ಹಾಳೆಯನ್ನು ಕೆಳಮುಖವಾಗಿ ಛೇದಿಸಿಕೊಂಡು ಬಂದು ಕೆಳಬದಿಯ ಹಿನ್ನೆಲೆಯ ಬಟ್ಟೆಯ ಎರಡು ಹಂತದಲ್ಲಿ ಛೇದಿಸಿರುವುದನ್ನು ಕಾಣಬಹುದು. ಇದರ ಹಿಂಬದಿಯಲ್ಲಿ ಕಡುಗೆಂಪು ವರ್ಣದ ನೆರಳನ್ನು ಚಿತ್ರಿಸಿದ್ದು, ಬೆಳಕಿನ ಪ್ರಖರತೆಯನ್ನು ವಸ್ತುಗಳ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ. ಇದರ ಕೆಳಬದಿ ಬಲ ಪಾರ್ಶ್ವದಲ್ಲಿ ಸಣ್ಣದಾದ ಗುಂಡುಸೂಜಿಯ ಆಯತಾಕಾರದ ಹಾಳೆಯೊಂದರಿಂದ ಮೇಲ್ಮುಖವಾಗಿ ಛೇದಿಸಿ

ಎಡ ಪಾರ್ಶ್ವಕ್ಕೆ ಚಲಿಸಿರುವಂತೆ ಚಿತ್ರಿಸಿದ್ದು ಇದಕ್ಕೆ ನೆರಳು ಬೆಳಕಿನ ವೈವಿಧ್ಯತೆಯನ್ನು ತೋರಿಸಲಾಗಿದೆ. ಉಳಿದಂತೆ ಕಡುಗೆಂಪು, ತಿಳಿ, ದಟ್ಟವರ್ಣಗಳನ್ನು ವಸ್ತುಗಳ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡ ಹಿನ್ನೆಲೆಯ ಸ್ಥಳಾವಕಾಶವನ್ನು ವಸ್ತು ವಿಷಯಕ್ಕೆ ಪೂರಕವಾಗಿ ಚಿತ್ರಿಸಿದ್ದು, ಅದರ ಎಡ ಪಾರ್ಶ್ವದಲ್ಲಿ ಮೂರು ಭಾಗಗಳಲ್ಲಿ ವಿವಿಧಾಕೃತಿಗಳಲ್ಲಿ ಬಟ್ಟೆಯ ಹರಿದಿದ್ದು, ತಿಳಿ, ದಟ್ಟ ಹಾಗೂ ಕೆಂಪು ವರ್ಣದ ಹೊಲಿಗೆಗಳನ್ನು ಹಾಕಿ ಸರಿಪಡಿಸುವ ಪ್ರಯತ್ನ ಮಾಡಲಾಗಿದೆ. ಮತ್ತು ಒಟ್ಟು ಸ್ಥಳಾವಕಾಶದ ಬಲ ಪಾರ್ಶ್ವದಲ್ಲಿ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಬಟ್ಟೆ ಹರಿದಿದ್ದು, ಕೆಂಪು ಮತ್ತು ಬಿಳಿ ಬಣ್ಣದ ದಾರದಿಂದ ಹೊಲಿಗೆ ಹಾಕಿ ಸರಿಪಡಿಸುವ ಪ್ರಯತ್ನಪಟ್ಟರು ಅದು ಸಂಪೂರ್ಣವಾಗಿ ಜೋಡಣೆಗೊಂಡಿಲ್ಲ.

ಪಿನ್ ಆ್ಯಂಡ್ ಪೋಲ್ಡ್ ಸರಣಿಯ ಕಲಾಕೃತಿಯಲ್ಲಿ ಹರಿದ ಸಮಾಜ, ಹಾಳಾದ ಸಮಾಜ ಹಾಗೂ ತಳಸಮುದಾಯದ ಸ್ಥಿತಿಗತಿಗಳನ್ನು ಉತ್ತಮ ಸಮಾಜದಂತೆ ಸರಿಪಡಿಸುವ ಕಾರ್ಯ ಎಷ್ಟೇ ನಡೆದರು ಮೇಲ್ನೋಟಕ್ಕೆ ಸರಿಯಾದಂತೆ ಕಂಡರು ಅದು ಹೊಲಿಗೆಯ ಮೂಲಕ ಬೆಸೆಯುವ ಪ್ರಯತ್ನ ಮಾಡಿದರು ಸರಿಹೊಂದುವುದಿಲ್ಲ. ತನ್ನ ಮೂಲತೆಯಡೆಗೆ ವಾಲುವದೆಂಬಂತೆ ಚಿತ್ರಿಸುವ ಪ್ರಯತ್ನ ಇದಾಗಿರಬಹುದೆಂದು ಅಭಿಪ್ರಾಯ.

ಚಿತ್ರ-೦೩.

ಕಲಾವಿದರಾದ ಸಿ. ಚಂದ್ರಶೇಖರ ಅವರು ಪಿನ್ ಆ್ಯಂಡ್ ಪೋಲ್ಡ್ ಸರಣಿ ಕಲಾಕೃತಿಗಳು ಅವರ ಕಲಾ ಬದುಕಿಗೆ ಹೊಸ ಆಯಾಮವನ್ನು ತಂದುಕೊಟ್ಟವು. ಅವರ ಪ್ರಸಿದ್ಧ ಚಿತ್ರಕಲಾಕೃತಿಗಳಗಳಲ್ಲಿ ಈ ಕಲಾಕೃತಿಯು ಒಂದಾಗಿದ್ದು, ಕಲಾಸಕ್ತರಿಗೆ ಹೊಸ ಆಲೋಚನಾ ಕ್ರಮವನ್ನು ತೆರೆದಿಡುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸ್ಥಿತಿಗತಿಯನ್ನು ಸಮಾಜದಲ್ಲಿನ ಏರಿಳಿತಗಳನ್ನು, ಸಮಾಜದಲ್ಲಿಯೇ ಇದ್ದುಕೊಂಡು ಸಮಾಜದ ಸಮಾನತೆಯಿಂದ ಸಿಗುವಂತ ಸೌಲಭ್ಯಗಳಿಂದ ಮುಖ್ಯವಾಹಿನಿಯಿಂದ ಹೊರಗಿರುವ ತಳಸಮುದಾಯದ ಮೇಲಿನ ಪ್ರೀತಿ ವಾತ್ಸಲ್ಯ ಅವರ ಬಗೆಗಿರುವ ಕಾಳಜಿಯನ್ನು ಈ ಚಿತ್ರ ಕೃತಿಗಳ ಮೂಲಕ ಸೆರೆಹಿಡಿಯುವ ಪ್ರಯತ್ನವನ್ನು ಕಲಾವಿದರು ತುಂಬಾ ನಾಜೂಕಾಗಿ ಮಾಡಿರುವುದನ್ನು ಕಾಣಬಹುದಾಗಿದೆ. ಇವರು ಆಯ್ದುಕೊಂಡ ಆಕೃತಿಗಳು. ವಿಷಯಕ್ಕೆ ಸ್ಪಷ್ಟತೆಯನ್ನು ನೀಡುತ್ತಿದ್ದು, ವಿಷಯ ವಸ್ತುಗಳ ಆಯ್ಕೆ, ಆಕೃತಿಗಳ ಜೋಡಣೆ ವರ್ಣಗಳ ಸಂಯೋಜನೆ, ರೇಖೆಗಳ ಬಳಕೆಯಲ್ಲಿ ಕಲಾವಿದರ ಪ್ರಬುದ್ಧತೆಯನ್ನು ಕಾಣಲಾಗುತ್ತದೆ.

ಕಲಾವಿದರು ಆಯಾತಾಕಾರದ ಸ್ಥಳಾವಕಾಶದಲ್ಲಿ ಪ್ರಮುಖವಾಗಿ ಮೂರು ಪಟ್ಟಿಕೆ ಆಕೃತಿಗಳನ್ನು ಹಿನ್ನೆಲೆಯಲ್ಲಿ ಸಂಯೋಜಿಸಿಕೊಳ್ಳಲಾಗಿದ್ದು, ಉಳಿದಂತೆ ಮಧ್ಯದ ಪಟ್ಟಿಕೆಯಲ್ಲಿ

ವರ್ಣಚಿತ್ರಗಳು




ಚಿತ್ರ-೦೧

& ಫೋಲ್ಡ್ ಸರಣಿಯ ಕಲಾಕೃತಿಗಳು



ವರ್ಣಚಿತ್ರಗಳು



ಚಿತ್ರ-೦೨

... &, ಪಿನಿಂಗ್ಸ್ ಸರಣಿಯ ಕಲಾಕೃತಿಗಳು

ವರ್ಣಚಿತ್ರಗಳು



ಚಿತ್ರ-೦೩

ನ್ & ಫೋಲ್ಡ್ ಸರಣಿಯ ಕಲಾಕೃತಿಗಳು

ಬಟಟೆಯಂತಹ ವಸ್ತು ಆಕೃತಿಯನ್ನು ಪಟ್ಟಿಕೆಯಾಕೃತಿಯಲ್ಲಿದ್ದು, ಇದು ಮೇಲ್ಬದಿಯ ಸ್ಥಳಾವಕಾಶದ ಕೆಳಗೆ ಸ್ವರ್ಣ ವರ್ಣದಲ್ಲಿ ಪ್ರಾರಂಭಗೊಂಡು ಕೆಳಬದಿಗೆ ಸಾಗಿದಂತೆಲ್ಲ ಕಡುಗೆಂಪು ವರ್ಣವನ್ನು ದಟ್ಟವಾಗಿ ಬಳಸಲಾಗಿದೆ. ಈ ಪಟ್ಟಿಕೆಯ ವಸ್ತುವಿಗೆ ತಿಳಿನೀಲಿಯಾಕಾರದ ಸದೃಢವಾದ ಗುಂಡು ಸೂಜಿಯೊಂದು ಬಲ ಪಾರ್ಶ್ವದ ಪಟ್ಟಿಕೆಯಿಂದ ಭೇದಗೊಂಡು ಮೇಲ್ಬದಿಯ ಪಟ್ಟಿಕೆಯಡೆ ಸಾಗಿರುವಂತೆ ಕಲಾವಿದರು ಚಿತ್ರಿಸಿದ್ದು, ಉಳಿದಂತೆ ಇದರ ಮಧ್ಯದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಬಟ್ಟೆಯು ಹರಿದಿದ್ದು, ಅದಕ್ಕೆ ದಟ್ಟ ಮತ್ತು ತಿಳಿವರ್ಣದ ದಾರಗಳಿಂದ ಹೊಲಿಗೆ ಹಾಕಲಾಗಿದೆ. ಅದು ಬೆಸುಗೆಗೊಂಡಿದೆ ಹೊರತು ಅದು ಸರಿಯಾಗಿರುವುದಿಲ್ಲ. ಅದರ ಮಧ್ಯದಲ್ಲಿ ದಟ್ಟವರ್ಣದ ಪ್ರಯೋಗವನ್ನು ಮಾಡಿದ್ದು ಹರಿದ ಹಾಳವನ್ನು ಕಾಣಲಾಗುವುದು. ಉಳಿದಂತೆ ಬಲ ಪಾರ್ಶ್ವದ ಪಟ್ಟಿಕೆಯು ನೀಲಿ, ದಟ್ಟ ನೀಲಿಯ ಜೀನ್ಸ್ ಬಟ್ಟೆಯಾಕೃತಿಯನ್ನು ಚಿತ್ರಿಸಿದ್ದು, ಅದು ಎರಡು ಹಂತಗಳಲ್ಲಿ ವಿ ಆಕೃತಿಯಲ್ಲಿ ಹರಿದಿದ್ದು ದಟ್ಟವರ್ಣದ ಹೊಲಿಗೆಯನ್ನು ಹಾಕಿರುವರೂ. ಒಟ್ಟು ಸ್ಥಳಾವಕಾಶದ ಮಧ್ಯದ ಪಟ್ಟಿಕೆಯು ದೊಡ್ಡದಾಗಿದ್ದು ಕಲಾಕೃತಿಯ ಕೇಂದ್ರಬಿಂದುವಿಗೆ ಪೂರಕವಾಗಿದೆ. ಇದು ತಿಳಿಹಸಿರು, ಗಿಳಿ ಹಸಿರು ವರ್ಣವನ್ನು ಲೇಪನಗೊಂಡಿದೆ. ಇದರ ಎಡ ಪಾರ್ಶ್ವದ ಮಧ್ಯದಲ್ಲಿ ಬಟ್ಟೆ ಹರಿದಿದ್ದು, ಅದಕ್ಕೆ ತಿಳಿ ನೀಲಿದಾರದಿಂದ ತೇಪೆ ಹಾಕಲಾಗಿದ್ದೆ. ಇದರ ಮಧ್ಯೆ ನೀಲಿ ವರ್ಣ ಲೇಪನಗಂಒಡಿದೆ. ಒಟ್ಟಾರೆಯಾಗಿ ಕಲಾಕೃತಿಯಲ್ಲಿ ಆಕೃತಿಗಳು ಅಗತ್ಯಕ್ಕೆ ತಕ್ಕಂತೆ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ.

೩.೨.೮. ಸ್ಟಿಲ್ & ಲೈಫ್ ಸರಣಿ ಚಿತ್ರಗಳು

ಚಿತ್ರ-೦೧.

ಕಲಾವಿದ ಸಿ. ಚಂದ್ರಶೇಖರ ಅವರು ೧೯೯೪ರಲ್ಲಿ ರಚಿಸಿದ ತೈಲಮಾಧ್ಯಮದ ಸ್ಟಿಲ್ ಅಂಡ್ ಲೈಫ್ ಸೀರಿಸ್ ಸರಣೀಯ ಕಲಾಕೃತಿಯು ಇದಾಗಿದ್ದು ಸ್ಟಿಚ್ ಸರಣೀ ಕಲಾಕೃತಿಯ ಸ್ಟೇ ಕಲಾವಲಯದಲ್ಲಿ ಪ್ರಸಿದ್ಧಿ ಪಡೆದ ಕಲಾಕೃತಿಯು ಈ ಸರಣಿಯದ್ದಾಗಿದೆ. ವಿಭಿನ್ನ ಕಲಾಶೈಲಿಯ ಮೂಲಕ ಅನೇಕ ಪ್ರಯೋಗಗಳ ಮೂಲಕ ಕ್ರೀಯಾಶೀಲರಾಗಿರುವ ಕಲಾವಿದರಾದ ಸಿ. ಚಂದ್ರಶೇಖರ ಅವರು ತಮ್ಮ ಇಲಿವಯಸ್ಸಿನಲ್ಲಿ ಅನೇಕ ಯುವ ಕಲಾವಿದರಿಂಗೆ ಮಾರ್ಗದರ್ಶಕರಾಗಿ ಸ್ಫೂರ್ತಿದಾಯಕರಾಗಿರುವರು.

ಸ್ಟಿಲ್ ಅಂಡ್ ಲೈಫ್ ಸೀರಿಸ್‌ನ ಈ ಕಲಾಕೃತಿಯನ್ನು ತೈಲಮಾಧ್ಯಮದ ಕ್ಯಾನ್ವಾಸನ ಮೇಲೆ ರಚಿಸಲಾಗಿದ್ದು, ಇದರಲ್ಲಿ ನೈಜ ವಸ್ತುಗಳನ್ನು, ನೈಜ ಘಟನೆಗಲಿಗೆ ಸಂಬಂಧಿಸಿದಂತೆ ಇಲ್ಲಿ ಸಂಯೋಜಿಸಿಕೊಳ್ಳಲಾಗಿದೆ. ಈ ಕಲಾಕೃತಿಯಲ್ಲಿಯ ಆಕೃತಿಗಳು ನಮ್ಮ ಬದುಕಿನ ಸಾಮಾನ್ಯ

ವಸ್ತುಗಳನ್ನೇ ಅಗತ್ಯಕ್ಕೆ ತಕ್ಕಂತೆ ಚಿತ್ರಿಸಲಾಗಿದೆ. ಒಟ್ಟು ಸ್ಥಳಾವಕಾಶದ ಕ್ಯಾನ್ವಾಸಿನ ಮೇಲೆ ಅಗತ್ಯಕ್ಕೆ ತಕ್ಕಂತೆ ಸುಮಾರು ಏಲು ಕಡುಗಪ್ಪು ವರ್ಣದ ಕಾಗೆಗಳನ್ನು ವಿವಿಧ ಭಂಗಿಗಳಲ್ಲಿ ಸಂಯೋಜಿಸಲಾಗಿದೆ. ಮೇಲ್ಪದಿಯ ಸ್ಥಳಾವಕಾಶದ ಹಳೆಯ ಅಲ್ಯುಮಿನಿಯಂ ಕಂತಾ ಕಿತ್ತಿದ ಪಾತ್ರೆಯ ತುದಿಯಲ್ಲಿ ಮೂರು ಕಾಗೆಗಳು ಕುಳಿತಿದ್ದು ಮೂರು ಕಾಗೆಗಳು ತ್ರಿಕೋನಾ ಕೃತಿಯಲ್ಲಿ ಎದುರುಬದುರಾಗಿದ್ದು, ಎರಡು ಕಾಗೆಗಳು ಅಂತರೆ ಎಡ ಪಾರ್ಶ್ವದ ಕಾಗೆಗಳು ಮೇಲ್ಮುಖವಾಗಿ ಕತ್ತನ್ನೆತ್ತಿ ತನ್ನ ಸಮೂಹವನ್ನೆಲ್ಲ ಕೂಗಿ ಕರೆಯುತ್ತಿದ್ದು, ಬಲಪಾರ್ಶ್ವದ ಕಾಗೆಯೊಂದು ತನ್ನ ಸಮೂಹಕ್ಕೆ ಅಗತ್ಯವಾದ ಆಹಾರಕ್ಕಾಗಿ ಇಣುಕಿ ನೋಡುತ್ತಿರುವಂತಿದೆ. ಉಳಿದಂತೆ ಒಟ್ಟು ಸ್ಥಳಾವಕಾಶದ ಕೆಳಬದಿಯಲ್ಲಿ ನಾಲ್ಕು ಕಾಗೆಗಳನ್ನು ನೋಡುತ್ತಿದ್ದು, ಇವು ಮೂರು ತ್ರಿಕೋನಾಕೃತಿಯಲ್ಲಿ ವಿವಿಧ ದಿಕ್ಕಿನಡೆ ಸಂಯೋಜನೆಗೊಂಡಿವೆ. ಇವು ಮೂರು ಕಾಗೆಗಳು ಹಳೆಯ ಕೆಂಪು ಮೇಲ್ಪದರವನ್ನು ಹೊಂದಿರುವ ಪುಸ್ತಕದ ಮೇಲೆ ಕುಳಿತಿರುವವು. ಮತ್ತಂದ್ದು ಕಾಗೆಯು ಬಲಪಾರ್ಶ್ವದ ಕೆಳಬದಿಯ ಸ್ಥಳಾವಕಾಶದಲ್ಲಿ ಎಡ ಪಾರ್ಶ್ವ ನೋಟನವನ್ನು ಬೀರುವಂತೆ ಚಿತ್ರಿಸಲಾಗಿದೆ.

ಒಟ್ಟು ಸ್ಥಳಾವಕಾಶದ ಮಧ್ಯದಲ್ಲಿ ದೊಡ್ಡದಾದ ಹಳೆಯ ಅಲ್ಲಲ್ಲಿ ಬಿರಿದು ತೇಪೆಗೊಂಡಿದ್ದ ತಿಳಿವರ್ಣದ ಅಲ್ಯುಮಿನಿಯಂ ಪಾತ್ರೆ ಅದರ ಕೆಳಬದಿಯಲ್ಲಿ ಹಳೆಯ ಕೆಂಪು ಮೇಲ್ಪದರನ್ನು ಕಡು ಹಸಿರು ವರ್ಣದ ರಕ್ಷಾಪುಟವನ್ನು ಹೊಂದಿರುವ ಪುಸ್ತಕವಿದ್ದು ಉಳಿದಂತೆ ಕಡುಗೆಂಪು, ಕಪ್ಪುವರ್ಣದ ಜಗಲಿಯಂತೆ ಕಟ್ಟೆಯು ನಿಸರ್ಗದತ್ತವಾಗಿದೆ. ಉಳಿದಂತೆಲ್ಲ. ಎಡಪಾರ್ಶ್ವದಲ್ಲಿ ಭೇಧಿಸಿದಂತೆ ಹಸಿರು ಬೆಟ್ಟ, ಬಲಪಾರ್ಶ್ವದಲ್ಲಿ ಕೆಂಪು, ತಿಳಿವರ್ಣದ ಬೆಟ್ಟ ಹಿನ್ನೆಲೆಯಲ್ಲಿ ತಿಳಿ ಹಳದಿ, ಕೆಂಪು, ಹಸಿರುಗಳ ಅಗತ್ಯಕ್ಕನುಗುಣವಾಗಿ ವಿಶಾಲವಾದ ಆಕಾಶವನ್ನು ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಈ ಕಲಾಕೃತಿಯಲ್ಲಿ ನಾವು ಗಮನಿಸಬಹುದಾದ ಅಂಶವೆಂದರೆ ತಳಸಮುದಾಯದ ಮೀಸಲಾತಿಯನ್ನು ಪ್ರತಿಂಬಿಸುವಂತಿದ್ದು, ಶೈಕ್ಷಣಿಕ ಮೀಸಲಾತಿ, ಉದ್ಯೋಗ ಮೀಸಲಾತಿಯನ್ನು ಆಯಾ ಸಾಂಕೇತಿಕ ವಸ್ತುಗಳನ್ನು ಬಳಸಿ ಚಿತ್ರಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಚಿತ್ರ–೦೨.


ಕಲಾವಿದರಾದ ಸಿ. ಚಂದ್ರಶೇಖರ ಅವರು ತಳಸಮುದಾಯದ ನೋವು ನಲಿವುಗಳನ್ನು ತುಂಬಾ ಹತ್ತಿರದಿಂದ ನೋಡಿ ಅನುಭವಿಸಿರುವರು. ಹಾಗಾಗಿ ಅವರು ಯಾವಾಗಲೂ ತಳಸಮುದಾಯದ ಬಗ್ಗೆ ವಿಶೇಷ ಕಾಳಜಿಯಿಂದ ದೃಶ್ಯಮಾಧ್ಯಮದ ಮೂಲಕ ವಿವರಿಸುವ ಪ್ರಯತ್ನವಾಗಿದೆ. ಸ್ಟಿಲ್ ಅಂಡ್ ಲೈಫ್ ಸೀರಿಸ್ ಸರಣಿ ಕಲಾಕೃತಿಗಳು ಅವರ ಆಲೋಚನಾ ಕ್ರಮವನ್ನು ವಿಭಿನ್ನ ನೆಲೆಯಲ್ಲಿ ಯೋಚಿಸುವಂತೆ ಮಾಡಿದೆ. ಅವರ ಹಿಂದಿನ ಅನೇಕ ಸರಣಿ

ಕಲಾಕೃತಿಗಳು ಕಲಾವಲಯದಲ್ಲಿ ಗಟ್ಟಿಗೊಳ್ಳುವಂತೆ ಮಾಡಿವೆ. ಸರಣೀ ಕಲಾಕೃತಿಗಳು ಮೀಸಲಾತಿಯನ್ನು ಪ್ರತಿಬಿಂಬಿಸುವಂತಹ ವಿಷಯ ವಸ್ತುಗಳು ಸಂಯೋಜನೆಗೊಂಡಿವೆ. ವಿಷಯಾಧಾರಿತ ಈ ಕಲಾಕೃತಿಯಲ್ಲಿ ನಮ್ಮದಿನ ನಿತ್ಯದ ಸಾಮಾನ್ಯ ವಿಷಯುಗಳೇ ಕಲಾಕೃತಿಯ ಪ್ರಮುಖ ಆಕೃತಿಗಳಾಗಿ ಸಂಯೋಜನೆಗೊಂಡಿವೆ. ಈ ಕಲಾಕೃತಿಯನ್ನು ೧೯೯೪ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ಕ್ಯಾನ್ವಾಸ್‌ನ ಮೇಲೆ ಚಿತ್ರಿಸಲಾಗಿದೆ.

ಒಟ್ಟು ಸ್ಥಳಾವಕಾಶಕ್ಕೆ ತಕ್ಕಂತೆ ವಸ್ತುಗಳನ್ನು ಸಾಂಕೇತಿಕವಾಗಿ ಸಂಯೋಜಿಸಿಕೊಳ್ಳಲಾಗಿದೆ. ಕ್ಯಾನ್ವಾಸಿನ್ ಮಧ್ಯಭಾಗದಲ್ಲಿ ಕೆಳಬದಿಯ ಸ್ಥಳಾವಕಾಶದಿದಂ ಮೇಲ್ಬದಿಯವರೆಗೆ ಆವರಿಸಿರುವಂತೆ ಸಂಯೋಜಿಸಲಾಗಿದೆ. ಇದರಲ್ಲಿ ಐದು ಕಾಗೆಗಳನ್ನು ವಿವಿಧ ಆಕೃತಿ, ಆಯಾಮಗಳಲ್ಲಿ ಚಿತ್ರಿಸಲಾಗಿದೆ. ಮೇಲ್ಬದಿಯ ಎಡ ಪಾರ್ಶ್ವದ ಕಾಗೆಯೊಂದು ಆಹಾರದ ನಿರೀಕ್ಷೆಯಲ್ಲಿ ಹಳೆಯ ಅಲ್ಯುಮಿನಿಯಂ ಪಾತ್ರೆಯ ಅರಿದ ಕಂಠದ ಮೇಲೆ ಕುಳಿತಿದ್ದು. ಅದರ ಎದುರುಗಡೆಯ ಕೆಳಬದಿಯಲ್ಲಿ ಕೆಂಪು ವರ್ಣದ ರಕ್ಷಾಪುಟದ ಗ್ರಂಥದ ಎಡಪಾರ್ಶ್ವದ ಅಂಚಿನ ಮೇಲೆ ಕುಳಿತು ಹಿಂಬದಿಯ ಎಡಪಾರ್ಶ್ವಕ್ಕೆ ತಿರುಗಿ ತನ್ನ ಸಮೂಹವನ್ನು ಕರೆದು ಅವುಗಳ ಬರುವಿಕೆಯ ನಿರೀಕ್ಷಯಲ್ಲಿರುವಂತೆ ಕಾಣುತ್ತಿದ್ದು. ಇದರ ಹಿಂಬದಿಯಲ್ಲಿ ದಟ್ಟವರ್ಣದ ಸ್ಥಳಾವಕಾಶವಿದ್ದು. ಈ ಕಾಗೆಯಾಕೃತಿಗೆ ಅಲ್ಲಲ್ಲಿ ತಿಳಿವರ್ಣವನ್ನು ಲೇಪಿಸಿದ್ದು, ಅದರ ಕಣ್ಣುಗಳಿಗೆ ಶುಭ್ರವರ್ಣ ಬಳಕೆಯಾಗಿರುವುದರಿಂದ ಭಾವನಾತ್ಮಕ ಸಂಬಂಧವನ್ನು ತೋರ್ಪಡಿಸಿದಂತಿದೆ. ಇದರ ಕೆಳಬದಿಯ ತಿಳಿನೀಲಿ ವರ್ಣದ ರಕ್ಷಾಪುಟವನ್ನು ಹೊಂದಿರುವ ಅರ್ಧ ತೆಗೆದ ಗ್ರಂಥದ ಮೇಲೆ ಬಲಪಾರ್ಶ್ವಕ್ಕೆ ಎಡಪಾರ್ಶ್ವಾಕೃತಿಯ ಕಾಗೆಯು ಎಡ ಪಾರ್ಶ್ವದ ಸ್ಥಳಾವಕಾಶದ ಹಿನ್ನೆಲೆಗೆ ದಿಟ್ಟಿಸಿ ನೋಡುತ್ತಿದೆ. ಅದರ ಹಿನ್ನೆಲೆಯ ಸ್ಥಳಾವಕಾಸದ ಮೈಲುಗಲ್ಲಿನ ಮೇಲೆ ಕುಳಿತಿದ್ದು ಚಿಕ್ಕಾಕೃತಿಯಲ್ಲಿ ಗೋಚರಿಸುತ್ತಿದೆ. ಈ ಕಲಾಕೃತಿಯ ಎಡ ಮತ್ತು ಬಲದ ಮಧ್ಯದ ಸ್ಥಳಾವಕಾಶದಲ್ಲಿ(ಅಳತೆ) ಮೈಲುಗಲ್ಲುಗಳಿದ್ದು ಅವುಗಳ ಮೇಲೆ ಕಾಗೆಗಳು ಕುಳಿತಿರುವಂತೆ ಚಿತ್ರಿಸಲಾಗಿದೆ.

ಕೆಳಬದಿಯಲ್ಲಿ ತಿಳಿವರ್ಣದ ಪೆಟ್ಟಿಗೆ ಇದ್ದು ಅದರ ಮೇಲೆ ತಿಳಿವರ್ಣ(ನೀಲಿ)ದ ದೊಡ್ಡ ಪುಸ್ತಕವು ತೆರೆದುಕೊಂಡು ಎಡ ಪಾರ್ಶ್ವದ ಕೆಳಬದಿಯನ್ನು ಭೇದಿಸಿದ್ದು ಅದರಲ್ಲಿಯ ಪುಟಗಳಲ್ಲಿ ಆದಿಮಾನವರ ಚಿತ್ರಗಳನ್ನೊಲ್ಲುವ ಆಕೃತಿಗಳು ಗೋಚರಿಸುತ್ತವೆ. ಅದರ ಮೇಲೆ ಕೆಂಪು ವರ್ಣದ (ಲೈಫ್) ಬರವಣಿಗೆಯ ಪುಸ್ತಕ ಅದರ ಮೇಲೆ ಹಲೆಯ ಅಲ್ಯುಮಿನಿಯಂ ಪಾತ್ರೆ ಅದರ ಮಧ್ಯದಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಾಳೆಯ ಸುರುಳಿಯೊಂದು ಕೆಂಪು ರಿಬ್ಬನದಿದಂ ಅಲಂಕಾರಿಕವಾಗಿ ಕಟ್ಟಿದ್ದು. ಈ ಎಲ್ಲಾ ಆಕೃತಿಯ ಹಿನ್ನೆಲೆಯಲ್ಲಿ ಭೂದೃಶ್ಯವನ್ನು ಹಸಿರು, ನೀಲಿ, ಹಳದಿ, ವರ್ಣಗಳ ಬಳಕೆಯೊಂದಿಗೆ ಪೂರ್ಣಗೊಳಿಸಲಾಗಿದೆ.

ವರ್ಣಚಿತ್ರಗಳು



ಚಿತ್ರ-೦೧

ಸ್ಟಿಲ್ ಅಂಡ್ ಲೈಫ್ ಸರಣಿಯ ಕಲಾಕೃತಿಗಳು



ವರ್ಣಚಿತ್ರಗಳು



ಚಿತ್ರ-೦೨

ಸ್ಟಿಲ್ ಅಂಡ್ ಲೈಫ್ ಸರಣಿಯ ಕಲಾಕೃತಿಗಳು

ವರ್ಣಚಿತ್ರಗಳು



ಚಿತ್ರ-೦೨

ಸ್ಟಿಲ್ ಅಂಡ್ ಲೈಫ್ ಸರಣಿಯ ಕಲಾಕೃತಿಗಳು

೩.೨.೯. ಸ್ವಿಚ್ ಸೂಜಿಯ ಚಿತ್ರ

ಬೌದ್ಧಧರ್ಮದಲ್ಲಿ ಮುಖ್ಯವಾಗಿರುವ ಚಿಂತನೆ ನಮ್ಮ ಬದುಕು ಸದಾ ಬದಲಾಗುತ್ತಾ ಹೋಗುತ್ತದೆ. ನಿಸರ್ಗದ ಜೊತೆಗೆ ಹಗಲು, ರಾತ್ರಿ, ವರ್ಷದ ಮೂರು ಕಾಲಗಳು ಮಾನವನ ಈ ಬದುಕಿಗೆ ಸ್ಥಿರತೆಯನ್ನು ಇಲ್ಲಾ ಯಾವುದು ಸತ್ಯ ಬ್ರ್ದಧರ್ಮದಲ್ಲಿ ನಿಸರ್ಗ ಒಂದೇ ಸತ್ಯ. ಬದುಕು ನಾವು ನಿಸರ್ಗವನು ಬದಲಾಯಿಸುವುದಕ್ಕೆ ಆಗುವುದಿಲ್ಲ ಅದು ಸ್ಥಿರ. ಅದು ಸತ್ಯ ನಮ್ಮ ಬದುಕನ್ನು ನಿಸರ್ಗದೊಂದಿಗೆ ಹೊಂದಿಕೊಳ್ಳುವುದಿಲ್ಲಾ. ಆದರೆ ನಾವು ಅದಕ್ಕೆ ಹೊಂದಿಕೊಳ್ಳಬೇಕು. ಸ್ವಿಚ್ ಸಿರೀಸ್‌ನ ಕಲಾಕೃತಿಗಳಲ್ಲಿ ಈ ಎಲ್ಲಾ ಅನುಭವಗಳು ಅಂಶಗಳು ಅಭಿವ್ಯಕ್ತವಾಗುತ್ತವೆ.

ಚಿತ್ರ–೦೧.

ಕಲಾವಿದರಾದ ಸಿ. ಚಂದ್ರಶೇಖರ ಅವರು ಹೊಲಿಗೆಯ ಸರಣಿ ಚಿತ್ರ ಕಲಾಕೃತಿಗಳನ್ನು ತಮ್ಮ ಕಲಾ ಬದುಕಿನಲ್ಲಿ ಮಹತ್ತರವಾದ ಬಬಳವಣಿಗೆಯನ್ನು ತಂದುಕೊಟ್ಟು ವಿಷಯಾಧಾರಿತ ವಸ್ತುವಾಗಿದೆ. ಅಸ್ತಿತ್ವ, ಪಿನ್ಸ್ ಆಂಡ್ ಪೋಲ್ಡ್, ಭಯ, ವಿಡಂಬನೆ, ಸ್ಥಿರ ಮತ್ತು ಜೀವನ ಎನ್ನುವ ಅನೇಕ ಸರಣಿ ಚಿತ್ರಗಳಲ್ಲಿ ಹೊಲಿಗೆಯ ಸರಣಿ ಚಿತ್ರಕಲಾ ವಿಷಯವು ತುಂಬಾ ಪ್ರಮುಖವಾದುದ್ದಾಗಿದೆ.

ಈ ಕಲಾಕೃತಿಯಲ್ಲಿ ಆಕೃತಿಯು ಸುಪ್ರಸಿದ್ಧ, ಪವಿತ್ರ ಅರಳಿ ಮರದ ಎಲೆಗೆ ತನ್ನದೇಯಾದ ವಿಶಿಷ್ಟತೆ ಇದೆ. ಐತಿಹಾಸಿಕ ಹಿನ್ನೆಲೆಯು ಇದೆ. ಶಾಂತಿ ಸಂಕೇತ, ಬುದ್ಧನ ಸಂಕೇತವಾಗಿ ಈ ಅರಲಿಮರದ ಎಲೆಯನ್ನು ಕಾಣುತ್ತೇವೆ. ಶಾಂತಿಧೂತಕವಾಗಿ ಈ ಎಲೆಯ ಬಳಕೆಯನ್ನು ಅನೇಕ ಸಂದರ್ಭದಲ್ಲಿ ನಾವು ಕಾಣಬಹುದು. ಈ ಕಲಾಕಕೃತಿಯಲ್ಲಿ ಕಲಾವಿದರು ಒಟ್ಟು ಸ್ಥಳಾವಕಾಶದ ಮಧ್ಯಭಾಗದಲ್ಲಿ ಒಣಗಿದ ಎರಡು ತುಂಡಾದ ಹರಳಿ ಮರದ ಎಲೆಯು ದಾರದಿಂದ ಹೊಲಿಗೆ ಹಾಕಿರುವಂತೆ ಚಿತ್ರಿಸಲಾಗಿದೆ. ಇದರಲ್ಲಿಯ ಮುಖ್ಯ ಸಂದೇಶವೆಂದರೆ ಶಾಂತಿಯುತವಾದ ಮುಗ್ಧ ಸಮಾಜವು ಅನ್ಯ ಕಾರಣದಿಂದಾಗಿ ಇಬ್ಬಾಗವಾಗುತ್ತಿದ್ದು ಅದನ್ನು ಬೆಸೆಯುವ ಕಾರ್ಯವನ್ನು ಕಲಾವಿದರು ದಾರದಿಂದ ಕಡುಗೆಂಪು ದಾರದಿಂದ ಬೆಸೆಯುವ ಕಾರ್ಯವನ್ನು ಮಾಡುತ್ತಿದ್ದಾರೆ. ಒಟ್ಟು ಸ್ಥಳಾವಕಾಶದ ಕೆಳಬದಿಯ ಮಧ್ಯಭಾಗದಿಂದ ಮೇಲ್ಬದಿಯ ಎಡ ಪಾರ್ಶ್ವದ ಮೂಲೆಯವರೆಗೆ ಮುಂಚಾಚಿಕೊಂಡಿದ್ದು, ಈ ಎಲೆಯು ಕಡುಗಪ್ಪು, ಕಡುಗೆಂಪು ವರ್ಣದ ಹಿನ್ನೆಲೆಯ ಸ್ಥಳಾವಕಾಶದ ಮುನ್ನೆಲೆಯಲ್ಲಿ ಈ ಎಲೆಯನ್ನು ಸಂಯೋಜಿಸಿಲಾಗಿದೆ.

ಈ ಎಲೆಯು ತನ್ನ ತಾಜಾತನವನ್ನು ಕಳೆದುಕೊಂಡು ಮರದಿಂದ ಬಿದ್ದು ಬಹಳ ದೀರ್ಘವಾಗಿರುವಂತೆ ಗೋಚರಿಸುತ್ತಿದೆ. ಎಲೆಯು ಎಂದು ಸಮನಾಂತರ ಭಾಗಗಳಾಗಿ ಸೀಳಿಕೊಂಡು

ಎರಡು ಭಾಗಗಳಾಗಿದ್ದು, ಎಡ ಪಾರ್ಶ್ವದ ಕೆಳಬದಿಯ ಎಲೆಯ ಅರ್ಧ ತುಂಡೊಂದು ಮುಂತುದಿಯಿಂದ ತುರಿಸಿಕೊಂಡಿದ್ದು, ಮೇಲ್ಬದಿಯ ತುಂಡಿರಿಸಿಕೊಂಡ ಎಲೆಯ ಭಾಗವು ವಿಶಾಲ ಸ್ಥಳಾವಕಾಶವದವರೆಗ ಸಂಯೋಜನೆಗೊಂಡಿದ್ದು ಅದರ ತೀಕ್ಷ್ಣವಾದ ಮುಂಭಾಗವು ಮೇಲ್ಭಾಗಕ್ಕೆ ಚಲಿಸಿರುವಂತೆ ಚಿತ್ರಿಸಲಾಗಿದೆ. ಇದರಲ್ಲಿ ಎರಡು ರಂಧ್ರಗಳು ರಚನೆಗೊಂಡಿರುವುದನ್ನು ಕಾಣಬಹುದಾಗಿದೆ. ಕೋಮಗಲಭೆ, ವಿವಿಧ ಅಯಾಮಗಳಿಂದಾಗಿ ಹಿಬ್ಬಾಗವಾಗುತ್ತಿರುವ ಶಾಂತಿಯುತ ಸಮಜವನ್ನು ಮರು ಸೃಷ್ಟಿಸುವಲ್ಲಿ ಕಲಾವಿದರು ಹೊಲಿಗೆಯ ಮೂಲಕ ಪ್ರಯತ್ನಿಸಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಸಿ. ಚಂದ್ರಶೇಖರ ಅವರ ಬಗ್ಗೆ ಎಂ.ಎಚ್.ಕೃಷ್ಣಯ್ಯ ಅವರ ಅಭಿಪ್ರಾಯ

* ಸಾಹಿತ್ಯ ಮತ್ತು ಕಲಾ ವಲಯಗಳಲ್ಲಿ ಸಂವಾದಕ್ಕೆ ತೊಡಗಿ ಏಕೈಕ ಮಾತುಗಾರ ಕಲಾವಿದ ಎಂದು ಸಿ.ಚಂದ್ರಶೇಖರ ಅವರನ್ನು ಅನಿಲಕುಮಾರ ಅವರು ಪರಿಯಿಸಿದರು.
* ಬದುಕು ಮತ್ತು ಕಲಾರಚನೆ ಎರಡರಲ್ಲೂ ವ್ಯಕ್ತಿ ಮತ್ತು ಸಮಾಜ ಎಂದು(*Indivisuval and the Socity*) ಬೇರ್ಪಡಿಸಲಾಗದಂತಹ ನಂಟು ಅವರದು. ಅವರ ಕಲೆಯಲ್ಲೂ ಅಭಿವ್ಯಕ್ತವಾಗುವುದನ್ನು ಕಾಣಬಹುದು.
* ಬೆಂಗಳೂರು ನಗರವಾದರು ಸಹ ಬಾಲ್ಯವನ್ನು ಕಳೆದ ಪರಿಸರ, ಗ್ರಾಮೀಣ ಪರಿಸರವಾಗಿತ್ತು.
* ಬಾಲ್ಯದಲ್ಲಿ ಹೇಗೊ ಎಂತೋ ಎರಡು ಆಸಕ್ತಿಗಳು ಇವರಲ್ಲಿ ಬಂತು.
* ಮುದ್ರಣಾಲಯ ಸಹಾಯಕರಾಗಿರುವ ಪ್ರಸಂಗ
* ಫೋಟೋಗ್ರಾಫಿಯಲ್ಲಿ ಸಹಾಯಕರಾಗಿರುವ ಪ್ರಸಂಗ ಈ ಎರಡು ಕ್ಷೇತ್ರಗಳ ಪ್ರಭಾವ ಅವರ ಚಿತ್ರಗಳಲ್ಲಿ ಆಗಿದೆ ಎನ್ನುವ ವಿಷಯ ಹೇಳುತ್ತದೆ. ಫೋಟೋಗ್ರಾಫಿ ವಿಷಯದಲ್ಲಿ ತುಂಬಾ ಕುತೂಹಲ ಇದೆ. ಅದರ ಸಾಧ್ಯತೆಗಳನ್ನು ಕಲೆಯಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಇತ್ತೀಚಿನ ರಚನೆಗಳನ್ನು ನೋಡಿದ ಸಂದರ್ಭದಲ್ಲಿ ತಿಳಿದುಬರುತ್ತದೆ. ಅವರ ಬದುಕಿನಲ್ಲಿ ಒಂದು ತಿರುವು ಅಂದರೆ ಕೇನ್ ಕಲಾಶಾಲೆಯನ್ನು ಸೇರಿದ್ದು ಬೇರೆಯಾವುದೆ ಶಾಲೆಯನ್ನು ಸೇರಿದ್ದರೆ ಈ ಬಗೆಯ ಒಂದು ಪ್ರಭಾವ ಪ್ರೇರಣೆ ಈ ವಾತಾವರಣ ಅವರಿಗೆ ಒದಗುತ್ತಿತ್ತೋ ಇಲ್ಲವೊ ಇದು ಅರಿಯದ ವಿಷಯ.

ಅವರ ಕಲಾರಚನೆಗಳ ಮೇಲೆ ಬಹಳ ಪ್ರಭಾವ ಅವರು ಶಾಂತಿನಿಕೇತನಕ್ಕೆ ಹೋದಾಗ ಅವರಿಗೆ ಸೋಮನಾಥ ಹೋರೆ ಅವರು ಮತ್ತು ಸನ್ನತ್‌ಕರ್ ಅವರು ಅಧ್ಯಾಪಕರು ಹಾಗೂ

ವರ್ಣಚಿತ್ರಗಳು





ಮೊಟ್ಟೆ ಸರಣಿಯ ಕಲಾಕೃತಿಗಳು

ವರ್ಣಚಿತ್ರಗಳು



"ಎಲ್ಫಿನ್‌ಸ್ಟನ್ಸ್" ಸರಣಿಯ ಕಲಾಕೃತಿ

ವರ್ಣಚಿತ್ರಗಳು



"ಎಗ್ಸಿಸ್ಟನ್ಸ್" ಸರಣಿಯ ಕಲಾಕೃತಿ

ಮಾರ್ಗದರ್ಶಕರಾಗಿದ್ದರು. ಅದರಲ್ಲಿ ಇವರು ಗ್ರಾಫಿಕ್ ಪರೋಕ್ಷ ಪ್ರಭಾವ ಬೀರಿವೆ. ಎಡ ಪಂಥೀಯ ದೃಷ್ಟಿಯಿರುವವರು ಸೋಮನಾಥ ಹೋರ್ ಒಬ್ಬ ವ್ಯಕ್ತಿ. ಒಬ್ಬ ಕಲಾವಿದ ಸಮಾಜವನ್ನು ತನ್ನ ಅನುಭವಕ್ಕೆ ಹೇಗೆ ತಂದುಕೊಳ್ಳಬೇಕು, ವ್ಯಕ್ತಿ ಪ್ರಾಧಾನ್ಯ ಚಿಂತನೆಯಿಂದ ಸಮಾಜಮುಖಿ ಚಿಂತನೆಯ ಕಡೆಗೆ ಸಿ. ಚಂದ್ರಶೇಖರ ತೊಡಗಿದರು. ಅದರಿಂದ ಅವರ ಕಲಾರಚನೆ ಕಡೆಗೆ ಒಂದು ಹೊಸ ಆಯಾಮ ದೊರಕಿತು. ಹೊಸ ಸಾಧ್ಯತೆಗಳನ್ನು ಹರಸುವ, ಹುಡುಕುವ, ಅನ್ವೇಷಿಸುವ ಒಂದು ಪ್ರವೃತ್ತಿ ಸ್ವಾಭಾವಿಕವಾಗಿ ಅವರ ಸ್ವಭಾವದಲ್ಲಿ ಸೇರಿಕೊಳ್ಳಲು ಸಾಧ್ಯವಾಗಿದೆ ಎಂದು ಅವರ ಕಲಾಕೃತಿಗಳಿಂದ ಕಂಡುಬರುತ್ತದೆ.

ಜನಸಾಮಾನ್ಯರು ರಜತ್ ಗೋಪುರದ ಕಲೆಯ ಪರಂಪರೆಯ ತಾವು ಬರೆದ ಎಲ್ಲಾ ಚಿತ್ರಗಳ ಪ್ರದರ್ಶನ ಆರ್. ಎಂ. ಹಡಪದರು ಗಾಂಧಿ ಬಜಾರದಲ್ಲಿ ಚಿತ್ರಗಳನ್ನು ಇಟ್ಟು ನೋಡಿ ಎಂದು ಜನಸಾಮಾನ್ಯರನ್ನು ಹುರಿದುಂಬಿಸಿದರು. ಪ್ರತಿ ಶುಕ್ರವಾರ ಇವತ್ತೇನು ಹೊಸ ಚಿತ್ರ ಇಟ್ಟಿದ್ದಾರೆ ಎಂದು ಜನ ಕಾಯುವುವರು. ಜನಸಾಮಾನ್ಯರ ನೋವು–ನಲಿವುಗಳನ್ನು, ಆಸೆ–ನಿರಾಸೆಗಳನ್ನು ವಾಸ್ತವ ಮತ್ತು ಕನಸುಗಳನ್ನು ನೋಡುತ್ತಾ, ನೋಡುತ್ತಾ ಇವುಗಳ ನಡುವೆಯೇ ಜೀವನ ಧಾರಣೆಯ ಅದಮ್ಯ ಬಯಕೆ ಆ ಬಯಕೆಯ ಆ ಸತ್ವಗಳನ್ನು ನನ್ನ ಕಲಾರಚನೆಗಳಲ್ಲಿ ಹೇಗೆ ತಂದುಕೊಳ್ಳಬಹುದು ಎಂಬ ಆಲೋಚನೆ ಶಾಂತಿನಿಕೇತನದ ಪ್ರಭಾವದಿಂದ ಸಾಧ್ಯವಾಯಿತು.

ಸಿ.ಚಂದ್ರಶೇಖರ ಕಲಾಜೀವನದಲ್ಲಿ ಇನ್ನೊಂದು ತಿರುವು ಬಹಳ ಮುಖ್ಯವಾದುದು. ಈ ಸಾಮರ್ಥ್ಯವನ್ನು ಶಕ್ತಿಯನ್ನು ಮತ್ತೆ ಅವರ ಚಿಂತನೆಗಳಿಗೆ ವಿಶಾಲವಾದ ಒಂದು ಭಿತ್ತಿಯನ್ನು ಒದಗಿಸಿದಂತಹ ಒಂದು ತಿರುವನ್ನು ಗೋಕಾಕ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಸಮುದಾಯದವರಲ್ಲೂ ಸಹ ಚಿತ್ತ ರಚನೆ ಸಾರ್ವಜನಿಕವಾಗಿ ಜನರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯವನ್ನು ಪ್ರಾರಂಭಿಸಿದರು. ಅಲ್ಲದೆ ಈ ಹೋರಾಟ ಇವರ ಮೇಲೆ ಬೀರಿದಂತಹ ಪ್ರಭಾವ ಬೇರೆ, ಇದಲ್ಲದೆ ಹೋರಾಟಗಳ ಜೊತೆಗೆ ಕಲಾವಿಮರ್ಶಕ ಸಾಮಾನ್ಯವಾಗಿ ಕಲಾವಿದರು ಅಕ್ಷರಗಳಿಂದ ದೂರವಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಜೊತೆ ಜೊತೆಗೆ ಕಲಾಕೃತಿಗಳ, ರಚನೆ ಹಾಗೂ ಆ ಕಲಾಕೃತಿಗಳ ಬಗ್ಗೆ ಅವರ ಅಭಿಪ್ರಾಯ ಸಾಮಾನ್ಯ ಕಲಾವಿದರಿಗಿಂತ ಸ್ವಲ್ಪ ಬೇರೆ ಯೋಚನೆ ಮಾಡುವುದು ಈ ಕಲಾವಿದರಲ್ಲಿ ಕಾಣಬಹುದು.

ಅಧ್ಯಾಯ : ನಾಲ್ಕು

ಸಿ. ಚಂದ್ರಶೇಖರ ಅವರ ಮುದ್ರಣ (ಗ್ರಾಫಿಕ್) ಚಿತ್ರಗಳು

ಅಧ್ಯಾಯ : ನಾಲ್ಕು

ಸಿ ಚಂದ್ರಶೇಖರ ಅವರ ಮುದ್ರಣ(ಗ್ರಾಫಿಕ್) ಚಿತ್ರಗಳು

ಮುದ್ರಣ ಕಲೆಗೆ ಆಂಗ್ಲಭಾಷೆಯಲ್ಲಿ "ಗ್ರಾಫಿಕ್" ಅಥವಾ "ಪ್ರಿಂಟ್ ಮೇಕಿಂಗ್" ಎಂದು ಕರೆಯಲಾಗುತ್ತದೆ. ಗ್ರಾಫಿಕ್ ಎಂಬ ಪದವು "ಗ್ರಾಫಿಯನ್" ಎಂಬ ಗ್ರೀಕ್ ಪದದಿಂದ ಬಂದಿದ್ದು, ಇದರ ಅರ್ಥ 'ಬರೆ' ಅಥವಾ 'ಚಿತ್ರಿಸು' ಎಂದಾಗುತ್ತದೆ.[೧] ಮುದ್ರಣ ಕಲೆ ತಾಂತ್ರಿಕ ಮಾಧ್ಯಮವೂ ಹೌದು. ತಾಂತ್ರಿಕ ಹಿನ್ನೆಲೆಯಲ್ಲೇ ಹೇಳುವುದಾದರೆ ಮುದ್ರಣ ಎಂದರೆ ರೇಖೆಗಳ ಮೂಲಕ ಬರೆದ ವಿನ್ಯಾಸದ ಪುನರುತ್ಪಾದನೆಯಾಗಿದೆ. ಮಾಧ್ಯಮವಾರು ವಿಂಗಡಿಸಿ ನೋಡಿದರೆ ಮುದ್ರಣ ಮಾಧ್ಯಮದಲ್ಲಿ 'ವಾಣಿಜ್ಯ ಮುದ್ರಣ' ಮತ್ತು 'ಮುದ್ರಣ ಕಲೆ' ಎಂದು ಎರಡು ರೀತಿಯಲ್ಲಿ ಗುರುತಿಸಬಹುದು. ವಾಣಿಜ್ಯ ಮುದ್ರಣಕ್ಕೂ ಮುದ್ರಣ ತಂತ್ರಗಳನ್ನು ಕಲೆಯ ಒಂದು ಮಾಧ್ಯಮವನ್ನಾಗಿ ಬಳಸಿಕೊಂಡು ಕೃತಿ ರಚಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಅನೇಕ ವರ್ಷಗಳಿಂದ ಸಾಕಷ್ಟು ಕಲಾವಿದರು ಮುದ್ರಣ ಕಲೆಯಲ್ಲಿ ಹಲವು ಬಗೆಯ ಪ್ರಯೋಗಗಳನ್ನು ಮಾಡುತ್ತ ಬಂದಿದ್ದಾರೆ. ಈ ಕಲೆಯಲ್ಲಿ ಸೌಂದರ್ಯದಷ್ಟೇ ಮಹತ್ವ ತಂತ್ರವಿಧಾನಕ್ಕೂ ನೀಡಲಾಗುತ್ತದೆ. ಛಾಯಾಚಿತ್ರ ಮುದ್ರಣ, ಅಮೋನಿಯಾ ಮುದ್ರಣ, ಬ್ರೋಮೈಡ್, ಝೆರಾಕ್ಸ್, ಮೋನೋಪ್ರಿಂಟ್‌ಗಳೊಂದಿಗೆ ಕಂಪ್ಯೂಟರ್ ಆರ್ಟ್ ಕೂಡ ಮುದ್ರಣ ಕಲೆಯ ವ್ಯಾಪ್ತಿಗೊಳಪಡುತ್ತವೆ.[೨]

ಮುದ್ರಣ ಕಲೆಯ ಸ್ವರೂಪ

ಮುದ್ರಣ ಕಲೆಯಲ್ಲಿ ೧. ಉಬ್ಬಚ್ಚು ಮುದ್ರಣ, ೨. ಇಂಟಾಗ್ಲಿಯೋ ಮುದ್ರಣ, ೩.

೨೧. ಡಾ. ಮಲ್ಲಿಕಾರ್ಜುನ ಪಿ. ಬಾಗೋಡಿ : ಲೇಖನಾವರ್ಣ. ಪು-೫೨
೨೨. ಅದೇ, ಪು-೫೨

ಲಿಥೋಗ್ರಫಿ ಮುದ್ರಣ, ೪. ಪರದೆ ಮುದ್ರಣ ಎಂಬ ನಾಲ್ಕು ಪ್ರಚಲಿತ ತಂತ್ರಗಳಿದ್ದು, ಈ ತಂತ್ರಗಳಲ್ಲಿ ಮತ್ತೆ ವಿಭಿನ್ನ ತಂತ್ರ ವಿಶೇಷತೆಗಳೂ ಇವೆ.[೩]

೧. ಉಬ್ಬಚ್ಚು ಮುದ್ರಣ

ಉಬ್ಬಚ್ಚು ಮುದ್ರಣವು ಉಳಿದೆಲ್ಲ ಮುದ್ರಣ ತಂತ್ರಗಳಿಗಿಂತ ಸರಳವಾದುದು. ಈ ತಂತ್ರ ವಿಧಾನದಲ್ಲಿ ಕಲಾವಿದನು ಸಮತಟ್ಟಾದ ಮರದ ಹಲಗೆಯಲ್ಲಿ ತನಗೆ ಬೇಕಾದ ಭಾಗಗಳನ್ನು ಕೆತ್ತಿ ತೆಗೆದು ಆ ಹಲಗೆಯ ಮೇಲೆ ರೋಲರ್‌ಗಳನ್ನು ಬಳಸಿಕೊಂಡು ತನಗೆ ಬೇಕಾದ ಶಾಯಿಯನ್ನು ಸವರಿ ಪರತಿಗಳನ್ನು ತೆಗೆಯುತ್ತಾನೆ. ಕೆತ್ತಿದ ಭಾಗದಲ್ಲಿ ಶಾಯಿಯ ಹತ್ತುವುದಿಲ್ಲ. ಬದಲಾಗಿ ಮುದ್ರಿತ ಪ್ರತಿಗಳಲ್ಲಿ ಖಾಲಿ ಅವಕಾಶವಾಗಿ ಬಿಳುಪಿನ ಭಾಗ ಕಂಡುಬರುತ್ತದೆ.[೪] ಹೀಗಾಗಿ ಚಿತ್ರಗಳಲ್ಲಿ ಕಪ್ಪು ಮತ್ತು ಬಿಳಿ ಬಣ್ಣಗಳ ಸಹಾಯದಿಂದ ಚಿತ್ರವು ಪೂರ್ಣಗೊಂಡು ನೋಡಲು ಚೆನ್ನಾಗಿ ಕಾಣುತ್ತದೆ. ಈ ಮುದ್ರಣ ತಂತ್ರದಲ್ಲಿ ಮರ ಮತ್ತು ರಬ್ಬರ ಹಾಳೆಗಳಲ್ಲದೇ ಪ್ಲಾಸ್ಟರ್ ಆಫ್ ಪ್ಯಾರಿಸ್, ಪ್ಲಾಸ್ಟಿಕ್, ಲೋಹದ ಹಾಳೆ, ಆಲೂಗಡ್ಡೆ, ಬಟ್ಟೆ ಹೀಗೆ ಅನೇಕ ತರಹದ ವಸ್ತುಗಳನ್ನು ಬಳಸಬಹುದು. ಆದರೆ ಇಂದು ಮರ ಮತ್ತು ರಬ್ಬರ ಹಾಳೆಗಳು ಹೆಚ್ಚಾಗಿ ಬಳಸಲ್ಪಡುತ್ತಿವೆ.[೫]

೨. ಇಂಟಾಗ್ಲಿಯೋ ಮುದ್ರಣ

ಲೋಹದ ಫಲಕದ ಮೇಲೆ ರೇಖೆಗಳನ್ನು ಕೆತ್ತು ಇಲ್ಲವೆ ಕೊರೆಯುವುದೇ ಈ ತಂತ್ರ ವಿಧಾನದ ವೈಶಿಷ್ಟ್ಯ. ಮೊದಲಿಗೆ ನಮಗೆ ಬೇಕಾದ ಆಕಾರದಲ್ಲಿ ಫಲಕವನ್ನು ತಯಾರಿಸಿಕೊಳ್ಳಬೇಕು. ನಂತರ ಫಲಕದ ಮೇಲೆ ಬಣ್ಣಗಳನ್ನು ಹಚ್ಚಿ; ನಂತರ ಬಣ್ಣಗಳು ಹೋಗದೇ ಇರುವಹಾಗೆ ನಿಧಾನವಾಗಿ ಒರೆಸಿದಾಗ ಕೊರೆದ ತಗ್ಗಿನಂತಹ ರೇಖೆಯಲ್ಲಿ ಮಾತ್ರ ಬಣ್ಣ ಉಳಿದುಕೊಂಡು ಮೇಲ್ಮೈಯು ಶುಭ್ರವಾಗುತ್ತದೆ.[೬] ನಂತರದಲ್ಲಿ ತೇವವಾದ ಮೃದು ಕಾಗದವನ್ನು ಫಲಕದ ಮೇಲಿಟ್ಟು ಹಾಳೆ ಮತ್ತು ಫಲಕ ಎರಡನ್ನೂ ಒಟ್ಟಿಗೆ ಎಚ್ಚಿಂಗ್ ಪ್ರೆಸ್‌ನಲ್ಲಿ ಹಾಯಿಸಲಾಗುತ್ತದೆ. ಎಚ್ಚಿಂಗ್ ಯಂತ್ರದಲ್ಲಿ ಮೇಲೆ ಕೆಳಗೆ ಎರಡೂ ಕಡೆಗಳಲ್ಲಿ ಇರುವ ಕಬ್ಬಿಣದ ರೋಲರ್‌ಗಳು ಬೀರುವ ಒತ್ತಡಕ್ಕೆ ಬಣ್ಣವು ಕಾಗದಕ್ಕೆ ವರ್ಗಾವಣೆಯಾಗಿ ಚಿತ್ರವು ನೋಡಲು ಸುಂದರವಾಗಿ ಕಂಡುಬರುವುದು. ಹೀಗೆ ನಮಗೆ ಬೇಕಾದಷ್ಟು ಪ್ರತಿಗಳನ್ನು ಈ ತಂತ್ರವಿಧಾನದ ಮೂಲಕ

---

೦೩. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ರೇಖಾವರ್ಣ. ಪು-೫೨

೦೪. ಅದೇ., ಪು-೫೨

೦೫. ಜಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ. ಪು-೧೨೫

೦೬. ಅದೇ.

ಪಡೆದುಕೊಳ್ಳಬಹುದು. ಇಂಟಾಗ್ಲಿಯೋ ಮುದ್ರಣದಲ್ಲಿ ೧. ಎನ್‌ಗ್ರೇವಿಂಗ್ ಮತ್ತು ೨. ಎಚ್ಚಿಂಗ್ ಎಂದು ಮತ್ತೆರಡು ತಂತ್ರ ವಿಶೇಷತೆಗಳಿವೆ.[೨೭]

೩. ಪರದೆ ಮುದ್ರಣ

ಪರದೆ ಮುದ್ರಣಕ್ಕೆ ಆಂಗ್ಲ ಭಾಷೆಯಲ್ಲಿ 'ಸೆರಿಗ್ರಫಿ' ಎಂದು ಕರೆಯಲಾಗುತ್ತದೆ. ವಾಣಿಜ್ಯಪರ ನೆಲೆಯಲ್ಲೇ ಕಾಣಿಸಿಕೊಂಡ ಈ ತಂತ್ರವಿಧಾನ ಕಲಾವಲಯದಲ್ಲೂ ಬಳಕೆಗೊಳ್ಳುತ್ತಿರುವುದನ್ನು ಕಾಣಬಹುದು. 'ಸೆರಿಗ್ರಫಿ' ಎಂಬ ಪದವನ್ನು 'ಕ್ಲಾರ್ ಝಿಗ್ರೋಪರ್' ಎಂಬುವವನು ಸೃಷ್ಟಿಸಿದ. ಬಿಂದುವನ್ನು ಹೊಂದಿದ ಸ್ಟೆನ್ಸಿಲ್‌ನ್ನು ಜಾಲರಿಯಿಂದ ರೇಷ್ಮೆ ಅಥವಾ ನೈಲಾನ್ ಬಟ್ಟೆಯ ಮೇಲೆ ಅಂಟಿಸಲಾಗುತ್ತದೆ. ಸ್ಟೆನ್ಸಿಲ್‌ನಲ್ಲಿ ತೆರಪಿರುವ ಜಾಘದ ಮೂಲಕ ಬಣ್ಣ ಹಾಯ್ದು ಕೆಳಗಿರುವ ಕಾಗದ ಅಥವಾ ಇನ್ನಾವುದೇ ಮೇಲ್ಮೈ ಮೇಲೆ ಅದು ಮುದ್ರಣವಾಗುತ್ತದೆ. ಬಣ್ಣವನ್ನು ಜಾಲರಿಯ ಮೂಲಕ ತಳ್ಳಲು ರಬ್ಬರ್‌ನಂತಹ ಚಪ್ಪಟೆಯಾಕಾರದ ಸ್ಕೀಜರ್‌ನ್ನು ಬಳಸಲಾಗುತ್ತದೆ.

ಪರದೆ ಮುದ್ರಣದಲ್ಲಿ ಮುಖ್ಯವಾಗಿ ೧. ನೇರ ವಿಧಾನ, ೨. ಕ್ರೋಮೋಲಿನ್ ವಿಧಾನ, ೩. ಫೈವ್ ಸ್ಟಾರ್ ವಿಧಾನ ಎಂಬ ಮೂರು ಪ್ರಕಾರದ ಮುದ್ರಣ ತಂತ್ರಗಳಿವೆ.

೧. ನೇರ ವಿಧಾನ : ಈ ಪ್ರಕ್ರಿಯೆ ಕತ್ತಲೆ ಕೋಣೆಯಲ್ಲಿಯೇ ನಡೆಯುವಂಥದ್ದು, (ಕೆಂಪು ಬಣ್ಣದ ಬಲ್ಬು ಇದ್ದರೆ ಒಳಿತು) ತಟ್ಟೆಯೊಂದರಲ್ಲಿ ೨೫ ಗ್ರಾಂನಷ್ಟು ಗೋಟಿಂಗ್ ಸಲೂಷನ್ ಮತ್ತು ೨.೫ ಗ್ರಾಂನಷ್ಟು ಅಮೋನಿಯಂ ಬೈಕ್ರೋಮೇಟ್ ಇಲ್ಲವೇ ಸೆನ್ಸಿಟೈಜರ್ ಬೆರೆಸಿ ಚೆನ್ನಾಗಿ ಕಲಿಸಬೇಕು. ನಂತರ ಅದನ್ನು ಒಣಗಿರುವ, ನೀಟಾಗಿ ಮಾಡಿಕೊಂಡ ಸ್ಕ್ರೀನ್‌ನ ಮೇಲೆ ಹಾಕಿ ಎರಡೂ ಕಡೆಯಿಂದ ಸರಿಯಾಗಿ ಎಳೆದು ಕತ್ತಲೆ ಕೋಣೆಯಲ್ಲಿ ಒಣಗಿಸಬೇಕು. ಒಣಗಿದ ಸ್ಕ್ರೀನ್‌ನ ಮೇಲೆ ಪಾಸಿಟಿವ್'ನ್ನು ಸ್ಕ್ರೀನಿನ ಮೇಲೆ ಅಂದರೆ ವಿರುದ್ಧವಾಗಿ ಕಾಣುವ ಹಾಗೆ ಇಟ್ಟು ಅದರ ಮೇಲೆ ಚಪ್ಪಟೆಯಾದ ಗಾಜೊಂದನ್ನು ಇಡಬೇಕು. ಕೆಳಭಾಗದಲ್ಲಿ ಪುಸ್ತಕವನ್ನು ಇಲ್ಲವೆ ಅದೇ ಆಕಾರದ ಯಾವುದಾದರೂ ವಸ್ತುವನ್ನು ಇಟ್ಟುಕೊಳ್ಳಬಹುದು.[೨೮] ಪುಸ್ತಕ ಹಾಗೂ ಗಾಜನ್ನು ಅಲುಗಾಡಿಸದೇ ಒಂದೆರಡು ನಿಮಿಷಗಳ ಕಾಲ ಬಿಸಿಲಿನಲ್ಲಿ ಗಟ್ಟಿಯಾಗಿ ಹಿಡಿದಿರಬೇಕು. ನಂತರ ಕತ್ತಲೆ ಕೋಣೆಯೊಳಗೆ ಬಂದು ಪುಸ್ತಕ, ಪಾಸಿಟಿವ್‌ಗಳನ್ನು ಬದಿಗಿಟ್ಟು ಸ್ಕ್ರೀನಿನ ಮೇಲೆ ನಿಧಾನವಾಗಿ ನೀರನ್ನು ಸಿಂಪಡಿಸಬೇಕು. ಪಾಸಿಟಿವ್‌ನಲ್ಲಿ ಇರುವಂತಹ ವಿಷಯ ಸ್ಕ್ರೀನಿನಲ್ಲಿ ಇಲ್ಲವೆ ನೆರಳಿನಲ್ಲಿ ಒಣಗಿಸಬೇಕು. ಹೀಗೆ ಮಾಡುವುದರಿಂದ ನಾವು

---

೨೭. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಛಾಪಾಕಲೆ, ಪು-೩೩

೨೮. ಡಾ. ಶಿವಲಿಂಗಸ್ವಾಮಿ ಹಿರೇಮಠ : ಕಲಾಸ್ಫೋಟಕ ಆರ್. ಎಂ. ಹಡಪದ, ಪು-೧೫೦

ಮುದ್ರಿಸಬೇಕಾದಂತಹ ಸ್ಕ್ರೀನ್ ತಯಾರಾಗುತ್ತದೆ. ಈ ರೀತಿಯಾಗಿ ಮಾಡುವ ವಿಧಾನಕ್ಕೆ 'ನೇರ ವಿಧಾನ' ಎಂದು ಕರೆಯಲಾಗುತ್ತದೆ.[೯]

೨. ಕ್ರೋಮೋಲಿನ್ ವಿಧಾನ : ನೇರ ವಿಧಾನದಂತೆಯೇ ಇದರಲ್ಲೂ ಕೋಟಿಂಗ್ ಸಲೂಷನ್ ಹಾಗೂ ಅಮೋನಿಯಂ ಬೈಕ್ರೋಮೇಟ್ ಇಲ್ಲವೆ ಸೆನ್ಸಿಟೈಜರ್'ನ್ನು ಚೆನ್ನಾಗಿ ಮಿಶ್ರಣಮಾಡಿ ಸ್ಕ್ರೀನಿನ ಮೇಲೆ ಹಾಕಲಾಗುತ್ತದೆ. ಕ್ರೋಮೋಲಿನ್ ಎನ್ನುವ ಫಿಲ್ಮ್‌ನ್ನು ಸ್ಕ್ರೀನಿನ ಮೇಲ್ಭಾಗದಲ್ಲಿ ಇಡಬೇಕು(ಫಿಲ್ಮ್‌ನಲ್ಲಿರುವ ರಾಸಾಯನಿಕ ಭಾಗ ಸ್ಕ್ರೀನ್ ಕಡೆಗಿರಬೇಕು). ಹೀಗೆ ಇಡುವುದರಿಂದ ಫಿಲ್ಮ್‌ನ ರಾಸಾಯನಿಕ ಭಾಗ ಸ್ಕ್ರೀನ್ ಒಳಗಡೆ ಕಾಣಿಸುತ್ತದೆ. ನಂತರದಲ್ಲಿ ಕಾರ್ಡು ಇಲ್ಲವೆ ಸ್ಕ್ವೀಜರ್‌ನ ಸಹಾಯದಿಂದ ನಿಧಾನವಾಗಿ ಎಳೆಯಬೇಕು. ಹೀಗೆ ಮಾಡುವುದರಿಂದ ಫಿಲ್ಮ್ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ. ಆಮೇಲೆ ಅದನ್ನು ಒಣಗಲು ಬಿಡಬೇಕು. ಒಣಗಿದಾದ ಮೇಲೆ ಫಿಲ್ಮ್‌ನ ಹಿಂದಿರುವ ಪಿ.ವಿ.ಸಿ. ಶಿಟ್‌ನ್ನು ತೆಗೆದು ಪಾಸಿಟಿವ್‌ನ್ನು ವಿರುದ್ಧವಾಗಿಟ್ಟು ಸುಮಾರು ಒಂದೆರಡು ನಿಮಿಷಗಳ ಕಾಲ ಬಿಸಿಲಿನಲ್ಲಿ ಇಡುವುದು ಸೂಕ್ತ. ನಂತರ ಕೋಣೆಯೊಳಗೆ ತಂದು ಪುಸ್ತಕ ಹಾಗೂ ಪಾಸಿಟಿವ್‌ನ್ನು ಬೇರೆ ಮಾಡಿ ಸ್ಕ್ರೀನ್‌ಗೆ ನಿಧಾನವಾಗಿ ನೀರನ್ನು ಸಿಂಪಡಿಸಿದರೆ, ನಿಮ್ಮ ಪಾಸಿಟಿವ್‌ನಲ್ಲಿರುವ ವಿಷಯ ಸ್ಕ್ರೀನ್‌ನಲ್ಲಿ ಮೂಡುತ್ತದೆ. ನಂತರದಲ್ಲಿ ಅದನ್ನು ಒಣಗಲು ಬಿಡಬೇಕು. ನೇರ ವಿಧಾನದಂತೆಯೇ ಈ ವಿಧಾನವೂ ಕತ್ತಲ ಕೋಣೆಯಲ್ಲಿಯೇ ಮಾಡುವುದು ಹೆಚ್ಚು ಸೂಕ್ತ.[೧೦]

೩. ಫೈವ್‌ಸ್ಟಾರ್ ವಿಧಾನ : 'ಫೈವ್ ಸ್ಟಾರ್' ಎನ್ನುವುದು ಒಂದು ಫಿಲ್ಮ್‌ನ ಹೆಸರು. ಈ ಫಿಲ್ಮ್‌ನಿಂದ ಅತೀಸೂಕ್ಷ್ಮ ಹಾಗೂ ಸುಲಭವಾಗಿ ಮುದ್ರಿಸಬಹುದು. ಪಾಸಿಟಿವ್‌ಗಿಂತ ಸ್ವಲ್ಪ ದೊಡ್ಡದಾದ ಫೈವ್‌ಸ್ಟಾರ್ ಫಿಲ್ಮ್‌ನ್ನು ತೆಗೆದುಕೊಂಡು ಎಕ್ಸ್‌ಪೋಸಿಂಗ್ ಫ್ರೇಮ್‌ನಲ್ಲಿ ಪಾಸಿಟಿವ್‌ನ್ನು ನೇರವಾಗಿ (ಓದುವ ಹಾಗೆ) ಇಟ್ಟು ಅದರ ಮೇಲೆ ಫಿಲ್ಮನ್ನೂ ಇಡಬೇಕು. ಫಿಲ್ಮ್‌ನ ರಾಸಾಯನಿಕ ಭಾಗ ನಿಮಗೆ ಕಾಣುವ ಹಾಗೆ ಪಾಸಿಟಿವ್ ಕಡೆಗಿಟ್ಟಿರಬೇಕು. ಬಿಳಿ ಹಾಲೆಯ ಸಹಾಯದಿಂದ ಫ್ರೇಮ್‌ನ್ನು ಮುಚ್ಚಿ ಮೂರು ನಿಮಿಷಗಳ ಕಾಲ ಬಿಸಿಲಿಗೆ ಹಿಡಿದಿರಬೇಕು. ನಂತರ ಕತ್ತಲೆ ಕೋಣೆಗೆ ತರಬೇಕು. ತಟ್ಟೆಯೊಂದರಲ್ಲಿ ಒಂದು ಚಮಚ ಹೈಡ್ರೋಜನ್ ಪೆರಾಕ್ಸೈಡ್ ಮತ್ತು ಮೂರು ಚಮಚ ನೀರು ಹಾಕಿ ಚೆನ್ನಾಗಿ ಬೆರೆಸಬೇಕು. ಈ ಮಿಶ್ರಣದಲ್ಲಿ ಫಿಲ್ಮ್‌ನ್ನು ಹಾಕಿ ೩ ನಿಮಿಷ ಬಿಡಬೇಕು. ನಂತರ ಅದರಲ್ಲಿರುವ ಫೈವ್‌ಸ್ಟಾರ್ ಫಿಲ್ಮ್‌ನ್ನು ತೆಗೆದು ಗಾಜಿನ ಮೇಲಿಟ್ಟು ಉಗುರು ಬೆಚ್ಚಗಿರುವ ನೀರನ್ನು ಅದರ ಮೇಲೆ ಸುರಿಯುತ್ತ ಹೋಗಬೇಕು. ಸ್ವಲ್ಪಹೊತ್ತಿನಲ್ಲೇ ಪಾಸಿಟಿವ್‌ನಲ್ಲಿರುವ ವಿಷಯ ಮೂಡುತ್ತದೆ. ಸ್ಕ್ರೀನ್‌ನ್ನು ತೆಗೆದುಕೊಂಡು ಹಾಳೆಯಮೇಲೆ ಇಡಬೇಕು.

೦೯. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪು-೧೨೬
೧೦. ರವಿಕುಮಾರ ಕಾಶಿ : ಗ್ರಾಫಿಕ್ ಕಲೆ, ಪು-೨೨



ಈಗ ಫೈವ್‌ಸ್ಟಾರ್ ಸ್ಕ್ರೀನ್‌ಗೆ ಅಂಟಿಕೊಳ್ಳುತ್ತದೆ.[೧೧] ಯಥಾಸ್ಥಿತಿಯಲ್ಲಿ ಬ್ಲಾಟಿಂಗ್ ಪೇಪರ್ ಇಲ್ಲವೆ ನ್ಯೂಸ್ ಪೇಪರ್‌ನಿಂದ ಸ್ಕ್ರೀನಿನ ಒಳಗಿನಿಂದ ನಿಧಾನವಾಗಿ ಒತ್ತುತ್ತಿರಬೇಕು. ಹೀಗೆ ಒಂದೆರಡು ಬಾರಿ ಪೇಪರ್ ಬದಲಾಯಿಸಬೇಕು. ಈಗ ಫೈವ್‌ಸ್ಟಾರ್ ಚೆನ್ನಾಗಿ ಅಂಟಿಕೊಂಡಿರುತ್ತದೆ. ಅರ್ಧಗಂಟೆಯವರೆಗೆ ಅದನ್ನು ಒಣಗಲು ಬಿಡಬೇಕು. ಆಮೇಲೆ ಸ್ಕ್ರೀನ್ ತೆಗೆದುಕೊಂಡು ಫಿಲ್ಮ್‌ನ ಹಿಂಭಾಗದಲ್ಲಿರುವ ಪ್ಲಾಸ್ಟಿಕ್ ಶೀಟನ್ನು ತೆಗೆಯುವುದಲ್ಲದೇ ಫಿಲ್ಮನ ಸುತ್ತಲೂ ಕೋಟಿಂಗ್ ಸಲ್ಯೂಷನ್ ಹಾಕಬೇಕು. ಇಷ್ಟೆಲ್ಲಾ ಆದಮೇಲೆ ಮುದ್ರಿಸಲು ಸ್ಕ್ರೀನ್ ತಯಾರಾಗುತ್ತದೆ.[೧೨]

ಗುಟನ್ ಬರ್ಗ–ಮುದ್ರಣ ಮೂಲ ಪುರುಷ

ಜರ್ಮನಿಯಲ್ಲಿ ಮೆನಿಂಜಸ್‌ನ ಅಕ್ಕಸಾಲಿಗ ಜಾನ್ ಗುಟನ್ ಬರ್ಗ್ (೧೪೩೫–೧೪೪೫) ಎನ್ನುವವನು ಚಲನಶೀಲ ಅಚ್ಚು ಮೊಳೆಗಳಿಂದ ಮುದ್ರಣ ಕಾರ್ಯ ಪ್ರಾರಂಭಿಸಿದನು. ಈ ಹಿಂದಿನವರ ಎಲ್ಲ ಸಂಶೋಧನೆಗಳನ್ನು ಜಾಣ್ಮೆಯಿಂದ ಒಂದುಗೂಡಿಸಿ ತನ್ನದೇ ಆದ ಪದ್ಧತಿಯಲ್ಲಿ ಲೋಹದಲ್ಲಿ ಅಚ್ಚು ಮೊಳೆಗಳ 'ಡೈ'ಗಳನ್ನು ಮಾಡಿ ಚಿಕ್ಕ ಚಿಕ್ಕ ಸಾಲುಗಳ ವಿನ್ಯಾಸ ಮಾಡಿದನ್ನು ಈ ಹೊತ್ತಿಗಾಗಲೇ ದೀಪದ ಕಪ್ಪುಶಾಹಿ(*Lamp black*)ಯನ್ನು ವಿಟ್ಯಾಂಗ್ ಎಂಬ ಚೀನಿಯನ್ನು ಕಂಡುಹಿಡಿದು ಮುದ್ರಣಕ್ಕೆ ಅನುಕೂಲ ಮಾಡಿಕೊಟ್ಟಿದ್ದನು.[೧೩]

ಕಾಗದ ಬಳಕೆ

ಎರಡು ಸಾವಿರ ವರ್ಷಗಳ ಹಿಂದೆ ಬಹುಶಃ ಕಾಗದವನ್ನು ಯಾರೂ ಊಹಿಸಿರಲಿಲ್ಲ. ಆಗ ಮರದ ಎಲೆ ಅಥವಾ ತಾಳೆಗೆರೆ ಮೇಲೆ ಅಥವಾ ಮಣ್ಣಿನ ಅಚ್ಚು(ಗಡಿಗೆಗಳ ಮೇಲ್ಮೈ)ಗಳ ಮೇಲೆ ಬರೆಯಲಾಗುತ್ತಿತ್ತು. ಕ್ರಿ.ಶ.೧೦೫ರ ಸುಮಾರಿಗೆ ಚೀನಾ ದೇಶದಲ್ಲಿ ಟ್ಸಾಯಿ ಲೇನೆ ಎನ್ನುವವನು ಕಾಗದದ ತಯಾರಿಕೆಯನ್ನು ಕಂಡು ಹಿಡಿದನೆಂಬ ಉಲ್ಲೇಖಗಳು ನಮಗೆ ಸಿಗುತ್ತವೆ. ಮರದ ತಿರುಳನ್ನು ರುಬ್ಬಿ ಅದನ್ನು ಸಿಹಿ ನೀರಿನಲ್ಲಿ ಮಿಶ್ರಣ ಮಾಡಿ ರೊಟ್ಟಿಯ ಹಾಗೆ ತಟ್ಟಿದಾಗ ಕಾಗದವು ಸಿದ್ಧವಾಯಿತು. ಈಗಲು ಇಂಥ ಬಿರುಸಾದ ಕಾಗದವನ್ನು ಕೆಲವು ಖಾದಿ ಬಂಡಾರಗಳಲ್ಲಿ ಕೈಯಿಂದ ಸಿದ್ಧಪಡಿಸುತ್ತಿರುವುದನ್ನು ನಾವು ನೋಡುತ್ತೇವೆ.[೧೪] ಗಿಡದ ನಾರು, ಮರದ ತಿರುಳು ತುಂಡು ಬಟ್ಟೆಗಳು ಸೆಣಬು ಬಿರುಸು ಹುಲ್ಲು, ಇವುಗಳೊಂದಿಗೆ ಕೆಲವು ರಾಸಾಯನಿಗಳನ್ನು ಸೇರಿಸಿ ಕಾಗದ ತಯಾರು ಮಾಡಲಾಗುತ್ತಿದೆ. ಕ್ರಿ.ಶ.೧೯೩೧ರಲ್ಲಿ ನ್ಯೂರೆಂಬರ್ಗನಲ್ಲಿ ಮೊದಲಯರೋಡಿಯನ್ ಕಾಗದ ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

೧೧. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರ್ಣ, ಪು-೫೨
೧೨. ಅದೇ., ಪು-೫೨
೧೩. ರವಿಕುಮಾರ ಕಾಶಿ : ಗ್ರಾಫಿಕ್ ಕಲೆ, ಪು-೨೨
೧೪. ಓ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪು-೧೧೯

೮ನೇ ಶತಮಾನದಿಂದೀಚೆಗೆ ಕಾಗದ ವ್ಯಾಪಕ ಬಳಕೆ ಪ್ರಾರಂಭವಾಯಿತು. ಯಂತ್ರಗಳಲ್ಲಿ ಸಿದ್ಧಪಡಿಸಲಾದ ಕಾಗದವು ರೀಲುಗಳಲ್ಲಿ ಸುತ್ತಿ ಮುದ್ರಣಕ್ಕೆ ಅಣಿಯಾಗುತ್ತದೆ. ಇದನ್ನು ವೆಬ್ ಆಫ್‌ಸೆಟ್‌ನಂತಹ ಮುದ್ರಣ ಯಂತ್ರಗಳಲ್ಲಿ ಉಪಯೋಗಿಸಲಾಗುವುದು. ಕಾಗದಗಳಂತೆಯೇ ರಟ್ಟುಗಳನ್ನು ತಯಾರಿಸಲಾಗುತ್ತದೆ. ಇವುಗಳನ್ನು ಸಹ ಹುಲ್ಲು ನಾರು ಹಾಗೂ ರೀಲ್ ಕಟ್ಟಿಂಗ್ ತುಂಡುಗಳಿಂದ ಸಿದ್ಧಪಡಿಸಲಾಗುವುದು.[೧೫]

ಕಾಗದಗಳಲ್ಲಿನ ಪ್ರಕಾರಗಳು

ಆದರೆ ಕ್ರೌನ್ ಡೆಮಿ ಹಾಗೂ ಫೊಲ್‌ಸ್ಕೇಪ್ ಎಂಬ ಮೂರು ರೀತಿಯ ಪ್ರಕಾರಗಳೆ ಹೆಚ್ಚು ಬಳಕೆಯಲ್ಲಿದ್ದುದು ನಮಗೆ ಕಂಡುಬರುತ್ತದೆ. ನೋಟ್‌ಬುಕ್‌ಗಳಿಗೆ ಸಾಮಾನ್ಯವಾಗಿ ಫೋಲ್‌ಸ್ಕೇಪ್ ಕಾಗದವನ್ನು ಬಳಸಲಾಗುವುದು. ಬಹುತೇಕ ಆಫ್‌ಸೆಟ್ ಮಷೀನ್‌ಗಳು ಡೆಮಿ(೧೮"x೨೩") ಸೈಜಿನಲ್ಲಿ ಇರುವವು. ಕ್ರಿಮ್ ವೋವ್ಹ್, ವೈಟ್ ಪ್ರಿಂಟಿಂಗ್ ಆರ್ಟ್ ಪೇಪರ್ ಮ್ಯಾಪಲಥೊ ನ್ಯೂಜಪ್ರಿಂಟ್ ರೈಟಿಂಗ್ ಪೇಪರ್, ಲೇಡ್ಜರ್ ಪೇಪರ್, ಬಾಂಡ್ ಪೇಪರ್ ಹಾಗೂ ಕವ್ಹರ್ ಪೇಪರ್ ಮುಂತಾದ ವಿವಿಧ ಪ್ರಕಾರದ ಕಾಗದಗಳನ್ನು ನಾವೀಗ ಉಪಯೋಗಿಸುತ್ತಿದ್ದೇವೆ. ಈ ಮೇಲಿನ ಎಲ್ಲ ರೀತಿಯ ಪೇಪರ್‌ಗಳು ಭಾರತದಲ್ಲಿಯೇ ತಯಾರಾಗುತ್ತವೆ.

ಆರ್ಟ್‌ಕಾರ್ಡ್ ಹಾಗೂ ಪೇಪರುಗಳಲ್ಲಿ ಅನೇಕ ಪ್ರಕಾರಗಳಿವೆ. ಆಸ್ಟ್ರಿಯಾ ವ್ಯಾಗ್ನೋಪ್ರಿಂಟ್, ಆಸ್ಟ್ರೀಯಾ ಮ್ಯಾಗ್ನೋಸ್ಟಾರ್, ಬಲ್ಲಾಪುರ್ ಐವರಿ ಕಾರ್ಡ್, ಇಂಡೋನೇಸಿಯಾ, ರೋಹಿತ್, ಸುಮೋ ಕ್ಲಾಸಿಕ್ ಹಾಗೂ ಯುಗೋಸ್ಲಾವಿಯಾ, ಕ್ರೋಮೋ ಕಾರ್ಡ್, ಹರ್‍ಯಾಣ್ ಗ್ಲಾಸ್ ಕೋನ್ ಜರ್ಮನ್ ಮ್ಯಾಟ್ ಮುಂತಾದವುಗಳು. ಭಾರತದ ಕ್ರೀಮ್ ವೋವ್ಹ್ ಪೇಪರನಲ್ಲಿ ಆಂಧ್ರ ಬಲಾಲ್ಪುರ್, ಎಚ್.ಪಿ.ಸಿ.ಓರಿಯಂಟ್, ಶ್ರೀಗೋಪಾಂ, ಟಿ.ಎನ್.ಪಿ.ಎಲ್.ವಿಂದ್ಯಾ ವೆಸ್ಟ್‌ಕೋಸ್ಟ್ ಹಾಗೂ ಭದ್ರಾವತಿ ಮುಂತಾದ ಪ್ರಕಾರಗಳಿವೆ. ಆಫ್‌ಸೆಟ್ ಮುದ್ರಣ ಪ್ರಾರಂಭಿಸುವ ಮೊದಲು ಪ್ಲೇಟ್ ಟ್ಯಾಂಪ್‌ನಿಂಗ್ ಇಂಕ್ಡೆಲಿವ್ಹರಿ ಮುಂತಾದವುಗಳ ಬಗ್ಗೆ ಸುಮಾರು ೩೬ ಅಂಶಗಳನ್ನು ಗಮನಿಸಬೇಕಾಗುತ್ತದೆ.[೧೬]

೨. ಡಬಲ್ ಕವರ್ ಆಫ್‌ಸೆಟ್ ಮುದ್ರಣ

ಸಿಂಗಲ್ ಕಲರಿನಂತೆಯೇ ಡಬಲ್ ಕಲರ್ ಆಫ್‌ಸೆಟ್ ಮುದ್ರಣವಿದ್ದು ಇದರಲ್ಲಿ ಎರಡು ಕಲರ್ ರೆಜಿಸ್ಟಾರ್ ಬಗ್ಗೆ ವಿಶೇಷ ಗಮನ ಕೊಡಬೇಕಾಗುತ್ತದೆ. ಸಾಮಾನ್ಯ ಮುದ್ರಿಕೆಯ ಹಲವು ವರ್ಣದ ಮುದ್ರಣ ಪದ್ಧತಿ. ಎರಡು ಅಥವಾ ನಾಲ್ಕು ಕಲರ್‌ಗಳ 'ಕಾಂಬಿನೇಷನ್' ಒಂದು

೧೫. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾನ್ವೇಷಕ ಆರ್. ಎಂ. ಹಡಪದ. ಪು-೨೮೧

೧೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರ್ಣ. ಪು-೫೨

ವಿಶಿಷ್ಟ ಲೆಕ್ಕಾಚಾರದಿಂದ ಸಿದ್ಧಪಡಿಸಿದ್ದು ಇರುತ್ತದೆ. ಕಾಂಬಿನೇಷನ್ ಬಗ್ಗೆ ಇದು ಕಾಳಜಿ ವಹಿಸುವುದು. ಇದು ಮುದ್ರಣ ರೆಜಿಸ್ಟ್ರೇಷನ್ ಮಾರ್ಕ್‌ಗಳನ್ನು ಸರಿಯಾಗಿ ನಿರ್ವಹಿಸುತ್ತದೆ. ಮುದ್ರಣ ಗುಣಮಟ್ಟವನ್ನು ಕಾಯ್ದುಕೊಳ್ಳಲು ಇದು ಸಹಾಯಕವಾಗುತ್ತದೆ. ಹಿಂದಿನ ಪುಟದಲ್ಲಿ ನಮೂದಿಸಿರುವ ಸಿಂಗಲ್ ಕಲರ್ ಆಫ್ ಸೆಟ್ ಮಶಿನ್‌ಗಳೆಲ್ಲ ಭಾರತದಲ್ಲಿಯೇ ಸಿದ್ಧವಾಗಿರುವ ಮಶೀನ್‌ಗಳಾದರೆ ವಿದೇಶದ ಅನೇಕ ಪ್ರಸಿದ್ಧ ಕಂಪನಿಗಳ ಮಶಿನ್‌ಗಳನ್ನು ಭಾರತದಲ್ಲಿ ಮುದ್ರಣ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ.[೧೭] ಇದಲ್ಲದೆ ಇನ್ನೂ ಸುಮಾರು ೩೦–೪೦ ಕಂಪನಿಗಳ ವಿವಿಧ ಬ್ರಾಂಡ್‌ಗಳ ಆಫ್‌ಸೆಟ್ ಮಶಿನ್‌ಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಮುದ್ರಣಕ್ಕೆ ಸಂಬಂಧಿಸಿದ ಇನ್ನೂ ಅನೇಕ ಹಂತಗಳಿವೆ. ಬ್ರಶ್‌ಡ್ಯಾಪಿಂಗ್, ಪೇಪರ್ ಡ್ಯಾಂಪರ್ ಅಲ್ಕೋಹಾಲ್ ಡ್ಯಾಂಪಿಂಗ್, ಆಟೋ ಡ್ಯಾಂಪ್ ಯುನಿಟ್. ಹೈಡ್ರೋಕಲರ್ ಸಿಸ್ಟಮ್, ರೆಜಿಸ್ಟರಿಂಗ್ ಸಿಸ್ಟಮ್, ಡೆಲಿವ್ಹರ್ ಸಿಸ್ಟಮ್ ಮುಂತಾದವುಗಳನ್ನೆಲ್ಲ ಇಲ್ಲಿ ಸರಿಯಾಗಿ ಅಭ್ಯಾಸಿಸಬೇಕಾಗುತ್ತದೆ.

ಭಾರತದಲ್ಲಿ ಮುದ್ರಣ (ಪ್ರಿಂಟ್) ಕಲೆ

ಭಾರತಕ್ಕೆ ಧರ್ಮ ಪ್ರಸಾರಕ್ಕೆ ವ್ಯಾಪಾರಕ್ಕೆ ಥವಾ ಪ್ರವಾಸಿಗಳಾಗಿ ಬಂದ ಐರೋಪ್ಯರು ತಾವು ಇಲ್ಲಿ ಕಂಡಿದ್ದನ್ನು ಪುಸ್ತಕ ರೂಪದಲ್ಲಿ ಬರೆದಿರಿಸುವ ಪಾಠ ಹೊಂದಿದ್ದು, ಕೈಬರಹದ ಪ್ರತಿಯೊಂದಿಗೆ ಕೈಯಲ್ಲಿ ರಚಿಸಿದ ಚಿತ್ರಗಳನ್ನು ಸೇರಿಸುತ್ತಿದ್ದರು.

೧೬ನೇಯ ಶತಮಾನದಲ್ಲಿ ಮುದ್ರಣ ಕಂಡು ಹಿಡಿದ ಮೇಲೆ ಆ ಹಿಂದೆಯೇ ಬಳಕೆಯಲ್ಲಿ ಗ್ರಾಫಿಕ್ ಮುದ್ರಣ ತಂತ್ರದ ವ್ಯಾಪಕತೆ ಹೆಚ್ಚಾಗಿ, ಹೆಚ್ಚಿನ ಪ್ರತಿಗಳನ್ನು ಪಡೆದು ಪುಸ್ತಕಗಳೊಂದಿಗೆ ಸೇರಿಸುವಂತಯಿತು. ಏಕವರ್ಣದಲ್ಲಿ ರೇಖಾಚಿತ್ರದಂತೆ ಮುದ್ರಿಸಿ ನಂತರ ಅಷ್ಟು ಪ್ರತಿಗಳಿಗೆ ಒಂದೇ ರೀತಿಯಲ್ಲಿ ಬಣ್ಣ ಹಚ್ಚಿರುವುದೂ ಉಂಟು. ಇದೇ ಕಲಾವಿದರು ಗ್ರಂಥಗಳಿಗೆ ಪೂರಕ ಚಿತ್ರವಾಗಿ ಸೇರಿಸದೇ ಹಲವಾರು ಕೃತಿಗಳನ್ನು ಸೇರಿಸಿ ಪ್ರತೇಕ ಕಲಾ ಸಂಪುಟಗಳನ್ನು ಹೊರತಂದರು.[೧೮] ಹದಿನೇಳನೆ ಶತಮಾನದಿಂದ ಈಚೆಗೆ ತಂಡೋಪ ತಂಡವಾಗಿ ಯುರೋಪಿನಿಂದ ಕಲಾವಿದರು ಭಾರತಕ್ಕೆ ಬಂದರು. ಇವರುಗಳ ಚಿತ್ರಗಳಿಗೆ(ಮುದ್ರಣಗಳಿಗೆ) ಅಲ್ಲಿ ಬೇಡಿಕೆಯಿಲ್ಲವಾಗಿದ್ದು ಹಾಗೇ ಭಾರತದ ದೃಶ್ಯಗಳು ಅಲ್ಲಿನ ಕಲಾ ಸಂಗ್ರಹಕಾರರಿಗೆ ಆಕರ್ಷಕವಾಗಿ ಹೊಸದಾಗಿ ಕಂಡದ್ದು ಕಲಾವಿದರನ್ನು ಭಾರತಕ್ಕೆ ಕೈಬೀಸಿ ಕರೆಯುವಂತಾಯಿತು. ಯೂರೋಪಿನಯನ್ನ ಜನಕ್ಕೆ 'ಅನಾಗರೀಕ' ಎನ್ನಬಹುದಾಗಿದ್ದ ಧರ್ಮ, ಸಂಸ್ಕೃತಿ, ಸಾಮಾಜಿಕ ಜೀವನ, ಉಡುಗೆ–ತೊಡುಗೆ, ವಸತಿ, ವಾಹನಗಳು ಇಲ್ಲಿ ಇದ್ದುದ್ದು. ಅಲ್ಲಿಯ ವಿಕ್ಟೋರಿಯನ್

---

೧೭. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾನ್ವೇಷಕ ಆರ್. ಎಂ. ಹಡಪದ. ಪು-೨೮೦
೧೮. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರ್ಣ.

ಶೈಲಿಯ ಚಿತ್ರಗಳಿಂದ ಬೇಸರಗೊಂಡಿದ್ದ ಜನಕ್ಕೆ ಹೊಸತೊಂದು ದೃಶ್ಯ ಮಾಲಿಕೆ ನೀಡಿದಂತಾಗಿ ಸ್ವಾಗತಿಸಿದರು.[೧೯]

ರಾಜಕಾರಣಿಗಳ ದೃಷ್ಟಿಯಲ್ಲಿ ಇಲ್ಲಿ ಕೋಟೆ, ಕೊತ್ತಲಗಳು, ನದಿ, ಬೆಟ್ಟಗಳು, ರಾಜರ, ಸೈನಿಕರ, ಸ್ಥಳೀಯರ ವೇಷ, ಭೂಷಣ, ಐಶ್ವರ್ಯಗಳು ತಮ್ಮ ರಾಜ ಕಟ್ಟುವುದಕ್ಕೆ ಒಂದು ಅಂದಜು ಮಾಡಲು ನೆರವಾಗಿರಬಹುದು. ಇಂದು ಛಾಯಾಚಿತ್ರ ಮಾಡುತ್ತಿದ್ದ ಕೆಲಸ ಅಂದು ಗ್ರಾಫಿಕ್ ಚಿತ್ರಗಳಿಂದಾಯಿತೆಂದು ಹೇಳಬಹುದು. ಚಿತ್ರ ಶಿಲ್ಪಕಲೆಯಂತೆ 'ಗ್ರಾಫಿಕ್ ಕಲೆ' ಹಲವು ವರ್ಷಗಳಿಂದ ಜನಪ್ರಿಯವಾಗಿದ್ದು ಕಲಾವಿದನ ಅಭಿವ್ಯಕ್ತಿಗೆ, ಮಾಧ್ಯಮವಾಗಿದೆ. 'ಗ್ರಾಫಕ್, ಎಂಬ ಪದವು ಗ್ರಾಫಿಯನ್, ಎಂಬ ಗ್ರೀಕ್ ಪದದಿಂಧ ಬಂದಿದೆ. ಇದರ ಅರ್ಥ, 'ಬರೆ' ಅಥವಾ 'ಚಿತ್ರಿಸು' ಎಂದು. ಪ್ರಿಂಟ್ ಮೇಕಿಂಗ್ ಪ್ರಚಲಿತವಿದ್ದ ಯೂರೋಪಿನಿಂದ ಗ್ರಾಫಿಕ್ ಭಾರತಕ್ಕೆ ಬಂದಿದ್ದು ೧೫೫೬ರಲ್ಲಿ ಗೋವಾಕ್ಕೆ ಬಂದ ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಮುತಾಂತರ ಕಾರ್ಯಕ್ಕೆ ಪ್ರಿಂಟಿಂಗ್ ಮಾಡಿದ ಸಾಂದರ್ಭಿಕ ಚಿತ್ರಗಳನ್ನು ಪುಸ್ತಕಗಳನ್ನು ಬಳಸಿದರು. ನಂತರದ ದಶಕಗಳಲ್ಲಿ ಅದು ಭಾರತದ ಅನೇಕ ಕಡೆಗಳಲ್ಲಿ ಬಳಕೆಗೆ ಬಂತು.[೨೦]

ಕರ್ನಾಟಕದಲ್ಲಿ ಗ್ರಾಫಿಕ್ ಕಲೆ ಬೆಳೆದುಬಂದ ಬಗೆ

ಕರ್ನಾಟಕದಲ್ಲಿ ಗ್ರಾಫಿಕ್ ಚಟುವಟಿಕೆ ತೀವ್ರವಾಗಿದ್ದು ೧೯೭೮ರಿಂದ ಈಚೆಗೆ ಹೆಬ್ಬಾರರು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಶಾಂತಿನಿಕೇತನ, ಬರೋಡದ ಕಲಾಶಾಲೆಗಳಲ್ಲಿ ಕಲಿತು ಬರಲು ಯುವ ಕಲಾವಿದರನ್ನು ಕಳುಹಿಸಿದಾಗಿನಿಂದ ಇದಕ್ಕೆ ಅಪವಾವೆಂದರೆ. ೧೯೨೩ರಲ್ಲೇ ಜರ್ಮನಿಯಲ್ಲಿ ಕೆಲಕಾಲ ಇದ್ದು ಅಲ್ಲಿನ ಗ್ರಾಫಿಕ್ ಸೊಸೈಟಿ ಆಫ್ ಆರ್ಟ್ಸ್ ಗೌರವ ಸದಸ್ಯರಾದ ಎನ್.ಜೆ.ಪಾವಂಜೆ ಮತ್ತು ೧೯೩೯ರಲ್ಲಿ ಇಂಗ್ಲೆಂಡಿನಲ್ಲಿ ಗ್ರಾಫಿಕ್ ಅಭ್ಯಸಿಸಿದ ಮಿಣಜಿಗಿಯವರು. ಆದರೆ ಇವರೀರ್ವರು ಮರಳಿ ಬಂದ ನಂತರ ಕರ್ನಾಟಕದಲ್ಲಿ ಈ ಮಾಧ್ಯಮವನ್ನು ಮುಂದುವರೆಸಲು ಬೇಕಾದ ಸವಲತ್ತುಗಳಿಲ್ಲವಾದ್ದರಿಂದ ಅವರ ಅನುಭವ ನಮಗೆ ಆಗಿನಿಂದಲೇ ಧಕ್ಕದೆ ಹೋದದ್ದು ಖೇದನೀಯ.

ಕೆ. ಕೆ. ಹೆಬ್ಬಾರರು ಕಳುಹಿಸಿದ ಮೊದಲ ತಂಡ. ಸಿ. ಚಂದ್ರಶೇಖರ, ಚಂದ್ರನಾಥ ಆಚಾರ್ಯ ೧೯೬೦-೬೧ರಲ್ಲಿ ಮರಳಿ ಬಂದರು. ಅದೇ ವೇಳೆಗೆ ದೆಹಲಿಯ ಗಡಿ ಸ್ಟೋಡಿಯೋದಲ್ಲಿ ಯುಸುಫ್ ಅರಕ್ಕಲ್ ೧೯೬೦ರಲ್ಲೂ, ಚಿ.ಸು.ಕೃಷ್ಣಸೆಟ್ಟಿ ೧೯೬೨ರಲ್ಲಿ ಪ್ರಿಂಟ್‌ಮೇಕಿಂಗ್ ಅಭ್ಯಸಿಸಿದರು. ನಂತರದ ದಿನಗಳಲ್ಲಿ ಚಿತ್ರಕಲಾ ಪರಿಷತ್, ಕೇನ್ ಕಲಾಶಾಲೆ ಇತ್ತೀಚೆಗೆ ಮೈಸೂರಿನ ಕಾವಾ

೧೯. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾನ್ವೇಷಕ ಆರ್. ಎಂ. ಹಡಪದ, ಪು-೨೨೦
೨೦. ಅದೇ.

ಗುಲ್ಬರ್ಗಾ, ದಾವಣಗೆರೆ, ಬಿಜಾಪುರಗಳಲ್ಲೂ ಗ್ರಾಫಿಕ್ ವಿಭಾಗಗಳು ಸಜ್ಜುಗೊಂಡಿವೆ. ಬರೋಡ, ಶಾಂತಿ ನಿಕೇತನಗಳಲ್ಲಿ ಹಲವರು ಕಲಿತು ಬಂದರೆ ಕೆಲವರು ಲಂಡನ್ ರಾಯಲ್ ಕಾಲೇಜ್ ಆಫ್ ಆರ್ಟ್ಸನಲ್ಲೂ ಕಲಿತರು. ಈ ಹಿನ್ನೆಲೆಯಲ್ಲಿ ಗ್ರಾಫಿಕ್ ಕಲೆ ಸ್ವಾತಂತ್ರೋತ್ತರ ಸಂದರ್ಭದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ್ದರು. ಈ ಹೊತ್ತಿನ ಕಲಾ ಸಂದರ್ಭದಲ್ಲಿ ಗ್ರಾಫಿಕ್ ಕಲೆಗೆ ದೊರೆಯಬೇಕಾದ ಪ್ರಾಮುಖ್ಯತೆ ಅಥವಾ ಜನಪ್ರಿಯತೆ ಅಷ್ಟಾಗಿ ದೊರೆತಿಲ್ಲ. ಈ ಮಾಧ್ಯಮವನ್ನು ಕಲಾವಿದರೂ ಗಂಭೀರವಾಗಿ ಪರಿಗಣಿಸದೇ ಇರುವುದು ಕೂಡ ಗ್ರಾಫಿಕ್ ಮಾಧ್ಯಮದ ಏಳಿಗೆಗೆ ತಡೆಯಾಗಿರುವುದು ಸ್ಪಷ್ಟ. ತಾಂತ್ರಿಕ ದೃಷ್ಟಿಯಿಂದ ಮುದ್ರಣ ಎಂದರೆ, ರೇಖಾಚಿತ್ರಗಳ ಮೂಲಕ ಬರೆದ ವಿನ್ಯಾಸದ ಪುನರುತ್ಪಾದನೆಯಾಗಿದ್ದು, ಇದನ್ನು ಮುದ್ರಣಶಾಯಿಯನ್ನು ಮುದ್ರಣ ಫಲಕದಿಂದ ಮುದ್ರನ ಕಾಗದ ಅಥವಾ ಇತರ ಸೂಕ್ತ ಸಾಮಗ್ರಿಯ ಮೇಲೆ ವರ್ಗಾಯಿಸಿವುದರಿಂದ ಪಡೆಯಬಹುದು. ಗ್ರಾಫಿಕ್ ವಿಧಾನದ ಸಹಾಯದಿಂದ ಕಲಾತ್ಮಕ ಪರಿಕಲ್ಪನೆಯನ್ನು ಮುದ್ರಣ ಫಲಕದಲ್ಲಿ ಕಾಣಬಹುದಾಗಿದೆ.[೨೧]

ಫಲಕದಲ್ಲಿನ ಮುದ್ರಣಭಾಗಕ್ಕೆ ಶಾಹಿಯನ್ನು ಹಾಕಿದಾಗ ಮುದ್ರಣವಾಗುತ್ತದೆ. ಮುದ್ರಣ ಫಲಕವನ್ನು ವಿವಿಧ ವಸ್ತುಗಳಿಂದ ಮಾಡಬಹುದಾಗಿದೆ. ಉದಾ: ಮರ, ಲಿನೋಲಿಯಂ ಶಿಲೆ, ಪ್ಲಾಸ್ಟಿಕ್, ರಬ್ಬರ್, ಜಿಂಕ್, ಮುಂತದವುಗಳು. ಇದಲ್ಲದೇ ಒಂದೇ ಮುದ್ರಣ ಫಲಕದ ವಿವಿಧ ಕೆಲಸಗಳ ಮುಖಗಳನ್ನು ದಾಖಲಿಸುವಂಥ ಪ್ರತಿಗಳು ಇರುತ್ತವೆ. ಈ ಪ್ರತಿಗಳನ್ನು 'ಸ್ಥಿತಿ' ಎಂದು ಕರೆಯುತ್ತೇವೆ. ಶೈಕ್ಷಣಿಕ ಸಂದರ್ಭದಲ್ಲಿ ಗ್ರಾಫಿಕ್ ಕಲೆ ಕಲಾ ಶಿಕ್ಷಣದ ಒಂದು ಭಾಗವಾಗಿರುವುದರಿಂದ ಯುವಕಲಾವಿದರಿಗೆ ಗ್ರಾಫಕ್ ಬಗೆಗೆ ಅಲ್ಪ ತಿಳುವಳಿಕೆ ಇರುತ್ತದೆ. ಆದರೆ ಕಲಾಶಿಕ್ಷಣದ ನಂತರ ಗ್ರಾಫಿಕ್ ಮಾಧ್ಯಮವನ್ನು ದುಡಿಸಿಕೊಂಡು ಹೋಗುವರು. ತುಂಬ ವಿರಳ ಕಲಾ ಶಿಕ್ಷಕರಾಗಿ, ಹಡಪದರು ಕಲಾ ಶಿಕ್ಷಣ ನೀಡುವ ಸಂದರ್ಭದಲ್ಲಿ ಗ್ರಾಫಿಕ್ ಮಾಧ್ಯಮದ ಕಲಾಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಆಯ್ದ ವಿವಿಧ ಮಾಧ್ಯಮದ ಕಲಾಕೃತಿಗಳನ್ನು ಇಲ್ಲಿ ಚರ್ಚೆಗೆ ಅಳವಡಿಸಲಾಗಿದೆ.[೨೨]

ಲೀಥೋಗ್ರಾಫಿ

ಲೀಥೋಗ್ರಾಫಿ ಶೋಧನೆ ಮತ್ತು ಸುಧಾರಣೆ ಆದದ್ದು ೧೮ನೇ ಶತಮಾನದ ಅಂತ್ಯದಲ್ಲಿ ಶೋಧಕ ಎ. ಸೆನೆಪೀಲ್ಡರ್(೧೭೭೧–೧೮೩೪). ತನ್ನ ಮ್ಯುನಿಚ್‌ನಲ್ಲಿನ ಸಂಶೋಧನಾ ಕೇಂದ್ರದಲ್ಲಿ ಇದನ್ನು ಸಾಧಿಸಿದ ಅವನ ಶೋಧನೆಗಳು ಎಷ್ಟು ಮೌಲಿಕವಾದದ್ದೆಂದರೆ ೧೫೦ ವರ್ಷಗಳ ನಂತರವು ಅವನು ಬರೆದ ಪುಸ್ತಕ ಆಕರ ಪಠ್ಯ ಗ್ರಂಥವಾಗಿದೆ. ಸೆನೆಪೀಲ್ಡರ್ ಈತ

---

೨೧. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : [illegible]
೨೨. ಅದೇ.

ಕಲಾವಿದನಾಗಿರಲಿಲ್ಲ. ಬಹು ಬೇಗ ಇಂವಗ್ರೆ ಗೋಯಾ, ಸೆಲಕ್ಮವ ನಂತರ ಕಲಾವಿದರು ಈ ಮಾಧ್ಯಮವನ್ನು ಅಳವಡಿಸಿಕೊಂಡರು. ರೇಖಾಚಿತ್ರಕ್ಕೆ ಹತ್ತಿರವಾಗಿರುವ ಪರಿಣಾಮಗಳು ಸಾಧ್ಯವಾಗುವ ಲಿಥೋಗ್ರಾಫಿ ಮಾನೆ, ಸ್ಯೂರಡೆಗಾಪನಂತಹ ಕಲಾವಿದರನ್ನು ಸೆಳೆಯಿತು. ಟೂಲೂಸ್ ಲಾತ್ರೆ ಆಕರ್ಷಕವಾದ ಬಣ್ಣದ ಪೋಸ್ಟರ್‌ಗಳನ್ನು ಸೃಷ್ಟಿಸಿದರೆ ಕಾತೆಕೋಲ್‌ಪಟ್ಟ ಗಾಢವಾದ ಕಪ್ಪು ಬಿಳುಪಿನ ಪ್ರಿಂಟ್‌ಗಳನ್ನು ರಚಿಸಿದರು.[೨೩]

ಇತ್ತೀಚಿನ ದಶಕಗಳಲ್ಲಿ ಡೆವಿಡ್ ಹಾಕ್ನೆ ಹಾಗೇ ಪೀಟರ್ ಬ್ಲೇಕರ್ ಕೃತಿಗಳು ಗಮನೀಯ. ಭಾರತೀಯ ಕಲಾವಿದರಾದ ಸೋಮನಾದಹೋರೆ, ಲಾಲೂ ಪ್ರಸಾದ ಷಾ, ಶಕ್ತಿ ಬರ್ಮನ್, ಮನ್ಸಾರಾಮ್ ಅವರ ಕೃತಿಗಳನ್ನು ಇಲ್ಲಿ ಹೆಸರಿಸಬಹುದು. ಲೀಥೋಗ್ರಾಫಿ ತಂತ್ರ ನೀರು ಮತ್ತು ಎಣ್ಣೆ ಮಿಶ್ರಣಗೊಳ್ಳಲಾರದು ಎಂಬ ತಂತ್ರವನ್ನು ಅನುಸರಿಸಿದ ವಿಧಾನವಿದು. ಈ ಮುದ್ರಣ ತಂತ್ರದಲ್ಲಿ ನೀರು ಮತ್ತು ಗ್ರೀಸ್‌ನ ನಡುವಣ ವೈರುಧ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತದೆ.

ಲೀಥೋದಲ್ಲಿ ವಿಶೇಷವೆಂದರೆ ಮುದ್ರಣವಾಗಬೇಕಾದ ಚಿತ್ರ ಹಾಗೂ ಮುದ್ರಣವಾಗದ ಇತರ ಭಾಗಗಳು ಸಹ ಒಂದೇ ಸಮತಲದಲ್ಲಿರುತ್ತವೆ. ಚಿತ್ರವನ್ನು ಗ್ರೀಸ್ ಅಂಶವಿರುವ ಕ್ರೇಯಾನ್ ಅಥವಾ ಇಂಕ್‌ನಿಂದ ರಚಿಸುವುದರಿಂದ ಅದು ಮುದ್ರಣದ ಶಾಹಿಯನ್ನು ಸಹಜವಾಗಿಯೇ ಆಕರ್ಷಿಸುತ್ತದೆ. ಮಿಕ್ಕಿದ ಭಾಗಗಳು ನೀರನ್ನು ಆಕರ್ಷಿಸುವುದರಿಂದ ಇಲ್ಲಿ ಇಂಕ್ ಕೂರುವುದಿಲ್ಲ. ಈ ವಿಧಾನವನ್ನು ಅನುಸರಿಸಿ ಮುದ್ರಣ ಯಂತ್ರದಲ್ಲಿ ಮುದ್ರಿಸುವುದು ಮುಂದಿನ ಕ್ರಮವಾಗಿರುತ್ತದೆ. ಲೀಥೋಗ್ರಾಫಿ ಎಂಬ ಎರಡು ತಂತ್ರಗಳು ವಿಧಾನಗಳಿವೆ. ಟ್ರಾನ್ಸ್‌ಫರ್ ಲೀಥೋಗ್ರಾಫಿ ಮತ್ತು ಫೋಟೋ ಲೀಥೋಗ್ರಾಫಿ ಎಂಬ ಎರಡು ತಂತ್ರಗಳು ಇಂದು ಪ್ರಚಲಿತದಲ್ಲಿವೆ.[೨೪]

ಲೀನೋಕಟ್

ವಿಶೇಷ ಕಾರ್ಕ್ ರೀತಿಯ ವಸ್ತುವಿನಿಂದ ತಯಾರಾದ್ದು ಲಿನೋಲಿಯಮ್. ವುಡ್‌ಕಟ್ ನಂತಹುದೇ ಪರಿಣಾಮವನ್ನು ಲೀನೋಕಟ್‌ನಲ್ಲಿ ಪಡೆಯಬಹುದು. ಲೀನೋದ ಮೇಲ್ಮೈಮೃದು ವಾಗಿದ್ದು ಕೆತ್ತನೆ ಸುಲಭ. ಆದರೆ ಉಪಕರಣವು ಚೂಪಾಗಿಲ್ಲದಿದ್ದರೆ ಒರಟಾದ ರೇಖೆಗಲು ಉಂಟಾಗುತ್ತವೆ. ಲೀನೋವನ್ನು ಕೆತ್ತುವ ಮುಂಚೆ ಪೈವುಡ್‌ಗೆ ಅಂಟಿಡುವುದು ವಾಡಿಕೆ. ಇದರಿಂದ ಬಹುವರ್ಣದ ಮುದ್ರಣ ತಂತ್ರವನ್ನೋ ಉಪಯೋಗಿಸಬಹುದು. ಹಡಪದರವರು ಕಲಾಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿ ಮಾಧ್ಯಮದ ಪ್ರಾತ್ಯಕ್ಷಿಕೆಯನ್ನು

---

೨೩. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರ್ಣ, ಪು-೫೪

೨೪. ಅದೇ.

ನೀಡುವ ವಾಡಿಕೆ ಅವರಲ್ಲಿದೆ. ಲೀನೋಕಟ್ ಮತ್ತು ರಚನಾ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ಹೇಳಿ ಕೊಡುವುದರ ಸಲುವಾಗಿ ಹಡಪದ ರಚಿಸಿದ ಎರಡು ಲೀನೋಕಟ್ ಮುದ್ರಣದ ಕಲಾಕೃತಿಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.[೨೫]

ಎಚ್ಚಿಂಗ್

೧೫ನೇಯ ಶತಮಾನದ ಮೊದಲಲ್ಲಿ ಅಲ್ಬ್‌ಟ್‌ಡೂಡರ್, ಆಲ್ಬ್‌ಟ್ ಆಲ್ ಡ್ರಾಫಿರ್ ಮೊದಲಾದರು ಈ ಪದ್ಧತಿಯಲ್ಲಿ ಚಿತ್ರರಚನೆ ಮಾಡಿದರು. ೧೭ನೇಯ ಶತಮಾನದ ವೇಳೆಗೆ ಈ ಮಾಧ್ಯಮ ಸಾಧ್ಯತೆಗಳು ಸಾಕಷ್ಟು ಹಿರಿದಾದವು. ರೆಂಬ್ರಾಂಡ್‌ನ್(೧೬೦೬-೧೬೬೯) ಅದ್ಭುತ್ ಎಚ್ಚಿಂಗ್‌ಗಳಲ್ಲಿ ಈ ಮಾಧ್ಯಮವು ತನ್ನ ಪ್ರೌಢವಸ್ಥೆಯನ್ನು ಪಡೆಯಿತು. ೧೮ನೇಯ ಶತಮಾನದಲ್ಲಿ ಗಿಯಾವಾಗಿ ಪೀಲಾನಿ ಪೀನೇಸ್(೧೭೨೦-೧೭೭೮) ಹಾಗೂ ಗೋಯನ್(೧೭೪೬-೧೮೨೮) ಅತ್ಯುತ್ಕಷ್ಟ ಕಲಾಕೃತಿಗಳಲ್ಲಿ ಎಚಿಂಗ್ ತುರಿಯಾವಸ್ಥೆಯನ್ನು ತಲುಪಿತು. ಹಡಪದರು ಇತರ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದಂತೆ ಇಲ್ಲಿಯೂ ಎಚಿಂಗ್ ಮಾಧ್ಯಮದಲ್ಲಿ ಹಲವಾರು ತಂತ್ರಗಳನ್ನು ಆಧರಿಸಿ ರಚಿಸಿದ ಆಯ್ದ ಕಲಾಕೃತಿಗಳನ್ನು ವಿವಿಧ ನೆಲೆಗಳಲ್ಲಿ ಕಾಣಬಹುದು.[೨೬]

ಮೋನೋ ಪ್ರಿಂಟ್

ಈ ಪ್ರಿಂಟ್ ಮಾಧ್ಯಮವು ತೀರ ಇತ್ತೀಚಿನದು. ಆದರೆ ಗ್ರಾಫಿಕ್ ಮಾಧ್ಯಮದ ಸಾಧ್ಯತೆಗಿಂತ ಈ ಮಾಧ್ಯಮದ ಸಾಧ್ಯತೆಗಳು ತೀರ ವಿಭಿನ್ನ. ಗ್ರಾಫಿಕ್‌ನ ಎಲ್ಲ ಮಾಧ್ಯಮಗಳನ್ನು ಒಂದು ರೀತಿಯ ಅಚ್ಚಿನ ಮುಖಾಂತರ ನೂರಾರು ಪ್ರತಿಗಳನ್ನು ತವಗೆಯಬಹುದಾದ ಸಾಧ್ಯತೆಗಳು ಇದ್ದರೆ, ಮೋನೋಪ್ರಿಂಟ್‌ನಲ್ಲಿ ಒಂದೇ ಒಂದು ಪ್ರತಿಯನ್ನು ತೆಗೆಯುವ ಸಾಧ್ಯತೆ ಇದೆ. ಇದು ಗಆಜಿನ ಮೇಲೆ ತೈಲವರ್ಣ, ಎನಾಮಲ್ ವರ್ಣಗಳನ್ನು ಹಾಕಿ ನಮಗೆ ಬೇಕಾದಂತೆ ಕುಂಚ ಅಥವಾ ಬೆರಳುಗಳಿಂದ ಚಿತ್ರ ರಚನೆಯನ್ನು ಮಾಡಿದ ನಂತರ ಅದರ ಮೇಲೆ ಕಾಗದವನ್ನು ಅಚ್ಚೊತ್ತಿದರೆ ತುಂಬ ಅನಿರೀಕ್ಷಿತ ಆಕಾರಗಳು ತಾರತಮ್ಯವಾದ ಛಾಯೆಗಳು ಮೂಡುತ್ತವೆ. ಇದು ಒಂದು ಪ್ರತಿಯನ್ನು ಮುದ್ರಿಸಿದ ನಂತರ ಗಾಜಿನ ಮೇಲೆ ಇದ್ದ ಮೊದಲಿನ ರಚನೆ ಕಾಗದದಲ್ಲಿ ಮುದ್ರಿತವಾಗುವುದರಿಂದ ಮೊದಲಿನ ರಚನೆಯಂತೆ ಇನ್ನೊಂದು ರಚನೆಯ ಪ್ರತಿಯನ್ನು ಪಡೆಯಲು ಆಗದು. ಈ ತಂತ್ರದಲ್ಲಿ ಹಡಪದರವರು ಸಾಕಷ್ಟು ಕಲಾಕೃತಿಗಳನ್ನು ರಚಿಸಿದ್ದಾರೆ.

ಪ್ರಿಂಟ್ ಮಾಧ್ಯಮವೆಂಬ ಸೃಜನಶೀಲ ಆಯಾಮ

ಪ್ರಿಂಟ್ ಮೇಕಿಂಗ್ ಅಥವಾ ಅಚ್ಚುಚಿತ್ರಕಲೆಯು ಸಂವೇದನಾಶೀಲ ಸೃಷ್ಟಿಕಾರರ ಮಾಧ್ಯಮವಾಗಿದೆ.೨೦ನೆಯ ಶತಮಾನದ ಮೊದಲ ಅವಧಿಯಲ್ಲಿ ನಮ್ಮಲ್ಲಿ ಈ ಪ್ರಕಾರವು

ಬೆಳೆದು ಬಂದಿತು. ವಿಶಿಷ್ಟ ಅಭಿವ್ಯಕ್ತಿಯ ಈ ಕಲಾ ಪ್ರಕಾರದಲ್ಲಿ ಪ್ರಾರಂಭದಲ್ಲಿ ಮರ ಅಥವಾ ರೇಷ್ಮೆಯೇ ಅಲ್ಲದೆ ಇನ್ನಿತರ ಬಟ್ಟೆಗಳ ಮೇಲೆ ಮುದ್ರಿಸಲಾಗುತ್ತಿತ್ತು. ನಮತರ ಕಾಗದದ ಬಳಕೆ ಆಯಿತು. ಪ್ರಾರಂಭದಲ್ಲಿ ಬಹುತೇಕ ಧಾರ್ಮಿಕ ಪಠ್ಯಚಿತ್ರಣಗಳಿಗೆ ಈ ಮಾಧ್ಯಮ ದುಡಿಸಿಕೊಳ್ಳಲ್ಪಡುತ್ತಿತ್ತು. ಮುದ್ರಿಸುವ ಕಲೆಯು ಸಾಂದರ್ಭಿಕ ಚಿತ್ರಪ್ರಕಾರವೇ ಅಲ್ಲೆ ಕಲಾವಿದರ ಅಭಿವ್ಯಕ್ತಿಗೆ ನೆರವಾಗಲು ಕಾರಣವಾದ ಸಂದರ್ಭಗಳು ಚೀನಾ, ಜಪಾನ್, ಭಾರತಗಳಲ್ಲಿ ಹಲವು ಕಾಲಗಳ ಅಂತರದಲ್ಲಿ ಬೆಳೆಯಿತು.[೨೭]

ಹಾಗೆ ನೋಡಿದರೆ ಇತಿಹಾಸಪೂರ್ವದ ಆದಿಮ ಕಲೆಯಲ್ಲಿ ಹಸ್ತ, ಬೆರಳುಗಳನ್ನು ಬಣ್ಣ ಅಥವಾ ಪ್ರಾಣಿಗಳ ರಕ್ತದಲ್ಲಿ ಅದ್ದಿ ಗುಹೆಅಥವಾ ಶಿಲಾಶ್ರಯದ ಶಿಲಾ ಭಿತ್ತಿಗಳ ಮೇಲ್ಮೈಯಲ್ಲಿ ಒತ್ತಿ ಹಸ್ತದ ಆಕಾರದಾಖಲಿಸುವ ಪರಂಪರೆ ವಿಶ್ವದ ಹಲವಡೆಇರುವಂತೆ ನಮ್ಮಲ್ಲಿಯೂ ಇದೆ. ರಾಯಚೂರು ಬಳಿಯ ಬೈಲ್‌ಮುರ್ಚೈಡ್‌ನ ಗುಡ್ಡದಲ್ಲಿ ರಕ್ತದಿಂದ ಒತ್ತಿ ಮೂಡಿಸಿರುವ ಹಸ್ತದ ಚಹರೆಗಳಿವೆ. ಸಿಂಧೂ ನದಿ ಕಣಿವೆಯ ನಾಗರೀಕತೆಯಲ್ಲಿ ಉಬ್ಬು ಹಾಗೂ ಇಳಿಗೆತ್ತನೆಗಳ ಅಚ್ಚುಗಳನ್ನು ನಾವು ಇಂದಿಗೂ ನಮ್ಮ ಮ್ಯೂಸಿಯಂಗಳಲ್ಲಿ ನೋಡಬಹುದಾಗಿದೆ. ನಮ್ಮ ಸಮಕಾಲೀನ ಮರಚ್ಚಿನ/*wood* ಛಿಣಾಣ ತಂತ್ರಕ್ಕೆ ಇವೆಲ್ಲ ಹಿನ್ನೆಲೆಗಳು ಇವೆ. ಕರಕುಶಲ ಕಲೆಯ ಪರಾಕಾಷ್ಠೆಯ ನಮ್ಮಲ್ಲಿ ಈ ಅಚ್ಚು ತಂತ್ರವೂ ಹಲವು ರೀತಿಗಳಲ್ಲಿ ಕಾಣಿಸಿಕೊಂಡಿತು. ಆನಂದ ಕುಮಾರಸ್ವಾಮಿಯವರ ಅಧ್ಯಯನದ ಅಂಶಗಳಲ್ಲಿ ವಂಶಪಾರಂಪರ್ಯದ ದೈವೀಕ ದೃಷ್ಟಿಯ ಹಿನ್ನೆಲೆಯೂ ದೊಡ್ಡ ರೀತಿಯಲ್ಲಿ ಕಾಣಿಸಿಕೊಂಡಿದೆ. ಕಾಲಾನಂತರ ಉಪಯುಕ್ತತೆಯ ಉದ್ದೇಶ ಮೀರಿ ಅಥವಾ ಅದರೊಟ್ಟಿಗೆ ಹಲವು ಇನ್ನಿತರ ಹಾದಿಗಳನ್ನೂ ಈ ತಂತ್ರ ಕಂಡುಕೊಂಡಿತು.[೨೮] ಸಾಮೂಹಿಕ ಸೃಷ್ಟಿಯ ಸಂದರ್ಭ ಮೀರಿ ವೈಯಕ್ತಿಕ ಉದೇಶ ಸಾಧಿಸಿದ ಸಂದರ್ಭವೂ ಬಂದಿತ.

೨೦೧೫ರ ಸಂದರ್ಭದಲ್ಲಿ ನಮ್ಮಲ್ಲಿ ಪ್ರಿಂಟ್ ಮಾಧ್ಯಮವು ತನ್ನ ಸಾಂಪ್ರದಾಯಿಕ ಉದ್ದೇಶವೇ ಅಲ್ಲದೆ ದೃಶ್ಯ ಕಲಾವಿದ/ಕಲಾವಿದರ ಅಭಿವ್ಯಕ್ತಿಗೂ ದುಡಿಸಿಕೊಳ್ಳಲ್ಪಡುತ್ತಿದೆ. ಈ ಬೆಳವಣಿಗೆಗೆ ಮೊದಲ ಕಂಪನಿ ಚಿತ್ರಕಾರರು ದಾಖಲಿಸುವ (*documentation*) ದೃಷ್ಟಿಯಿಂದ ೧೮ನೆಯ ಶತಮಾನದ ಅಂತ್ಯ ಹಾಗೂ ೧೯ನೆಯ ಶತಮಾನದ ಮೊದಲ ದಶಕಗಳ ನಡುವೆ ನಮ್ಮಲ್ಲಿ ಪ್ರಿಂಡ್ ಮಧ್ಯಮವನ್ನು ಬಳಸಿಕೊಂಡರು.[೨೯]

---

೨೭. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪು-೧೨೬

೨೮. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರ್ಣ. ಪು-[illegible]

೨೯. ಅದೇ.



ಮೈಸೂರು ಮತ್ತು ಬರ್ಮಾಗಳ ಹಲವು ಸಂಗತಿ ಪರಿಕರಗಳೇ ಅಲ್ಲದೆ ಭೂದೃಶ್ಯಗಳನ್ನು ಚಿತ್ರಿಸುವ ಉದ್ದೇಶಕ್ಕೆಂದೇ ನಿಯಮಿಸಲ್ಪಟ್ಟಿದ್ದ ಕಲಾವಿದರೂ ಇದ್ದರು. ಅಂತರ ಜತೆಜತೆಗೇ ಇಡೀ ದೇಶದಲ್ಲಿ ಥಾಮಸ್ ಮತ್ತು ವಿಲಿಯಂ ಡೇನಿಯಲ್, ಹಡ್ಸನ್, ಬೈಲಿ ಮೊದಲಾದವರು ಈ ದಾಖಲಿಸುವ ಯದ್ದೇಶಿತ ಚಿತ್ರಿಸುವಿಕೆಯಲ್ಲಿ ತೊಡಗಿದ್ದರು. ಕ್ಯಾಮರಾ ಇಲ್ಲದ ಸಂದರ್ಭ/ಕಾರಣಕ್ಕಾಗಿ ಚಿತ್ರಿಸುವುಕೆ, ಪ್ರಿಂಟ್ ಮಾಧ್ಯಮದ ಹಲವು ತಂತ್ರಗಳ ಬಳಕೆ ಕಂಡಿತು. ಬಹುತೇಕ ಎಚ್ಚಿಂಗ್ ಮತ್ತು ಎನ್‌ಗ್ರೇವಿಂಗ್ ತಂತ್ರಗಳಲ್ಲಿ ಆ ಪರಂಪರೆಯ ಸ್ಮೃತಿಯಿಂದ ಮರವನ್ನೂ ಕೆತ್ತಿ, ಕೊರೆದು, ಕಲ್ಲಿನ ಮೇಲೆ ಚಿತ್ರಿಸಿ ಅಚ್ಚಿಸುವ ಅನಿವಾರ್ಯತೆಗಳೂ, ಅಗತ್ಯಗಳೂ ಉಂಟಾದವು. ಬ್ರಿಟಿಷ್ ಕಲಾಶಾಲೆಗಳಲ್ಲಿ ಅಂದರೆ ಲಾಹೋರ್, ಕೋಲ್ಕತ್ತ, ಮುಂಬಯಿ, ಮದರಾಸು ಹಾಗೂ ವಿಶಾಖಪಟ್ಟಣಗಳ ಕಲಾಶಾಲೆಗಳಲ್ಲಿ ಪ್ರಿಂಟ್ ಮೇಕಿಂಗ್‌ನ ಹಲವು ತಂತ್ರಗಳನ್ನು ಕಲ್ಪಿಸಲಾಗುತ್ತಿತ್ತು. ಹಾಗಾಗಿ ಮರ ಮತ್ತು ಶಿಲೆಗಳ ಫಲಕಗಳ ಮೇಲ್ಮೈಯಲ್ಲಿ ಅಭಿವ್ಯಕ್ತಿಸುವ ಅವಕಾಶ, ಸಂದರ್ಭ ಸೃಷ್ಟಿಯಾಯಿತು.[೩೦]

ಕೋಲ್ಕತ್ತೆಯಲ್ಲಿ ಸುಮಾರು ೧೮೧೮ರಲ್ಲಿ ಮೊದಲ ಮುದ್ರಣ ಯಂತ್ರ ಸ್ಥಾಪಿಸಲ್ಪಟ್ಟಿತು. ೧೮೭೦ರ ನಂತರವು ಮುಂಬಯಿ, ಪೂನಾ, ಲಕ್ನೋ, ಕಾನ್ಪುರ, ಮೈಸೂರು, ಲಾಹೋರ್‌ಗಳಲ್ಲಿ ಲಿಥೋಗ್ರಫಿ ಪ್ರಿಂಟ್ ಮೂಲದ ಪ್ರೆಸ್‌ಗಳು ಪ್ರಾರಂಭವಾದವು. ಆಗಿನ ಬೊಂಬಾಯಿಯ ರವಿವರ್ಮ ಪ್ರೆಸ್ ಯಾರಿಗೆ ಗೊತ್ತಿಲ್ಲ! ರವಿವರ್ಮನ ಲಿಥೋಪ್ರಿಂಟ್‌ಗಳ ದೈವೀಕ ದೃಶ್ಯಲೋಕದ ಕ್ರಾಂತೀಯ ನಂತರ ಹಲವು ಬೆಳವಣಿಗೆಗಳು ನಡೆದವು. ರವೀಂದ್ರನಾಥ ಠಾಕೂರ್‌ರ ಸಂದಭ.ಅವರ ಆಸಕ್ತಿಯ ಫಲವಾಗಿ ೧೯೨೨ರಲ್ಲಿ ಜರ್ಮನ್ ಎಕ್ಸ್‌ಪ್ರೆಷನಿಸ್ಟ್ ಚಳುವಳಿಯ ೫೫ ಗ್ರಾಫಿಕ್‌ಪ್ರಿಂಟ್‌ಗಳ ಪ್ರದರ್ಶನ ಕೊಲ್ಕತ್ತೆಯಲ್ಲಿ ನಡೆಯಿತು.[೩೧]

ಶಾಂತಿನಿಕೇತನದ ಕಲಾಭವನವು ಪೌರ್ವಾತ್ಯ ದೃಷ್ಟಿಕೋನವನ್ನು ವಿಸ್ತರಿಸಲು ಸ್ಥಳೀಯ ಅಚ್ಚು ಚಿತ್ರಕಲಾ ಪ್ರಕಾರವನ್ನು ಗಣನೀಯವಾಗಿ ಬಳಸಿಕೊಂಡಿತು. ಮರ ಹಾಗೂ ಲೀನೋ ಮಾಧ್ಯಮಗಳಲ್ಲಿ ಪ್ರಿಂಟ್ ಪಡೆಯಲಾಯಿತು. ಪ್ರಿಂಟ್ ಮಾಧ್ಯಮದ ಹಲವು ತಂತ್ರಗಳನ್ನು ಸೃಜನಶೀಲ ಅಭಿವ್ಯಕ್ತಿಗಾಗಿ ನಮ್ಮಲ್ಲಿ ಮೊದಲ ಬಾರಿಗೆ ದುಡಿಸಿಕೊಳ್ಳಲಾಯಿತು. ಹಲವು ವಿದೇಶೀಕಲಾವಿದರು ಬಂದು ಸೃಷ್ಟಿ ಪ್ರದರ್ಶಿಸಿ ಹೋದಂತೆ ಜಪಾನಿನ ಆನಂದ ಕುಮಾರಸ್ವಾಮಿಯವರ ಸ್ನೇಹಿತ ಒಕಾಕರ ಸಹ ಬಂದು ಹೋದರು. ಬಂಗಾಳದ ಪುನರುಜ್ಜೀವನ ಚಳುವಳಿಯ ಕಲಾವಿದರು ಪ್ರಿಂಟ್ ಮಾಧ್ಯಮವನ್ನು ತಮ್ಮಿಷ್ಟದಂತೆ ಬಳಸಿಕೊಂಡರು.[೩೨]

---

೩೦. ಡಾ. ಮಲ್ಲಿಕಾರ್ಜುನ ಶಿ. ಬಾಗೋಡಿ : ಚಿತ್ರಾವರ್ಣ, ಪು-೫೫

೩೧. ಅದೇ.

೩೨. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾಸೃಷ್ಟಿಕ ಆರ್.ಎಂ. ಹಡಪದ, ಪು-೨೦೦

ನಮ್ಮ ಚಿತ್ರಕಲೆಯು ಸಮಕಾಲೀನ ಸಂವೇದನೆಯ ಸೃಜನಶೀಲ ಆಯಾಮವನ್ನು ೧೯೬೦ರ ದಶಕದಲ್ಲಿ ಪಡೆದುಕೊಂಡರೆ ಪ್ರಿಂಟ್ ಮಾಧ್ಯಮ ಈ ಸಾಧ್ಯತೆಗಾಗಿ ಮತ್ತೊಂದು ದಶಕದವರೆಗೆ ಕಾಯಬೇಕಾಯಿತು. ೬೦ರ ದಶಕದಲ್ಲಿ ರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಕೆಲವು ಪ್ರಿಂಟ್‌ಗಳಾದರೂ ಕಾಣಿಸಿಕೊಳ್ಳಲಾರಂಬಿಸಿದ್ದು ಹಲವರಿಗೆ ಆಶಾದಾಯಕವಾಗಿ ಕಂಡಿತ್ತು. ಆದರೆ ಈ ಪ್ರಿಂಟ್ ಮಾಧ್ಯಮವನ್ನು ದುಡಿಸಿಕೊಂಡ ಕಲಾವಿದರ, ಹೊಸಬರೇನಲ್ಲ. ಆ ಕಾಲಕ್ಕೆ ಚಿತ್ರ, ಶಿಲ್ಪಗಳಲ್ಲಿ ಸಮಕಾಲೀನತೆಯನ್ನು ಸಾಧಿಸದ್ದವರೇ ಎಂಬುದು ಗಮನಾರ್ಹ.

ಅಭಿವ್ಯಕ್ತಿಗಾಗಿ ಮಾಧ್ಯಮವನ್ನು ದುಡಿಸಿಕೊಂಡವರು ಅವರಲ್ಲ: ಪ್ರಿಂಟ್ ಮಾಧ್ಯಮಕ್ಕಾಗಿ ಅಭಿವ್ಯಕ್ತಿಸಿದವರು ಅವರ. ಬಾರತೀಯ ಪ್ರಿಂಟ್ ಮಾಧ್ಯಮದ ಇತಿಹಾಸ ಸಾಕಷ್ಟು ಶ್ರೀಮಂತ. ಜಪಾನ್, ಚೀನಾಗಳ ಉಡ್‌ಕಟ್‌ಗಳು ಪಶ್ಚಿಮದ ಕಲಾವಿದರನ್ನು ಬೆರಗುಗೊಳಿಸಿದ ಹೆಗ್ಗಳಿಕೆಯನ್ನು ಹೊಂದಿವೆ. ಆ ಹಾದಿಯಲ್ಲಿ ಬಂಗಾಳದ ಪುನರುಜ್ಜೀವನದ ಕಲಾವಿದರು ನಡೆದದ್ದುಂಟು. ಆನಮತರದ ಬೆಳವಣಿಗೆ ಪುನಃ ಪಶ್ಚಿಮದ ಪ್ರಭಾವದ್ದೆ. ಕರ್ನಾಟಕದ ಠಿಡಿಟಣ ಟಚಿಇಟಿಂ ಅಥವಾ ಗ್ರಾಫಿಕ್ ಕಲೆಯ ಇತಿಹಾಸ ಮೈಸೂರು ಅರಸರ ಕಾಲಕ್ಕೂ ಹಾದು ಹೋಗಿದೆ. ಅವರು ಕಲೆಗೆ ನೀಡುತ್ತಿದ್ದ ಪ್ರೋತ್ಸಾಹ ಎಲ್ಲ ಹೊಸತನಗಳಿಗೂ ಕಾರಣವಾಯಿತು. ಬ್ರಿಟಿಷ್ ಆಳ್ವಿಕೆ ನೆರಳು, ಬ್ರಿಟನ್ನಿನ ಹಲವು ಕಲಾವಿದರ ಎಚ್ಚಿಂಗ್ ಪ್ರಿಂಟ್‌ಗಳು ಮೈಸೂರಿನಲ್ಲಿ ಕಾಣಿಸಿಕೊಂಡವು.

ಟಿಪ್ಪುಸುಲ್ತಾನನ ಆಳ್ವಿಕೆಯ ಮತರ ಮೈಸೂರು ಬ್ರಿಷರಿಗೆ ಆಪ್ತವಾಗಿದ್ದ ನಗರವಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ(೧೭೯೪–೧೮೬೫) ಲಿಥೋಗ್ರಾಫ್ ಮಾಧ್ಯಮದಲ್ಲಿ ಚಿತ್ರಗಳನ್ನು ಮಾಧ್ಯಮದಲ್ಲಿ ಚಿತ್ರಗಳನ್ನು ಪ್ರಿಂಟ್ ಮಾಡುವುದು ಅತ್ಯಂತ ಪರಿಚಯವಾದ ಹವ್ಯಾಸವಾಗಿತ್ತು. ಆ ಸಂದರ್ಭದ ಬಹುತೇಕ ಸಾಹಿತ್ಯ ಪ್ರಕಟಣೆಗಳಲ್ಲಿ ಕಲ್ಲಚ್ಚಿನ ಚಿತ್ರಗಳು ಸಾಂದರ್ಭಿಕವಾಗಿ ಕಾಣಿಸಿಕೊಂಡವು. ಭಗವದ್ಗೀತೆಯ ೧೮ ಅಧ್ಯಾಯಗಳು, ಶ್ರೀತತ್ವನಿಧಿ, ಸ್ವರಚೂಡಾಮಣಿ, ದೇವತಾ ನಾಮ ಕುಸುಮ ಮಂಜರಿ ಮೊದಲಾದವನ್ನು ಉಲ್ಲೇಖಿಸಬಹುದು. ‘ಶಿವಗೀತೆ’ಯ ಹಲವು ಅಧ್ಯಾಯಗಳಲ್ಲಿಯೂ ಕಲ್ಲಚ್ಚಿನ ಚಿತ್ರಗಳಿವೆ. ಈ ಸಾಲಿಗೆ ‘ಶಿವರೂಪ ದರ್ಶನ’ವನ್ನು ಸೇರಿಸಬಹುದು.

ಕಾಲಾನಂತರ ದೇಶದ ಹಲವು ಭಾಗಗಳಲ್ಲಿ ಕಾಣಿಸಿಕೊಂಡಂತೆ ರಾಜರವಿವರ್ಮನ ಓಲಿಯೋಗ್ರಾಫ್ (*oleograph*) ಪ್ರಿಂಟ್‌ಗಳೂ ನಮ್ಮಲ್ಲಿ ಕಾಣಿಸಿಕೊಂಡವು. ಪ್ರಿಂಟ್ ಮಾಧ್ಯಮಕ್ಕೆ ದೊಡ್ಡ ರೀತಿಯ ಉಡುಗೊರೆಯಂತೆ ೧೯೧೨ರಲ್ಲಿ ಶಾಂತಿನಿಕೇತನದ ಕಲಾಭವನ ಆರಂಭವಾದದ್ದು.

೧೯೨೨ರಲ್ಲಿ ರವೀಂದ್ರನಾಥ ಠಾಕೂರರ ಪ್ರಯತ್ನದಿಂದ ಜರ್ಮನ್ ಎಕ್ಸ್‌ಪ್ರೆಷನಿಸ್ಟ್ ಚಳುವಳಿ ಪ್ರದರ್ಶಿಸಲ್ಪಟ್ಟಿದ್ದು, ೧೯೫೦ರಲ್ಲಿ ನಮ್ಮ ನೆರೆರಾಜ್ಯದ ಮದರಾಸು ಕಲಾಶಾಲೆಯಲ್ಲಿ ದೇವಿಪ್ರಸಾದ್‌ರಾಯ್ ಚೌಧರಿ, ಕೆ.ಸಿ.ಎಸ್. ಪಣಿಕ್ಕರ್‌ರಂತವರು ಪ್ರಿಂಟ್ ಮಾಧ್ಯಮವನ್ನು ದುಡಿಸಿಕೊಳ್ಳುವಲ್ಲಿ ಪ್ರೇರಣೆ ನೀಡಿವೆ. ನಮ್ಮಲ್ಲೂ ಸಿ. ಚಂದ್ರಶೇಖರ್, ಚಂದ್ರನಾಥ ಆಚಾರ್ಯ, ಶಾಮ್‌ಸುಂದರ್‌ರವರುಗಳು ಶಾಂತಿನಿಕೇತನದಿಂದ, ಯೂಸೂಫ್ ಆರಕ್ಕಲ್ (೧೯೮೦ರಲ್ಲಿ) ದೆಹಲಿಯ ಘರ ಸ್ಟುಡಿಯೋದಿಂದ ಪ್ರಿಂಟ್ ಮಾಧ್ಯಮವನ್ನು ಕಲಿತು ಬಂದು ಆಚ್ಚರಿಗೊಳಿಸುವ ಪ್ರಿಂಟ್‌ಗಳನ್ನು ಪ್ರದರ್ಶಿಸಿದ್ದುಂಟು.[೩೩]

ಸಿ. ಚಂದ್ರಶೇಖರ್ ಸ್ಕ್ರೀನ್ ಪ್ರಿಂಟ್ ತಂತ್ರದಲ್ಲಿ ಅಭಿವ್ಯಕ್ತಿಸಿದ ಅನನ್ಯತೆ, ***ಜೆ.ಎಂ.ಎಸ್. ಮಣಿ, ಯೂಸೂಫ್ ಆರಕ್ಕಲ್, ಪ.ಸ. ಕುಮಾರ್ ಹಾಗೂ ಚಂದ್ರನಾಥ್‌ರವರುಗಳು*** ಎಚ್ಚಿಂಗ್ ತಮತ್ರವನ್ನು ದುಡಿಸಿಕೊಂಡ ಸ್ವೋಪಜ್ಞತೆ ಅಪೂರ್ವ. ಕರ್ನಾಟಕದ ಪ್ರಿಂಟ್ ಮಾಧ್ಯಮದ ಸಮಕಾಲೀನ ಇತಿಹಾಸಕಕೆ ಹಲವು ಮುಖ್ಯ ಪುಟಗಳನ್ನು ಇವರುಗಳು ಸೇರಿಸಿದರು. ಈ ಹಿಂದೆ ಪ್ರಿಂಟ್ ಮಾಧ್ಯಮದ ಬಗ್ಗೆ ಇದ್ದ ಅಸಡ್ಡೆ ದೂರವಾಗಿದೆ. ಕಲಾವಿದರ identityಯನ್ನು ಈ ಮಾಧ್ಯಮದಲ್ಲಿ ಸಾಧಿಸಲಾಗುವ ಪ್ರಯತ್ನಗಳಾಗಿವೆ. ಅಭಿವ್ಯಕ್ತಿಗೆ ಪೂರಕವಾಗುವಂತಾದಾಗಲೆಲ್ಲ ಪ್ರಿಂಟ್ ಮಾಧ್ಯಮವನ್ನು ಅರಸಿ ಹೊರಡುವ ಕಲಾವಿದರನ್ನು ಅಪರೂಪಕ್ಕಾದರೂ ಕಂಡಿದ್ದೇವೆ. ಪ್ರಿಂಟ್ ಮಾಧ್ಯಮದ ಸ್ಟುಡಿಯೋಗಳ, ತಾಂತ್ರಿಕ ಪರಿಕರಗಳ ಅಭಾವದ ಕಾರಣದಿಂದ ಪ್ರಿಂಟ್ ಮಾಧ್ಯಮವನ್ನು ಕಲಿತು ಬಂದ ಹಲವರು ಪುನಃ ತಮ್ಮ ಹಿಂದಿನ ಅಭಿವ್ಯಕ್ತಿ ಮಾಧ್ಯಮ ಚಿತ್ರ ಶಿಲ್ಪಗಳಿಗೆ ಹಿಂತಿರುಗಿದ್ದುಂಟು. ಹಾಗೆ ನೋಡಿದರೆ ೨೦೧೫ರ ಸಂದರ್ಭದಲ್ಲಿ ನಮ್ಮಲ್ಲಿ ಪ್ರಿಂಟ್ ಮಾಧ್ಯಮವೊಂದನ್ನೇ ಸಂಪೂರ್ಣವಾಗಿ ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡಿರುವ ಒಬ್ಬ ಕಲಾವಿದನೂ ಇರಲಿಲ್ಲ. ರಾಷ್ಟ್ರೀಯ ಮಟ್ಟದಲ್ಲೂ ಒಬ್ಬಿಬ್ಬರನ್ನು ಹೊರೆತುಪಡಿಸಿದರೆ ಅಲ್ಲೂ ಇದೇ ಸ್ಥಿತಿ. ಬಹುಶಃ ಗ್ಯಾಲರಿ ಮತ್ತು ಕೊಳ್ಳುವವರ ಗಮನ ಈ ಮಾಧ್ಯಮದತ್ತ ಇಲ್ಲದಿರುವುದು ಬಹುಮುಖ್ಯ ಕಾರಣ.[೩೪]

ಕಲೆ ಕಮಾಡಿಟಿಯಾಗಿ ತೈಲರ್ಣ ಕೃತಿಗಳಿಗೆ ಹೆಚ್ಚಿನ ಬೇಡಿಕೆಯಿರುವ ಪರಿಸ್ಥಿಯಲ್ಲೂ ತಮ್ಮ ಅಭಿವ್ಯಕ್ತಿಗೆ ಈ ಮಾಧ್ಯಮನ್ನು ದುಡಿಸಿಕೊಳ್ಳುವ ಕಲಾವಿದರನ್ನು ಪ್ರೋತ್ಸಾಹಿಸುವ, ಮಾಧ್ಯಮವನ್ನು ಉಳಿಸುವ, ಅದರ ಸಾಧ್ಯತೆಗಳನ್ನು ಹಲವು ಮಿತಿಗಳ ನಡುವೆಯೂ ಯಶಸ್ವಿಯಾಗಿ ನೆರವಾಗಿಸಿಕೊಳ್ಳುವ ಪ್ರಿಂಟ್‌ಗಳಿಗೆ ಕಾರಣವಾಗುವ ದೂರದೃಷ್ಟಿಯಿಂದ ರಾಷ್ಟ್ರದ ಹಲವೆಡೆಯಂತೆ

೩೩. ಡಾ. ಮಲ್ಲಿಕಾರ್ಜುನ ಹಿ. ಬಾಗೋಡಿ : ಲೇಖಾವರ್ಣ, ಪು-೫೫
೩೪. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ : ಕಲಾನ್ವೇಷಕ ಆರ್.ಎಂ. ಹಡಪದ, ಪು-೨೦೦

ಕರ್ನಾಟದಲ್ಲೂ ಪ್ರಿಂಟ್ ಮಾಧ್ಯಮದ ಸ್ಟುಡಿಯೋಗಳು ಹಲವೆಡೆ ಪ್ರಾರಂಭವಾದವು. ಜೊತೆಗೆ ಬರೋಡಾ ಕಲಾಶಾಲೆ, ನವದೆಹಲಿಯ ಘರಿ(*Garhi*) ಸ್ಟುಡಿಯೋ, ಭೂಪಾಲದ ಭಾರತ ಭವನ್, ಮದರಾಸಿನ ಕೇಂದ್ರ ಲಲಿತಕಲಾ ಅಕಾಡೆಮಿ ಗ್ರಾಫಿಕ್ ಸ್ಟುಡಿಯೋಗಳಲ್ಲಿ ನಮ್ಮ ಹಲವು ಪ್ರತಿಭಾನ್ವಿತರು ಪ್ರಿಂಟ್ ಮಾಧ್ಯಮದ ಹಲವು ತಂತ್ರಗಳನ್ನು ಕಲಿತು ಬಂದಿದ್ದಾರೆ. ಈಗಾಗ ಬರಹದಲ್ಲಿ ಉಲ್ಲೇಖಿಸಿರುವ ನಾಲ್ವರು ಜೊತೆ ವಿಸ್ವಂಬರ್, ಚಿ.ಸು. ಕೃಷ್ಣಸೆಟ್ಟಿ, ಸುನಿಲ್ ಮಹಮದಾಪುರ್, ಕೆ.ಆರ್. ಸುಬ್ಬಣ್ಣ, ಜಿ. ಜಯಕುಮಾರ್, ವಿಜಯ ಬಾಗೋಡಿ, ರಾಜಶೇಖರ್, ಶ್ರೀನಿವಾಸಾಚಾರ್ಯ, ಎಚ್.ಎಸ್. ವೇಣುಗೋಪಾಲ್, ವಿ.ಆರ್.ಸಿ..ಶೇಖರ್, ವಿ.ಜಿ. ವೇಣುಗೋಪಾಲ್, ಅರ್ಚನಾ ಹಂಡೆ, ವೈ. ಜೆ. ಚಂದ್ರಹಾಸ್, ಶಶಿಧರ ಎಂ, ಲೋಹಾರ್ ಮೊದಲಾದವರನ್ನಿಲ್ಲಿ ಹೆಸರಿಸಬಹುದು. ಹಿರಿಯ ಕಲಾವಿದರಲ್ಲಿ ಕೆ.ಟಿ. ಶಿವಪ್ರಸಾದ್, ಜಿ.ಎಂ. ಎಸ್. ಮಣಿ, ಬಿ. ಜಯರಾಮ್, ಬಿ.ವಿ.ಸುರೇಶ, ಮೈಸೂರಿನ ಆರ್. ರಾಜಾ ಮೊದಲಾದವರು ಆಗಾಗ ಈ ಮಾಧ್ಯಮವನ್ನು ಅರಸಿ ಹೋಗುತ್ತಿದ್ದರು. ಈ ಎಲ್ಲದರ ನಡುವೆ ಕೆ.ಕೆ.ಹೆಬ್ಬಾರರೂ ತಮ್ಮ ವಿದೇಶಗಳ ಪ್ರವಾಸ ಹಾಗೂ ಕಲೆಯನ್ನು ಕಲಿಯುವ ಸಂದರ್ಭಗಳಲ್ಲಿ ಪ್ರಿಂಟ್ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದ್ದಾರೆ. ಬಹುತೇಕ ಅವೆಲ್ಲ ರೇಖಾಪ್ರಧಾನವಾದುವೇ ಆಗಿವೆ. ಭೂಪಾಲ್‌ನ ಭಾರತಭವನದ ಅಂತರಾಷ್ಟ್ರೀಯ ಪ್ರಿಂಟ್ಸ್ ಬೈನಾಲೆಯಲ್ಲಿ ಪುಷ್ಪಮಾಲಾ ಅವರದೇ ಅಲ್ಲದೆ ಇನ್ನೂ ಹಲವರ ಪ್ರಿಂಟ್‌ಗಳು ಪ್ರದರ್ಶಿಸಲ್ಪಟ್ಟಿವೆ.[೨೫]

೨೦೧೫ರ ಸಂದರ್ಭದಲ್ಲಿ ಹಲವಾರು ಕಲಾವಿದರು ಪ್ರಿಂಟ್ ಮಾಧ್ಯಮವನ್ನು ಅಭಿವ್ಯಕ್ತಿಗೆ ದುಡಿಸಿಕೊಳ್ಳುತ್ತಿದ್ದದಕ್ಕೆ ಕಾರಣ ರಾಜ್ಯದ ಹಲವು ಕಲಾಶಾಲೆಗಳಲ್ಲಿ ಗ್ರಾಫಿಕ್ ಪರಿಕರಗಳು ಸ್ಥಾಪನೆಯಾಗಿರುವುದು; ಜೊತೆಗೆ ಹಲವು ಪ್ರಮುಖ ಪ್ರಿಂಟ್ ಪ್ರದರ್ಶನ, ಸೆಮಿನಾರು, ಕಾರ್ಯಾಗಾರಗಳು ನಮ್ಮ ಯುವಜನತೆಯನ್ನು ಈ ಮಾಧ್ಯಮದತ್ತ ಆಕರ್ಷಿಸಿವೆ. ಕರ್ನಾಟಕ ಚಿತ್ರಕಲಾಪರಿಷತ್ತು, ಕೆನ್‌ಕಲಾಶಾಲೆ, ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟ್, ಕಲಬುರ್ಗಿ, ಮೈಸೂರಿನಅಂಗಿಂಗಳಲ್ಲಿ ಪ್ರಿಂಟ್ ತೆಗೆಯುವ ಸ್ಟುಡಿಯೋಗಳಿವೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಲಲಿತಕಲಾ ಅಕಾಡೆಮಿಯ ಗ್ರಾಫಿಕ್ ಸ್ಟುಡಿಯೋ ಇದೆ. ೧೯೮೧ರಲ್ಲಿ ಕರ್ನಾಟಕದ ಸಮಕಾಲೀನ ಕಲಾವಿದರ ಸಂಸ್ಥೆ 'ಸಂಯೋಜಿತಾ' ರಾಷ್ಟ್ರೀಯ ಮಟ್ಟದ ಪ್ರಿಂಟ್ ರದರ್ಶನವನ್ನು ವೆಂಕಟಪ್ಪ ಗ್ಯಾಲರಿಯಲ್ಲಿ ವ್ಯವಸ್ಥೆಮಾಡಿತ್ತು. ಪ್ರದರ್ಶಿತವಾಗಿದ್ದ ೭೦ ಪ್ರಿಂಟ್‌ಗಳಲ್ಲಿ ಕೆ.ಜಿ.ಸುಬ್ರಮಣಿಯನ್, ಲಲ್ಲೂಪ್ರಸಾದ್ ಷಾ ಮತ್ತು ಜೆ ರಾಮ್ ಪಟೇಲ್‌ರಂತವರ ಪ್ರಿಂಟ್‌ಗಳು ಹಲವರನ್ನು ಪ್ರಾಭಾವಿಸಿದವು. ೧೯೮೪ರಲ್ಲಿ ಡಾ॥ ಕೃಷ್ಣಾರೆಡ್ಡಿಯವರ ನಿರ್ದೇಶನದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆಶ್ರಯದಲ್ಲಿ ಗ್ರಾಫಿಕ್ ಕಾರ್ಯಾಗಾರದಲ್ಲಿದ್ದರು.[೨೬]

೨೫. ಡಾ. ಮಲ್ಲಿಕಾರ್ಜುನ ಶಿ. ಬಾಗೋಡಿ : ರೇಖಾಪರ್ವ. ಪು-[illegible]
೨೬. ಅದೇ.

೧೯೮೫ರಲ್ಲಿ ದೇವರಾಜ್‌ರ ನಿರ್ದೇಶನದಲ್ಲಿ ಚಿತ್ರಕಲಾ ಪರಿಚತ್ತಿನ ಸ್ಟುಡಿಯೊಗಳಲ್ಲಿ ಮತ್ತೊಮದು ಕಾರ್ಯಾಗಾರ ನಡೆಯಿತು. ಹಲವು ಹಿರಿಯ ಕಲಾವಿದರು ಅವರಿಂದ ಹಲವು ತಂತ್ರಗಳನ್ನು ಕಲಿತರು. "Henry Moore in India" ರದರ್ಶನದ ಅಂಗವಾಗಿ ೧೯೮೮ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ರಾಫಿಕ್ ಸ್ಟುಡಿಯೋಗಳಲ್ಲಿ ಬ್ರಿಟನ್ನಿನ ಖ್ಯಾತ ಪ್ರಿಂಟ್‌ಮೇಕರ್‌ಗಳಾದ ಜೇಮ್ಸ್ ಕೊಲೆಯಾರ್ ಮತ್ತು ಜಾನ್ ಕ್ರಾಸ್ ಡೆರವರುಗಳ (ಈ ಇಬ್ಬರು ಪ್ರಿಂಟ್ ಮೇಕರ್‌ಗಳು ಹೆನ್ರಿಮೂರ್‌ರಿಗೆ ಪ್ರಿಂಟ್ ತೆಗೆಯುವಲ್ಲಿ ನೆರವಾಗುತ್ತಿದ್ದರು.) ನಿರ್ದೇಶನದಲ್ಲಿ ಬ್ರಿಟಿಷ್ ಕೌನ್ಸಿಲ್ ಆಶ್ರಯದಲ್ಲಿ ಕಾರ್ಯಾಗಾರವೊಂದರಲ್ಲಿ ನಡೆತತು. ೨೦೦೭ ಅಧಿವೇಶನ ಸಂದರ್ಭದ ಗ್ರಾಫಿಕ್ ಕಾರ್ಯಾಗಾರವೊಂದರಲ್ಲಿ ಕೆ.ಕೆ. ಹೆಬ್ಬಾರ್ ಕನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ವಿಶಿಷ್ಟ ಯಕ್ಷಗಾನನದ ಪಾತ್ರವೊಂದನ್ನು ಎಚ್ಚಿಂಗ್ ತಂತ್ರದಲ್ಲಿ ಸೃಷ್ಟಿಸಿದರು.[೩೨]

ಕಲಾವಿದ ಸಿ ಚಂದ್ರಶೇಖರ ಅವರ ಗ್ರಾಫಿಕ್ ಕಲಾಕೃತಿಗಳು

೪.೧. ಎಚ್ಚಿಂಗ್ ಮಾಧ್ಯಮದ ಕಲಾಕೃತಿಗಳು

ಕಲಾವಿದ ಸಿ.ಚಂದ್ರಶೇಖರವರು ವಿವಿಧ ಮಾಧ್ಯಮದಲ್ಲಿ ಹಲವಾರು ವಿಷಯಗಳನ್ನು ಆಯ್ಕೆ ಮಾಡಿಕೊಂಡು ಶ್ರೇಷ್ಠವಾದ ಕಲಾಕೃತಿಗಳನ್ನು ರಚಿಸಿರುವರು. ಅವುಗಳಲ್ಲಿ ಒಂದಾದ ಎಚ್ಚಿಂಗ್ ಮಾಧ್ಯಮದ ಸರಣಿ ಚಿತ್ರಗಳು ವಿಶಿಷ್ಟವೆನಿಸುತ್ತಿವೆ.

ಚಿತ್ರ–೦೧.

೧೯೭೯ರಲ್ಲಿ ರಚಿಸಲಾಗಿದ್ದು, ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಕಪ್ಪು ಶಾಯಿಯನ್ನು ಬಳಕೆ ಮಾಡಿಕೊಂಡು ಆಯತಾಕೃತಿಯ ಸ್ಥಳಾವಕಾಶಕ್ಕೆ ತಕ್ಕಂತೆ ಸಂಯೋಜಿಸಲಾಗಿದೆ. ಈ ಕಲಾಕೃತಿಯಲ್ಲಿ ಮಾನವ ಮತ್ತು ಪ್ರಕೃತಿಯಲ್ಲಿಯ ವಸ್ತುಗಳನ್ನು ವಿವಿಧ ಆಯಾಮದಲ್ಲಿ ಚಿತ್ರಿಸಲಾಗಿದೆ. ಸ್ಥಳಾವಕಾಶದ ಮೇಲ್ಬದಿಯ ಮಧ್ಯದಲ್ಲಿ ಪೂರ್ಣಪ್ರಮಾಣದ ಭಾವಚಿತ್ರ ಹಾಗೂ ಇನ್ನೊಂದು ಮಾನವಾಕೃತಿಯನ್ನು ಪಾರ್ಶ್ವಕೃತಿಯಲ್ಲಿದ್ದು ಮೇಲ್ಬದಿಯ ಸ್ಥಳಾವಕಾಶದಿಂದ ಕೆಳಬದಿಗೆ ಇಳಿದಿರುವ ಕೈಯು ಮರದ ಬೇರುಗಳಾಗಿ ಭೂಮಿಗೆ ಇಳಿದಂತಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಮರದಾಕೃತಿಯು ವಿವಿಧ ರೇಖೆಗಳಾಗಿ ಚದುರಿದಂತಿವೆ ಅಲ್ಲಲ್ಲಿ ಸಂಖ್ಯೆಗಳ ಅಕ್ಷರಗಳನ್ನು ಸಂಯೋಜಿಸಲಾಗಿದೆ. ಕೆಳಬದಿಯಲ್ಲಿ ದೊಡ್ಡದಾದ ಅಂಡಾಕಾರದ ಆಕೃತಿ ಇದ್ದು. ಅದರಲ್ಲಿ ಜೀವಾಣುಗಳ ಸಂಕೇತವನ್ನು ತೋರಿಸಲಾಗಿದೆ. ಅದರ ಕೆಳಬದಿಯಲ್ಲಿ ಮೂರು ಮಾನವಾಕೃತಿಯ ಮುಖಭಾವವು ಬೇರೆ ಬೇರೆ ವಿಧದಲ್ಲಿ ಬಿದ್ದಿರುವಂತೆ ತೋರಿಸಲಾಗಿದೆ.

---

೩೨. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : [illegible]

ಚಿತ್ರ-೦೨. ಕುರುಡರು

ಎಚ್ಚಿಂಗ್ ಮಾಧ್ಯಮದಿಂದ ರಚನೆಯಾದ ಕುರುಡರು ಎನ್ನುವ ವಿಷಯಾಧಾರಿತ ಚಿತ್ರವು ಇದಾಗಿದ್ದು, ಈ ಕಲಾಕೃತಿಯಲ್ಲಿ ನಾಲ್ಕು ಗೋರಿಲ್ಲಾ ಕೃತಿಯ ಕುರುಡು ಮಾನವಾಕೃತಿಗಳನ್ನು ವಿವಿಧ ಭಂಗಿಯಲ್ಲಿ ನಿಂತಿರುವಂತೆ ಚಿತ್ರಿಸಲಾಗಿದೆ. ಸಂಭಾಷಣೆಯಲ್ಲಿ ತೊಡಗಿ ಒಬ್ಬರಿಗೊಬ್ಬರು ಆಸರೆಯಾಗಿ ನಡೆಯುತ್ತಿರುವಂತೆ ಚಿತ್ರಿಸಲಾಗಿದೆ. ಈ ಆಕೃತಿಗಳಲ್ಲಿಯ ಎಡ ಮತ್ತು ಬಲ ಆಕೃತಿಗಳು ಕೈಯಲ್ಲಿ ಉದ್ದನೆಯ ಕೋಲುಗಳನ್ನಿಡಿದು ತನ್ನ ಸಹಚರರನ್ನು ಕರೆದುಕೊಂಡು ಹೋಗುತ್ತಿರುವಂತಿದೆ. ಈ ಕಲಾಕೃತಿಯನ್ನು ಕಲಾವಿದರು ೧೯೭೮ರಲ್ಲಿ ೧೮ X ೨೪ ಇಂಚು ಅಳತೆಯಲ್ಲಿ ರಚಿಸಲಾಗಿದೆ. ಈ ಕಲಾಕೃತಿಯಲ್ಲಿ ಮಾನವರನ್ನು ಕಾಡು ಪ್ರಾಣಿಗಳನ್ನಾಗಿ ಚಿತ್ರಿಸಿ ಅವರ ಅಂಧತ್ವದ ಕುರಿತು ಚಿತ್ರಿಸಲಾಗಿದೆ.

ಚಿತ್ರ-೦೩.

ಎಚ್ಚಿಂಗ್ ಸರಣಿಯ ಚಿತ್ರಗಳಲ್ಲಿ ಒಂದಾದು ಈ ಕಲಾಕೃತಿಯು ಸಿ.ಚಂದ್ರಶೇಖರವರು ೧೯೭೮ರಲ್ಲಿ ರಚಿಸಿದರು. ಈ ಕಲಾಕೃತಿಯನ್ನು ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಆಯತಾಕೃತಿಯಲ್ಲಿ ರಚಿಸಲಾಯಿತು. ಇಲ್ಲಿ ಕಡುಗೆಂಪು ಮತ್ತು ಹಸಿರು ವರ್ಣದ ಶಾಯಿಯನ್ನು ಉಪಯೋಗಿಸಿ ಚಿತ್ರ ರಚಿಸಲಾಗಿದೆ. ಇದರಲ್ಲಿ ಪಿಕಾಸೊ ಕಲಾಕೃತಿಯ ಘನಾಕೃತಿಯ ಮುಖಭಾವವನ್ನು ಓಲುವ ಮಾನವಾಕೃತಿಯೊಂದು ಕುಳಿತಿದ್ದು ಅದರ ಹಿಂಬದಿಯ ಬಲ ಪಾರ್ಶ್ವದಲ್ಲಿ ಪಕ್ಷಿಯಾಕೃತಿಯೊಂದು ಚಲಿಸುತ್ತಿರುವಂತೆ ಸೂಚ್ಯವಾಗಿ ಚಿತ್ರಿಸಲಾಗಿದೆ. ಇದರಲ್ಲಿ ರೇಖೆಗಳು ಸ್ಥಳಾವಕಾಶಕ್ಕೆ ತಕ್ಕುವಾಗಿ ಎಳೆಯಂತೆ ತೋರುತ್ತಿದೆ.

ಚಿತ್ರ-೦೪. ನರಕಲೋಕ

ಎಚ್ಚಿಂಗ್ ತಂತ್ರಗಾರಿಕೆಯಲ್ಲಿ ರಚನೆಯಾದ ನರಕಲೋಕ ವಿಷಯಾಧಾರಿತ ಕಲಾಕೃತಿಯು ೧೯೭೮ರಲ್ಲಿ ರಚಿಸಲಾದ ನರಕಲೋಕ ಸರಣಿ ಕಲಾಕೃತಿಯಲ್ಲಿ ಶ್ರೇಷ್ಠ ಕಲಾಕೃತಿಯು ಇದಾಗಿದ್ದು, ಮಾನವ ಜೀವಿಯ ಸಾವಿನ ನಂತರದ ಒಂದು ಕಲ್ಪನಾ ಲೋಕವನ್ನು ಕಲಾವದರು ತಮ್ಮ ಕಲಾಕೃತಿಯ ಮೂಲಕ ಅನೇಕ ಆಕೃತಿಗಳನ್ನು ಸಂಯೋಜಿಸುವ ಮೂಲಕ ಸೆರೆಯಿಡಿದಿದ್ದಾರೆ. ಮನುಷ್ಯನ ಸಾವಿನ ನಂತರದ ನರಕ ಮತ್ತು ಸ್ವರ್ಗಲೋಕದ ಕಲ್ಪನೆಯನ್ನು ಇಟ್ಟುಕೊಂಡು ನರಕಲೋಕದ ಕಲಾಕೃತಿಯನ್ನು ರಚಿಸಿದ್ದಾರೆ. ಈ ಕಲಾಕೃತಿಯಲ್ಲಿ ವಿಚಿತ್ರಾಕೃತಿಯ ಮೂರು ಜೀವಿಗಳನ್ನು ತಿಳಿ ನೀಲಿ ಮಿಶ್ರಿತ ವರ್ಣದಿಂದ ರಚಿಸಲಾಗಿದ್ದು, ಇವುಗಳ ಹಗಲವಾದ ಕಣ್ಣುಗಳು ಭಯಾನಕತೆಯನ್ನು ಸೃಷ್ಟಿಸಲು ಹಿನ್ನೆಲೆಯಲ್ಲಿ ದಟ್ಟ ನೀಲಿ ವರ್ಣದ ಒಟ್ಟು ಸ್ಥಳಾವಕಾಶದ

ತುಂಬೆಲ್ಲ ಆವರಿಸಿರುವಂತೆ ಭಯಾನಕ ಪ್ರಾಣಿಯನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಹಸಿರು ನೀಲಿ ಮಿಶ್ರಿತ ವರ್ಣಗಳ ಮೈವಳಿಕೆಯನ್ನು ಸೃಜಿಸಿರುವುದನ್ನು ಕಾಣಬಹುದಾಗಿದೆ.

ಚಿತ್ರ–೦೫.

ಎಚ್ಚಿಂಗ್ ಸರಣಿ ಚಿತ್ರಗಳಲ್ಲಿ ಒಂದಾದ ಈ ಕಲಾಕೃತಿಯು ೧೯೭೯ರಲ್ಲಿ ರಚನೆಯಾಗಿದ್ದು, ಕಲಾವಿದರ ಕಲ್ಪನೆಯನ್ನು ವಿವಿಧ ವಸ್ತುಗಳ ಆಕೃತಿಯೊಂದಿಗೆ ಸಂಯೋಜನೆಗೊಂಡಿದೆ. ಎಚ್ಚಿಂಗ್ ವಿಧಾನವು ತುಂಬಾ ಸೂಕ್ಷ್ಮವಾದ ಕಲೆಯಾಗಿದ್ದು, ಹಂತ ಹಂತದ ವಿಭಾಗಗಳೊಂದಿಗೆ ರಚನಾ ಕಾರ್ಯವನ್ನು ಪೂರ್ಣಗೊಳಿಸಬೇಕಾಗುತ್ತದೆ. ಈ ಕಲಾಕೃತಿಯಲ್ಲಿ ಹಲಗೆಯ ಆಕೃತಿಯೊಂದರ ಅಂಡಾಕಾರ, ಚೌಕ ವೃತ್ತಗಳ ಸಳಗಳಿಂದ ಬಳ್ಳಿಯಾಕೃತಿಗಳು ವಿವಿಧ ದಿಕ್ಕಿನೆಡೆ ಚಲಿಸುವಂತೆ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಒಟ್ಟು ಸ್ಥಳಾವಕಾಶದ ಕೆಳಬದಿಯಲ್ಲಿ ದಟ್ಟಛಾಯೆಯೊಂದು ಪಟ್ಟಿಕೆಯಾಕೃತಿಯಲ್ಲಿ ಸೃಜನೆಗೊಂಡಿದೆ. ಎಚ್ಚಿಂಗ್ ಮಾಧ್ಯಮದಲ್ಲಿ ರಚನೆಯಾದ ಈ ಕಲಾಕೃತಿಯ ತುಂಬಾ ಚೆನ್ನಾಗಿ ಮೂಡಿಬಂದಿದೆ.


ಚಿತ್ರ–೦೬. ನೆಹರು ಮತ್ತು ನಿಸರ್ಗ

ನೆಹರು ಮತ್ತು ನಿಸರ್ಗ ಎನ್ನುವ ವಿಷಯದ ಈ ಕಲಾಕೃತಿಯು ಎಚ್ಚಿಂಗ್ ಮಾಧ್ಯಮದಲ್ಲಿ ೧೯೯೪ರಲ್ಲಿ ೨೪ x ೨೪ ಅಳತೆಯಲ್ಲಿ ಕಲಾವಿದರಾದ ಸಿ.ಚಂದ್ರಶೇಖರವರು ರಚಿಸಿರುವರು. ಒಟ್ಟು ಸ್ಥಳಾವಕಾಶದಲ್ಲಿ ತಕ್ಕುದಾಗಿ ಮಧ್ಯಭಾಗದಲ್ಲಿ ಟೋಪಿಯಾಧಾರಿತ ಬಲಗೈಯಲ್ಲಿ ನೀಲಿ ಮಿಶ್ರಿತ ಹೂವೊಂದನ್ನು ಸುವಾಸನೆಯನ್ನು ಪಡೆದು ನೋಡುತ್ತಿದ್ದು, ಹಿನ್ನೆಲೆಯ ದಟ್ಟ ವರ್ಣದಲ್ಲಿ ಮಿಶ್ರಣಗೊಂಡು ಅಲ್ಲಲ್ಲಿ ತಿಳಿವರ್ಣ ಬೆಳಕಿನಿಂದ ಅರ್ಧ ದೇಹಾಕೃತಿಯನ್ನು ಚಿತ್ರಿಸಲಾಗಿದೆ. ಈ ಆಕೃತಿಯ ಹಿನ್ನೆಲೆಯಲ್ಲಿ ಸಂಯೋಜನೆಗೊಂಡಿದ್ದು ಮುನ್ನೆಲೆಯಲ್ಲಿ ತಿಳಿವರ್ಣದ ಗೋಡೆಯನ್ನು ಚೌಕಾಕಾರದ ಇಟ್ಟಿಗೆಯಿಂದ ಸಂಯೋಜಿಸಿರುವಂತೆ ಚಿತ್ರಿಸಲಾಗಿದೆ.

ಚಿತ್ರ–೦೭.

ಎಚ್ಚಿಂಗ್ ಮಾಧ್ಯಮದಲ್ಲಿ ಕಡುಗೆಂಪು, ಕಡು ನೀಲಿ, ತಿಳಿ ನೀಲಿ, ವರ್ಣಗಳ ಸಂಯೋಜನೆಯೊಂದಿಗೆ ಈ ಕಲಾಕೃತಿಯು ರಚನೆಯಾಗಿದೆ. ಈ ಕಲಾಕೃತಿಯಲ್ಲಿ ಎರಡು ಮಾನವಾಕೃತಿಗಳನ್ನು ವಿವಿಧ ಭಂಗಿಯಲ್ಲಿ ಚಿತ್ರಿಸಲಾಗಿದೆ. ಸ್ಟಚನ್ನು ಹಾಕಿಕೊಂಡಿರುವ ಪ್ರಧಾನ ಮಾನವಾಕೃತಿಯೊಂದು ದಟ್ಟ ಕೆಂಪುವರ್ಣದ ಅಲ್ಲಲ್ಲಿ ತಿಳಿ ಮಿಶ್ರಿತವರ್ಣದ ಆಕೃತಿಯು ಮುನ್ನೆಲೆಯಲ್ಲಿ ಕೈಕಟ್ಟಿಕೊಂಡು ತಲೆಬಗ್ಗಿಸಿಕಂಡ ಕೆಳನೋಟ ಬೀರುವಂತಿದ್ದು ಅದರ ಬಾಯಿಗೆ ಶುಭ್ರವರ್ಣದ ಪಟ್ಟಿಕೆಯೊಂದನ್ನು ಹಾಕಿರುವಂತೆ ಚಿತ್ರಿಸಲಾಗಿದೆ. ಅದರ ದೇಹದ ಹೊಟ್ಟೆಯ

ಗ್ರಾಫಿಕ್ ಕಲಾಕೃತಿಗಳು



ಚಿತ್ರ-೦೧

ಎಚ್ಚಿಂಗ್ ಕಲಾಕೃತಿ

ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ ಚಿತ್ರ-೦೧



ಎಚ್ಚಿಂಗ್ ಕಲಾಕೃತಿ ಚಿತ್ರ-೦೨

ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ ಚಿತ್ರ-೦೪



ಎಚ್ಚಿಂಗ್ ಕಲಾಕೃತಿ ಚಿತ್ರ-೦೫



ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ ಚಿತ್ರ-೦೧



ಎಚ್ಚಿಂಗ್ ಕಲಾಕೃತಿ ಚಿತ್ರ-೦೨



ಭಾಗಕ್ಕೆ ಹೊಲಿಗೆಯನ್ನು ಹಾಕಿದ್ದು ಹಿನ್ನೆಲೆಯಲ್ಲಿ ದಟ್ಟ ತಿಳಿನೀಲಿಯ ಆಯತಾ ಚೌಕಗಳ ಮಿಶ್ರಣದ ಗೋಡೆ ಇದ್ದು ಅದರ ಹಿನ್ನೆಲೆಯಲ್ಲಿ ಬಲಪಾರ್ಶ್ವದ ಪಾರ್ಶ್ವ ಮುಖಭಾವದ ಸೂಚ್ಚ ಮಾನವಾಕೃತಿಯ ಹೊಲಿಗೆಯನ್ನು ಪಡೆದ ಚಂದ್ರನನ್ನು ದಿಟ್ಟಿಸುತ್ತಿರುವಂತೆ ಇದರಲ್ಲಿ ಲಂಭವಾದ ಮೂರು ಪಟ್ಟಿಕೆಗಳನ್ನು ಮಾಡಿಕೊಂಡಿದ್ದು ಇದರಲ್ಲಿ ತಿಳಿದಟ್ಟ ನೀಲಿಯ ಪಟ್ಟಿಕೆಗಳಿವೆ.

೪.೨. ಸ್ಟಿಚ್ ಮಾಧ್ಯಮದ ಕಲಾಕೃತಿಗಳು

ಚಿತ್ರ-೦೧

ಸ್ಟಿಚ್ ಸರಣಿಯ ಚಿತ್ರಗಳಲ್ಲಿ ನೆಹರು ಮತ್ತು ನಿಸರ್ಗ ಎನ್ನುವ ಕಲಾಕೃತಿಯು ಮುಂದುವರಿದ ಭಾಗವಾಗಿ ಈ ಕಲಾಕೃತಿ ಎನ್ನುವಂತಿದ್ದು, ಈ ಕಲಾಕೃತಿಯು ಚೌಕಾಕಾರದಲ್ಲಿ ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜಿಸಲಾಗಿದೆ. ನೆಹರು ವಿಷಯಾಧಾರಿತ ಕಲಾಕೃತಿಯಾಗಿದ್ದು ಹೊಲಿಗೆಯು ಈ ಕಲಾಕೃತಿಯ ಪ್ರಮುಖ ಅಸ್ತ್ರವಾಗಿದೆ. ಸ್ಥಳಾವಕಾಶದ ಮಧ್ಯಭಾಗದಲ್ಲಿ ಗೋಡೆಯಾಕಾರದ ಪಟ್ಟಿಕೆಯನ್ನು ಚೌಕಾಕಾರದ ಹಿಟ್ಟಿಗೆಯಿಂದ ತಿಳಿವರ್ಣದಲ್ಲಿ ನಿರ್ಮಿಸಲಾಗಿದ್ದು, ಮೂರು ಹಂತಗಳಲ್ಲಿ ಗುರುತಿಸಬಹುದಾಗಿದೆ. ಹಿನ್ನೆಲೆ, ಮಧ್ಯ ಹಾಗೂ ಮುನ್ನಲೆಯಲ್ಲಿ ವಸ್ತು ವಿಷಯಗಳನ್ನು ಸಂಯೋಜಿಸಲಾಗಿದೆ.

ಮುನ್ನೆಲೆಯಲ್ಲಿ ಫೋಟೋ ಫ್ರೇಮ್ ಮಧ್ಯದಲ್ಲಿ ಸ್ಟಿಚ್ ಹಾಕಿದ ನೆಹರು ಟೋಪಿಯನ್ನು ತೆಳುವು ಕಾಯದ ಚಿಕ್ಕ ಮಾನವಾಕೃತಿ ಯೊಂದು ತಂತಿಯ ಮೇಲೆ ಹಾಕಿಕೊಂಡು ತನ್ನ ಎರಡು ಕೈಗಳಿಂದ ವಿಶಾಲವಾಗಿ ಹಿಡಿದುಕೊಂಡಿದ್ದು ಇಲ್ಲಿ ಮಾನವಾಕೃತಿಗಿಂತ ಟೋಪಿಯಾಕೃತಿ ದೊಡ್ಡದಾಗಿ ಚಿತ್ರಿಸಲಾಗಿದೆ. ಇಲ್ಲಿ ವರ್ಣ(ರಾಯ) ಕಂದು ಮತ್ತು ತಿಳಿಯಾಗಿ ಲೇಪಿಸಲಾಗಿದೆ. ಕಡಿಕಪ್ಪು ನೆರಳು ಬೆಳಕಿನ ಸಂಯೋಜನೆಯೊಂದಿಗೆ ಅರಿದ ಬನೀನಿನೊಂದಿಗೆ ವ್ಯಕ್ತಿಯನ್ನು ಚಿತ್ರಿಸಲಾಗಿದೆ. ಒಟ್ಟು ಸ್ಥಳಾವಕಾಶದ ಕೆಳಬದಿಯಲ್ಲಿ ಪೀಠಾಕೃತಿಯ ಮೇಲೆ ಈ ಫೋಟೊ ಫ್ರೇಮ್‌ನ ಗೋಡೆ ಮೇಲ್ಬದಿಯವರೆಗೆ ಚಾಚಿಕೊಂಡಿದೆ. ಹಿನ್ನೆಲೆಯಲ್ಲಿ ಎಡ ಮತ್ತು ಬಲ ಪಾರ್ಶ್ವದ ಮೇಲ್ಬದಿಯಲ್ಲಿ ಶುಭ್ರವರ್ಣದ ಮೋಡಗಳು ತೇಲುತ್ತಿರುವುದನ್ನು ಕಾಣಬಹುದು. ಅದರ ಕೆಳಬದಿಯಲ್ಲಿ ಸೂಚ್ಚವಾದ ಗೋಡೆಯಾಕೃತಿಯ ಒಟ್ಟು ಸ್ಥಳಾವಕಾಶದ ತುಂಬೆಲ್ಲ ಹರಡಿಕೊಂಡಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯನ್ನು ಸಿ.ಚಂದ್ರಶೇಖರವರು ೧೯೮೫ರಲ್ಲಿ ಎಚ್ಚಿಂಗ್ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಇವರ ಗ್ರಾಫಿಕ್ ಕಲಾಕೃತಿಗಳಲ್ಲಿಯ ಆಕೃತಿಗಳು ಪ್ರಕೃತಿಯಲ್ಲಿಯ ಮಾನವ ಪ್ರಾಣಿ ಪಕ್ಷಿಗಳ ಚಿತ್ರಾಕೃತಿಗಳು ಘನಾಕೃತಿಯ ಶೈಲಿಯಲ್ಲಿ ಸೃಜನಗೊಂಡು ನೋಡುಗರನ್ನು ವಿಚಾರತೆ ಗೊಳಪಡಿಸುವಂತಿವೆ. ಇಲ್ಲಿಯ ಆಕೃತಿಯಲ್ಲಿ ಪಾರ್ಶ್ವ ಭಂಗಿಯ ಮಾನವನ ಮುಖ ಭಾವವಿದ್ದು ಇದು ಮೇಲ್ನೋಟಕ್ಕೆ ಮಮಡೂಕೃತಿಯಂತೆ ಗೋಚರಿಸುತ್ತಿದೆ.

ಗ್ರಾಫಿಕ್ ಕಲಾಕೃತಿಗಳು



ಚಿತ್ರ-೦೮

ಎಚ್ಚಿಂಗ್ ಕಲಾಕೃತಿ


ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ

ಚಿತ್ರ-೦೯

ಗ್ರಾಫಿಕ್ ಕಲಾಕೃತಿಗಳು



ಚಿತ್ರ-೧೦

ಎಚ್ಚಿಂಗ್ ಕಲಾಕೃತಿ

ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ

ಚಿತ್ರ-೧೧

ಗ್ರಾಫಿಕ್ ಕಲಾಕೃತಿಗಳು



ಎಚ್ಚಿಂಗ್ ಕಲಾಕೃತಿ ಚಿತ್ರ-೧೨



ಎಚ್ಚಿಂಗ್ ಕಲಾಕೃತಿ ಚಿತ್ರ-೧೩

ಅದನ್ನು ತಡೆಯುವ ಕೆಂಪು ಅಡ್ಡ ರೇಖೆಯನ್ನು ಛೇದಿಸಲಾಗಿದ್ದು, ಬಹು... ಪ್ರಕೃತಿ ನಾಶವನ್ನು ತಡೆಗಟ್ಟುವ ಸಂಕೇತವಾಗಿ ಗುರುತಿಸುವ ಪ್ರಯತ್ನ ಇದಾಗಿರಬಹುದು. ಹಿನ್ನೆಲೆಯ ಒಟ್ಟು ಸ್ಥಳಾವಕಾಶದ ತುಂಬೆಲ್ಲ ದಟ್ಟ ಹಸಿರುವ ಮತ್ತು ತಿಳಿ ಹಸಿರು ವರ್ಣಗಳನ್ನು ಕಲಾಕೃತಿಗೆ ತಕ್ಕಂತೆ ಸಂಯೋಜಿಸಿಕೊಳ್ಳಲಾಗಿದೆ.

೪.೩. ಅಸಂಬದ್ಧತೆ ಸರಣಿ ಚಿತ್ರಗಳು

ಚಿತ್ರ-೦೧

ಗ್ರಾಫಿಕ್ ಮಾಧ್ಯಮದಲ್ಲಿ ೧೯೮೯ರಲ್ಲಿ ಅಸಂಬದ್ಧತೆಯ ಸರಣಿ ಕಲಾಕೃತಿಯು ರಚನೆಯಾಗಿದ್ದು, ಮೂರ್ತ ಸ್ವರೂಪದ ಆಕೃತಿಯಲ್ಲಿ ಅಮೂರ್ತ ಶೈಲಿಯ ವಿಷಯ ಸಂಭಾಷಣೆ ಕಲಾಕೃತಿಯಿದ್ದರೂ ಎಣೆಯುತ್ತ ಸಾಗುವುದು. ವಾಸ್ತವ ಬದುಕಿನ ಏಕ ಮುಖ ಚಲನೆಯಲ್ಲಿ ಬಹುಮುಖಿಯಾದುದು. ಅದು ಬಹುಮುಖಿ ಸಂಸ್ಕೃತಿಯ ನಿಷ್ಪನ್ನ ಆದ್ದರಿಂದ ತುಂಬಾ ಸಹಜವಾಗಿಯೇ ಉದ್ಭವವಾಗುವ ಸಮಸ್ಯೆ ಎಂದರೆ, ಅಸಂಬದ್ಧತೆ ಇದಕ್ಕೆ ದ್ವಂದ್ವದ ಮತ್ತೊಂದು ಸಾಧ್ಯತೆ ಇದೆ. ಗ್ರಾಫಿಕ್ ಶೈಲಿಯ ರಚನೆಯಾದ ಕಲಾಕೃತಿಯು ಕಪ್ಪು ಶಾಯಿಯ ದಟ್ಟ ತಿಳಿ ರೇಖೆಗಳ ಸೆಳೆತವು ರಭಸತೆಯನ್ನು ವ್ಯಕ್ತಪಡಿಸುವಂತಿದೆ. ಕುಳಿತ ಭಂಗಿಯ ಮಾನವಾಕೃತಿಯನ್ನು ಓಲುವಂತ ಆಕೃತಿಯೊಂದು ಭಾವನಾತ್ಮಕ ಭಂಗಿಯಲ್ಲಿದೆ. ಮಧ್ಯದಲ್ಲಿ ಅಂಡಾಕೃತಿಯ ಸ್ಥಳಾವಕಾಶವನ್ನು ಸಂಯೋಜನೆಗೆ ತಕ್ಕದಾಗಿ ಬಿಟ್ಟಿರಲಾಗಿದೆ.

ಚಿತ್ರ-೦೨

ಸಿ.ಚಂದ್ರಶೇಖರರವರು ರಚಿಸಿರುವ 'ಅಸಂಬದ್ಧತೆ'ಯ ಸರಣಿಯ-೦೦೨ನೇ ಚಿತ್ರಾಕೃತಿಯು ೧೯೮೯ರಲ್ಲಿ ಗ್ರಾಫಿಕ್ ಮಾಧ್ಯಮದಲ್ಲಿ ರಚನೆಯಾಗಿದೆ. ಕಲಾವಿದರು ಬದುಕಿನ ವಿವಿಧ ಆಯಾಮಗಳನ್ನು ತಮ್ಮ ಕಲಾಕೃತಿಯ ಮೂಲಕ ಸೆರೆ ಹಿಡಿಯುವ ಪ್ರಯತ್ನ ಮಾಡಲಾಗಿದೆ. ಈ ಕಲಾಕೃತಿಯಲ್ಲಿ ಎರಡು ಅಸ್ಪಷ್ಟ ಮಾನವಾಕೃತಿಗಳನ್ನು ಒಂದರ ಹಿಂದೊಂದರಂತೆ ಒಟ್ಟು ಸ್ಥಳಾವಕಾಶಕ್ಕೆ ಸಂಯೋಜನೆಗೊಳ್ಳುವಂತೆ ನೇರವಾಗಿ ರಚಿಸಿದ್ದಾರೆ. ಸ್ಥಳಾವಕಾಶದ ಎಡಪಾರ್ಶ್ವದ ಪಾರ್ಶ್ವ ಭಂಗಿಯಲ್ಲಿ ನಿಂತ ಮಹಿಳೆಯಾಕೃತಿಯೊಂದು ಆಲೋಚನಾ ಮಗ್ನರಾಗಿರುವಂತೆ ಅಲ್ಲದೆ ಅರೆನಗ್ನವಸ್ಥೆಯಲ್ಲಿದ್ದು ಅವಳ ಹೊಟ್ಟೆಯ ಭಾಗವು ಮುಂಬದಿಗೆ ಚಾಚಿದಂತಿದ್ದು ಅವಳ ಬಸಿರಿನ ಸಂಕೇತವೆಂಬಂತೆ ದೊರೆತಿದೆ. ಹಿಂಬದಿಯ ಆಕೃತಿಯ ಅವಳಿಗೆ ಸಹಾಯಕವೆಂಬಂತೆ ಹಿಂಬಾಲಿಸಿದ್ದು ಇಲ್ಲಿಯ ರೇಖೆಗಳು ವೇಗವೆಂಬಂತೆ ತೋರುತ್ತಿವೆ.

೪.೪. ದಿ ಇಂಪ್ರೆಷನ್ ಸರಣಿ ಕಲಾಕೃತಿಗಳು

ಚಿತ್ರ-೦೧. ದಿ ಇಂಪ್ರೆಷನ್-II

ದಿ ಇಂಪ್ರೇಶನ್ ಸರಣಿಯ ಕಲಾಕೃತಿಗಳಲ್ಲಿ ಈ ಕಲಾಕೃತಿಯು ಅತ್ಯುತ್ತಮವಾಗಿದ್ದು ಇದನ್ನು ಕಲಾವಿದರು. ೨೦೧೦ರ ಸಮಯದಲ್ಲಿ ಕೊಬಲ್ ವೈಟ್ ಹಾಳೆಯ ಮೇಲೆ ವಿವಿಧ ಮೈವಳಿಕೆಯೊಂದಿಗೆ ಇಂಕ್ ಜೆಟ್ ಪ್ರಿಂಟ್ ಮಾಧ್ಯಮದಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. ಆಯತಾಕಾರದ ಒಟ್ಟು ಸ್ಥಳಾವಕಾಶದಲ್ಲಿ ವಿವಿಧ ಭಂಗಿಯ ಪಕ್ಷಿ ಮತ್ತು ಕಲ್ಲು ಬಂಡೆಗಳನ್ನು ಸಂಯೋಜಿಸಿರುವುದನ್ನು ಕಾಣಬಹುದಾಗಿದೆ. ಈ ಕಲಾಕೃತಿಯ ಒಟ್ಟು ಸ್ಥಳಾವಕಾಶದ ಮೇಲ್ಬದಿಯ ಮಧ್ಯ ಭಾಗದಲ್ಲಿ ತಿಳಿ ಮತ್ತು ಕಡುಗಪ್ಪು ವರ್ಣ ಮಿಶ್ರಿತ ಕಾಣೆಯೊಂದು ಎಡ ಪಾರ್ಶ ನೋಟವನ್ನು ಬೀರುತ್ತ ಏನನ್ನೋ ದಿಟ್ಟಿಸುತ್ತಿರುವಂತಿದ್ದು ಕೆಳಬದಿಯಲ್ಲಿ ಕಡುಗಪ್ಪು, ತಿಳಿ, ಬಿಳಿ, ಕೆಂಪು ವರ್ಣಗಳ ಮಿಶ್ರಣದ ಹಾಸು ಬಂಡೆಗಳನ್ನು ಒಂದರ ಪಕ್ಕ ಒಂದರಂತೆ ನೇರವಾಗಿ ಪಾರ್ಶ್ವ ಭಂಗಿಯಲ್ಲಿ ಜೋಡಿಸಿರುವಂತಿದ್ದು, ಬಲಪಾರ್ಶ್ವದ ತಿಳಿವರ್ಣದ ಪಟ್ಟಿಕೆಯಾಕಾರದ ಬಂಡೆಗಳ ಜೋಡನೆಯು ಕಲಾತ್ಮಕವಾಗಿ ಕಂಗೊಳಿಸುತ್ತಿದೆ. ನೆಲದಿಮದ ಹಗೆದ ಬಂಡೆಗಳನ್ನು ಯಂತ್ರದ ಸಹಾಯದಿಂದ ನುಣುಪಾಗಿಸಿದ ಬಗೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದ್ದು ಹಿನ್ನೆಲೆಯಲ್ಲಿ ತಿಳಿಗಪ್ಪು ವರ್ಣದ ಸ್ಥಳಾವಕಾಶವನ್ನು ಕಾಣಬಹುದಾಗಿದೆ.

ಚಿತ್ರ-೦೨. ದಿ ಇಂಪ್ರೆಷನ್-VII

ಈ ಕಲಾಕೃತಿಯನ್ನು ಕಲಾವಿದರು ಇಂಕ್ ಜೆಟ್ ಪ್ರಿಂಟ್ ಮಾಧ್ಯಮದಲ್ಲಿ ೨೦೧೦ರಲ್ಲಿ ೬೦x೮೧ ಸೆಂ.ಮೀ. ಸ್ಥಳಾವಕಾಶದಲ್ಲಿ ಈ ಕಲಾಕೃತಿಯನ್ನು ರಚಿಸಲಾಯಿತು. ಈ ಕಲಾಕೃತಿಯಲ್ಲಿ ಎರಡು ಪಟ್ಟಿಕೆಗಳನ್ನು ಸಮಪ್ರಮಾಣದಲ್ಲಿ ತಿಳಿ ಮತ್ತು ದಟ್ಟವರ್ಣದಲ್ಲಿ ಸಂಯೋಜಿಸಲಾಗಿದೆ. ಒಟ್ಟು ಸ್ಥಳಾವಕಾಶದ ಮಧ್ಯದಲ್ಲಿ ದಟ್ಟವಾದ ಚಿಕ್ಕ ಪಟ್ಟಿಕೆಯ ದಟ್ಟವರ್ಣದಿಂದ ಎಳೆಯಲ್ಪಟ್ಟಿದೆ. ಎಡ ಪಾರ್ಶ್ವದ ದಟ್ಟ ಹಸಿರುವರ್ಣದ ಪಟ್ಟಿಕೆಯಲ್ಲಿ ಪಾರ್ಶ್ವನೋಟದ ಅರ್ಧ ದೇಹಾಕೃತಿಯ ಮಾನವಾಕೃತಿಯನ್ನು ಶ್ಯಾಮವರ್ಣದ ದಟ್ಟ ಬಾಹ್ಯ ರೇಖೆಗಳಿಂದ ಅರೆನಗ್ನ ಸ್ಥಿತಿಯಲ್ಲಿರುವಂತೆ ಚಿತ್ರಿಸಲಾಗಿದೆ. ಆ ಆಕೃತಿಯ ಬನೀನಿನ ಮೇಲೆ ಪಾರ್ಶ್ವ ಭಂಗಿಯ ಸ್ತ್ರೀ ಆಕೃತಿಯ ಮುಖ ಭಾವವನ್ನು ಚಿತ್ರಿಸಲಾಗಿದೆ. ಬಲ ಪಾರ್ಶ್ವದ ಹಿನ್ನೆಲೆಯ ತಿಳಿ ವರ್ಣದಿಂದ ಲೇಪಿತಗೊಂಡಿದೆ. ಈ ಪಟ್ಟಿಕೆಗಳಲ್ಲಿ ಕಡುಗಪ್ಪು ವರ್ಣದ ದಟ್ಟ ರೇಖೆಗಳು(ಗಡುಸು ರೇಖೆಗಳು) ವಿವಿಧ ಭಂಗಿಯಲ್ಲಿ ಚಲಿಸಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಚಿತ್ರ-೦೩. ದಿ ಇಂಪ್ರೇಷನ್-X

ದಿ. ಇಂಪ್ರೇಶನ್-X ಎನ್ನುವ ವಿಷಯಾಧಾರಿತ ಕಲಾಕೃತಿಯನ್ನು ಕಲಾವಿದರು ೨೦೧೦ರಲ್ಲಿ ಇಂಕ್ ಜೆಟ್ ಪ್ರಿಂಟ್ ಹಾಗೂ ಮೈವಳಿಕೆಯ ಕೊಬಲ್ಟ್ ಬಿಳಿಯ ಹಾಳೆಯ ಮಾಧ್ಯಮದಲ್ಲಿ ೬೧x೬೧ ಸೆಂ.ಮೀ. ಹಳತೆಯಲ್ಲಿ ಕಲಾಕೃತಿಯನ್ನು ರಚಿಸಲಾಗಿದೆ. ಈ ಕಲಾಕೃತಿಯು ಮೇಲ್ನೋಟಕ್ಕೆ ಸಾಮಾನ್ಯವೆನಿಸಿದರು ಇದರ ವಿಷಯದಲ್ಲಿಯ ಆಕೃತಿಗಳ ಜೋಡಣೆ ಸಾಂಕೇತಿಕತೆಯು ಕಲಾವಲಯದಲ್ಲಿ ಹೊಸ ಪ್ರಯೋಗವೆನಿಸುತ್ತಿದೆ. ಒಟ್ಟು ಸ್ಥಳಾವಕಾಶದಲ್ಲಿ ಮಾನವನ ಬಲಗೈ ಆಕೃತಿಯೊಂದು ತನ್ನ ನೆರಳಿನೊಂದಿಗೆ ಕ್ಯಾನ್ವಾಸಿನ ಮಧ್ಯಭಾಗಕ್ಕೆ ಚಲಿಸುವಂತಿದ್ದು, ಸ್ಥಳಾವಕಾಶದ ಮಧ್ಯದಲ್ಲಿ ಗೋಲಾಕೃತಿಯ ವಸ್ತುವೊಂದು ತನ್ನ ಛಾಯೆಯೊಂದಿಗೆ ದಟ್ಟತೆಯನ್ನು ತೋರಿಸುತ್ತಿದ್ದು ಉಳಿದಂತೆಲ್ಲ ಕೆಳಬದಿಯ ಸ್ಥಳಾವಕಾಶದಿಂದ ದಟ್ಟ ನೆರಳಿನೊಂದಿಗೆ ಮೇಲ್ಬದಿಯ ಸ್ಥಳಾವಕಾಶದ ತಿಳಿಯ ವರ್ಣದಲ್ಲಿ ಮಿಶ್ರಣಗೊಂಡಂತಿದೆ.

೪.೫. ದಿ ಲೈಟ್ ಸರಣಿ ಕಲಾಕೃತಿಗಳು

ಚಿತ್ರ-೦೧. ದಿ. ಲೈಟ್-II

ದಿ ಲೈಟ್-೦೨ ಸರಣಿಯ ಕಲಾಕೃತಿಯನ್ನು ಕಲಾವಿದರಾದ ಸಿ.ಚಂದ್ರಶೇಖರವರು ಬಿಳಿಯ ಹಾಳೆಯ ಮೇಲೆ ವಿವಿಧ ಮೈವಳಿಕೆಗಳ ಸಹಾಯದಿಂದ ಇಂಕ್ ಜೆಟ್ ಪ್ರಿಂಟ್ ಮಾಧ್ಯಮದಲ್ಲಿ ೬೧x೮೧ ಸೆಂಟಿಮೀಟರ್ ಒಟ್ಟು ಸ್ಥಳಾವಕಾಶದಲ್ಲಿ ಈ ಕಲಾಕೃತಿಯಲ್ಲಿ ೨೦೧೦ರಲ್ಲಿ ರಚಿಸಲಾಗಿದೆ. ಈ ಕಲಾಕೃತಿಯಲ್ಲಿ ಪಾರ್ಶ್ವ ನೋಟದ ಭಂಗಿಯಲ್ಲಿರುವ ಬುದ್ಧನ ಆಕೃತಿಯ ಮುಖಭಾವವೊಂದು ತಿಳಿವರ್ಣದಲ್ಲಿ ರಚನೆಯಾಗಿದ್ದು, ಮೂರು ಆಯಾಮದ ಶಿಲ್ಪಾಕೃತಿಯಂತೆ ಒಟ್ಟು ಸ್ಥಳಾವಕಾಶದ ಬಲಪಾರ್ಶ್ವದ ಪಟ್ಟಿಕೆಯೊಂದರ ನಡುವೆ ಸಂಯೋಜನೆಗೊಂಡಿದೆ. ಇನ್ನು ಉಳಿದ ಸ್ಥಳಾವಕಾಶದಲ್ಲಿ ಒಟ್ಟು ಸ್ಥಳಾವಕಾಶದ ಮುಕ್ಕಾಲು ಭಾಗದಷ್ಟು ತಮ್ಮ ಕಲಾಕೃತಿಯ ಸ್ವಿಚ್ ಮಾದರಿಯ ವಿನ್ಯಾಸದ ಗೋಡೆಯೊಂದಕ್ಕೆ ತಿಳಿ ದಟ್ಟ ವರ್ಣಗಳ ಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ತಿಳಿವರ್ಣದ ಪಟ್ಟಿಕೆ ಇದ್ದು ಕೆಳಬದಿಯಲ್ಲಿ ದಟ್ಟವರ್ಣದ ಪಟ್ಟಿಕೆಯನ್ನು ಕಾಣಬಹುದಾಗಿದೆ.

ಚಿತ್ರ-೦೨. ಬೋಧಿ ಲೈಟ್-II

ಬೋಧಿ ಲೈಟ್-೨ ಸರಣಿಯ ಕಲಾಕೃತಿಯನ್ನು ಕಲಾವಿದ ಸಿ.ಚಂದ್ರಶೇಖರವರು ೨೦೧೦ರಲ್ಲಿ ಈ ಕಲಾಕೃತಿಯನ್ನು ಇಂಕ್ ಜೆಟ್ ಪ್ರಿಂಟ್ ಮಾಧ್ಯಮದಲ್ಲಿ ಕೊಬಲ್ ಬಿಳಿ ಹಾಳೆಯ ಮೇಲೆ ೬೦x೮೧ ಸೆಂ.ಮೀ ಸ್ಥಳಾವಕಾಶದಲ್ಲಿ ಚಿತ್ರಿಸಿರುವರು. ಈ ಕಲಾಕೃತಿಯ

ಒಟ್ಟು ಸ್ಥಳಾವಕಾಶದಲ್ಲಿ ಐದು ಪಟ್ಟಿಕೆಗಳನ್ನು ಹಿನ್ನೆಲೆಯಲ್ಲಿ ನೇರವಾಗಿ ಸಂಯೋಜಿಸಿಕೊಳ್ಳಲಾಗಿದ್ದು, ಅದರ ಮುನ್ನೆಲೆಯ ಮಧ್ಯಭಾಗದಲ್ಲಿ ಸ್ವರ್ಣ ವರ್ಣದ ಬೋಧಿ ಸತ್ವದ ಬೋಧಿಯ ಎಲೆಯನ್ನು ಅಡ್ಡಲಾಗಿ ಸಂಯೋಜಿಸಿದ್ದು, ಅದರ ಕೆಲಬದಿಯ ಎಡಪಾರ್ಶ್ವದಲ್ಲಿ ಮಾನವನ ಎಡಗೈಯನ್ನು ಮುಂಗೈವರೆಗೆ ಶಿಲ್ಪಾಕೃತಿಯಲ್ಲಿ ನೆರಳು ಬೆಳಕಿನೊಂದಿಗೆ ಸಂಯೋಜನೆಗೊಂಡಿದೆ. ಈ ಶೈಲಿಯು ಕಡು ಹಳದಿಯ ಬಂಗಾರ ವರ್ಣ ಲೇಪನಗೊಂಡಿದೆ. ಎಲೆಯ ಆಕೃತಿಯು ಸಹ ಮುಪ್ಪಿನ ಕ್ಷಣ, ಮಾಗಿ ಉದುರಿರುವಂತೆ ತೋರುತ್ತಿದೆ. ಇದರ ಕೆಳಬದಿಯಲ್ಲಿ ತಿರೆ ಗಪ್ಪು ವರ್ಣದ ಛಾಯೆಯನ್ನು ಕಾಣಬಹುದಾಗಿದೆ. ಬುದ್ಧನ ಸಾಂಕೇತಿಕ ರೂಪವಾಗಿ ಈ ಎಲೆಯಾಕೃತಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ಚಿತ್ರ-೦೩. ಬೋಧಿ ಲೈಟ್-III

ಭೋದಿ ಲೈಟ್ ಸರಣಿಯ ಚಿತ್ರಕೃತಿಯಲ್ಲಿ ಭೋದಿ ಲೈಟ್-III ಸರಣಿಯ ಕಲಾಕೃತಿಯು ಹೊಸ ಬಗೆಯ ಆಲೋಚನೆಗಳನ್ನು ಹುಟ್ಟು ಹಾಕುವಂತಿದೆ. ಹೊಸ ಬಗೆಯ ಚೈತನ್ಯವನನು ಬದುಕಿನಲ್ಲಿ ತುಂಬುವ ಹಾಗಿದೆ. ಕಲಾವಿದರಾದ ಸಿ. ಚಂದ್ರಶೇಖರವರು ೨೦೧೦ರಲ್ಲಿ ಇಂಕ್ ಜೆಟ್ ಪ್ರಿಂಟರನ್ನು ಬಿಳಿಯ ಹಾಳೆಯ ಮಾಧ್ಯಮದಲ್ಲಿ ಈ ಕಲಾಕೃತಿಯನ್ನು ತಯಾರಿಸಲಾಗಿದೆ.ಈ ಕಲಾಕೃತಿಯ ಆಕೃತಿಗಳು ಸಾಂಕೇತಿಕ ರೂಪವನ್ನು ಪಡೆದುಕೊಂಡಿದ್ದು, ಒಟ್ಟು ಸ್ಥಳಾವಕಾಶದಲ್ಲಿ ತಿಳಿ ಮತ್ತು ದಟ್ಟ ವರ್ಣಗಳ ಪಟ್ಟಿಕೆಗಳ ಸಂಯೋಜನೆಯೊಂದಿಗೆ ಕಲಾಕೃತಿಯನ್ನು ರಚಿಸಲಾಗಿದೆ. ಒಟ್ಟು ಸ್ಥಳಾವಕಾಶದ ಮೇಲ್ಬದಿ ಕೆಳಬದಿಯ ಪಟ್ಟಿಕೆಗಳು ದಟ್ಟವರ್ಣದಿಂದ ಲೇಪಿಸಿದ್ದು ಮಧ್ಯಭಾಗದ ವಿವಿಧ ಆಯಾಮದ ಪಟ್ಟಿಕೆಯ ವಿನ್ಯಾಸಗಳು ದಟ್ಟ ಹಣದಿ, ತಿಳಿ ಹಳದಿ, ಕೆಂಪು ವರ್ಣಗಳಿಂದ ಸಂಯೋಜನೆಗೊಂಡಿದ್ದು ಇದು ಸೂರ್ಯೋದಯದ ಸಾಂಕೇತಿಕವೆಂಬಂತಿದ್ದು ಕೆಳಬದಿಯ ದಟ್ಟ ಪಟ್ಟಿಕೆಯಲ್ಲಿ ಐದು ಬೋಧಿ, ಎಲೆಗಳನ್ನು ಒಂದರ ಪಕ್ಕವೊಂದು ಒಂದೇ ದಿಕ್ಕಿನಡೆ ಚಲಿಸುವಂತೆ ಸಂಯೋಜಿಸಲಾಗಿದೆ. ಬುದ್ಧದ ಸಾಂಕೇತಿಕವೆಂಬಂತೆ ಚಿತ್ರಿಸಲಾಗಿದೆ.

೪.೬. ಇತರೆ ಡಿಜಟಲ್ ಕಲಾಕೃತಿಗಳು

ಚಿತ್ರ-೦೧. ಮತ್ತ ಚಿಗುರಿತು-೦೧

ಮತ್ತೆ ಚಿಗುರಿತು ಎನ್ನುವ ಶೀರ್ಷಿಕೆಯೊಂದಿಗೆ ರಚನೆಯಾದ ಈ ಕಲಾಕೃತಿಯ ಒಂದು ಭಾವನಾತ್ಮಕ ಸಂಬಂಧವನ್ನು ಬೆಸೆಯುವಂತಿದೆ. ಮಲ್ಟಿಮಿಡಿಯಾ ತಂತ್ರಾಂಶ ಶೈಲಿಯೊಂದಿಗೆ ರಚನೆಯಾದ ಈ ಕಲಾಕೃತಿಯ ಆಧುನಿಕತೆಯ ಸ್ಪರ್ಶವನ್ನು ಪಡೆದುಕೊಂಡು ಕಲಾವಲಯದಲ್ಲಿ ಗುರುತಿಸಿಕೊಂಡು ಶೀರ್ಷಿಕೆಗನುಗುಣವಾಗಿ ಮತ್ತೆ ಚಿಗುರಿತು. ಹಳೆ ಬೇರು ಹೊಸ ಚಿಗುರು ಎನ್ನುವಂತೆ ಹೊಸತನವನ್ನು ಕಲಾವಲಯದಲ್ಲಿ ತೆರೆದುಕೊಂಡಂತಿದೆ ಕಲಾವಿದರು ಆಳವಾದ

ಗ್ರಾಫಿಕ್ ಕಲಾಕೃತಿಗಳು



ಬೋಧಿ ಲೈಟ್ - 1

ಗ್ರಾಫಿಕ್ ಕಲಾಕೃತಿಗಳು



ಬೋಧಿ ಲೈಟ್ - II



ಬೋಧಿ ಲೈಟ್ - III

ಚಿಂತನ ಲೋಕವನ್ನು ೨೦"x೨೦"ರ ಅಳತೆಯಲ್ಲಿ ಕಲಾಕೃತಿಯನ್ನು ರಚಿಸಿರುವುದನ್ನು ಕಾಣಬಹುದಾಗಿದೆ.

ಚೌಕಾಕಾರದ ಒಟ್ಟು ಸ್ಥಳಾವಕಾಶದಲ್ಲಿ ಭೋದಿಮರ ಹೊಸ ಚಿಗುರಿನ ಮೂರು ಎಲೆಗಳುಳ್ಳ ಆಕೃತಿಯನ್ನು ಕೆಳಪಾರ್ಶ್ವದ ಮಧ್ಯಭಾಗದಿಂದ ಮೇಲ್ಭಾಗಕ್ಕೆ ಚಾಚಿಕೊಂಡಿರುವಂತಿದ್ದು ಎಡಪಾರ್ಶ್ವಕ್ಕೆ ಎರಡು ಎಲೆಗಳು ತನ್ನ ಮೊನಚಾದ ತುದಿಯಿಂದ ಆಯಾ ದಿಕ್ಕಿಗೆ ಚಾಚಿಕೊಂಡಿದ್ದು ಬಲಪಾರ್ಶ್ವ ಚಿಕ್ಕ ಎಲೆಯು ಹೊಸಬದುಕಿಗೆ ತೆರೆದುಕೊಂಡಂತೆ ತೋರುತ್ತದೆ. ನಮಗನಿಸಿದ ಪ್ರಕಾರ ಕಲಾವಿದರು ಬದುಕಿನ ಮೂರು ಪ್ರಕಾರವನ್ನು ಈ ಬೋದಿ ತೊಂಗೆಯ ಮೂಲಕ ಹೇಲಲು ಪ್ರಯತ್ನಿಸಿದಂತೆ ಕಾಣುತ್ತದೆ. ಮುಪ್ಪು, ಯೌವನ, ಬಾಲ್ಯ ಹೀಗೆ ಹಿನ್ನಲೆಯಲ್ಲಿ ವಿವಿಧ ಆಯಾಮದ ರೇಖೆಗಳು ವಿವಿಧ ದಿಕ್ಕಿನಡೆ ರಭಸವಾಗಿ ಚಲಿಸಿರುವಂತೆ ಕಾಣುತ್ತಿದ್ದು, ಹಿನ್ನೆಲೆಯ ಎಲ್ಲಾ ಸ್ಥಳಾವಕಾಶಕ್ಕೆ ಚಲಿಸಿರುವಂತೆ ಚಿತ್ರಿಸಲಾಗಿದೆ.

ಚಿತ್ರ-೦೨. ಮತ್ತೆ ಚಿಗುರಿತು-೨

ಕಲಾವಿದರಾದ ಸಿ.ಚಂದ್ರಶೇಖರವರು ಹಲವು ಸರಣಿ ಕಲಾಕೃತಿಗಳಲ್ಲಿ 'ಮತ್ತೆ ಚಿಗುರಿತು' ಎನ್ನುವ ಸರಣಿ ಕಲಾಕೃತಿಯು ಕಲಾವಲಯದಲ್ಲಿ ಮಲ್ಟಿಮೀಡಿಯಾ ಮಾಧ್ಯಮ ಶೈಲಿಯಲ್ಲಿ ವಿಭಿನ್ನವಾಗಿ ನಿಲ್ಲುತ್ತದೆ. ಆಧುನಿಕ ಸ್ಪರ್ಶ ಪಡೆದು ಗಣಕಯಂತ್ರದ ಸಹಾಯದೊಂದಿಗೆ ಮತ್ತೆ ಚಿಗುರಿತು ಕಲಾಕೃತಿಯನ್ನು ರಚಿಸಲಾಗಿದೆ. ಪ್ರಸಕ್ತ ಕಲಾಕೃತಿಯು ೨೦x೨೨ ಇಂಚ್ ಆಯತಾದ ಸ್ಥಳಾವಕಾಶದಲ್ಲಿ ೨೦೦೬ರಲ್ಲಿ ರಚನೆಯಾದ ಕಲಾಕೃತಿಯು ಇದಾಗಿದೆ. ಇದರಲ್ಲಿ ನಿಸರ್ಗದಲ್ಲಿ ದೊರೆಯುವ ವಿವಿಧ ವಸ್ತುಗಳನ್ನು ತಮ್ಮ ವಿಷಯಕ್ಕೆ ಅಳವಡಿಸಿಕೊಳ್ಳುವ ಚಾಕಚಕ್ಕತೆಯನ್ನು ಕಲಾವಿದರು ಮೈಗೂಡಿಸಿಕೊಂಡಿದ್ದರು. ಈ ಕಲಾಕೃತಿಯಲ್ಲಿ ಒಂದು ಕಟ್ಟಿಗೆಯಂತಹ ಆಕೃತಿಯನ್ನು ಬಿಟ್ಟು ಸ್ಥಳಾವಕಾಶದ ಕೆಳಬದಿಯ ಮಧ್ಯದಿಂದ ಭೇದಿಸಿಕೊಂಡು ಬಂದಿದ್ದು, ಇದರ ತುದಿಯಲ್ಲಿ ಹಳದಿ ವರ್ಣ ಹೂಗಳ ಗೊಂಚಲು ಚಿಕ್ಕದಾಗಿ ಸಂಯೋಜನೆಯಾಗಿದೆ. ಇದರ ಹಿಂಬದಿಯಲ್ಲಿ ವೃತ್ತಾಕಾರದ ಬಿಳಿಯ ಆಕೃತಿಯೊಂದಿದ್ದು ಅದರ ತುಂಬೆಲ್ಲ ಅಂದರೆ ಈ ಆಕೃತಿಯ ಕಟ್ಟಿಗೆಯ ತುದಿಗೆ ಪ್ರಭಾವಳಿಯಂತೆ ಸಂಯೋಜನೆಗೊಂಡಿದೆ. ತಿಳಿ ಹಸಿರು ಪ್ರಕಾಶಮಾನವಾಗಿ ಉಳಿದ ಓನ್ನೆಲಿಯ ಸ್ಥಳಗಳಿಗೆ ಚಲಿಸಿರುವಂತೆ ಕಾಣುತ್ತದೆ. ಪ್ರಕಾಶ ಕಿರಣಗಳಿಂದಾಗಿ, ತಿಳಿ, ಮಧ್ಯಮ, ದಟ್ಟ ಹಸಿರಿನೆಡೆ ಆವರಿಸಿಕೊಂಡಿರುವಂತೆ ಮಲ್ಟಿಮೀಡಿಯಾದಲ್ಲಿ ರಚಿಸಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಚಿತ್ರ-೦೩. ಕಲ್ಲು ಅರಳಿತು

ಮಲ್ಟಿಮೀಡಿಯಾ ಪ್ರಿಂಟ್ ತಂತ್ರಾಂಶದೊಂದಿಗೆ ಕಲಾವಿದರು ೨೦x೨೦ ಚೌಕಾಕಾರದ

ಸ್ಥಳಾವಕಾಶದಲ್ಲಿ ಅಗತ್ಯಕ್ಕೆ ತಕ್ಕುದಾಗಿ ವಿಷಯ ವಸ್ತುಗಳನ್ನು ಆಯ್ದುಕೊಂಡು ಕಲಾಕೃತಿಯನ್ನು ರಚಿಸಲಾಗಿದೆ. ಈ ಕಲಾಕೃತಿಯನ್ನು ೨೦೦೭ರ ಸಂದರ್ಭದಲ್ಲಿ ರಚಿಸಿದ್ದು. ಕಲ್ಲು ಅರಳಿ ಹೂವಾಗಿ ಎನ್ನುವ ಶೀರ್ಷಿಕೆಯ ವಿಷಯ ವಸ್ತು ಕಲಾಸಕರನ್ನು ಆಲೋಚನೆಗೆ ತೊಡಗಿಸುವಂತದ್ದು. ಇಲ್ಲಿ ಮತ್ತು ಹೂಗಳೆರಡು ವಿಭಿನ್ನ ನೆಲೆಯಲ್ಲಿ ನಿಲ್ಲುವಂತವುಗಳಾದರೂ ಕಲಾವಿದರು ಅವುಗಳೆರಡರನ್ನು ಸಂಯೋಜಿಸಿ ಆಕೃತಿಯನ್ನು ರಚಿಸಿರುವುದು ಅರ್ಥಪೂರ್ಣವಾಗಿದ್ದು, ಕಲ್ಲು ಒರಟುತನದ ಸಂಕೇತವಾಗಿದೆ. ಹೂ ಮೃದುತ್ವ, ಕೋಮಲತೆಯ ಸಂಕೇತವಾಗಿ ಕಾಣಬಹುದು. ಕಲಾವಿದರು ತಳ ಸಮುದಾಯದ ಸಂವೇದನಾಶೀಲ ಬಡಿತವನ್ನು ಅರ್ಥೈಸಿಕೊಂಡಿದ್ದರಿಂದಾಗಿ ನಾವು ಆ ನೆಲೆಯಲ್ಲಿ ನಿಂತು ಯೋಚಿಸಿದಾಗ, ತಳ ಸಮುದಾಯವು ಬಾಹ್ಯವಾಗಿ ಕಂಡರು ಸಹಿತ ಅದರ ಒಳಮೈ, ಒಳಮನಸ್ಸು, ಅಂತರಾಳವು ಹೂವಿನಂತೆ ಕೋಮಲವಾದದ್ದು, ಮೃದುವಾದದ್ದು ಎನ್ನುವಂತೆ ಬಿಂಬಿಸುತ್ತಿರುವಂತೆ ಕಾಣುತ್ತದೆ. ಈ ಕಲಾಕೃತಿಯ ಒಟ್ಟು ಸ್ಥಳಾವಕಾಶದಲ್ಲಿ ಪ್ರಧಾನ ವಸ್ತು ವಿಷಯವು ಹೂವೆ ಕೇಂದ್ರ ಬಿಂದುವಾಗಿದೆ. ನಕ್ಷತ್ರಾಕೃತಿಯನ್ನು ಹೋಲುವ ತಿಳಿಗೆಂಪು ಬಾಹ್ಯಾಕೃತಿಯನ್ನು ಹೊಂದಿದ್ದು, ಹಿನ್ನೆಲೆಯ ಸ್ಥಳಾವಕಾಶದ ತುಂಬೆಲ್ಲ ಚಿಕ್ಕ ಚಿಕ್ಕ ಕಲ್ಲುಗಳನ್ನು ಕುಸುರಿಯಿಂದ ತುಂಬಾ ನಾಜೂಕಾಗಿ ಜೋಡಿಸಲಾಗಿದೆ. ಜೋಡಣೆಯಾದ ಕಲ್ಲುಗಳು ವಿವಿಧ ದಿಕ್ಕಿನಡೆ ಚಲಿಸಿರುವಂತೆ ಕಂಡರು ಕಲಾವಿದರ ಜಾಣ್ಮೆಗೆ, ಸೂಕ್ಷ್ಮತೆಯನ್ನು ನಿಧನವಾಗಿ ಅರ್ಥೈಸುತ್ತದೆ. ಈ ಹೂವಿನ ಹಿನ್ನೆಲೆಯ ಆಕೃತಿಯಲ್ಲಿಯ ಕಲ್ಲುಗಳು ಹೂವಿನ ಮುಂದುವರಿದ ಭಾಗವಾಗಿ ಕಾಣುತ್ತದೆ. ಹೂವಿನ ಚಿಕ್ಕ ಚಿಕ್ಕ ದಳಗಳು ಅದರ ಹೊರಭಾಗದಲ್ಲಿ ದೊಡ್ಡ ನಾಲ್ಕು ದಳಗಳನ್ನು ಕಾಣಬಹುದಾಗಿದೆ.

ಚಿತ್ರ-೦೪. "ಪರಾವಲಂಬಿ"

ಕಲಾವಿದರಾದ, ಸಿ.ಚಂದ್ರಶೇಖರವರು ವಿವಿಧ ಬದುಕಿನ ಮಜಲುಗಳನ್ನು ತಮ್ಮ ಕಲಕೃತಿಗಳಲ್ಲಿ ಪೂರಕವಾದ ವಿಷಯ ವಸ್ತುಗಳನ್ನು ಆಯ್ದುಕೊಂಡು ಅದಕ್ಕೆ ಸಮೀಕರಿಸಿಕೊಂಡು ಕಲಾಕೃತಿಯನ್ನು ರಚಿಸುವ ಬಗೆಯನ್ನು ಇವರ ಅನೇಕ ಕಲಾಕೃತಿಯಲ್ಲಿ ನಾವು ಕಾಣಬಹುದಾಗಿದೆ. ಸಸ್ಯವೊಂದು ಹೂ ಬಿಟ್ಟಿರುವುದನ್ನು ಕೇಂದ್ರ ಬಿಂದುವಾಗಿಸಿಕೊಂಡು ಕೆಲವೊಂದು ಸಸ್ಯಗಳು ಸ್ವಾವಲಂಬಿ ಮತ್ತು ಪರಾವಲಂಬಿಯಾಗಿ ಆಶ್ರಯಿಸಿಕೊಂಡು ಬೆಳೆಯುವುದನ್ನು ಕಲಾವಿದರು ಮಾರ್ಮಿಕವಾಗಿ ನಮ್ಮ ಬದುಕಿನ ವಾಸ್ತವತೆಯನ್ನು ನಾವು ಬೆಳೆಯಬೇಕಾದರೆ ಇನ್ನೊಬ್ಬರ ಆಶ್ರಯದಲ್ಲಿ ಬೆಳೆಯಬೇಕಾದ ಅನಿವಾರ್ಯತೆಯನ್ನು ಪ್ರತಿಬಿಂಬಿಸುವಂತೆ ಇದೆ. ಕಲಾವಿದರು ೨೦x೨೦ರ ಚೌಕಾಕಾರದ ಸ್ಥಳಾವಕಾಶದಲ್ಲಿ ಮಲ್ಟಿಮೀಡಿಯಾ ತಂತ್ರಾಂಶದ ಸಹಾಯದೊಂದಿಗೆ ರಚನೆಯಾದ ಈ ಕಲಾಕೃತಿಯು ಭಿನ್ನ ನೆಲೆಯಲ್ಲಿ ನಿಲ್ಲಿಸುವಂತದ್ದಾಗಿದೆ. ೨೦೦೭ರಲ್ಲಿ ರಚನೆಯಾದ ಪರಾವಲಂಬಿ

ಕಲಾಕೃತಿಯಲ್ಲಿ ಹಳದಿ ದಳಗಳನ್ನೊಳಗೊಂಡಿರುವ ಹೂಗಳುಳ್ಳ ಚಿಕ್ಕ ಸಸ್ಯವೊಂದು ಮೆಟ್ಟಿಲಾಕೃತಿಯ ಕಲ್ಲು ಸಂದಿಯೊಂದರ ಆಶ್ರಯದಲ್ಲಿ ಬೆಳೆಯುತ್ತಿರುವುದನ್ನು ಕಲಾವಿದರು ಕಲಾಕೃತಿಯಲ್ಲಿ ಸೆರೆ ಹಿಡಿದಿದ್ದಾರೆ. ಅಡಲಾದ ಪಟ್ಟಿಕೆಗಳಾ ಕೃತಿಯ ಮೆಟ್ಟಿಲುಗಳನ್ನು ಅಗತ್ಯಕ್ಕೆ ತಕ್ಕುದಾಗಿ ಸಂಯೋಜಿಸಲಾಗಿದ್ದು ಕೆಳಬದಿಯ ಮಧ್ಯಭಾಗದಿಂದ ಎತ್ತರಕ್ಕೆ ಚಿಕ್ಕ ಪಟ್ಟಿಕೆಯೊಂದು ಹೂವಿನ ಸಸ್ಯದವರೆಗೆ ಸಾಗಿದೆ. ಈ ಪಟ್ಟಿಕೆಗಳಲ್ಲಿ ತಿಳದಟ್ಟ ಛಾಯೆಯ ವ್ಯತ್ಯಾಸವನ್ನು ಸ್ಪಷ್ಟವಾಗಿ ಸೆರೆಹಿಡಿಯಲಾಗಿದೆ.

ಚಿತ್ರ–೦೫. ಹುಲ್ಲಿನ ಗೂಡು

ವಿಭಿನ್ನ ನೆಲೆಯಲ್ಲಿ ಆಲೋಚಿಸಿ, ಆಕೃತಿಗಳನ್ನು ತಮ್ಮ ಕಲಾಕೃತಿಯಲ್ಲಿ ಅಳವಡಿಸಿಕೊಂಡು, ಸಮಾಜದ ವಿವಿಧ ಮಜಲುಗಳನ್ನು ತಮ್ಮದೇ ಶೈಲಿಯಲ್ಲಿ ಕಲಾವಲಯಕ್ಕೆ ನೀಡಿರುವ ಕಲಾವಿದರು ಸಿ.ಚಂದ್ರಶೇಖರವರು. ೨೦೦೭ರ ಕ್ಯಾಲೆಂಡರ ವರ್ಷದಲ್ಲಿ ಈ ಕಲಾಕೃತಿಯನ್ನು ರಚಿಸಿರುವರು. ಮಲ್ಟಿಮೀಡಿಯಾ ತಂತ್ರಜ್ಞಾನದಲ್ಲಿ ತಮ್ಮ ಸೃಜನಶೀಲ ಅಭಿವ್ಯಕ್ತಿಯನ್ನು ಮಟ್ಟಿಮೀಡಿಯಾ ಮೂಲಕ ಸೆರೆ ಹಿಡಿದಿರುವುದನ್ನು ಕಾಣಬಹುದಾಗಿದೆ. ಇವರು ರಚಿಸಿರುವ ಹುಲ್ಲಿನ ಗೂಡು ಎನ್ನುವ ಕಲಾಕೃತಿಯು ಮಲ್ಟಿಮೀಡಿಯಾ ಸರಣೀ ಕಲಾಕೃತಿಯಾಗಿದ್ದು, ೨೦x೨೦ ಇಂಚ್ ಅಳತೆಯ ಆಯತದಲ್ಲಿ ಸ್ಥಳಾವಕಾಶದಲ್ಲಿ ರಚನೆಯಾಗಿದೆ.

ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಅಕೃತಿಗಳನ್ನು ಸಂಯೋಜಿಸಿಕೊಳ್ಳಲಾಗಿದ್ದು, ಈ ಕಲಾಕೃತಿಯಲ್ಲಿ ಎರಡು ಆಕೃತಿಗಳನ್ನು ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜಿಸಲಾಗಿದೆ. ಒಟ್ಟು ಸ್ಥಳಾವಕಾಶದ ಮಧ್ಯಭಾಗದಲ್ಲಿ ಎಡ ಪಾಶ್ವದಲ್ಲಿ ತಿಳಿ ನೀಲಿ ದಟ್ಟವಣ್ದ ಅಂಡಾಕೃತಿಯೊಂದಿದ್ದು ಅದರ ಬಲಪಾರ್ಶದಲ್ಲಿ ದಟ್ಟವರ್ಣದ ವೃತ್ತಾಕೃತಿಯೊಂದು ಚಿತ್ರಿಸಲಾಗಿದೆ. ಇದು ಆಕೃತಿಯಲ್ಲಿ ದೊಡ್ಡದಾಗಿದ್ದು ಇದರ ಹೊರ ಮೈಯಲ್ಲಿ ದಟ್ಟ ವರ್ಣದ ತೆಳು ರೇಖೆಗಳು ವಿವಿಧ ದಿಕ್ಕಿನಡಿ ರಭಸವಾಗಿ ಚಲಿಸುವುದನ್ನು ಕಾಣಬಹುದಾಗಿದೆ. ಹುಲ್ಲಿನ ಕಡ್ಡಿಗಳು ಎರಡು ಗೂಡುಗಳಲ್ಲಿ ವಿವಿಧ ಆಯಾಮದಲ್ಲಿ ಚಲಿಸಿರುವಂತಿದ್ದು, ಇವುಗಳ ಹಿನ್ನೆಲೆಯ ಸ್ಥಳಾವಕಾಶವು ತಿಳಿವರ್ಣದಿಂದ ಲೇಪಿತಗೊಂಡಿದ್ದು, ಉಳಿದಂತೆ ಹೊರಮೈ ದಟ್ಟ ಹಸಿರು ವರ್ಣವೂ ಲೇಪಿತಗೊಂಡಿದೆ. ಎರಡು ಆಕೃತಿಗಳ ಹೊರಭಾಗದ ಸುತ್ತಳತೆಯಲ್ಲಿ ಹುಲ್ಲಕಡ್ಡಿಗಳು ವೃತ್ತವನ್ನು ನಿರ್ಮಿಸಿವೆ.

ಚಿತ್ರ–೦೬.

ಚಂದ್ರಶೇಖರರವರು ರಚಿಸಿರುವ ಕಲಾಕೃತಿಯಲ್ಲಿ ಇದು ಒಂದು ಅತ್ಯುತ್ತಮ ಕಲಾಕೃತಿಯಾಗಿದೆ. ಕರ್ನಾಟಕ ಕಂಡ ಶ್ರೇಷ್ಠ ಕಲಾವಿದರಲ್ಲಿ ಇವರು ಒಬ್ಬರಾಗಿದ್ದು, ಕಲಾವಲಯಕ್ಕೆ ಇವರ ಕೊಡುಗೆ ಅವಿಸ್ಮರಣೀಯ. ಆಧುನಿಕ ಕಲಾಪ್ರಯೋಗಕ್ಕೆ ತಮ್ಮದೇಯಾದ ಛಾಪು ಮೂಡಿಸಿ

ಯುವ ಕಲಾವಿದರಿಗೆ ಮಾದರಿಯಾಗಿದ್ದಾರೆ. ಇವರು ರಚಿಸಿರುವ ಅನೇಕ ಕಲಾಕೃತಿಯಲ್ಲಿ ಆಧುನಿಕ ಶೈಲಿಯು ಪ್ರಯೋಗಾತ್ಮಕವಾಗಿ ನಿರೂಪಿಸಿರುವುದನ್ನು ಕಾಣಬಹುದಾಗಿದೆ. ಅಂತಹ ಕಲಾಕೃತಿಯಲ್ಲಿ ಸದರಿ ಕಲಾಕೃತಿಯು ನಿಲ್ಲುತ್ತದೆ.

ಈ ಕಲಾಕೃತಿಯನ್ನು ಮಿಶ್ರ ಮಾಧ್ಯಮದಲ್ಲಿ ರಚಿಸಲಾಗಿದೆ. ಚೌಕಾಕಾರದ ಒಟ್ಟು ಸ್ಥಳಾವಕಾಶದಲ್ಲಿ ಅಗತ್ಯಕ್ಕೆ ತಕ್ಕದಾಗಿ ಆಕೃತಿಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಈ ಸ್ಥಳಾವಕಾಶದ ಎಡಪಾರ್ಶದ ಕೆಳಬದಿಯಿಂದ ಆಯತಾಕಾರದ ಆಕೃತಿಯೊಂದು ಪಟ್ಟಿಕೆಯಾಕಾರದ ವಸ್ತುವು ಬಲಪಾರ್ಶದ ಸ್ಥಳಾವಕಾಶವನ್ನು ಸಂಪೂರ್ಣವಾಗಿ ಭೇಧಿಸದೆ ಸಂಯೋಜನೆಗೊಂಡಿದೆ. ಇದು ಬೆಟ್ಟಗುಡ್ಡಗಳಲ್ಲಿಯ ಬಂಡೆಯಾಕೃತಿ ಇದ್ದು, ಇದರ ಮೇಲೆ ಒಂದರೊಳಗಡೆ ಒಂದರಂತೆ ವೃತ್ತಾಕೃತಿಗಳು ಸಂಯೋಜನೆಗೊಂಡಿವೆ. ಈ ವೃತ್ತದಲ್ಲಿ ಒಳರೇಖೆಗಳು ಸೂರ್ಯಕಿರಣಕೃತಿಯ ರೇಖೆಗಳು, ಚಿಂದಾಕೃತಿಗಳು, ಹೊಲಿಗೆಯಾಕೃತಿ, ತ್ರಿಕೋನಾಕೃತಿ ಎಲ್ಲವು ಅಂಟು ಪದಾರ್ಥದಂತಹ ವಸ್ತುವನ್ನು ಬಳಸಿ ತಯಾರಿಸಲಾಗಿದೆ. ಆದಿಮ ಸಂಸ್ಕೃತಿಯನ್ನು ಪ್ರತಿ ಬಿಂಬಿಸುವ ಕಲಾಕೃತಿ ಇದಾಗಿದೆ. ಇದರ ಹೊರಭಾಗದ ಬಂಡೆಯಲ್ಲಿ ತಿಳಿಗೆಂಪು ವರ್ಣ ಹಾಗೂ ನೀಲಿ ವರ್ಣ ಬಳಕೆಯಾಗಿದೆ. ಆದಿಮಾನವರ ಭಿತ್ತಿ ಚಿತ್ರಗಳನ್ನು, ಪ್ರಾಣಿ, ಮಾನವಾಕೃತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಉಳಿದಂತೆ ಹಿನ್ನೆಲೆಯು ದಾನ, ವರ್ಣದ ಮೈವಳಿಕೆಯನ್ನು ಕಾಣಬಹುದು.

ಚಿತ್ರ–೦೭.

ಕಲಾವಿದರಾದ ಸಿ.ಚಂದ್ರಶೇಖರವರು ಅನೇಕ ವಿಷಯಗಳನ್ನಾಧರಿಸಿ ಸರಣಿ ಚಿತ್ರ ಕಲಾಕೃತಿಗಳನ್ನು ರಚಿಸಿರುವುದನ್ನು ನಾವು ಹಿಂದಿನ ಕಲಾಕೃತಿಯಲ್ಲಿ ಕಾಣಲಾಗಿದೆ. ಈ ಕಲಾಕೃತಿಯಲ್ಲಿಯ ಸ್ಥಳಾವಕಾಶವು ಆಯತಾಕೃತಿಯಲ್ಲಿದ್ದು, ಸ್ಥಳಾವಕಾಶಕ್ಕೆ ತಕ್ಕಂತೆ ಅಲ್ಲಲ್ಲಿ ಆಕೃತಿಗಳನ್ನು ಸಂಯೋಜಿಸಿಕೊಳ್ಳಲಾಗಿದೆ. ಇದರಲ್ಲಿ ಒಂದು ಮಾನವಾಕೃತಿಯನ್ನು ಒಟ್ಟು ಸ್ಥಳಾವಕಾಶದ ಮಧ್ಯದಲ್ಲಿ ಪಾರ್ಶ್ವಾವಾಕೃತಿಯಲ್ಲಿ ಕುಳಿತ ಭಂಗಿಯಲ್ಲಿ ಸಂಯೋಜಿಸಿದುದು ಕಾಣಬಹುದಾಗಿದೆ. ಇದು ಶಾಸನಗಳಾಧಾರಿತ ಕುಬ್ಜಾಕೃತಿಯಾಗಿದೆ. ಇದರ ಫೋಟೋವನ್ನು ಕತ್ತರಿಸಿ ಅಂಟಿಸಲಾಗಿದೆ. ಕುಳಿತ ಕಬ್ಜ ಮಾನವಾಕೃತಿಯ ಜಟಧಾರಿ ಮಹಿಳೆಯಾಕೃತಿ ಇದ್ದು ಇದು ಬಲಗೈಯಲ್ಲಿ ಮಾರಕಾಸ್ತ್ರವನ್ನು ಹಿಡಿದಿದ್ದು ಕಡುಗೆಂಪು, ತಿಳಿ ರೇಖೆಗಳೊಂದಿಗೆ ಸಂಯೋಜನೆಗೊಂಡಿದ್ದು, ಈ ಆಕೃತಿಯ ಹಿಂಬದಿಯಲ್ಲಿ ವೃತ್ತಾಕಾರದ ಅಕೃತಿಯನ್ನು ಅಂಟಿಸಿದ್ದು ಅದರೊಳಗಡೆ ವಿನ್ಯಾಸದ ಆಕೃತಿಯೊಳಗಡೆ ಆನೆಯಾಕೃತಿಯ ಮುಖ ಭಾಗವನ್ನು ಮಾತ್ರ ಚಿತ್ರಿಸಲಾಗಿದೆ. ಇವುಗಳ ಹಿನ್ನೆಲೆಯ ಸ್ಥಳಾವಕಾಶವು ದಟ್ಟ, ಹಸಿರು, ನೀಲಿ, ಮಿಶ್ರಣವು ಬಳಕೆಯೊಂದಿಗೆ ಪೂರ್ಣಗೊಂಡಿದೆ. ಇದರ ಹಿನ್ನೆಲೆಯ ಎಡಪಾರ್ಶ್ವದ ಮೇಲ್ಬದಿಯಲ್ಲಿ ನಾಗಕಲ್ಲು

ಡಿಜಿಟಲ್ ಕಲಾಕೃತಿಗಳು



ಮತ್ತೆ ಚಿಗುರಿತು - I



ಮತ್ತೆಚಿಗುರಿತು - II



ಡಿಜಿಟಲ್ ಕಲಾಕೃತಿಗಳು



ಕಲ್ಲು ಅರಳಿತು



ಪರಾವಲಂಬಿ

ಪಟ್ಟಿಕೆಯಾಕೃತಿಯಲ್ಲಿ ಸಂಯೋಜನೆಯಾಗಿದೆ. ಇದರ ಬಲಬದಿಯ ಚಿಕ್ಕ ಪಟ್ಟಿಕೆಯಲ್ಲಿ ಆರು ದಳಗಳುಳ್ಳ ಹಣವಿದ್ದು ಅದರ ಬಾಹ್ಯದಲ್ಲಿ ಬಿಳಿವರ್ಣ ಲೇಪನವಾಗಿದೆ. ಕೆಳಬದಿಯ ಮಧ್ಯದಲ್ಲಿ ಆಯತಾಕಾರದ ಪಟ್ಟಿಕೆಯಲ್ಲಿ ಕಪ್ಪೆಯೊಂದು ಕುಳಿತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಉಳಿದಂತೆ ಹಿನ್ನೆಲೆಯ ಸ್ಥಳಾವಕಾಶವನ್ನು ತಿಳಿವರ್ಣದಿಂದ ಪೂರ್ಣಗೊಳಿಸಲಾಗಿದೆ.

ಅಧ್ಯಾಯ : ಐದು

ಸಿ. ಚಂದ್ರಶೇಖರ ಅವರ ಸಂಕೀರ್ಣ ಚಿತ್ರಗಳು

ಅಧ್ಯಾಯ : ಐದು

ಸಿ ಚಂದ್ರಶೇಖರ ಅವರ ಸಂಕೀರ್ಣ ಚಿತ್ರಗಳು

ನಮಗೆ ತೃಪ್ತಿಯನ್ನೂ, ಸಂತಸವನ್ನೂ ಕೊಡುವ ಅನೇಕ ಅನುಭವಗಳು ಜೀವನದ ಉದ್ದಕ್ಕೂ ಆಗುತ್ತಿರುತ್ತವೆ. ಹಸಿದವನಿಗೆ ಸರಿಯಾದ ಆಹಾರ ದೊರಕಿದಾಗ ತೃಪ್ತಿ ಉಂಟಾಗಬಹುದು. ಪ್ರಕೃತಿಯ ಯಾವುದೋ ಒಂದು ಅದ್ಭುತ ಘಟನೆ ಇಲ್ಲವೆ ಸುಂದರ ದೃಶ್ಯ ಮನಸ್ಸಿಗೆ ಆನಂದವನ್ನೂ, ತೃಪ್ತಿಯನ್ನೂ ತಂದುಕೊಡಬಹುದು. ಹಾಗೆ ದೇಹಕ್ಕೆ, ನಮ್ಮ ಇಂದ್ರಿಯಗಳಿಗೆ ಸಂತಸ ಇಲ್ಲವೆ ತೃಪ್ತಿಗಳನ್ನು ತಂದುಕೊಡುವ ಎಲ್ಲ ಘಟನೆಗಳನ್ನು ಮತ್ತು ವಸ್ತುಗಳನ್ನು ಕಲಾಕೃತಿಗಳೆಂದು ನಾವು ತಿಳಿಯುವುದಿಲ್ಲ. ಚಿಪ್ಪು ಜೀವಿಯಂಥ ಒಂದು ಕ್ಷುದ್ರ ಪ್ರಾಣಿ ತನ್ನ ದೇಹ ಒದಗಿಸುವ ದ್ರವ್ಯಗಳಿಂದ ತನ್ನ ಅಂಗರಕ್ಷಣೆಗಾಗಿ ನಿರ್ಮಿಸುವ ಶಂಖ, ಚಿಪ್ಪು, ಕಡಗೋಲು, ಹಣತೆ ಚಿಪ್ಪುಗಳಂಥ ಕವಚಗಳ ಆಕೃತಿ, ಬಣ್ಣ, ಬೆಡಗುಗಳು ಅದ್ಭುತವಾಗಿವೆ. ಅಂಥ ರಚನೆಗಳನ್ನು ನೋಡಿ ನಾವು ಆನಂದ ಪಡಬಹುದು. ಅವನ್ನೇ ಮತ್ತೂ ಮತ್ತೂ ನೋಡಬೇಕೆಂಬ ಲವಲವಿಕೆ ನಮ್ಮಲ್ಲಿ ಉಂಟಾಗಲೂ ಬಹುದು. ಆದರೆ ಆ ಜೀವಿಗಳ ಚಿಪ್ಪು ಅನ್ಯಜೀವಿಗಳಿಗೆ ತೋರಿಸಬೇಕೆಂಬ ಚಪಲದಿಂದ ಹುಟ್ಟಿದ್ದಲ್ಲ. ಪ್ರಕೃತಿ ದೃಶ್ಯಗಳ ಸೌಂದರ್ಯ ಅಯಾಚಿತ ಸೃಷ್ಟಿಗಳಾಗಿ ಕಾಣಿಸಿದರೆ, ಈ ಚಿಪ್ಪು ಜೀವಿಗಳ ಸೃಷ್ಟಿ ಅವುಗಳಿಂದ ಉದ್ದೇಶಿತವಾದ ಕೃತಿಗಳಾದರೂ, ಅವು ಅನುವಂಶಿಕ ಸ್ವಭಾವಗುಣದಿಂದ ನಿರ್ಮಾಣಗೊಂಡವು ಎಂಬುದರಿಂದ ಅಂಥ ಕೃತಿಗಳನ್ನು ನಾವು ಕಲಾಕೃತಿಗಳು ಎನ್ನುವುದಿಲ್ಲ. ಯಾವ ಕಾರಣಕ್ಕೇ ಇರಲಿ, ಮನುಷ್ಯ, ಪ್ರಾಣಿ, ಸ್ವಭಾವಗುಣದ ಧರ್ಮವಲ್ಲದೆಯೂ ತೋರಿಸಿಕೊಳ್ಳುವ ಒಂದು ಬಗೆಯ ಪ್ರತಿಕ್ರಿಯಾ ರೂಪದ ಸೃಷ್ಟಿಗಳಿಗೆ ಮಾತ್ರವೇ ನಾವು 'ಕಲೆ' ಎಂಬ ಪದವನ್ನು ಬಳಸುತ್ತೇವೆ. ಆ ಮಾನವ ಆದಿಮಾನವನಂತಹ ಮುಗ್ಧಜೀವಿಯೇ ಆಗಿರಲಿ, ಆಧುನಿಕ ಬುದ್ಧಿಶೀಲ ಜ್ಞಾನಸಂಪನ್ನ ವ್ಯಕ್ತಿಯೇ ಆಗಿರಲಿ, ತನ್ನಲ್ಲಿ ಹುಟ್ಟಿಕೊಂಡ ಭಾವನೆ,

ಅನಿಸಿಕೆಗಳ ಒತ್ತಡಗಳ ದೆಸೆಯಿಂದ ಉದ್ದೇಶಪಟ್ಟು ಮೃತ್ತಿಕೆ, ಕಲ್ಲು, ಕಾಗದ, ಬಣ್ಣ, ಕುಚ್ಚು, ಉಳಿ – ಇವುಗಳಂಥ ವಸ್ತುಗಳನ್ನು ಬಳಸಿ ತನ್ನ ಮನಸ್ಸಿನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳಿಗೆ ಅನ್ಯರು ಗುರುತಿಸಬಲ್ಲ ದೃಗ್ಗೋಚರ ರೂಪವನ್ನು, ಅಥವಾ ಬಿಂಬವನ್ನು ಸೃಷ್ಟಿಮಾಡಿ ಇರಿಸಿದಾಗ ಮಾತ್ರವೇ ಅದಕ್ಕೆ ಕಲಾಕೃತಿ ಎಂಬ ಹೆಸರು ಬರುವ ಸಾಧ್ಯತೆಇದೆ. ಅಂಥದು ಕಲಾಕೃತಿ ಎನಿಸಲೇ ಬೇಕು ಎಂಬ ನಿಯಮವಿಲ್ಲ. ಈ ಸೃಷ್ಟಿಕಾರ್ಯದಲ್ಲಿ ಒಬ್ಬ ವ್ಯಕ್ತಿ ತನ್ನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳನ್ನು ಮೂರ್ತರೂಪದಲ್ಲಿ ತೋರಿಸಲೇಬೇಕು ಎನ್ನುವ ಅದಮ್ಯ ಒತ್ತಡ ಅವನಲ್ಲಿ ಮೊದಲಿಗೆ ಕಾಣಿಸಬೇಕು. ಅದಕ್ಕೆ ಆತ ಮೂರ್ತ ರೂಪವನ್ನು ಕೊಡಬೇಕು; ಕೊಡುವ ಸಲುವಾಗಿ ಯೋಗ್ಯ ಸಾಧನ, ಸಲಕರಣೆಗಳನ್ನು ಆತ ತೆಗೆದುಕೊಳ್ಳಬೇಕು. ಅಂಥ ಸಾಧನ, ಸಲಕರಣೆ ಮತ್ತು ಯಾವುದೇ ಮಾಧ್ಯಮದ ಸಹಾಯದಿಂದ ಆತ ನಿರ್ಮಿಸಿದಂಥ ಒಂದು ಕೃತಿ ಸುತ್ತಣ ಜನರಿಗೆ ಅವನಲ್ಲುಂಟಾದ ನೋವನ್ನೋ, ಸಂತೋಷವನ್ನೋ, ಆನಂದವನ್ನೋ, ಇನ್ನಾವುದೋ ನಿಶ್ಚಿತ ಭಾವನೆಯನ್ನೋ ತಿಳಿಸಿದಾಗ, ಅವುಗಳಿಂದ ಅವರು ಪುಳಕಿತರಾಗಿ ತೃಪ್ತಿಯನ್ನೂ, ಸಂತೋಷವನ್ನೂ ಪಡುವ ಪ್ರಸಂಗ ಉಂಟಾಗಬೇಕು. ಅಂಥ ಗುಣವುಳ್ಳ ಕೃತಿ ಮಾತ್ರವೇ ಕಲಾಕೃತಿ ಎನಿಸುತ್ತದೆ. ಅದನ್ನು ನಿರ್ಮಿಸಿದಾತ 'ಕಲಾವಿದ' ಎಂಬ ಬಿರುದಿಗೆ ಪಾತ್ರನಾಗುತ್ತಾನೆ ಎಂಬ ಶಿವರಾಮ ಕಾರಂತ ಅವರ ಮಾತುಗಳು ತುಂಬಾ ಅರ್ಥಪೂರ್ಣವಾಗಿವೆ.

ಕಲೆಯು ಮಾನವನ ಸೃಜನಶೀಲ ಭಾವನೆಗಳ ಅಭಿವ್ಯಕ್ತಿಯಾಗಿದೆ. ಆದಿ ಮಾನವನಿಂದಲೂ ಈ ಪ್ರಕ್ರೀಯೆ ನಡೆಯುತ್ತಾ ಬಂದಿದೆ. ಮಾನವ ತನ್ನ ಭಾವನೆಗಳ ಅಭಿವ್ಯಕ್ತಿಗಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾನೆ. ಕ್ರಿ. ಶ. ೧೭, ೧೮ ನೇ ಶತಮಾನದಲ್ಲಿ ಯುರೋಪಿನಲ್ಲಿ ಸಾಕಷ್ಟು ಹೊಸ ಆವಿಷ್ಕಾರಗಳು ನಡೆದವು. ಉಗಿಯಂತ್ರ, ಕ್ಯಾಮರಾ ಪೆಂಡಿಲಿಯಂ ಗಡಿಯಾರಗಳ ಅವಿಷ್ಕಾರ, ಮುದ್ರಣ ಯಂತ್ರಗಳ ಬಳಕೆ, ನ್ಯೂಟನ್ನನ ಬಣ್ಣಗಳ ಸಿದ್ಧಾಂತ, ಮುಂತಾದ ವೈಜ್ಞಾನಿಕ ಅವಿಷ್ಕಾರಗಳ ಪರಿಣಾಮವಾಗಿ ಕಲಾವಿದನು ಕೃತಿ ರಚಿಸುವದದಲ್ಲಿಯೂ ಹೊಸ ಶೈಲಿಗಳನ್ನು ಕಂಡು ಕೊಂಡನು. ಇವುಗಳಲ್ಲಿ ಇಂಪ್ರೇಸನಿಜಂ, ಪೋಸ್ಟ ಇಂಪ್ರೇಶನಿಜಂ ಕ್ಯೂಬಿಜಂ ಮುಂತಾದ ಶೈಲಿಗಳನ್ನು ಹೆಸರಿಸಬಹುದು. ಕಲಾವಿದ ಕಂಡುಕೊಂಡ ಇಂಥ ಹೊಸ ಮಾಧ್ಯಮ ತಂತ್ರಗಳಲ್ಲಿ "ಕೋಲಾಜ್" ತಂತ್ರವು ಒಂದು.

ಸೃಜನಶೀಲತೆ, ಬದಲಾವಣೆ, ಉನ್ನತೀಕರಣ ಈ ಮೂರು ಒಬ್ಬ ಉತ್ತಮ ಕಲಾವಿದನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಬಹುದು. ಯಾವುದೋ ಒಂದು ಕಾಲದಲ್ಲಿ ರಚಿಸಿದ ಕಲಾಕೃತಿಯನ್ನು ಇಂದಿನ ಸಮಕಾಲೀನ ಕಲಾಕೃತಿಯೊಂದಿಗೆ ಜೋಡಿಸಿ ಅದರಲ್ಲಿನ ಪ್ರಮುಖ ವಿಷಯುವನ್ನು ಹಾಗೆಯೇ ಉಳಿಸಿಕೊಂಡು ಆಧುನಿಕ ಸ್ಪರ್ಶ ನೀಡುವ

ವಿಧಾನ ಇಂದಿನ ದಿನಗಳಲ್ಲಿ ಹೆಚ್ಚು ಪ್ರಚಲಿತವಾಗಿವೆ. ಆ ಹಿನ್ನೆಲೆಯಲ್ಲಿ ಕಲಾವಿದ ಸಿ. ಚಂದ್ರಶೇಖರ ಅವರು ಕೊಲಾಜ್, ಡಿಜಿಟಲ್ ಮಾಧ್ಯಮದ ಕಲಾಕೃತಿಗಳು ಮತ್ತು ಕೆಲವೊಂದು ಭಾವಚಿತ್ರಗಳನ್ನು ವಿವಿಧ ಮಾಧ್ಯಮದಲ್ಲಿ ರಚಿಸಿರುವುದು ಕಂಡುಬರುತ್ತದೆ. ಪ್ರಸ್ತುತ ಅವುಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

೫.೧. ಕೊಲಾಜ್

"ಕೊಲಾಜ್" ತಂತ್ರವು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಬಳಕೆಗೆ ಬಂದಿತು. ಕೋಲಾಜ ಎಂಬುದು ಫ್ರಂಚ್‌ಪದ. 'ಅಂಟಿಸು', ಜೋಡಿಸು ಎಂಬುದು ಕೋಲಾಜ ಪದದ ಅರ್ಥ. ಬಣ್ಣ ಬಣ್ಣದ ಬಟ್ಟೆಯ ತುಂಡುಗಳು, ವೃತ್ತ ಪತ್ರಿಕೆಯ ತುಂಡುಗಳು, ಸಿನಿಮಾ ಟಿಕೇಟುಗಳು, ತಗಡಿನ ತುಂಡುಗಳು, ಮರದ ತೊಗಟೆಗಳು ಮುಂತಾಗಿ ಯಾವುದೇ ಹಾಳಾದ ವಸ್ತುಗಳನ್ನು ಕಾಗದದ ಮೇಲೆ ಗೋಂದಿನಿಂದ ಅಂಟಿಸಿ, ಸ್ವತಂತ್ರವಾದ ಕಲಾಕೃತಿಗಳನ್ನು ರಚಿಸುವ ಜಾಣ್ಮೆಯೇ ಕೊಲಾಜ್ ಎಂದು ಗುರುತಿಸಲ್ಪಟ್ಟಿದೆ. ಮೋನೆ, ಸಿಝಾನೆ, ಮಾತಿಸೆ ಮುಂತಾದ ಕಲಾವಿದರು ಇಂಥ ಅನೇಕ ಕಲಾಕೃತಿಗಳನ್ನು ರಚಿಸಿದ್ದು ಅವಶ್ಯವಿದ್ದಲ್ಲಿ ಬಣ್ಣವನ್ನೂ ರೇಖೆಗಳನ್ನು ಬಳಸಿರುವುದು ಕಂಡು ಬರುತ್ತದೆ. ಕ್ಯೂಬಿಸಂ ಶೈಲಿಯಲ್ಲಿ ಒಂದು ನಿಶ್ಚಿತ ರೂಪ ಪಡೆಯಿತು. ವಿಶ್ವವಿಖ್ಯಾತ ಪಿಕಾಸೋನ 'ಗೆರ್ನಿಕಾ' ಮತ್ತು 'ಮೂವರು ಸಂಗೀತಕಾರರು' ಎಂಬ ಕಲಾಕೃತಿಗಳಲ್ಲಿ ಕೊಲಾಜ್ ತಂತ್ರವನ್ನು ಕಾಣಬಹುದು. ಜಾರ್ಜ್ ಬಾರ್ಕ್ ಎಂಬ ಕಲಾವಿದನು ಕಸದಲ್ಲಿ ಎಸೆದ ಗಾಜಿನ ತುಣುಕುಗಳು, ಭಿತ್ತಿಚಿತ್ರಗಳ ತುಣುಕುಗಳು, ಕಂಬಳಿ, ಲೋಹಗಳ ತುಂಡು ಮುಂತಾದವುಗಳನ್ನು ತನಗೆ ಇಷ್ಟ ಬಂದ ರೀತಿಯಲ್ಲಿ ಕತ್ತರಿಸಿಕೊಂಡು, ಕಾಗದಗಳ ಮೇಲೆ ಜೋಡಿಸಿ, ಅಂಟಿಸಿ, ಅಗತ್ಯ ಕಂಡಲ್ಲಿ ಬಣ್ಣವನ್ನು ಲೇಪಿಸಿ, ಸುಂದರವಾದ ಕೊಲಾಜ್ ಕೃತಿಗಳನ್ನು ರಚಿಸಿರುವುದನ್ನು ಕಾಣಬಹುದು.[೧]

ಕರ್ನಾಟಕದಲ್ಲಿ ಕೊಲಾಜ್

ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ಗ್ರಾಮೀಣ ಜನಪದರ ಕೃತಿಗಳಲ್ಲಿ ಕೋಲಾಜ್ ತಂತ್ರಕ್ಕೆ ಹೋಲಿಕೆಯಾಗುವ ಅನೇಕ ಕೃತಿಗಳು ರಚನೆಯಾಗಿರುವುದನ್ನು ನೋಡುತ್ತೇವೆ. ಹಳ್ಳಿಗಳಲ್ಲಿ ಅಜ್ಜಿಯರು ತಮ್ಮ ಬಿಡುವಿನ ವೇಳೆಯಲ್ಲಿ ಹಳೆಯ ಅರಿವೆ ತುಂಡುಗಳನ್ನು ಜೋಡಿಸಿ ಹೊಲಿದ "ಕೌದಿ"ಯು ಕೋಲಾಜ್ ಕಲೆಗೆ ಉತ್ತಮ ಉದಾಹರಣೆ ಎನ್ನಬಹುದು. ಕೌದಿಯನ್ನು ಗ್ರಾಮೀಣ ಜನರು ಹಾಸಲು ಹೊದಿಯಲು ಬಳಸುತ್ತಾರೆ. ನಿರುಪಯುಕ್ತ ವಿವಿಧ ಬಣ್ಣದ ಹಳೆ ಅರಿವೆ

೨೧. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ. ಪು-೧೦೭. ೧೯೨೮

ತುಂಡುಗಳಿಂದ ಕೌದಿಯನ್ನು ತಯಾರಿಸಲಾಗುತ್ತದೆ. ನಾಲ್ಕು ಮೂಲೆಗಳಿಗೆ ಆಕರ್ಷಕ ಬಣ್ಣದ ಅರಿವೆ ಗೊಂಬೆಗಳನ್ನು ಹಚ್ಚಿರುತ್ತಾರೆ. ಕೌದಿಯಲ್ಲಿಯ ಹೊಲಿಗೆ ವಿನ್ಯಾಸ, ಬಣ್ಣದ ಅರಿವೆ ತುಂಡುಗಳಿಂದಾಗಿ ಕೌದಿ ಕೋಲಾಜ್ ಕಲೆಯ ರೂಪ ತಾಳುತ್ತದೆ. ಕೌದಿಯ ಮೇಲೆ ಅನೇಕ ನೈಸರ್ಗಿಕ ಚಿತ್ರಗಳು ಪ್ರಾಣಿ, ಪಕ್ಷಿಗಳು ದೇವರ ಚಿತ್ರಗಳು ಮನುಷ್ಯಾಕೃತಿಗಳು, ರಾಮಾಯಣ – ಮಹಾಭಾರತ ಕಥಾ ಪ್ರಸಂಗದ ಚಿತ್ರಗಳನ್ನು ಅಲ್ಲದೆ ಭೂಮಿತಿ ಚಿತ್ರಗಳು, ಅಮೂರ್ತ (ಫಾರ್ಮ) ಆಕಾರಗಳನ್ನು ಕೌದಿಗಳ ಚಿತ್ರ ವಿನ್ಯಾಸದಲ್ಲಿ ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ "ಕೌದಿಯ ಚಿತ್ರಕಲೆಯ ಮುಂದುವರಿದ ರೂಪವೇ ಕೋಲಾಜ್ ಕಲೆ" ಎಂದು ಹೇಳಬಹುದಾಗಿದೆ.

ನಮ್ಮ ಗ್ರಾಮೀಣ ಜನರು ಮನೆಯ ಒಳಾಂಗಣದ ನೆಲವನ್ನು ಸಮತಟ್ಟಾಗಿ ಮಾಡಿಕೊಂಡು ಅದರ ಮೇಲೆ ಬಳೆಯ ಚೂರುಗಳು, ಚಿಪ್ಪುಗಳನ್ನು, ಒಡೆದ ಚೀನಿ ಮಣ್ಣಿನ ಟೀ ವಸ್ತುಗಳು ಅಲಂಕಾರಿಕವಾಗಿ ಅಂಟಿಸಿ, ಅದರ ಮೇಲೆ ಸಗಣಿಯಿಂದ ಸಾರಿಸಿದಾಗ ಒಂದು ಸುಂದರವಾದ ಕಲಾಕೃತಿ ರೂಪತಾಳುತ್ತದೆ. ಬಣ್ಣ ಬಣ್ಣದ ಬಳೆಯ ಚೂರುಗಳಲ್ಲಿ ಪ್ರಾಣಿ, ಪಕ್ಷಿಗಳು, ಗಿಡ–ಬಳ್ಳಿ ಮುಂತಾದ ಆಕಾರಗಳನ್ನು ಈ ಬಗೆಯ ಬಳೆಯ ಚೂರುಗಳನ್ನು ಜೋಡಿಸಿ ಕೃತಿ ರಚಿಸುತ್ತಿದ್ದರು. ಹೀಗೆ ಮನೆಯ ಪಡಸಾಲೆ ಅಂಗಳವನ್ನು ಅಂದವಾಗಿ ಕಾಣುವಂತೆ ಮಾಡುತ್ತಿದ್ದರು. ಮುರಿದ ಬಳೆಗಳನ್ನು ಸಂಗ್ರಹಿಸಿ, ಅವುಗಳನ್ನು ಜೋಡಿಸಿ ಕಲಾಕೃತಿ ರಚಿಸುವ ಸಂಕಲನ ಕಲೆ ಮಾದರಿಯ ಈ ಕಲೆಯಲ್ಲಿಯೂ ಕೋಲಾಜ್ ತಂತ್ರವನ್ನು ಗುರುತಿಸಬಹುದು.

ಗ್ರಾಮೀಣ ವೇಷಭೂಷಣಗಳು ವೈವಿಧ್ಯಮಯ. ಅದರಲ್ಲಿಯೂ ಲಂಬಾಣಿ ಜನಾಂಗದ ಮಹಿಳೆಯರ ಉಡಿಗೆ–ತೊಡಿಗೆಗಳು ವರ್ಣಮಯವಾಗಿರುತ್ತದೆ. ಬಟ್ಟೆಯ ತುಣುಕುಗಳ ಜೋಡಣೆ ಅಲ್ಲಲ್ಲಿ ಬಳಸುವ, ಆಯತ, ವೃತ್ತಾಕಾರದ ಕನ್ನಡಿಯ ಗಾಜುಗಳು, ನಾಣ್ಯಗಳು, ಕವಡೆಗಳನ್ನು ಅತ್ಯಂತ ಕಲಾತ್ಮಕವಾಗಿ ಜೋಡಿಸಿರುತ್ತಾರೆ. ಹೀಗಾಗಿ ಲಂಬಾಣಿ ಜನಾಂಗದ ಉಡಿಗೆ–ತೊಡಿಗೆಗಳಲ್ಲಿ 'ಕೋಲಾಜ್ ತಂತ್ರ'ವನ್ನು ಕಾಣಬಹುದು. ಇದೇ ರೀತಿ ಎತ್ತುಗಳ (ಬಸವಣ್ಣ) ಮೇಲೆ ಹಾಕುವ ಅಲಂಕಾರಿಕ ಬಟ್ಟೆಗಳಲ್ಲಿ ವಿವಿಧ ಬಣ್ಣದ ಬಟ್ಟೆಯ ಚೂರುಗಳನ್ನು ಬಳಸಿ ವಿನ್ಯಾಸ ಗೊಳಿಸಿರುವುದನ್ನು ಕಾಣಬಹುದು. ಬಟ್ಟೆಯ ಸುತ್ತಲೂ ಅಂಚು, ಹಾಗೂ ಒಳಗಡೆ ಭಾಗದಲ್ಲಿ ಬಣ್ಣ ಬಣ್ಣದ ಬಟ್ಟೆಯ ಚೂರುಗಳನ್ನು ಬಳಸಿ ಕೋಲಾಜ್ ಶೈಲಿಯಲ್ಲಿನ್ಯಾಸಗೊಳಿಸಿರುವುದನ್ನು ಕಾಣಬಹುದು. ಇದೇ ರೀತಿಯ ಜನಪದ ವಿನ್ಯಾಸವನ್ನು ಗೊಗ್ಗಯ್ಯರ ವೇಷಭೂಷಣಗಳಲ್ಲಿ, ದೇವರ ಪಲ್ಲಕ್ಕಿ, ಉತ್ಸವದ ಛತ್ರಿ–ಚಾಮರಗಳಲ್ಲಿ, ಕುರುಬರ ಡೊಳ್ಳುಗಳ ಮೇಲೆ ಹಾಕುವ ಅಲಂಕಾರಿಕ ಬಟ್ಟೆಗಳಲ್ಲಿ, ರೈತರ ಎಲೆ–ಅಡಿಕೆ ಚೀಲಗಳು, ಮಕ್ಕಳ ಕುಲಾಯಿಗಳ ಮೇಲಿನ ಬಟ್ಟೆಯ ಹೆಣಿಕೆಗಳು ಕೋಲಾಜ್ ಶೈಲಿಯಲ್ಲಿವೆ.

ಹಳ್ಳಿಯ ಹೆಣ್ಣುಮಕ್ಕಳು ತಮ್ಮ ಬಿಡುವಿನ ವೇಳೆಯ ಉಪಯೋಗಕ್ಕಾಗಿ ಸುಂದರವಾದ ಕೈಚೀಲಗಳನ್ನು ಮೇಟ ಅರಿವೆ, ಗೋಣಿಚೀಲ, ಯೂರಿಯಾದ ಪ್ಲಾಸ್ಟಿಕ್ ಚೀಲಗಳಿಂದ ತಯಾರಿಸಿ ಅವುಗಳ ಮೇಲೆ ಬಣ್ಣ ಬಣ್ಣದ ದಾರದಿಂದ ಬಟ್ಟೆಯ ಚೂರುಗಳನ್ನು, ಕನ್ನಡಿಯ ಗಾಜುಗಳನ್ನು ಉಪಯೋಗಿಸಿ ಹೆಣಿಕೆ ಹಾಕುತ್ತಿದ್ದರು. ಬಾಗಿಲು ಪರದೆಗಳು, ಟೇಬಲ್ ಮೇಲಿನ ಬಟ್ಟೆ, ಟಿ. ವಿ. ಮೇಲೆ ಹಾಕಲು ಹೆಣಿಕೆಯ ಬಟ್ಟೆಗಳ ಮೇಲೆ ಕಚ್ಚಾವಸ್ತುಗಳನ್ನು ಉಪಯೋಗಿಸಿಕೊಂಡು ಸುಂದರವಾದ ಕಲಾಕೃತಿಗಳ ರಚನೆ ಅಲ್ಲದೆ "ಗೋಕಾಕ್ ಕಲೆ" ಯಂಥಹ ಗೃಹಅಲಂಕಾರಿಕ ವಸ್ತುಗಳಲ್ಲಿ ಹಣ್ಣುಗಳ ಜೋಡಣೆ ಪೇಪರ್ ಪಲ್ಪ, ಹತ್ತಿ ಥರ್ಮಾಕೂಲಗಳನ್ನು ಉಪಯೋಗಿಸಿ ಮಾಡಿದ ಕೃತಿಗಳು, ಚಿಕ್ಕ ಚಿಕ್ಕ ಗೊಂಬೆಗಳನ್ನು ಒಂದು ಗಾಜಿನ ಬಾಕ್ಸನಲ್ಲಿ ಹಾಕಿ ಮನೆಯಲ್ಲಿ ಮೇಲ್ಭಾವಣಿಗೆ ನೇತು ಹಾಕುವಂಥ ಪೆಟ್ಟಿಗೆ ಇವೆಲ್ಲ ಗ್ರಾಮೀಣ ಜನರ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಂತಿವೆ.

ನಗರ ಪ್ರದೇಶಗಳ ಮನೆಗಳಲ್ಲಿ ನೆಲಕ್ಕೆ ಬಳಸುವ ಮೊಸಾಯಿಕ್ ಟೈಲ್ಸನಲ್ಲಿ ವಿವಿಧ ಕಲ್ಲಿನ ತುಂಡುಗಳು, ಸಿಮೆಂಟ್ ಹಾಗೂ ಉಸುಕಿನಿಂದ ಜೋಡಿಸಿ ಕಲಾತ್ಮಕಗೊಳಿಸಿರುತ್ತಾರೆ. ತಾಂಡೂರ, ಕಡಪಾ, ಬೇತಮಚೆಲ್ಲಾ ಮುಂತಾದ ಟೈಲ್ಸಗಳನ್ನು ಭೂಮಿತಿಯ ಆಕಾರದಲ್ಲಿ ಕತ್ತರಿಸಿಕೊಂಡು ಸೃಜನಾತ್ಮಕವಾಗಿ ಜೋಡಿಸಿರುತ್ತಾರೆ. ಇಲ್ಲಿಯೂ ಸಹ ಕೋಲಾಜ್ ಶೈಲಿಯ ತಂತ್ರವನ್ನು ಗುರುತಿಸಬಹುದು. ಆಧುನಿಕ ಕಲೆಯ ಸಂದರ್ಭದಲ್ಲಿ ಕೋಲಾಜ್ ಶೈಲಿಯಲ್ಲಿ ಅನೇಕ ಕಲಾವಿದರು ಕೆಲಸಮಾಡಿದ್ದಾರೆ. ಕರ್ನಾಟಕದ ಕಲಾವಿದರಲ್ಲಿ ಮುಖ್ಯವಾಗಿ ವಿ. ಬಾಲು, ಆರ್. ಎಂ. ಹಡಪದ, ಯೂಸೂಫ್ ಅರಕ್ಕಲ್, ಜಿ.ಎಸ್. ಶೆಣೈ, ರವಿಕುಮಾರ ಕಾಶಿ, ಡಾ. ಶಿವಾನಂದ ಬಂಟನೂರು, ವಾಲಚಂದ್ರ ಕೋಠಾಡಿಯಾ, ಅಪ್ಪಾಸಾಹೇಬ ಬ. ಕಾಡಾಪೂರಕರ, ಜಯಂತ್ ಹುಬ್ಬಳ್ಳಿ, ಪಿ. ಬಿ. ಗವಾನಿ, ಬೆಳಗಾವಿಯ ರಘುನಾಥ ಪವಾರ, ಕುಪಾಟಿ, ಮಣೇದ, ಹಾಗೂ ಸಿ. ಚಂದ್ರಶೇಖರರವರು.

ಚಿತ್ರ-೦೧.

೧೯೯೭ರಲ್ಲಿ ರಚಿಸಿದ ಈ ಕಲಾಕೃತಿಗೆ 'ಸ್ಟಿಚ್ ಅಂಡ್ ಪೇಪರ್' ಎಂಬ ಶೀರ್ಷಿಕೆಯನ್ನು ನೀಡಲಾಗಿದೆ. ಒಂದೇ ವಿಧದ ಕಾಗದವನ್ನು ಸಂಯೋಜನೆ ಮತ್ತು ಸಿ ಚಂದ್ರಶೇಖರ ಅವರ ಕ್ರಿಯಾತ್ಮಕ ಚಿಂತನೆಗೆ ತಕ್ಕಂತೆ ಈ ಕಲಾಕೃತಿಯನ್ನು ರಚಿಸಲಾಗಿದೆ. ತಮ್ಮ ಮನಸ್ಸಿನ ಕೆಲವು ಭಾವನೆಗಳನ್ನು ಈ ಕಲಾಕೃತಿಯಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸಿದ್ದಾರೆ. ಇಲ್ಲಿ ಕೆಂಪು ವರ್ಣವನ್ನು ಹೊರತುಪಡಿಸಿ ಉಳಿದ ವರ್ಣಗಳಾದ ನೀಲಿ, ಬಿಳಿ, ಬೂದು ಮತ್ತು ನೀಲಿ ಮಿಶ್ರಿತ ವರ್ಣಗಳು ಶಿಲಿಯಾಗಿದ್ದು, ಅಲ್ಲಲ್ಲಿ ರಂಧ್ರಗಳನ್ನು ಸೃಜಿಸಿ ಅವುಗಳಿಗೆ ದಾರಗಳಿಂದ ಹೊಲಿದಿರುವುದು

ಕಂಡುಬರುತ್ತದೆ. ಬಹುಶಃ ಜೋಡಣೆ ಎಂಬ ಭಾವನೆಯು ಈ ಕಲಾಕೃತಿಯಿಂದ ತಿಳಿದುಕೊಳ್ಳಬಹುದಾಗಿದೆ.

ಚಿತ್ರ-೦೨.

ಮೇಲಿನ ಚಿತ್ರದ ಕೆಲವು ಅಂಶಗಳು ಈ ಚಿತ್ರಕ್ಕೂ ಅನ್ವಯಿಸುತ್ತದೆ. ಕಲಾವಿದ ಸಿ. ಚಂದ್ರಶೇಖರ ಅವರ ಕ್ರಿಯಾತ್ಮಕ ಚಿಂತನೆಗಳನ್ನು ಇಂತಹ ವೈವಿಧ್ಯಮವಾಗಿ ಹೊರತಂದಿದ್ದು ಇಲ್ಲಿ ಕಂಡುಬರುತ್ತದೆ. ಇಲ್ಲಿಯೂ ಕಾಗದ ಮತ್ತು ದಾರಗಳನ್ನು ಬಳಸಿಕೊಳ್ಳಲಾಗಿದೆ. ಇವರ ವರ್ಣಗಳ ಹಿಡಿತವು ಉತ್ತಮವಾಗಿದ್ದು, ಒಂದು ಕಲಾಕೃತಿಯನ್ನು ಆಕರ್ಷಣಾತ್ಮಕವಾಗಿಯೂ, ಕಲಾತ್ಮಕವಾಗಿಯೂ ಮೂಡಿಸುವಲ್ಲಿ ಇಲ್ಲಿ ಅವರು ಯಶಸ್ವಿಯಾಗಿರುವುದು ಕಾಣಬಹುದಾಗಿದೆ. ಇಲ್ಲಿ ನಾಲ್ಕು ತುಂಡು ಕಾಗದಗಳ ಸಹಾಯದಿಂದ ಈ ಕಲಾಕೃತಿಯನ್ನು ರಚಿಸಲಾಗಿದೆ. ಕೆಂಪು, ನೀಲಿ, ತಿಳಿ ನೀಲಿ ಹಾಗೂ ಹಸಿರು ಮಿಶ್ರಿತ ನೀಲಿ ವರ್ಣಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಚಿತ್ರ-೦೩.

೧೯೯೬ರಲ್ಲಿ ಈ ಕೊಲಾಜ್ ಕಲಾಕೃತಿಯನ್ನು ಚಿತ್ರಿಸಿದ್ದಾರೆ. ಇವರು ಒಟ್ಟು ನಾಲ್ಕು ಕಲಾಕೃತಿಗಳಲ್ಲಿ ಈ ಕಲಾಕೃತಿಯು ವಿಭಿನ್ನ ಮತ್ತು ನಾನಾ ಅರ್ಥಗಳನ್ನು ನೀಡುವ ಹಿನ್ನೆಲೆಯಲ್ಲಿ ರಚನೆಯಾಗಿದೆ ಎಂದರೆ ತಪ್ಪಾಗಲಾರದು. ಎರಡು ವಿಭಿನ್ನ ಆಕೃತಿಗಳು ನಿಲ್ಲಿಸಿದಂತೆಯೂ ಭಾಸವಾಗುತ್ತದೆ. ಇಲ್ಲಿಯೂ ಹೊಲಿಗೆ ತಂತ್ರವನ್ನು ಉಪಯೋಗಿಸಿ ಕೊಳ್ಳಲಾಗಿದೆ. ಅದರೊಂದಿಗೆ ಕೆಲವು ಚಿಕ್ಕ ಮತ್ತು ದೊಡ್ಡ ರಂಧ್ರಗಳ ಮೂಲಕ ಮತ್ತೊಂದು ಕಾಗದವನ್ನು ಒಳಗಿಂದ ಹೊರಗಡೆಗೆ ತೆಗೆದುಕೊಂಡಿರುವ ವಿಧಾನವು ನೋಡುಗರಲ್ಲಿ ಆಸಕ್ತಿ ಮತ್ತು ಚಿಂತನೆಗೆ ಒಳಪಡಿಸುವುದರಲ್ಲಿ ಸಂದೇಹವಿಲ್ಲ. ಒಟ್ಟಾರೆ. ಈ ಕಲಾಕೃತಿಯು ಪ್ರಸ್ತುತ ಅವರ ವೈಯಕ್ತಿಕ ಸಂಗ್ರಹದಲ್ಲಿದ್ದು, ಹಸಿರು, ಬಿಳಿ, ಕೆಂಪು ಮತ್ತು ನೀಲಿ ಬಣ್ಣಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.


ಚಿತ್ರ-೦೪.

ಈ ಕೃತಿಯೂ ೧೯೯೬ರಲ್ಲಿ ರಚನೆಯಾಗಿದ್ದು, ಕಲಾವಿದ ಸಿ. ಚಂದ್ರಶೇಖರ ಅವರು ರಚಿಸಿರುವ ನಾಲ್ಕು ಕೊಲಾಜ್ ಕಲಾಕೃತಿಗಳಲ್ಲಿ ಮೂರು ಕೃತಿಗಳಿಗೂ ಬಳಸಿರುವ ವರ್ಣಗಳು ನೀಲಿ, ಗಾಢ ನೀಲಿ, ತಿಳಿ ನೀಲಿ, ಬಿಳಿ, ಕೆಂಪು ಮುಂತಾದವು. ಉಳಿದಂತೆ ಇಲ್ಲಿ ಗಾಢ ಹಸಿರು ಮತ್ತು ನೀಲಿ ಮಿಶ್ರಿತ ವರ್ಣವನ್ನು ಬಳಸಲಾಗಿದೆ. ಈ ಕಲಾಕೃತಿಯು ಸ್ವತಃ ಕಲಾವಿದನಿಗೆ ಮಾತ್ರ ಬೇಗನೆ ಅರ್ಥವಾಗಬಲ್ಲದು. ಕಲಾವಿದರು ಈ ಕೃತಿಗೆ ಶೀರ್ಷಿಕೆಯನ್ನು ನೀಡಿರುವುದಿಲ್ಲ. ಆದರೂ ಈ ಕಲಾಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ಒಗ್ಗಟ್ಟು(*Unity*) ಎಂಬ ಮನೋಭಾವನೆಯು ಮೂಡುವುದು. ಮತ್ತು ಕೆಲವು ವರ್ಣಗಳ ಮೂಲಕವು ಅದನ್ನು ಕಲಾವಿದರು

ಕೊಲಾಜ್ ಕಲಾಕೃತಿಗಳು




ಚಿತ್ರ-೦೧



ಚಿತ್ರ-೦೨

ಕೊಲಾಜ್ ಕಲಾಕೃತಿಗಳು



ಚಿತ್ರ-೦೩



ಚಿತ್ರ-೦೪

ತಮ್ಮದೇ ಆದ ಕ್ರಿಯಾತ್ಮಕ ಮತ್ತು ಕಲಾತ್ಮಕ ಚಿಂತನೆಯನ್ನು ಇಲ್ಲಿ ಬಳಸಿಕೊಂಡಿರುವುದು ಮೆಚ್ಚಬಹುದಾದ ವಿಷಯವಾಗಿದೆ.

೫.೨. ಡಿಜಿಟಲ್ ಫೋಟೊಗ್ರಾಫಿ

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಕಲಾವಿದರೂ ಅವುಗಳ ಆವಿಷ್ಕಾರದ ಫಲಿತಗಳನ್ನು ತಮ್ಮ ಕಲಾಸೃಷ್ಟಿಗೆ ಬಳಸಿಕೊಳ್ಳುತ್ತಿದ್ದಾರೆ. ನಮ್ಮ ಕಲಾವಿದರೂ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಕಲಾರಚನೆ ಮಾಡತೊಡಗಿದ್ದಾರೆ. ಗಣಕಕಲೆ ಅಥವಾ ಡಿಜಿಟಲ್ ಕಲೆ ಗಣಕ ನೆರವಿನಿಂದ ಸೃಜಿಸುವ ಚಿತ್ರಬಿಂಬಗಳ ಕಲೆ. ಇದು ಕಲಾ ಇತಿಹಾಸದಲ್ಲಿ ಕಾಣುವ ಯಾವುದೇ ಬಗೆಯ ಚಳವಳಿ ಅಥವಾ ಪಂಥಕ್ಕೆ ಸಂಬಂಧಿಸಿದಲ್ಲ. ಕಲಾಕೃತಿ ರಚನೆಯ ಪ್ರಕ್ರಿಯೆಯೇ ಇಲ್ಲಿ ವಿನೂತನವಾದದ್ದು, ಅದರ ಪರಿಣಾಮ ಮತ್ತು ಅನುಭವ ವಿಶಿಷ್ಟವಾದದ್ದು. ೧೯೨೦ರ ದಶಕದಲ್ಲಿ ತೆರೆಯ ಮೇಲಿನ ಬಿಂಬವನ್ನು ಸಾವಿರಾರು ಅತ್ಯಂತ ಕಿರು ಚಿತ್ರಾಂಶಗಳನ್ನಾಗಿ ವಿಭಜಿಸಿ, ಪ್ರತಿ ಅಂಶವನ್ನೂ ಗಣಕದ ದ್ವಿಮಾನ ಪದ್ಧತಿಯ ಕೋಡುಗಳನ್ನಾಗಿ ಅನ್ವಯಗೊಳಿಸಿದಾಗ ಗಣಕ ಕ್ರಾಂತಿಯಾಯಿತು. ಛಾಯಾಚಿತ್ರಬಿಂಬವನ್ನು ಹೀಗೆ ಗಣಕ ಕೋಡುಗಳನ್ನಾಗಿಸಿ, ಬಿಂಬದ ಭಾಗಗಳನ್ನು ಸೂಚಕ ಸಾಧನದಿಂದ (ಮೌಸ್) ಪ್ರತ್ಯೇಕಿಸಿ, ಸೂಜಿಯಿಂದ (ಪಾಯಿಂಟರ್) ಒಂದೊಂದು ಚಿತ್ರಾಂಶವನ್ನು ಗುರಿಯಾಗಿಸಿ, ಅದರ ಬಣ್ಣ ಮತ್ತು ಪ್ರಕಾಶವನ್ನು ಬದಲಿಸುವುದನ್ನು ಸಾಧಿಸಲಾಯಿತು. ೧೯೮೦ರ ವೇಳೆಗೆ ಈ ತಂತ್ರಜ್ಞಾನವನ್ನು ವಿನ್ಯಾಸಕಾರರು, ಕಲವಿದರು ಬಳಸಿದರು. ನಮಗೆ ಪರಿಚಿತವಾಗಿರುವ ಛಾಯಾಚಿತ್ರಗಳು ದ್ಯುತಿ ಸಂವೇದಿ ತಲದ ಮೇಲೆ ಬೆಳಕಿನ ಪರಿಣಾಮವಾಗಿ ಮೂಡಿದ ಬಿಂಬಗಳು, ರಾಸಾಯನಿಕ ಸಂಸ್ಕರಣಕ್ಕೆ ಒಳಗಾಗಿ ಸಿದ್ಧವಾದುವು. ಅವು ವಾಸ್ತವ ಜಗತ್ತಿಗೆ ಯಥಾತಥ್ಯ ಸಂಬಂಧ ಹೊಂದಿರುವವು. ಆದರೆ ಗಣಕೀಕರಣದಿಂದ ಅನಂತ ಸಾಧ್ಯತೆಗಳು ತೆರೆದುಕೊಂಡವು. ಅದನ್ನು ಕಲಾರಚನೆಗೆ ಬಳಸಿದಾಗ 'ಡಿಜಿಟಲ್ ಆರ್ಟ್' ಹುಟ್ಟಿತು. ಇಲ್ಲಿ ಗಣಕದ ತೆರೆಯೂ ಒಂದು ವಸ್ತು ಪರಿಕರವೇ ಆಯಿತು. ವರ್ಣಚಿತ್ರ, ಶಿಲ್ಪ, ಸ್ಥಾಪನಾಕಲೆ, ವಿಡಿಯೋಗಳಿಗಿಂತ ಭಿನ್ನ ಅನುಭವ ನೀಡುವ ರಚನೆಗಳ ಸೃಷ್ಟಿಯಾಯಿತು.

ಡಿಜಿಟಲ್ ಕಲೆ ಒಂದು ಯಾಂತ್ರಿಕ ಮಾಧ್ಯಮ ಎನ್ನಬಹುದು. ಆದರೆ ಸಾಧ್ಯತೆ ಅಪಾರ. ಜಾರ್ಜ್ ಫೀಲ್ಡ್ ಎಂಬ ನಿಯೋಜಕ (ಕ್ಯುರೇಟರ್)ನ ಪ್ರಕಾರ ಗಣಕದ ಘರ್ಷಣೆ ಮತ್ತು ಗುರುತ್ವಾಕರ್ಷಣೆ ಮುಕ್ತ ಸ್ಮೃತಿಸ್ಥಳದಲ್ಲಿ ಬಿಂಬಗಳ (ಇಮೇಜಸ್), ವರ್ಣಶೋಧಕಗಳ (ಫಿಲ್ಟರ್‌ಗಳ), ಬಣ್ಣಗಳ ಸ್ಥಳಾಂತರ, ಜೋಡಣೆ–ಸಂಯೋಜನೆ ಮೊದಲಾದುವನ್ನು ಕಲಾವಿದರು ಶ್ರಮವಿಲ್ಲದೆ ಮಾಡಬಹುದು. ಅದರಿಂದ ಕಲಾವಿದರಿಗೆ ಮುಕ್ತ ಸ್ವಾತಂತ್ರ್ಯ ಲಭಿಸಿತು. ಇದು ಹೊಸ ಬಗೆಯ ಸೃಜನೆ, ಸೃಷ್ಟಿ–ಪ್ರ ಅಥವಾ ನಕಲಲ್ಲ. ಗಣಕದಿಂದ ಸೃಷ್ಟಿಸುವ ಮಿಥ್ಯಾವಾಸ್ತವ(ವರ್ಚುಯಲ್ ರಿಯಾಲಿಟಿ) ಗಣಕ ತಂತ್ರಜ್ಞಾನದ ವಿಶಿಷ್ಟ ಕೊಡುಗೆ. ಪಾಲ್

ಏರಿಲಿಯೋ ಎಂಬ ವಾಸ್ತುಶಿಲ್ಪ ಮತ್ತು ವಿಮರ್ಶಕ ಹೇಳುವಂತೆ ಇಂದು ನಾವು ಪ್ರವೇಶಿಸುವ ಜಗತ್ತಿನಲ್ಲಿ ಒಂದಲ್ಲ, ಎರಡು ವಾಸ್ತವಗಳಿವೆ; ಒಂದು ವಾಸ್ತವ, ಇನ್ನೊಂದು ಮಿಥ್ಯಾ ವಾಸ್ತವ.

ಡಿಜಿಟಲ್ ತಂತ್ರಜ್ಞಾನದಲ್ಲಿ ಗಣಕವೇ ಒಂದು. ಮೂಲ ಉಪಕರಣ(ಟೂಲ್). ಇಂದು ಈ ತಂತ್ರಜ್ಞಾನ ಸಿನೆಮಾ, ಛಾಯಾಚಿತ್ರ, ಸಂಶ್ಲೇಷಣೆಯಿಂದ ರಚಿತ ಸಂಗೀತ (ಸಿಂಥೆಸೈಸ್ಡ್ ಮ್ಯೂಸಿಕ್) ಮುಂತಾದ ಕಲೆಗಳಲ್ಲೆಲ್ಲ ಬಳಕೆಯಾಗುತ್ತಿದೆ. ಹೀಗಾಗಿ ಗಣಕ ತಂತ್ರಜ್ಞಾನ ಬಿಂಬ ರಚನೆಗೆ ಸುನಮ್ಯವಾಗಿ (ಮ್ಯಾಲಿಯಲ್) ಹೊಂದಿಕೊಳ್ಳಬಲ್ಲ ಅನಂತ ಸಾಧ್ಯತೆ ನೀಡಿದೆ. ಇಲ್ಲಿ ಕಲಾವಿದರು ಯಂತ್ರದ ಜೊತೆ ಒಡನಾಟವಾಡುತ್ತಾರೆ, ಅನಂತ ವೀಕ್ಷಕರೊಂದಿಗೆ. ನಮ್ಮಲ್ಲಿ ಗಣಕಗಳು ರೂಢಿಯಾದನಂತರ ಕಲಾವಿದರು ಪ್ರಯೋಗಕ್ಕೆ ತೊಡಗಿದರು. ಪಾಶ್ಚಾತ್ಯರಲ್ಲಿ ಮೊದಮೊದಲು ಅಮೂರ್ತರಚನೆಗಳು ಬಂದವು. ಅನಂತರ ದೃಶ್ಯಗಳು, ಬಿಂಬಗಳು, ಛಾಯಾಚಿತ್ರಗಳಿಗೆ ಕೈಯಾಡಿಸುವ, ಬದಲಿಸುವ ಪ್ರಯೋಗಗಳಾದವು. ಬಿಲಿಯನ್ ಷ್ವಾರ್ಜ್‌ನ 'ಮೊನಾ ಲಿಯೊ', ಯವರಾಲ್‌ನ 'ಸಿಂಥೆಸೈಸ್ಡ್ ಮೊನಾಲಿಸಾ' ಇತ್ಯಾದಿ ಚಿಪ್ ಬೋರ್ಡ್ ಗಣಕ ಸಂಯೋಜಿತ ರಚನೆಗಳನ್ನು ಸೃಜಿಸಿದ. ಜೆಫ್‌ವಾಲ್ ನಂಥವರು ಕಲ್ಪಿತ ಕಥನವನ್ನೇ ಸೃಷ್ಟಿಸಿದರು.

ನಮ್ಮಲ್ಲಿ ಹಿಂದೆ ಯೂಸುಫ್ ಅರಕ್ಕಲ್ ತಮ್ಮ ವರ್ಣಚಿತ್ರವನ್ನೇ ಡಿಜಿಟಲ್ ಪ್ರಿಂಟ್ ಆಗಿ ರೂಪಾಂತರಿಸಿದರು. ಚಂದ್ರನಾಥ ಆಚಾರ್ಯ ಅವರು ಮೃತ್ತಿಕೆ, ಮೇಣ, ಲೋಹಗಳಲ್ಲಿ ಶಿಲ್ಪ ಅಥವಾ ರೂಪಗಳನ್ನು ರಚಿಸಿ, ಕೆಲವೊಮ್ಮೆ ವರ್ಣಚಿತ್ರಗಳನ್ನೂ ಸಹ ಛಯಾಚಿತ್ರ ತೆಗೆದು ಸಂಯೋಜಿಸಿ ಗಣಕದ ಸೌಲಭ್ಯಗಳನ್ನು ಬಳಸಿ ರಚನೆ ಪೂರ್ಣಗೊಳಿಸಿ ಪ್ರಿಂಟ್ಸ್ ತೆಗೆಯುತ್ತಾರೆ. ಅವರ ಕಲಾಕೃತಿಗಳ ಶೈಲಿ ತಟ್ಟನೆ ಗುರುತಿಸಬಹುದಾದ್ದು, ಜಲವರ್ಣ, ತೈಲವರ್ಣಗಳ, ಕುಂಚ, ಪ್ಯಾಲೆಟ್‌ನೈಫ್ಗಳ ಹಾಗೂ ಮೈವಳಿಕೆಗಳ ಸಾಧ್ಯತೆಗಳನ್ನು ಬಳಸಿದ ಕಲಾರಚನೆಗಳನ್ನು ಹಿಂದೆ ಬೆಂಗಳೂರಿನಲ್ಲಿ ಪ್ರದರ್ಶಿಸಲಾಗಿತ್ತು. ರವಿಕುಮಾರ ಕಾಶಿ ಜಾಹಿರಾತು ಬಿಂಬಗಳನ್ನು ತಾವೇ ತೆಗೆದ ಛಾಯಾಚಿತ್ರಗಳನ್ನು ಬಳಸಿ ಗಣಕದಿಂದ ಬೃಹತ್ ರಚನೆಗಳನ್ನು ಮಾಡಿದ್ದಾರೆ. ಇಲ್ಲಿ ಮುಂದೆ ಸಿ. ಚಂದ್ರಶೇಖರ್ ಅವರ ಎರಡು ಬಗೆಯ ಪರಿಂಟ್‌ಗಳ ದೃಷ್ಟಾಂತ ನೀಡಿದೆ. ಒಂದು ಬಗೆ ಬ್ರೊಮೈಡ್ ಪ್ರಿಂಟ್, ಎರಡನೆಯ ಬಗೆ ಡಿಜಿಟಲ್ ಪ್ರಿಂಟ್.

ಕಲಾಕೃತಿಗಳ ವಸ್ತುವಿಷಯ, ಅಭಿವ್ಯಕ್ತಿ ವಿಧಾನ, ಶೈಲಿ ಕಲಾವಿದರ ಸೃಜನಶೀಲ ಪ್ರತಿಭೆಗೆ ಸಂಬಂಧಿಸಿದ್ದು ಕ್ಯಾಮರಾ, ಗಣಕಗಳು ಸಾಧನ ಪರಿಕರಗಳಾಗುತ್ತವೆ. ಗಣಕದ ಫೋಟೋಶಾಪ್, ಕೋರಲ್ ಡ್ರಾ ಸೌಲಭ್ಯಗಳನ್ನು ಬಳಸಿ ರಚನೆ, ಅಲ್ಲೇ ಜಲವರ್ಣ, ತೈಲವರ್ಣ ರಚನೆ, ಮೈವಳಿಕೆಗಳನ್ನು ತರಬಹುದು. ಒಂದು ಬಗೆಯಲ್ಲಿ ಇಂಕ್ ಜೆಟ್ ಮೂಲಕ ಕ್ಯಾನ್ವಾಸ್ ಮೇಲೆ ಪ್ರಿಂಟ್ ಮಾಡಿ, ಅದರ ಮೇಲೆ ಕಲಾವಿದ ಮುಂದಿನ ರಚನೆಗೆ ತೊಡಗುವುದು. ಅದು ಪೂರ್ಣಗೊಂಡಾಗ ಅಂತಹ ಕಲಾಕೃತಿ – ಡಿಜಿಟಲ್ ಪ್ರಿಂಟ್.

ಚಂದ್ರಶೇಖರ್ ಅವರ 'ಸುವರ್ಣ ಹೊಲಿಗೆ ಮತ್ತು ತೇಪೆ' ಸರಣಿಯ ಗೃಹನಿರ್ಮಾಣ ಸ್ಥಳದ ತಡೆಪರದೆಗಳ ರಚನೆಗಳು ಈ ಬಗೆಯವು. ಇನ್ನೊಂದು ಬಗೆಯ ಸರಣಿ ಛಾಯಾಚಿತ್ರಗಳನ್ನು ಗಣಕದಲ್ಲಿ ಬಳಸಿ ಸಂಯೋಜನೆಯನ್ನು ನಿರ್ವಹಿಸಿ, ಅಂದರೆ, ಚಿತ್ರಭಾಗಗಳನ್ನು ಬಿಡುವ, ಸೇರಿಸುವ, ಹಿನ್ನೆಲೆ ಮುನ್ನೆಲೆಗಳನ್ನು ಬದಲಿಸುವ, ಕೆಲವನ್ನು ಗೌಣವಾಗಿಸುವ ಅಥವಾ ಪ್ರಧಾನವಾಗಿಸುವುದನ್ನು ಬಣ್ಣಗಳನ್ನೂ ನಿರ್ವಹಿಸಿ ಅಂತಿಮವಾಗಿ ಪ್ರಿಂಟ್ ತೆಗೆಯುವುದು. ಸಿ. ಚಂದ್ರಶೇಖರ ಅವರ

೧. ಆಶಾಕಿರಣ-೧, ೨

೨. ಗೋಲ್ಡನ್ ಸ್ಟಿಚ್ ಸರಣಿ ಚಿತ್ರಗಳು,

೩. 'ಮೇಣ ಕರಗಿತು – ೧&೨',

೪. 'ಮತ್ತೆ ಚಿಗುರಿತು',

'ಕಲ್ಲರಳಿ ಹೂವಾಗಿ' ಈ ಬಗೆಯ ರಚನೆಗಳು ಈ ಎರಡೂ ಬಗೆಯ ಕಲಾಕೃತಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಚಿತ್ರ-೦೧. ಆಶಾಕಿರಣ-೧

ಸಿ. ಚಂದ್ರಶೇಖರವರು ಮಲ್ಟಿಮೀಡಿಯಾ ತಂತ್ರಾಂಶವನ್ನು ಬಳಸಿ ಸರಣಿ ಚಿತ್ರಗಳನ್ನು ರಚಿಸಿರುವರು. ಅವರ ಸರಣಿ ಚಿತ್ರಗಳಲ್ಲಿ ಇದು ಏಳನೆ ಕಲಾಕೃತಿಯಾಗಿದ್ದು, ಈ ಕಲಾಕೃತಿಯ ಒಟ್ಟು ಸ್ಥಳಾವಕಾಶದಲ್ಲಿ ಆಯತಾಕಾರದಲ್ಲಿ ಸೂಚ್ಯಾಕೃತಿಗಳ ಸಂಯೋಜನೆಯೊಂದಿಗೆ ವರ್ಣಗಳ ಏರಿಳಿತದೊಂದಿಗೆ ರಚಿಸಲಾಗಿದೆ. ಒಟ್ಟು ಸ್ಥಳಾವಕಾಶದ ತುಂಬೆಲ್ಲ ದಟ್ಟವರ್ಣವು ಆವರಿಸಿಕೊಂಡಂತೆ ಸಂಯೋಜಿಸಿದ್ದು, ಮಧ್ಯದ ಸ್ಥಳಾವಕಾಶದಲ್ಲಿ ತೀಕ್ಷ್ಣ ತಿಳಿವರ್ಣ ಕಲ್ಲಿನಂತ ಅಕೃತಿಗಳ ವರ್ಣಗಳ ಏರಿಳಿತದ ಹಂತ ಹಂತವಾಗಿ ಸಂಯೋಜನೆಗೊಂಡಿವೆ. ಆರು ಕಲ್ಲುಗಳಾಕೃತಿಗಳು ಆ ಕಲಾಕೃತಿಗೆ ತಕ್ಕಂತೆ ಜೋಡಣೆಗೊಂಡಿವೆ. ಇದರಲ್ಲಿ ಹಳದಿ ಹಸಿರು, ನೀಲಿ, ವರ್ಣಗಳ ಮಿಸ್ರಣದಂತೆ ಪ್ರಖರ ಬೆಳಕು ಹಿನ್ನೆಲೆಯಿಂದ ಈ ಕಲಾಕೃತಿಯ ಮೇಲೆ ಚಲಿಸಿದಂತೆ ಕಾಣುತ್ತಿದೆ.

ಚಿತ್ರ-೦೨. ಆಶಾಕಿರಣ-೦೨

ಕಲಾವಿದರಾದ ಸಿ.ಚಂದ್ರಶೇಖರರವರು ಕಲಾವಲಯದ ಬೇರೆ ಬೇರೆ ಆಯಾಮದ ಮಾಧ್ಯಮಗಳಲ್ಲಿ ತಮ್ಮ ಕಲಾಕೃತಿಗಳನ್ನು ರಚಿಸಿರುವುದು ಅವರ ಪ್ರಸಿದ್ದ ಕಲಾಕೃತಿಗಳಿಂದ ತಿಳಿಯಬಹುದಾಗಿದೆ. ಹಾಗೆಯೇ ರಚನೆಯಾದ ಆಶಾಕಿರಣ-೨ ಎನ್ನುವ ಸರಣಿ ಚಿತ್ರ ಕಲಾಕೃತಿಯನ್ನು ಮಲ್ಟಿ ಮೀಡಿಯಾ ಪ್ರಿಂಟ್ ಮಾಧ್ಯಮದ ಹೊಸ ಪ್ರಯೋಗವನ್ನು ಮಾಡಿ ಅದರಲ್ಲಿ ಯಶಸ್ಸನ್ನು ಪಡೆದುದ್ದನ್ನು ನಾವು ಕಾಣಬಹುದಾಗಿದೆ. ಇದನ್ನು "೨೦X೨೦"ರ

ಅಳತೆಯಲ್ಲಿ ಆಯತಾಕಾರದಲ್ಲಿ ಅಮೂರ್ತಶೈಲಿಯ ಆಕೃತಿಗಳ ಜೋಡಣೆಯೊಂದಿಗೆ ಕಲಾಕೃತಿಯನ್ನು ರಚಿಸಿರುವರು. ಈ ಕಲಾಕೃತಿಯ ಒಟ್ಟು ಸ್ಥಳಾವಕಾಶದ ತುಂಬೆಲ್ಲ ಕೆಂಪು, ಕಡುಗೆಂಪು, ಕಪ್ಪು, ವರ್ಣ ಸಂಯೋಜನೆಯ ಹಾಳೆಯನ್ನು ಅಲ್ಲಲ್ಲಿ ಅರಿದಂತೆ ತಿಳಿವರ್ಣ ಲೇಪನದೊಂದಿಗೆ ಆಕೃತಿಯನ್ನು ಕಲಾಕೃತಿಯಾಗಿ ಮಾರ್ಪಾಡು ಮಾಡಲಾಗಿದೆ.

ಚಿತ್ರ-೦೩. ಮೇಣಕರಗಿದಾಗ-೦೧

ಕಲಾವಿದರಾದ ಸಿ.ಚಂದ್ರಶೇಖರವರು ಅನೇಕ ಮಲ್ಟಿಮೀಡಿಯಾ ಪ್ರಿಂಟ್ ಕಲಾಕೃತಿಯಲ್ಲಿ ಮೇಣ ಕರಗಿದಾಗ ಎನ್ನುವ ಶೀರ್ಷಿಕೆಯ ಕಲಾಕೃತಿಯ ವಿಭಿನ್ನ ತಂತ್ರಗಾರಿಕೆಯ ಪ್ರತಿರೂಪವಾಗಿ ಕಾಣಿಸುತ್ತದೆ. ಅವರು ಆಯ್ದುಕೊಂಡ ಸ್ಥಳಾವಕಾಶದಲ್ಲಿ ಆಯತಾಕಾರದಲ್ಲಿ ಅಗಲವಾಗಿ ಸಂಯೋಜಿಸಿ ಕೊಂಡಿದ್ದು, ವಿವಿಧ ಬಗೆಯ ವರ್ಣಗಳ ಏರಿತಳ ಆಕೃತಿಗಳು ಅಗತ್ಯಕ್ಕೆ ತಕ್ಕಂತೆ ಜೋಡಣೆ ಗೊಂಡಿದ್ದಾವೆ. ಇಲ್ಲಿ ಸೂಚ್ಯಾಕೃತಿಗಳು ಅಸ್ಪಷ್ಟವಾಗಿ ಗೋಚರಿಸುತ್ತಿದ್ದು, ಆಧುನಿಕತೆಯ ಕಲಾ ಪಂಥದಡಿ ತಮ್ಮನ್ನು ಗುರುತಿಸಿಕೊಂಡಿರುವುದನ್ನು ಅಮೂರ್ತಶೈಲಿಯ ಕಲಾಕೃತಿಗಳಿಂದ ಗಮನಿಸಬಹುದಾಗಿದೆ. ಸ್ಥಳಾವಕಾಶದ ಮೇಲ್ಬದಿಯಲ್ಲಿ ತಿಳಿ ಹಳದಿ, ಕೇಸರಿಯೊಂದಿಗೆ ಕೆಂಪು ವರ್ಣಗಳು ಮೇಣಾಕೃತಿಗಳಂತೆ ವಿಶಾಲವಾಗಿ ಚಲಿಸಿರುವುದನ್ನು ಕಲಾಕೃತಿಯಲ್ಲಿ ಗುರುತಿಸಬಹುದು. ಮಧ್ಯದಲ್ಲಿ ದಟ್ಟ, ಹಸಿರುವ ಕಡುಗೆಂಪು ಕೆಳಬದಿಯ ಸ್ಥಳಾವಕಾಶದಲ್ಲಿ ಬಿಳಿ, ಹಸಿರು, ಕೆಂಪು, ಹಳದಿಯು ಅಗತ್ಯಕ್ಕೆ ತಕ್ಕಂತೆ ಬಳಕೆಯಾಗಿದೆ.

ಚಿತ್ರ-೦೪. ಮೇಣಕರಗಿದಾಗ-೦೨

ಈ ಕಲಾಕೃತಿಯನ್ನು ಮಲ್ಟಿಮೀಡಿಯಾ ಪ್ರಿಂಟ್ ಮಾಧ್ಯಮದಲ್ಲಿ ರಚಿಸಲಾಗಿದೆ. ಈ ಕಲಾಕೃತಿಯನ್ನು ಆಧುನಿಕ ತಂತ್ರಾಂಶವನ್ನು ಬಳಸಿ ಕಲಾಕೃತಿಯನ್ನು ರಚಿಸಲಾಗಿದೆ. ಕಲಾವಿದರು ಮೇಣ ಕರಗಿದಾಗ ಎನ್ನುವ ಶೀರ್ಷಿಕೆಯೊಂದಿಗೆ ವಿಷಯ ವಸ್ತುವನ್ನು ಆಯ್ದುಕೊಂಡು ಕಲಾಕೃತಿಯನ್ನು ರಚಿಸಿದ್ದು, ಮೇಣ ಕರಗಿದಾಗ ಎನ್ನುವ ಶೀರ್ಷಿಕೆಯೊಂದಿಗೆ ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜಿಸಲಾಗಿದೆ. ಮೇಣ ಕರಗಿರುವ ಅದು ವಿವಿದ ಆಕೃತಿಗಳಾಗಿ ವಿವಿಧ ಮೈವಳಿಕೆಯೊಂದಿಗೆ ಗೋಚರಿಸುವುದು. ಇದು ಕಡುಗೆಂಪು, ಕಪ್ಪು, ಹಸಿರು, ಹಳದಿ ಮಿಶ್ರಣದೊಂದಿಗೆ ಸಂಯೋಜನೆಗೊಂಡ ಕಲಾಕೃತಿಯಾಗಿದೆ.

ಚಿತ್ರ-೦೫. ಸಂಯೋಜನೆ-೦೧

ಮಲ್ಟಿಮೀಡಿಯ ಪ್ರಿಂಟ್ ಸರಣಿ ಚಿತ್ರಗಳಲ್ಲಿ ಸಂಯೋಜನೆ-೧ ಎನ್ನುವ ಸರಣಿ ಕಲಾಕೃತಿಯು ಇದಾಗಿದ್ದು, ಕಲಾವಿದರಾದ ಸಿ.ಚಂದ್ರಶೇಖರವರು "೨೦ x ೨೪" ಅಳತೆಯ ಸ್ಥಳಾವಕಾಶದಲ್ಲಿ

ಆಧುನಿಕ ತಂತ್ರಾಂಶವನ್ನು ಬಳಸಿ ಈ ಕಲಕೃತಿಯನ್ನು ರಚಿಸಲಾಗಿದೆ. ಆಯತಾಕಾರದ ಒಟ್ಟು ಸ್ಥಳಾವಕಾಶದಲ್ಲಿ ಸೂಚ್ಯಾಕೃತಿಗಳ ಸಂಯೋಜನೆಯೊಂದಿಗೆ ನೆರಳು ಬೆಳಕಿನ ವಿಸಿಷ್ಟತೆಯನ್ನು ಈ ಪ್ರಿಂಟಲ್ಲಿ ಸೆರೆ ಹಿಡಿಯಲಾಗಿದೆ. ಹಳೆಯ ಮನೆಯ ಗೋಡೆಯ ಆಯಾಮವನ್ನು ಅದಕ್ಕೆ ಬಿದ್ದಿರುವ ಕಡುಗಪ್ಪು ವರ್ಣದ ನೆರಳಾಕೃತಿ. ಇದು ಒಟ್ಟು ಸ್ಥಳಾವಕಾಶವನ್ನು ಮೇಲ್ಬದಿಯಿಂದ ಕೆಳಬದಿಯವರೆಗೆ ಅಯತಾಕೃತಿಯೊಂದು ಈ ಕಲಾಕೃತಿಯಲ್ಲಿಯ ಕೇಂದ್ರ ಬಿಂದುವಾಗಿದೆ. ಈ ಮಲ್ಟಿ ಮೀಡಿಯ ಮಾಧ್ಯಮದಲ್ಲಿ ರಚಿಸಲಾದ ಈ ಕಲಾಕೃತಿಯು ವಿಶಿಷ್ಟವಾಗಿಯೇ ರಚನೆಯಾಗಿದೆ.

ಚಿತ್ರ-೦೬. ಸಂಯೋಜನೆ-೦೨

ಈ ಕಲಾಕೃತಿಯನ್ನು ೨೦೦೭ರಲ್ಲಿ ಕಲಾವಿದರಾದ ಸಿ. ಚಂದ್ರಶೇಖರವರು ಮಲ್ಟಿಮೀಡಿಯಾ ತಂತ್ರಾಂಶ ಮಾಧ್ಯಮದಲ್ಲಿ "೨೦x೨೬"ರ ಸ್ಥಳಾವಕಾಶಲದಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ಆಕೃತಿಗಳನ್ನು ಸಂಯೋಜಿಸಲಾಗಿದ್ದು ಈ ಆಕೃತಿಗಳ ಜೋಡಣೆಯ ಕಲಾಕೃತಿಯ ವಿಷಯ ವಸ್ತುವಾಗಿದೆ. ತಿಳಿ ಮತ್ತು ದಟ್ಟವರ್ಣಗಳು ಎಡ ಮತ್ತು ಬಲಪಟ್ಟಿಕೆಯಲ್ಲಿ ಪ್ರಯೋಗಗೊಂಡಿದ್ದು ಬಲ ಪಟ್ಟಿಕೆಯ ಮೇಲ್ಬದಿಯಲ್ಲಿ ಕಲ್ಲಿನ ಆಕೃತಿಯೊಂದು ಜೋಡಣೆಗೊಂಡಿದೆ. ಮಧ್ಯದ ಮಟ್ಟಿಕೆಯು ನೆರಳು ಬೆಳಕಿನ ಏರಿಳಿತದೊಂದಿಗೆ ನೇರವಾಗಿ ಸದೃಢವಾಗಿ ಸಂಯೋಜನೆಗೊಂಡಿದೆ. ಈ ಕಲಾಕೃತಿಯಲ್ಲಿಯ ವರ್ಣಾಕೃತಿಯು ಮುರು ಆಯಾಮಗಳಲ್ಲಿ ಸಂಯೋಜನೆಗೊಂಡಿರುವುದನ್ನು ಕಾಣಬಹುದಾಗಿದೆ. ವರ್ಣಾಕೃತಿ ಮತ್ತು ವಸ್ತುಕೃತಿಗಳೇ ಇಲ್ಲಿಯ ಕಲಾಕೃತಿಯ ವಿಷಯ ವಸ್ತುಗಳಾಗಿವೆ.

ಚಿತ್ರ-೦೭. ನೀರಿನ ಹನಿ

ಕಲಾವಿದರಾದ ಸಿ. ಚಂದ್ರಶೇಖರವರು ಸದರಿ ಕಲಾಕೃತಿಯನ್ನು ನೀರಿನ ಹನಿ ಎನ್ನುವ ಶೀರ್ಷಿಕೆಯೊಂದಿಗೆ "೨೦ x ೨೦" ಇಂಚು ಸ್ಥಳಾವಕಾಶದಲ್ಲಿ ಮಲ್ಟಿಮಿಡಿಯಾ ಪ್ರಿಂಟ್ ಮಾಧ್ಯಮದಲ್ಲಿ ೨೦೦೭ರಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದ್ದು, ದಡ್ಡ ಮತ್ತು ತಿಳಿ ವರ್ಣಗಳ ಮಿಶ್ರಣದೊಂದಿಗೆ ಒಟ್ಟು ಸ್ಥಳಾವಕಾಶಕ್ಕೆ ತಕ್ಕುದಾಗಿ ನೀರಿನ ಹನಿಗಳನ್ನು ವಿವಿಧ ಆಯಾಮಗಳನ್ನು ಒಟ್ಟು ಸ್ಥಳಾವಕಾಶದ ತುಂಬೆಲ್ಲ ಸಂಯೋಜಿಸಲಾಗಿದ್ದು. ಇದರಲ್ಲಿ ನೀರಿನ ಹನಿಗಳನ್ನು ವಿವಿಧ ಆಕೃತಿಗಳಲ್ಲಿ ಚಿಕ್ಕದು, ದೊಡ್ಡಾಕೃತಿಗಳಲ್ಲಿ ನೆರಳು ಬೆಳಕಿನ ಮೂರು ಆಯಾಮಗಳಲ್ಲಿ ಆಕೃತಿಗಳನ್ನು ಸಂಯೋಜಿಸಿಕೊಂಡು ಕಲಾಕೃತಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

ಚಿತ್ರ-೦೮. ಮತ್ತೆ ಚಿಗುರಿತು

ತುಂಬಾ ಸರಳವಾಗಿ ಕಾಣುವ ಫೋಟೊಗ್ರಾಫಿ ಕರ್ನಾಟಕದಲ್ಲಿ ಭಿನ್ನ ರೀತಿಯಲ್ಲಿ ಯೋಚಿಸಿ ಹಸಿರು ಹುಲ್ಲು ಬೆಳೆದಿರುವ ಕಡೆ ಒಂದು ಚಪ್ಪಡಿಯನ್ನು ಹಾಕಿ ಸ್ವಲ್ಪ ದಿನಗಳ

ಸಂಕೀರ್ಣ ಕಲಾಕೃತಿಗಳು



ಆಶಾಕಿರಣ-೦೧



ಆಶಾಕಿರಣ-೦೨

ಸಂಕೀರ್ಣ ಕಲಾಕೃತಿಗಳು



ಆಶಾಕಿರಣ-೦೩

ಸಂಕೀರ್ಣ ಕಲಾಕೃತಿಗಳು



ಮೇಣಕರಗಿದಾಗ-೦೧



ಮೇಣಕರಗಿದಾಗ-೦೨

ಸಂಕೀರ್ಣ ಕಲಾಕೃತಿಗಳು



ಮೇಣಕರಗಿದಾಗ-೦೩



ಮೇಣಕರಗಿದಾಗ-೦೪

ಸಂಕೀರ್ಣ ಕಲಾಕೃತಿಗಳು



ಸಂಯೋಜನೆ-೦೧



ಸಂಯೋಜನೆ-೦೨

ನಂತರ ನೋಡಿ ಆ ಭಾಗವೆಲ್ಲಾ ಹಸಿರು ಬಣ್ಣದಿಂದ ಬಿಳಿಬಣ್ಣದ ಕಡೆಗೆ ಬದಲಾವಣೆ ಹೊಂದಿರುವ ಈ ಕಲಾಕೃತಿಯಲ್ಲಿ ನೋಡಬಹುದು. ಸಾಮಾನ್ಯವಾಗಿ ಎಲ್ಲಾ ಜನಸಾಮಾನ್ಯರು ನೋಡಿರಬಹುದು. ಆದರೆ ಅದನ್ನು ಕಲೆಗೆ ಪರಿವರ್ತನೆ ಮಾಡಿರುವುದು ವಿಶೇಷ ಕಲಾಕೃತಿಯಾಗಿದೆ.

ಚಿತ್ರ-೦೯. ಟೈಮ್&ಸ್ಪೇಸ್

ಈ ಕಲಾಕೃತಿಯು ಹಸಿವಿನ ದಾಹದ ಸಂಕೇತವಾಗುತ್ತದೆ. ಈ ಕೃತಿಯಲ್ಲಿ ಒಳಗೊಂಡಿರುವ ಅಂಶ ಅಲುಮಿನಿಯಂ ಪಾತ್ರೆಯ ಮೇಲೆ ಅಕ್ಕಪಕ್ಕ ಕಾಗೆಗಳು ಅದರ ಅಡಿಯಲ್ಲಿ ಹಳೆಯ ಪುಸ್ತಕ ವರ್ಣಗಳ ಸಂಯೋಜನೆ ಇದರರ್ಥ ಬಡವರಿಗೆ ಹಾಗೆ ದಲಿತರಿಗೆ ಹಸಿವು ಸದಾ ಇದ್ದದ್ದೆ ಆದರೆ ಆ ಕಾಲದಲ್ಲಿ ದಲಿತರಿಗೆ ಶಿಕ್ಷಣ ದೊರಕಲು ತುಂಬಾ ಕಷ್ಟ ಎಂಬ ಆ ಕಾಲದಲ್ಲಿನ ಶಿಕ್ಷಣ ವ್ಯವಸ್ಥೆ ಸಾಧ್ಯವಿಲ್ಲ ಎಂಬ ಸಮಾಜದಲ್ಲಿನ ಜನರ ತಾರತಮ್ಯದ ಬಗ್ಗೆ ತಿಳಿಯಲು ಒಳ್ಳೆಯ ಪ್ರಯತ್ನ ಕಂಡುಬರುತ್ತದೆ. ಜೊತೆಗೆ ಭಿಕ್ಷುಗಳು ತನ್ನ ವಸ್ತುಗಳನ್ನು ತಾವೇ ಹೊಲಿದುಕೊಳ್ಳಬೇಕು ಎಂಬ ಬೌದ್ಧಧರ್ಮ ದಲ್ಲಿನ ಅಂಶಗಳು ಸಹ ಅನುಕರಿಸಿದ್ದಾರೆ.

* ಅಂಧರ ಅಕ್ಷರ ಹುಡುಕಾಟ

* *Dowri* ಸಿರೀಸ್

* ಸ್ವತಂತ್ರ ಸಿಕ್ಕಿದರು ಭಾರತೀಯರು ಇನ್ನು ತಡಕಾಟದಲ್ಲಿದ್ದೇವೆ.

* ಆದಿಮಾನವರ ಗುಹಾಂತರ ಚಿತ್ರ

* *HIV* ಸಂಬಂಧಿತ ಹೀಗೆ ಸಮಾಜದಲ್ಲಿ ನಡೆಯುವ ಹಲವಾರು ಘಟನೆಗಳು ಇವರ ಜೀವನದಲ್ಲಿ ಹಾಗು ಕಲಾಕೃತಿಗಳಲ್ಲಿ ಕಾಣಬಹುದು.

೫.೩. ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು

ಗೋಲ್ಡನ್ ಸ್ಟಿಚ್ ಸರಣಿ ಕಲಾಕೃತಿಯು ಇವರು ರಚಿಸಿರುವ ಕಲಾಕೃತಿಯಲ್ಲಿ ಉತ್ತಮವಾದ ಕಲಾಕೃತಿಗಳಾಗಿವೆ. ಇವರ ಪ್ರಖ್ಯಾತಿಗೊಳಿಸಿದ ಕಲಾಕೃತಿಗಳಲ್ಲಿ ಸ್ಟಿಚ್ ಸರಣಿಯ ಕಲಾಕೃತಿಗಳಾಗಿವೆ. ಈ ಸರಣಿ ಕಲಾಕೃತಿಗಳಲ್ಲಿ ವಿಭಿನ್ನತೆಯನ್ನು ಮೈಗೂಡಿಸಿಕಂಡು, ಆಕೃತಿಗಳನ್ನು ಆಯಾ ಸಂದರ್ಭಕ್ಕೆ ತಕ್ಕುದಾಗಿ ಅಳವಡಿಸಿಕೊಂಡಿರುವುದು ಇವರ ವಿಭಿನ್ನ ಅಲೋಚನಾ ಕ್ರಮಕ್ಕೆ ಸಾಕ್ಷಿಯಾಗಿದೆ.

ಚಿತ್ರ-೦೧.

ಕಲಾವಿದರಾದ ಸಿ. ಚಂದ್ರಶೇಖರರವರು ೨೦೦೭ರಲ್ಲಿ ರಚಿಸಲಾದ ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಯನ್ನು ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸ್ ಮೇಲೆ ಮಿಶ್ರ ಮಾಧ್ಯಮದಲ್ಲಿ

೨೪X೨೪ ಇಂಚ್ ಚೌಕಾಕಾರದ ಸ್ಥಳಾವಕಾಶದಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. ಕ್ಯಾನ್ವಾಸ್‌ನ ಎಡ ಪಾರ್ಶ್ವಕ್ಕೆ ಸಂಯೋಜನೆಗೊಳ್ಳುವಂತೆ ದಟ್ಟ ವರ್ಣಾಕೃತಿಯ ಕಟ್ಟಿಗೆಯ ಕೋಲುಗಳನ್ನು ಕೆಲ ಮತ್ತು ಮೇಲು ಬದಿಯನ್ನು ಛೇಧಿಸಿಕೊಂಡು ಹೋಗಿರುವಂತೆ ಚಿತ್ರಿಸಲಾಗಿದೆ. ಇವೆರಡಕ್ಕೆ ಆಸರೆ ಎಂಬಂತೆ ಮೇಲೆ ಬಂದು ಕೋಲು, ಕೆಳಬದಿಯಲ್ಲಿ ಒಂದು ಕೋಲನ್ನು ಕಟ್ಟಲಾಗಿದೆ. ಕೆಳಬದಿಯ ಕೋಲು ಬಲಪಾರ್ಶ್ವವನ್ನು ಛೇದಿಸಿಕೊಂಡು ಹೋಗಿದೆ. ಇವುಗಳ ಮಧ್ಯದಲ್ಲಿ ಒಟ್ಟು ಸ್ಥಳಾವಕಾಶದ ೧/೩ ರಷ್ಟು ಭಾಗವು ದಟ್ಟ, ತಿಳಿವರ್ಣದ ಬಟ್ಟೆಗಳನ್ನು ಸ್ಟಿಚ್ ಮಾಡಿ ಹಾಕಲಾಗಿದೆ. ಕಡು ಹಸಿರು, ಮಧ್ಯದಲ್ಲಿ ತಿಳಿವರ್ಣದ ವಸ್ತ್ರ, ಅದರ ಮಧ್ಯ ನೀಲಿವರ್ಣ ಕೋನಾಕೃತಿಯ ತೇಪೆ ಬಟ್ಟೆ. ಅದಕ್ಕೆ ಕೆಂಪು ದಾರದಿಂದ ಹೊಲಿಗೆ ಹಾಕಲಾಗಿದೆ. ಹಳದಿ, ತಿಳಿ ಹಸಿರು ವರ್ಣದ ತೇಪೆಗಳು ಅಲ್ಲಲ್ಲಿ ಗೋಚರಿಸುತ್ತಿದ್ದು, ಇವುಗಳೆಲ್ಲ ಕಡುಕಪ್ಪು, ನೀಲಿಯ ದಾರಿ ಹೊಲಿಗೆಯನ್ನು ಹಾಕಲಾಗಿದ್ದು ಕಲಾಕೃತಿಗೆ ಪೂರಕವೆನಿಸುತ್ತವೆ.

ಚಿತ್ರ-೦೨.

ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಎನ್ನುವ ಸರಣಿ ಕಲಾಕೃತಿಯು ಆ ಸರಣಿಯ ಮುಂದುವರಿದ ಕಲಾಕೃತಿಯು ಇದಾಗಿದ್ದು, ಈ ಕಲಾಕೃತಿಯನ್ನು ಕಲಾವಿದರಾದ ಸಿ.ಚಂದ್ರಶೇಖರವರು ೨೦೦೭ರಲ್ಲಿ ರಚಿಸಿರುವರು. ಈ ಕಲಾಕೃತಿಯನ್ನು ಚೌಕಾಕಾರದ ಸ್ಥಳಾವಕಾಶದಲ್ಲಿ ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸ್‌ನ ಮೇಲೆ ಮಿಶ್ರಮಾಧ್ಯಮ ಶೈಲಿಯಲ್ಲಿ ಕಲಾಕೃತಿಯನ್ನು ರಚಿಸಲಾಗಿದೆ. ಒಟ್ಟು ಸ್ಥಳಾವಕಾಶದಲ್ಲಿ ಉದ್ದುದ್ದಾಗಿ ನಾಲ್ಕು ಪಟ್ಟಿಕೆಗಳನ್ನು ತಯಾರಿಸಿಕೊಳ್ಳಲಾಗಿದೆ. ಅಡ್ಡಲಾಗಿ ಮೂರು ಪಟ್ಟಿಕೆಗಳನ್ನು ತಯಾರಿಸಿಕೊಳ್ಳಲಾಗಿದೆ. ಉದ್ದದ ಪಟ್ಟಿಕೆಗಳು ಎಡಪಾರ್ಶ್ವದಿಂದ ಮೂರು ಪಟ್ಟಿಕೆಗಳು ಸಮನಾಂತರವಾಗಿದ್ದು, ಬಲಪಾರ್ಶ್ವದ ಪಟ್ಟಿಕೆಯ ದೊಡ್ಡದಾಗಿದೆ. ಕೆಳ ಮತ್ತು ಮೇಲ್ಬದಿಯ ಅಡ್ಡಾಲಾದ ಪಟ್ಟಿಕೆಗಳು ಚಿಕ್ಕದಾಗಿದ್ದು ಮಧ್ಯದ ಪಟ್ಟಿಕೆಯ ಎಲ್ಲಾ ಸ್ಥಳಾವಕಾಶವನ್ನು ಆವರಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಕಡುಗಪ್ಪು ವರ್ಣದ ಕೋಲುಗಳಾಕೃತಿಗಳನ್ನು ಸ್ಥಳಾವಕಾಶಕ್ಕೆ ತಕ್ಕುದಾಗಿ ಸಂಯೋಜಿಸಿಕೊಳ್ಳಲಾಗಿದೆ.

ಸ್ಥಳಾವಕಾಶದ ದೊಡ್ಡದಾದ ಮಧ್ಯದ ಪಟ್ಟಿಕೆಯಲ್ಲಿಯ ತುಂಬೆಲ್ಲ ಆವರಿಸಿರುವಂತೆ ಸ್ಟಿಚ್ ಮಾಡಿದ ಬಟ್ಟೆಗಳಾಕೃತಿಯು ಚಿತ್ರಿಸಲಾಗಿದೆ. ಕಡುಗಪ್ಪು, ಕೆಂಪು, ಬಿಳಿ ವರ್ಣಗಳ ಮಿಶ್ರಣದೊಂದಿಗೆ ಆಯಾ ಪಟ್ಟಿಕೆಗೆ ಅಗತ್ಯವೆಂಬಂತೆ ಚಿತ್ರಿಸಲಾಗಿದೆ. ಕಡುಗಪ್ಪು, ಕೆಂಪು, ಬಿಳಿ ವರ್ಣಗಳ ಮಿಶ್ರಣದೊಂದಿಗೆ ಆಯಾ ಪಟ್ಟಕೆಗೆ ಅಗತ್ಯವೆಂಬಂತೆ ಚಿತ್ರಿಸಲಾಗಿದೆ. ಬಲಪಾರ್ಶ್ವದ ಪಟ್ಟಿಕೆಯಲ್ಲಿಯ ಬಟ್ಟೆಯಲ್ಲಿ ಕೇಸರಿ ವರ್ಣದ ಕೋನಾಕೃತಿಯ ತೇಪೆಯನ್ನು ಕಡುಗಪ್ಪು ವರ್ಣದ ದಾರದಿಂದ ಹಾಕಲಾಗಿದೆ. ಕೆಳಬದಿಯಲ್ಲಿ ತಿಳಿ ಹಸಿರು ವರ್ಣದ ದಾರದಿಂದ ವೃತ್ತಾಕಾರದ ಹರಿದ

ಸ್ಥಳವನ್ನು ಹೊಲಿಗೆಯ ಮೂಲಕ ಮುಚ್ಚುವ ಪ್ರಯತ್ನ ಎಡಪಾರ್ಶ್ವದಲ್ಲಿ ದಟ್ಟ, ತಿಳಿ ದಟ್ಟ ವರ್ಣಗಳ ಮಿಶ್ರಣದ ಬಟ್ಟೆಯನ್ನು ಚಿತ್ರಿಸಲಾಗಿದೆ. ಅಲ್ಲಲ್ಲಿ ಹೊಲಿಗೆಗಳನ್ನು ಅಗತ್ಯಕ್ಕೆ ತಕ್ಕದಾಗಿ ಚಿತ್ರಿಸಲಾಗಿದ್ದು, ಉಳಿದಂತೆ ಹಿನ್ನೆಲೆಯ ಸ್ಥಳಾವಕಾಶವು ದಟ್ಟ ನೀಲಿ, ತಿಳಿನೀಲಿಯೊಂದಿಗೆ ಪೂರ್ಣಗೊಳಿಸಲಾಗಿದೆ.

ಚಿತ್ರ-೦೩

ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸ್‌ನಲ್ಲಿ ಮಿಶ್ರಮಾಧ್ಯಮದ ಕಲಾಕೃತಿಯನ್ನು ೨೪x೨೪ ಇಂಚ್ ಚೌಕಾಕಾರದ ಕ್ಯಾನ್ವಾಸಿನ ಸ್ಥಳಾವಕಾಶದಲ್ಲಿ ೨೦೦೭ರ ಸುಮಾರಿಗೆ ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಯನ್ನು ರಚಿಸಲಾಗಿದೆ. ಕಲಾವಿದರಾದ ಸಿ.ಚಂದ್ರಶೇಖರವರು ಸೃಜನಾಶೀಲ ಮನಸ್ಥಿತಿ ಇರುವಂತಹವರಾಗಿದ್ದು, ಸ್ಟಿಚ್ ಸರಣಿಯ ಕಲಾಕೃತಿಯೊಂದಿಗೆ ಕಲಾವಲಯದಲ್ಲಿ ಗುರುತಿಸಿಕೊಂಡಿರುವ ಇವರು ತಮ್ಮದೇ ಶೈಲಿಯನ್ನು ಕಂಡುಕೊಂಡಿದ್ದಾರೆ.

ಈ ಕಲಾಕೃತಿಯಲ್ಲಿ ವಿವಿಧ ಬಗೆಯ ಆಕೃತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಕಟ್ಟಿಗೆ, ಬಟ್ಟೆ ಮತ್ತು ದಾರಗಳೆ ಈ ಕಲಾಕೃತಿ ಆಕೃತಿಗಳಾಗಿವೆ. ಅಡ್ಡ ಮತ್ತು ಉದ್ದದ ಪಟ್ಟಿಕೆಗಳನ್ನು ತಯಾರಿಸಿಕೊಳ್ಳಲಾಗಿದೆ. ನಾಲ್ಕು ಉದ್ದ ಪಟ್ಟಿಕೆಗಳಿದ್ದರೆ ನಾಲ್ಕು ಅಡ್ಡ ಪಟ್ಟಿಕೆಗಳಿವೆ. ನಾಲ್ಕು, ನಾಲ್ಕು ಸಮನಾಂತರ ಪಟ್ಟಿಕೆಗಳಲ್ಲಿ ಒಟ್ಟಾರೆ ೨೪ ಪಟ್ಟಿಕೆಗಳು ತಯಾರಿಸಿಕೊಳ್ಳಲಾಗಿದೆ. ಇದರಲ್ಲಿ ೧೦ ದಟ್ಟ ನೀಲಿ, ತಿಳಿನೀಲಿ, ಬಿಳಿಮಿಶ್ರಣದ ಬಟ್ಟೆಯ ಹೊಲಿಗೆಯ ಬಟ್ಟೆಯನ್ನು ಹಾಕಲಾಗಿದೆ. ಉಳಿದಂತೆ ನಾಲ್ಕು ಕೆಂಪು ವರ್ಣದ ಬಟ್ಟೆಯ ಪಟ್ಟಿಕೆಗಳು ಇನ್ನುಳಿದಂತೆ ಹಿನ್ನೆಯಲ್ಲಿ ದಟ್ಟ ಮತ್ತು ತಿಳಿ ಹಳದಿಯ ವರ್ಣದ ಲೇಪನ ಮಾಡಲಾಗಿದೆ. ನೀಳಿ ಬಟ್ಟೆಯ ಮಧ್ಯೆ ಕೆಂಪು ಪಟ್ಟಿಯ ಲೇಪನ ಮಾಡಿದ್ದು, ದಟ್ಟವರ್ಣದ ಕಟ್ಟಿಗೆಗಳನ್ನು ವಿವಿಧ ಆಯಾಮಕ್ಕೆ ತಕ್ಕುದಾಗಿ ಅಳವಡಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ತಳ ಸಮುದಾಯದ ಜೀವನ ಶೈಲಿಯನ್ನು ಪ್ರತಿಬಿಂಬಿಸುವ, ಅವರ ಬದುಕಿನ ವಿವಿಧ ಆಯಾಮಗಳನ್ನು ಇವರ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಚಿತ್ರ-೦೪

೨೦೦೭ರಲ್ಲಿ ರಚಿಸಲಾದ ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸ್ ಮಿಶ್ರಣ ಮಾಧ್ಯಮದಲ್ಲಿ ತಯಾರಿಸಲಾದ ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಎನ್ನುವ ಈ ಸರಣಿ ಕಲಾಕೃತಿಗಳಲ್ಲಿ ಇದು ಒಂದಾಗಿದ್ದು ಕಲಾವಿದರಾದ ಸಿ.ಚಂದ್ರಶೇಖರವರ ಶ್ರೇಷ್ಠ ಕಲಾಕೃತಿಗಳಲ್ಲಿ ಇದು ಒಂದಾಗಿದೆ. ೨೪x೨೪ ಇಂಚಿನ ಚೌಕಾಕಾರದ ಸಮಾನ ಸ್ಥಳಾವಕಾಶದ ಕ್ಯಾನ್ವಾಸಿನ ಮೇಲೆ ವಿಷಯಕ್ಕೆ ತಕ್ಕುದಾಗಿ ಆಕೃತಿಗಳನ್ನು ಅಗತ್ಯಕ್ಕೆ ತಕ್ಕಂತೆ ಸಂಯೋಜನೆ ಮಾಡಿಕೊಂಡು ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ. ಶೋಷಿತ ವರ್ಗವನ್ನೇ ತಮ್ಮ ಕಲಾಕೃತಿಯ ಮುಖ್ಯ ವಿಷಯ ವಸ್ತುವಾಗಿ

ಆಯ್ದುಕೊಳ್ಳಲಾಗಿದೆ. ಈ ಕಲಾಕೃತಿಯಲ್ಲಿ ಜೀನ್ಸ್ ಮಾದರಿಯ ಬಟ್ಟೆಯನ್ನು ಉಪಯೋಗಿಸಿಕೊಂಡು, ಸಮಾಜದಲ್ಲಿಯ ಅವರ ಸ್ಥಿತಿಗತಿಗಳನ್ನು ಬಟ್ಟೆಗೆ ಹೋಲಿಕೆ ಮಾಡಿಕೊಂಡು, ತೇಪೆ ಅಚ್ಚುವ ಕಾರ್ಯವನ್ನು ಕಲಾಕೃತಿಗಳ ಮೂಲಕ ಮಾಡಲಾಗಿದೆ.

ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಯಲ್ಲಿ ಪಟ್ಟಿಕೆಗಳು, ಚೌಕಗಳು ಆಯತಗಳೆ ಪ್ರಧಾನ ಆಕೃತಿಗಳಾಗಿವೆ. ಒಟ್ಟಾರೆ ಸ್ಥಳಾವಕಾಶದಲ್ಲಿ ೧೮ ಪಟ್ಟಿಕೆಗಳಾಗಿ ವಿಭಾಗಿಸಿಕೊಂಡು ಕಟ್ಟಿಗೆಯ ಕೋಲು ದಟ್ಟ ವರ್ಣದ ಬಳಕೆಯೊಂದಿಗೆ ಸಂಯೋಜಿಸಿದರೆ ಉಳಿದಂತೆ ದಟ್ಟ ನೀಲಿ, ತಿಳಿ ನೀಲಿ, ಬಿಳಿ ವರ್ಣದ ಬಟ್ಟೆಗಳಿಗೆ ಹಳದಿ, ದಟ್ಟ ವರ್ಣದ ದಾರದಿಂದ ಕೆಂಪು ಬಟ್ಟೆಯನ್ನು ಪಯೋಗಿಸಿಕೊಂಡು ತೇಪೆಯನ್ನು ಹಾಕಲಾಗಿದೆ. ಮೇಲ್ಬದಿಯ ನಾಲ್ಕು ಪಟ್ಟಿಕೆಗಳಲ್ಲಿ ತಿಳಿ ಹಳದಿಯನ್ನು ಹಿನ್ನೆಲೆಯಾಗಿ ಲೇಪಿಸಲಾಗಿದೆ. ಉಳಿದಂತೆ ಮಧ್ಯದಲ್ಲಿ ಕೆಳಬದಿಯಲ್ಲಿ ಕಡುಗೆಂಪು, ತಿಳಿವರ್ಣದಿಂದ ಹಿನ್ನೆಲೆಯ ಸ್ಥಳಾವಕಾಶವನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆ ಈ ಕಲಾಕೃತಿಗೆ ಮೆರಗುಗೊಳಿಸುವಂತಿದೆ.

ಚಿತ್ರ-೦೫.

ಕರ್ನಾಟಕ ಕಂಡ ಶ್ರೇಷ್ಠ ಕಲಾವಿದರಾದ ಸಿ.ಚಂದ್ರಶೇಖರರವರು ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸ್‌ನ ಮೇಲೆ ಮಿಶ್ರಮಾಧ್ಯಮದಲ್ಲಿ, ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಎಂಬ ಸರಣಿಯ ಕಲಾಕೃತಿಯ ಇದು ಒಂದಾಗಿದ್ದು, ಇದನ್ನು ೨೦೦೭ರಲ್ಲಿ ೨೪x೨೪ ಇಂಚ್ ಸ್ಥಳಾವಕಾಶದ ಚೌಕಾಕಾರದ ಕ್ಯಾನ್ವಾಸ್‌ನ ಮೇಲೆ ಚಿತ್ರಿಸಲಾಗಿದೆ. ಕಲಾವಿದರು ೨೦೦೭ರಲ್ಲಿ ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಸರಣಿಯ ಕಲಾಕೃತಿಯನ್ನು ರಚಿಸಿರುವರು ಒಟ್ಟು ಸ್ಥಳಾವಕಾಶಕ್ಕೆ ತಕ್ಕಂತೆ ವಿಷಯಾಧಾರಿತ ಆಕೃತಿಗಳನ್ನು ಸಂಯೋಜಿಸಲಾಗಿದೆ. ಒಟ್ಟು ಸ್ಥಳಾವಕಾಶದ ಮುಕ್ಕಾಲು ಭಾಗದಷ್ಟು ಬಟ್ಟೆಯಾಕೃತಿಯನ್ನು ರಚಿಸಲಾಗಿದೆ.

ಈ ಕಲಾಕೃತಿಯಲ್ಲಿ ದಟ್ಟ ವರ್ಣದ ಕಟ್ಟಿಗೆ ದಾರಾಗಳಾಕೃತಿಯನ್ನು ವಿವಿಧ ಆಯಾಮದಲ್ಲಿ ಚಿತ್ರಿಸಲಾಗಿದೆ. ತೀರಾ ತಳ ಸಮುದಾಯದ ಬದುಕಿನ ವಾಸ್ತವ ಚಿತ್ರಣವನ್ನು ತಮ್ಮ ಕಲಾಕೃತಿಯ ವಿಷಯ ವಸ್ತುವಾಗಿದೆ. ಅಸ್ತವ್ಯಸ್ತವಾದ ಹರಿದ ಬಟ್ಟೆಗಳಿಗೆ ತೇಪೆ ಮತ್ತು ಹೊಲಿಗೆಯ ಮೂಲಕ ಸರಿಪಡಿಸುವುದರಲ್ಲಿ ಕಲಾವಿದರು ತುಂಬಾ ಜಾಗರುಕತೆಯಿಂದ ಸ್ಪಷ್ಟವಾಗಿ ತಿಳಿಸುವ ಪ್ರಯತ್ನ ಇದಾಗಿದೆ. ದಟ್ಟ ಮತ್ತು ತಿಳಿ ನೀಲಿ ವರ್ಣದ ಬಟ್ಟೆಯನ್ನು ಅಡ್ಡಲಾಗಿ ಕಟ್ಟಲಾಗಿದ್ದು ಅದಕ್ಕೆ ಆಸರೆಯಾಗಿ ಕಟ್ಟೆ, ದಾರಗಳನ್ನು ಕಟ್ಟಲಾಗಿದ್ದರೂ. ಅದು ಅಲ್ಲಲ್ಲಿ ಕಿತ್ತೊಗಿದ್ದು ಅದಕ್ಕೆ ಕೆಂಪು. ಹಳದಿ ದಟ್ಟ ವರ್ಣ್ಗಳ ದಾರದಿಂದ ತೇಪೆ ಹಾಕಲಾಗಿದೆ. ಈ ತೇಪೆಯು ತಳ ಸಮುದಾಯಗಳ ಮಾನ ಮರ್ಯಾದೆಯ ಸಂಕೇತವಾಗಿ ಆ ಆಕೃತಿಗಳನ್ನು ಬಳಸಿಕೊಳ್ಳಲಾಗಿದೆ. ಹಿನ್ನೆಲೆಯಲ್ಲಿ

ದಟ್ಟ, ತಿಳಿವರ್ಣಗಳ ಬಳಕೆಯಿಂದ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ ಕಲಾಕೃತಿ ತಕ್ಕದಾಗಿ ಸಂಯೋಜಿಸಿ ಪೂರ್ಣಗೊಳಿಸಿದೆ.

ಚಿತ್ರ-೦೬.

ಗೋಲ್ಡನ್ ಸ್ಟಿಚ್ ಸರಣಿ ಕಲಾಕೃತಿಯನ್ನು ಕಲಾವಿದರಾದ ಸಿ.ಚಂದ್ರಶೇಖರವರು ಡಿಜಿಟಲ್ ಪ್ರಿಂಟ್ ಮತ್ತು ಕ್ಯಾನ್ವಾಸನ ಮೇಲೆ ೨೦೦೭ರಲ್ಲಿ ರಚಿಸಿರುವರು. ೨೪X೨೪ ಇಂಚ್ ಚೌಕಾಕಾರದ ಸ್ಥಳಾವಕಾಶದ ಮೇಲೆ ಆಧುನಿಕ ತಂತ್ರಜ್ಞಾನವನ್ನು ಬಳಸಿ ತಮ್ಮ ಪ್ರಸಿದ್ಧ ಕಲಾಶೈಲಿಯಲ್ಲಿ ಒಂದಾದ ಸ್ಟಿಚ್ ಸರಣಿ ಕಲಾಕೃತಿಯಲ್ಲಿ ಇದು ಒಂದಾಗಿದ್ದು, ಕಲಾವಲಯದಲ್ಲಿ ಹೆಚ್ಚು ಪ್ರಸಿದ್ಧತೆಯನ್ನು ತಂದ ಕಲಾಕೃತಿಗಳಲ್ಲಿ ಸ್ಟಿಚ್ ಸರಣಿಯ ಕಲಾಕೃತಿಗಳಾಗಿವೆ. ಬಂಗಾರದ ಹೊಲಿಗೆಯನ್ನು ತಳಸಮುದಾಯದ ಸ್ಥಿತಿಗತಿಗಳನ್ನು ತೇಪೆಗೈಯುವ ಒಂದು ವಿಧಾನವಾಗಿ ಈ ರೀತಿ ಬಳಸಿಕೊಳ್ಳಲಾಗಿದೆ. ಚೌಕಾಕಾರದ ಒಟ್ಟು ಸ್ಥಳಾವಕಾಶದಲ್ಲಿ ಸಾಮಾನ್ಯ ವಿಷಯ ವಸ್ತುವಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಅದಕ್ಕೆ ತಮ್ಮದೇ ಶೈಲಿಯ ಮೂಲಕ ಕಲಾವಲಯಕ್ಕೆ ಅರ್ಪಿಸಿರುವುದು ಕಲಾವಲಯಕ್ಕೆ ಮತ್ತು ಮುಂದಿನ ಪೀಳಿಗೆಗೆ ಮಾದರಿಯಾಗಿದೆ.

ಈ ಕಲಾಕೃತಿಯಲ್ಲಿಯ ಆಕೃತಿಗಳಲ್ಲಿ ನಾಲ್ಕು ಅಡ್ಡ ಪಟ್ಟಿಕೆಯಾಕೃತಿಗಳನ್ನು ಕಟ್ಟಿಗೆಯ ವಸ್ತುವಾಗಿ ಬಳಸಿಕೊಳ್ಳಲಾಗಿದ್ದು, ಉಳಿದಂತೆ ನಾಲ್ಕು ಉದ್ದ ಪಟ್ಟಿಕೆಗಳನ್ನು ಸಂಯೋಜಿಸಿಕೊಳ್ಳಲಾಗಿದೆ. ಕೋಲುಗಳಾಕೃತಿಗೆ ಎಡಪಾರ್ಶ್ವದ ಪಟ್ಟಿಕೆಯಲ್ಲಿ ಮೇಲಿನ ಸ್ವಲ್ಪ ಸ್ಥಳಾವಕಾಶವನ್ನು ಬಿಟ್ಟು ಉಳಿದಂತೆಲ್ಲ ಜಾಂಬಳಿ ವರ್ಣಲೇಪನದ ಜೀನ್ಸ್ ವಸ್ತುವನ್ನು ಚಿತ್ರಿಸಿದ್ದು ಅದರ ಮಧ್ಯ ಅಲ್ಲಲ್ಲಿ ದಟ್ಟ, ತಿಳಿ ವರ್ಣಗಳ ಲೇಫನವಿದ್ದು, ಹಳದಿಯ ಬಿಂದುಗಳು ಬಳಕೆಯಾಗಿವೆ. ಉಳಿದಂತೆ ಮೇಲ್ಭಾಗದ ಪಟ್ಟಿಕೆಯನ್ನೊರತುಪಡಿಸಿ ಹಸಿರು ಮತ್ತು ನೀಲಿ ವರ್ಣದ ಬಳಕೆಯಿಂದ ಜೀನ್ಸ್ ವಸ್ತುವನ್ನು ದಟ್ಟ, ತಿಳಿ ವರ್ಣದೊಂದಿಗೆ ಸಂಯೋಜಿಸಿ ಚಿತ್ರಿಸಿದ್ದು ಅಲ್ಲಲ್ಲಿ ಕೆಂಪು ಹಳದಿಯ ತೇಪೆಗಳನ್ನು ಹೊಲಿಗೆಯ ಮೂಲಕ ಹಾಕಲಾಗಿದೆ.

ಚಿತ್ರ-೦೭

೨೦೦೭ರಲ್ಲಿ ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಎನ್ನುವ ಸರಣಿ ಕಲಾಕೃತಿಗಳಲ್ಲಿ ಪ್ರಸಿದ್ಧ ಕಲಾಕೃತಿಯು ಇದಾಗಿದ್ದು, ಕಲಾವಿದರಾದ ಸಿ.ಚಂದ್ರಶೇಖರರವರು ೨೦೦೭ರಲ್ಲಿ ಡಿಜಿಟಲ್ ಪ್ರಿಂಟ್ ಮತ್ತು ಪ್ಯಾಚ್‌ನ್ನು ಕ್ಯಾನ್ವಾಸ್‌ನ ಮೇಲೆ ೨೪X೨೪ ಚೌಕಾಕಾರದ ಸ್ಥಳಾವಕಾಶದಲ್ಲಿ ತೀರಾ ತಳಮಟ್ಟದ ಜನಸಾಮಾನ್ಯರ ಸ್ಥಿತಿಗತಿಗಳ ವಿಷಯವಸ್ತುವನ್ನು ಇವರ ಕಲಾಕೃತಿಗಳ ಮೂಲ ಆಕೃತಿಗಳಾಗಿದ್ದು ಅಗತ್ಯಕ್ಕೆ ತಕ್ಕಂತೆ ಸ್ಥೂಲವಾದ ಆಕೃತಿಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದರು. ಈ ಕಲಾಕೃತಿಯಲ್ಲಿ ಒಟ್ಟು ಸ್ಥಳಾವಕಾಶಕ್ಕೆ ತಕ್ಕಂತೆ ಮೇಲ್ಬದಿಯ ಮತ್ತು ಕೆಳಬದಿಯ ಸ್ಥಳಾವಕಾಶದಲ್ಲಿ

ಹಿನ್ನೆಲೆಯ ತಿಳಿ ವರ್ಣಗಳ ಮಿಶ್ರಣವನ್ನು ಕಾಯ್ದುಕೊಂಡು ಮುನ್ನೆಲೆಯಲ್ಲಿ ಕಟ್ಟಿಗೆಯ ಕೋಲುಗಳನ್ನು ಅಡ್ಡ ದಿಡ್ಡವಾಗಿ ಸಂಯೋಜಿಸಿಕೊಂಡು ಸದೃಢವಾದ ಕಡುಗಪ್ಪು ದಾರದಿಂದ ಬಿಗಿಯಾಗಿ ಕಟ್ಟಲಾಗಿದ್ದು, ಅದಕ್ಕೆ ತಿಳಿ ಮತ್ತು ದಟ್ಟ ನೀಲಿ ವರ್ಣದ ಜೀನ್ಸ್ ಬಟ್ಟೆಯನ್ನು ಎಡ ಮತ್ತು ಬಲಪಾರ್ಶ್ವಕ್ಕೆ ಛೇಡಿಸಿದಂತೆ ಚಿತ್ರಿಸಲಾಗಿದ್ದು, ಇದು ತಳಸ್ತರದ ಬಡ ಜನರ ಸ್ವಾಭಿಮಾನದ ಸಂಕೇತವೆಂಬಂತೆ ಅವರ ವಾಸ್ತವ ಬದುಕಿನ ವಾಸ್ತವ್ಯದ ಸಂಕೇತವಾಗಿರುವಂತೆ ತೋರುತ್ತದೆ. ಇದರಲ್ಲಿ ೧೨ ಪಟ್ಟಿಕೆಗಳಿದ್ದು ಅಲ್ಲಲ್ಲಿ ಈ ವಸ್ತುವು ಕಿತ್ತುಕೊಂಡಿದ್ದು, ಬಂಗಾರದ ಹೊಲಿಗೆಯನ್ನು ಹಾಕಲಾಗಿದೆ. ಕೆಂಪು ಮತ್ತು ಹಳದಿ ವರ್ಣಗಳ ಪ್ರಯೋಗದೊಂದಿಗೆ ಬಿಳಿ ವರ್ಣದ ತೇಪೆಗಳು ಅಗತ್ಯಕ್ಕೆ ತಕ್ಕಂತೆ ಬಳಸಿರುವುದನ್ನು ನಾವು ಕಾಣಬಹುದಾಗಿದೆ. ಒಟ್ಟಾರೆಯ ಈ ಕಲಾಕೃತಿಯು ಹಿನ್ನಲೆ ಮುನ್ನಲೆಯೊಂದಿಗೆ ಉತ್ತಮವಾಗಿ ಸಂಯೋಜನೆಗೊಂಡಿರುವುದನ್ನು ಈ ಕಲಾಕೃತಿಯಲ್ಲಿ ಕಾಣಬಹುದಾಗಿದೆ.

ಚಿತ್ರ–೦೮.

ಕಲಾವಿದರಾದ ಸಿ.ಚಂದ್ರಶೇಖರವರು ಡಿಜಿಟಲ್ ಪ್ರಿಂಟ್ ಮತ್ತು ಪ್ಯಾಚ್ ವರ್ಕ್‌ನ್ನು ಕ್ಯಾನ್ವಾಸ್ ಮೇಲೆ ಮಿಶ್ರ ಮಾಧ್ಯಮದಲ್ಲಿ ವಿಭಿನ್ನ ತಂತ್ರಾಂಶದ ಶೈಲಿಯಲ್ಲಿ ೨೦೦೭ರಲ್ಲಿ ರಚಿಸಿದರು. ಪ್ರಸಿದ್ಧ ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳನ್ನು ಸದರಿ ವರ್ಷದುದ್ದಕ್ಕೂ ರಚಿಸಿದರು. ಈ ಸರಣಿಯ ಹಿಂದಿನ ಎಲ್ಲಾ ಕಲಾಕೃತಿಗಳನ್ನು ಗಮನಿಸಿದಾಗ ಚೌಕಾಕಾರದ ೨೪x೨೪ ಇಂಚ್ ಸ್ಥಳಾವಕಾಶದಲ್ಲಿ ಸಂಯೋಜಿಸಿದ ಕಲಾಕೃತಿಯನ್ನು ರಚಿಸಿರುವುದನ್ನು ಕಾಣಲಾಗುವುದು. ಕಲಾವಿದರು ತಮ್ಮ ಕಲಾಕೃತಿಯಲ್ಲಿ ಸೌಮ್ಯ ಮತ್ತು ಪ್ರಖರ ವರ್ಣಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವರು. ಹಿನ್ನಲೆಯಲ್ಲಿ ಪ್ರಖರ ವರ್ಣವಿದ್ದರೆ ಮುನ್ನಲೆಯಲ್ಲಿ ಸೌಮ್ಯ ವರ್ಣದ ಬಳಕೆ ಇರುತ್ತದೆ. ತಳ ಸಮುದಾಯದ ಮನಸ್ಥಿತಿ, ಅದರ ಬದುಕಿನ ವಿವಿಧ ಆಯಾಮಗಳನ್ನು ತಮ್ಮ ಸೌಮ್ಯ ವರ್ಣದೊಂದಿಗೆ ಅಭಿವ್ಯಕ್ತಿಸಿರುವುದನ್ನು ನಾವು ಕಾಣಬಹುದಾಗಿದೆ.

ಈ ಕಲಾಕೃತಿಯಲ್ಲಿ ಹಿಂದಿನ ಇದೇ ಸರಣೀಯ ಕಲಾಕೃತಿಯಂತೆ ಕಟ್ಟಿಗೆಯ ಕೋಲುಗಳು, ತೇಪೆಗೊಂಡ ಬೂದು ವರ್ಣ, ಕೆಂಪು ಮಿಶ್ರಿತ ಜಾಂಬಳಿ ಹಾಗೂ ಹಸಿರು ಮತ್ತು ನೀಲಿ ಮೀರ್ಶರಿತ ತಿಳಿ ದಟ್ಟವರ್ಣದ ಜೀನ್ಸ್ ವಸ್ತ್ರಗಳಿದ್ದು, ಅಲ್ಲಲ್ಲಿ ಕೆಂಪು ಮತ್ತು ಹಳದಿಯ ತೇಪೆಗಳಿದ್ದು ವಿವಿಧ ವರ್ಣದ ಪಟ್ಟಿಕೆಗಳಿಗೆ ದಟ್ಟ ತಿಳಿವರ್ಣದ ಹೊಲಿಗೆಗಳನ್ನು ಹಾಕಲಾಗಿದೆ. ಈ ಹೊಲಿಗೆಗಳು ಉತ್ತಮ ಸಮಾಜವನ್ನು ಬೆಸಿಗೆಯಾಗಿಸುವ ಸಂಕೇತವಾಗಿ ಬಳಸಿರುವುದನ್ನು ಕಾಣಲಾಗಿದೆ. ಹೀಗೆ ಅಗತ್ಯಕ್ಕೆ ತಕ್ಕಂತೆ ವರ್ಣಗಳ ಬಳಕೆ, ಆಕೃತಿಗಳನ್ನು ಸಂಯೋಜಿಸಿರುವುದು ಇವರ ಸರಣಿ ಕಲಾಕೃತಿಯ ವಿಶೇಷತೆ.

ಚಿತ್ರ–೦೯.

೨೦೦೭ರ ಸಂದರ್ಭದಲ್ಲಿ ರಚಿಸಿದ ಗೋಲ್ಡನ್ ಸ್ಟಿಚ್ ಮತ್ತು ಪ್ಯಾಚ್ ಸರಣಿಯ ಕಲಾಕೃತಿಯನ್ನು ಕ್ಯಾನ್ವಾಸ್‌ನ ಮೇಲೆ ಡಿಜಿಟಲ್ ಪ್ರಿಂಟ್‌ನ ಮೂಲಕ ಮಿಶ್ರಮಾಧ್ಯಮದಲ್ಲಿ ರಚಿಸಲಾಗಿದೆ. ೨೪x೨೪ ಇಂಚ್ ಚೌಕಾಕೃತಿಯ ಸ್ಥಳಾವಕಾಶದಲ್ಲಿ ಆಕೃತಿಗಳನ್ನು ಸಂಯೋಜಿಸಿ ಕೊಳ್ಳಲಾಗಿದೆ.

ಈ ಹಿಂದಿನ ಗೋಲ್ಡನ್ ಸ್ಟಿಚ್ ಸರಣಿ ಕಲಾಕೃತಿಗಳಂತೆಯು ಆ ಸಾಲಿನಲ್ಲಿ ನಿಲ್ಲುವಂತ ಕಲಾಕೃತಿ ಇದಾಗಿದ್ದರು ವರ್ಣಗಳ ಬಳಕೆ ಆಕೃತಿಗಳ ಸಂಯೋಜನೆಯಿಂದ ವಿಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ಉಳಿದ ಹಿಂದಿನ ಕಲಾಕೃತಿಯಲ್ಲಿ ಪ್ರಮುಖ ವಿಷಯ ವಸ್ತುವಾಗಿ ಜೀನ್ಸ್ ಬಟ್ಟೆ ಹಾಗೂ ಕಟ್ಟಿಗೆಯ ಕೋಲುಗಳನ್ನು ಅಂದರೆ ಮುನ್ನಲೆಯ ಆಕೃತಿಗಳನ್ನು ಸೌಮ್ಯ ವರ್ಣದಲ್ಲಿ ಸಂಯೋಜಿಸಿಕೊಂಡು ಹಿನ್ನೆಲೆಯಲ್ಲಿ ಪ್ರಖರ ವರ್ಣವನ್ನು ಲೇಪಿಸಿ ಕಲಾಕೃತಿಯನ್ನು ಪೂರ್ಣಗೊಳಿಸುತ್ತಿದ್ದರು. ಆದರೆ ಈ ಕಲಾಕೃತಿಯಲ್ಲಿ ಹಿನ್ನೆಲೆ, ಮುನ್ನಲೆಯಲ್ಲಿ ಪ್ರಖರ ವರ್ಣವನ್ನು ಬಳಕೆ ಮಾಡಿರುವುದನ್ನು ಕಾಣಬಹುದಾಗಿದೆ. ಇಲ್ಲಿ ತಿಳಿ ವರ್ಣದ ಪ್ರಬರವರ್ಣದ ಬಟ್ಟೆ ಇದ್ದು, ಅದಕ್ಕೆ ಕೆಂಪು, ಹಸಿರು, ಬಿಳಿ ವರ್ಣಗಳ ತೇಪೆಯನ್ನು ಅಲ್ಲಲ್ಲಿ ಹಾಕಲಾಗಿದ್ದು, ಇದರ ಹಿನ್ನೆಲೆಯಿಂದ ಪ್ರಕಾರಮಾನವಾದ ಬೆಳಕಿನ ಕಿರಣಗಳು ಬಟ್ಟೆಯೊಳಗಿಂದ ನುಗ್ಗಿ ಬೆಳಕನ್ನು ನೀಡುತ್ತಿರುವಂತೆ ಚಿತ್ರಿಸಲಾಗಿದೆ. ಬಿಟ್ಟ ಸ್ಥಳಾವಕಾಶದ ಕೆಳ ಭಾಗದಲ್ಲಿ ಒಂದೇ ವರ್ಣಕ್ಕೆ ದಟ್ಟ ವರ್ಣವನ್ನು ಮಿಶ್ರಣ ಮಾಡಿ ಪಟ್ಟಿಕೆಯಾಕೃತಿಯಲ್ಲಿ ನಿರ್ಮಿಸಲಾಗಿದೆ. ಉಳಿದಂತೆ ಕಟ್ಟಿಗೆಯ ಕೋಲುಗಳನ್ನು ಸ್ಥಳಾವಕಾಶದ ತುಂಬೆಲ್ಲ ಆವರಿಸಿರುವಂತೆ ಅಡದಿಡ್ಡಾಗಿ ಸಂಯೋಜಿಸಿಕೊಂಡು ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ–೧೦.

ಕಲಾವಿದರಾದ ಸಿ.ಚಂದ್ರಶೇಖರವರು ರಚಿಸಿರುವ ಕಲಾಕೃತಿಗಳಲ್ಲಿ ಗೋಲ್ಡನ್ ಸ್ಟಿಚ್ ಸರಣಿ ಕಲಾಕೃತಿಗಳು ವಿಭಿನ್ನ ನೆಲೆಯಲ್ಲಿ ಆಲೋಚಿಸುವಂತವುಗಳಾಗಿವೆ. ಅವರ ಸರಣಿಯ ಕಲಾಕೃತಿಯಲ್ಲಿ ಈ ಕಲಾಕೃತಿಯು ವಿಭಿನ್ನ, ವಿಶಿಷ್ಟವಾದುದ್ದಾಗಿದೆ. ೨೪x೨೪ ಇಂಚ್ ಚೌಕಾಕಾರದಲ್ಲಿ ಡಿಜಿಟಲ್ ಪ್ರಿಂಟ್ ತಂತ್ರಂಶದೊಂದಿಗೆ ಮಿಶ್ರಮಾಧ್ಯಮ ಶೈಲಿಯಲ್ಲಿ ರಚಿಸಲಾಗಿದೆ. ಒಟ್ಟು ಸ್ಥಳಾವಕಾಶದ ತುಂಬೆಲ್ಲ ವಿವಿಧ ಆಯಾಮದ ಕಟ್ಟಿಗೆಯ ಹಲಗೆಯಾಕೃತಿಗಳನ್ನು ಎದ್ದುದ್ದಾಗಿ ಪಟ್ಟಿಕೆಯಂತೆ ಸಂಯೋಜಿಸಲಾಗಿದೆ. ಹಿನ್ನೆಲೆಯ ಸ್ಥಳಾವಕಾಶದ ತುಂಬ ಉದ್ದನೆಯ ವಿವಿಧ ವರ್ಣಗಳ ಪಟ್ಟಿಕೆಗಳನ್ನು ಚಿತ್ರಿಸಲಾಗಿದ್ದು, ಅವುಗಳ ಒಂದಕ್ಕೊಂದು ಬೆಸೆಯುವಂತೆ ಹೊಲಿಗೆಯ ಮೂಲಕ ಬೆಸಿಗೆಯನ್ನು ಹಾಕಲಾಗಿದೆ. ಹಳದಿ ನಾಶಿ, ತಿಳಿಗೆಂಪು, ಕಪ್ಪು ಮಿಶ್ರಿತ ಹಳದಿ,

ಸಂಕೀರ್ಣ ಕಲಾಕೃತಿಗಳು (ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು)



ಚಿತ್ರ-೦೧



ಚಿತ್ರ-೦೨

ಸಂಕೀರ್ಣ ಕಲಾಕೃತಿಗಳು (ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು)



ಚಿತ್ರ-೦೩



ಚಿತ್ರ-೦೪

ಸಂಕೀರ್ಣ ಕಲಾಕೃತಿಗಳು (ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು)



ಚಿತ್ರ-೦೫



ಚಿತ್ರ-೦೬

ಸಂಕೀರ್ಣ ಕಲಾಕೃತಿಗಳು (ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು)



ಚಿತ್ರ-೦೨



ಚಿತ್ರ-೦೮



ಸಂಕೀರ್ಣ ಕಲಾಕೃತಿಗಳು (ಗೋಲ್ಡನ್ ಸ್ಟಿಚ್ ಸರಣಿಯ ಕಲಾಕೃತಿಗಳು)



ಚಿತ್ರ-೦೯



ಚಿತ್ರ-೧೦

ಸಿ. ಚಂದ್ರಶೇಖರ ಅವರ ಇತರೆ ಕಲಾಕೃತಿಗಳು



ಮೆಲ್ಟಿಂಗ್ ಗ್ಲೋ ಸರಣಿ ಕಲಾಕೃತಿ - ಫೋಟೋಗ್ರಫಿ

ಸಿ. ಚಂದ್ರಶೇಖರ ಅವರ ಇತರೆ ಕಲಾಕೃತಿಗಳು



ಆನೆ - ಲಿನೋ ಪ್ರಿಂಟ್



ಡಾ. ಬಿ. ಆರ್. ಅಂಬೇಡ್ಕರ್ - ಭಾವಚಿತ್ರ
ತೈಲವರ್ಣ



ಬುದ್ಧ - ಭಾವಚಿತ್ರ
ಶಿಲ್ಪ

ಕೆಂಪು, ಹಳದಿ, ಕೇಸರಿ ಮಿಶ್ರಣದ ಪಟ್ಟಿಕೆಗಳು, ದಟ್ಟವರ್ಣದ ಪಟ್ಟಿಕೆಯೊಂದು ಬಲಪಾರ್ಶ್ವ ಎರಡನೇಯ ಪಟ್ಟಿಕೆಯಾಗಿದ್ದು ಇವೆಲ್ಲ ಸಾಮಾಜಿಕತೆಯ ಸ್ಥಿತಿಗತಿಯನ್ನು ಪ್ರತಿನಿಧಿಸುವಂತಿದ್ದು, ಹಂತ ಹಂತದ ವಾಸಿಂಗ್ ಲೇಪನದ ಮಾಧ್ಯಮದಿಂದ ತಯಾರಿಸಿದಂತೆ ಕಾಣುವುದು ಉಳಿದಂತೆ ಮುನ್ನೆಲೆಯಲ್ಲಿ ಒಟ್ಟು ಸ್ಥಳಾವಕಾಶದ ಮಧ್ಯಭಾಗದಲ್ಲಿ ಕೆಳಭಾಗದಿಂದ ಭೇಧಿಸಿಕೊಂಡು ಒಟ್ಟು ಸ್ಥಳಾವಕಾಶದ ಮುಕ್ಕಾಲು ಭಾಗದಷ್ಟು ಆವರಿಸಿಕೊಂಡು ತಿಳಿವರ್ಣದ ಕಟ್ಟಿಗೆಯ ಹಲಗೆಯೊಂದರ ಆಕೃತಿಯು ಪಟ್ಟಿಕೆಯಂತೆ ಸಂಯೋಜನೆಗೊಂಡಿದ್ದು, ಅದು ಪಿಕಾಸೋರವರ ಜ್ಯಾಮಿತಿಯ ವಿನ್ಯಾಸವನ್ನು ಓಲುವಂತಿದ್ದು, ದಟ್ಟ ವರ್ಣದಿಂದ ಸದೃಢ ರೇಖೆಗಳಿಂದ ಕಣ್ಣ, ಬಾಯಿಯಂತ ಆಕೃತಿಗಳನ್ನು ಸ್ಥೂಲವಾಗಿ ರಚಿಸಿ, ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಅಧ್ಯಾಯ : ಆರು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು

ಅಧ್ಯಾಯ : ಆರು

ಸಿ ಚಂದ್ರಶೇಖರ ಅವರ ಕಲಾಚಟುವಟಿಕೆಗಳು

೧೯೯೫ ರಿಂದ ೧೯೯೮ರ ಅವಧಿಯಲ್ಲಿ ಸಿ.ಚಂದ್ರಶೇಖರರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿರುವ ಮಹತ್ವಯುತವಾದ ಕಲಾ ಚಟುವಟಿಕೆಗಳು ಇಂದಿಗೂ ಸ್ಮರಣೀಯವಾಗಿವೆ. ಈ ಸಾಲಿನಲ್ಲಿ ಆಯ್ಕೆಗೊಂಡ ಅಕಾಡೆಮಿಯ ಸದಸ್ಯರು ಸಿ.ಚಂದ್ರಶೇಖರರವರ ಜೊತೆಗೆ ಕೈಜೋಡಿಸಿ ಅಕಾಡೆಮಿಯು ಕಲಾವಿದರಿಗಾಗಿ ವಿನೂತನ ಯೋಜನೆಗಳನ್ನು ಹಮ್ಮಿಕೊಂಡು ಹೊಸ ದಿಕ್ಕಿನತ್ತ ಸಾಗಿದ್ದನ್ನು ಕಂಡುಬರುತ್ತದೆ. ಹಿಂದಿನಿಂದ ನಡೆದುಬಂದ ವಾರ್ಷಿಕ ಪ್ರಶಸ್ತಿ, ವಾರ್ಷಿಕ ಕಲಾ ಪ್ರದರ್ಶನ, ಶಿಬಿರಗಳು(ಚಿತ್ರ ಮತ್ತು ಗ್ರಾಫಿಕ್) ವೇತನ ಸಂಘಸಂಸ್ಥೆಗಳಿಗೆ ಧನ ಸಹಾಯ, ಏಕವ್ಯಕ್ತಿ ಮತ್ತು ಸಮೂಹ ಕಲಾ ಪ್ರದರ್ಶನಗಳಿಗೆ ಧನ ಸಹಾಯ, ಪುಸ್ತಕ ಪ್ರಕಟಣೆಗಳ ಜೊತೆಗೆ ಇನ್ನು ಹೊಸದೇನನ್ನಾದರೂ ಮಾಡಬೇಕೆಂಬ ಹಂಬಲ ಅದರಲ್ಲಿತ್ತು. ಇವರ ಅವಧಿಯಲ್ಲಿ ಹೊಸ ಕಾರ್ಯಕ್ರಮ ಚಿತ್ರಯಾತ್ರೆ ಕೈಗೊಂಡರು. ಚಿತ್ರಯಾತ್ರೆಯಲ್ಲಿ ಕರ್ನಾಟಕದ ಹೆಸರಾಂತ ಐವತ್ತು ಜನ ಕಲಾವಿದರ ಐವತ್ತು ಕಲಾಕೃತಿಗಳ ಪ್ರದರ್ಶನವನ್ನು ಬಹಳ ಶ್ರಮಪಟ್ಟು ರಾಷ್ಟ್ರ, ರಾಜ್ಯ ಮಟ್ಟಗಳ ಹಾಗೂ ಜಿಲ್ಲಾ, ತಾಲೂಕು, ಗ್ರಾಮ ಪ್ರದೇಶಗಳಿಗೂ ಕೊಂಡೊಯ್ದು ಪ್ರದರ್ಶಿಸಿದ ದಾಖಲೆ, ಸಿ.ಚಂದ್ರಶೇಖರರವರಿಗೆ ಸಲ್ಲುತ್ತದೆ. ಮತ್ತೆರಡು ವಿನೂತನ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ೫೦ ವರ್ಷಕ್ಕಿಂತ ಮೇಲ್ಪಟ್ಟ ವೃತ್ತಿಪರ ಕಲಾವಿದರಿಗೆ ಸಿನಿಯರ್ ಫೆಲೋಷಿಪ್ ಮೊತ್ತ ಪ್ರತಿ ಎರಡು ವರ್ಷದ ಅವಧಿಗೆ ತಿಂಗಳಿಗೆ ೨೦೦೦ ರೂ.ಗಳಂತೆ ಮೊತ್ತ ನೀಡಿದರಲ್ಲದೆ, ೫೦ ವರ್ಷಕ್ಕಿಂತ ಕಡಿಮೆ ವಯಸ್ಸು ಇರುವ ಕಲಾವಿದರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ೧೦೦೦ ರೂ.ಗಳಂತೆ ಜ್ಯೂನಿಯರ್ ಫೆಲೋಷಿಪ್ ನೀಡಿ ಕಲಾವಿದರಿಗೆ ಪ್ರೋತ್ಸಾಹಿಸಿದ್ದಾರೆ. ಹೀಗೆ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಬಂದಿರುವ ಉದಾಹರಣೆಗಳು ಹಲವಾರು ಕಂಡುಬರುತ್ತವೆ.

ಪುಸ್ತಕ ಪ್ರಕಟನಾ ವಿಭಾಗದಲ್ಲಿಯೂ ಕ್ರಾಂತಿಕಾರಿ ಕೆಲಸ ಮಾಡಿ ಕಲಾವಿದರಿಗಾಗಿ ಕಲಾ ಇತಿಹಾಸದ ವಿಷಯಗಳನ್ನು ಮುಟ್ಟಿಸುವುದಕೋಸ್ಕರ "ಕಲಾಮಾಲೆ"ಯನ್ನು ಸುಲಭ ದರದಲ್ಲಿ ತಂದು ಜನಸಾಮಾನ್ಯರಿಗೆ, ಕಲಾವಿದರಿಗೆ ಮುಟ್ಟಿಸುವಲ್ಲಿ ಸಾರ್ಥಕ ಕೆಲಸ ಕೈಗೊಂಡಿದ್ದಾರೆ. ಅಕಾಡೆಮಿ ವಾರ್ಷಿಕ ಕಲಾ ಪ್ರದರ್ಶನ ಸಂದರ್ಭದಲ್ಲಿ ನಾಡಿನ ಹಿರಿಯ ಇಬ್ಬರು ಕಲಾವಿದರ ಕಲಾಕೃತಿಗಳನ್ನು ತರಿಸಿ ಪ್ರದರ್ಶಿಸುವ ವ್ಯವಸ್ಥೆ ಮಾಡಿ ಯುವ ಕಲಾವಿದರಿಗೆ ಮಾರ್ಗದರ್ಶಕತ್ವದ ಕಾರ್ಯ ಕೈಗೊಂಡಿದ್ದಾರೆ.

ಈ ಮೇಲಿನ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಹಲವು ಸಮಸ್ಯೆಗಳು ಎದುರಾದರೆ ಅವುಗಳನ್ನು ಸರಳ ರೀತಿಯಲ್ಲಿ ಪರಿಹಾರ ಕೈಗೊಂಡು ಹಿಂದುಳಿದವರ ಏಳ್ಗೆಗಾಗಿ ಕೆಲಸ ಮಾಡಿರುವುದನ್ನು ಅವರ ಹೆಮ್ಮೆಯ ವಿಷಯವಾಗಿದ್ದು ಇದಕ್ಕಾಗಿ ಆಗಿನ ಅಕಾಡೆಮಿಯ ಸದಸ್ಯರ ಸಹಕಾರವನ್ನು ನೆನೆಯುತ್ತಾರೆ. ಎಲ್ಲರ ಸಹಕಾರದೊಂದಿಗೆ ಅಕಾಡೆಮಿಯಿಯ ವಿನೂತನ ಯೋಜನೆಗಳನ್ನು ಜಾರಿಗೆ ತಂದು ಚಿತ್ರಯಾತ್ರೆಯ ಮೂಲಕ ಕಲಾಕೃತಿಗಳನ್ನು ನಗರಗಳಿಂದ ಗ್ರಾಮೀಣ ಪ್ರದೇಶಕ್ಕೆ ತಲುಪಿಸಿ ಪ್ರದರ್ಶಿಸಿದ ಕೀರ್ತಿ ಇವರದ್ದಾಗಿದೆ.

ಕರ್ನಾಟಕ ಸರಕಾರವು ಲಲಿತಕಲಾ ಆಕಾಡೆಮಿಯಲ್ಲಿಯೇ ಇದ್ದ ಶಿಲ್ಪಕಲೆಯನ್ನು ಪ್ರತ್ಯೇಕಿಸಿ ಶಿಲ್ಪಕಲಾ-ಅಕಾಡೆಮಿಯನ್ನು ಹೊಸದಾಗಿ ಸೃಷ್ಟಿಸಿದಕ್ಕಾಗಿ ನೋವಿನಿಂದ ಒಂದು ಮಾತನ್ನು ಹೇಳುತ್ತಾರೆ. ಲಲಿತ ಕಲೆಗಳು ಒಂದೆಡೆ ಇದ್ದು ಕೆಲಸ ಮಾಡಬೇಕು. ಚಿತ್ರ ಮತ್ತು ಶಿಲ್ಪ ಕಲಾವಿದನ ಅವಿಭಾಜ್ಯ ಅಂಗಗಳು, ಒಂದೇ ನಾಣ್ಯದ ಎರಡು ಮುಖಗಳಂತೆ ಇವುಗಳನ್ನು ಬೇರ್ಪಡಿಸುವುದು ಸರಿ ಕಾಣೋದು ಇಲ್ಲ. ಲಲಿತ ಕಲೆಯಲ್ಲಿ ಶಿಲ್ಪಕಲೆಯೂ ಇರಬೇಕು. ಇಲ್ಲವೇ ಲಲಿತ ಕಲೆ ಎನ್ನುವುದನ್ನು ಹೊಡೆದು ಹಾಕಿ ಹೊಸದಾಗಿ ಚಿತ್ರಕಲಾ ಅಕಾಡೆಮಿ ಎಂದು ನಾಮಕರಣ ಮಾಡಬೇಕೆಂದು ನೋವಿನಿಂದ ಅವರ ಅಭಿಪ್ರಾಯ ಹೇಳಿದರು ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಂಗ್ರಹದಿಂದ ತಿಳಿದುಬಂತು.

ಚಿತ್ರ ಯಾತ್ರೆ

ಇಂದಿನ ಕರ್ನಾಟಕದ ಸಮಕಾಲೀನ ಚಿತ್ರಕಲೆ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ. ಅಂತೆಯೇ ನಮ್ಮ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರಿನಲ್ಲಿಯೂ ಸಮಕಾಲೀನ ಕೃತಿಗಳ ವಿವಿಧ ಪ್ರದರ್ಶನಗಳು ಹಾಗೂ ಚಟುವಟಿಕೆಗಳ ಮೂಲಕ ಅದು ಗಮನಾರ್ಹವೆನಿಸುತ್ತದೆ. ಇತ್ತೀಚೆಗಂತು ಬೆಂಗಳೂರಿನ ಬಹುತೇಕ ಗ್ಯಾಲರಿಗಳಲ್ಲಿ ವರ್ಷವಿಡೀ ಈ ನೆಲಯ ಕಲಾ ಪ್ರದರ್ಶನಗಳು ಬಹುತೇಕ ಸುಸಜ್ಜಿತ ಗ್ಯಾಲರಿಗಳಲ್ಲಿ ಹಾಗೂ ಪಂಚತಾರಾ ಹೋಟೆಲ್‌ಗಳಲ್ಲಿ ನಡೆಯುತ್ತವೆ. ಇನ್ನೂ ಕೆಲವರು ನಿಜವಾದ ಕಲಾತ್ಮಕ ಕಾಳಜಿಯಿಂದ ಭಾಗವಹಿಸುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿ 'ಚಿತ್ರಯಾತ್ರೆ' ಎಂಬ ವಿಶಿಷ್ಟ

ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇತರರೊಂದಿಗೆ ಸಂವಹನವೇ ಎಲ್ಲ ಕಲಾಕೃತಿಗಳ ಮೂಲ ಆಶಯ. ಯಾವುದೇ ಕಲೆ ಹೆಚ್ಚಿನ ಜನರನ್ನು ತಲುಪಿದ್ದರೆ ಅದು ಹೆಚ್ಚಿನ ಜನಪ್ರಿಯತೆಯನ್ನು ಗಳಿಸುವುದಿಲ್ಲ. ತನ್ಮೂಲಕ ಕಲಾವಿದರು ಜನರಿಂದ ದೂರ ಉಳಿಯುತ್ತಾರೆ. ಹಾಗಿದ್ದರೂ ಯಾವಾಗಲೂ ಶ್ರೇಷ್ಠ ಕಲಾಕೃತಿಗಳು ಸಮಾಜದ ಬಹುಸಂಖ್ಯಾತರಿಗೆ ಇಷ್ಟವಾಗುವುದು ವಿರಳ ಎನ್ನುವ ಅಂಶವನ್ನು ಇಲ್ಲಿ ನೆನೆಯಬಹುದು. ಏಕೆಂದರೆ ಸಾಮಾನ್ಯವಾಗಿ ನಿಜವಾದ ಕಲೆಗೆ ಸಿದ್ಧಗೊಂಡಿರದ ಮಧ್ಯಮವರ್ಗದ ಹಾಗೂ ಇತರ ವರ್ಗಗಳು ಬಯಸುವುದು ಸುಲಭದ ಮನರಂಜನೆಯನ್ನು ಆ ನೆಲೆಯ ಮನರಂಜನೆ, ನವ್ಯಕೃತಿಗಳಲ್ಲಿ ದೊರೆಯುವುದು ವಿರಳ. ಅದೇನೆ ಇರಲಿ ತಾವು ರಚಿಸಿದ ಕಲಾಕೃತಿಗಳು ಬಹುಸಂಖ್ಯಾತರನ್ನು ತಲುಪಲಿ ಎನ್ನುವ ಆಶಯ ಕಲಾವಿದರಲ್ಲಿ ಸ್ವಾಭಾವಿಕವಾಗಿ ಇರುತ್ತದೆ. ಹಾಗಿದ್ದರೂ ಇಂದಿನ ವ್ಯವಸ್ಥೆಯಲ್ಲಿ ಈ ದಿಸೆಯಲ್ಲಿ ಗಂಭೀರ ಪ್ರಯತ್ನಗಳು ಅಷ್ಟಾಗಿ ನಡೆಯುತ್ತಿಲ್ಲ. ೧೯೮೪–೮೫ರ ಅವಧಿಯಲ್ಲಿ ನಮ್ಮ ರಾಜ್ಯದ ಕೆಲವು ಸಮಕಾಲೀನ ಕಲಾವಿದರು ಖಾಸಗಿಯಾಗಿ 'ಕರ್ನಾಟಕ ಕಲಾಯಾತ್ರೆ' ಎನ್ನುವ ಹೆಸರಿನಲ್ಲಿ ರಾಜ್ಯಾದ್ಯಂತ ಸುಮಾರು ಆರು ತಿಂಗಳಿಗೂ ಹೆಚ್ಚು ಕಾಲ ಕಲಾ ಪ್ರದರ್ಶನ ನಡೆಸಿದ್ದನ್ನು ಈ ಸಂದರ್ಭದಲ್ಲಿ ನೆಲೆಸಿಕೊಳ್ಳಬಹುದು.

ಚಿತ್ರಯಾತ್ರೆ ರಾಜ್ಯದಲ್ಲಿ ಪ್ರದರ್ಶನಗೊಂಡ ಸ್ಥಳಗಳು : ಬೆಂಗಳೂರು, ದೊಡ್ಡಬಳ್ಳಾಪುರು, ಕನಕಪುರ ಹಾಗೂ ಬೆಂಗಳೂರಿನ ದಕ್ಷಿಣ ಭಾಗ, ಬೀದರ್, ಗುಲಬರ್ಗಾ, ಶಹಾಪುರ, ರಾಯಚೂರು, ಬಿಜಾಪುರ, ಬಾಗಲಕೋಟೆ, ಬಾದಾಮಿ, ಗದಗ, ಹುಬ್ಬಳ್ಳಿ, ಮಂಗಳೂರು, ಉಡುಪಿ, ಸೋಣಂಗೇರಿ, ಚಿಕ್ಕಮಂಗಳೂರು, ಮಂಡ್ಯ, ಹಾಸನ, ಮಂಡ್ಯ, ಮೈಸೂರು, ಮಡಿಕೇರಿ, ಗೋಕಾಕ್, ಬೆಳಗಾವಿ, ಕಾರವಾರ, ಭದ್ರಾವತಿ, ಶಿರಸಿ, ಸಾಗರ, ಬಳ್ಳಾರಿ, ಹೊಸಪೇಟೆ, ಹೂವಿನ ಹಡಗಲಿ, ಹಂಪಿ, ಚಿತ್ರದುರ್ಗ, ದಾವಣಗೇರಿ, ಶ್ರೀರಾಂಪುರ, ಕೋಲಾರ, ಕೆ.ಜಿ.ಎಫ್. ತುಮಕೂರು, ಮಧುಗಿರಿ, ಗುಬ್ಬಿ ಹಾಗೂ ಕಿತ್ತೂರು.

ಸ್ವಾತಂತ್ರ್ಯೋತ್ಸವದ ಸುವರ್ಣ ವರ್ಷದ ವಿಶೇಷ ಕಲಾಪ್ರದರ್ಶನ

೧೯೪೭ ಆಗಸ್ಟ್ ೧೫ರ ನಂತರ ಜನಿಸಿದ ಕಲಾವಿದರಿಗಾಗಿ ರೂ.೫೦೦೦ಗಳ ಐದು ಬಹುಮಾನಗಳು ವಿಶೇಷ ಕಲಾ ಪ್ರದರ್ಶನವನ್ನು ಲಲಿತಕಲಾ ಅಕಾಡೆಮಿ, ನವದೆಹಲಿ ಅವರ ಸಹಕಾರದಿಂದ ದಿನಾಂಕ ೧೮.೫.೯೮ ರಿಂದ ೨೪.೫.೯೮ರವರೆಗೆ ಬೆಂಗಳೂರಿನ ಇಮೇಟ್ ಆರ್ಟ್‌ಗ್ಯಾಲರಿಯಲ್ಲಿ ಏರ್ಪಡಿಸಲಾಗಿತ್ತು. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಮದ ಕಲಾ ಪ್ರದರ್ಶನ ಉದ್ಘಾಟನೆ ಮತ್ತು ಬಹುಮಾನ ವಿತರಣೆ, ಮಾನ್ಯ ಅತಿಥಿ ಪ್ರೊ.ಎಂ.ಎಸ್.ನಂಜುಡರಾವ್ ಅಧ್ಯಕ್ಷತೆ. ಅಕಾಡೆಮಿ ಅಧ್ಯಕ್ಷರಾದ ಶ್ರೀ ಸಿ.ಚಂದ್ರಶೇಖರ ಅವರು ಭಾಗವಹಿಸಿದರು.

ಕಲಾಶಿಬಿರಗಳು

ಅಕಾಡೆಮಿ ಸ್ಥಾಪನೆ ಆರಂಭದಿಂದ ಈವರೆಗೂ ಪ್ರತಿವರ್ಷ ಅಕಾಡೆಮಿ ಕಲಾಶಿಬಿರಗಳನ್ನು ನಡೆಸುತ್ತಾ ಬಂದಿದೆ. ಈ ಅವಧಿಯಲ್ಲಿ ನಡೆದ ಕಲಾವಿದರ ಶಿಬಿರದ ವಿಶೇಷವೆಂದರೆ ಕಲಾವಿದರನ್ನು ಆಯ್ಕೆ ಮಾಡುವಾಗ ಶೇಕಡಾ ೭೫ಕ್ಕೂ ಹೆಚ್ಚು ಯುವಕಲಾವಿದರನ್ನು ಆಯ್ಕೆ ಮಾಡಿಕದ್ದು ನಾಡಿನ ವಿಭಾಗದ ಉದಯೋನ್ಮುಖ ಕಲಾವಿದರು ಭಾಗವಹಿಸಿ, ತಮ್ಮ ಕಲಾ ಸಾಧನೆಯಲ್ಲಿ ಹೊಸ ಮಾರ್ಗಗಳನ್ನು ಕಂಡುಕೊಂಡಿದ್ದಾರೆ.

ಅಕಾಡೆಮಿ ತನ್ನ ಇತಿಹಾಸದಲ್ಲಿಯೇ ಪ್ರಥಮಬಾರಿಗೆ ಕೋಲೋಗ್ರಾಫಿ ಮಾಧ್ಯಮದಲ್ಲಿ ಕಲಾ ಶಿಬಿರ, ಗ್ರಾಫಿಕ್ ಶಿಬಿರ, ಕಂಪ್ಯೂಟರ್ ಶಿಬಿರ, ಭಾವಚಿತ್ರ ಶಿಬಿರ, ಯುವ ಕಲಾ ಬರಹಗಾರರ ಕಾರ್ಯಗಾರ, ಟೆರ್ರಾಕೋಟಾ ಮುಂತಾದ ಶಿಬಿರಗಳನ್ನು ಏರ್ಪಡಿಸಿ ಅಕಾಡೆಮಿಯ ಘನತೆಯನ್ನು ಹೆಚ್ಚಿಸಿದ್ದಾರೆ.

ಕಲಾಪುಸ್ತಕಗಳ ಪ್ರಕಟಣೆ

ಕನ್ನಡದಲ್ಲಿ ಕಲಾ ಪುಸ್ತಕಗಳ ಕೊರತೆ ಇಂದು ಎದ್ದು ಕಾಣುತ್ತದೆ. ಕಳೆದ ಸಾಲಿನಲ್ಲಿಯೇ ಇದನ್ನು ಮನಗಂಡ ಅಕಾಡೆಮಿ ತನ್ನ ಇತಿಹಾಸದಲ್ಲಿ ದಾಖಲೆ ಎನಿಸುವಷ್ಟು ಪುಸ್ತಕಗಳನ್ನು ಪ್ರಕಟಿಸಿತು. ಅದೇ ಮಾರ್ಗದಲ್ಲಿ ಮುನ್ನಡೆದ ಅಕಾಡೆಮಿಯು ಈ ಸಾಲಿನಲ್ಲಿಯೂ ಬಹಳ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದೆ.

ಪುಸ್ತಕದ ಶೀರ್ಷಿಕೆ ಲೇಖಕರ ಹೆಸರು

೧. ಚಿತ್ರಯಾತ್ರೆ – ಕನ್ನಡ

೨. ಚಿತ್ರಯಾತ್ರೆ – ಇಂಗ್ಲಿಷ್

೩. ಶಿಲ್ಪಕಲೆ

೪. ಸಕ್ರಿಯಲಿಸಂ – ಮರಿಶಾಮಾಚಾರ್, ೧೯೯೫

೫. ಅಬ್‌ಸ್ಟ್ರ್ಯಾಕ್ಟಕಲ್ – ಆರ್.ಎ.ಶಾಂತರಾಜ್, ೧೯೯೫

೬. ಜನಪದ ಕಲೆ – ಡಾ.ಎಸ್.ಸಿ.ಪಾಟೀಲ, ೧೯೯೫

೭. ಚಿತ್ರಕಲೆ ಮತ್ತು ಮನೋವಿಕಾಸ – ಡಾ.ಸಿ.ಆರ್.ಚಂದ್ರಶೇಖರ, ೧೯೯೫

೮. ಚಿತ್ರಕಲೆ ಮತ್ತು ಸಂವಹನ

೯. ಡಾಪ್‌ಕಲೆ – ರವಿಕುಮಾರ ಕಾಶಿ, ೧೯೯೭

೧೦. ಗ್ರಾಫಿಕ್ ಕಲೆ – ರವಿಕುಮಾರ ಕಾಶಿ

೧೧. ಭಾರತೀಯ ಚಿತ್ರಕಲೆ

೧೨. ಸಾಂಪ್ರದಾಯಿಕ ಶಿಲ್ಪಕಲೆ – ಪ್ರೊ.ಶಿಲಾಕಾಂತ ಪತ್ತಾರ, ೧೯೯೫

೧೩. ಪೋಸ್ಟ್ ಮಾಡರ್ನಿಸಂ

೧೪. ದೃಶ್ಯಕಲೆಗಳ ಗುಣಗ್ರಹಣ

೧೫. ಇಂಪ್ರೆಷನಿಸಂ – ಡಾ.ಆ.ಲ.ನರಸಿಂಹನ್, ೧೯೯೫

೧೬. ದೃಶ್ಯಕಲೆ ಎಂದರೇನು – ಚಿ.ಸು.ಕೃಷ್ಣಶೆಟ್ಟಿ, ೧೯೯೫

೧೭. ಕಲಾವಿದರು ವಿಳಾಸ ಕೈಪಿಡಿ

೧೮. ಕಲಾ ಸಂವೇದನೆಯ ಒಳ ನೋಟಗಳು

೧೯. ಎಸ್.ಎಸ್.ಕುಕ್ಕೆ

೨೦. ದೇವಲ ಕುಂದ ವಾದಿರಾಜ್

೨೧. ಮಧುಗಿರಿ ರಾಮು

೨೨. ಅ.ನ.ಸುಬ್ಬರಾವ್

೨೩. ಪೀಟರ್ ಎ. ಲೂಯಿಸ್

೨೪. ಆರ್.ಎಂ.ಹಡಪದ

೨೫. ಕರ್ನಾಟಕ ಭಿತ್ತಿಚಿತ್ರಗಳ ಪರಂಪರೆ – ಆ.ಲ.ನರಸಿಂಹನ್, ೧೯೯೮

೨೬. ಚಿತ್ರಸೋತ್ರ

೨೭. ಯೂಸೊಫ್ ಆರಕಲ್

೨೮. ಫೋಟೋ ರಿಯಲಿಸಂ – ಕೆ.ವಿ.ಸುಬ್ರಮಣ್ಯಂ, ೧೯೯೫

ಸಿ.ಚಂದ್ರಶೇಖರರು ಭಾಗವಹಿಸಿದ ಪ್ರಮುಖ ಕಲಾ ಶಿಬಿರಗಳು

೧. ೧೯೭೭ರಲ್ಲಿ ಅಮೇರಿಕಾದ ಸಾಂಸ್ಕೃತಿಕ ಸಂಸ್ಥೆಯು ಏರ್ಪಡಿಸಿದ್ದ ಅಮೇರಿಕಾದ ಕಲಾವಿದ ಕೋರಾಲ್‌ಸಮ್ಮರ್ ನಿರ್ದೇಶನದ ಗ್ರಾಫಿಕ್ ಕಾರ್ಯಗಾರ ಕಲ್ಕತ್ತದಲ್ಲಿ ನಡೆದಿದ್ದು ಈ ಕಾರ್ಯಗಾರದಲ್ಲಿ ಸಿ.ಚಂದ್ರಸೇಖರರವರು ಭಾಗವಹಿಸಿದರು.

೨. ೧೯೭೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಧಾರವಾಡದಲ್ಲಿ ಏರ್ಪಡಿಸಿದ ಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ.

೩. ೧೯೮೧ರಲ್ಲಿ ಬೆಂಗಳೂರಿನ ಯುವಜನ ಕೇಂದ್ರವು ಏರ್ಪಡಿಸಿದ ರೇಖಾಚಿತ್ರಗಳ ಶಿಬಿರದಲ್ಲಿ ಭಾಗವಹಿಸಿದ್ದಾರೆ.

೪. ಕಲ್ಕತ್ತಾದ ಶಾಂತಿ ನಿಕೇತನದಲ್ಲಿ ಕೇಂದ್ರ ಲಲಿತಕಲ ಅಕಾಡೆಮಿ ನವದೆಹಲಿಯವರು ಹಮ್ಮಿಕೊಂಡ ರಾಷ್ಟ್ರೀಯ ಗ್ರಾಫಿಕ್ ಶಿಬಿರದಲ್ಲಿ ಭಾಗವಹಿಸಿದ್ದಾರೆ.

೫. ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವುರ ಇವರು ಮದ್ರಾಸ್‌ದಲ್ಲಿ ನಡೆಸಿದ ಅಖಿಲ ಭಾರತ ರಿಯಲಿಸ್ಟಿಕ್ ಆರ್ಟಿಸ್ಟ್ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದಾರೆ.

೬. ೧೯೮೨ರಲ್ಲಿ ಹಂಪೆಯಲ್ಲಿ ನಡೆದ ಯುವ ಕಲಾ ವಿದ್ಯಾರ್ಥಿಗಳ ಶಿಬಿರಕ್ಕೆ ಅಕಾಡೆಮಿಯಿಂದ ಕಲಾ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ ಯಶಸ್ವಿಗೊಳಿಸಿದ್ದಾರೆ.

೭. ೧೯೮೫ರಲ್ಲಿ ಬೆಂಗಳೂರಿನಲ್ಲಿ ಅಮೇರಿಕಾದ ನಿವಾಸಿ ಕಲಾವಿದ ಡಾ.ಕೃಷ್ಣರೆಡ್ಡಿಯವರ ನಿರ್ದೇಶನದಲ್ಲಿ 'ವಿಸ್ಕಾಸಿಟಿ ಕಲಾಶಿಬಿರ'ದಲ್ಲಿ ಕಲಾವಿದರಾಗಿ ಭಾಗವಹಿಸಿದ್ದಾರೆ.

೮. ೧೯೮೬ರಲ್ಲಿ 'ಸಾರ್ಕ್' ಸಮ್ಮೇಳನದ ಸಂದರ್ಭದಲ್ಲಿ ನಡೆದ ಅಖಿಲಭಾರತ ಸಾಂಸ್ಕೃತಿಕ ಉತ್ಸವದ ಅಖಿಲ ಭಾರತ ಗ್ರಾಫಿಕ್ ಶಿಬಿರ ಬೆಂಗಳೂರು, ಇಲ್ಲಿಯು ಸಹ ಭಾಗವಹಿಸಿದ್ದಾರೆ.

೯. ೧೯೯೦ರಲ್ಲಿ ಬೆಂಗಳೂರಿನ ಕೇನ್ ಕಲಾಶಾಲೆಯಲ್ಲಿ ನಡೆದ ಗ್ರಾಫಿಕ್ ಕಲಾವಿದರ ನಿರ್ದೇಶಕರಾಗಿ ಭಾಗವಹಿಸಿದ್ದಾರೆ.

೧೦. ೧೯೮೬ರಲ್ಲಿ ತಿರುವಂತಪುರದಲ್ಲಿ ಲಲಿತ ಕಲಾ ಅಕಾಡೆಮಿ ಮತ್ತು ದಕ್ಷಿಣ ವಲಯ ಲಲಿತಕಲಾ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ದಕ್ಷಿಣ ಭಾರತದ ಗ್ರಾಫಿಕ್ ಕಲಾವಿದರ ಶಿಬಿರದಲ್ಲಿ ಭಾಗವಹಿಸಿದ್ದಾರೆ.

೧೧. ೧೯೯೨ರಲ್ಲಿ ಹೈದರಾಬಾದಿನಲ್ಲಿ ದಕ್ಷಿಣ ವಲಯ ಲಲಿತಕಲಾ ಅಕಾಡೆಮಿಯಿಂದ ಏರ್ಪಡಿಸಿದ ಗ್ರಾಫಿಕ್ ಶಿಬಿರದಲ್ಲಿ ನಿರ್ದೇಶಕರಾಗಿ ಭಾಗವಹಿಸಿದ್ದಾರೆ.

೧೨. ೧೯೯೩ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ ಯುವ ಕಲಾವಿದರ ಗ್ರಾಫಿಕ್ ಕಾರ್ಯಗಾರದ ನಿರ್ದೇಶಕರಾಗಿ ಭಾಗವಹಿಸಿದ್ದಾರೆ.

೧೩. ೧೯೯೪ ಕ್ರಿಯಾಚೇತನ ಸಾಂಸ್ಕೃತಿಕ ಸಂಸ್ಥೆ ಬೆಂಗಳೂರು ಇವರು ಹಮ್ಮಿಕೊಂಡ "ತುಳಿತಕ್ಕೊಳಗಾದವರು ಮತ್ತು ನಾವು" ಎಂಬ ಕಲಾ ಶಿಬಿರದ ಕ್ಯೂರೇಟರ್ ಆಗಿ ಭಾಗವಹಿಸಿದ್ದಾರೆ.

೧೪. ೨೦೦೬ ಸುವರ್ಣ ಕರ್ನಾಟಕ ಅಖಿಲಭಾರತದ ಚಿತ್ರಕಲಾ ಶಿಬಿರ ನಂದಿಬೆಟ್ಟದ ಶಿಬಿರದಲ್ಲಿ ಭಾಗವಹಿಸಿದ್ದಾರೆ.

ಚಳುವಳಿಗಳಲ್ಲಿ ಪ್ರಮುಖ ಪಾತ್ರ

ನಾಡಿನ ಹೆಸರಾಂತ ಕಲಾವಿದರು ರಚಿಸಿದ ಮೂರ್ತ ಮತ್ತು ಅಮೂರ್ತ ಆಧುನಿಕ ಕಲಾ ಪ್ರಕಾರದ ಕಲಾಕೃತಿಗಳನ್ನು ನಗರ ಪ್ರದೇಶದಿಮದ ಗ್ರಾಮೀಣ ಪ್ರದೇಶದ ಜನ ಸಾಮಾನ್ಯರಿಗೆ ತೋರಿಸುವ ಕೆಲಸ ಮಾಡುವ ಮತ್ತು ಪರಿಚಯಿಸುವ ಕೆಲಸವನ್ನು ಮಾಡಬೇಕೆನ್ನುವ ಮಹಾದಾಸೆಯನ್ನು ಹೊಂದಿದ ಇವರು ೧೯೮೩ರಲ್ಲಿ ನಡೆಸಿದ ಕಲಾಯಾತ್ರೆ ಕರ್ನಾಟಕದಲ್ಲಿ ಒಂದು ಕಲಾ ಆಂದೋಲನ ಮಾಡಿತು. ಇದನ್ನೆ ಚಂದ್ರಶೇಖರ ಅವಧಿಯ ಕಲಾ ಚಳುವಳಿ ಎಂದು ದಾಖಲಿಸಬಹುದಾಗಿದೆ. ಈ ಚಳುವಳೀಯನ್ನು ಇವರೊಂದಿಗೆ, ಪಸ ಕುಮಾರ, ಕೆ.ಟಿ.ಶಿವಪ್ರಸಾದ್, ಪೀಟರ್ ಲೂಯಿಸ್, ಆರ್.ಎಂ.ಹಡಪದ, ಜೆ.ಎಂ.ಎಸ್.ಮಣಿ, ಚಿ.ಸು.ಕೃಷ್ಣಶೆಟ್ಟಿ, ಜೆ.ಎಸ್.ಖಂಡೇರಾವ್, ಚಂದ್ರನಾಥ ಆಚಾರ್ಯ, ಜೆ.ವೈ.ಹುಬ್ಬೀಕರ್, ಮುನವಳ್ಳಿ, ಇನ್ನೂ ಹಲವಾರು ಕಲಾವಿದರಿಂದ ರೂಪಗೊಂಡ ಈ ಕಲಾಯಾತ್ರೆ ಸಿ.ಚಂದ್ರಶೇಖರ ಅವರ ಲಲಿತಕಲಾ ಅಕಾಡೆಮಿಯ ಅಧ್ಯಕ್ಷತೆಯ ಅವಧಿಯಲ್ಲಿ 'ಚಿತ್ರಯಾತ್ರೆ' ಎಂಬ ವಿನೂತನ ಕಾರ್ಯಕ್ರಮದಿಂದ ಗ್ರಾಮೀನ ಮುಟ್ಟಕ್ಕೂ ಕಲೆ ತಲುಪುವಂತಾಯಿತು. ಕೇವಲ ಬೆಂಗಳೂರು, ಮೈಸೂರು, ದಾವಣಗೆರೆಯಂತಹ ಮಹಾನಗರಗಳಿಗೆ ಸೀಮಿತವಾಗಿರುವ ಕಲಾ ಪ್ರದರ್ಶನವನ್ನು ಚಿತ್ರಯಾತ್ರೆಯ ಮೂಲಕ ನಾಡಿನಾದ್ಯಂತ ಸಂಚರಿಸಿ ಸಂಚಲನ ಮೂಡಿಸಿದರು.

ಕಲಾಮೇಳ

ವೆಂಕಟಪ್ಪ ಆರ್ಟ್‌ಗ್ಯಾಲರಿ. ಮೊದಲನೆ ಮಹಡಿ ಸಮಕಾಲೀನ ಚಿತ್ರಗಳನ್ನು ಇಟ್ಟ ಜಾಗ ಅವುಗಳನ್ನು ನೋಡಲು ಮೂರು ಜನ ಶ್ರೀ ಸಾಮಾನ್ಯರು ತಮಿಳಿನಲ್ಲಿ ಮಾತನಾಡುತ್ತಾ ಬರುತ್ತಾರೆ. "ತಲೆ ದಿಂಬು, ಕಲಾವಿದ ಶ್ರೀನಾಥ, ಬೆಲೆ ರೂ.೩೫೦. ಚಿತ್ರದ ಮುಂದೆ ನಿಲ್ಲುತ್ತಾರೆ. ನೋಡು ಇದೊಂದು ತಲೆದಿಂಬು. ಇದಕ್ಕೆ ರೂ.೩೫೦ ಅಂತೆ ದಂಡ" ಎಂದು ಅವರಲ್ಲಿ ಹಿರಿಯರು ಉದ್ಘರಿಸುತ್ತಾನೆ. ಎಲ್ಲಾ ಕಲಾಕೃತಿಗಳ ಬಗ್ಗೆ ಅತ್ಯಂತ ತಿರಸ್ಕೃತವಾಗಿ ಮಾತನಾಡುತ್ತಾನೆ, ಹೀಯಾಳಿಸುತ್ತಾನೆ. ಇದು ಕಲೆಗೆ ಶ್ರೀ ಸಾಮಾನ್ಯನ ಪ್ರತಿಕ್ರಿಯೆ. ಈ ವಿಷಯ ಕಲಾವಿದರ ಒಂದು ಗುಂಪಿನ ಮುಂದಿಟ್ಟಾಗ ಅವರಿಂದ ಬಂದ ಪ್ರತಿಕ್ರಿಯೆ, ಅವನು ಗ್ಯಾಲರಿಯ ಒಳಗಾದರು ಬಂದನಲ್ಲ ಅಷ್ಟೇ ಸಾಕು. ಇದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಲಾಮೇಳದ ಒಂದು ಉದ್ದೇಶ.

ಇದರಲ್ಲಿ ಭಾಗವಹಿಸಿದ ಕಲಾವಿದರ ಪ್ರತಿಕ್ರಿಯೆಯೇ ಮೇಲೆ ಉದ್ಗರಿಸಿರುವುದು. ಆರು ದಿನಗಳ ಕಲಾ ಮೇಳ "ಕಲಾವಿದರು ಮತ್ತು ಜನಸಾಮಾನ್ಯರನ್ನು ಹತ್ತಿರ ತರುವ ದಾರಿಯಲ್ಲಿ ಪ್ರಥಮ ಹೆಜ್ಜೆ" ಎಷ್ಟು ಹತ್ತಿರ ಬಂದ ಶ್ರೀ ಸಾಮಾನ್ಯ? ಎಷ್ಟು ಸಫಲವಾಯಿತು ಕಲಾಮೇಳ? ಎಂಬುದಕ್ಕೆ ಬಂದ ಉತ್ತರ, ಬೇಕಾದಷ್ಟು. ಆದರೆ ಶ್ರೀಸಾಮಾನ್ಯರಿಗೆ ಕೈಯಲ್ಲಿ ಅಭಿರುಚಿ

ಬೆಳೆಯಬೇಕಾದರೆ ಬೆಳೆಸಬೇಕಾದರೆ ಒಂದು ವಾರದಲ್ಲಿ ಒಂದು ತಿಂಗಳಾಗಲೀ ಸಾಲದು ನಿರಂತರ ಪ್ರಯತ್ನಬೇಕು. ತಲೆದಿಂಬಿಗೆ ೩೫೦ ರೂ.ಗಳೇ ಎಂದು ಉದ್ಗರಿಸಿದ ಶ್ರೀಸಾಮಾನ್ಯ ಕಲಾಮೇಳವೇ ಇಲ್ಲದಿದ್ದಲ್ಲಿ ಅವನು ಬಹುಶಃ ಕಲಾಕೃತಿಗಳನ್ನೇ ನೋಡುತ್ತಿದ್ದನ್ನೋ ಇಲ್ಲವೋ? ಕಲಾಮೇಳದ ಪ್ರಚಾರ ಅವನನ್ನು ಮತ್ತು ಇತರರನ್ನು ಅಲ್ಲಿಗೆ ಕರೆತಂದಿತ್ತು. ಇದೇ ಒಂದು ಲಾಭವಲ್ಲವೇ ಎಂದು ಕೇಳಿದರು ಕಲಾವಿದ ಜಿ.ಕೆ.ಸತ್ಯ.

ಕಲಾಮೇಳದ ಇನ್ನೊಂದು ಉದ್ದೇಶ ಶ್ರೀ ಸಾಮಾನ್ಯನಿಗೆ ಕಲಾವಿದರನ್ನೂ ಪರಿಚಯ ಮಾಡಿಕೊಡುವುದು. ಕಲೆಗಾರ ಒಬ್ಬ ನಾರ್ಮಲ್ ಮನಷ್ಯ. ಯಾವ ಅತಿರೇಕದ ವ್ಯಕ್ತಿಯೂ ಅಲ್ಲ ಎಂಬುದನ್ನು ತಿಳಿಯಪಡಿಸುವುದು ಹೇಗೆ? ಕಲಾಮೇಳ ನಡೆದ ಭವನದ ಆವರಣದಲ್ಲೇ ಬಹಿರಂಗವಾಗಿ ಕಲಾವಿದರು ಕುಂಚ ಹಿಡಿದರು. ನೆರೆದಿದ್ದ ಜನ ನೋಡುತ್ತಿದ್ದ ಹಾಗೆ ಹಂತ ಹಂತವಾಗಿ ಎಳೆ ಎಳೆಯಾಗಿ ಚಿತ್ರ ಮೂಡಿತು. ಕಲಾವಿದರೊಂದಿಗೆ ಅವರು ರಚಿಸುತ್ತಿದ್ದ ಚಿತ್ರದ ಬಗ್ಗೆ ಜನ ಚರ್ಚಿಸಿದರು. ಅಷ್ಟೇ ಅಲ್ಲ ಕಲಾವಿದರೆ ಇನ್ನಷ್ಟು ಹತ್ತಿರ ಬಂದರು. ಒಂದೇ ಆವರಣದಲ್ಲಿ ಆರು ದಿನ ಕಳೆದುದರಿಂದ ಜೊತೆಗೆ ಒಬ್ಬರಿಂದ ಇನ್ನೊಬ್ಬರು ಕಲಿತರು. ಇದು ಕಲಾಮೇಳದ ಮತ್ತೊಂದುಉದ್ದೇಶ. ಹೆಸರಾಗಿರುವ, ಹೆಸರು ಬರಲು ಶ್ರಮಿಸುತ್ತಿರುವ ಸುಮಾರು ೫೦ ಕಲಾವಿದರು ತಮ್ಮ ಕಾರ್ಯದಲ್ಲಿ ನಿರಂತರವಾಗಿರುವುದನ್ನು ಒಬ್ಬರನ್ನೊಬ್ಬರು ಗಮನಿಸಿದರು. ಒಬ್ಬರ ತಂತ್ರ, ಕೈಚಳಕ, ನಿಯಂತ್ರಣ, ಸೂಕ್ಷ್ಮತೆ, ಇನ್ನೊಬ್ಬರ ಅರಿವಿಗೆ ಬಂದು ಕಲಾವಿದ ಎಸ್.ಜಿ.ವಾಸುದೇವ ಹೇಳಿದಂತೆ ವರ್ಣಚಿತ್ರ ಬಿಡಿಸುವ ಕಲಾವಿದನಿಗೆ ಶಿಲ್ಪಿಯ ನೈಪುಣ್ಯತೆ ಅರಿವಾಯಿತು. ಒಬ್ಬ ಕಲಾವಿದ ಕಾರ್ಯದಲ್ಲಿ ಮಗ್ನನಾಗಿರುವುದನ್ನು ನೋಡುವ ಅವಕಾಶ ಬೇರೆಲ್ಲಿ ಒದಗುತ್ತದೆ.

ಕಲಾವಿದರಿಗೆ ಸಮಸ್ಯೆಗಳಿಲ್ಲವೆ? ಇವೆ ಅವುಗಳನ್ನು ಚರ್ಚಿಸಿದರು. ತಮ್ಮ ತಮ್ಮಲ್ಲೇ ಕಲೆ ಮತ್ತು ಸಮಾಜ, ಕಲೆಯ ಬೆಳವಣಿಗೆ, ಶಿಕ್ಷಣ ವ್ಯವಸ್ಥೆಯಲ್ಲಿ ಕಲೆಯ ಸ್ಥಾನ, ಕಲೆ ಮತ್ತು ಸಮೂಹ ಮಾಧ್ಯಮ, ಸಾಹಿತ್ಯ ಮತ್ತು ಲಲಿತಕಲೆಗಳು ಎಂಬ ವಿಷಯಗಳ ಮೇಲೆ ವಿಚಾರಗಳನ್ನು ಹಮ್ಮಿಕೊಂಡು ಕಲಾಮೇಳದಿಮದಾಗುವ ವಿಷಯಗಳನ್ನು ಚರ್ಚಿಸಿದರು.

ಕಲಾ ಚಳುವಳಿಗಳು

ಸಿ.ಚಂದ್ರಶೇಖರರವರು ಕಲೆಯ ಕುರಿತು ಅಭಿರುಚಿ ಹೊಂದಿದ್ದಾರೆ. ಕಲಾಪ್ರತಿಭೆ ಕುರಿತು ಯುವ ಕಲಾವಿದರಿಗೆ ಮಾರ್ಗದರ್ಶನ,ಕಲಾ ಪ್ರತಿಭೆ ಕುರಿತು ಯುವ ಕಲಾವಿದರಿಗೆ ಮಾರ್ಗದರ್ಶನ ಮಾಡಿದ್ದಾರೆ. ಅಲ್ಲದೆ ಕಲೆಯ ಉಳಿವಿಗಾಗಿ ಹಾಗೂ ಕಲೆಯ ಆವಿಷ್ಕಾರದಲ್ಲಿ ಒಂದು ರೀತಿಯ ಚಳುವಳಿಯನ್ನು ಮಾಡಿ ಕಲೆಯನ್ನು ಕಲಾಯಾತ್ರೆ, ಚಿತ್ರಯಾತ್ರೆಯ ಮೂಲಕ ಗ್ರಾಮೀನ ಪ್ರದೇಶಕ್ಕೆ ಪಸರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಹಿಂದಿನ ಇತಿಹಾಸವನ್ನು ಗಮನಿಸಿದಾಗ

ಕಲ್ಕತ್ತಾದಲ್ಲಿ(ಪಶ್ಚಿಮಬಂಗಾಲ) ಭಾರತೀಯ ಕಲಾ ಸಂಸ್ಕೃತಿಯನ್ನು ಉಳಿಸಿ ಬಳಸುವ ನಿಟ್ಟಿನಲ್ಲಿ ಅನೇಕ ಭಾರತೀಯ ಸಾಂಪ್ರದಾಯಿಕ ಕಲೆಗಳು ಹುಟ್ಟಿಕೊಳ್ಳುವುದರೊಂದಿಗೆ ಪಾಶ್ಚಿಮಾತ್ಯ ಕಲೆಯನ್ನು ತಿರಸ್ಕರಿಸಿದರು. ಇದರ ಪರ್ಯಾಯವಾಗಿ ಮುಂಬಯಿಯಲ್ಲಿ ಇನ್ನೊಂದು ಪ್ರೋಗ್ರೆಸಿವ್ ಎಂಬ ಕಲಾ ಸಂಘಟನೆ ಹುಟ್ಟಿಕೊಂಡಿತ್ತು. ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಹತ್ವ ಕೊಟ್ಟು ಕೃತಿ ರಚನೆಯಲ್ಲಿ ಪಾಶ್ಚಿಮಾತ್ಯರ ಪ್ರಭಾವದಿಂದಾಗಿ ಪ್ರೇರಣೆಗೊಂಡು ಭಾರತೀಯರ ಕಲಾಕ್ಷೇತ್ರವು ವೈಯಕ್ತಿಕ ನೆಲೆಯಲ್ಲಿ ರಚನೆಗೊಳ್ಳುತ್ತಾ, ಸಮಾಜದೊಂದಿನ ಸಂಬಂಧಗಳು ಮತ್ತೊಂದು ರೀತಿಯಲ್ಲಿ ಪುನರೂಪಿಸಿಕೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಅನೇಕ ರೀತಿಯ ಕಲಾ ವಲಯಗಳಲ್ಲಿ ಮೇಲಿಂದ ಮೇಲೆ ಬದಲಾವನೆಗಳೊಂದಿಗೆ ವಾದ, ಪ್ರತಿವಾದಗಳು(ಇಜಂ) ಹುಟ್ಟಿಕೊಂಡಿತ್ತು. ಕರ್ನಾಟಕದಲ್ಲಿಯೂ ಕೂಡ ಅನೇಕ ಬದಲಾವಣೆಗಳು ಆಗತೊಡಗಿದವು.

ಕಲಾಯಾತ್ರೆ

೧೯೮೩ರಲ್ಲಿ ನಡೆಸಿದ ಕಲಾಯಾತ್ರೆ ಕರ್ನಾಟಕದ ಒಂದು ಕಲಾಂದೋಲನ ಮಾಡಿತು. ಹದಿನಾರು ಜನ ಕಲಾವಿದರ ಜೊತೆಗೂಡಿ ಮಾಡಿದ ಈ ಯಾತ್ರೆ ಕರ್ನಾಟಕದ ಚಿತ್ರಕಲೆ ಈ ರೀತಿ ಬೆಳೆಯಲು ವ್ಯಾಪಕ ಪ್ರೋತ್ಸಾಹ ನೀಡಿದೆ ಎಂಬುವುದರಲ್ಲಿ ಅನುಮಾನವಿಲ್ಲ. ಈ ಯಾತ್ರೆಯಿಂದ ನೂರಾರು ಚಿತ್ರಕಲಾ ಮಹಾವಿದ್ಯಾಲಯಗಳು, ಸಾವಿರಾರು ಜನ ಕಲಾವಿದರು ಬೆಳೆಯಲು ಸಾಧ್ಯವಾಯಿತು. ಮೊದಲಿಗೆ ಬೆಂಗಳೂರು, ಮೈಸೂರು, ಧಾರವಾಡ, ಗುಲಬರ್ಗಾ, ದಾವಣಗೆರೆಗಳಿಗೆ ಮೀಸಲಾಗಿದ್ದ ಚಿತ್ರಕಲಾ ಪ್ರದರ್ಶನ, ತಾಲೂಕು ಮಟ್ಟದವರೆಗೂ ಹರಡಲು ಸಾಧ್ಯವಾದದ್ದು ಈ ಚಿತ್ರಕಲಾ ಯಾತ್ರೆ ಕಾರಣ. ಈ ಇಪ್ಪತ್ತು ವರ್ಷಗಳಲ್ಲಿ ಕಲೆಯನ್ನು ಆಸ್ವಾದಿಸುವ ಮಾರ್ಗದಲ್ಲೆ ಬಂದ ವ್ಯಾಪಕತೆ ಚಿತ್ರಕಲಾ ಶಿಕ್ಷಣದ ಬಗ್ಗೆಯೂ ಗಂಭೀರವಾಗಿ ಆಲೋಚಿಸಿತು. ಆದ್ದರಿಂದ ಯಾತ್ರೆಯ ಮೂಲಕ ಚಂದ್ರಶೇಖರ ಅವರು ಉಂಟು ಮಾಡಿದ ಚಿತ್ರಕಲಾ ಚಳುವಳಿ ಬಹಳ ದೊಡ್ಡದ್ದು. ಕಲಾ ಸ್ವಾದನೆಯ ಚಿಂತನೆ ವಿಸ್ತಾರಗೊಂಡಂತೆ ಚಿತ್ರ ಬರೆಯುವ ಪ್ರಯೋಗಶೀಲತೆ ಕೂಡ ವಿಸ್ತಾರಗೊಂಡಿತ್ತು. ಪುನಃ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾದ ಮೇಲೂ ಕಲಾಯಾತ್ರೆಗಳಿಗೆ ಚಲನೆಯನ್ನು ನೀಡಿದರು. ಒಂದು ರೀತಿಯಲ್ಲಿ ಕಲಾತ್ಮಕವಾಗಿ ಕರ್ನಾಟಕವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಸಿ.ಚಂದ್ರಶೇಖರ ಸಂಘಟನಾ ಶಕ್ತಿ ಬಹಳ ದೊಡ್ಡದ್ದು.

ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆ


ಸಿ.ಚಂದ್ರಶೇಖರರವರು ೧೯೭೪ ರಿಂದ ೧೯೮೩ರವರೆಗೆ ಬೆಂಗಳೂರು ಮಹಾನಗರ ಪಾಲಿಕೆ, ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೭೬ ರಿಂದ ೧೯೭೮ರವರೆಗೆ ಬೆಂಗಳೂರು ವಿಭಾಗದ ಚಿತ್ರಕಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

೧೯೮೩ ಮತ್ತು ೮೪ರಲ್ಲಿ ನಡೆದ ಕರ್ನಾಟಕ ಕಲಾಯಾತ್ರೆಯಲ್ಲಿ ಸಂಚಾಲಕರಾಗಿ, ೧೯೮೬ ರಿಂದ ೮೯ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಲಲಿತಕಲಾ ವಿಭಾಗದ ಅಧ್ಯಯನ ಮಂಡಳಿಯ ಸದಸ್ಯರಾಗಿ ೧೯೮೩ ರಿಂದ ೮೬ರವರೆಗೆ ೪ನೇ ಕಲಾಮೇಳದ ಉಪಾಧ್ಯಕ್ಷರಾಗಿ ೧೯೯೩-೯೪ರಲ್ಲಿ ರಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಕಾಲೇಜು(ಕರ್ನಾಟಕ ಸರಕಾರ), ಮೈಸೂರಿನಲ್ಲಿ ಡೀನ್ ಆಗಿ ಕರ್ತವ್ಯ ಮಾಡಿದ್ದಾರೆ. ೧೯೯೫-೯೮ರವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು(ಕರ್ನಾಟಕ ಸರಕಾರ) ಇಲ್ಲಿ ಅಧ್ಯಕ್ಷರಾಗಿ ಕಲಾವಿದರಿಗೆ ಕಲಾ ವಿದ್ಯಾರ್ಥಿಗಳಿಗೆ ಯುವ ಕಲಾವಿದರಿಗೆ ಪ್ರೋತ್ಸಾಹ ನೀಡಿ ಕಲೆಯನ್ನು ಕರ್ನಾಟಕದಲ್ಲಿ ಗಟ್ಟಿಗೊಳಿಸಿದ್ದಾರೆ.

೧೯೯೫ ರಿಂದ ೯೮ರವರೆಗೆ ಕಾವಾ ಮೈಸೂರು ಗೌರ್ನಿಂಗ್ ಕೌನ್ಸಿಲ್ ಸದಸ್ಯರಾಗಿ ೧೯೯೬ರಲ್ಲಿ ೪೦ನೇ ರಾಷ್ಟ್ರೀಯ ಕಲಾಪ್ರದರ್ಶನ(ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ) ಬೆಂಗಳೂರು ಇಲ್ಲಿ ಸಂಚಾಲಕರಾಗಿ, ೧೯೯೩ ರಿಂದ ೯೫ರವರೆಗೆ ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರ, ನಾಗಪೂರದ ಸದಸ್ಯರಾಗಿ, ೧೯೯೫ ರಿಂದ ೯೮ರವರೆಗೆ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ನಾಗಪೂರದ ಸದಸ್ಯರಾಗಿ, ೧೯೯೫ ರಿಂದ ೯೮ರವರೆಗೆ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರ ಇಲ್ಲಿ ಸದಸ್ಯರಾಗಿ ೧೯೯೫ ರಿಂದ ೯೬ ರವರೆಗೆ ನವದೆಹಲಿ ಕೇಂದ್ರ ಲಲಿತಕಲಾ ಅಕಾಡೆಮಿ ಸದಸ್ಯರಾಗಿ, ೧೯೯೫ ರಿಂದ ೯೯ರ ವರೆಗೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿ ಸೆನೆಟ್ ಹಾಗೂ ಸಿಡಿಕೇಟ್ ಸದಸ್ಯರಾಗಿ ಮತ್ತು ಲಲಿತಕಲಾ ಅಧ್ಯಯನ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಸಿ.ಚಂದ್ರಶೇಖರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಲಾಕ್ಷೇತ್ರದಲ್ಲಿ ಮಹತ್ತರವಾದ ಜವಾಬ್ದಾರಿಯ ಕೆಲಸಗಳನ್ನು ನಿರ್ವಹಿಸಿ ನಾಡಿನ ಕಲಾಕ್ಷೇತ್ರದಲ್ಲಿ ಮಹತ್ತರವಾದ ಜವಾಬ್ದಾರಿಯ ಕೆಲಸವನ್ನು ನಿರ್ವಹಿಸಿ, ನಾಡಿನ ಕಲಾಕ್ಷೇತ್ರದಲ್ಲಿ ನಕ್ಷತ್ರದಂತೆ ಮಿಂಚಿ, ಕಲಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಯುವ ಕಲಾವಿದರಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಮಾದರಿಯಾಗಿದ್ದಾರೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು

ಸಿ.ಚಂದ್ರಶೇಖರರವರು ಕೇವಲ ಕಲಾಕ್ಷೇತ್ರಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳಲಿಲ್ಲ. ಸಾಮಾಜಿಕ ವಲಯದಲ್ಲಿಯೂ ಸಹ ಮಹತ್ತರ ಕೆಲಸಗಳನ್ನು ಮಾಡಿದ್ದಾರೆ. ಗೋಕಾಕ್ ವರದಿ ಜಾರಿಗೆಗಾಗಿ ನಡೆದ ಚಳುವಳಿಯಲ್ಲಿ ಚಿತ್ರಕಲಾವಿದರು, ಸಾಹಿತಿಗಳು, ನಾಟಕಕಾರರು, ಸಂಗೀತ, ಕಲವಿದರು ಹಾಗೂ ಬುದ್ಧಿಜೀವಿಗಳು ಸೇರಿ ನಾಡುನುಡಿಗಾಗಿ ಪಾತ್ರವಹಿಸಿ, ಸೆರೆಮನೆವಾಸ ಅನುಭವಿಸಿದ್ದಾರೆ. ಶಂಭಾ ವಿಚಾರ ವೇದಿಕೆ ಸದಸ್ಯರಾಗಿ ಸಾಹಿತಿಗಳು, ಕಲಾವಿದರುಗಳ ಬಳಗ ಹಾಗೂಕನ್ನಡ ಶಕ್ತಿ ಕೇಂದ್ರ ಬೆಂಗಳೂರು ಇದರ ಸಕ್ರೀಯ ಸದಸ್ಯರಾಗಿ, ವಿಶ್ವಕನ್ನಡ ಸಮ್ಮೇಳನದಲ್ಲಿ



ಪುಸ್ತಕ ಪ್ರದರ್ಶನ ಅಲಂಕರಣ ಮತ್ತು ಭಿತ್ತಿ ಚಿತ್ರ ಮತ್ತು ಭಾವಚಿತ್ರಗಳ ರಚನಾ ವ್ಯವಸ್ಥೆಯ ಸಂಚಾಲಕತ್ವ ವಹಿಸಿ ಯಶಸ್ವಿಗಳಿಸಿ ಕೊಟ್ಟಿದ್ದಾರೆ. ಕುವೆಂಪು, ಬಿ.ಎಂ.ಶ್ರೀ, ತಿ.ನಂ.ಶ್ರೀ ಕಿಟಲ್, ಸರ್ವಜ್ಞ, ಮುತ್ಥಳಿಗಳ ನಿರ್ಮಾಣ, ಸಲಹಾ ಸಮಿತಿಯ ಕಲಾವಿದ ಸದಸ್ಯರಾಗಿ ಪ್ರಮುಖ ಕಲಾ ವಿಚಾರ ಸಂಕೀರ್ಣದಲ್ಲಿ ಪ್ರಬಂಧಗಳನ್ನು ಮಂಡಿಸಿ ಹೆಸರುವಾಸಿಯಾಗಿದ್ದಾರೆ.

ಅಖಿಲಭಾರತ ಗ್ರಾಫಿಕ್ ಕಲೆಯ ಬಗ್ಗೆ ಪ್ರಬಂಧ ಮಂಡಿಸಿ ಹಾಗೂ ವಿಶ್ವಕನ್ನಡ ಸಮ್ಮೇಳನದಲ್ಲಿ ಸಮಕಾಲೀನ ಕಲೆ ಮತ್ತು ಕೈಗಾರಿಕೆ ಬಗ್ಗೆ ಪ್ರಬಂಧ ಮಂಡನೆ ಮಾಡಿದ್ದಾರೆ. ಹಾಸನ ಸಾಹಿತ್ಯ ಸಮ್ಮೇಳನದಲ್ಲಿ ಕಲೆಯ ಕುರಿತು ಉಪನ್ಯಾಸ ಮಾಡಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಿಣಿತ ಕಲಾವಿದರಿಗೆ ನೀಡುವ ಗೌರವ ಮಾಶಾಸನ ಆಯ್ಕೆ ಸಮಿತಿಯ ಸದಸ್ಯರಾಗಿ, ಕೇಂದ್ರ ಸರಕಾರದ ದಕ್ಷಿಣ ವಲಯ ಅಂಚೆ ಇಲಾಖೆ ಹೊರತರುವ ಅಂಚೆ ಚೀಟಿಗಳ ಸಲಹಾ ಸಮಿತಿಯ ಸದಸ್ಯರಾಗಿ, ವರ್ಣಶಿಲ್ಪ ವೆಂಕಟಪ್ಪ ಹೆಸರಿನ ಚಿತ್ರಕಲಾ ಪ್ರಶಸ್ತಿಯ ಅಯ್ಕೆ ಸಮಿತಿ ಸದಸ್ಯರಾಗಿ, ಬೆಂಗಳೂರು ಮಹಾನಗರ ಪಾಲಿಕೆಯ ಸೌಂದಯೀಕರಣ ಮತ್ತು ಕನ್ನಡೀಕರಣ ಸಮಿತಿಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಪುರ್ನಮನನ ಕಾರ್ಯಕ್ರಮದಲ್ಲಿ ಅಧ್ಯಕ್ಷರಾಗಿ ಹಾಗೂ ಪುರ್ನಮನನ ಕಾರ್ಯಕ್ರಮದ ಕೆಲವು ಭಾಗಗಳಲ್ಲಿ ಕಲೆಯ ಕುರಿತು, ಪಠ್ಯ ಸಂಸ್ಕರಣೆ, ವಿದ್ಯಾರ್ಥಿಗಳ ಸಮಸ್ಯೆ, ಕಲಾ ಶಾಲೆಗಳ ಮೂಲಭೂತ ಸೌಕರ್ಯಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳ ಅವಶ್ಯಕ ಕಲಾ ವಸ್ತುಗಳ ಕುರಿತು ಮಾತನಾಡಿದರು.

ಇವರ ಪ್ರಮುಖ ಸಂಗ್ರಹಗಳು

ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ, ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿ, ನವದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಲಯ ಲಲಿತಕಲಾ ಅಕಾಡೆಮಿ, ಚೆನ್ನೈ, ಕೇರಳ ಲಲಿತ ಕಲಾ ಅಕಾಡೆಮಿ, ತಿರುವನಂತಪುರ, ಕರ್ನಾಟಕ ಸರ್ಕಾರದ ವಸ್ತು ಸಂಗ್ರಹಾಲಯ, ಬೆಂಗಳೂರು ಕಲಾಭವನ, ಶಾಂತಿನಿಕೇತನ, ಪಶ್ಚಿಮಬಂಗಾಳ, ಸರ್ಕಾರಿ ಚಿತ್ರಕಲಾ ಕಾಲೇಜು, ದಾವಣಗೆರೆ, ಸರಕಾರಿ ಚಿತ್ರಕಲಾ ಕಾಲೇಜು, ಧಾರವಾಡ. ಚಿತ್ರದುರ್ಗ ರೇಲ್ವೆ ನಿಲ್ದಾಣ, ದಕ್ಷಿಣ ರೇಲ್ವೆ, ಚಿತ್ರದುರ್ಗ. ಕಲಾ ಕಾಲೇಜು ಹೈದರಾಬಾದ್ ಹಾಗೂ ದೇಶ ವಿದೇಶಗಳ ಖಾಸಗಿ ಸಂಗ್ರಹಗಳಲ್ಲಿ ಇವರ ಕಲಾ ಕೃತಿಗಳು ಸಂಗ್ರಹಗೊಂಡಿವೆ.

"೬೦ರ ಸಂಭ್ರಮದ ಸನ್ಮಾನ"

ಕರ್ನಾಟಕ ಯುವಕಲಾವಿದರ ವೇದಿಕೆಯ ವತಿಯಿಂದ ಕಲಾವಿದ ಸಿ.ಚಂದ್ರಶೇಖರವರ ೬೦ ವಸಂತಗಳನ್ನು ಕಂಡ ಈ ಸಾಧಕನ ಸಾಧನೆ ಹಾಗೂ ಚಿಂತನೆಗಳನ್ನು ನಾಡಿಗೆ

ಪರಿಚಯಿಸಲು '೬೦'ರ ಸಂಭ್ರಮದ "ರೂಪು ರೇಖೆ" ಶೀರ್ಷಿಕೆಯಡಿ ಕಾರ್ಯವನ್ನು ಮೈಸೂರು, ತುಮಕೂರು, ಧಾರವಾಡ, ಬೆಂಗಳೂರಿನಲ್ಲಿ ಹಮ್ಮಿಕೊಂಡಿದೆ.

ಮೈಸೂರು: ಮೈಸೂರಿನ ಓರಿಯನ್ ಆರ್ಟಿಸ್ಟ್ ಗ್ರೂಪ್‌ನ ಸಂಯೋಗದೊಂದಿಗೆ. ಇವರ ಕಲಾ ಪ್ರದರ್ಶನ, ಮತ್ತು ಸಾಕ್ಷ್ಯಚಿತ್ರ ವಿಚಾರ ಸಂಕಿರಣವನ್ನು ದಿನಾಂಕ: ೧೦/೩/೨೦೦೮ ರಿಂದ ೧೫/೩/೨೦೦೮ರ ವರೆಗೆ ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ವಿಶ್ರಾಂತ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡರು ಆಗಮಿಸಿದ್ದರು. ಅಧ್ಯಕ್ಷರಾಗಿ ಪ್ರಾಚ್ಯವಸ್ತು ಇಲಾಕೆಯ ಆಯುಕ್ತರಾದ ರಾಮಕೃಷ್ಣ ಅವರು ಹಾಜರಿದ್ದರು. ಮುಖ್ಯ ಅತಿಥಿಗಳಾಗಿ ಕಲಾವಿದ ರಾಮದಾಸ ಅಡ್ಯಂತಾಯ ಆಗಮಿಸಿ, ಕಲಾವಿದ ಸಿ.ಚಂದ್ರಶೇಖರ '೬೦'ರ ಸಂಭ್ರಮದಲ್ಲಿ ಪಾಲ್ಗೊಂಡು ಓರಿಯನ್ ಆರ್ಟಿಸ್ಟ್ ಗ್ರೂಪ್ ಪರವಾಗಿ ಸತ್ಕರಿಸಿ ಸನ್ಮಾನಿಸಿದರು.

ತುಮಕೂರು: ತುಮಕೂರಿನಲ್ಲಿ "ಕಲರ್ಸ್ ಗ್ರೂಪ್" ಸಂಯೋಗದೊಂದಿಗೆ ದಿನಾಂಕ ೨೬-೦೮-೨೦೦೭ ರಿಂದ ೩೦-೦೬-೨೦೦೭ರವರೆಗೆ ಇವರ ಕಲಾಕೃತಿಗಳ ಪ್ರದರ್ಶನ, ಸಾಕ್ಷ್ಯಚಿತ್ರ, ವಿಚಾರ ಸಂಕಿರಣ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಅಧ್ಯಕ್ಷತೆಯನ್ನು ಡಾ.ಕೆ.ಬಿ.ಸಿದ್ಧಯ್ಯ ಹಾಗೂ ಉದ್ಘಾಟನೆಯನ್ನು ಎಂ.ಬಸವಯ್ಯ ಮಾಡಿದರು. ಮುಖ್ಯ ಅತಿಥಿಗಳಾಗಿ ಡಾ.ನಟರಾಜ ಬೂದಾಳು ಹಾಗೂ ಕೋಟೆಕುಮಾರ ಆಗಮಿಸಿದ್ದರು. ಈ ಸಂದರ್ಭದಲ್ಲಿ ಕಲಾವಿದರೆಲ್ಲ ಸೇರಿ ಸಿ. ಚಂದ್ರಶೇಖರವರ '೬೦'ರ ಸಂಭ್ರಮಕ್ಕಾಗಿ ಸನ್ಮಾನಿಸಿ, ಗೌರವಿಸಿದರು.

ಧಾರವಾಡ: ಧಾರವಾಡ ಸರಕಾರಿ ಆರ್ಟ್ ಗ್ಯಾಲರಿಯಲ್ಲಿ ಚಿತ್ತಾರ ಕಲಾ ಬಳಗ ಹಾಗೂ ಸರ್ಕಾರಿ ಚಿತ್ರಕಲಾ ಮಹಾ ವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ದಿನಾಂಕ ೧೪-೯-೨೦೦೮ ರಿಂದ ೧೬-೯-೨೦೦೮ ರವರೆಗೆ, ಚಿತ್ರಕಲಾ ಪ್ರದರ್ಶನ, ಸಾಕ್ಷ್ಯಚಿತ್ರ, ಸಂವಾದ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಜರುಗಿದವು. ಉದ್ಘಾಟನಾ ಸಮಾರಂಭಕ್ಕೆ ಗೌರವಾನ್ವಿತ ವಿಧಾನಸಭಾ ಅಧ್ಯಕ್ಷರಾದ ಮಾನ್ಯ ಜಗದೀಶ ಶೆಟ್ಟರವರು ಆಗಮಿಸಿ ಕಲಾಕೃತಿಗಳ ಪ್ರದರ್ಶನದ ಉದ್ಘಾಟನಾ ಮಾಡಿದರು. ಹಿರಿಯ ಕಲಾವಿದರಾದ, ಆರ್ಯ ಆಚಾರ್ಯರು, ಸಾಹಿತಿ ಮೋಹನ ನಾಗಮ್ಮನವರು, ಸುರೇಶ ಹಾಲಭಾವಿ, ಲತಾರಾಣಿ ಮಲ್ಲಾರ, ಗಾಯಿತ್ರಿ ಗೌಡರ ಅತಿಥಿಗಳಾಗಿದ್ದರು.

ಸಿ. ಚಂದ್ರಶೇಖರರವರ ಸತ್ಕಾರ ಸಮಾರಂಭದಲ್ಲಿ ಹುಬ್ಬಳ್ಳಿ-ಧಾರವಾಡ ಪೂರ್ವ ಮತಕ್ಷೇತ್ರದ ಶಾಸಕರಾದ ಶ್ರೀ ವೀರಭದ್ರಪ್ಪ ಹಾಲಹರವಿ ಅಧ್ಯಕ್ಷರಾಗಿದ್ದು, ಶ್ರೀ ಮೋಹನ ನಾಗಮ್ಮನವರ ಅಭಿನಂದನಾ ಭಾಷಣ ಮಾಡಿದರು. ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ವೆಂಕಟೇಶ ಮಾಚಕನೂರರವರು, ಹುಬ್ಬಳ್ಳಿ-ಧಾರವಾಡ ಮಹಾನಗರ ಆಯುಕ್ತರಾದ ಡಾ.ಅಜಯ ನಾಗಭೂಷಣ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಸತ್ಕರಿಸಿ ಹುಬ್ಬಳ್ಳಿ-ಧಾರವಾಡ ಕಲಾವಿದರ ಪರವಾಗಿ ಅಭಿನಂದನಾ ಪತ್ರ ನೀಡಿ ಸನ್ಮಾನಿಸಲಾಯಿತು. ಚಿತ್ತಾರ ಕಲಾ ಬಳಗದ ಕಲಾವಿದ

ಬಿ.ಮಾರುತಿ ಕಾಲೇಜಿನ ಮುಖ್ಯಸ್ಥ ಎನ್.ಎಂ.ದಾಟನಾಳರವರು ಸಂಘಟಿಸಿದ್ದರು. ಯುವ ಕರ್ನಾಟಕ ವೇದಿಕೆ ಅಧ್ಯಕ್ಷರಾದ ಬಾಬುರಾವ್, ನಡೋಣಿ ಹಾಗೂ ಪ್ರತಾಪ ಬಹುರೂಪಿಯವರು ಈ ಕಾರ್ಯಕ್ರಮದ ಸಂಚಾಲಕತ್ವದಲ್ಲಿ ನೆರವೇರಿಸಿದರು. ಬಿ.ಎಚ್.ಕುರಿಯವರ ಕಾರ್ಯಕ್ರಮ ನಿರೂಪಿಸಿದರು.

ಬೆಂಗಳೂರು: ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಕರ್ನಾಟಕ ಯುವ ಕಲಾವಿದರ ವೇದಿಕೆಯು ಸಿ.ಚಂದ್ರಶೇಖರವರ "ಅರವತ್ತು ರೂಪು ರೇಖೆ" ಕಲಾಪ್ರದರ್ಶನವನ್ನು ದಿನಾಂಕ ೭-೦೩-೨೦೦೯ ರಿಂದ ೧೧-೦೩-೨೦೦೯ರವರೆಗೆ ಹಮ್ಮಿಕೊಂಡಿದ್ದರು. ಕಲಾ ಪ್ರದರ್ಶನದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಕಂಬಾರರವರು ಮಾಡಿದರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವೆಯಾದ ಬಿ.ಟಿ.ಲಲಿತಾನಾಯಕ ರವರು ಹಾಗೂ ಸಾಹಿತಿ ಕೆ. ಬಿ. ಸಿದ್ದಯ್ಯ ಆಗಮನಿಸಿದ್ದರು. ಈ ಸಂದರ್ಭದಲ್ಲಿ ಸಾಕ್ಷ್ಯಚಿತ್ರ, ಕಲಾ ಸಂವಾದ ಚರ್ಚೆಗಳು ನಡೆದುಬಂದವು.

ಖ್ಯಾತ ಸಾಹಿತಿಗಳಾದ ಕೆ.ವಿ.ನಾರಾಯಣ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ಗೋಷ್ಠಿ "ಕಲಾ ವಿಮರ್ಶೆಯ ಹೊಸ ಆಯಾಮಗಳು" ಕುರಿತು ವಿಚಾರ ಸಂಕಿರಣ ನಡೆಯಿತು. ಇದರಲ್ಲಿ ಕಲಾಸಾಹಿತಿಗಳಾದ ಹರಿಹರ ಪ್ರೀಯ, ನಟರಾಜ ಬೂದಿಹಾಳ, ಕೆ.ಬಿ.ಸಿದ್ಧಯ್ಯ, ಕುಮಾರಿ ಚರಿತಾ, ಚಿ.ಸು.ಕೃಷ್ಣಶೆಟ್ಟಿ, ಬಾಬುರಾವ್ ನಡೋಣಿ, ಪ್ರತಾಪ ಬಹುರೂಪಿ ವಿಚಾರಗಳನ್ನು ಮಂಡಿಸಿದರು. ೮ನೇ ಮಾರ್ಚ್ ೨೦೦೯ರಂದು ಸಂಜೆ ೫.೩೦ಕ್ಕೆ ಸಿ.ಚಂದ್ರಶೇಖರ ರವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಚ್.ಕೃಷ್ಣಯ್ಯರವರು ವಹಿಸಿದ್ದರು. ಕಲಾವಿದ ಜೆ.ಎಎಸ್.ಖಂಡೇರಾವ್, ರಾಜ್ಯಸಭಾ ಸದಸ್ಯರ ಕೆ.ಬಿ.ಶಾಣಪ್ಪ ಅತಿಥಿಗಳಾಗಿ ಭಾಗವಹಿಸಿದ್ದರು.

'೬೦'ರ ಅಭಿನಂದನಾ ಸನ್ಮಾನವನ್ನು ಸಾಹಿತಿ ಡಾ.ಬರಗೂರ, ರಾಮಚಂದ್ರಪ್ಪನವರು ಅಭಿನಂದಿಸಿದರು. ೬೦ ವಸಂತ ಕಂಡ ಈ ಕಲಾವಿದರಿಗೆ ನಾಡಿನ ಎಲ್ಲಾ ಕಲಾವಿದರ ಪರವಾಗಿ ಅಭಿನಂದನಾ ಪತ್ರವನ್ನು "ಕರ್ನಾಟಕ ಯುವ ಕಲಾವಿದರ ವೇದಿಕೆಯ ಅಧ್ಯಕ್ಷ ಬಾಬುರಾವ್, ನಡೋಣಿ, ಉಪಾಧ್ಯಕ್ಷ, ಪಿ.ಬಿ.ಹರಸೂರ, ಕಾರ್ಯದರ್ಶಿ ಎಂ.ಜಿ., ದೊಡಮನಿ, ಸಂಘಟನಾ ಕಾರ್ಯದರ್ಶಿ, ಪ್ರತಾಪ ಬಹುರೂಪಿ. ಸಿ.ಕಣ್ಮೇಶ ಮುಂತಾದವರು ಸೇರಿ ಅಭಿನಂದನಾ ಪತ್ರವನ್ನು ಅರ್ಪಿಸಿದರು.

೬೦ರ ರೂಪುರೇಖೆ ಕಾರ್ಯಕ್ರಮದ ಸಮಾರೋಪದ ಅಧ್ಯಕ್ಷತೆಯನ್ನು ಡಾ.ವಿಜಯಾ ಅವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಡಾ.ದೊಡ್ಡರಂಗೇಗೌಡರು ಆಗಮಿಸಿದ್ದರು. ಹಾಗೂ ಪ್ರೊ. ಪಿ. ಜಿ. ಅಂದಾನಿ ಅತಿಥಿಗಳಾಗಿದ್ದರು. ಹರಿಹರ ಪ್ರಿಯಾ ಸಮಾರೋಪ

ಭಾಷಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಂಚಾಲಕ ಎಂ.ಜಿ.ದೊಡ್ಡಮನಿ, ಪಿ.ಜಿ.ಹರಸೂರ, ಪ್ರಭಾಕರ ಶ್ರೀನಿವಾಸ ಹಾಗೂ ಕೃಷ್ಣ ರಾಯಚೂರ, ಬಾಬುರಾವ್, ನಡೋಣಿ ಭಾಗವಹಿಸಿದ್ದರು. ಸಿ. ಚಂದ್ರಶೇಖರರವರ '೬೦'ರ ಸಂಭ್ರಮದ ಕಾರ್ಯಕ್ರಮಗಳು ಹುಬ್ಬಳ್ಳಿ-ಧಾರವಾಡ, ತುಮಕೂರ, ಮೈಸೂರ ಬೆಂಗಳೂರುಗಳಲ್ಲಿ ನಡೆದು, ಇಲ್ಲಿಯ ನಾಡಿನ ಎಲ್ಲ ಹಿರಿಯ, ಕಿರಿಯ, ಯುವ ಕಲಾವಿದರು ಸೇರಿ ಈ ಕಲಾವಿದನಿಗೆ ಪ್ರೀತಿ ಗೌರವದಿಂದ ಆತ್ಮೀಯವಾಗಿ ಸನ್ಮಾನಿಸಿದ್ದಾರೆ.

ಕಲಾವಿದ ಸಿ.ಚಂದ್ರಶೇಖರ ಕುರಿತು ಗಣ್ಯರ ಅಭಿಪ್ರಾಯ

ನಾಡಿನ ಹೆಸರಾಂತ ಕಲಾವಿದ ಸಿ.ಚಂದ್ರಶೇಖರರವರ ಕುರಿತು ನಾಡಿನ ಗಣ್ಯರು, ಹಿರಿಯರು, ಸಾಹಿತಿಗಳು, ಲೇಖಕರು, ಬುದ್ಧಿಜೀವಿಗಳು, ಕಲಾವಿದರು, ಸಂಗೀತಗಾರರು, ಚಿತ್ರನಟರು, ಸಾಮಾನ್ಯರಿಂದ ಹಿಡಿದು ಹಿರಿಯರೆಲ್ಲರೂ ಇವರ ಬಗ್ಗೆ ಪ್ರೀತಿ, ಗೌರವ ಆತ್ಮೀಯತೆಯನ್ನು ಹೊಂದಿ ಪ್ರಶಂಸನೀಯ ಮಾತುಗಳನ್ನು ಹೇಳಿದ್ದಾರೆ.

* ಹೆಸರಾಂತ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕಲಾವಿದ ಸಿ.ಚಂದ್ರಶೇಖರವರ ಕುರಿತು ಸಾಮಾಜಿಕ ಚಿಂತನೆಯ ಸರ್ವಕಾಲಕ್ಕೂ ಅನ್ವಯವಾಗುವ ಸತ್ಯಗಳನ್ನು ಒಳಗೊಳ್ಳುತ್ತವೆ. ವಾಸ್ತವವನ್ನು ಹಾಗೇ ಇರಲು ಬಿಡದೇ ಈ ವಾಸ್ತವವನ್ನೇ ಸೃಜನಗೊಳಿಸಿ ಅದ್ಭುತ ಕಲಾವಿದರೆನಿಸಿ ಕೊಂಡಿದ್ದಾರೆ.

* ವಿಧಾನಸಭೆಯ ಅಧ್ಯಕ್ಷರಾದ ಶ್ರೀ ಜಗದೀಶ ಶೆಟ್ಟರವರ ಕಲಾವಿದ ಸಿ.ಚಂದ್ರಶೇಖರರವರ ೬೦ರ ಸಂಭ್ರಮದ ಅಂಗವಾಗಿ ಅವರ ಕಲಾಕೃತಿಗಳ ಪ್ರದರ್ಶನವನ್ನು ಧಾರವಾಡದಲ್ಲಿ ಸರಕಾರಿ ಆರ್ಟ್ ಗ್ಯಾಲರಿಯಲ್ಲಿ ಉದ್ಘಾಟಿಸಿ ಮಾತನಾಡುತ್ತಾ ಇವರ ತೈಲವರ್ಣ, ಗ್ರಾಫಿಕ್ ಕಲಾಕೃತಿಗಳ ಕಲಾ ಪ್ರಕಾರಗಳಲ್ಲಿ ವೈಯಕ್ತಿಕ ಶೈಲಿಯೊಂದಿಗೆ ಛಾಪು ಮೂಡಿಸಿವೆ ಎಂದಿದ್ದಾರೆ.

* ಹಿರಿಯ ಕಲಾವಿದ ಶ್ರೀ ಆರ್ಯ ಆಚಾರ್ಯ ಇವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಸಿ.ಚಂದ್ರಶೇಖರರವರ ಕೃತಿಗಳು ಸಮಾಜದ ಸಮಾನತೆಯ ಸಮೃದ್ಧತೆಯನ್ನು ತುಂಬಲು ಸಹಕಾರಿಯಾಗಿವೆ. ಇವು ವಿಶ್ವದ ಕಲಾಪರಂಪರೆಗೆ ವಿಶಿಷ್ಟ ಕೊಡುಗೆಗಳಾಗಿವೆ ಎಂದರು.

* ಸಾಹಿತಿ ಮೋಹನ ನಾಗಮ್ಮನವರು, ಅತಿಥಿಗಳಾಗಿ ಮಾತನಾಡುತ್ತಾ ಸಿ.ಚಂದ್ರಶೇಖರರವರು ಸೃಜನಶೀಲ ಕಲಾವಿದರಾಗಿ ನಾಡಿನಾದ್ಯಂತ ಚಿರಪರಿಚರು. ಅವರ ಕಲಾಕೃತಿಗಳು ಸಮಾಜದ ಬದಲಾವಣೆಗಳನ್ನು ಬಿಂಬಿಸಿವೆ, ಅವುಗಳಲ್ಲಿ ವೈಚಾರಿಕತೆ ಮೆರೆದಿದ್ದಾರೆ ಎಂದು ತಿಳಿಸಿದರು.

* ಮಾಜಿ ಸಚಿವೆ ಲೇಖಕಿ ಬಿ. ಟಿ. ಲಲಿತಾ ನಾಯಕ್ ಇವರು ಬೆಂಗಳೂರಿನಲ್ಲಿ ನಡೆದ

೬೦ರ ಸಂಭ್ರಮದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ" ಕಲೆ ಮತ್ತು ಸಾಹಿತ್ಯವು ಮನುಷ್ಯನ ಚಿಂತನಾ ವಿಧಾನ ಬದಲಾವಣೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿದೆ ಎಂದರು.

* ವಿಧಾನ ಪರಿಷತ ಸದಸ್ಯರು, ಖ್ಯಾತ ನಾಟಕಕಾರರಾದ ಡಾ. ಚಂದ್ರಶೇಖರ ಕಂಬಾರರವರು ಬೆಂಗಳೂರಿನಲ್ಲಿ ನಡೆದ ೬೦ರ ಕಾರ್ಯಕ್ರಮದಲ್ಲಿ ಸಿ.ಚಂದ್ರಶೇಖರ ಅವರ "ಕಲಾ ಪ್ರದರ್ಶನ" ಉದ್ಘಾಟಿಸಿ ಮಾತಾನಾಡುತ್ತಾ "ಕಲೆ ಮತ್ತು ಸಾಹಿತ್ಯ ಬದುಕಿನ ಮೌಲ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತವೆ. ಹಾಗಾಗಿ ರಾಜಕಾರಣಿಗಳಿಗೆ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ, ಅರ್ಥಪೂರ್ಣ ರೀತಿಯಲ್ಲಿ ಜನಸೇವೆಗೆ ತೊಡುಗುವಂತೆ ಪ್ರೇರೇಪಿಸುವ ಅಗತ್ಯವಿದೆ. ಇಲ್ಲದಿದ್ದರೆ ಸಮಾಜ ಅಧೋಗತಿಗೆ ತಲುಪುತ್ತದೆ ಎಂದರು.

* ಚಂದ್ರಶೇಖರ ಅವರ ಕಲೆಗಳು ಮನುಷ್ಯನ ವಿಕೃತ ಮನೋಭಾವದ ಪ್ರತಿ ಬಿಂಬವಾಗಿದೆ. ಸೂಕ್ಷ್ಮ ಸಂವೇದನೆಯ ಕಲಾವಿದರಾದ ಅವರು ಬದುಕನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುವ ಮೂಲಕ ಯುವ ಕಲಾವಿದರಿಗೆ ಪ್ರೇರಣೆ ನೀಡುವ ರೀತಿಯಲ್ಲಿ ಕಲೆಯನ್ನು ಅಭಿವ್ಯಕ್ತಿಗೊಳಿಸಿದ್ದಾರೆ ಎಂದರು.

* ಈ ಸಂದರ್ಭದಲ್ಲಿ ಕವಿ ಕೆ.ಬಿ.ಸಿದ್ದಯ್ಯ ಮಾತನಾಡಿ "ಕಲಾಕೃತಿಗಳಲ್ಲಿ ಹೊಲಿಗೆಗಳನ್ನು ಯಶಸ್ವಿಯಾಗಿ ಬಳಸುವ ಮೂಲಕ ವಿಶಿಷ್ಟವಾಗಿ ರೂಪಿಸಿದ್ದಾರೆ. ಛಿದ್ರಗೊಂಡ ಅಂಶಗಳ ಒಂದುಗೂಡುವಿಕೆಯನ್ನು ಈ ಹೊಲಿಗೆ ಸೂಚಿಸಬಹುದು. ಭಾಷೆ, ಜಾತಿ, ಧರ್ಮಗಳ ವಿಷಯಕ್ಕೆ ಭಿನ್ನಾಭಿಪ್ರಾಯದಿಂದ ಅಸಂಘಟಿತ ಸಮಾಜವನ್ನು ಮತ್ತೆ ಬೆಸೆಯುವುದನ್ನು ಸೂಚ್ಯವಾಗಿ ತಿಳಿಸಿದ್ದಾರೆ.

* ಪ್ರೊ, ಎಂ. ಎಚ್. ಕೃಷ್ಣಯ್ಯ ಅವರು ಸಿ.ಚಂದ್ರಶೇಖರ ಅವರ ಕಲಾಕೃತಿ ಕುರಿತು ಬದುಕಿನಲ್ಲಿ ಮನುಷ್ಯ, ಸಮಾಜದಲ್ಲಿ ಮತ ಧರ್ಮಗಳಲ್ಲಿ, ರಾಷ್ಟ್ರಗಳಲ್ಲಿ, ಬಿರುಕುಗಳಿವೆ' ಈ ಎಲ್ಲ ನಗ್ನ ವಾಸ್ತವಗಳ ಅರಿವಿದ್ದು ಸಿ. ಚಂದ್ರಶೇಖರ ಅವರು ನಿರಾಶಾವಾದಿಯಲ್ಲ. ನಿರಸನಿಯಲ್ಲ. ಬಿರುಕಿನಾಚೆ ಬೆಸುಗೆಯನ್ನು ಸಂಘರ್ಷದಾಚೆ ಶಾಂತಿ, ಸ್ನೇಹವನ್ನು ಕಾಣುವ ಮನೋಧರ್ಮ ಅವರ ಕಲಾಕೃತಿಗಳಲ್ಲಿ ವ್ಯಕ್ತವಾಗುತ್ತದೆ. ಇದು ಅವರ ಕಲಾಸಾಧನೆಯ ಕಾಣಿಕೆ ಎಂದರು.

* ಹೆಸರಾಂತ ಸಾಹಿತಿ ಹರಿಹರ ಪ್ರಿಯ ಅವರು ಸಿ. ಚಂದ್ರಶೇಖರ ಅವರ ಕುರಿತು ಹೇಳುವುದೇನೆಂದರೆ, ದಲಿತನಾದರೂ ಮನುಷ್ಯನಾದ, ಶಿಕ್ಷಕನಾದರೂ ಸಂಘಟಕನಾದ ರಾಜಕಾರಣಿಯಾದರೂ ಕಲಾವಿದನಾದ ಚಂದ್ರಶೇಖರ, ವ್ಯವಸ್ಥೆಯೊಳಗಿನ ಬಿರುಕು

ಕತ್ತಲೆ, ಅಮಾನವೀಯತೆಗೆ ಹೊಲಿಗೆ ಹಾಕಿ, ಚಿನ್ನದ ಹೊಳಪು ನೀಡಿ ಮಾನವೀಯತೆಯ ಅನುಕಂಪದ ಅಲೆ ಮೂಡಿಸುತ್ತಿರುವ ರಾಷ್ಟ್ರಮಟ್ಟದ ಕಲಾವಿದ.

* ಖ್ಯಾತ ಕಲಾವಿಮರ್ಶಕರಾದ ಚಿ.ಸು.ಕೃಷ್ಣಶೆಟ್ಟಿ ಅವರು ಸಿ.ಚಂದ್ರಶೇಖರ ಅವರ ಕಲಾಕೃತಿ ಕುರಿತು ತಂತ್ರಕ್ಕೆ ಸಾಕಷ್ಟು ಆದ್ಯತೆ ನೀಡಿ, ಹಿನ್ನೆಲೆಯ ಮೈವಳಿಕೆಗೆ ತುಂಬಾ ಪ್ರಾಧ್ಯಾನತೆ-ಯನ್ನು ಕೊಟ್ಟು ಕೆಲವೆಡೆ ಬಂಡೆಗಳ ಮೇಲ್ಮೈಯಂತೆ ಅನುಭವ ನೀಡುವ ವೈವಿಧ್ಯಮಯ ಕಲಾವಿದನಾಗಿದ್ದು, ಸ್ವಿಚ್ ಸರಣಿ ಕಲಾಕೃತಿಗಳಿಂದ ಸಾಮಾಜಿಕ ಜವಾಬ್ದಾರಿಯನ್ನು ಅತ್ಯಂತ ಪ್ರಭಾವಿತವಾಗಿ ಕೃತಿಗಳಲ್ಲಿ ತೋರಿಸುವಲ್ಲಿ ಖ್ಯಾತರಾಗಿದ್ದಾರೆ.

* ಹಿರಿಯ ಕಲಾವಿದ ಪ.ಸ.ಕುಮಾರ ಅವರು ಗೆಳೆಯ ಚಂದ್ರಶೇಖರ ಕುರಿತು ಅತ್ಯಂತ ಕ್ರಿಯಾಶೀಲ ಸೃಜಲಶೀಲ ಕಲಾವಿಧನಾಗಿ ಬದುಕಿನಲ್ಲಿಯ ಮೌಲ್ಯಗಳಿಗೆ ಒತ್ತು ನೀಡಿ, ಸಾಮಾಜಿಕ ಹೊಣೆಗಾರಿಕೆಯಲ್ಲಿಯ ಕಲಾವಿದನ ಪಾತ್ರ ಹಿರಿಯದಾಗಿದ್ದು ಅಂತಹ ಬದುಕಿನ ಅಂಶಗಳು ಚಂದ್ರಶೇಖರನ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ ಎಂದರು.

* ಪ್ರೊ. ದೊಡ್ಡರಂಗೇ ಗೌಡರು ಕಲಾವಿದ ಸಿ. ಚಂದ್ರಶೇಖರ ಅವರ ಕಲಾಕೃತಿಗಳಲ್ಲಿ ಸಾಮಾಜಿಕ ಚಿಂತನೆಯ ಮಾನವಿಯ ಮೌಲ್ಯಗಳ ಅಂಶಗಳನ್ನು ಸೃಜನಾತ್ಮಕವಾಗಿ ಚಿತ್ರಿಸಿ ತೋರಿಸಿದವರು ಎಂದರು.

* ರಾಜ್ಯಸಭಾ ಸದಸ್ಯ ಕೆ.ಬಿ.ಶಾಣಪ್ಪ ಅವರು ಕಲಾವಿದ ಸಿ.ಚಂದ್ರಶೇಖರ ಕುರಿತು ಅವರ ಕೃತಿಗಳಲ್ಲಿ ಬದುಕಿನ ನೋವು, ನಲಿವು, ನಂಬಿಕೆ ನಿರಾಶೆಗಳಿಗೆ, ಸಂಕಷ್ಟ ಸಂತೋಷಗಳಿಗೆ, ಬವಣೆ ಉಲ್ಲಾಸಗಳಿಗೆ ಮತ್ತು ಅದಮ್ಯ ಆಶಾವಾದಕ್ಕೆ ಪ್ರತೀಕವಾಗಬಲ್ಲವು ಎಂದರು.

ದಕ್ಷತೆಯ ಕೆಲಸಗಾರ

ಬೆಂಗಳೂರಿನ ಕಲಾಚಟುವಟಿಕೆಯ ಒಂದೊಂದು ಯೋಜನೆಯಲ್ಲಿಯೂ ಸಿ.ಚಂದ್ರಶೇಖರ ಅವರ ಹೆಸರು ಕೇಳಿಬರುತ್ತದೆ. ನಗರ ಯಾವುದೇ ಕಲಾಕ್ಷೇತ್ರದ ಕಾರ್ಯದಲ್ಲಿ ಚಂದ್ರಶೇಖರ ಅವರು ಇದ್ದೇ ಇರುತ್ತಾರೆ. ಎಷ್ಟೋ ಸಲ ಅದರ ಮುಂದಾಳತ್ವ ಅವರೇ ವಹಿಸುತ್ತಾರೆ. ಹಾಗೆ ಮುಂದಾಳತ್ವ ವಹಿಸಿದಾಗ ಶಿಸ್ತಿನಿಂದ, ಜವಾಬ್ದಾರಿಯಿಂದ ದುಡಿದು ಆ ಕಾರ್ಯದ ಯಶಸ್ಸಿಗೆ ಕಾರಣರಾಗುತ್ತಾರೆ. ಅವರ ದಕ್ಷತೆಗೆ, ಶಿಸ್ತಿಗೆ, ದುಡಿಮೆಗೆ ೧೯೮೪ರಲ್ಲಿ ಅವರ ಮುಂದಾಳತ್ವದಲ್ಲಿ ಜರುಗಿದ ಕಲಾಯಾತ್ರೆಯೇ ಸಾಕ್ಷಿ.

ಚಂದ್ರಶೇಖರ ಅವರನ್ನು ನಾನು ಪ್ರಪ್ರಥಮವಾಗಿ ಕಂಡದ್ದು ಕಲಾಯಾತ್ರೆಯೊಂದಿಗೆ ಗುಲಬರ್ಗಾ ಪ್ರವೇಶಿಸಿದಾಗ. ಅವಾಗಲೇ ಅವರ ಸಂಘಟನಾ ಶಕ್ತಿ, ಜನ ಸಮೂಹದ ನಾಯಕತ್ವದ ಸ್ವಭಾವ ಗುರುತಿಸಿದ್ದೇನೆ. ಅವರಲ್ಲಿ ನಿಷ್ಠೆಯಿಂದ ಕಾರ್ಯಮಾಡುವ ಗುಣವಿದೆ.

ಕಲೆಯ ಬಗ್ಗೆ, ಅದರ ಪೋಷಣೆಯ ಬಗ್ಗೆ ಮಾತನಾಡುವ ಎಲ್ಲಾ ಜನ ಅವರಿಗೆ ಬೇಕು. ಅವರ ಯೋಜನೆಗಳಲ್ಲಿ ಕಾರ್ಯದಲ್ಲಿ ನವೀನತೆ ಇದ್ದೇ ಇರುತ್ತದೆ.

ಬೆಂಗಳೂರಿನ ಕೆನ್‌ಸ್ಕೂಲ್ ಹಲವಾರು ಜನ ಪ್ರತಿಭಾವಂತ ಕಲಾವಿದರನ್ನು ನೀಡಿದಂತೆ ಸಿ.ಚಂದ್ರಶೇಖರ ಅವರನ್ನು ಕೊಟ್ಟಿದೆ. ಸಿ.ಚಂದ್ರಶೇಖರ ತಮ್ಮ ಪ್ರತಿಭೆಯಿಂದ, ನಿಷ್ಠೆಯಿಂದ, ಸಾಹಸದಿಂದ ಕಲಾವಿದರ ಗುಂಪಿನಲ್ಲಿ ಎದ್ದು ಕಾಣುವ ವ್ಯಕ್ತಿಯಾಗಿದ್ದಾರೆ. ತಾವು ಬೆಳೆಯುವುದರ ಜೊತೆಗೆ ಇತರರ ಬೆಳವಣಿಗೆಯನ್ನು ಬಯಸುತ್ತಾರೆ. "ನಿಜವಾದ ಮನುಷ್ಯ ಇನ್ನೊಬ್ಬರಿಗೆ ಆದದ್ದು ತನಗೆ ಆಗಬೇಕೆನ್ನುವುದಿಲ್ಲ. ತನಗೆ ಆದದ್ದು ಇನ್ನೊಬ್ಬರಿಗೆ ಆಗಬೇಕೆನ್ನುತ್ತಾನೆ. ನೋವು, ತನಗಿದ್ದು ನಲಿವು ಇನ್ನೊಬ್ಬರಿಗೆ ಇರಲಿ ಎನ್ನುತ್ತಾನೆ." ಈ ಮಾತು ಸಿ.ಚಂದ್ರಶೇಖರ ಅವರನ್ನು ಕಂಡಾಗ ನೆನಪಿಗೆ ಬರುತ್ತದೆ. ಕಲೆಗಾಗಿ–ನಾಡಿಗಾಗಿ ಚಿಂತಿಸುತ್ತ ದುಡಿಯುವ ಚಂದ್ರಶೇಖರ ಅವರ ಬದುಕು ಸಾಧನೆಯ ಹಾದಿಯಲ್ಲಿದೆ.

೧೯೪೮ ಮಾರ್ಚ್ ೧೦ ರಂದು ಬೆಂಗಳೂರು ನಗರದಲ್ಲಿ ಮಧ್ಯಮವರ್ಗದ ಮನೆತನದಲ್ಲಿ ಜನಿಸಿದ ಸಿ.ಚಂದ್ರಶೇಖರ ಶ್ರೀ ಚಿಕ್ಕಎಲ್ಲಪ್ಪ ಶ್ರೀಮತಿ ಚೌಡಮ್ಮ ದಂಪತಿಗಳಿಗೆ ಪ್ರೀತಿಯ ಮಗುವಾಗಿ ಬೆಳೆದರು. ಬಾಲ್ಯದಲ್ಲಿಯೇ ಕಲಾ ಆಸಕ್ತಿ ಹೊಂದಿದ ಚಂದ್ರಶೇಖರ ಅವರಿಗೆ ಜಾನಪದ ಆಟುಗಳು, ಶಾಲೆಯಲ್ಲಿಯ ಉತ್ಸವದ ಕಾರ್ಯಕ್ರಮಗಳು, ನಗರದಲ್ಲಿಯ ಸಾಂಸ್ಕೃತಿಕ ಚಟುವಟಿಕೆಗಳು, ಅವ್ಯಕ್ತವಾಗಿ ಪ್ರಭಾವ ಬೀರಿದವು. ಮಣ್ಣಿನಿಂದ ಗಣಪತಿ ಮಾಡುವುದು, ರಟ್ಟಿನಿಂದ ಮನೆ ಕಟ್ಟುವುದು. ಇದ್ದಲಿ, ಸೀಮೆ ಸುಣ್ಣದಿಂದ ದೇವತೆಗಳ ಚಿತ್ರ ಬರೆಯುವುದು ಬಾಲ್ಯದಲ್ಲಿಯೇ ಆರಂಭವಾಯಿತು.

ಕೋಟೆ ಹೈಸ್ಕೂಲಿನಲ್ಲಿ ಕಾಲಿಸಿದಾಗ ಕಲೆಯತ್ತ ಇನ್ನೂ ಹೆಚ್ಚು ಆಸಕ್ತಿ ಬೆಳೆಯಿತು. ಶಾಲೆಯಲ್ಲಿ ಬಿಡಿಸಿದ ಶಾರದೆಯ ಚಿತ್ರ ಅಲ್ಲಿಯ ಗುರುವೃಂದವನ್ನು, ವಿದ್ಯಾರ್ಥಿ ಬಳಗವನ್ನು ಆಕರ್ಷಿಸಿತು. ಡ್ರಾಯಿಂಗ ಮೇಷ್ಟ್ರ ಚಿಕ್ಕವೆಂಕಟಪ್ಪ ಪ್ರೋತ್ಸಾಹಿಸಿದರು. ಮುಂದೆ ಹೈಸ್ಕೂಲ ಅಭ್ಯಾಸ ಮುಗಿಸಿ ಮಹಾವಿದ್ಯಾಲಯದ ಕಟ್ಟೆ ಹತ್ತುತ್ತಿದ್ದಂತೆ ಕಲೆಯ ಸೆಳೆತ ಬಲವಾಯಿತು. ಆ ಸೆಳೆತಕ್ಕೆ ಸಿಕ್ಕ ಚಂದ್ರಶೇಖರ ಪಿ.ಯು.ಸಿ. ಅಭ್ಯಾಸ ಕೈಬಿಟ್ಟು ಸ್ನೇಹಿತ ಪಿ.ಎಸ್.ಕುಮಾರ ಅವರ ಸಹಾಯದಿಂದ ಬೆಂಗಳೂರಿನ ಕೆನ್ ಸ್ಕೂಲ್ ಆಫ್ ಆರ್ಟ್ ಸೇರಿ ಪ್ರಾಚಾರ್ಯ ಹಡಪದವರ ನೇತೃತ್ವದಲ್ಲಿ ಕಲಾ ಅಭ್ಯಾಸ ನಡೆಸಿದರು. ಡಿಪ್ಲೋಮಾ ಅಭ್ಯಾಸದ ಜೊತೆಗೇ ಹೊರಗಡೆ ಕಲೆಯ ಸಣ್ಣಪುಟ್ಟ ಕೆಲಸ ಮಾಡಿ ಗಳಿಕೆ ಪ್ರಾರಂಭಿಸಿದರು. ಆ ಗಳಿಕೆಯ ಹಣ ಬಣ್ಣ, ಕ್ಯಾನ್ವಾಸಗಳಿಗೇನೇ ಮೀಸಲಾಗುತ್ತಿತ್ತು. ಶ್ರದ್ಧೆಯಿಂದ ಸತತ ಪ್ರಯತ್ನದಿಂದ ಅಭ್ಯಸಿಸುತ್ತ ೧೯೭೩ರಲ್ಲಿ ಡಿಪ್ಲೋಮಾ ಮುಗಿಸಿದರು. ಅವಾಗಲೇ ಕಲಾ ಮುದ್ರಣದ ಅರಿವು ಪಡೆದು ಹಲವು ಪ್ರಯೋಗಗಳನ್ನು ಮಾಡಿದ್ದುಂಟು. ಅದನ್ನು ಗಮನಿಸಿದ ಆಗಿನ ರಾಜ್ಯ ಲಲಿತ

ಅಕಾಡೆಮಿ ಅಧ್ಯಕ್ಷರಾದ ಕೆ.ಕೆ.ಹೆಬ್ಬಾರರು ಅವರನ್ನು ಶಾಂತಿನಿಕೇತನಕ್ಕೆ ಪ್ರಿಂಟ ಮೇಕಿಂಗ್ ವ್ಯಾಸಂಗಕ್ಕಾಗಿ ಅಕಾಡೆಮಿಯಿಂದ ಆಯ್ಕೆ ಮಾಡಿ ಕಳಿಸಿದರು. ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ೧೯೮೦ರಲ್ಲಿ ಪೋಸ್ಟ್ ಡಿಪ್ಲೋಮಾ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿ ಹೊರಬಂದರು.

ಸುಮಾರು ೧೫ ವರ್ಷಗಳವರೆಗೆ ಕಾರ್ಪೊರೇಶನ್ ಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಚಂದ್ರಶೇಖರ ಕಲೆಯ ವಿವಿಧ ಮುಖದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಚಂದ್ರಶೇಖರ ಅವರು ಪ್ರಾರಂಭದಲ್ಲಿ ಹಲವಾರು ಹೊಸ ಹೊಸ ಶೈಲಿಗಳಲ್ಲಿ, ಪ್ರಯೋಗಗಳಲ್ಲಿ ಚಿತ್ರ ಬಿಡಿಸಿ ಬುದ್ಧಿಜೀವಿಗಳ ಕಲಾ ವಿಮರ್ಶಕರ ಮೆಚ್ಚಿಗೆ ಪಡೆದಿದ್ದಾರೆ. ಗ್ರಾಫಿಕ್ ಕಲೆಯಲ್ಲಿಯೂ ಅವರ ಅಪಾರ ಸೇವೆ ಪರಿಗಣಿಸಲ್ಪಡುತ್ತದೆ. ಅವರ ಚಿತ್ರಗಳು ಪ್ರಕೃತಿಯಿಂದ ಬಹುದೂರವಾಗಿವೆ. ಮಾಲಿಕೆಯ ರೂಪದಲ್ಲಿ ರಚಿಸಿದ 'ಹೊಲಿಗೆ', 'ಮೊಟ್ಟೆ' ಚಿತ್ರಗಳು ಅರ್ಥಗರ್ಭಿತ. ಅವರು ಅಲ್ಲಿ ತೋರಿರುವ ಪ್ರಾಮಾಣಿಕತೆ, ವಿವೇಚನಾಶೀಲ ರುಜುತ್ವ ಪ್ರೇಕ್ಷಕರನ್ನು ಯೋಚಿಸುವಂತೆ ಮಾಡುತ್ತವೆ. ಅವು ವಿಚಿತ್ರವಾದ ಕಲ್ಪನೆಯನ್ನು ಕೊಡುತ್ತವೆ. ಬುದ್ಧಿಯ ತೀವ್ರತೆಯೊಂದಿಗೆ ಹೊಸ ದೃಷ್ಟಿಯನ್ನು ಸೂಚಿಸುತ್ತವೆ. ಎಲ್ಲ ಚಿತ್ರಗಳು ಅರ್ಥದಿಗಂತವನ್ನು ಹಿಗ್ಗಿಸಿಕೊಂಡು ಪ್ರೇಕ್ಷಕನ ಮನದಾಳವನ್ನು ಹೊಕ್ಕು ಕಲ್ಪನೆಯ ಲೋಕಕ್ಕೆಳೆಯುತ್ತಾ ಮನದಾಳವನ್ನು ಹಿಗ್ಗಿಸುತ್ತವೆ. "ಮೊಟ್ಟೆಯಿಂದ ಹೊರಬರುವ ಹೊಸ ಜೀವವನ್ನು ಪ್ರಪಂಚ ಎಷ್ಟು ಕುತೂಹಲದಲ್ಲಿ ನೋಡುತ್ತದೆ ಎನ್ನುವ ವಿಚಾರ ಇನ್ನೂ ಹೆಚ್ಚು ಹೆಚ್ಚು ಯೋಚಿಸುವಂತೆ ಅರ್ಥಕೊಡುತ್ತವೆ." "ದಿ ಪ್ರೆಸ್" ಎನ್ನುವ ತಲೆಬರಹದಲ್ಲಿಯ ಚಿತ್ರ ಮನುಷ್ಯ ಎಷ್ಟು ಪ್ರತಿಭಾವಂತನಾಗಿದ್ದರೂ, ಅಕ್ಷರಜ್ಞಾನ ಹೊಂದಿದ್ದರೂ ಅವಕಾಶ ಬಾರದೆ ಹೋದಾಗ ಎಷ್ಟೊಂದು ನಿರಾಸೆ ಹೊಂದುತ್ತಾನೆ. ಎಷ್ಟೊಂದು ಕುಗ್ಗುತ್ತಾನೆ ಎನ್ನುವ ಅರ್ಥ ಪ್ರೇಕ್ಷಕರನ್ನು ಗಂಭೀರವಾಗಿ ಯೋಚಿಸುವಂತೆ ಮಾಡುತ್ತದೆ. 'ದಿ ಡೆಕಾರೇಟಿವ' ಎನ್ನುವ ಚಿತ್ರ ಸುಂದರ ಮಹಿಳೆಯರು ಅಲಂಕರಿಸಿಕೊಳ್ಳುವ ಚಿತ್ರವಾಗಿದ್ದು ವಿದ್ಯಾರ್ಥಿ ಜೀವನದಲ್ಲಿಯೇ ಬಹುಮಾನ ಗಳಿಸಿದ ಚಿತ್ರವಾಗಿದೆ.

ಸಿ. ಚಂದ್ರಶೇಖರ ಅವರ ಇದು ವರೆಗಿನ ಒಟ್ಟು ಕಲಾ ಬದುಕನ್ನು ನಾವು ಅವಲೋಕಿಸಿದಾಗ ಹೆಚ್ಚು ಸಾಧಿಸಿದ್ದು. ಕಾರ್ಯನಿರ್ವಹಿಸಿದ್ದು ಗ್ರಾಫಿಕದಲ್ಲಿ ಗ್ರಾಫಿಕ್ ಕಲೆ ಕೂಡಾ ಕರ್ನಾಟಕದಲ್ಲಿ ಸಾಕಷ್ಟು ಪ್ರಗತಿಯಲ್ಲಿ ಇದೆ ಎನ್ನುವುದಕ್ಕೆ ಸಿ.ಚಂದ್ರಶೇಖರ ಅವರ ಚಿತ್ರಗಳೇ ಜೀವಂತ ಸಾಕ್ಷಿ. ಗ್ರಾಫಿಕ್ ಕಲೆ ಕೂಡಾ ಬಹಳಷ್ಟು ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿದೆ. ಸೌಂದರ್ಯಕ್ಕೆ ಕೊಡುವಷ್ಟೇ ಮಹತ್ವವನ್ನು ತಾಂತ್ರಿಕ ಕಲೆಗೂ ಕೊಡಲಾಗುತ್ತದೆ ಎಂಬುದನ್ನು ನಾವು ಗಮನಿಸಬಹುದು. ಮುದ್ರಣ ಕಾರ್ಯದಲ್ಲಿ ಬಹುಪಾಲು ಕಾರ್ಯ ಕೈಕೊಂಡಿರುವ ಚಂದ್ರಶೇಖರ ಕರ್ನಾಟಕದ ಕೆಲವೇ ಕಲಾ ಮುದ್ರಣಕಾರರಲ್ಲೊಬ್ಬರು ಎಂದರೆ ತಪ್ಪಾಗದು.

೧. ಕೊರೆ ಅಚ್ಚು, ೨. ಉಬ್ಬಚ್ಚು, ೩. ಸಮತಲ, ೪. ಇಳಿಕೆತ್ತನೆಗಳಲ್ಲಿ ಕೆಲಸ ಮಾಡಿದ ಚಂದ್ರಶೇಖರ ಜನಮನ ಸೆಳೆದಿದ್ದಾರೆ. ೧೯೮೦-೮೧ರ ಸಾಲಿನಲ್ಲಿ ಇವರ ಇಳಿಕೆತ್ತನೆಯ ಕೃತಿಗೆ ಅಕಾಡೆಮಿ ಬಹುಮಾನ ಬಂದಿದೆ. ೧೯೮೧ರಲ್ಲಿ ಕೇಂದ್ರ ಅಕಾಡೆಮಿ ಶಾಂತಿನಿಕೇತನದಲ್ಲಿ ನೆಡಸಿದ ಗ್ರಾಫಿಕ್ಸ್ ಕ್ಯಾಂಪಿನಲ್ಲಿ ಕರ್ನಾಟಕದಲ್ಲಿ ಏಕೈಕ ಕಲಾವಿದರಿಗೆ ಅವಕಾಶ ಸಿಕ್ಕಿತ್ತು.

ಹಸಿವು ಮತ್ತು ಜ್ಞಾನದ ಮುಖಾಮುಖಿ

ಕನ್ನಡದ ದೃಶ್ಯಕಲೆಯಲ್ಲಿ ಸಿ.ಚಂದ್ರಶೇಖರ ಅವರದ್ದು ಪ್ರಮುಖವಾದ ಹೆಸರು, ಮುರಿದು ಹೋದ ಸಂಬಂಧಗಳಿಗೆ ಅವರ ಕಲಾಕೃತಿಗಳು ಹೊಲಿಗೆ(ಸ್ಟಿಚ್) ಹಾಕುತ್ತವೆ. ಹಾಗಾಗಿ ಸ್ಟಿಚ್ ಚಂದ್ರಶೇಖರ ಎಂದೇ ಅವರು ಖ್ಯಾತರು. ವಿಶ್ವಪ್ರಸಿದ್ಧ ಗ್ರಾಫಿಕ್ ಕಲಾವಿದ ಘೋಲ್ ಲಿಂಗ್ರನ್ ಅಮೆರಿಕಾದಲ್ಲಿ ೧೯೮೬ರಲ್ಲಿ ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ ಭಾರತದಿಂದ ಆಯ್ಕೆ ಮಾಡಿಕೊಂಡಿದ್ದ ಕೆಲವೇ ಚಿತ್ರಕಲಾವಿದರ ಪೈಕಿ ಚಂದ್ರಶೇಖರ ಒಬ್ಬರು. ಕ್ಯೂಬಾದಲ್ಲಿ ನಡೆದ ಅಂತಾರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ಅವರು ಭಾರತವನ್ನು ಪ್ರತಿನಿಧಿಸಿದ್ದರು. ಭೂಪಾಲ್‌ನಲ್ಲಿ ಜರುಗಿದ ಪ್ರಥಮ ಅಂತಾರಾಷ್ಟ್ರೀಯ ಗ್ರಾಫಿಕ್ ಪ್ರಿಂಟ್ ಬೈನಾಲೆ ಕಲಾಪ್ರದರ್ಶನಕ್ಕೆ ಎರಡು ಬಾರಿ(೧೯೮೯, ೨೦೧೧) ಮತ್ತು ನವದೆಹಲಿಯಲ್ಲಿ ನಡೆದ ಪ್ರಥಮ ಡಿಜಿಟಲ್ ಗ್ರಾಫಿಕ್ ಕಲಾಪ್ರದರ್ಶನಕ್ಕೆ ಚಂದ್ರಶೇಖರ ಅವರ ಕಲಾಕೃತಿ ಆಯ್ಕೆಯಾಗಿದ್ದು, ಅವರ ಹೆಗ್ಗಳಿಕೆ ಕನ್ನಡದ ದೃಶ್ಯಕಲೆಯನ್ನು ಸಮಕಾಲೀನ ಸಾಂಸ್ಕೃತಿಕ ಚಳುವಳಿಯ ಭಾಗವಾಗಿಸಿದವರಲ್ಲಿ ಚಂದ್ರಶೇಖರ ಪ್ರಮುಖರು. ೧೯೭೦-೮೦ ದಶಕಗಳ ಕರ್ನಾಟಕ ಕಲಾಮೇಳ, ಕರ್ನಾಟಕ ಕಲಾಯಾತ್ರೆ ಸಂಘಟಿಸುವಲ್ಲಿ ಅವರ ಪಾತ್ರ ಹಿರಿದಾದುದು.

ಸಿ.ಚಂದ್ರಶೇಖರ್‌ರವರ ಪೇರಿಸಿಟ್ಟ ಪುಸ್ತಕದ ಮೇಲಿಟ್ಟಿರುವ ತೂತು ಬಿದ್ದಿರುವ ಪಾತ್ರೆ ಹಾಗೂ ಕುಳಿತ ಕಾಗೆಯ ತೈಲವರ್ಣದ ಚಿತ್ರಕಲಾಕೃತಿ ಬಹುಕಾಲ ಸ್ಮರಣೆಯಲ್ಲಿ ಉಳಿಯುವಂತದ್ದು 'ಸ್ಟಿಲ್ ಮತ್ತು ಲೈಫ್' ಶೀರ್ಷಿಕೆಯ ಈ ಕಲಾಕೃತಿ ಸಹೃದಯರ, ಕಲಾವಿಮರ್ಶಕರ ಗಮನ ಸೆಳೆದ ಮತ್ತು ಸಾಕಷ್ಟು ಜನಪ್ರಿಯತೆ ಗಳಿಸಿದ ಕಲಾಕೃತಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕಲಾ ಕಾಲೇಜುಗಳಲ್ಲಿ ಇಲ್ಲವೇ ಇಲ್ಲವೇನೋ ಎನ್ನಿಸುವ ಮಟ್ಟಿಗೆ ಮರೆಯಾಗಿ ಹೋಗುತ್ತಿರುವ ಸ್ಥಿರ ಚಿತ್ರಣಕ್ಕೆ(*Still-life*) ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುವ ಕಲಾಕೃತಿ ಇದಾಗಿದೆ. ಸ್ಥಿರ ಚಿತ್ರಗಳ ರಚನೆಯಲ್ಲಿ ಆಯ್ದುಕೊಳ್ಳುವ ವಸ್ತುವ-ವಿಷಯಕ್ಕಿಂತ ಅದನ್ನು ಹೇಗೆ ಪ್ರಸ್ತುತ ಪಡಿಸುತ್ತವೆಂಬುದು ಬಹಳ ಮುಖ್ಯವಾಗುತ್ತದೆ.

ಈ ಕಲಾಕೃತಿ ನಾವು ಬಾಲ್ಯದಲ್ಲಿ ಕೇಳಿದ ನಮ್ಮ ಪರಂಪರೆಯ ನೀತಿಕಥೆಯೊಂದಕ್ಕೆ ಹೊಸರೂಪ ಕೊಟ್ಟಂತಿದೆ. ಇದು ಪರಂಪರೆಯನ್ನು ಗುರುತಿಸಿಕೊಂಡು ಇಡೀ ಪರಂಪರೆಯನ್ನೇ ಮುನ್ನಡೆಸುವ ಪ್ರತಿಭೆ. ಸಿಗದಿರುವ ನೀರಿಗೆ ಕಲ್ಲು ತಂದು ಪಾತ್ರೆಗೆ ಹಾಕಿ ಬಂದ ನೀರನ್ನು

ಕುಡಿಯುವ ಕಾಗೆಗಳ ಜಾಣ್ಮೆಯನ್ನಾಧರಿಸಿದ ಈ ಚಿತ್ರ ಅಷ್ಟನ್ನೇ ಹೇಳದೇ ಸಮಕಾಲೀನ ಸಂದಿಗ್ಧತೆಗಳನ್ನು ಮಂಡಿಸುತ್ತದೆ. ಪರಂಪರೆಯ ಕತೆಯೊಳಗೆ ಕಾಗೆಗಳ ಜಾಣ್ಮೆಯತ್ತ ನೇರ ದೃಷ್ಟಿಯಿದ್ದರೆ ಈ ಚಿತ್ರದ ಅನುಭವ ತೀರ ಸಂಕೀರ್ಣವಾದುದು. ನೀರಿರುವ ಪಾತ್ರೆ ಅಲ್ಲಲ್ಲಿ ತೂತಾಗಿದೆ. ಅಲ್ಲಿ ನೀರು ನಿಲ್ಲುವುದು ದುಸ್ತರ. ಆ ತೂತುಗಳಿಗು ಸ್ವಿಚ್ ಹಾಕಲಾಗಿದೆ. ಅದರಡಿಯಲ್ಲಿ ಬೃಹದಾಕಾರದ ಎರಡು ಪುಸ್ತಕಗಳಿವೆ. ಇಲ್ಲಿ ಕಾಗೆಗಳ ದಾಹ ಕೇವಲ ನೀರಿನದು ಮಾತ್ರವಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ಅದು ಜ್ಞಾನದಾಹವೂ ಆಗುತ್ತದೆ. ಹಾಗಾದರೆ ಕಾಗೆಗಳು ಪ್ರತಿನಿಧಿಸುವ ಸಾಮಾಜಿಕ ಪ್ರಾತಿನಿಧ್ಯ ಯಾವುದು? ಮುಂತಾದ ಪ್ರಶ್ನೆಗಳು ನಮಗೆ ಎದುರಾಗುತ್ತವೆ. ಆದ್ದರಿಂದ ಸಿ.ಚಂದ್ರಶೇಖರ ಅವರ ಕಲಾಕೃತಿಗಳು ನಿರ್ವಾತದಲ್ಲಿ ಸೃಷ್ಟಿಯಾದವು ಗಳಲ್ಲ, ಬದಲಿಗೆ ಆಯಾ ಕಾಲಘಟ್ಟದ ಮುಖ್ಯ ಸಾಮಾಜಿಕ ಚಿಂತನೆಯಿಂದ ರೂಪು ಪಡೆದವುಗಳಾಗಿವೆ. ಈ ಮಾತಿಗೆ ಈ ಕಲಾಕೃತಿ ಉತ್ತಮ ಉದಾಹರಣೆಯಾಗಿದೆ.

ಸಮಕಾಲೀನವಾಗಿ ಚಿತ್ರಿತವಾಗಿರುವ ಈ ಕಲಾಕೃತಿಯಲ್ಲಿ ಅನೇಕ ಅರ್ಥಗಳು ವೈವಿಧ್ಯಮಯ ವಾಗಿ ಚಿತ್ರಿತವಾಗಿವೆ. ಈ ಕಲಾಕೃತಿಯಲ್ಲಿರುವ ಪ್ರತಿಮೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸಮುದಾಯದೊಳಗಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಬದುಕಿನ ಚಲನಶೀಲ ಗ್ರಹಿಕೆಯಾಗಿ ವ್ಯಕ್ತವಾಗುವ ವೈಚಾರಿಕತೆಗಳ ರೂಪುಗಳನ್ನು ಆಧರಿಸಿದ ಅವರ ಈ ಕಲಾಕೃತಿ ಉಂಟು ಮಾಡುವ ಪರಿಣಾಮಗಳು ಗಮನಾರ್ಹವಾಗಿವೆ. ಚಂದ್ರಶೇಖರ ಅವರ ಈ ಕಲಾಕೃತಿಯಲ್ಲಿ ಸಾಮಾಜಿಕ ಅರಿವು ಎಂಬುದು ಒಂದು ಪ್ರಜ್ಞಾಭಿತ್ತಿಯೇ ಹೊರತು ಅದೊಂದು ವಾಗ್ವಾದವಲ್ಲ. ಅದನ್ನು ಮೀರಿದ ಮೌನವು ಆಗಿ ಕೆಲವೊಮ್ಮೆ ನಿಲ್ಲುವ ಸಾಧ್ಯತೆಗಳಿವೆ. ಈ ಕಲಾಕೃತಿಯಲ್ಲಿ ಹಸಿವು ಮತ್ತು ಜ್ಞಾನ ದಾಹದ ಮುಖಾಮುಖಿ ಇದೆ. ಹೀಗಾಗಿ ಈ ಕಲಾಕೃತಿ ವೈಯಕ್ತಿಕ ಅನುಭವದ ನೆಲೆಯನ್ನು ಮೀರಿ ಸಮಾಜಮುಖಿಯಾಗಿ ನಿಂತು ಈ ದೇಶದ ಸಾಮಾಜಿಕ ಅವರಣವನ್ನೆಲ್ಲ ಬಯಲು ಮಾಡುತ್ತದೆ. ಆದ್ದರಿಂದ ಈ ಕಲಾಕೃತಿಯೊಳಗೆ ಸಮಸ್ಯೆಯ ಅನಾವರಣ ಮುಖ್ಯವಾಗುತ್ತದೆ. ಸಾಮಾನ್ಯವಾಗಿ ಚಿತ್ರಕಲಾವಿದರಿಗೆ ಇತರ ಮಾಧ್ಯಮದ ಕಲಾವಿದರ ಜೊತೆಗೆ ಸಂಬಂಧ ಇರುವುದಿಲ್ಲ. ತಮಗೆ ತಾವೇ ಕೋಟೆ ನಿರ್ಮಿಸಿಕೊಂಡು ಬಿಟ್ಟಿರುತ್ತಾರೆ. ಆದರೆ ಚಂದ್ರಶೇಖರ ಅವರು ರಂಗಭೂಮಿ, ಸಾಹಿತ್ಯ, ಚಳುವಳಿಗಳ ಜೊತೆ ನಿಕಟ ಸಂಬಂಧ ಮತ್ತು ಸಾಮಾನ್ಯರ ಜೊತೆ ಬೆರೆಯುವ ಗುಣ ಇದೆ. ಇಂತಹ ಗುಣವೇ ಸಾಮಾಜಿಕ ಮತ್ತು ಜನಪರ ಕಾಳಜಿಯುಳ್ಳ ಕಲಾಕೃತಿ ರಚಿಸಲು ಪ್ರೇರೇಪಿಸಿರಬೇಕು.

ಸಿ. ಚಂದ್ರಶೇಖರ ಅವರ ಗ್ರಾಫಿಕ್ ಮತ್ತು ವರ್ಣಚಿತ್ರಗಳಲ್ಲಿ ಸ್ವಿಚ್‌ಗಳನ್ನು ಹೆಚ್ಚಾಗಿ ಕಾಣಬಹುದು. ಇವರ ಸ್ವಿಚ್ ಸೀರಿಸ್ ಅಸಾಧ್ಯ ವಸ್ತುಗಳ ಜೋಡಣೆಯ ತಂತ್ರಜ್ಞಾನವನ್ನು ಮಂಡಿಸುತ್ತದೆ. ಚಂದ್ರಶೇಖರ ಅವರು ಹೆಚ್ಚು ಜನಪ್ರಿಯ ಮತ್ತು ಮಹತ್ವದ ಕಲಾವಿದರೆನಿಸಿಕೊಂಡಿದ್ದು ಈ ಸರಣಿ ಚಿತ್ರಗಳ ಮೂಲಕ. ಕೇವಲ ಬಟ್ಟೆಗೆ ಮಾತ್ರ ಹೋಲಿಗೆ ಹಾಕಿ ಗೊತ್ತಿದ್ದ ಮನುಷ್ಯಾನುಭವ

ವನ್ನು ತಮ್ಮ ಕಲಾಕೃತಿಗಳ ಮೂಲಕ ಸಂಸ್ಕೃತಿಯ ಹೊಸ ಶೋಧವಾಗಿಸಿದ ಕೀರ್ತಿ ಅವರದು. ಈ ಕಲಾಕೃತಿಯಲ್ಲಿ ಹರಿದು ಹೋಗಬಹುದಾದ ಪುಸ್ತಕ ಮತ್ತು ಸೀಳಿದ ಪಾತ್ರೆಗೆ ಸ್ಟಿಚ್ ಮಾಡಿದ್ದಾರೆ. ವಿವಿಧ ಬಣ್ಣಗಳ ಸಮತೋಲನದಿಂದಲೂ ಈ ಕಲಾಕೃತಿ ಗಮನ ಸೆಳೆಯುತ್ತದೆ.

ಕ್ಯಾಮೆರಾ ಇಂದಿನ ಮನಸ್ಸು

ನನ್ನ (ಚಿಕ್ಕ)ಬಾಲ್ಯಾವಸ್ಥೆಯ ದಿನಗಳಲ್ಲಿ ರೇಡಿಯೋ, ಗ್ರಾಮಾಫೋನ್ ಮತ್ತು ಕ್ಯಾಮೆರಾಗಳು ನನ್ನಲ್ಲಿದ್ದ ಕುತೂಹಲವನ್ನು ಕದಡಿದ್ದವು. ಅದರಲ್ಲಿನ ಮೊದಲ ಎರಡು ಶಬ್ದವನ್ನು ಉತ್ಪಾದಿಸುತ್ತವೆ ಮೂರನೆಯದು ಮಾತ್ರ *Visual entity* ದೃಶ್ಯವನ್ನು ಸಮಗ್ರವಾಗಿ ಹಿಡಿದಿಟ್ಟು ಒಂದು ಶಾಶ್ವತ ಚಿತ್ರವನ್ನಾಗಿ ಮೂಡಿಸುತ್ತವೆ. ನನ್ನೊಳಗಿನ ಕಲಾವಿದ ಮಾತ್ರ ವಾಸ್ತವವಾಗಿ ಕ್ಯಾಮೆರಾದ ಗ್ಲಾಮರನ ತಂತ್ರಗಾರಿಕೆಯತ್ತ ಆಕರ್ಷಿತನಾದೆನು.

೧೯೬೪ರ ಸುಮಾರಿಗೆ, ಮೊಟ್ಟ ಮೊದಲ ಬಾರಿಗೆ ಕಪ್ಪು-ಬಿಳುಪಿನ ೧೨೦ ಲೋಡಿಂಗ್ ಫಿಲ್ಮಿನ ಬಾಕ್ಸ್ ಕ್ಯಾಮೆರಾವನ್ನು ಕ್ಲಿಕ್ಕಿಸಿದೆನು.

ನಂತರದ ೧೯೬೬ರ ಸಮಯದಲ್ಲಿ ಮಾರುತಿ ಸ್ಟೂಡಿಯೋದಲ್ಲಿ ಸಹಾಯಕನಾಗಿ ಸೇರಿದೆ. ಆಗ ತಿಳಿದು ಬಂದುದೆಂದರೆ ಛಾಯಾಚಿತ್ರಿಕ್ಕೆ(ಫೋಟೋಗ್ರಫಿಗೆ) ಬೆಳಕಿನ ಅವಶ್ಯಕತೆ, ಅನಿವಾರ್ಯತೆಗಳು ಮತ್ತು ಫಿಲ್ಮ್ ಡೆವಲಪ್‌ಮೆಂಟ್‌ನಲ್ಲಿ ಬೇಕಾದ ನಿಖರವಾದ ತಾಂತ್ರಿಕತೆ, ತಂತ್ರಗಾರಿಕೆಯನ್ನು ಕಲಿಯುತ್ತಾ ಬ್ರೋಮಾಯಿಡ್ ಮುದ್ರಣ ಕುರಿತಂತೆ ಕಲಿಯುತ್ತಾ/ತಿಳಿಯುತ್ತಾ ಸಾಗಿದೆ. ಇದೇ ಅವಧಿಯಲ್ಲಿ ಫೀಲ್ಡ್ ಕ್ಯಾಮೆರಾದಲ್ಲಿ ಕಟ್ ಫಿಲಂಗಳ ಬಳಕೆಯನ್ನು ಅರಿತುಕೊಂಡೆ ಮತ್ತು ೧೨೦ ಫಿಲ್ಮ್‌ನ ರೋಲಿಕೊರ್ಡ್ *(Rolicord) (Roliflex)* ರೋಲಿಫ್ಲೆಕ್ಸ್ ಕ್ಯಾಮೆರಾಗಳ ಬಳಕೆಯನ್ನು ಅರಿತುಕೊಳ್ಳಲು ಸಾಧ್ಯವಾಯಿತು. ೧೯೭೦–೭ರಲ್ಲಿ ಬೆಂಗಳೂರಿನ ಕೆನ್ ಕಲಾಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಮಾಡೆಲಿಂಗ್ ಮತ್ತು ಕ್ಯಾಪ್ಷನ್ *(Modeling & Calption writing)* ರೈಟಿಂಗ್ ಕಲಾವಿದನಾಗಿ ವಿಶ್ವೇಶ್ವರಯ್ಯ *(Visveswariah Industrial and Technological Museam)* ಕೈಗಾರಿಕೆ ಮತ್ತು ತಂತ್ರಗಾರಿಕೆಯ ವಸ್ತು ಸಂಗ್ರಹಾಲಯದಲ್ಲಿ ಗುರುತಿಸಿಕೊಂಡಿದ್ದೆ.

ಛಾಯಾಚಿತ್ರಗಾರಿಕೆಯಲ್ಲಿ ಕೆಲವೊಂದು ಅನುಭವಗಳನ್ನು ಪಡೆಯಲು ಸಾಧ್ಯವಾಯಿತು. ಸಣ್ಣ(ಚಿತ್ರ) ಫಿಲ್ಮ್ ಒಂದರ ಡೆವಲಪಿಂಗ್ ಮತ್ತು ಪ್ರಿಂಟಿಂಗ್ ಕಾರ್ಯಗಳಲ್ಲಿ ಸಹಾಯಕನಾಗಿ ಸೇರಿ ಅದರ ಅನುಭವ ಪಡೆಯುವ ಸುವರ್ಣ ಅವಕಾಶ ದೊರಕಿತ್ತು. ಟೇಬಲ್ ಟಾಪ್ ಫೋಟೋಗ್ರಫಿ(ಮೇಜಿನ ಮೇಲಿನ ಛಾಯಾಚಿತ್ರ) ಇಂಡಸ್ಟ್ರೀಯಲ್ ಫೋಟೋಗ್ರಫಿ ಮತ್ತು ಸ್ಟೈಯಿಂಗ್ ಕಲಾಕೃತಿಗಳಲ್ಲಿ ಹೊಸಾನುಭವ ಪಡೆಯಲು ಸಾಧ್ಯವಾಯಿತು.

"ವೈವಿಧ್ಯಮಯ ಸಾಧ್ಯತೆಗಳ ಹೋಲಿಕೆಯೊಂದಿಗೆ(ಫೋಟೋಗ್ರಫಿಯ) ಛಾಯಾಚಿತ್ರ ರಚನೆಯನ್ನು ಕಂಡುಕೊಂಡೆ.

ದೃಶ್ಯಕಲಾ ವಿದ್ಯಾರ್ಥಿ ಜೀವನ ಪೂರ್ಣಗೊಂಡ ನಂತರವೇ ನನ್ನದೇ ಆದ ಸ್ವಂತ ಕೆಲಸಕ್ಕಾಗಿ ಕ್ಯಾಮೆರಾವನ್ನು ಖರೀದಿಸಿದೆ. ೩೫*mm*ನ ಫಿಲ್ಮ್‌ನಲ್ಲಿ ದೃಶ್ಯ ಕಲೆಯ ಅಭೂತ ಸೌಂದರ್ಯವನ್ನು ಸೆರೆಹಿಡಿದಿಡುವ ಅದಮ್ಯ ಬಯಕೆಯೂ ನನ್ನಲ್ಲಿ ತುಂಬಿತ್ತು. ನಂತರದ ದಿನಗಳಲ್ಲಿ ಮಿರಿಂಡಾ ಮತ್ತು ಅಸಾಹಿ ಪೆಂಟಾಕ್ಸ್ ಕ್ಯಾಮೆರಾಗಳನ್ನು ಬಳಸಿಕೊಂಡೆನು. ಮಮದೆ ಡಿಜಿಟಲ್ ಕ್ಯಾಮೆರಾಗೆ ಮುಂದುವರೆದಿದ್ದು ಅತ್ಯಂತ ಪ್ರಸ್ತುತ ಸಂಶೋಧನೆಗಳಿಮದ ಹೊರಬಂದ(*Latest Innovation*) ಕ್ಯಾಮೆರಾಗಳು ಇಂದಿಗೂ ನಾನು ಕಲೆಯ ಛಾಯಾಚಿತ್ರ (*Photography*)ಕ್ಕಾಗಿ ಬಳಸುತ್ತಾ ಬಂದಿದ್ದೇನೆ.

ಬಿಲಿಯ ಬಣ್ಣ ಲೇಪಿಸಿದ್ದು ಹಳೆಯ ಮತ್ತು ಹಗುರವಾಗಿ ಕಳಚಬಹುದಾದ (*Layers*) ಪದರುಗಳಿಂದ ಕೂಡಿದ ಗೋಡೆಗಳ ಚಿತ್ರ, ಗೋಡೆಗಳಲ್ಲಿನ ಬಿರುಕು, ಅಸಂಖ್ಯಾತ ಆಕಾರ–ಗಾತ್ರಗಳ ಮುರಿದ ಹರಿದ ವಸ್ತುಗಳು ಪುರಾತನವೆನ್ನುವಂತೆ ಕಾಣುವ (*anti*)ಕೃತಿಗಳು ಇವುಗಳ ನೂತನ ಆಕಾರ ಮರು ನಿರ್ಮಿತಿ ವಸ್ತುಗಳು ಹಾಗೂ ಹಳೆಯ ವಸ್ತುಗಳನ್ನು ಪುನರ್ ನವೀಕರಿಸುವ ಯತ್ನದೊಂದಿಗೆ ಅವುಗಳನ್ನು ಹಿಂದಿನ ಶ್ರೀಮಂತಿಕೆ ತಂದಿ... ಕಾರ್ಯ ನನ್ನಲ್ಲಿ ಹೊಸ ಅನುಭವ ನೀಡಿದವು.

ಕೆಲವೊಮ್ಮೆ ನಾನು ಈ ವಸ್ತುಗಳನ್ನು ಗಮನಿಸಿದಾಗ ಅದರ ಗತ ವೈಭವ ಇಂದಿನ ಹೊಸ ಸ್ಥಿತಿ ಗತಿಗಳ ಕುರಿತಂತೆ ಅಚ್ಚರಿ ಮೂಡುತ್ತಿತ್ತು. ಹಾಗೇ ಆ ವಸ್ತುಗಳಿಂದ ಪ್ರೇರಣೆ ದೊರೆತು ಅವುಗಳ ಆಧಾರದ ಮೇಲೆ ನನ್ನ ಕೆಲವೊಂದು ಆಲೋಚನೆ(*Idea*)ಗಳನ್ನು ಸೇರಿಸಿ ಅವುಗಳನ್ನು ಕಲಾಕೃತಿಯಾಗಿ ಮಾರ್ಪಡಿಸಿದ್ದು ಇದೆ. ನನ್ನ ಕಣ್ಣು(ದೃಷ್ಟಿ) ಮತ್ತು ನನ್ನ ಕ್ಯಾಮೆರಾಗಳ ಒಟ್ಟೊಟ್ಟಿಗೆ ಕಾರ್ಯ ನಿರ್ವಹಿಸಿ ಅಸಂಖ್ಯಾತ ಚಿತ್ರಕಲೆಗಳನ್ನು ಸೃಷ್ಟಿಸಲು ಸಾಧ್ಯವಾಗಿದೆ. ನನ್ನ ಪ್ರಾರಂಭಿಕ ಕ್ಯಾಮೆರಾದಿಂದ ಇಂದಿನ ಆಧುನಿಕ ಕ್ಯಾಮೆರಾವರೆಗೆ ಬಳಸಿ ತೆಗೆದ ಛಾಯಾಚಿತ್ರಗಳನ್ನು ಒಂದೆಡೆ ಇರಿಸಿ ಪುನರಾವಲೋಕನ ಮಾಡಿ ಅವುಗಳಲ್ಲಿ ಉತ್ತಮವಾದದದ್ದನ್ನು ಆಯ್ದು ಹೊಸ ಕೃತಿ ರಚನೆಯೊಂದಕ್ಕೆ ಆದರ್ಶಪ್ರಾಯವಾದ ಕಲ್ಪನೆಗಳು ಬಂದಿವೆ. ಇಲ್ಲಿ ಅಂತಹ ಕೆಲವೊಂದು ಕಲಾಕೃತಿಗಳನ್ನು ಪ್ರದರ್ಶನಕ್ಕಿಟ್ಟಿದ್ದೇನೆ. ಅದರಲ್ಲಿ ನೂತನವಾದ ತಾಂತ್ರಿಕತೆಯ ಕಂಡುಕೊಳ್ಳುವಿಕೆಯೊಂದಿಗೆ ಅವುಗಳಲ್ಲಿ ನವ್ಯ ಅಸ್ತಿತ್ವವಾದ ಕಾಣಬಹುದಾಗಿದೆ. ನಾನು ತಿಳಿದಂತೆ ಈ ಕೃತಿಗಳು ನೋಡುಗನಲ್ಲಿ ಹೊಸ ತೆರನಾದ ದೃಶ್ಯಾನುಭವ ನೀಡುವುದಲ್ಲದೆ ಕಲೆಯನ್ನು ನೋಡಬಹುದಾದ ನೂತನ ಯಥಾರ್ಥತೆ(*Perspective*)ಗಳನ್ನು ನೋಡುಗನಲ್ಲಿ ಪ್ರಚೋದಿಸುವಂತಿದೆ. ಕ್ಯಾಮೆರಾದ ಕಣ್ಣುಗಳು ಬರಿಯ ಯಾಂತ್ರಿಕ ವಸ್ತುವಿನದ್ದಾಗಿವೆ. ಆದರೆ ಕಲಾವಿದನ ದೃಷ್ಟಿ ಆತನ ಸೃಜನಾತ್ಮಕ ಮನಸ್ಸು(ಬುದ್ಧಿ) ಮಾತ್ರ ಈ ಯಾಂತ್ರಿಕ ವಸ್ತುವಿನ ಒಂದೆ ಸಮಕಾಲೀನ ಅಂಶಗಳನ್ನು ಒಂದೆಡೆ ಸೇರಿಸುವಂತಹ ಕೆಲಸ ಮಾಡುತ್ತಲಿರುತ್ತದೆ.

ನನಗೆ ಗ್ರಾಮೀಣ ಬದುಕಿನ ಹಿನ್ನೆಲೆ ಇರುವುದರಿಂದ ನನ್ನ ಸಂಪೂರ್ಣ ಬಾಲ್ಯ ಅಲ್ಲಿ

ಕಳೆದಿರುವುದರಿಂದಾಗಿ ಮಾತ್ರವೇ ನಾನು ವಸ್ತುಗಳನ್ನು ವಿಭಿನ್ನವಾಗಿ ನೋಡಲು ಸಾಧ್ಯವಾಗಿದೆ. ಆ ಊಹಾತ್ಮಕ(*Imaginnative*)ವಾದ ದೃಷ್ಟಿಯು ಕಲೆಯನ್ನು ಹಿಡಿದಿಟ್ಟು ಸೃಜನಾತ್ಮಕವಾಗಿ ಸೃಷ್ಟಿಸುತ್ತಲೇ ಸಾಮಾನ್ಯತೆಯಿಂದ (ಅಸಮಾನ್ಯತೆಯೆಡೆಗೆ) ಸಾಗಲು ಸಾಧ್ಯವಾಗಿದೆ. ಹೀಗಾಗಿ ಆ ಛಾಯಾಚಿತ್ರಗಳು ಸಹ ದೃಶ್ಯಕಲೆಯ ಒಂದು ಸಂವಿಧಾನಾತ್ಮಕ ಅಂಶವಾಗಿ ಕಂಡುಕೊಳ್ಳಲು ಸಾಧ್ಯವಾಗಿದೆ. ಈ ಕೃತಿಗಳಲ್ಲಿ ವರ್ಣಗಳಿಗೆ ಆಕಾಶ ಮೈವಳಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಒಬ್ಬ ಗ್ರಾಫಿಕ್ ಕಲಾವಿದನಾಗಿದ್ದು ಕಂಪ್ಯೂಟರ್‌ನ ಸಹಾಯದಿಂದ ಗ್ರಾಫಿಕ್ನ ಕಲಾತ್ಮಕ ಅಂಶಗಳ ಸಾಧ್ಯತೆಗಳಿದ್ದಷ್ಟು ಬಳಸಿಕೊಳ್ಳಲಾಗಿದೆ.

ಕ್ಯಾಮೆರಾ, ಕಂಪ್ಯೂಟರ್ ಇವುಗಳ ತಂತ್ರಗಾರಿಕೆಗಳನ್ನು ಒಂದು ಸಾಧನವಾಗಿ ಬಳಸಿಕೊಳ್ಳ ಲಾಗಿದ್ದರೂ ನನ್ನ ಆಲೋಚನೆಗಳು ಅನುಭವಗಳು ಆಳವಾಗಿ(ಸ್ಟಿಫಸ್) ಹೊಲಿಗೆ ಮತ್ತು(ಪ್ಯಾಜಾಸ್) ತೇಪೆ ಕೃತಿಗಳಲ್ಲಿ ಒಳಹೊಕ್ಕಿದೆ ಎನ್ನಬಹುದು. ೧೯೯೫ರಲ್ಲಿ ಕರ್ನಾಟಕ ಲಲಿತೆ ಕಲಾ ಆಕಾಡೆಮಿಯು ಕಂಪ್ಯೂಟರ್ ಗ್ರಾಫಿಕ್‌ನ ಶಿಬಿರ ಆಯೋಜಿಸಿದ್ದು ನುರಿತ ಕಲಾವಿದರು ಭಾಗವಹಿಸಿದ್ದರು ಈಗ ಕೇಂದ್ರೀಯ ಲಲಿತಕಲಾ ಅಕಾಡೆಮಿ ಸಹ ಸೃಜನಾತ್ಮಕ ಛಾಯಚಿತ್ರ ಕಂಪ್ಯೂಟರ್ ಕಲೆಗಳಲ್ಲಿ ಪ್ರತಿಭೆಗಳನ್ನು ಗುರುತಿಸಲು ತೊಡಗಿದ್ದು ಡಿಜಿಟಲ್ ಮುದ್ರಣಗಳನ್ನು ಗ್ರಾಫಿಕ್ ಮುದ್ರಣಗಳೆಂದು ಅದಕ್ಕೆ ಕಲಾತ್ಮಕ ಮೌಲ್ಯ ನೀಡದ್ದಾರೆ. ಈಗಾಗಲೇ ಅಕಾಡೆಮಿಗಳು ಛಾಯಾಚಿತ್ರ ವಿಭಾಗಕ್ಕೆ ಛಾಯಾಚಿತ್ರಗಾರರಿಗೆ ಗೌರವ ಸನ್ಮಾನ ಪ್ರಶಸ್ತಿ, ಪುರಸ್ಕಾರ ನೀಡಲು ಆರಂಭಿಸಿದೆ.

ಬ್ರಾಖ್‌ನು ಪೇಪರ ಕೋಲಾಜಗೆ ಸೀಮಿತವಾದ ಕತ್ತರಿಸಿದ ಕಾಗದದ ತುಂಡುಗಳನ್ನು ಹೆಚ್ಚು ಬಳಸಿದ ಪಿಕಾಸೋ ಅನ್ನವಸ್ತು ತುಂಡುಗಳನ್ನು ಬಳಸಿ ಬೇರೆಯೇ ರೂಪಗಳನ್ನು ಸೃಷ್ಟಿಸಿದೆ. ಇದು ಮುಂದೆ ಕೊಬಿಸಂ ತಂತ್ರಶೈಲಿಗೆ ಪ್ರೇರಣೆ ನೀಡಿತು. ಬೇರೆ ಬೇರೆ ಕೋನಗಳ ನೋಟ ಸೂಚ್ಚತೆ, ಜಾಮಿತಿಯ ವಿನ್ಯಾಸ ಮುಂತಾದವು ಚಿತ್ರರಚನಾ ಭಾಗವಾದವು. ವಿವಿಧ ಬಣ್ಣ ಆಕಾರಗಳ ಕಾಗದಗಳನ್ನು ಬಳಸುವುದರಿಂದ ವಿಭಿನ್ನ ಮೈವಳಿಕೆಗಳ ಸೃಷ್ಟಿ ಸಾಧ್ಯವಾಯಿತು ಮತ್ತು ಮೂರು ಆಯಾಮದ ಭ್ರಮೆಯನ್ನು ನಿರಾಕರಿಸಿ ಚಿತ್ರದ ಮೂಲ ಗುಣ ಮೌಲ್ಯವಾದ ಎರಡು ಆಯಾಮಕ್ಕೆ(ಚಿತ್ರದ ಚಪ್ಪಟೆತನಕ್ಕೆ) ಒತ್ತು ನೀಡಲು ಸಾಧ್ಯವಾಯಿತು. ಇದು ಕೋಲಾಜ ತಂತ್ರದ ಮೂಲೋದ್ದೇಶ ಕರ್ನಾಟಕದ ವಿ.ಬಾಲು ಅವರ ವಿಧಾನ ಈ ಮೇಲಿನ ಯಾವ ದೃಷ್ಟಿ ಅಥವಾ ಉದ್ದೇಶದ್ದೂ ಅಲ್ಲ ಕುಂಚದಿಂದ ಲೇಪಿಸುವ ಬಣ್ಣಗಳಿಗೆ ಬದಲಾಗಿ ವಿವಿಧ ಬಣ್ಣಗಳ ವರ್ಣ ಛಾಯೆಗಳ ಹಾಗೂ ಮೈವಳಿಕೆಗ(ಟೆಕ್ಸಚರ್) ಕಾಗದ ಬಳಸುವುದು ಕತ್ತರಿಸುವುದು ಕತ್ತರಿಸಿದ ಫೋಟೋ ಬಳಸುವುದು ಇತರ ಸಾಮಗ್ರಿ ಬಳಸುವುದು ಇದು ವರ್ಣ ಲೇಪನ ತಂತ್ರಕ್ಕೆ ಪರ್ಯಾಯವಾಯಿತೇ ಹೊರತು ವಸ್ತು ಪರಿಕರ ಆಕೃತಿ ಆಕಾರಗಳ ಸಂಯೋಜನೆಯಿಂದಾಗ ಬಹುದಾಗ ವಿಭಿನ್ನ ಅರ್ಥ ಅನುಭವಗಳಿಗೆ ಕಾರಣವಾಗಲಿಲ್ಲ. ಸೂಚಕ

ಸಂಜ್ಞೆ(ಸಿಗ್ನಿಫೈಯರ್)ಗಳಾಗಲಿಲ್ಲ. ಬಾಲು ಅವರು ಕೋಲಾಜ ಕಲೆ ಭಾರತೀಯ ಮುಖುದ್ದು ಎನ್ನುತ್ತಾರೆ. ಸಂಪ್ರದಾಯಕ ಕಲಾಕೃತಿಗಳಲ್ಲಿ ಕಪ್ಪೆಚಿಪ್ಪು, ಚಿನ್ನ, ಬೆಳ್ಳಿ, ರೇಕುಗಳು, ವಿವಿಧ ಬಗೆಯ ಹರಳು ಕಲ್ಲುಗಳನ್ನು ಬಳಸುವುದು ರೂಢಿಯಲ್ಲಿವೆಯಲ್ಲವೆ ಎನ್ನುತ್ತಾರೆ(ಮೈಸೂರು ತಂಜಾವೂರು ಶೈಲಿ) ಆದರೆ ಅವು ಪರಂಪರೆಯ ಆಕೃತಿ, ಆಕಾರ ರೂಪಗಳ ರಚನೆಯಲ್ಲಿ ಬಣ್ಣಗಳ ಜೊತೆಗೆ ಅಲ್ಲಲ್ಲಿ ಬಳಸುತ್ತಿದ್ದವು. ಆದ್ದರಿಂದ ವಿಭಿನ್ನ ಅರ್ಥಸ್ತರಗಳಿಗೆ ಕಾರಣವಾಗುತ್ತಿರಲಿಲ್ಲ. ತಂತ್ರವಿಧಾನಕಷ್ಟೆ ಸೀಮಿತ, ಬಾಲು ಅವರದ್ದೂ ಹೀಗೆಯೇ ಒಂದು ತಂತ್ರ ವಿಧಾನ ಆದರೆ ಅವರು ಕೋಲಾಜ್ ತಂತ್ರವನ್ನು ಜೀವಮನ ಪೂರ್ಣ ಬಳಸಿ ತಂತ್ರದ ಸಾಧ್ಯತೆಗಳನ್ನು ಹುಡುಕಿತ್ತು. ಕೃತಿರಚನೆ ಮಾಡಿದ್ದು ವಿಶೇಷ ಬಗೆಬಗೆಯ ಬಟರ ಪೇಪರ ಟೌನ್ ಪೇಪರ ಪಾರದರ್ಶಕ ಕಾಗದಗಳನ್ನು ಬಣ್ಣ ಬಣ್ಣದ ಕಾಗದಗಳನ್ನು ಬಳಸುವ ಬಗ್ಗೆ 'ಪೇಪರ್ ಕೋಲಾಜ್ ಎನ್ನುತ್ತಾರೆ. ಹಾಗೇ ಪರಂಪರೆ ಮತ್ತು ಆಧುನಿಕತೆ(ಗಣಕ ಬಳಸುವಿಕೆ) ಇಲ್ಲಿ ಕೂಡಿರುವ ಕಾರಣ ಇದು ಕೋಲಾಜ್ ಪ್ಲಸ್ ಸಹ ಎನ್ನುತ್ತಾರೆ. ಇವುಗಳಿಂದಲೇ ಇವುಗಳಿಂದಲೇ ಬಾಲು ಅವರು ಮೂರು ಆಯಾಮದ ಭ್ರಮೆಯನ್ನು ಕೆಲವೆಡೆ ಮೂಡಿಸುತ್ತಾರೆ.

ಈ ಎಲ್ಲ ಮುದ್ರಣಗಳ ಸಂಯೋಜನೆಯನ್ನು ಕಂಪ್ಯೂಟರ್‌ನಲ್ಲಿಯೇ ಸಿದ್ಧಪಡಿಸಿ ಮುದ್ರಣಕ್ಕೆ ಅಳವಡಿಸಿಕೊಳ್ಳಬಹುದಾಗಿದೆ. ಆದರೆ ಹೆಚ್ಚು ರೆಸೊಲೇಶನ್ ಹೊಂದಿದ ಪ್ರಿಂಟರ್ ಇದಕ್ಕೆ ಅಗತ್ಯ. ಹೀಗೆ ಸುಮಾರು ಸಾವಿರಾರು ಕಾಂಬಿನೇಶನ್‌ಗಳ ಮೂಲಕ ಸಾವಿರಾರು ವರ್ಣ ಪಾರದರ್ಶಿಕೆಗಳನ್ನು ಸಿದ್ಧಪಡಿಸಿ ಆಫ್‌ಸೆಟ್‌ಮುದ್ರಣಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ.

ಸಿ. ಚಂದ್ರಶೇಖರವರ ಪ್ರಮುಖ ಕಲಾಪ್ರದರ್ಶನಗಳು

* ೧೯೭೧ರಲ್ಲಿ ಸಾಮೂಹಿಕ ಕಲಾ ಪ್ರದರ್ಶನಗಳೊಂದಿಗೆ ಪ್ರಾರಂಭಗೊಳಿಸಿದರು.
* ೧೯೮೦ರಲ್ಲಿ ಗ್ರಾಫಿಕ್ ಕಲಾಕೃತಿಯ ಪ್ರದರ್ಶನವನ್ನು ಪಶ್ಚಿಮ ಬಂಗಾಳದ ಶಾಂತಿನಿಕೇತನ ಕಲಾಭವನದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡು ಸ್ಥಳೀಯ ಪತ್ರಿಕೆಗಳಲ್ಲಿ ಚರ್ಚಿಸಲ್ಪಟ್ಟಿವೆ.
* ೧೯೯೨ರಲ್ಲಿ ರೇಖಾಚಿತ್ರಗಳ ಪ್ರದರ್ಶನವನ್ನು ಬೆಂಗಳೂರು ಕೆನ್ ಕಲಾಶಾಲೆಯಲ್ಲಿ ಏರ್ಪಡಿಸಿದ್ದರು.
* ೧೯೯೮ರಲ್ಲಿ ವರ್ಣಚಿತ್ರಗಳ ಪ್ರದರ್ಶನವನ್ನು ಬೆಂಗಳೂರಿನ ಇಮೇಜ್ ಆರ್ಟ್‌ಗ್ಯಾಲರಿಯಲ್ಲಿ ಮಾಡಿದರು.
* ದೆಹಲಿ, ಕಲ್ಕತ್ತಾ, ಬೆಂಗಳೂರು ಮದ್ರಾಸ್ ವೆಸ್ಟ್‌ಬೆಂಗಾಲ್, ಹಲವಾರು ಕಡೆ ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಕಡೆಗೆ ಪ್ರದರ್ಶನಗಳು ಕೈಗೊಂಡಿದ್ದಾರೆ.

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಶಾಂತಿನಿಕೇತನದಲ್ಲಿ ಕಲಾವಿದ ಸನತ್‌ಕರ್ ಅವರೊಂದಿಗೆ ಕಲಾವಿದ ಸಿ. ಚಂದ್ರಶೇಖರ್ ಅವರು



ಶಾಂತಿನಿಕೇತನದಲ್ಲಿ ಪ್ರೊ. ಸೋಮನಾಥ ಹೋರೆ ಅವರೊಂದಿಗೆ ಸಿ. ಚಂದ್ರಶೇಖರ್ ಅವರು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಹಿರಿಯ ಕಲಾವಿದ ನಾಡೋಜ ಆರ್. ಎಂ. ಹಡಪದ ಅವರೊಂದಿಗೆ ಸಿ. ಚಂದ್ರಶೇಖರ್ ಅವರು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಕರ್ನಾಟಕ ಕಲಾಯಾತ್ರೆಯ ಸಮಾರಂಭದಲ್ಲಿ ಕಲಾವಿದ ಸಿ. ಚಂದ್ರಶೇಖರ್ ಅವರು



ಕಲಾವಿದ ಆರ್. ಎಂ. ಹಡಪದ್ ಅವರ ಕಲಾಕೃತಿಗಳ ಪ್ರದರ್ಶನ,
ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣದಲ್ಲಿ ಕಲಾವಿದ ಸಿ. ಚಂದ್ರಶೇಖರ್ ಅವರು



ಕಲಾವಿದ ಜಿ. ಎಸ್. ಶೆಣೈ ಒಂದು ಪೂರ್ವಾವಲೋಕನ ಸಮಾರಂಭದಲ್ಲಿ ಕಲಾವಿದ ಸಿ. ಚಂದ್ರಶೇಖರ್ ಅವರು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಕಲಾಮೇಳದಲ್ಲಿ ಹಿರಿಯ ಕಲಾವಿದ ಕೆ. ಕೆ. ಹೆಬ್ಬಾರರೊಂದಿಗೆ ಕಲಾವಿದ ಸಿ. ಚಂದ್ರಶೇಖರ್ ಅವರು



ಅಮೇರಿಕನ್ ಪ್ರಿಂಟ್ ಮೇಕರ್ ಡಾ ಕೃಷ್ಣಾರೆಡ್ಡಿ ಅವರೊಂದಿಗೆ ಕಲಾವಿದ ಸಿ. ಚಂದ್ರಶೇಖರ್ ಅವರು



ಕಲಾವಿದ ಎಂ. ಎಫ್ ಹುಸೇನ್ ಅವರೊಂದಿಗೆ ಕಲಾವಿದ ಸಿ. ಚಂದ್ರಶೇಖರ್ ಅವರು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಬಹುಮಾನ ವಿತರಣಾ ಸಮಾರಂಭ - ೧೯೭೨
ಕರ್ನಾಟಕದ ಸರ್ಕಾರದ ಸಚಿವರಾದ ರಾಮಕೃಷ್ಣ ಹೆಗಡೆ ಅವರು ಕಲಾವಿದ ಸಿ.ಚಂದ್ರಶೇಖರ ಅವರಿಗೆ ಬಹುಮಾನ ವಿತರಿಸಿರುವುದು



ಸುಪ್ರೀಮ್ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ನಿಟ್ಟೂರ ಶ್ರೀನಿವಾಸಯ್ಯ ಅವರು
ಕಲಾವಿದ ಸಿ. ಚಂದ್ರಶೇಖರ ಅವರನ್ನು ಸನ್ಮಾನಿಸುತ್ತಿರುವುದು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಅಂದಿನ ಕರ್ನಾಟಕ ರಾಜ್ಯಪಾಲರಾದ ಗೋವಿಂದ ನಾರಾಯಣ ಅವರ ಶ್ರೀಮತಿಯವರಿಂದ
ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಸ್ಪರ್ಧೆಯ ಬಹುಮಾನ ಸ್ವೀಕರಿಸುತ್ತಿರುವುದು



ಅಂದಿನ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣಾ ಹಾಗೂ ಸಚಿವೆ ರಾಣಿ ಸತೀಶ ಇವರಿಂದ
ರಾಜ್ಯಪ್ರಶಸ್ತಿ ಸ್ವೀಕರಿಸುತ್ತಿರುವುದು - ೧೯೯೯

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ರಾಣಿ ಸತೀಶ ಇವರಿಂದ ಸ್ವೀಕರಿಸುತ್ತಿರುವುದು - ೨೦೦೦



ಡಾ. ಬಿ. ಅರ್. ಅಂಬೇಡ್ಕರ್ ರಾಜ್ಯ ಪ್ರಶಸ್ತಿಯನ್ನು ಕೇರಳದ ರಾಜ್ಯಪಾಲರಾದ ಶ್ರೀ ಬಿ. ರಾಚಯ್ಯ ಇವರಿಂದ ಸ್ವೀಕರಿಸುತ್ತಿರುವುದು - ೧೯೯೯

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಕೇಂದ್ರ ಲಲಿತಕಲಾ ಅಕಾಡೆಮಿಯ ೪೦ನೇ ರಾಷ್ಟ್ರೀಯ ಸಮಕಾಲೀನ ಕಲಾಪ್ರದರ್ಶನದಲ್ಲಿ ಭಾಗಿಯಾಗಿರುವ ಕಲಾವಿದ ಸಿ. ಚಂದ್ರಶೇಖರ್ ಅವರು



ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ ವಿಶೇಷ ಕಲಾಪ್ರದರ್ಶನದಲ್ಲಿ ಕಲಾವಿದ ಸಿ. ಚಂದ್ರಶೇಖರ ಅವರು - ೧೯೯೮



ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿ ಇವರು ವಿಶೇಷ ಘಟಕ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಸಿ. ಚಂದ್ರಶೇಖರ್ ಅವರು ಭಾಷಣ ಮಾಡುತ್ತಿರುವುದು

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ ಸ್ವೀಕಾರ - ಶಾಂತಿನಿಕೇತನ (ಪಶ್ಚಿಮ ಬಂಗಾಳ)



ವಾರ್ಷಿಕ ಕಲಾಪ್ರದರ್ಶನದ ಉದ್ಘಾಟನೆ, ಬೆಳಗಾವಿ




೨೫ನೇ ವಾರ್ಷಿಕ ಕಲಾಪ್ರದರ್ಶನದ ಬಹುಮಾನ ವಿತರಣಾ ಸಮಾರಂಭ

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು


ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು
ಗೌರವ ಪ್ರಶಸ್ತಿ ೧೯೯೯
ಶ್ರೀ ಸಿ. ಚಂದ್ರಶೇಖರ
ಅವರಿಗೆ ಚಿತ್ರ ಕಲೆಯ ಕ್ಷೇತ್ರದಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಗಾಗಿ
ಕರ್ನಾಟಕ ಲಲಿತಕಲಾ ಅಕಾಡೆಮಿಯು ನೀಡಿದ ಗೌರವ ಪ್ರಶಸ್ತಿ
(ಎಚ್. ಶಂಕರಪ್ಪ) ರಿಜಿಸ್ಟ್ರಾರ್
(ಪ್ರೊ. ಬಿ. ಜಿ. ಅಂದಾನಿ) ಅಧ್ಯಕ್ಷರು
೦೪-೦೩-೨೦೦೦, ಮೈಸೂರು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ - ೧೯೯೯



ಕರ್ನಾಟಕ ಸರ್ಕಾರ
ರಾಜ್ಯೋತ್ಸವ ಪ್ರಶಸ್ತಿ ೧೯೯೯
ಕರ್ನಾಟಕ ಸರ್ಕಾರ
ಶ್ರೀ ಸಿ. ಚಂದ್ರಶೇಖರ್

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ - ೧೯೯೯

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ದಾವಣಗೆರೆಯಲ್ಲಿ ನಡೆದ ಕಮ್ಮಟ, ೨೦೧೬





ಬೆಂಗಳೂರಿನ ನಯನ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣ, ೨೦೧೬

ಸಿ. ಚಂದ್ರಶೇಖರ ಅವರ ಕಲಾಚಟುವಟಿಕೆಗಳು



ಸಂಕ್ರಾಂತಿ ಕಲಾಶಿಬಿರ - ೨೦೧೫



ಸಂಕ್ರಾಂತಿ ಕಲಾಪುರಸ್ಕಾರ ನೀಡುತ್ತಿರುವುದು



ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಂದು-ಇಂದು-ಮುಂದು ಕಾರ್ಯಕ್ರಮದ ಉದ್ಘಾಟನೆ-೨೦೧೨

ದೊರೆತ ಪ್ರಶಸ್ತಿಗಳು

* ದಿ ಡೆಕೋರೇಟಿವ್ಸ್ ಎಂಬ ಚಿತ್ರಕ್ಕೆ ವಿದ್ಯಾರ್ಥಿ ಜೀವನದಲ್ಲಿಯೇ ಪ್ರಶಸ್ತಿಗಳಿಸಿದೆ.
* ಕರ್ನಾಟಕ ಸರಕಾರವು ಸಿ.ಚಂದ್ರಶೇಖರವರ ಸಾಧನೆ ಗುರುತಿಸಿ, ೧೯೯೯ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.
* ಕ.ಸ.ಸಮಾಜ ಕಲ್ಯಾಣ ಇಲಾಖೆಯು ೧೯೯೯ರಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಿದೆ.
* ಕ.ಸ.ಸಮಾಜ ಕಲ್ಯಾಣ ಇಲಾಖೆಯು ೧೯೯೯ರಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಿದೆ.
* ಕ.ಲ.ಕ.ಅಕಾಡೆಮಿ ೨೦೦೦ರಲ್ಲಿ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.
* ಚಿತ್ರಕಲಾ ಪರಿಷತ್ತು ೧೯೭೭ರಲ್ಲಿ ಏರ್ಪಡಿಸಿದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಬಹುಮಾನ ಪಡೆದಿರುತ್ತಾರೆ.

ಅಧ್ಯಾಯ : ಏಳು

ಸಿ. ಚಂದ್ರಶೇಖರ ಅವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ : ಏಳು

ಸಿ ಚಂದ್ರಶೇಖರ ಅವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

"ಕಲೆಯ ಮುಖ್ಯ ಉದ್ದೇಶ ಸೌಂದರ್ಯ ಸೃಷ್ಟಿ. ತನ್ಮೂಲಕ ನೋಡುಗನಲ್ಲಿ ಸೌಂದರ್ಯಾನುಭವ ಉಂಟು ಮಾಡುವುದು. ಒಂದು ಸುಂದರವಾದ ನಿಸರ್ಗ ದೃಶ್ಯವನ್ನು ನೋಡಿದಾಗ ಅಲ್ಲಿರುವ ರಮ್ಯತೆಯನ್ನು ವರ್ಣವೈಭವವನ್ನು ಆಕಾರಗಳ ಏರಿಳಿತದ ಮೂಲಕ ಉಂಟಾಗುವ ಆಹ್ಲಾದಕರ ಅನುಭವವನ್ನು ಮೆಚ್ಚಿಕೊಂಡು ಅದು ಒದಗಿಸುವ ಸೊಗಸಿನಲ್ಲಿ ತಲ್ಲೀನವಾಗಬೇಕಾದುದು ಯಾವುದೇ ಕಲಾಸಕ್ತನ ಮೊಟ್ಟಮೊದಲ ಕೆಲಸ. ಸುಂದರವಾದ ಸೂರ್ಯಾಸ್ತದ ದೃಶ್ಯವೊಂದು ನಮ್ಮ ಮನಸ್ಸನ್ನು ಸೆಳೆಯಬಹುದು.[೧೧] ಅಲ್ಲಿನ ವರ್ಣಮೇಳ, ಆಕಾರ, ಯೋಜನೆ, ಶೀತಲ ಪರಿಣಾಮ ಇತ್ಯಾದಿಗಳು ತುಂಬ ಆಕರ್ಷಕವಾಗಿರಬಹುದು. ಹಾಗಿದ್ದರೂ ಅವುಗಳನ್ನು ಕಲೆ ಎಂದು ಕರೆಯುವುದಿಲ್ಲ. ಅವು ಕೇವಲ ನಿಸರ್ಗದ ನೋಟ ಮಾತ್ರ. ಈ ಸೃಷ್ಟಿ ನೋಡಿದ ಕಲಾವಿದ ತನ್ನ ಅನುಭವಗಳಿಂದ ಹಾಗೂ ತನ್ನ ಮನೋಧರ್ಮ, ಪಡೆದ ಶಿಕ್ಷಣ, ಸಂಸ್ಕಾರಗಳು ಎಲ್ಲವೂ ಕೃತಿರಚನೆಯಲ್ಲಿ ಸಹಕರಿಸುತ್ತವೆ. ಹೀಗೆ ತಾನು ಕಂಡ ಜಗತ್ತನ್ನು, ತಾನು ಅರ್ಥಮಾಡಿಕೊಂಡ ಜಗತ್ತನ್ನು ಅವನು ತನ್ನ ಮಾಧ್ಯಮದಲ್ಲಿ ರೂಪಿಸುತ್ತಾನೆ. ಈ ಕೃತಿ ರೂಪುಗೊಳ್ಳುವಾಗ ಆ ಕಾಲದಲ್ಲಿನ ವಿವಿಧ ಪ್ರಭಾವ, ಪ್ರೇರಣೆ, ಶೈಲಿ ಹಾಗೂ ತಂತ್ರದ ಬಳಕೆಯಿಂದ ಕಲಾವಿದನ ಕೃತಿ ಶ್ರೇಷ್ಠ ಮಟ್ಟ ತಲುಪುತ್ತದೆ. ಕಲಾವಿದನ ಈ ಮಾಧ್ಯಮಗಳು ಪ್ರೇರಣೆಗಳು, ಶೈಲಿ ಹಾಗೂ ತಂತ್ರಗಳು ಅವನ ವೈಯಕ್ತಿಕ ಬಾಹ್ಯ ವಸ್ತುಗಳನ್ನು ಹೊಂದಿರುತ್ತವೆ. ಇವು ಕಲಾಕೃತಿಯ ಬಾಹ್ಯ ವಸ್ತುಗಳು. ಕಲಾವಿದನ ಅಭಿವ್ಯಕ್ತಿಯನ್ನು ದುಡಿಸಿಕೊಳ್ಳುತ್ತವೆ. ಇಲ್ಲಿ ಕಲಾವಿದನ ಪೂರ್ವಭಾವಿ ಅಭ್ಯಾಸ, ಸಂಸ್ಕಾರ, ಭಾವನೆ, ಮನೋಧರ್ಮ,

೧೧. ಡಾ. ಶಿವರಾಮ ಕಾರಂತ : ಕಲಾಪ್ರಪಂಚ. ಪು-೨

ಆಂತರಿಕ ಈ ಬಾಹ್ಯ ಅಂಶದೊಂದಿಗೆ ಸೇರಿ ಕೃತಿ ರಚನೆಗೊಳ್ಳುತ್ತವೆ.[೨೨] ಕಲಾವಿದ ತಾನು ನೋಡಿದ ದೃಶ್ಯಾನುಭವವನ್ನು ಮೊದಲು ಅಭಿವ್ಯಕ್ತಿಸಿರುವಾಗ ಹೊರಹೊಮ್ಮುವುದು ರೂಪ. ಕಲಾವಿದನ ನಿರಂತರ ಪ್ರಯತ್ನ ಪ್ರಯೋಗ ತನ್ನತನ ಹುಡಕಿಕೊಂಡು ರೂಪವನ್ನು ತನ್ನಶೈಲಿಯಾಗಿ ಪರಿವರ್ತಿಸಿದೆ." ಶೈಲಿ ಅಂದರೆ ಒಂದು ಕಾಲದಲ್ಲಿ, ಒಂದು ದೇಶದಲ್ಲಿ ಹೆಚ್ಚು ಪ್ರಭಾವದಿಂದ ಬಳಕೆಯಲ್ಲಿದ್ದು, ರೂಢಿಸಿದ ರೀತಿ, ವಿಧಾನ, ವೈಖರಿಗಳು. ಉದಾಹರಣೆಗೆ ಚಿತ್ರಕಲೆಯಲ್ಲಿ ಹಿಂದೆ ಭಾರತದಲ್ಲಿ ಇದ್ದ ಕಾಂಗ್ರಾ ಶೈಲಿ, ರಜಪೂತ ಶಯಲಿ, ಮೊಘಲ್ ಶೈಲಿ, ಸಾಂಪ್ರದಾಯಿಕ ಶೈಲಿ ಕಾಣಬಲ್ಲೆವು. ಹಿಂದೆ ಒಂದು ಕಾಲದ, ಒಂದು ದೇಶದ ಕಲಾಶೈಲಿಗಳನ್ನು ಪ್ರತ್ಯೇಕವಾಗಿ ಗುರುತಿಸಲ್ಪಡುತ್ತಿದ್ದವು. ಆದರೆ ಇಂದು ಕಲಾವಿದನ ಸ್ವಂತಿಕೆಯನ್ನು ವ್ಯಕ್ತಪಡಿಸುವಂತಹ ಪ್ರತ್ಯೇಕ ಶೈಲಿಗಳು ಗುರುತಿಸಬಹುದು.

ಕಲಾವಿದ ಶೈಲಿಯೊಂದನ್ನು ಕಂಡುಕೊಳ್ಳಬೇಕಾದರೆ ಅದಕ್ಕೆ ಮಾಧ್ಯಮದ ತಂತ್ರಗಳೂ ಸಹ ಮುಖ್ಯವಾಗುತ್ತವೆ. ಉದಾ: ಜಲವರ್ಣಗಳನ್ನು ಕುಂಚದಿಂದ ತೆಳುವಾಗಿ ಪಾರದರ್ಶಕ ರೀತಿಯಲ್ಲಿ ಧಾರಾಳವಾಗಿ ಉಪಯೋಗಿಸಿ, ಲೇಪಿಸಿದ ತಂತ್ರ ಒಂದಾದರೆ, ಅದನ್ನೇ ದಪ್ಪ ಪದರಗಳಲ್ಲಿ, ತೈಲವರ್ಣದಂತೆಯೂ ಬಳಸುವ ತಂತ್ರವಿದೆ. ಹಾಗೆಯೇ ಬರಿಯ ಚುಕ್ಕಿಗಳಿಂದಲೇ ನಿರ್ದಿಷ್ಟ ಪ್ರಭಾವ ಮೂಡಿಸುವ ತಂತ್ರವಿದೆ. ತೈಲವರ್ಣಗಳಲ್ಲಿಯೂ ಕುಂಚದ ರೀತಿ ಒಂದಾದರೆ, ಪ್ಯಾಲೆಟ್ಟ ಚಾಕುವಿನಿಂದಲೇ ಪೂರ್ಣವಾಗಿ ಚಿತ್ರಿಸುವುದು ಒಂದು ತಂತ್ರ. ಹೀಗೆ ನಿತ್ಯ ವಿನೂತನ ತಂತ್ರಗಳನ್ನು ಕಲಾವಿದರು ಬಳಸಿಕೊಂಡಿರುವುದು ಕಂಡುಬರುತ್ತದೆ.[೨೩] ಆಧುನಿಕ ಕಲಾರಂಗದಲ್ಲಿ ಚಿತ್ರವಿಷಯ (ವಸ್ತು)ಕ್ಕಿಂತಲೂ ವಿನೂತನ ತಂತ್ರಗಳ ಆವಿಷ್ಕಾರಗಳಿಗೇ ಪ್ರಾಧಾನ್ಯತೆ ಇರುವುದು ವ್ಯಕ್ತ ವಿಚಾರ. ಒಂದು ಕಲಾಕೃತಿ ಸೃಷ್ಟಿಯಾಗುವಾಗ ಕಲಾವಿದನು ತಾನು ಕಂಡ ದೃಶ್ಯ ಕೇವಲ ವಸ್ತು ಆಗಿ ಆತನ ಮುಂದೆ ನಿಲ್ಲುತ್ತದೆ. ಈ ವಸ್ತುವನ್ನು ರೂಪವಾಗಿ, ಕೃತಿಯಾಗಿ ರಚಿಸುವ ಮೊದಲು ಆತನು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವನು. ಈ ಸಿದ್ಧತೆಯಲ್ಲಿ ಆತನ ಮೊದಲ ಕಲಿತ ಅಭ್ಯಾಸ, ವಿವಿಧ ಕಾಲದ ಪ್ರಭಾವ, ಪ್ರೇರಣೆ ಇಲ್ಲಿ ಮುಖ್ಯವಾಗುತ್ತದೆ. ಕೃತಿಯ ರಚನೆ ಮುಂಚೆ ಪ್ರಭಾವ, ಪ್ರೇರಣೆ ತಮ್ಮ ತುಡಿತಗಳನ್ನು ವ್ಯಕ್ತಪಡಿಸುತ್ತವೆ. ಪ್ರಭಾವ ಎಂದಾಗ ಆತನು ಕಲಿತ ಕಲಾಶಾಲೆಯ ಹಾಗೂ ಅಲ್ಲಿನ ಗುರುಗಳ, ಸಹಪಾಠಿಗಳ, ಖ್ಯಾತ ಕಲಾವಿದರ ಕೃತಿಯ ಪ್ರಭಾವಕ್ಕೆ ಒಳಗಾಗುತ್ತಾನೆ. ಇದು ಹೇಗೆ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಇಲ್ಲಿ ಆತನ ಆಂತರಿಕ ಆಸಕ್ತಿ, ಬಯಕೆ ಮಹತ್ವ ಪಡೆಯುತ್ತದೆ.[೨೪] ಇಲ್ಲಿ ಬಾಹ್ಯ ಪ್ರಭಾವ ಒಂದಾದರೆ ಆಂತರಿಕ ಪ್ರಭಾವವು ಕೆಲಸ ಮಾಡುತ್ತದೆ.

---

೨೨. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು-೫೦
೨೩. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೨
೨೪. ಅದೇ

ಸುತ್ತಲಿನ ಪರಿಸರ, ಸಮಾಜ, ಕಾಲದ ಅನುಭವ, ದಿನ ನಿತ್ಯ ನೋಡುವ ಜೀವನದ ಅನೇಕ ಬಾಹ್ಯ ಹಾಗೂ ಆಂತರಿಕ ಅಂಶಗಳು ಕಲಾವಿದನಿಗೆ ಪ್ರೇರಣೆಯಾಗಿ ನಿಲ್ಲುತ್ತವೆ. ಪ್ರೇರಣೆಯೆಂಬುದು ನಿರ್ದಿಷ್ಟವಾಗಿ ಇದೇ ಎಂದು ಹೇಳಲಾಗದು. ಇದು ನಿರತ ನಿರಂತರವಾಗಿರುವುದು. ಈ ಪ್ರೇರಣೆ, ಪ್ರಭಾವಗಳಿಂದ ಕಲಾವಿದ ಕಲಾಸೃಷ್ಟಿಯೊಂದನ್ನು ಹೀಗೆ ರಚಿಸಬೇಕೆಂದು ನಿರ್ದಿಷ್ಟ ಗುರಿಯನ್ನು ಹೊಂದಿರುವಾಗ, ಮಾಧ್ಯಮ ಹಾಗೂ ತಂತ್ರಗಳು ಆತನಿಗೆ ಸಹಾಯಕವಾಗಿ ನಿಲ್ಲುತ್ತವೆ. ಹೀಗೆ ಇವುಗಳಿಂದ ಶೈಲಿಯನ್ನು ನಿರ್ಮಿಸುವ ತಂತ್ರವು ಅವಕಾಶದಲ್ಲಿ ಮೂಡಿದಾಗ ಮೈವಳಿಕೆಯಾಗುತ್ತದೆ. ತಂತ್ರ, ವರ್ಣಬಳಕೆ, ಮೈವಳಿಕೆಯ ಸಮತೋಲನ ಬಳಕೆಯಿಂದ ಶೈಲಿ ರೂಪುಗೊಳ್ಳುತ್ತದೆ.[೨೫] ಹೀಗೆ ಕಲಾಕೃತಿಯ ರಚನೆಯಲ್ಲಿ ಈ ನಾಲ್ಕು ಅಂಶಗಳು ಮಹತ್ವವೆನಿಸುತ್ತವೆ.

ಯಾವುದೇ ದೇಶದ ಕಲಾವಿದನನ್ನು ಉಲ್ಲೇಖಿಸುವಾಗ, ತಿಳಿಯುವಾಗ ಅಥವಾ ಅನೇಕ ಕಲಾವಿದರ ವಿಮರ್ಶೆ ಓದುವಾಗ ಈ ಅಂಶಗಳು ಎದ್ದು ಕಾಣುತ್ತವೆ. ಖ್ಯತ ಕಲಾವಿದೆ ಅಮೃತಾ ಶೇರ್ಗಿಲ್ ಚಿತ್ರಗಳು ಭಾರತೀಯ ಅಜಂತಾ ಚಿತ್ರಗಳ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದು. ಕೆ.ಕೆ. ಹೆಬ್ಬಾರರು ಅಮೃತಾಳ ಚಿತ್ರಗಳಿಂದ ಪ್ರಭಾವಿತರಾಗಿದ್ದರು. ಪಾಶ್ಚಾತ್ಯ ಕಲಾವಿದ ಪಿಕಾಸೋವಿನ ಗೂಳಿ ಸರಣಿಯ ಚಿತ್ರಗಳಿಗೆ ಪ್ರೇರಣೆ ಒದಗಿಸಿದ್ದು ಸ್ಪೇನಿನ ಗೂಳಿ ಕಾಳಗ. ಎಂ.ಎಫ್ ಹುಸೇನ ಚಿತ್ರಗಳಲ್ಲಿ ಭಾರತೀಯ ಚಿಕಣಿ ಚಿತ್ರದ ಪ್ರಭಾವ ಎದ್ದು ಕಾಣುತ್ತದೆ. ತೈಯಬ್ ಮೆಹತಾರ ಕೃತಿಯಲ್ಲಿ ಈ ಭಾರತೀಯ ಅಂಶಗಳು ವರ್ಣಗಾರಿಕೆಯಲ್ಲಿ ಕಾಣುತ್ತೇವೆ. ಕರ್ನಾಟಕದ ಕಲಾವಿದ ಆರ್. ಎಂ. ಹಡಪದರ ಕೃತಿಗಳಲ್ಲಿ ಪಿಕಾಸೋನ ಪ್ರಭಾವ ಮೂಡಿದೆ. ಹೀಗೆ ಕಲಾವಿದ ಕಲಾಕೃತಿಗಳನ್ನು ನೋಡಿದಾಗ ಮೇಲಿನ ನಾಲ್ಕು ನೆಲೆಗಳು ಬಹು ಪ್ರಮುಖ ಪಾತ್ರವಹಿಸುತ್ತವೆ.

ಕಲಾವಿದನ ತಂತ್ರ, ಮಾಧ್ಯಮ, ಪ್ರೇರಣೆ, ಪ್ರಭಾವ, ಶೈಲಿ ಅರಿಯಬೇಕಾದರೆ ಕಲೆ ಬೆಳೆದು ಬಂದ ದಾರಿ, ಶೈಲಿಗಳ ಹುಟ್ಟು, ಅವುಗಳ ಇತಿಹಾಸ ಅರ್ಥೈಸುವುದು ಮುಖ್ಯ. ಈ ಶೈಲಿಗಳ ಮೇಲೆ ಕಲಾವಿದನ ಕೃತಿಯನ್ನು ವಿಮರ್ಶಿಸಲ್ಪಡುತ್ತದೆ. ಇಲ್ಲವೆ ಅವುಗಳ ನಿಟ್ಟಿನಲ್ಲಿ ಕೃತಿಗಳನ್ನು ನಿಲ್ಲಿಸುತ್ತವೆ. ಯಾವುದೇ ವಿಷಯವಾದರೂ ವಿಶ್ಲೇಷಿಸುವಾಗ ಅದರ ಇತಿಹಾಸ ಮುಖ್ಯವಾಗುವುದು. ಭಾರತೀಯ ಚಿತ್ರಕಲೆ ಪಾಶ್ಚಾತ್ಯ ಹಾಗೂ ದೇಶೀಯ ಶೈಲಿಯ ಪ್ರಭಾವಕ್ಕೆ ಒಳಗಾದ ಚಿತ್ರಕಲೆ ಕಲಿಯುವ ಕ್ರಮ, ಪಠ್ಯ ಪುಸ್ತಕಗಳು, ಖ್ಯಾತ ಕಲಾವಿದರ ಜೀವನ ಚರಿತ್ರೆಗಳು ಹೆಚ್ಚು ಪಾಶ್ಚಾತ್ಯರ ಕೃತಿಗಳೇ ಆಗಿವೆ. ಭಾರತೀಯ ಅಂಶಗಳು ಕಂಡರೂ ಪಾಶ್ಚಾತ್ಯರಷ್ಟು ಬೆಳೆದಿಲ್ಲ. ಆದ್ದರಿಂದ ಕಲೆಯನ್ನು ಅರಿಯುವ ಆಕರಗಳು ಪಾಶ್ಚಾತ್ಯರ ಕೊಡುಗೆ ಹೆಚ್ಚಿನದು.[೨೬]

---

೨೫. ಡಾ. ಎಸ್. ಸಿ. ಪಾಟೀಲ : ವಿ.ಟಿ. ಕಾಳೆ, ಪು-೨೧

೨೬. ಅದೇ

"ಭಾರತೀಯ ಕಲೆಯು ಸ್ವರ್ಗದತ್ತ ಸಾಗುವ ಸಾಧನ" ಐಹಿಕ ಬದುಕಿಗೆ ಆದ್ಯತೆ ನೀಡಿದ ಪಾಶ್ಚಾತ್ಯ ಕಲಾ ಸಂಪ್ರದಾಯ ಮತ್ತು ಆ ನಾಡಿನಿಂದ ಬಂದ ಕಲಾವಿದ ಹಾಗೂ ಕಲಾ ವಿಮರ್ಶಕ ಪ್ರೊ. ಈ.ಬಿ. ಹ್ಯಾವೆಲ್ ಅವರು ಭಾರತೀಯ ಕಲೆಯನ್ನು ಕಂಡು ಸಂತೋಷದಿಂದ ತೆಗೆದ ಉದ್ಗಾರವಿದು. ವಿದೇಶಿಯರಾದರು ಹ್ಯಾವೆಲ್ ಭಾರತೀಯರ ಉನ್ನತ ಜೀವನ, ಸಂಸ್ಕೃತಿ ಮತ್ತು ದರ್ಶನ ಇಲ್ಲಿಯ ಕಲಾಪ್ರಕಾರಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಂಡು ದಂಗಾದ, ಮೆಚ್ಚಿದ, ಅದರತ್ತ ಆಸಕ್ತಿ ತಾಳಿದ ಅದರ ಪುನರುತ್ಥಾನಕ್ಕಾಗಿ ಪರಿಶ್ರಮಿಸಿದರು. ಭಾರತೀಯರು ನಿಸರ್ಗದ ನಿಗೂಢತೆಯಲ್ಲೇ ಅದರ ಅದ್ಭುತ ಸೌಂದರ್ಯದಲ್ಲೂ ಬದುಕಿನ ಗಾಢತೆಯನ್ನು ಶಿವ ಚೈತನ್ಯವನ್ನು ಕಂಡರು. ಆ ಶಕ್ತಿಯನ್ನು ಕುರಿತು ಚಿಂತಿಸಿದರು, ಪ್ರೀತಿಸಿದರು, ಆರಾಧಿಸಿದರು, ಅದರಲ್ಲೇ ಪರಮ ಶಾಂತಿಯನ್ನು ಕಂಡುಕೊಂಡರು. ಕೊನೆಗೆ ಜೀವನ್ಮುಕ್ತಿಯ ಸಾಧನವನ್ನಾಗಿಸಿ ಕೊಂಡರು. ಈ ಹಿನ್ನೆಲೆಯಲ್ಲಿ ಮೈದಾಳಿದ ಇಲ್ಲಿಯ ಕಲಾ ಪ್ರಕಾರಗಳ ಪರಮ ಗುರಿ ಮುಕ್ತಿಯಾದರೆ ಅದಕ್ಕೆ ತಳಹದಿ ಧರ್ಮ. ಹೀಗಾಗಿ ಭಾರತೀಯ ಕಲೆಗೆ ತನ್ನದೇ ಆದ ವೈಶಿಷ್ಟ್ಯತೆಯಿದೆ, ಚೆಲುವಿದೆ, ಚೈತನ್ಯವಿದೆ, ಉನ್ನತ ಬದುಕಿನ ಮಾರ್ಗಸೂಚಿ ಇದೆ. ಈ ಎಲ್ಲಾ ತತ್ವಗಳು ಇಲ್ಲಿಯ ಸಾಹಿತ್ಯದಲ್ಲಿ ಸ್ಫೂರಣಗೊಂಡಿವೆ. ಶಿಲೆಗಳಲ್ಲಿ ಅರಳಿ ನಿಂತಿವೆ. ಶಬ್ದದಲ್ಲಿ ಪಾಡನಗೊಂಡಿವೆ. ಸಂಗೀತದಲ್ಲಿ ಸುಶ್ರಾವ್ಯವಾಗಿ ಅಲಾಪನೆಯಲ್ಲಿ ಅಲೆ ಅಲೆಯಾಗಿ ಅನುಕರಣಗೊಂಡಿವೆ.[೨] ಕುಂಚದಲ್ಲಿ ಕುಡಿಯೊಡೆದಿವೆ.

ಕಲಾವಿದ ಸಿ. ಚಂದ್ರಶೇಖರ ಅವರ ಕಲಾಕೃತಿಗಳಲ್ಲಿನ ಪ್ರಭಾವ

ಸಿ. ಚಂದ್ರಶೇಖರ ಅವರು ಸಮಾಜಮುಖಿ ಕಲಾವಿದರು. ಸಮಾಜದ ದಿನನಿತ್ಯದ ಆಗು ಹೋಗುಗಳನ್ನು ತಮ್ಮ ಕಲಾಕೃತಿಗಳಲ್ಲಿ ಸೆರೆಹಿಡಿದು ಈ ಮುಖೇನ ಸಮಾಜಕ್ಕೆ ಸಂದೇಶವನ್ನು ಕೊಟ್ಟು ಸಮಾಜದಲ್ಲಿ ಒಬ್ಬ ಕಲಾವಿದನ ಕರ್ತವ್ಯವನ್ನು ಜವಾಬ್ದಾರಿಯಿಂದ ನಿಭಾಯಿಸುವಂತಹ ಕಲಾವಿದರು ಎಂಬುದನ್ನು ಅವರ ಕಲಾಕೃತಿಗಳನ್ನು ಗಮನಿಸುವುದರಿಂದ ಕಂಡುಕೊಳ್ಳಬಹುದು. ತಾವು ಒಬ್ಬ ಸಮಾಜಮುಖಿ ಕಲಾವಿದರೆಂದು ಸಿ. ಚಂದ್ರಶೇಖರ ಅವರು ಈ ರೀತಿಯಾಗಿ ಸಮರ್ಥಿಸಿಕೊಳ್ಳುತ್ತಾರೆ. ಸಮಾಜ ಬಿಟ್ಟು ಮನುಷ್ಯ ಬಾಳಲಾರ, ಸಮಾಜ ಬಿಟ್ಟು ಕಲಾವಿದನು ಇರಲಾರ ಏಕೆಂದರೆ ಅವನು ಸಮಾಜ ಜೀವಿಯೇ. ಕಲಾವಿದರಾದವರು ಸಮಾಜದ ಆಗುಹೋಗುಗಳಿಗೆ ಸ್ಪಂದಿಸಬೇಕಾಗುತ್ತದೆ. ಹಿಂದೆ ರಚಿಸಿದಂತಹ ಅಜಂತಾ ಚಿತ್ರಕಲೆ, ರಜಪೂತ, ಹಸ್ತಪ್ರತಿ ಚಿತ್ರಗಳೆಲ್ಲಾ ಸಮಾಜಮುಖಿಯಾದಂತಹವುಗಳು. ಸಮಾಜಕ್ಕಾಗಿ ಜನರು ಬದುಕಲಿಯೆಂದು ಸಾಹಿತ್ಯ ರಚಿಸಲಾಯಿತು. "ಜನರು ಬದುಕಲಿ ಎಂದು ಈ ಕಾವ್ಯ ಬರೆದೆ" ಎಂದು ಕವಿ ರಾಘವಾಂಕ ಹೇಳುತ್ತಾನೆ. ಈ ಕಾವ್ಯಕ್ಕೆ ಅನುಸಾರವಾಗಿ ರಚಿಸಿದಾಗ ಅದು ತನ್ನಿಂದ ತಾನೇ ಸಮಾಜಮುಖಿಯಾಗುತ್ತದೆ.

---

೨. ಡಿ. ಎಸ್. ಅಕ್ಕಿ : ಐಂ.ಬಿ. ಭೂಪಾಲ್, ಪು-೧

ಉದಾ: ಹಸ್ತಪ್ರತಿಯಲ್ಲಿ ಚಿತ್ರಗಳು ಜನಸಾಮಾನ್ಯರಿಗೆ ಅದರಲ್ಲಿರುವ ಕಥೆ ಅರ್ಥವಾಗಲಿ, ಚಿತ್ರಗಳ ಮುಖಾಂತರ ತಿಳಿದುಕೊಳ್ಳಲಿ ಎಂಬ ಕಾರಣಕ್ಕೆ ಹಸ್ತಪ್ರತಿಗಳಲ್ಲಿ ಚಿತ್ರರಚಿಸಲಾಗಿತ್ತು. ಈಗ ಇದನ್ನು ಸಾಂದರ್ಭಿಕ ಚಿತ್ರ(illustration) ಎಂದು ಹೇಳಲಾಗುತ್ತದೆ. ಸಾಮಾಜಿಕವಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡಾಗ ಸಮಾಜಮುಖಿಯಾದ ಚಿತ್ರಗಳು ಸೃಷ್ಟಿಯಾಗುತ್ತವೆ. ಎಷ್ಟೋ ಸಲ ನಮ್ಮ ಅಭಿವ್ಯಕ್ತಿ ಕ್ರಮ ಜನಸಾಮಾನ್ಯರಿಗೆ ತಲುಪದೇ ಹೋಗಬಹುದು. ಆಧುನಿಕ ಸಂದರ್ಭದ ತಂತ್ರಗಾರಿಕೆ ಜನಸಾಮಾನ್ಯರಿಗೆ ಮುಟ್ಟುವುದಿಲ್ಲ. ಅದರಲ್ಲಿರುವ ವಸ್ತುವಿಷಯ ಕಲಾವಿದ ಬಿಡಿಸಿ ಹೇಳಿದಾಗ ಆ ಕಲಾಕೃತಿ ಅವರ ಹತ್ತಿರ ಹೋಗುತ್ತದೆ ಎಂಬ ಇತ್ಯಾದಿ ಅಭಿಪ್ರಾಯವನ್ನು ಹೊಂದಿ ಕಲೆಯಿರುವುದು ಸಮಾಜಕ್ಕಾಗಿ ಎಂಬ ಸಿದ್ಧಾಂತಕ್ಕೆ ಹೆಚ್ಚಿನ ಮನ್ನಣೆ ನೀಡುತ್ತಾರೆ.

ಬ್ರಿಟಿಷರ ಆಳ್ವಿಕೆಯಿಂದ ಉಂಟಾಗಿದ್ದ ವ್ಯಾಪಾರಿ ಮನೋಭಾವದ ಆರ್ಥಿಕತೆ ಮತ್ತು ಆಧುನಿಕತೆ ಪಶ್ಚಿಮ ಹಾಗೂ ಯೂರೋಪಿನ ಜಗತ್ತಿನ ಸಂಸ್ಕೃತಿಯ ಪ್ರಭಾವಗಳು ದೇಶದ ಇತರ ಭಾಗಗಳಿಗಿಂತಲೂ ಬಂಗಾಳದ ಮೇಲೆ ಹೆಚ್ಚಾಗಿ ಕಾಣಿಸಿಕೊಂಡಾಗ ಅಲ್ಲಿನ ಬುದ್ಧಿಜೀವಿಗಳಲ್ಲಿ ಉಂಟಾದ ಎಚ್ಚರವೇ ಬಂಗಾಲದ ಪುನರುಜ್ಜೀವನವೆಂದು ಇತಿಹಾಸಕಾರರಿಮದ ಕರೆಯಲ್ಪಟ್ಟಿದೆ. ಬಂಗಾಳದ ಈ ಪಾತ್ರವನ್ನು ಯುರೋಪಿಯನ್ ರಿನೈಸಾನ್ಸ್ ಸಂದರ್ಭದಲ್ಲಿ ಆಕ್ರಮಿಸಿರುವ ಸ್ಥಾನಕ್ಕೆ ಹೋಲಿಸಲಾಗಿದೆ. ಈ ಗುಂಪಿನ ಎಲ್ಲಾ ಸೃಷ್ಟಿಗಳಲ್ಲಿ ಸಮಕಾಲೀನ ಸಂದರ್ಭದ ಅಧ್ಯಯನ ತೀವ್ರತೆಯ ಅಭಿವ್ಯಕ್ತಿ ಆಗಲೇ ಇಲ್ಲ.

ಚಿತ್ರರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾಕೌಶಲ ಕೂಡ ಬದಲಾಗುತ್ತದೆ. ಒಂದೊಂದು ಬಗೆಯ ಕೌಶಲ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಯೋಗಿಸುತ್ತಾನೆ. ಮಾನಸಿಕ ಭಾವನೆಗಳನ್ನು ಹೊರಗಿಡಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳೆಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಎಷ್ಟೋ ಬಗೆಯ ಕಲಾಕೃತಿಗಳನ್ನು ನೋಡುವಂತೆ ಅನೇಕ ಬಗೆಯ ಚಿತ್ರರಚನಾ ಕೌಶಲಗಳನ್ನು, ತಂತ್ರಗಳನ್ನು, ಶೈಲಿಗಳನ್ನು ಕಾಣುತ್ತೇವೆ. ಸಿ. ಚಂದ್ರಶೇಖರ ಅವರ ಕಲಾಕೃತಿಗಳ ವಿಷಯ ವಸ್ತು, ಸಮಕಾಲೀನ ವಿಷಯಗಳಾಗಿದ್ದು, ತಮ್ಮ ಬದುಕಿನಲ್ಲಿ ಈ ಚಿತ್ರಕಲಾ ಜಗತ್ತಿನ ಒಳಗನ್ನು ಕಂಡುಕೊಂಡ ತಮ್ಮೊಳಗನ್ನು ಇತ್ತ ಹೊರಳಿಸಿಕೊಂಡು ಪಾಶ್ಚಾತ್ಯ ಜಗತ್ತಿನ ಕಲಾ ವೈಖರಿಯನ್ನು ಗಮನಿಸಿದಾಗ ಅವರಿಗೆ ಕಂಡದ್ದು ಹೊಸತನದ ಅಲೆಯಲ್ಲಿಯ ಕಲಾವಿದರ ಕಲಾಕೃತಿಗಳು ಸರ್ರಿಯಲಿಸ್ಟ್ ಕಲಾವಿದ ಸಲ್ವೇಡರ್ ಡಾಲಿಕ್ಯೂಬಿಸಂನ ಕಲಾವಿದ ಪಾಬ್ಲೊಪಿಕಾಸೋ ಇಂಪ್ರೆಷನಿಷ್ಟ್ ಕಲಾವಿದ ಪಾಲ್ ಗಾಗಿನ್ ಮುಂತಾದವರ ಕಲಾಕೃತಿಗಳನ್ನು ನೋಡಿ ತಮ್ಮ ಕಲಾಕೃತಿಯಲ್ಲಿಯೂ ಏನನ್ನಾದರೂ ಹೊಸತನ ಇರಬೇಕು ವೈಯಕ್ತಿಕ ಶೈಲಿ ಎದ್ದು ಕಾಣಬೇಕು ಎಂಬ ವಿಭಿನ್ನ

ನಿಲುವು ಹೊಂದಿ "ಸ್ಟಿಚ್" ಸರಣಿಯಲ್ಲಿ ತಮ್ಮದೇ ಆದ ಕಲ್ಪನ ವಿಚಾರವನ್ನು ಅಳವಡಿಸಿಕೊಂಡು ಕಲಾಕೃತಗಳನ್ನು ರಚಿಸಿ ಜನಮನ್ನಣೆ ಗಳಿಸಿದ್ದಾರೆ.

ಇವರ ಕಲಾಕೃತಿಗಳು ಬುಡಕಟ್ಟಿನ ಮೂಲ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಇದರಲ್ಲಿರುವ ಪ್ರಬಲ ದಲಿತ ಸಂವೇದನೆಗಳಲ್ಲಿ ಒಂದು ಅವರು ರಚಿಸುವ ಕಲಾಕೃತಿಗಳ ವಸ್ತು ಆಕಾರಗಳನ್ನು ಗಮನಿಸಿದಾಗ ಬಡತನ ಮತ್ತು ಶೋಷಿತರ ಕಾಳಜಿ ಎದ್ದು ಕಾಣುತ್ತದೆ. ಹರಿದ ಬಟ್ಟೆ ಒಡಕು ಗಡಿಗೆ ತುಂಡಾದ ಸೀರೆ ಅಲ್ಲದೆ ಮುರಕಲು ಗುಡಿಸಲು ಈ ರೀತಿಯ ವಸ್ತುಗಳಿಗೆ ಪರ್ಯಾಯ ಅರ್ಥ ಕಲ್ಪಿಸಿ ದಲಿತ ಪ್ರಜ್ಞೆಯನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿದ್ದಾರೆ. ಕ್ರಿಯಾಚೇತನ ಸಾಂಸ್ಕೃತಿಕ ಕೇಂದ್ರ ಹುಟ್ಟು ಹಾಕಿ ಅದರಡಿಯಲ್ಲಿ ಸಾಕಷ್ಟು ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಸಿ.ಚಂದ್ರಶೇಖರ ಅವರು ಸಾಕಷ್ಟು ರೇಖಾ ಚಿತ್ರಗಳು, ಸಂಯೋಜನಾ ಚಿತ್ರಗಳು, ಗ್ರಾಫಿಕ್ ಕಲಾತ್ಮಕಗಳು ಕೋಲಾಜ್ ಚಿತ್ರಗಳು ಶಿಲ್ಪಗಳು, ಲೀನೋ ಪ್ರಿಂಟ್ ಡಿಜಿಟಲ್ ಚಿತ್ರಗಳು ಹೀಗೆ ತಮ್ಮ ಬದುಕಿನುದ್ದಕ್ಕೂ ರಚಿಸುತ್ತಾ ಬಂದಿದ್ದಾರೆ. ಅಲ್ಲದೆ ಅವುಗಳು ಪೆನ್ನು, ಪೆನ್ಸಿಲ್, ಇಂಕ್, ತೈಲವರ್ಣ ಪ್ರಿಂಟಗಳಿಂದ ಕೂಡಿದ್ದು ವಿಭಿನ್ನ ಶೈಲಿ ತಂತ್ರಗಳಿಂದ ಕೂಡಿದೆ. ಸಿ.ಚಂದ್ರಶೇಖರ ಅವರು ವಿವಿಧ ಮಾಧ್ಯಮಗಳಲ್ಲಿ ಆಧುನಿಕ ತಂತ್ರಾಂಶಗಳನ್ನು ಬಳಸಿಕೊಂಡು ಡಿಜಿಟಲ್ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ ಎಂದು ಹೇಳಬಹುದು.

ಚಿತ್ರಕಲೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಕಲಾವಿದರಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ನಿರ್ದಿಷ್ಟ ಮಾಧ್ಯಮ ಹಾಗೂ ತಂತ್ರಗಳಿಗೆ ಮಾರು ಹೋಗಿರುವುದು. ಸ್ವಾಭಾವಿಕ ಅಂಶವಾಗಿದೆ. ಸಿ. ಚಂದ್ರಶೇಖರರವರು ಇದಕ್ಕೆ ಹೊರತಲ್ಲ ಸಾಮಾನ್ಯವಾಗಿ ಹೆಚ್ಚಿನ ಕಲಾವಿದರು ತಮ್ಮ ಕಲಾಶಾಲೆಗಳಲ್ಲಿ ಅಭ್ಯಾಸ ಮಾಡುವಾಗ ಚಲಾವಣೆಯಲ್ಲಿರುವ ಮಾಧ್ಯಮಗಳನ್ನು ಅನುಸರಿಸುವುದು ಸ್ವಾಭಾವಿಕ. ಆದರೆ ಕೇನ್ ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾ ಶಿಕ್ಷಣ ಪೂರೈಸಿದರು ಕೂಡ ಶಾಂತಿನಿಕೇತನ ಕಲಾ ಶಾಲೆಯ ಶಿಕ್ಷಣ ಕ್ರಮದಲ್ಲಿಯೇ ಇವರ ಕಲಾಶಿಕ್ಷಣ ಸಾಗಿಸಿದ್ದು ಇವರ ಕಲಾಕೃತಿಗಳಿಂದ ಕಂಡುಬರುತ್ತದೆ. ಇನ್ನೊಂದು ವಿಶೇಷ ಎಂದರೆ ಪ್ರತೇಕ ಒಂದೇ ಶೈಲಿಗೆ ಅಂಟಿ ಕೊಳ್ಳದೇ ಬೇರೆ ಬೇರೆ ಮಾಧ್ಯಮಗಳಲ್ಲಿ exprement ಮಾಡಿರುವುದು ಕಲಾಕೃತಿಗಳಿಂದ ತಿಳಿದುಬರುತ್ತದೆ.

ಅಮೂರ್ತ ಸಂಯೋಜನಾ ಚಿತ್ರಗಳು

ಕಲಾವಿದನು ಅಕಾಡೆಮಿಕ್ ಕಲಾ ಶೈಲಿಯಿಂದ ಹೊರಬರಲು ಮತ್ತು ಅದರಲ್ಲಿ ಹೊಸತನವನ್ನು ಕಂಡುಕೊಳ್ಳಲು ಹಲವಾರು ಪ್ರಯೋಗಗಳನ್ನು ಮಾಡುವುದುಂಟು. ಕಲಾವಿದನಾದವನು ಸ್ವತಂತ್ರನು. ಅವನು ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಬಣ್ಣ

ಕುಂಚಗಳ ಮೂಲಕ ಅದನ್ನು ಅಭಿವ್ಯಕ್ತಪಡಿಸುತ್ತಾನೆ. ಇಲ್ಲಿ ತಾನು ಊಹೆ ಮಾಡಿದ ವಿಷಯವನ್ನು ಅಮೂರ್ತತೆಯ ಮೂಲಕ ವ್ಯಕ್ತಪಡಿಸುತ್ತಾನೆ. ಇಲ್ಲಿ ರೂಪವಿಲ್ಲದಿರುವುದಿಲ್ಲ. ಕಲಾಕೃತಿಯು ನೋಡಿದರೆ ಅದು ವಿಕೋವೆನಿಸಿದರೂ ಬಣ್ಣ ಮತ್ತು ಅಕಾರಗಳ ಸಹಾಯದಿಂದ ಅದರಲ್ಲಿ ಜೀವನವನ್ನು ತುಂಬಲು ಪ್ರಯತ್ನಿಸುತ್ತಾನೆ ಇದು ಸಾಂಕೇತಿಕವೆನಿಸಿದರೂ ಕಲಾವಂತಿಕೆ ಇದರಲ್ಲಿ ಅಳವಡಿಸಿಕೊಂಡಿರುತ್ತದೆ. ಇದನ್ನು ಇಂಗ್ಲೀಷಿನಲ್ಲಿ(obstract) ಎಂತಲು ಕರೆಯುವರು. ಅಬಸ್ಟ್ರಕ್ಟ್ ಎಂಬುದಕ್ಕೆ ಪದಕ ಎತ್ತಿಕೋ ಹೊರತೆಗೆ ಎಂದು ಅರ್ಥ. ನೈಸರ್ಗಿಕ ವಸ್ತುಗಳಿಂದ ಮಾಡಿಕೊಂಡ ಅಲಂಕಾರಿಕ ಕಲೆಯಲ್ಲಿನ ಶೈಲಿಕೃತ ಆಕೃತಿಗಳಿಗೆ ಈ ಪದ ಅನ್ವಯವಾಗುತ್ತದೆ. ನವೋದಯ ಯುಗದ ಅನಂತರದ ಕಲಾವಿದರಲ್ಲಿ ತಮ್ಮ ಭಾವನೆ ಮತ್ತು ವಿಚಾರಗಳನ್ನು ಅಭಿವ್ಯಕ್ತಿಸಲು ವರ್ಣನೆ ಹಾಗೂ ವಿವರಣೆ ಒಟ್ಟು ರೇಖೆ ಮತ್ತು ವರ್ಣಗಳನ್ನು ಬಳಸುವ ಪ್ರವೃತ್ತಿ ಹೆಚ್ಚಾಯಿತು.[೨೯]

The Imaginative act begins and endsinfreedom. Its for the Indian artiststodefine, on the basis of their own experience reality their won approch to freedom. ಕಲೆಯು ಸೌಂದರ್ಯ, ಸೌಂದರ್ಯವು ಆನಂದ ಎಂದು ಸೌಂದರ್ಯ ಚಿತ್ರವನ್ನು ನಮ್ಮ ಮುಂದಿರಿಸಿ ಅದನ್ನು ನಮಗನಿಸಿ ಅದರಿಂದ ನಮಗೆ ಅನಂದ ಉಂಟಾಗುವಂತೆ ಮಾಡುವವನೇ ಕಲಾಕುಶಲನು.

The whole go out of modern trends in paintings has gonerally turned its face against this kind of space, insted, there has been a constant explorations of never ways of creating speace. ಹರ್ಬಟ್ ರೀಡರ ಪ್ರಕಾರ ಅವಕಾಶ ಚಿತ್ರಕಲೆಯ ಅವಿಭಾಜ್ಯ ಅಂಗಗಳಲ್ಲೊಂದು ಅವಕಾಶದ ಪೂರ್ಣ ಸ್ಥಾಪನೆಯಾಗದಿದ್ದರೆ ಚಿತ್ರ ಅಪೂರ್ಣ ಎನಿಸಬಹುದು. ಘಟಕಗಳು ಚಪ್ಪಟ್ಟೆ ನೆಲೆಯಿಲ್ಲದೆ, ಹಿಂದೆ ಮುಂದೆ ಇದ್ದಂತೆ ಭ್ರಮೆ ಹುಟ್ಟಿಸುವಲ್ಲಿ ಅವಕಾಶದ ಹಿರಿಮೆ ನಿಂತಿದೆ. ಅವಕಾಶವನ್ನು ಎರಡು ಭಾಗಗಳಾಗಿ ಚರ್ಚಿಸಬಹುದು.[೩೦]

ಚಿತ್ರದ ಚೌಕಟ್ಟಿನೊಳಗೆ ಇರುವ ಜಾಗದ ಪರಿಕರಣೆ ನಿಜವಾದುದು. ಇದು ವೀಕ್ಷಕನ ದೃಷ್ಟಿಯನ್ನು ಮುದಗೊಳಿಸುವಂತಿರಬೇಕು. ಇದಕ್ಕಾಗಿ ಹಲವು ಸರಳ ನಿಯಮಗಳನ್ನು ಹೇಳುತ್ತಾರೆ. ಚಿತ್ರದ ಯಾವುದೇ ಘಟಕವನ್ನು ಮಧ್ಯಭಾಗದಲ್ಲಿ ವೀಕ್ಷಕನ ನೇರದೃಷ್ಟಿಗೆ ಬೀಳದಂತೆ ಅಳವಡಿಸುವುದು. ಚಿತ್ರದ ಪ್ರಮುಖ ಭಾಗಕ್ಕೆ ಕೇಂದ್ರೀಕೃತವಾಗುವಂತೆ ಉಳಿದ ಘಟಕಗಳನ್ನು ರಚಿಸುವುದು ಇತ್ಯಾದಿ ಚಿತ್ರಕ್ಕೆ ಮೂರನೆ ಆಯಾಮ ದೊರಕಿಸು ಮಾಡುವ ಅವಕಾಶ ಮುಖ್ಯವಾದುದ್ದು. ಇದಕ್ಕೆಂದು ಕಲಾವಿದರು ಹಲವು ತಂತ್ರಗಳ ಮೊರೆ ಹೋಗುತ್ತಾರೆ. ಅವುಗಳಲ್ಲಿ ಮುಖ್ಯವಾದುದ್ದು ಬಣ್ಣ ಪರಿದೂರು(*perspective*) ಹಾಗೂ ಅಳತೆ. ಸಿ.ಚಂದ್ರಶೇಖರರವರ ಅಮೂರ್ತ

---

೨೯. ಆರ್. ವಿ. ನಾಂಡರಾಜ್ : ಅಬ್‌ಸ್ಟ್ರಾಕ್ಟ್ ಕಲೆ, ಪು-೧೦

೩೦. ಡಾ. ಕಾಶಿನಾಥ ಅಂಬಲಗೆ (ಅನು.) : ಸೌಂದರ್ಯಶಾಸ್ತ್ರ, ಪು-೨೨೭

ಸಂಯೋಜನಾ ಕಲಾಕೃತಿಗಳಲ್ಲಿ ನಾವು ವರ್ಣಗಳ ಸಂಯೋಜನೆಯಿಂದ ಕಲಾಕೃತಿಯಲ್ಲಿ ಪರಿದೋರ(*perspective*)ವನ್ನು ಸೃಷ್ಟಿಸಿದ್ದನ್ನು ನೋಡಬಹುದಾಗಿದೆ. ಹೀಗೆ ಸಿ.ಚಂದ್ರಶೇಖರರವರು ತಮ್ಮದೇ ಆದ ಕಲಾಕೃತಿಯೊಂದಿಗೆ ಸ್ಟಿಚ್ ಸರಣಿಯೆಂಬ ವಸ್ತು ವಿಷಯವನ್ನಾಗಿಸಿಕೊಂಡು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ತಂತ್ರ

ಕಲೆಯು ಯಾವಾಗಲು ಜನಗಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಸಾಧನೆಯಾಗಿದೆ. ಅದಕ್ಕಾಗಿ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಬಂದಿದ್ದರೆ ಸಾಲದು ತಾಂತ್ರಿಕ ನೈಪುಣ್ಯತೆಯೊಂದಿಗೆ, ಮನೋವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡರು ಚಿತ್ರ ಕಲಾಕೃತಿಯ ನೈಪುಣ್ಯತೆ ಇನ್ನು ಹೆಚ್ಚುತ್ತದೆ. ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ, ಮನಃಶಾಸ್ತ್ರಕ್ಕೆ ಕೈಬಿಡಲಾರದ ನಂಟುತನವಿದ್ದು ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು.[೭]

ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವನ ಧ್ವನಿಗೆ ಸವಾಲುಗಳಿಗೆ ತನ್ನನ್ನು ಸಮುಖನಾಗಿಸಿ ಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತ ಅವನ ಧೋರಣೆ ಅಥವಾ ನಿಲುವು(*pointo-view*)ಗಳನ್ನು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕೃತಿಯು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ.[೮] ಇಂದಿನ ಸಮಕಾಲೀನ ಕಲಾವಿದರಲ್ಲಿ ಸಿ.ಚಂದ್ರಶೇಖರರವರು ಒಬ್ಬರು. ಇವರು ಒಂದೇ ಶೈಲಿಗೆ ಬದ್ದರಾಗಿರದೇ ಕಾಲಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ತಮ್ಮ ಕಲಾಕೃತಿಯಲ್ಲಿ ಅಳವಡಿಸಿಕೊಂಡು ಕಲಾಕೃತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಂಥವರು. ಇಂದು ಸ್ಟಿಚ್ ಸರಣಿಯ ಮೇಲೆ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಶೈಲಿ

ಸೃಷ್ಟಿಯಲ್ಲಿರುವ ಪ್ರತಿಯೊಂದು ಜೀವಿಗಳಲ್ಲಿಯೂ, ಅವುಗಳಲ್ಲಿಯೂ ಅವುಗಳಿಗೆ ಚಲನ ವಲನಗಳನ್ನು ನಾವು ನೋಡಿದಾಗ, ಅದು ನಮಗೆ ಶೈಲಿಯೆಂಬಂತೆ ತೋರುತ್ತದೆ. ಇದು ಸಹಜ. ಒಬ್ಬರು ಇನ್ನೊಬ್ಬರ ಹಾಗೆ ನಟನೆ ಮಾಡುವುದಾಗಲಿ ಇನ್ನೊಬ್ಬರ ಚಲನ–ವಲನಗಳನ್ನು ತಾವು ಬಳಸಿಕೊಂಡರಾಗಲಿ ಮಾಡಿದರೆ ಏನಪ್ಪಾ ಇವನು ಅವನ ಸ್ಟೈಲ್ ಹೊಡೆದಿದ್ದಾನೆಯಲ್ಲ ಎಂದು ಉದ್ಗರಿಸುವುದು ಸಹಜ. ಇದು ಕಲಾವಿದನಿಗೂ ಬಿಟ್ಟಿಲ್ಲ. ಒಬ್ಬ ಕಲಾವಿದನ ಕಲಾಕೃತಿಗಳನ್ನು ಅನುಕರಣೆ ಮಾಡುವಾಗ ಅದು ಕಲಾಕೃತಿಯ ಶೈಲಿಯನ್ನು ಬಳಸಿಕೊಂಡಿದ್ದಾನೆ ಎನ್ನುವುದು.

ಒಬ್ಬ ಕಲಾವಿದನ ಕಲಾಕೃತಿಗಳನ್ನು ಅನುಕರಣೆ ಮಾಡುವಾಗ ಅದು ಕಲಾಕೃತಿಯ ಶೈಲಿಯನ್ನು ಬಳಸಿಕೊಂಡಿದ್ದಾನೆ ಎನ್ನುವುದು ಬಹುಶಃ ಈ ಶೈಲಿಯೆನ್ನುವುದು ಒಬ್ಬರಿಂದ ಇನ್ನೊಬ್ಬರು ಪ್ರಭಾವಿತರಗೊಂಡಾಗ ಹುಟ್ಟಿಕೊಳ್ಳುವುದು. ಇದುವೇ ಮುಂದೆ ಹೊಸತನವನ್ನು ಕಂಡುಕೊಳ್ಳಲು ಸಹಜ ಮಾರ್ಗ ಮಾಡಿಕೊಳ್ಳಲು ಆನುವು ಮಾಡಿಕೊಡುತ್ತದೆ. ಇಂದು ಶೈಲಿಯು ಎಷ್ಟು ಪ್ರಭಾವ ಬೀರಿದೆಯೆಂದರೆ ಇದು ಕಲಾವಿದನ ಕಲಾಕೃತಿಯ ಮೇಲಿನ ಸಹಿಯಂತೆ ತೋರುತ್ತದೆ. ಅಂದರೆ ಕಲಾಕೃತಿಯನ್ನು ನೋಡಿದ ಕೂಡಲೇ ಇದು ಇವನದೇ ಕಲಾಕೃತಿಯೆಂದು ನಾವು ಸುಲಭವಾಗಿ ಹೆಸರಿಸಬಹುದಾದಷ್ಟು ಪ್ರಧಾನವಾಗಿ ರೂಪಗೊಂಡಿದೆ. ಇಂದು ಎಷ್ಟು ಕಲಾವಿದರು ಈ ಅಂಶವನ್ನು ಗಮನಿಸಿಯೇ ಕಲಾಕ್ರಿಯೆಯಲ್ಲಿ ತಮ್ಮನ್ನು ನಿರಂತರವಗಿ ತೊಡಗಿಸಿಕೊಂಡಿದ್ದಾರೆ. ಬಹುಶಃ ಇದು ಪಾಶ್ಚಾತ್ಯರ ಪ್ರಭಾವದಿಂದ ಹೆಚ್ಚು ಬೆಳಕಿಗೆ ಬಂದಿದ್ದು ಕಂಡುಬರುತ್ತದೆ. ಪ್ರತಿಯೊಂದು ಪ್ರದೇಸಕ್ಕು ತನ್ನದೇ ಆದ ಚಿತ್ರ ಬರೆಯುವ ಶೈಲಿ ಇರುವುದನ್ನು ಕಾಣುತ್ತೇವೆ. ಒಂದು ಪ್ರದೇಶ ಅಥವಾ ಸಮುದಾಯದ ಚಿತ್ರಗಾರರಲ್ಲಿ ಅನೇಕರು ತಿಳಿದೋ ತಿಳಿಯದೆಯೋ ಆ ಪ್ರದೇಶದ ವಿಶಿಷ್ಟವಾದ ಶೈಲಿಯ ಅನುಕರಣೆ ಮಾಡುತ್ತಾರೆ. ಅಥವಾ ಅದರಿಂದ ಬಹಳ ಪ್ರಭಾವಿತರಾಗುತ್ತಾರೆ. ಹಾಗೆಯೇ ಒಂದೊಂದು ಉಪಸಂಸ್ಕೃತಿಯೂ ತನಗೆ ವಿಶಿಷ್ಟವಾಗಿ ಚಿತ್ರಶೈಲಿಯನ್ನು ಹೊಂದಿರುವ ಸಾಧ್ಯತೆ ಉಂಟು.

ಭಾರತದಲ್ಲಿ ನವ್ಯ ಕಲೆ ಗಣನೀಯವಾಗಿ ಕಂಡುಬರಲು ಕಾರಣ ಬ್ರಿಟಿಷ್ ಮೂಲ ಕಲಾ ಶಿಕ್ಷಣವೆಂದು ಹೇಳಬಹುದು. ಇಲ್ಲಿ ಕಲಾ ಶಿಕ್ಷಣ ಪ್ರಾರಂಭವಾದುದು ಸರ್.ಜೆ.ಜೆ.ಸ್ಕೂಲ್ ಆಫ್ ಆರ್ಟ್ ಮುಂಬೈ ಮತ್ತು ಮದ್ರಾಸ್, ಕಲ್ಕತ್ತಾ ಕಲಾ ಶಾಲೆಗಳಲ್ಲಿ ಅಲ್ಲಿನ ಆಗೀನ ಪ್ರಾಚಾರ್ಯರು ಹೆಚ್ಚಾಗಿ ಪಾಶ್ಚಿಮಾತ್ಯರು. ಅವರ ಒಲವೆಲ್ಲಾ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಪ್ರಸಾರ ಮಾಡಲಾಗಿತ್ತು. ಹೀಗಾಗಿ ಪಠ್ಯಕ್ರಮದಲ್ಲಿ ಪಾಶ್ಚಾತ್ಯ ಸಂಸ್ಕರತಿಯ ಈ ಎಲ್ಲಾ ಕಲಾಶೈಲಿಗಳು ಕಾಣಿಸಿಕೊಂಡವು. ಅಲ್ಲಿ ಕಲಾ ಶಿಕ್ಷಣವನ್ನು ಪಡೆದ ಎಲ್ಲಾ ಕಲಾವಿದರು ಸಹಜವಾಗಿ ಪಾಶ್ಚಿಮಾತ್ಯರ ಹೊಸ ಆಕರ್ಷಣೆಯ ಕಲಾಶೈಲಿಗಳಿಗೆ ಒಳಗಾದರು.[೧೦] ಬಹುಬಾಲು ಕಲಾವಿದರು ಪಾಶ್ಚತ್ಯ ಕಲಾಶೈಲಿಗಳನ್ನು ತಮ್ಮ ಕಲಾ ಕೃತಿಗಳಲ್ಲಿ ತರುವ ಪ್ರಯತ್ನವನ್ನು ನಡೆಸಿದರು.

ಜ್ಯೋತಿ–*The light*

ನಮ್ಮ ಭಾರತದ ಪ್ರತಿಭಾನ್ವಿತ ಚೈತನ್ಯಮಯಿ ಕಲಾವಿದರಾಗಿ ಶ್ರೀಯುತ ಸಿ.ಚಂದ್ರಶೇಖರ ಅವರು ಗುರುತಿಸಲ್ಪಟ್ಟಿದ್ದಾರೆ. ಅವರ ಕಲಾಕೃತಿಗಳಲ್ಲಿ ಹುಡುಕುವ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಅದಕ್ಕೆ ಸಾಕ್ಷಿ ಭೂತವಾದ ಅವರ ಇತ್ತೀಚಿನ ಕಲಾಸ್ವಪ್ನ ಎನಿಸಿದೆ. 'ದಿ

೧೦. ಪ್ರೊ. ಎಸ್. ಸಿ. ಪಾಟೀಲ : ದೃಶ್ಯಕಲಾ ಸಂವೇದನೆ. ಪು-೨

ಲೈಟ್, ಸರಣಿ ಚಿತ್ರಗಳಲ್ಲಿ ಎನ್ನಬಹುದು. ಇಂತಹ ಅಪರೂಪದ ಕಾಗದದ ಮೇಲಿನ ಡಿಜಿಟಲ್ ಪ್ರಿಂಟ್ ಮುದ್ರಣ ಚಿತ್ರಗಳಲ್ಲಿ ಅವರ ವಸ್ತುವಾದ 'ಬೆಳಕು' ವೈವಿಧ್ಯಮಯ ವಿಭಿನ್ನ ಸಾಂಕೇತಿಕವಾಗಿ ಪ್ರಜ್ವಲಿಸತೊಡಗಿದೆ.

'ಪ್ರಜ್ವಲ ಬೆಳಕು' – ಇಲ್ಲಿ ಬೆಳಕಿನ ಪ್ರಜ್ವಲತೆಯ ಅನಂತತೆಯ ದಿಕ್ಕಿನಲ್ಲಿ ಪ್ರಹರಿಸುವುದು ಕಂಡುಬರುತ್ತದೆ. ಬೆಳಕು ಪ್ರಮುಖ ಅಂಶವಾಗಿದ್ದು ಜೀವನದ ಒಂದು ಅಂಶ ಎನಿಸಿದೆ. ಸಾಂಕೇತಿಕವಾಗಿ ಈ ಜೈವಿಕ ಬೆಳವಣಿಗೆಯಲ್ಲಿ ಜೀವನವೇ ಎಲೆಯಾಗಿದ್ದು, ಹೂಗಳಾಗಿ, ಹಣ್ಣುಗಳಾಗಿ ಬೀಜವಾಗಿ ಮುಂದಿನ ಬದಲಾವಣೆಗೆ ಸಾಂಕೇತಿಕವಾಗಿ ಒಡ್ಡಿಕೊಂಡಿದೆ.

ಬೆಳಕು ಒಂದು ಸಾಂಕೇತಿಕ ಅರ್ಥದಲ್ಲಿ ಮೊಟ್ಟೆಯ ಆಕಾರದಲ್ಲಿ ಪ್ರಸ್ತುತವಾಗಿದ್ದು, ಪ್ರಾಣಿಯ ಬೆಳವಣಿಗೆಯ ಪ್ರತಿಮೆಯಾಗಿ ಇಲ್ಲಿ ಕಂಡುಬರುತ್ತದೆ. ಹಾಗೂ ಮಾನವನ ಜೀವನದ ಬೆಳವಣಿಗೆಯಲ್ಲಿ ಇದೇ ಸಂಕೇತ ಪ್ರಧಾನತೆಯೊಂದಿಗೆ ಮುಂದುವರೆದಿದ್ದನ್ನು ಗಮನಿಸಬಹುದು. ಅಂತಿಮ ಘಟ್ಟದಲ್ಲಿ 'ಬೆಳಕು ಎಂಬುದು ಪ್ರಖರವಾದ ತೇಜೋಮಯವಾದ ಬುದ್ಧನ ಮುಖದ ಆಕೃತಿಯಾಗಿದ್ದು ಜ್ಞಾನೋಧಯದ ಪ್ರತಿಫಲನತೆ ಮತ್ತು ವಿಶ್ವಮಾನ್ಯವಾದ ಸಾಮಾಜಿಕ ಆಧ್ಯಾತ್ಮಿಕ ಧನಾತ್ಮಕ ಮೌಲ್ಯಗಳನ್ನು ಇಲ್ಲಿ ಎತ್ತಿ ಹಿಡಿಯುವಂತೆ ಅದರ ಕಲಾಕೃತಿಗಳು ಬಿಂಬಿಸುತ್ತವೆ. ಮತ್ತೊಂದು ಹಂತದಲ್ಲಿ ಬೆಳಕು ಎಂಬ ಚಿತ್ರವಸ್ತುವನ್ನು ಸ್ವೀಚ್ ಅಥವಾ ಹೊಲಿಗೆ ಎಂಬ ಅರ್ಥದಲ್ಲಿ ಸಾಂಕೇತಿಕವಾಗಿ ಸೂಚಿಸಿದ್ದಾರೆ.

ಹೊಲಿಗೆ ಎಂದರೆ ಸೇರಿಸು, ಹೊಂದಿಸು, ಬಂಧಕವಾಗಿಸು ಎಂಬ ಅರ್ಥ ಬರುತ್ತದೆ. ಈ ಹೊಲಿಗೆ ಸೇರಿಸುವಿಕೆಗಳು ಮತ್ತೊಂದು ಮೂಲ ಅಂಶವಾಗಿ ವಿಶ್ವದ ಅನಂತತೆಯ ಬೆಳವಣಿಗೆಯಲ್ಲಿ ಗುರುತಿಸಿಕೊಳ್ಳುತ್ತದೆ. ಇದು ಆರಂಭವಾಗುವುದೇ ದೊಡ್ಡ ಆಸ್ಫೋಟದೊಂದಿಗೆ ಈ ಪ್ರಕ್ರಿಯೆಯಲ್ಲಿ ಎಲ್ಲಿ ಎಲೆಕ್ಟ್ರಾನ್ ಅಣುವಿಕರಣಗಳು ಒಂದಕ್ಕೊಂದು(ನೇಯ್ದುಂತೆ) ಹೊಲಿದಂತೆ ಇದ್ದು ನಂತರ ಒಂದು ಎಲೆಕ್ಟ್ರಾನ್/ಪ್ರೋಟಾನ್ ಆಗಿ ರೂಪುಗೊಳ್ಳುತ್ತದೆ.[೧೧]

ಗೆಲಾಕ್ಸಿ–ಸೂರ್ಯ–ಗ್ರಹಗಳ ನಮ್ಮ ಭೂಮಿಯಂತೆ ವಸ್ತುಗಳು ಆಕಾಶಕಾಯಗಳು ಕಂಡು ಬರುತ್ತದೆ. ನೂತನ(*Physical theory*) ಭೌತಶಾಸ್ತ್ರ 'ಅದ್ಭುತವಾದ ತೇಲುವ/ನೇತಾಡುವ ಆಕಾಶ ಕಾಯಗಳು *super strings* ಇವು ಇಂದಿಗೆ ಸೃಜನಾತ್ಮಕತೆಗೆ ಪ್ರೇರಣೆ ನೀಡುತ್ತದೆ. ಈ ಹೊಲಿಗೆಯು ಚೈತನ್ಯ ಅಂಶವಾಗಿ ಜೀವಿಗಳ ವ್ಯವಸ್ಥೆಯನ್ನು ಜೀವಂತಿಗೆಗಳೊಂದಿಗೆ ಹಾಗೂ ಬ್ಯಾಕ್ಟಿರಿಯಾಗಳನ್ನು ಮಾನವರೊಂದಿಗೆ ಬಂಧಿಸಿಟ್ಟವು.[೧೨] ಹೊಂದಿಸುವ ಕ್ರಿಯೇ ಇಲ್ಲಿ ಸೃಜನಾತ್ಮಕತೆಗೆ ಪ್ರೇರಣೆ ನೀಡುತ್ತದೆ.

೧೧. Arya Acharya : Images and Impression - A Catalough of C Chandrashekar., P.No. 3

೧೨. ಅದೇ

ಮಾನವನ ಸಾಮಾಜಿಕ ಹಂತದಲ್ಲಿ 'ಹೊಲಿಗೆ ಎಂಬುದು ವೈರಸ್‌ಗಳ ಮತ್ತು ಸಾಮಾಜಿಕ ಸ್ಥಿರತೆಯ ಬಂಧಕವಾಗುತ್ತದೆ. ನಂಬಿಕೆಗಳು ಹಾಗೂ ಆಲೋಚನೆಗಳ ಒಂದು ಆರೋಗ್ಯಕರ ಬೆಳವಣಿಗೆ ಹಿನ್ನೆಲೆಯಲ್ಲಿ ಮಾನವನ ಸಾಮಾಜಿಕ ಹಂತ ಹೊಲಿಗೆಯೊಂದಿಗೆ ವೈವಿಧ್ಯ ಸಾಮಾಜಿಕ-ನಂಬಿಕೆಗಳ ಆಲೋಚನೆಗಳು ಒಂದು ಆರೋಗ್ಯಕರ ಐಕ್ಯತೆ ಹೊಂದಿದೆ. ಇದು ಮುಂದೆ ಜ್ಞಾನದ ಬೆಳಕು, ಜ್ಞಾನೋದಯದ ಕಡೆಗೆ ತಿರುಗುತ್ತದೆ. ಬುದ್ಧ ಮತ್ತು ಇತರ ಸನ್ಯಾಸಿಗಳು ಈ ಜ್ಞಾನದ ಬಗ್ಗೆ ಪ್ರಖರ ಬೆಳಕು ಚೆಲ್ಲಿದ್ದಲ್ಲಿದೆ. ಇದರ ಕಡೆ ಹೆಚ್ಚು ಗಮನ ಹರಿಸಿದರಿಂದ ಸಾಧ್ಯವಾಗಿದೆ. ಆದ್ದರಿಂದ ಹೊಲಿಗೆ ಪದ ಹೆಚ್ಚು ವಿಸ್ತಾರವಾಗಿದ್ದು ಇಡೀ ವಿಶ್ವದ ಆಗುಹೋಗುಗಳನ್ನು ಅನುಸರಿಸುವಂತಿದೆ. ಹಾಗೆಯೇ 'ಬೆಳಕು, ಸುತ್ತಲೂ ಪ್ರವಹಿಸಿ ಅದೇ ಅರ್ಥ ನೀಡುವಂತಿದೆ.

ಇಂತಹ ಹೊಲಿಗೆ ಜನವಸ್ತು ಚಿತ್ರದಲ್ಲಿ ಪ್ರಾಧಾನ್ಯತೆ ಪಡೆದಿದೆ. ಕೇಂದ್ರೀಕೃತ ಮೊಟ್ಟೆ ಹೊಟ್ಟೆ ಮೇಲೆ ಹೊಲಿಗೆ ಹೊಂದಿದ್ದು ಮುಖವೊಂದರ ಮೇಲೆ ಹೊಲಿಗೆಗಳು ಕಾಣುತ್ತವೆ. ಹೊಲಿಗೆ ಮತ್ತು ಬೆಳಕಿನ ಆಲೋಚನೆಗಳು ಪ್ರಧಾನವಾಗಿದ್ದು ಚಂದ್ರಶೇಖರರವರ ೨೦೦೮ರ ಕಲಾಕೃತಿ ಅಂದಿನ ಡಿಜಿಟಲ್ ಪ್ರಿಂಟ್‌ಗಳಲ್ಲಿ ಚಿನ್ನದ ಹೊಲಿಗೆ ಮತ್ತು ತೇಪೆ ಹೆಸರಿನ *Golden stitch & Priet* ಕಾಣಬಹುದು. ಬ್ರೋಮೈಡ್ ಮುದ್ರಣಗಳಲ್ಲಿ ಮತ್ತೆ ಚಿಗುರಿತು ಎಂಬ ಚಿತ್ರವಸ್ತುಗಳಲ್ಲಿ ಈ ಅಂಶ ಅಡಗಿರುವುದು ಕಂಡುಬರುತ್ತದೆ. ಸಿ.ಚಂದ್ರಶೇಖರರವರ ಸೃಜನ ಶೀಲತೆಯ ಕಲೆಯಲ್ಲಿ ಹೊಸ ಸಾಧ್ಯತೆಗಳು ಅವರ ವಿಮರ್ಶಾತ್ಮಕ ವಯಕ್ತಿಕ ಸೃಜನಶೀಲತೆಯ ಪ್ರಭಾವಗಳಿಮದ ಎನ್ನಬಹುದು. ಅವರ ಬಾಲ್ಯವಸ್ಥೆಯಿಂದಲೂ ನಂತರದ ಅವರ ಕಲಾಭ್ಯಾಸ ಶಾಂತಿ ನಿಕೇತನದಲ್ಲಿ ನಡೆದ ಕಾರಣದಿಂದ ಅವರ ಪ್ರತಿಭೆಯು ಆದುನಿಕ, ಆಧುನಿಕೋತ್ತರ ಕಲಾ ವಲಯದಲ್ಲಿ ಕಲಾ ಅಭ್ಯಾಸದ ಸಾಧ್ಯತೆಗಳಿಂದಾಗಿ ಮಾತ್ರ ಉನ್ನತ ಮಟ್ಟದಲ್ಲಿ ಆ ಕಲಾಕೃತಿ ಮೂಡಿಸಲು ಸಾಧ್ಯವಾಗಿದೆ. ಅವರು ಆರೋಗ್ಯಪೂರ್ಣವಾಗಿ ಸಾಂಪ್ರದಾಯಕತೆ, ಆಧುನಿಕತೆ ಅಂಶಗಳನ್ನು ಬೆಸೆದು-ಹೊಂದಿಸಿ ಕೃತಿ ರಚಿಸಲು ಸಾಧ್ಯವಾಗಿದೆ. ಹಾಗೆ ಇದೇ ಸಮಯದಲ್ಲಿ ಚಂದ್ರಶೇಖರರವರಿಗೆ ಸಂಪ್ರದಾಯ/ಆಧುನಿಕತೆಯ ಋಣಾತ್ಮಕ ಅಂಶಗಳು ಪ್ರಾರಂಭಿಕ ಸಾಮಾಜಿಕ ವ್ಯವಸ್ಥೆಯಲ್ಲಿ ತೃಪ್ತಿದಾಯಕ ಅಂಶಗಳು ಆಧುನಿಕ/ಆಧುನಿಕೋತ್ತರ ನಿರಜನವಾದ(*deconstruction*)ದ ಕೇಂದ್ರೀಕೃತ ಅಂಶಗಳನ್ನು ಅವರು ಅರ್ಥೈಸಿಕೊಂಡಿದ್ದರು (*Virtail reality*). ನಿಜದ ಮೂಲ ಮತ್ತು ಋಣಾತ್ಮಕ ಅಂಶಗಳು ಸಾಬೀತು ಮಾಡಿದೆಂದರೆ, 'ಭಾಷೆಯ ಅರ್ಥ ಕಳೆದುಕೊಳ್ಳುತ್ತದೆ.

ಚಂದ್ರಶೇಖರ ಒಬ್ಬ ಅಪರೂಪದ ಕಲಾವಿದರು. ವಿವಿಧ ಕಲಾ ಮಾದ್ಯಮಗಳ ಮೇಲೆ ಉತ್ತಮ ಒಡಿತ ಸಾಧಿಸಿದ್ದ ಕಲಾವಿದರು. ಅವರಿಗೆ ಎನ್‌ಗ್ರೇವಿಂಗ್, ಲಿನೋಕಟ್, ಬ್ರೋಮೈಡ್, ಡಿಜಿಟಲ್, ಮುದ್ರಣಗಳು, ತಂತ್ರಗಾರಿಕೆಗಳು ಮುಂತಾದ ಈ ಮಾಧ್ಯಮಗಳು ಚೆನ್ನಾಗಿ ಅರಿತು ಮಾಡಿಕೊಳ್ಳುವುದು ತಿಳಿದಿದ್ದು ಅವರ ಆರಂಭಿಕ ಕಲಾ ಜೀವನದಿಂದ(ಯುವ ಪೀಳಿಗೆಯಿಂದ)

ಅವರಿಗೆ ಛಾಯಾಚಿತ್ರಗಾರಿಕೆ/ಫೋಟೋಗ್ರಾಫಿ ಕಡೆ, ಹೆಚ್ಚಿನ ಆಸಕ್ತಿ ಇತ್ತು. ಡಿಜಿಟಲ್ ಪ್ರಿಂಟ್ ತಂತ್ರಗಾರಿಕೆಗಳು ಅವರ ವಿವಿದ ಕಲಾಭ್ಯಾಸಗಳನ್ನು ಹೊಲಿಗೆ(*stitch*) ವಿವಿಧ ಕಲಾಪ್ರಕಾರಗಳಲ್ಲಿ ಅವರ ಅಭ್ಯಾಸಗಾರಿಕೆಯಲ್ಲಿ ಆಸಕ್ತಿ ತೋರಿದ್ದಾರೆ. ಅವರ ಡಿಜೆಟಲ್ ಮುದ್ರಣದ ತಂತ್ರಗಾರಿಕೆಯಲ್ಲಿ ಹಾಗೂ *Stitching* ಇತರೆ ಕಲಾ ಮಾಧ್ಯಮಗಳನ್ನು ದುಡಿಸಿಕೊಳ್ಳುವಲ್ಲಿ (*Stitching*) ಈ ಹೊಲಿಗೆ ಪದದ ಅರ್ಥ ವಸ್ತು ನಿಷ್ಪವಾಗಿದೆ. ಇದರೊಂದಿಗೆ ಅಪರೂಪದ ಸೌಂದರ್ಯ ಪ್ರಜ್ಞೆ ಅರಿವು ಹಾಗೂ ಅದರ ಒಳಗೆ ಹಾಗೂ ಹೊರಗೆ ಅಂತರದ ಅರಿವು ಕಂಡುಬರುತ್ತದೆ. ಇವು ವೈಶಿಷ್ಟ್ಯಪೂರ್ಣ ಸೃಜನಾತ್ಮಕತೆಯನ್ನು ಚಂದ್ರಶೇಖರರವರ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

ಚಂದ್ರಶೇಖರ ಅವರು ಮೂಲತಹ ಆಶಾವಾದಿ ವ್ಯಕ್ತಿಗಳಾಗಿದ್ದಾರೆ. ಅವರು ಅವರ ಕೃತಿಗಳಲ್ಲಿ ಮಾನವನ ಕುರಿತಾದ ತೊಡಕುಗಳು ಅವರ ಕೃತಿಗಳಲ್ಲಿ ಬಿಂಬಿತವಾಗುತ್ತದೆ ಎಂದರೆ ಚಮತ್ಕಾರಯುತವಾಗಿ ನೋಡುವವರೆಂದು ತೆಗೆದುಕೊಳ್ಳುವ ಬಗೆಯು ಎಲೆ, ಮೊಟ್ಟೆ, ನಂತರದ ಬುದ್ಧನ ಅಕೃತಿಗೆ ತಿರುಗುವ ಶೈಲಿ ಉತ್ತಮವಾಗಿದೆ.

ಮನಸ್ಸಿನ ಹಿನ್ನೆಲೆ ಪ್ರತಿಮೆ ಮತ್ತು ಪ್ರಭಾವ *Image and impressian*

ಈ ವಿಶ್ವವು ಮಾನವನಿಗೆ ಎಲ್ಲವನ್ನು ಕರುಣಿಸಿದೆ. ಮಾನವ ಸಮಾಜ ಎಂಬುದು ಎಲ್ಲ ವಿಷಯಗಳ ಸಾಗರ ಎನ್ನಬಹುದು. ವೈಯಕ್ತಿಕ ಅಭಿರುಚಿ, ಆಸಕ್ತಿಗಳು ವಿಭಿನ್ನವಾಗಿರುತ್ತದೆ. ಮಾನವ ಮಾನಸಿಕ ಆಲೋಚನೆಗಳು ಅವನ ಗ್ರಹಿಇಎಗೆ ಆಯ್ಕೆಗಳ ಎಲ್ಲವೂ ಆಯಾ ವ್ಯಕ್ತಿಯ ಆಸಕ್ತಿಗೆ ಸಂಬಂಧಿಸಿರುತ್ತವೆ. ಒಬ್ಬ ಕಲಾವಿದನಿಗೆ ಒಂದು ಶಿಲೆ ಸಹ ಅಮೂಲ್ಯವಾದ ವಸ್ತುವಾಗಿದೆ. ಹಾಗೂ ಸುಂದರ ಶಿಲ್ಪ ಎನಿಸುತ್ತದೆ. ಆದರೆ ಅದೇ ಶಿಲೆ ಒಬ್ಬ ಸಾಮಾನ್ಯ ವ್ಯಕ್ತಿಗೆ ಒಂದು ಸಾಧಾರಣ ಕಲ್ಲು ಮಾತ್ರ ಆಗಿರುತ್ತದೆ. ಕಲಾವಿದ ತನ್ನ ಕಲೆಯ ಮೂಲಕ ಅನೇಕ ವಸ್ತು ವಿಷಯಗಳ ಸಂಬಂಧವನ್ನು ಹುದುಗಿಸುತ್ತಾನೆ[೧೩] ಎಂದರೆ *Stitch* ಮಾಡುತ್ತಾನೆ. ಅದೇ ಸಮಾಜಕ್ಕೆ ಇದು ಪ್ರಮುಖವಾಗಿ ಬೇಕಾಗಿದೆ ಎನ್ನಬಹುದು. ಪ್ರಪಂಚದ ಎಲ್ಲ ಸಂತಸಗಳು ಬಂದಿಲ್ಲ ಒಂದು ಉತ್ತಮ ವಿಷಯಗಳನ್ನು ಬೋಧಿಸುತ್ತಿರುತ್ತದೆ. ಇದರಿಂದಾಗಿ ಕಲಾವಿದರು ಸಂಗೀತಗಾರರು. ತತ್ವಜ್ಞಾನಿಗಳ ಜೀವನದಲ್ಲಿ ಅಸಾಮಾನ್ಯವಾದ ಸಂಗತಿಗಳು ಜರುಗುತ್ತದೆ.

ವಿಜ್ಞಾನ ಮತ್ತು ತಂತ್ರಗಾರಿಕೆಗಳು ವಿಶ್ವದಲ್ಲಿ ಪವಾಡವನ್ನೆ ಸೃಷ್ಟಿಸಿದರೂ ಸಹ ಉತ್ತಮ ಮನುಷ್ಯನಾಗಲು ಮಾನವೀಯ ಅಂಶಗಳು ಪ್ರಮುಖವಾಗಿರುತ್ತವೆ. ಕಲಾವಿದ ಮಾತ್ರ ಹೊಸತನ್ನು ಹೊಸತನದೊಂದಿಗೆ ಸೃಜನಾತ್ಮಕವಾಗಿ ತನ್ನದೇ ಆದ ಜೀವನದ ಅನುಭವಗಳೊಂದಿಗೆ ಸೃಷ್ಟಿಸುತ್ತಾನೆ. ನಾನು ನನ್ನ ಜೀವನದಲ್ಲಿ ಅನುಭವಿಸಿದ್ದನ್ನು ಕಲಿತದ್ದು ಅಪರೂಪದ ವಿಷಯಗಳಾಗಿರುತ್ತದೆ. ನಾನು ನನ್ನ ಅನುಭವ ಆಂತರಿಕ ದೃಷ್ಟಿಯಿಂದ ಗ್ರಹಿಸಿದ ಅಂಶಗಳನ್ನು ಒಂದು ನಿರ್ದಿಷ್ಟ

೧೩. Arya Acharya : Images and Impression - A Catalough of C Chandrashekar., P.No. 4

ಅಕಾರಕ್ಕೆ ತಂದು ನೀಡಿದಾಗ ಅಂತಹ ಕೃತಿಗಳು ಮಹಾನ್ ಎನಿಸಿಕೊಳ್ಳುತ್ತದೆ.[೧೩] ಅವರ ಜೀವನದ ಪ್ರತಿಯೊಂದು ಘಟನಾವಳಿಗಳು ಅವರ ಕಲೆಯಲ್ಲಿ ಆಳವಾದ ಗುರುತರವಾದ ಪ್ರಭಾವ ಮೂಡಿಸಿದೆ. ಜೀವನದ ಯಾತ್ರೆಯಲ್ಲಿ ಅನೇಕ ಅಮೂಲ್ಯವಾದ ಪಾಠಗಳನ್ನು ಕಲಿಯಲು ಸಾಧ್ಯವಾಗಿದೆ. ಇಲ್ಲಿ ಕಲಾವಿದನಿಗೆ ಕಲೆಯೇ ಒಂದು ಆಭರಣ ಮಾತ್ರ ಆತನಿಗೆ ಸರ್ವಸ್ವವೂ ಕಲೆಯಾಗಿರುತ್ತದೆ.

ಸಮಾಜದಲ್ಲಿನ ಸಾಮಾಜಿಕ–ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಸಾಮಾನ್ಯವಾಗಿ ಸ್ಪರ್ಧಾತ್ಮಕ ಮತ್ತು ಡೋಲಾಯಮಾನವಾಗಿರುತ್ತದೆ. ಸಮಾಜದ ಈ ವ್ಯವಸ್ಥೆಗಳ ನಡುವೆ ಬದುಕುವಾಗ ಅನೇಕ ಸಂಗತಿಗಳ ಕುರಿತು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ.[೧೪] ಅದು ಸಹ ಚಂದ್ರಶೇಖರರವರ ಕೃತಿಯಲ್ಲಿ ಉತ್ತಮ ಪ್ರಭಾವ ಬೀರಿದೆ ಎನ್ನಬಹುದು.

ಸಮಾಜದಲ್ಲಿ ಅನೇಕ ಬದಲಾವಣೆ ಬಯಸುತ್ತೇವೆ. ಈ ಬದಲಾವಣೆಗಳು ಆರೋಗ್ಯಕರ ವಾಗಿರಬೇಕೆಂದರೆ ನಾವಿರುವುದು ಅಸಂಖ್ಯಾತ ವೈವಿಧ್ಯ ಸಂಸ್ಕೃತಿಕ ಸಮಾಜದಲ್ಲಿ. ಇದು ಚಂದ್ರಶೇಖರ ಅವರ ಆಸೆಯಾಗಿದ್ದು ಅವರ ಕಲಾಕೃತಿಗಳೆಲ್ಲ ಸೌಂದರ್ಯ ಪ್ರಜ್ಞೆಯ ಮೌಲ್ಯಗಳನ್ನು ಒಳಗೊಂಡಂತೆ ಮಾತನಾಡುತ್ತವೆ ಎಂದು ಬಲವಾಗಿ ನಂಬಿದ್ದಾರೆ.

ಸಿ. ಚಂದ್ರಶೇಖರರವರು ತಮ್ಮ ಕಲಾ ಬದುಕಿನುದ್ದಕ್ಕೂ ಹಲವಾರು ಸಾಧನೆ ಮಾಡಿದ್ದಾರೆ. ಅದರಂತೆ ಕಲೆಗೆ ಪೂರಕವಾಗಿರುವ ಇನ್ನಿತರ ಸಾಂಸ್ಕೃತಿಕ, ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ಗುರ್ತಿಸಿಕೊಂಡಿದ್ದಾರೆ. ಇವರ ಕಲಾಆಯಾಮಗಳಾದ, ಚಿತ್ರ ಶಿಲ್ಪ, ಗ್ರಾಫಿಕ್, ಡಿಜಿಟಲ್ ಫೋಟೋಗ್ರಾಫಿ, ಎಚ್ಚಿಂಗ್ ಮುಂತಾ ಮಾಧ್ಯಮಗಳನ್ನು ಬಳಸಿಕೊಂಡು ತಮ್ಮ ಕ್ರಿಯಾಶೀಲತೆಗೆ ತಕ್ಕ ಹಾಗೆ ವಸ್ತುಗಳನ್ನು ಆಯ್ಕೆಮಾಡಿಕೊಂಡು, ಸಾಮಾಜಿಕ ನೆಲೆಗಟ್ಟಿನ ಮೇಲೆ ಕೃತಿಗಳನ್ನು ರಚಿಸಿ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾ ಪ್ರದರ್ಶನದೊಂದಿಗೆ, ಉಪನ್ಯಾಸ, ಪ್ರಾತ್ಯಕ್ಷಿಕೆ, ಚರ್ಚೆ, ಸಂವಾದ, ಇವುಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. ಸದಾ ಚಿಂತನಶೀಲರಾದ ಇವರು ನಾಡಿನ ಚಳುವಳಿಗಳಾದ, ಗೋಕಾಕ ಚಳುವಳಿ, ಚಿತ್ರಯಾತ್ರೆ, ಕಲಾಯಾತ್ರೆ, ಕಲಾಮೇಳ ಹೀಗೆ ವಿವಿಧ ಸಂಘಟನೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ರಾಜ್ಯದ ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳಲ್ಲಿ ಸದಸ್ಯರಾಗಿ ಅಧ್ಯಕ್ಷರಾಗಿ, ನಿರ್ದೇಶಕರಾಗಿ, ಸಲಹಾಗಾರರಾಗಿ, ಸಂಚಾಲಕರಾಗಿ, ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಸದಸ್ಯರಾಗಿ, ಸ್ನಾತಕೋತ್ತರ ಕೇಂದ್ರಗಳಲ್ಲಿ ಅಧ್ಯಯನ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ತಮ್ಮ ಬದುಕಿನುದ್ದಕ್ಕೂ ಹಲವಾರು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿ ಯಶಸ್ವಿ ಗೊಳಿಸಿದ್ದಾರೆ. ಈ ಕಲಾವಿದರ ಸಾಧನೆಗಳನ್ನು ಮನಗಂಡು ಸರಕಾರ, ಸಂಘಸಂಸ್ಥೆಗಳು ಪ್ರಶಸ್ತಿ,

೧೩. Arya Acharya : Images and Impression - A Catalough of C Chandrashekar., P.No. 4

೧೪. ಸಂದರ್ಶನ : ಸಿ. ಚಂದ್ರಶೇಖರ ಅವರೊಂದಿಗೆ, ದಿ.೨೦.೦೪.೨೦೧೬

ಸನ್ಮಾನ, ಗೌರವ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರ ಸಾಧನೆಯ ಪಟ್ಟಿಯನ್ನು ಈ ಕೆಳಗಿನಂತೆ ದಾಖಲಿಸಬಹುದಾಗಿದೆ.

* ದಿ. ಡೆಕೋರೇಟಿವ್ಸ್ ಎಂಬ ಚಿತ್ರಕ್ಕೆ, ವಿದ್ಯಾರ್ಥಿ ಜೀವನದಲ್ಲಿಯೇ ಪ್ರಶಸ್ತಿಗಳಿಸಿದೆ.
* ಕರ್ನಾಟಕ ಸರಕಾರವು ಸಿ.ಚಂದ್ರಶೇಖರರವರ ಸಾಧನೆಯನ್ನು ಗುರ್ತಿಸಿ, ೧೯೯೯ರಲ್ಲಿ "ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.
* ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ೧೯೯೯ರಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಿದೆ.
* ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೦೦ರಲ್ಲಿ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
* ಚಿತ್ರಕಲಾ ಪರಿಷತ್ತು ೧೯೭೨ರಲ್ಲಿ ಏರ್ಪಡಿಸಿದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಬಹುಮಾನ ಪಡೆದಿರುತ್ತಾರೆ.
* ಕರ್ನಾಟಕ ಲಲಿತ ಕಲಾ ಅಕಾಡೆಮಿಯು ವಾರ್ಷಿಕ ಕಲಾ ಪ್ರದರ್ಶನ, ೧೯೭೨, ೭೯, ೮೦ರಲ್ಲಿ ೩ ಬಾರಿ ಬಹುಮಾ ಪಡೆದಿರುತ್ತಾರೆ.
* ಕರ್ನಾಟಕ ಲಲಿತಕಲಾ ಅಕಾಡೆಮಿಯ ೨ ವರ್ಷದ ಉನ್ನತ ವ್ಯಾಸಂಗ, ಶಿಷ್ಯವೇತನವನ್ನು ೧೯೭೯ ಮತ್ತು ೧೯೮೧ರಲ್ಲಿ ಪಡೆದಿರುತ್ತಾರೆ.
* ಕರ್ನಾಟಕ ಸರಕಾರ ಹಾಗೂ ನಾಡಿನಾದ್ಯಂತ ಸಂಘ ಸಂಸ್ಥೆಗಳು ಇವರನ್ನು ಸತ್ಕರಿಸಿ, ಸನ್ಮಾನಿಸಿ ಗೌರವಿಸಿವೆ.

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಕಲೆ ನಿಂತ ನೀರಲ್ಲ. ಅದು ಹರಿಯುವ ನದಿ ಇದ್ದಂತೆ. ಹರಿಯುವ ನದಿಯು ತನ್ನ ಉಗಮ ಸ್ಥಾನದಿಂದ ಸಮುದ್ರ ಸೇರುವವರೆಗೆ ನಿರಂತರ ಹರಿಯುತ್ತಿರುತ್ತದೆ. ಹೀಗೆ ಹರಿಯುವಾಗ ಅನೇಕ ತಿರುವುಗಳನ್ನು ಪಡೆಯುತ್ತ, ವಿವಿಧ ಆಕಾರಗಳನ್ನು ಹೊಂದುತ್ತ ಪ್ರವಹಿಸುತ್ತದೆ. ಮತ್ತು ಈ ಪ್ರವಹಿಸುವಿಕೆಯನ್ನು ಹೀಗೆಯೇ ಎಂದು ಹೇಳಲಾಗುವುದಿಲ್ಲ. ಅದು ತನ್ನದೇ ಆಕಾರ ಪಡೆಯುತ್ತ ನಿರಂತರ ಸಾಗಿದೆ.

'ದೇಶೀ'ಯ ಮತ್ತು 'ವಿದೇಶಿ' ಎಂಬುದು ವಿಂಗಡನೆಗಳು ವಿಷಯ ಅರ್ಥೈಸುವ ಶಬ್ದಗಳು ಮಾತ್ರ. ಕಲೆಯಲ್ಲಿ ಯಾವುದೇ ಬಂಧನವಿಲ್ಲ. ಮುಕ್ತವಾಗಿ ಹರಿಯುತ್ತದೆ. ಕಲೆ, ಕಲಾವಿದನ ಅಧ್ಯಯನದಲ್ಲಿ ಅದರ ಇತಿಹಾಸ, ಉಗಮ, ಸಾಗುವ ದಾರಿ ಎಲ್ಲವೂ ಮಹತ್ವ ಪಡೆಯುತ್ತವೆ. No Art is old or Modern. I know only Good and Bad Art ಎಂದು ಚೀನೀ ಕಲಾವಿದನ ಅಭಿಪ್ರಾಯ ಮಹತ್ವದ್ದೆನಿಸುತ್ತದೆ. ಯಾವುದೇ ಅಧ್ಯಯನ ಇತಿಹಾಸದ ಕುರುಹು ಇಲ್ಲದೇ ಪರಿಪೂರ್ಣವೆನಿಸುವುದಿಲ್ಲ. ಆದ್ದರಿಂದ ಪ್ರತಿ ಅಧ್ಯಯನಕ್ಕೆ ಇತಿಹಾಸವನ್ನು ಪೂರಕವಾಗಿ ವಿಶ್ಲೇಷಿಸಿ ಈವರೆಗಿನ ಸಾಗುವ ದಾರಿ ಹಾಗೂ ಸಿಂಧೂರರು ಆ ದಾರಿಯಲ್ಲಿ ಯಾವ ನೆಲೆ ಹೊಂದಿರುವರು ಎಂದು ಕಂಡುಕೊಳ್ಳಲಾಗಿದೆ.

ಪುರಾತನ ಕಾಲದಿಂದಲೂ ಕಲೆ ಬದುಕಿನ ಸ್ಥಿತಿಗತಿಗಳನ್ನು ಪ್ರತಿಬಿಂಬಿಸಿದೆ. ಇಲ್ಲಿಯವರೆಗೆ ಇತಿಹಾಸ ದಾಖಲೆಗೆ ಚಿತ್ರಕಲೆಯೇ ಪ್ರಧಾನವಾಗಿದೆ. ಕಲಾವಿದರ ಕಾಯಕದ ಶಕ್ತಿ ಹಾಗು ಚೈತನ್ಯ ಇದರ ಜೊತೆಗಿರುವುದು ಕೂಡಾ ಅಷ್ಟೇ ಮುಖ್ಯ. ಕ್ರೀಯಾಶೀಲ ಕಲಾವಿದ ಸಿ.ಚಂದ್ರಶೇಖರರವರು ಸಾಮಾಜಿಕ ಕಾಳಜಿಗಳುಳ್ಳ ವೈಚಾರಿಕ ಬದುಕಿನೊಂದಿಗೆ ಕಲಾಜೀವನ

ಸಾಗಿಸಿದ ಬಹುಮುಖ ಪ್ರತಿಭೆಯ ವಿಭಿನ್ನ ಕಲಾವಿದರು. ಇವರ ಕಲಾ ಸಾಧನೆಯಿಂದ ಕಲಾ ಕ್ಷೇತ್ರಕ್ಕೆ ವೈವಿಧ್ಯಮಯವಾದ, ವಿಶಿಷ್ಟವಾದ, ಸಾಮಾಜಿಕ ಪ್ರಜ್ಞೆ, ಕಲಾಸಂಘಟನೆ, ಕಲಾ ಚಳುವಳಿ ಹಾಗೂ ಹೋರಾಟ, ಇವು ಸಂಶೋಧನಾ ಲೇಖನಗಳಿಗೆ ತುಂಬಾ ಅನುವು ಮಾಡಿಕೊಟ್ಟಿವೆ. ಹಾಗಾಗಿ ಈ ಪ್ರಬಂಧವು ಮುಂದೆ ಬರುವ ಯುವ ಪೀಳಿಗೆಗೆ ಉಪಯುಕ್ತವಾಗಿದ್ದು ಕಲಾ ಕ್ಷೇತ್ರಕ್ಕೆ ಇದೊಂದು ಶ್ರೀಮಂತ ಕೊಡುಗೆಯಾಗಿದೆ ಎಂದು ಹೇಳಬಹುದು.

ಪ್ರಸ್ತುತ ಪ್ರಬಂಧವು ಕಲಾವಿದ ಸಿ.ಚಂದ್ರಶೇಖರ ಅವರ ಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ ಮಾಡಿದ ಪ್ರಾತಿನಿಧಿಕ ಈ ಕಿರು ಸಂಶೋಧನಾ ಪ್ರಬಂಧವಾಗಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ಇದರ ವಿಷಯ ವಸ್ತುವಿನ ವಿವರಣೆ ಇದೆ. ಕಲಾವಿದ ಸಿ. ಚಂದ್ರಶೇಖರ ರವರು ತಮ್ಮ ಕ್ರಿಯಾಶೀಲತೆಯಿಂದ, ವೈಚಾರಿಕ ನೆಲೆಯೊಳಗೆ ಕಲಾ ಕೃತಿಗಳನ್ನು ರಚಿಸುತ್ತಾ ಸಮಾಜದ ಏರು ಪೇರುಗಳನ್ನು ತಿದ್ದುವಂತಹ ಕೆಲಸವನ್ನು ಮಾಡಿರುವುದು ಅವರ ಕಲಾಕೃತಿಗಳ ಮೂಲಕ ತಿಳಿದುಬರುತ್ತದೆ.

ಬಾಲ್ಯದಲ್ಲಿ ಸುಂದರ ಮತ್ತು ಅಲಂಕಾರಿಕ ಚಿತ್ರ ರಚನೆ ಮಾಡಲು ಇಷ್ಟ-ಪಡುತ್ತಿದ್ದ ಇವರು ನೈಜ ಚಿತ್ರಗಳನ್ನು ಕೂಡಾ ರಚಿಸುತ್ತಿದ್ದರು. ನಂತರ ದಿನಮಾನಗಳಲ್ಲಿ ಸೃಜನಾತ್ಮಕ ಸಂಯೋಜನೆಗಳಲ್ಲಿ ಸರಳ ಸಾಂಕೇತಿಕ ಅಮೂರ್ತ ಕೃತಿಗಳನ್ನು ರಚಿಸುತ್ತಾ ಆಯ್ದ ದಿನಮಾನಗಳ ಘಟನಾವಳಿಗಳನ್ನು ಹಿಡಿದಿಟ್ಟು, ಭವಿಷ್ಯತ್ತಿನಲ್ಲಿ ಭೂತಕಾಲದ ಬದಲಾವಣೆಗಳನ್ನು ಮತ್ತು ಪರಿವರ್ತನೆಗಳನ್ನು ಹಿಡಿದಿಡುವ ಕಾರ್ಯ ಇವು ಐತಿಹಾಸಿಕ ದಾಖಲೆಗೆ ಸರಿಸಮಾನವಾಗಿವೆ.

ಸಾಹಿತಿಗಳ ಜೊತೆಗಿನ ಒಡನಾಟವಿರುವ ಈ ಕಲಾವಿದ ವಿದ್ವತ್ ಮತ್ತು ಕೌಶಲ್ಯ ಎರಡನ್ನು ಕರಗತ ಮಾಡಿಕೊಂಡಿದ್ದಾರೆ. ಕಥೆ, ಕಾದಂಬರಿ, ನಾಟಕ, ಸಿನಿಮಾ, ಇವುಗಳನ್ನು ನೋಡುವ, ಕೇಳುವ ಮತ್ತು ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರಿಂದ ಸಾಹಿತ್ಯ ಕ್ಷೇತ್ರದ ಮತ್ತು ಕಲಾಕ್ಷೇತ್ರದ ಸಾಂಸ್ಕೃತಿಕ ಬುದ್ಧಿ ಜೀವಿಗಳೊಂದಿಗೆ ನಿಕಟಪೂರ್ವ ಬಾಂದವ್ಯ ಬೆಳೆಸಿ ಕೊಂಡಿದ್ದರಿಂದ ಒಬ್ಬ ಪ್ರತಿಭಾನ್ವಿತ ಕಲಾವಿದ ನೆನೆಸಿಕೊಳ್ಳಲು ಸಹಕಾರಿಯಾಯಿತು. ತಮ್ಮದೇ ಆದ ಸ್ವಂತ ಶೈಲಿಯಿಂದ ಗುರುತಿಸಿಕೊಂಡ ಇವರು ಅನೇಕ ಕಲಾ ಕೃತಿಗಳನ್ನು ರಚನೆ ಮಾಡಿ, ನಾಡು ಮತ್ತು ರಾಷ್ಟ್ರಕ್ಕೆ ಚಿರಪರಿಚಿತರಾಗಿದ್ದಾರೆ. ಇವರು ರಚಿಸಿರುವ ಕಲಾಕೃತಿಗಳು ತೈಲವರ್ಣ ಮತ್ತು ಮಿಶ್ರ ಮಾಧ್ಯಮಗಳಿಂದ ಕೂಡಿರುತ್ತವೆ. ಈ ವರ್ಣಗಳ ಸಂಯೋಜನೆಯಲ್ಲಿಯೂ ಕೂಡಾ ವೈವಿಧ್ಯಮಯ ಜಾಣ್ಮೆ ಎದ್ದು ಕಾಣುತ್ತದೆ.

ಈ ಕಲಾವಿದರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸದೇ ಇದ್ದರೂ ಕೂಡಾ ಅವರು ರಚಿಸಿರುವ ಕೆಲವು ಸರಣಿ ಚಿತ್ರಗಳು ಬಹುಬೇಗ ಸಾಂಸ್ಕೃತಿಕ

ವಲಯ ಹಾಗೂ ಸಾಮಾಜಿಕವಾಗಿ ಜನಸಾಮಾನ್ಯರನ್ನು ತಲುಪುವಂತಹ ಕಲಾಕೃತಿಗಳನ್ನು ರಚಿಸಿದ್ದು, ಕಂಡುಬಂದಿದೆ. ಇವರೊಂದಿಗೆ ಮಾತಿಗಿಳಿದಾಗ ಕಲಾಕೃತಿಗಳನ್ನು ಎಷ್ಟು ರಚಿಸಿದ್ದೇನೆ ಎನ್ನುವದಕ್ಕಿಂತ ಕಲಾಕೃತಿಯ ಗುಣಮಟ್ಟ ಮತ್ತು ಅದರ ಶೈಲಿ, ತಂತ್ರಗಾರಿಕೆ ಮತ್ತು ಸಮಾಜದಲ್ಲಿ ನಿಲ್ಲುವಿಕೆ ಅದರ ಸ್ತರ ಮತ್ತು ಕಾಲಘಟ್ಟ ಎಲ್ಲಿ ಹೇಗೆ ಎಂದು ಪ್ರಶ್ನೆ ಮಾಡಿಕೊಂಡು ಕೃತಿ ರಚಿಸಿದಾಗ ಕಲಾವಿದ ನಾನು ಎಲ್ಲಿರಬಹುದು? ಎಂದು ಆಲೋಚನೆಯಲ್ಲಿ ತೊಡಗಿದಾಗ ಕಲಾವಿದನ ಕಲಾಕೃತಿ ಸಾರ್ಥಕತೆಯ ಸಾಧನವಾಗುವುದೆಂಬುದು ಅವರ ಅಭಿಪ್ರಾಯ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯಲ್ಲಿ ದಾಖಲಿಸಿದಂತೆ ಕಲಾವಿದನ ಕೌಶಲ್ಯತೆ ಮತ್ತು ಅವರಲ್ಲಿರುವ ಕ್ರಿಯಾಶೀಲತೆಯನ್ನು ನಾಡಿಗೆ ಪರಿಚಯಿಸುವ ಮತ್ತು ಅಧ್ಯಯನಕಾರರಿಗೆ ಸಹಕಾರಿ ಆಗುವ ನಿಟ್ಟಿನಲ್ಲಿ ಒಟ್ಟಾರೆಯಾಗಿ ಕಲಾ ಬದುಕಿನೊಂದಿಗೆ ಅವರ ಕಲಾ ಕೃತಿಗಳ ಚಿತ್ರಣವನ್ನು ಪರಿಚಯಿಸುವ ಕಾರ್ಯ ಇದಾಗಿದೆ. ಜೀವನವನ್ನೇ ಕಲೆಗಾಗಿ ಮುಡುಪಿಟ್ಟು ಸೃಜಶೀಲತೆಗೆ ಇಂಬುಕೊಟ್ಟು, ವಿಶಿಷ್ಟ ಕಲಾಕೃತಿಗಳನ್ನು ರಚಿಸುವುದರ ಮೂಲಕ ಹೆಸರು ಮಾಡಿ ಸಂಸ್ಕೃತಿಯ, ಪರಂಪರೆಗೆ ದಾರಿ ಮಾಡಿಕೊಡುವ ಅಂಶಗಳ ಮೂಲಕ ಕಲಾವಿದನ ಅಂತರದೃಷ್ಟಿ ಹೆಚ್ಚಿದಂತೆ ತನ್ನ ಹರುವುವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುವ ಕಲಾವಿದರಲ್ಲಿ ಒಬ್ಬರಾಗಿರುವ ಸಿ.ಚಂದ್ರಶೇಖರರವರ ವಿಷಯಗಳ ಸಂಗ್ರಹ, ಪತ್ರಿಕಾ ಲೇಖನಗಳು, ಅಕಾಡೆಮಿಯಿಂದ ಪ್ರಕಟವಾಗಿರುವ ಗ್ರಂಥಗಳ, ಕಾಟ್ಲ್ಯಾಗ್‌ಗಳಿಂದ ಹಾಗೂ ಈ ಮಾಹಿತಿಗೆ ಪೂರಕವಾಗುವ ಪ್ರಶ್ನೆಗಳಿಗೆ ಕಲಾವಿದರಿಂದ ಉತ್ತರ ಪಡೆದು ದಾಖಲಿಸುವ ಕೆಲಸವನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಲಾವಿದ ಪಿ.ಚಂದ್ರಶೇಖರ ಅವರ ಬಾಲ್ಯದ ದಿನಗಳು ಹಾಗೂ ಬೆಂಗಳೂರಿನಲ್ಲಿ ಬೆಳೆದ ಪರಿಸರ ಮತ್ತು ಅವರು ಕಲಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ದಿನಗಳು ಗುರುಗಳ ಮೇಲೆ ಇಟ್ಟಿರುವ ಭಕ್ತಿ ಆ ಸಂದರ್ಭದಲ್ಲಿ ಸ್ಫೂರ್ತಿಯಾದ ಕಲಾ ವಾತಾವರಣದ ಕೇನ್ ಕಲಾ ಶಾಲೆಯ ಕುರಿತು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕಲಾವಿದ ಪಿ.ಚಂದ್ರಶೇಖರ ಅವರು ರಚಿಸಿದ ರೇಖಾಚಿತ್ರಗಳ ಮತ್ತು ವರ್ಣಚಿತ್ರಗಳನ್ನು ಒಂದೆಡೆ ಸೇರಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಇವರ ವರ್ಣಕಲಾಕೃತಿಯಲ್ಲಿ ಬಳಸಿರುವ ವಿಭಜನೆಗಳು ಭಾಗಗಳು ಬಣ್ಣಗಳ ಅತ್ಯುತ್ತಮ ಬಳಕೆ, ವಸ್ತುವಿಷಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಾಳಜಿ ಮತ್ತು ವೈಚಾರಿಕತೆಯ ಹಿನ್ನೆಲೆಯಲ್ಲಿ ವರ್ಣಚಿತ್ರಗಳು ರಚಿಸಿದ್ದಾರೆ. ಮಾಟಿಕಲ್ಲು, ಪುಸ್ತಕ ಹೂ ಮುಂತಾದ ಜಗತ್ ಪ್ರಸಿದ್ಧ ರೂಪಗಳನ್ನು ಬಳಸಿರುವುದರ ಬಗ್ಗೆ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಿ. ಚಂದ್ರಶೇಖರರವರ ಗ್ರಾಫಿಕ್ ಕಲಾಕೃತಿಗಳ ವಿಶ್ಲೇಷಣೆ ಹಾಗೂ ಗ್ರಾಫಿಕ್ ಇನ್ನಿತರ ಅಂಶಗಳಾದ ಸೆರಿಗ್ರಾಫಿಕ್, ಲಿಥೋಗ್ರಾಫಿ, ಎಚ್ಚಿಂಗ್ ಹಾಗೂ ಕರ್ನಾಟಕದಲ್ಲಿ ಗ್ರಾಫಿಕ್ ಕಲೆಯ ಹುಟ್ಟು ಮತ್ತು ಬೆಳವಣಿಗೆ ಅಲ್ಲದೆ ಶಾಂತಿನಿಕೇತನ ಕಲಾಶಾಲೆಯಲ್ಲಿ ರಚನೆಯ ಸಂದರ್ಭದಲ್ಲಿ ಹಾಗೂ ಕೇನ್ ಕಲಾಶಾಲೆಯಲ್ಲಿ ಗ್ರಾಫಿಕ್ ಕಲಾಕೃತಿ ರಚನೆಯ ಬೇರೆ ಬೇರೆ ಅಂಶಗಳು ವಿವರಣೆ ಹಾಗೂ ಇಲ್ಲಿನ ಸಲಕರಣೆಗಳ ಬಳಕೆಯ ಸಂಪೂರ್ಣ ಮಾಹಿತಿ ನೀಡಲಾಗಿದೆ. ಯಂತ್ರಗಳ ಬಳಕೆ, ಯಂತ್ರಗಳ ವಿಭಜನೆ ಇತ್ಯಾದಿ.

ಅಧ್ಯಾಯ ಐದು ಸಿ.ಚಂದ್ರಶೇಖರವರ ಸಂಕೀಣ ಕಲಾಕೃತಿಗಳಾದ ಕೋಲಾಜ ರಚನೆಯ ಕಲಾಕೃತಿಗಳು ಡಿಜಿಟಲ್ ಫೋಟೋಗ್ರಾಫಿಯಲ್ಲಿ ರಚನೆಯಾದ ಕಲಾಕೃತಿಗಳು, ಶಿಲ್ಪಗಳ ರಚನೆ ಹೀಗೆ ಒಂದೇ ಮಾಧ್ಯಮಕ್ಕೆ ಹಾಗೂ ಒಂದೇ ಶೈಲಿಗೆ ಒಗ್ಗದ ಅನೇಕ ತಂತ್ರಗಳ ಹಾಗೂ ಮಾಧ್ಯಮಗಳನ್ನು ಬಳಸಿ ರಚಿಸಿದ ಕಲಾಕೃತಿಗಳ ಪರಿಚಯ ಹಾಗೂ ಅವುಗಳನ್ನು ಸಂಪೂರ್ಣ ಮಾಹಿತಿ ನೀಡಲಾಗಿದೆ.

ಅಧ್ಯಾಯ ಆರರಲ್ಲಿ ಕಲಾವಿದ ಸಿ. ಚಂದ್ರಶೇಖರರವರ ಕಾರ್ಯಚಟುವಟಿಕೆಗಳು ಭಾಗವಹಿಸಿದ ಕಲಾಶಿಬಿರಗಳು, ಪ್ರಾತ್ಯಕ್ಷಿಕೆಗಳ ಬಗ್ಗೆ ಮಾಹಿತಿ, ಕಲ ಉಪನ್ಯಾಸಗಳ ವಿವರ ಮತ್ತು ಕಲಾ ಪರಿಶ್ರಮ ಸಾಧನೆಗಳು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು. ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರ ಅವಧಿಯ ಕಾರ್ಯಚಟುವಟಿಕೆಗಳ ವಿವರಗಳು ಹಾಗೂ ಕಲಾ ಸಾಧನೆಯ ಮಹತ್ವ, ರಾಷ್ಟ್ರ, ರಾಜ್ಯದ ಸರಕಾರಿ ಹಾಗೂ ಖಾಸಗಿ ಸಂಘಸಂಸ್ಥೆಗಳು ರಾಜ್ಯದ ಕಲಾಶಾಲೆಗಳು ಸರಕಾರದ ವಿವಿಧ ಇಲಾಖೆಗಳು ಇವರನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ, ಅಂಬೇಡ್ಕರ್ ಪ್ರಶಸ್ತಿ, ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಇನ್ನು ಹೀಗೆ ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿದ ಬಗ್ಗೆ ದಾಕಲಿಸಲಾಗಿದೆ. ಅಲ್ಲದೆ ಗಣ್ಯರ ಅಭಿಪ್ರಾಯಗಳ ವಿವರ ಆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ.

ಅಧ್ಯಾಯ ಏಳರಲ್ಲಿ ಸಿ. ಚಂದ್ರಶೇಖರರವರ ಕಲಾಶೈಲಿ, ತಂತ್ರಗಾರಿಕೆ, ಮೈವಳಿಕೆ ಮೂರ್ತ ಅಮೂರ್ತದ ಸ್ಪಷ್ಟಕಲ್ಪನೆ, ಕವಿ ರವೀಂದ್ರರ ಶಾಂತಿನಿಕೇತನದಲ್ಲಿ ಕೃತಿ ರಚನೆಯ ವಿಧಾನ ಮಾರ್ಗದರ್ಶಕರಾದ ಪ್ರೊಫೇಸರ್‌ಗಳ ಮೇಲೆ ಇರುವ ಪ್ರೀತಿ, ವಾತ್ಸಲ್ಯ, ಅಭಿಮಾನ ಇತ್ಯಾದಿ. ಇವರ ಕಲಾಕೃತಿಗಳ ಮೇಲೆ ಜೊತೆಗೆ ಭಾರತೀಯ ಸಂಸ್ಕೃತಿಯ ಅಂಶಗಳು, ಸಮಾಜದಲ್ಲಿ ಕಂಡ ಅಸಮಾನತೆ ಇನ್ನಿತರ ವಿಷಯಗಳ ಪ್ರಭಾವ ಕಂಡುಬಂದಿದ್ದು ಜೊತೆಗೆ ವಿಶೇಷವಾದ ತಂತ್ರಗಾರಿಕೆ ಕ್ಯಾನವಾಸ್ *dividection*, ರೇಖೆಗಳ *force*, ಬಣ್ಣಗಳ ಬಳಕೆ, ಇತ್ಯಾದಿ ವಿಷಯಗಳ ಬಗ್ಗೆ ವಿವರಣೆ ಹಾಗೂ ಪೂರ್ಣ ಮಾಹಿತಿ ನೀಡಲಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿದ್ದು, ಇಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಬಂದ ಪ್ರಮುಖ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

೧. ವರ್ಣಚಿತ್ರಗಳಲ್ಲಿ, ಸಂಯೋಜನಾ ಚಿತ್ರಗಳು, ಭಾವ ಚಿತ್ರಗಳು, ವ್ಯಕ್ತಿ ಚಿತ್ರಗಳು, ಪ್ರಕೃತಿ ಚಿತ್ರಣ ಮುಂತಾದ ವಿಷಯಗಳಲ್ಲಿ ಚಿತ್ರ ರಚಿಸಿದ್ದು, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಜನಪದ ಹಿನ್ನೆಲೆಯ ವಿಷಯಗಳನ್ನೊಳಗೊಂಡ ಕಲಾಕೃತಿಗಳನ್ನು ರಚಿಸಿದ್ದು ಕಂಡುಬರುತ್ತದೆ.

೨. ಸಿ. ಚಂದ್ರಶೇಖರ ಅವರ ಚಿತ್ರಗಳಲ್ಲಿ ಗ್ರಾಮ ಪರಿಸರದ ಚಿತ್ರಗಳು ಸಮಾಜಮುಖಿಯಾದ ಚಿತ್ರಗಳ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತವೆ.

೩. ಸಿ. ಚಂದ್ರಶೇಖರ ಅವರು ಆಡಳಿತಗಾರರಾಗಿ, ಅಧ್ಯಾಪಕರಾಗಿ, ಛಾಯಾಚಿತ್ರಕಾರರಾಗಿ, ಕಲಾಸಾಹಿತಿಯಾಗಿ, ರೇಖಾಚಿತ್ರ ವರ್ಣಚಿತ್ರಕಾರರಾಗಿ, ಕಲಾಕೃತಿಗಳ ಸಂಗ್ರಹಕಾರರಾಗಿ ಹೀಗೆ ಹತ್ತು ಹಲವು ಅಭಿರುಚಿಗಳನ್ನು ಹೊಂದಿದ ಅಪರೂಪದ ಕಲಾವಿದ, ಅವರ ವೈವಿದ್ಯಮಯವಾದ ಕಲಾಬದುಕನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿ ಸ್ಥೂಲವಾಗಿ ಮಾಡಿಕೊಡಲಾಗಿದೆ.

೪. ಸಿ. ಚಂದ್ರಶೇಖರ ಅವರ ಕಲಾಕೃತಿಗಳ ಹಿಂದಿರುವ ಆಶಯಗಳನ್ನು ಹಲವಾರು ಅವರ ಸ್ನೇಹಿತರು, ಗುರುಗಳು, ಸಮಕಾಲಿನ ಕಲಾವಿದರಿಂದ ಸಂದರ್ಶನ ನಡೆಸಿ ಅಧ್ಯಯನ ಮಾಡಲಾಗಿದೆ.

೫. ಕಲಾವಿದರಷ್ಟೇ ಅಲ್ಲ ಅವರು ಸಾಮಾಜಿಕ ಹೋರಾಟಗಳಲ್ಲೂ ಸಹ ತಮ್ಮನ್ನು ಜೀವನದುದ್ದಕ್ಕೂ ತೊಡಗಿಸಿಕೊಂಡು ಬಂದಿದ್ದಾರೆ.

೬. ಚಿತ್ರಕಲೆ ಜನಪರವಾಗಬೇಕೆಂಬ ಉದ್ದೇಶದಿಂದ ರಾಜ್ಯಾದ್ಯಂತ ಚಿತ್ರಯಾತ್ರೆಯನ್ನು ಸಂಘಟಿಸುವುದರ ಮೂಲಕ ಅವರೊಬ್ಬ ಉತ್ತಮ ಕಲಾಸಂಘಟಕರು ಎಂಬುದನ್ನು ಸಾಬಿತು ಮಾಡಿದ್ದಾರೆ.

೭. ತಮ್ಮ ಬದುಕಿನ ಸಂಕಷ್ಟಗಳನ್ನೇ ಕಲೆಯನ್ನಾಗಿಸಿದ ಕಲಾವಿದ ಸಿ. ಚಂದ್ರಶೇಖರ ಅವರು ಇಂದು ಉನ್ನತ ಕಲಾ ಮತ್ತು ಸಾಮಾಜಿಕ ಸ್ಥಾನಮಾನಗಳು ದೊರೆತಿದ್ದರೂ ಅವರು ಸವೆಸಿ ಬಂದ ದಾರಿ ಸುಗಮವಾದುದೇನಲ್ಲ. ಅವರ ಕರ್ತೃತ್ವ ಶಕ್ತಿ ಮತ್ತು ಛಲ ಚಿತ್ರಕಲಾ ಕ್ಷೇತ್ರದಲ್ಲಿ ಅವರನ್ನು ಬೆಳೆಸಿದವು.

೮. ೧೯೯೫–೯೮ರ ಅವಧಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸಿ.

ಚಂದ್ರಶೇಖರ ಅವರು ಮಾಡಿರುವ ಕೆಲಸಗಳು ತುಂಬಾ ಗಮನಾರ್ಹವಾದವುಗಳು. ವಿಶೇಷ ಘಟಕ ಯೋಜನೆಯ ಅನುದಾನದಿಂದ ಅವರು ಮಾಡಿರುವ ಕೆಲಸಗಳು ಇಂದಿಗೂ ಸ್ತುತ್ಯಾರ್ಹ ದಾಖಲಾರ್ಹವಾಗಿದೆ.

೯. ಸಿ. ಚಂದ್ರಶೇಖರ ಅವರ ಕಲಾನೈಪುಣ್ಯತೆ ಇರುವುದು ವಿಭಿನ್ನ ಅನುಭವಗಳನ್ನು ಒಂದು ಕ್ಯಾನ್ವಾಸಿನಲ್ಲಿ ಹಿಡಿದಿರುವುದರಲ್ಲಿ. ಮೊದಲಿಗೆ ಸಹಜವಾಗಿಯೇ ಅಮೂರ್ತ ಕಲೆಯತ್ತ ಒಲಿದು ನಂತರ ಅದರಿಂದ ಮುಕ್ತಿ ಹೊಂದಿ ತಮ್ಮದೇ ದಾರಿ ತುಳಿದ ಯಶಸ್ಸು ಇವರದು.

೧೦. ಕಲಾವಿದ ಸಿ. ಚಂದ್ರಶೇಖರ ಅವರು ಚಿತ್ರಕಲಾಕೃತಿಗಳಲ್ಲದೇ, ಮ್ಯೂರಲ್‌ಗಳು, ಗ್ರಾಫಿಕ್ ಚಿತ್ರಗಳು, ಶಿಲ್ಪಗಳು ಹೀಗೆ ಹಲವು ಕಲಾಮಾಧ್ಯಮಗಳಲ್ಲಿ ತಮ್ಮ ಸಂವೇದನೆಗಳನ್ನು ಅಭಿವ್ಯಕ್ತಿಸಿದ್ದಾರೆ.

೧೧. ಕಲಾಕೃತಿಗಳನ್ನು ತಯಾರಿಕೆ ಎಂದು ತಿಳಿಯದೆ ಕಲಾಕೃತಿ ಎಂದು ತಿಳಿದೇ ಗಂಭೀರವಾದ ಪ್ರಯೋಗಶೀಲತೆಯಲ್ಲಿ ತೊಡಗಿರುವ ಅವರ ಕಲಾ ಗಂಭೀರತೆ ಅಧ್ಯಯನ ಯೋಗ್ಯವಾದುದು.

೧೨. ಕರ್ನಾಟಕದ ಅಮೂರ್ತ ಕಲೆಗೆ ತಮ್ಮದೇ ಆದ ಹೊಸ ಶೈಲಿ ಮತ್ತು ದೃಷ್ಟಿಯೊಂದನ್ನು ಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ.

೧೩. ಇವರ ಕಲಾಕೃತಿಗಳನ್ನು ಕಲಾಕೃತಿಗಳ ವಿಮರ್ಶಾ ಪರಿಭಾಷೆಯ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ಯಾವುದೋ ಒಂದು ಕ್ರಮ ವಿಪರ್ಯಾಸವೊಂದು ಎದ್ದು ಕಾಣುತ್ತಿರುತ್ತದೆ. ಅದೊಂದು ಹೊಸ ದರ್ಶನ. ಮೊದಲ ಹಂತದಲ್ಲಿ ಹಲವು ವೈಚಿತ್ರ್ಯಗಳಿಗಾಗಿ ಅದು ಮನಸೆಳೆಯುತ್ತದೆ. ಮೊದಲದು ಕಲಾಕೃತಿಯಾಗಿ ಗೆದ್ದಿದೆ. ಎರಡನೆ ಹಂತದಲ್ಲಿ ಅದು ಇತರ ಕಲಾಕೃತಿಗಳಿಗಿಂತ ಭಿನ್ನವಾಗದದ್ದೇನನ್ನೋ ಹೇಳುತ್ತಿದೆ. ಆ ಹೇಳುವಿಕೆ ಏನು? ಎಂಬುದೇ ಅವರ ಕಲಾಕೃತಿಗಳ ಶಕ್ತಿ.

೧೪. ಕಲಾವಿದರಾಗಿ ಸಿ. ಚಂದ್ರಶೇಖರ ಅವರು ತೆಗೆದುಕೊಳ್ಳುವ ಪ್ರತಿಮೆಗಳಿಗೆ ಸಂಬಂಧಿಸಿದಂತೆ ಸಮಾಜದೊಳಗಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಬದುಕಿನ ಚಲನಶೀಲ ಗ್ರಹಿಕೆಯಾಗಿ ವ್ಯಕ್ತವಾಗುವ ವೈಚಾರಿಕತೆಗಳ ರೂಪಗಳನ್ನು ಆಧರಿಸಿದ ಅವರ ಚಿತ್ರಗಳು ಉಂಟು ಮಾಡುವ ಪರಿಣಾಮಗಳು ಗಮನಾರ್ಹವಾದವು.

೧೫. ಚಿತ್ರಕಲೆ ಯಾವುದೇ ಅರ್ಥಗಳನ್ನು ವರ್ಣಸಂಯೋಜನೆ, ವ್ಯಕ್ತಿ, ಪ್ರಾಣಿ ಅಥವಾ ಸಸ್ಯ ಭಾವ ಮತ್ತು ವಸ್ತುಗಳ ಸಂಯೋಜನೆಯಿಂದಲೇ ನಿಷ್ಪನ್ನಗೊಳಿಸಬೇಕು. ಇಂಥ ಪ್ರಕ್ರಿಯೆಯಲ್ಲಿ ಒಬ್ಬೊಬ್ಬ ಕಲಾವಿದನೂ ತನ್ನ ಮೆಚ್ಚಿನ ಭಾಗಕ್ಕೆ ಮಹತ್ವವನ್ನು ಕೊಡುತ್ತಾನೆ. ಹಾಗೆಯೇ ಸಿ. ಚಂದ್ರಶೇಖರ ಅವರಿಗೆ ಭಿನ್ನ ವಸ್ತು ಮತ್ತು ಭಿನ್ನತೆ ಮುಖ್ಯವಾಗಿದೆ.

೧೭. ಏಕಮಗ್ಗುಲಲ್ಲೇ ಮನುಷ್ಯನ ಗ್ರಹಿಕೆಗೆ ಸಿಕ್ಕುವ ಶಾರೀರಿಕ ಕೋನವನ್ನು ತೋರಿಸುವಲ್ಲಿ ಹಲವು ಜನ ಕಲಾವಿದರು ಯಶಸ್ಸು ಸಾಧಿಸಬಹುದು. ಆದರೆ ಅವುಗಳಿಗಿರುವ ಅರ್ಥಗಳ ವೈವಿಧ್ಯತೆ ಕೆಲವೇ ಕಲಾವಿದರಿಗೆ ಮಾತ್ರ ಸಾಧ್ಯ. ಅಂತಹವರಲ್ಲಿ ಸಿ. ಚಂದ್ರಶೇಖರ ಅವರು ಗಮನಾರ್ಹವಾಗಿದ್ದಾರೆ.

೧೮. ಸಿ. ಚಂದ್ರಶೇಖರವರ ಚಿತ್ರ ರಚನೆಯ ಪೂರ್ವ ಮೀಮಾಂಸೆ ಬಹುಮುಖಿಯಾದುದು. ವಾಸ್ತವವಾಗಿ ಸಮಸ್ಯೆಯ ಗ್ರಹಿಕೆ ಸೃಷ್ಟ್ಯಾತ್ಮಕ ರೂಪ ಪಡೆಯದೇ ಶಬ್ದಗಳಲ್ಲಿ, ಮನಸ್ಸಿನಲ್ಲಿ ಧ್ವನಿರೂಪ ಬೆಳೆಯುತ್ತಾ ಹೋಗುತ್ತದೆ. ಇದುವೇ ಅವರ ಕಲಾಕೃತಿಯ ವೈಶಿಷ್ಟ್ಯತೆಯಾಗಿದೆ.

೧೯. ಸಿ. ಚಂದ್ರಶೇಖರವರ ಕಲಾಕೃತಿಗಳಲ್ಲಿ ಸಾಮಾಜಿಕ ವೈಪರೀತ್ಯವೊಂದು ತಟ್ಟನೆ ಕಣ್ಣಿಗೆ ಹೊಡೆಯುತ್ತದೆ. ಕಾರಣ ಈ ಚಿತ್ರಗಳು ಇತರ ಕಲಾವಿದರ ಚಿತ್ರಗಳಂತಿಲ್ಲ. ಇವುಗಳ ಜಾಡೇ ಬೇರೆ. ಅಧೋಲೋಕದ ಏನೇನೋ ವಿಷಯಗಳನ್ನು ಇವು ಹೇಳುತ್ತಿವೆ. ಇದುವರೆಗೆ ಅನುಭವಕ್ಕೆ ಬರದ ಮತ್ತೇನನ್ನೋ ಇವು ಸೂಚಿಸುತ್ತಿವೆ. ಆ ಮೂಲಕ ನಮ್ಮ ಚಿತ್ತವನ್ನು ಸಾಮಾಜಿಕ ಚಿತ್ರಗಳತ್ತ ಕರೆದೊಯ್ಯುವ ಕೆಲಸವನ್ನು ಇವರ ಕಲಾಕೃತಿಗಳು ಮಾಡುತ್ತಿವೆ.

೨೦. ಕರ್ನಾಟಕದಲ್ಲಿ ನವ್ಯ ಕಲೆಗೂ ನವ್ಯ ಸಾಹಿತ್ಯಕ್ಕೂ ಕಾಲಮಾನ ವ್ಯತ್ಯಾಸವಿರಲಿಲ್ಲ. ಮಾಡರ್ನಿಸಂ ಒಟ್ಟೊಟ್ಟಿಗೆ ನಡೆದಿರುವುದನ್ನು ಕಾಣುತ್ತೇವೆ. ಬಹುಶಃ ನವ್ಯ ಕಲೆಯ ಪರಿವರ್ತಿತ ರೂಪವಾಗಿ ಸಿ. ಚಂದ್ರಶೇಖರ ಚಿತ್ರಗಳನ್ನು ನಾವು ಅಭ್ಯಾಸ ಮಾಡಬೇಕಾಗುತ್ತದೆ. ಕಾರಣ ಅವರು ಸಂಕ್ರಮಣ ಕಾಲವನ್ನೇ ತಮ್ಮ ಚಿತ್ರಗಳಲ್ಲಿ ಚಿತ್ರಿಸಿದ್ದಾರೆ. ನವ್ಯಕಲೆ ಸಹ ಆ ಮೂಲಕ ಹೊಸ ಸತ್ವವನ್ನು ಪಡೆಯಲು ಸಾಧ್ಯವಾಗಿದೆಯೆನ್ನಬೇಕು.

೨೧. ಸಿ. ಚಂದ್ರಶೇಖರರವರ ಕಲಾಕೃತಿಗಳಲ್ಲಿ ಬುಡಕಟ್ಟಿನ ಮೂಲ ಸಂಸ್ಕೃತಿಯನ್ನು ಅವು ಪ್ರತಿನಿಧಿಸುತ್ತದೆ. ಹಾಗೂ ಇವರಲ್ಲಿರುವ ಪ್ರಬಲ ದಲಿತ ಸಂವೇದನೆಗಳಲ್ಲಿ ಒಂದು ಅವರು ರಚಿಸಿರುವ ಕಲಾಕೃತಿಗಳ ವಸ್ತು, ಆಕಾರಗಳನ್ನು ಗಮನಿಸಿದಾಗ ಬಡತನ ಮತ್ತು ಶೋಷಿತರ ಕಾಳಜಿ ಎದ್ದು ಕಾಣುತ್ತದೆ. ಹರಿದ ಬಟ್ಟೆ, ಒಡಕು ಗಡಿಗೆ, ತುಂಡಾದ ಸಿಪೆ ಅಲ್ಲದೆ ಮುರಕಲು ಗುಡಿಸಲು ಈ ರೀತಿಯ ವಸ್ತುಗಳಿಗೆ ಪರ್ಯಾಯ ಅರ್ಥಕಲ್ಪಿಸಿ ದಲಿತ ಪ್ರಜ್ಞೆಯನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿದ್ದಾರೆ.

೨೨. ಇವರು ಕ್ರಿಯಾಚೇತನ ಸಾಂಸ್ಕೃತಿಕ ಕೇಂದ್ರ ಹುಟ್ಟುಹಾಕಿ ಅದರಡಿಯಲ್ಲಿ ಸಾಕಷ್ಟು ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಸಿ. ಚಂದ್ರಶೇಖರ ಅವರು ಸಾಕಷ್ಟು ರೇಖಾಚಿತ್ರಗಳು, ಸಂಯೋಜನಾ ಚಿತ್ರಗಳು, ಗ್ರಾಫಿಕ್ ಕಲಾಕೃತಿಗಳು, ಕೋಲಾಜ ಚಿತ್ರಗಳು, ಶಿಲ್ಪಗಳು, ಲಿನೋ ಪ್ರಿಂಟ್, ಡಿಜಿಟಲ್ ಚಿತ್ರಗಳು ಹೀಗೆ ತಮ್ಮ ಬದುಕಿನುದ್ದಕ್ಕೂ ರಚಿಸುತ್ತಾ ಬಂದಿದ್ದಾರೆ. ಅಲ್ಲದೆ

ಅವುಗಳು ಪೆನ್ನು, ಪೆನ್ಸಿಲ್, ಇಂಕ್, ತೈಲವರ್ಣ ಪ್ರಿಂಟ್‌ಗಳಿಂದ ಕೂಡಿದ್ದು, ವಿಭಿನ್ನ ಶೈಲಿ ತಂತ್ರಗಳಿಂದ ಕೂಡಿದೆ. ಸಿ. ಚಂದ್ರಶೇಖರ ಅವರು ವಿವಿಧ ಮಾಧ್ಯಮಗಳಲ್ಲಿ ಆಧುನಿಕ ತಂತ್ರಾಂಶಗಳನ್ನು ಬಳಸಿಕೊಂಡು ಡಿಜಿಟಲ್ ಮಾಧ್ಯಮದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ಆದರೆ ಇನ್ನೊಂದು ವಿಶೇಷ ಎಂದರೆ ಪ್ರತ್ಯೇಕ ಒಂದೇ ಶೈಲಿಗೆ ಅಂಟಿಕೊಳ್ಳದೆ ಬೇರೆ ಬೇರೆ ಮಾಧ್ಯಮಗಳಲ್ಲಿ *experiment* ಮಾಡಿರುವುದನ್ನು ಅವರ ಕಲಾಕೃತಿಗಳಿಂದ ತಿಳಿದು ಬರುತ್ತದೆ.

ಒಟ್ಟಾರೆ ಸಿ. ಚಂದ್ರಶೇಖರ ಅವರು ವೈಯಕ್ತಿಕವಾಗಿ ಕಲಾಕೃತಿ ರಚಿಸುತ್ತ ತನ್ನ ಸಮಕಾಲೀನ ಸಂವೇದನೆಗಳಿಗೆ ಸದಾ ಸ್ಪಂದಿಸುತ್ತ ಇಂದಿನ ವಿಭಿನ್ನ ಕಲಾವಿದರಾಗಿ ಕಂಡುಬರುತ್ತಾರೆ. ಅವರು ಅಕಾಡೆಮಿ ಅಧ್ಯಕ್ಷರಾಗಿ ನಂತರದ ದಿನಗಳಲ್ಲಿ ಅವರ ಕಲಾಚಟುವಟಿಕೆಗಳು ಇಂದಿಗೂ ದಾಖಲಾರ್ಹ ಕಾರ್ಯಗಳಾಗಿರುವುದನ್ನು ಸ್ಥೂಲವಾಗಿ ಇಲ್ಲಿ ದಾಖಲಿಸುವ ಸಣ್ಣ ಪ್ರಯತ್ನ ಮಾಡಲಾಗಿದೆ.

ಅನುಬಂಧಗಳು

೧. ಸಂಕ್ಷೇಪಗಳು

೨. ಗ್ರಂಥಋಣ

೩. ಕಲಾಕೃತಿಗಳ ಸಂಗ್ರಹದ ನೆಲೆಗಳು

೪. ಸಿ. ಚಂದ್ರಶೇಖರ ಅವರ ಜೀವನದ ಪ್ರಮುಖ ಹಂತಗಳು

೫. ಮಾಹಿತಿ ನೀಡಿದ ವಕ್ತೃಗಳು

ಅನುಬಂಧ-೧

ಸಂಕ್ಷೇಪಗಳು

೦೧.	ಸಂ	–	ಸಂಪಾದಕರು
೦೨.	ಪ್ರ.ಸಂ	–	ಪ್ರಧಾನ ಸಂಪಾದಕರು
೦೩.	ಪು.ಸಂ	–	ಪುಟ ಸಂಖ್ಯೆ
೦೪.	ಕಿ.ಪ್ರ.	–	ಕಿರುಪ್ರಬಂಧ
೦೫.	ಸಂ.ಪ್ರ	–	ಸಂಪ್ರಬಂಧ
೦೬.	ಮ.ಪ್ರ	–	ಮಹಾಪ್ರಬಂಧ
೦೭.	ಚಿ.ಸಂ.	–	ಚಿತ್ರಸಂಖ್ಯೆ
೦೮.	ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯.	ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦.	ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧.	ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨.	ಕ.ವಿ.ವಿ	–	ಕರ್ನಾಟಕ ವಿಶ್ವವಿದ್ಯಾಲಯ
೧೩.	ಗು.ವಿ.ವಿ	–	ಗುಲ್ಬರ್ಗಾ ವಿಶ್ವವಿದ್ಯಾಲಯ
೧೪.	ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫.	ಅ.ಪ್ರ	–	ಅಪ್ರಕಟಿತ
೧೬.	ಪ್ರ	–	ಪ್ರಕಟಿತ
೧೭.	ಯೋ.ವ	–	ಯೋಜನಾ ವರದಿ

೧೮. ಕ.ಸಾ.ಪ	–	ಕನ್ನಡ ಸಾಹಿತ್ಯ ಪರಿಷತ್
೧೯. ಕ್ರಿ.ಪೂ	–	ಕ್ರಿಸ್ತ ಪೂರ್ವ
೨೦. ಕ್ರಿ.ಶ.	–	ಕ್ರಿಸ್ತಶಕ
೨೧. ಅನು	–	ಅನುವಾದ
೨೨. ಪ್ರೊ.	–	ಪ್ರೊಫೇಸರ್

ಅನುಬಂಧ-೨

ಗ್ರಂಥಋಣ

೦೧. ಕನ್ನಡ ಗ್ರಂಥಗಳು

೦೧. **ಅಪ್ಪಾಸಾಹೇಬ ಬ ಕಾಡಾಪೂರಕರ** — **ಪಿ. ಬಿ. ಗವಾನಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೨೦೧೦

೦೨. **ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು** — **ಡಾ. ಎಸ್. ಸಿ. ಪಾಟೀಲ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೧೯೯೮

೦೩. **ಆರ್. ಎಂ. ಹಡಪದ** — **ಎಂ. ಎಚ್. ಕೃಷ್ಣಯ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೭

೦೪. **ಆರ್. ಎಂ. ಹಡಪದ** — **ಗೌ.ಸಂ. ಎನ್.ಮರಿಶಾಮಾಚಾರ್**
ಸಂಯೋಜಿತ ಪ್ರಕಾಶನ (ರಿ),
ಬೆಂಗಳೂರು. ೧೯೯೬

೦೫. **ಆಲೇಖ್ಯ** — ಅ. ಲ. ನರಸಿಂಹನ್
ಸಂಯೋಜಿತ ಪ್ರಕಾಶನ (ರಿ),
ಬೆಂಗಳೂರು. ೧೯೯೯

೦೬.	**ಕಟ್ಟಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು** ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ. ೧೯೮೮	**ಕು.ಶಿ. ಹರಿದಾಸ ಭಟ್ಟ**
೦೭.	**ಕನ್ನಡ ನಾಡಿನ ಧಾರ್ಮಿಕ ಪರಂಪರೆ** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೮೩	**ಪ್ರೊ ಎಸ್.ಕೆ. ರಾಮಚಂದ್ರರಾವ್**
೦೮.	**ಕರ್ನಾಟಕ ಜನಪದ ಚಿತ್ರಕಲೆ** ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ, ಗದಗ. ೧೯೯೩	**ಡಾ. ಎಸ್. ಸಿ. ಪಾಟೀಲ**
೦೯.	**ಕರ್ನಾಟಕ ಭಿತ್ತಿಚಿತ್ರ ಪರಂಪರೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೨	**ಡಾ. ಅ.ಲ. ನರಸಿಂಹರಾವ್**
೧೦.	**ಕರ್ನಾಟಕ ಸಂಸ್ಕೃತಿ ಸಮೀಕ್ಷೆ** ಡಿ.ವಿ.ಕೆ. ಪ್ರಕಾಶನ, ಮೈಸೂರು ೧೯೯೨	**ಡಾ. ಎಚ್. ತಿಪ್ಪೆರುದ್ರಸ್ವಾಮಿ**
೧೧.	**ಕರ್ನಾಟಕ ಕಲಾವಿದರ ಪರಿಚಯಾವಳಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೧	**ಪ್ರಸಂ. ಪ್ರೊ. ಅಂದಾನಿ. ವಿ.ಜಿ.**
೧೨.	**ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦	**ಕೆ. ವಿ. ಕಾಳೆ**
೧೩.	**ಕರ್ನಾಟಕದ ಬಿದ್ರಿಕಲೆ – ಒಂದು ಅಧ್ಯಯನ** ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೨೦೦೬	**ಡಾ. ರೆಹಮಾನ್ ಪಟೇಲ್**

೧೪. **ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ** — **ಡಾ. ವಿ. ಎಂ. ಬಾಗಾಯತ**
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೪

೧೫. **ಕಲಾಕೋಶ** — **ಪ್ರಸಂ. ಪಿ.ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೧೬. **ಕಲಾ ಪ್ರಪಂಚ** — **ಡಾ. ಶಿವರಾಮ ಕಾರಂತ**
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೧೯೭೮

೧೭. **ಕಲಾನುಭವ** — **ವಿ. ಸೀತಾರಾಮಯ್ಯ**
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು
೧೯೭೬

೧೮. **ಕಲಾನ್ವೇಷಕ ಆರ್. ಎಂ. ಹಡಪದ** — **ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ**
ವೀರಶೈವ ಅಧ್ಯಯನ ಸಂಸ್ಥೆ
ತೋಂಟದಾರ್ಯ ಮಠ, ಗದಗ.
೨೦೧೦

೧೯. **ಕಲಾನ್ವೇಷಕ ಪ್ರೊ. ಎಸ್. ಸಿ. ಪಾಟೀಲ** — **ಎಲ್. ಶಿವಲಿಂಗಪ್ಪ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ
ಧಾರವಾಡ – ೨೦೧೫

೨೦. **ಕಲಾ ಸಂಗಮ** — **ಡಾ. ಪಾಟೀಲ ಪುಟ್ಟಪ್ಪ**
ಸಾಹಿತ್ಯ ಪ್ರಪಂಚ, ಹುಬ್ಬಳ್ಳಿ
೧೯೭೮

೨೧. **ಕಲಾ ಸಂವೇದನೆಯ ಒಳನೋಟಗಳು** — **ಕೆ. ವಿ. ಸುಬ್ರಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೭

೨೨. **ಕಲಾವಿದ ಎ. ಎ. ಆಲಮೇಲಕರ** **ಶಾಹಿದ್ ಪಾಷಾ**
ಬದುಕು ಮತ್ತು ಕಲಾಕೃತಿಗಳು
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೨೦೧೨

೨೩. **ಕಲಾವಿದ ಎಂ.ಎ.ಚೆಟ್ಟಿ** **ಡಾ. ಲಕ್ಷ್ಮೀದೇವಿ ಗವಾಯಿ**
ಅವರ ಜೀವನ ಮತ್ತು ಕಲಾಕೃತಿಗಳು
ವೀರಶೈವ ಅಧ್ಯಯನ ಅಕಾಡೆಮಿ,
ಶ್ರೀನಾಗನೂರು ರುದ್ರಾಕ್ಷಿಮಠ, ಬೆಳಗಾವಿ
೨೦೦೩

೨೪. **ಕಲಾವಿದ ಡಾ. ಎಂ. ವಿ. ಮಿಣಜಿಗಿ** **ಸಿ. ಡಿ. ಜಟ್ಟೆಣ್ಣನವರ**
ಒಂದು ಅಧ್ಯಯನ
ಅಪ್ರಕಟಿತ ಎಂ.ಫಿಲ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೦೫

೨೫. **ಕಲಾವಿದ ಶಂಕರ ಪಾಟೀಲರ** **ಕಿಶೋರ ಎನ್. ದಾಟನಾಳ**
ಜೀವನ ಮತ್ತು ಕಲಾಕೃತಿಗಳು
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೧

೨೬. **ಕಲಾವಿದ ಸಿ ಚಂದ್ರಶೇಖರ ಅವರ** **ಬಾಬುರಾವ ನಡೋಣಿ**
ಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ
ಅಪ್ರಕಟಿತ ಎಂ.ವಿ.ಎ ಕಿರುಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೯

೨೭. **ಕಲಾಕೋಶ** **ಪ್ರಸಂ. ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೪

೨೮. **ಕಲಾತತ್ವ** — **ಸಿ. ಪಿ. ಕೆ**
ಕುವೆಂಪು ವಿದ್ಯಾವರ್ಧಕ ಟ್ರಸ್ಟ್,
ಮೈಸೂರು. ೧೯೭೬

೨೯. **ಕಲಾತಪಸ್ವಿ ಡಿ.ವ್ಹಿ. ಹಾಲಭಾವಿ ಜೀವನಚರಿತ್ರೆ** — **ಪ್ರೊ. ದಮಯಂತಿ ನರೆಗಲ್ಲ**
ಅವನಿ ರಸಿಕರ ರಂಗ ಪ್ರಕಾಶನ, ಧಾರವಾಡ
೨೦೧೪

೩೦. **ಕಲಾಸಂಶೋಧಕ ಡಾ. ಎಸ್. ಸಿ. ಪಾಟೀಲ** — **ಮೋಹನರಾವ್ ಬಿ. ಪಂಚಾಳ**
ಅಪ್ರಕಟಿತ ಎಂ.ಎಫ್.ಎ. ಕಿರುಪ್ರಬಂಧ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೦೦೮

೩೧. **ಕಲಾಸಂವೇದನೆಯ ಒಳನೋಟಗಳು** — **ಕೆ. ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೭

೩೨. **ಕಲೆ ಒಂದು ಚಿಂತನೆ** — **ಚಂದ್ರಕಾಂತ ಕುಸನೂರು**
ಅಂತಃಕರಣ ಆರ್ಟ್ ಅಕಾಡೆಮಿ,
ಬೆಳಗಾವಿ. ೨೦೧೧

೩೩. **ಕಲೆ ಮತ್ತು ನಾನು** — **ಎಂ. ಟಿ. ವಿ.ಆಚಾರ್ಯ**
ಆಚಾರ್ಯ ಚಿತ್ರಕಲಾ ಭವನ,
ಬೆಂಗಳೂರು.
೧೯೯೩

೩೪. **ಕಲೆ ಮತ್ತು ರಸಸ್ವಾದನೆ** — **ಪ್ರೊ. ಎಂ. ಎಚ್. ಕೃಷ್ಣಯ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೨

೩೫. **ಕಲೆಯ ದರ್ಶನ** — **ಡಾ. ಶಿವರಾಮ ಕಾರಂತ**
ರಾಜಲಕ್ಷ್ಮೀ ಪ್ರಕಾಶನ ಬಳೇಪೇಟೆ,
ಬೆಂಗಳೂರು. ೧೯೮೨

೩೬.	**ಕಲೆಯ ನೆಲೆ** ಪ್ರಸಾರಾಂಗ, ಮೈಸೂರು ವಿವಿ, ಮೈಸೂರು. ೧೯೭೮	**ವಿ. ಕೃ. ಗೋಕಾಕ**
೩೭.	**ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು** ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೨	**ಮಲ್ಲಿಕಾರ್ಜುನ ಕೆ. ಜಿ**
೩೮.	**ಕೆ. ವೆಂಕಟಪ್ಪನವರ ಕಲೆ ಮತ್ತು ಬದುಕು** ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೨	**ರಾಜೀವ ಎಂ.ವೈ**
೩೯.	**ಕೆ. ಬಿ. ಕುಲಕರ್ಣಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೨	**ಡಾ. ಬಿ. ಎಂ. ಪಾಟೀಲ**
೪೦.	**ಗ್ರಾಫಿಕ್ ಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೬	**ರವಿಕುಮಾರ ಕಾಶಿ**
೪೧.	**ಚಿತ್ರ, ಶಿಲ್ಪ, ವಾಸ್ತು ಚಿತ್ರಗಳು** ಕನ್ನಡ ಅಧ್ಯಯನ ಪೀಠ, ಕವಿವಿ ಧಾರವಾಡ. ೧೯೭೫	**ಡಾ. ಶಿವರಾಮ ಕಾರಂತ**
೪೨.	**ಚಿತ್ರಚಿತ್ತ** ಇಳಾ ಪ್ರಕಾಶನ, ಬೆಂಗಳೂರು. ೨೦೦೦	**ಚಿ. ಸು. ಕೃಷ್ಣಸೆಟ್ಟಿ**
೪೩.	**ಚಿತ್ರಕಲಾ ಚಿಂತನೆ** ಪ್ರಗತಿ ಪ್ರಕಾಶನ, ದಾವಣಗೆರೆ ೧೯೯೫	**ಶಂಕರ ಪಾಟೀಲ**

೪೪. **ಚಿತ್ರಕಲಾ ದರ್ಪಣ** — ಎ. ಟಿ. ಕಾಳೆ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೪

೪೫. **ಚಿತ್ರಕಲಾ ಪ್ರಪಂಚ** — ಪ್ರ. ಸಂ. ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು.
೧೯೯೫

೪೬. **ಚಿತ್ರಕಲಾವಿದ ಎ. ಬಿ. ಹಿರೇಗೌಡರ**
ಬದುಕು ಮತ್ತು ಕಲಾಕೃತಿಗಳು — ಡಾ. ರವೀಂದ್ರ ಎಸ್. ಕಮ್ಮಾರ
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಕ.ವಿ.ವಿ. ಹಂಪಿ.
೨೦೦೮

೪೭. **ಚಿತ್ರಕಲಾವಿದ ಎಸ್. ಎಂ. ಪಂಡಿತ್**
ಬದುಕು ಮತ್ತು ಕಲಾಕೃತಿಗಳು — ಡಾ. ಮೋಹನರಾವ್ ಪಂಚಾಳ
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಗುಲಬರ್ಗಾ ವಿ.ವಿ. ಗುಲಬರ್ಗಾ
೨೦೦೮

೪೮. **ಚಿತ್ರಕಲಾವಿದ ಚಂದ್ರವರ್ಮ**
ಬಿ. ಆರ್. ಕೋಟ್ಯಾಳಕರ – ಒಂದು ಅಧ್ಯಯನ — ಡಾ. ಜಿ. ಎಸ್. ಭೂಸಗೊಂಡ
ಅಪ್ರಕಟಿತ ಡಿ.ಲಿಟ್. ಮಹಾಪ್ರಬಂಧ
ಕನ್ನಡ ವಿ.ವಿ. ಹಂಪಿ. ೨೦೧೨

೪೯. **ಚಿತ್ರಕಲಾವಿದ ಡಿ. ವಿ. ಹಾಲಭಾವಿ** — ಶಂಕ್ರಪ್ಪ ಎಂ. ಕುಂದಗೋಳ
ಅವಿರತ ಪ್ರಕಾಶನ, ಬೆಂಗಳೂರು
೨೦೦೯

೫೦. **ಚಿತ್ರಕಲೆ** — ಅ. ನ. ಕೃಷ್ಣರಾಯ
ಎಚ್. ವೆಂಕಟರಾಮಯ್ಯ ವಿದ್ಯಾನಿಧಿ
ಬುಕ್ ಡಿಪೋ, ಮೈಸೂರು.
೧೯೬೦

೫೧.	**ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು (ಸ್ಮರಣ ಸಂಚಿಕೆ)** ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ ೧೯೯೫	**ಸಂ. ಡಾ. ಎಸ್. ಸಿ. ಪಾಟೀಲ**
೫೨.	**ಚಿತ್ರಕಲೆ ಮತ್ತು ಮನೋವಿಕಾಸ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪	**ಡಾ. ಸಿ. ಆರ್. ಚಂದ್ರಶೇಖರ**
೫೩.	**ಚಿತ್ರಾಕ್ಷಿ (ಸ್ಮರಣ ಸಂಚಿಕೆ)** ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ. ೧೯೯೫	**ಸಂ. ಡಾ. ಎಸ್. ಸಿ. ಪಾಟೀಲ**
೫೪.	**ಡಿ. ವಿ. ಹಾಲಭಾವಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೭	**ಎಸ್. ಕೆ. ಹೂಗಾರ**
೫೫.	**ದೃಶ್ಯಕಲಾನ್ವೇಷಕ ಪ್ರೊ. ಎಸ್. ಸಿ. ಪಾಟೀಲ** ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ. ೨೦೧೬	**ಎಲ್. ಶಿವಲಿಂಗಪ್ಪ**
೫೬.	**ದೃಶ್ಯಕಲಾ ಸಂಶೋಧನಾ ನೆಲೆಗಳು ಸಂಪುಟ–೧** ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ. ೨೦೧೬	**ಸಂ. ಪ್ರೊ. ಎಸ್. ಸಿ. ಪಾಟೀಲ**
೫೭.	**ದೃಶ್ಯಕಲಾ ಸಂಶೋಧನಾ ನೆಲೆಗಳು ಸಂಪುಟ–೨** ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ. ೨೦೧೬	**ಸಂ. ಪ್ರೊ. ಎಸ್. ಸಿ. ಪಾಟೀಲ**
೫೮.	**ದೃಶ್ಯಧ್ಯಾನ** ಚಿತ್ರಾಲಯ ಪಬ್ಲಿಕೇಶನ್, ಕಲಬುರಗಿ ೨೦೧೫	**ಡಾ. ಪರಶುರಾಮ ಪಿ.**

೫೯. **ದೃಶ್ಯಪದದೃಶ್ಯ** — **ಡಾ. ಶಿವಾನಂದ ಬಂಟನೂರು**
ಅಲಕಾ ಪ್ರಕಾಶನ, ಖೈನೂರ
೨೦೧೨

೬೦. **ದೃಶ್ಯಾನುಭವ** — **ಡಾ. ಮೋಹನರಾವ್ ಪಂಚಾಳ**
ಅನ್ನಪೂರ್ಣ ಪ್ರಕಾಶನ, ಬೀದರ
೨೦೧೦

೬೧. **ದೃಷ್ಟಿ–ಸೃಷ್ಟಿ** — **ಡಾ. ಶಿವಾನಂದ ಬಂಟನೂರು**
ಅಲಕಾ ಪ್ರಕಾಶನ, ಖೈನೂರ
೨೦೦೯

೬೨. **ನವ್ಯಕಲೆ ಹಾಗೂ ಕಲೆಗಾರರ ಕಥೆಗಳು** — **ಬಿ. ಪಿ. ಬಾಯಿರಿ**
ಪ್ರತಿಭಾ ಗ್ರಂಥಮಾಲೆ, ಧಾರವಾಡ
೧೯೮೨

೬೩. **ನಾಡೋಜ ಡಾ. ಜೆ. ಎಸ್. ಖಂಡೇರಾವ್** — **ಡಾ. ಮಲ್ಲಿಕಾರ್ಜು ಸಿ.ಬಾಗೋಡಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೪

೬೪. **ನಿಜದ ನೆಲೆ** — **ಸಂ. ಡಾ. ಎಸ್. ಸಿ. ಪಾಟೀಲ**
(ಬಿ.ಕೆ. ಹಿರೇಮಠರ ಅಭಿನಂದನ ಗ್ರಂಥ) — **ಸತ್ಯಾನಂದ ಪಾತ್ರೋಟ**
ವೈರಾಗ್ಯ ಮಲ್ಲಣಾರ್ಯ ಪ್ರಕಾಶನ,
ಬಾಗಲಕೋಟ.
೨೦೦೩

೬೫. **ಬಾರೋಕ ಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೨೦೦೯

೬೬. **ಭಾರತೀಯ ಚಿತ್ರಕಲೆ** — **ಡಾ. ಶಿವರಾಮ ಕಾರಂತ**
ಪುತ್ತೂರು ಪ್ರಕಾಶನ.
೧೯೩೦

೬೭. **ಭಾರತೀಯ ಚಿತ್ರಕಲೆ** — **ಡಾ. ಶಿವರಾಮ ಕಾರಂತ**
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು, ೧೯೯೮

೬೮. **ರಂಗೋಲಿ ಚಿತ್ರಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೨೦೦೪

೬೯. **ರೇಖಾಚಿತ್ರ** — **ಸಂ. ಬಿ. ವಿ. ಕೆ. ಶಾಸ್ತ್ರಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೧

೭೦. **ಲೇಖಾವರಣ** — **ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ**
ಸರಚಂದ್ರ ಪ್ರಕಾಶನ, ಚಿತ್ತಾಪುರ
೨೦೦೯

೭೧. **ವರ್ಣ ಸಂಚಯ** — **ಡಾ. ಎಸ್. ಸಿ. ಪಾಟೀಲ**
ವಿಜಯ ಲಲಿತಕಲಾ ಮಹಾವಿದ್ಯಾಲಯ,
ಇಳಕಲ್. ೨೦೦೧

೭೨. **ವರ್ಣಾವರ್ಣ (ಪ್ರಜಾವಾಣಿ ಕಲಾವಿಮರ್ಶೆ)** — **ಚಿ. ಸು. ಕೃಷ್ಣಸೆಟ್ಟಿ**
ಚಿತ್ತಾರ ಪ್ರಕಾಶನ, ಬೆಂಗಳೂರು.
೨೦೦೧

೭೩. **ವಿ. ಟಿ. ಕಾಳೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೭೪. **ವಿಜಯ ಸಿಂಧೂರರ ಕಲಾಕೃತಿಗಳ ಒಳನೋಟಗಳು** — **ಡಾ. ಸುನೀತಾ ಪಾಟೀಲ**
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಕ.ವಿ.ವಿ. ಹಂಪಿ ೨೦೧೦

೭೫. **ಶಂಕರರಾವ್ ಆಳಂದಕರ** — **ಡಾ. ಎಂ. ಜಿ. ಬಿರಾದಾರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೬

೨೬. **ಶಂಕರಗೌಡ ಬೆಟ್ಟದೂರ** — **ಎಚ್. ಎ. ಅನಿಲ್‌ಕುಮಾರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೨೭. **ಸಮಕಾಲೀನ ಕಲೆ** — **ಸಂ. ಬಿ.ವಿ.ಕೆ. ಶಾಸ್ತ್ರೀ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೭

೨೮. **ಸಾಹಿತ್ಯ ಮತ್ತು ಚಿತ್ರಕಲೆ** — **ಚಂದ್ರಕಾಂತ ಕುಸನೂರ**
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು ೧೯೯೫

೨೯. **ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ** — **ಡಾ. ಎಸ್. ಸಿ. ಪಾಟೀಲ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,
ಧಾರವಾಡ. ೨೦೧೦

೩೦. **ಸಿ. ಚಂದ್ರಶೇಖರ** — **ರಾಜಪ್ಪ ದಳವಾಯಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೩೧. **ಸೌಂದರ್ಯ ಮತ್ತು ರಸಸ್ವಾದನೆ** — **ಸಂ. ಎಂ. ಎಚ್. ಕೃಷ್ಣಯ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೯

೩೨. **ಸೌಂದರ್ಯ ಶಾಸ್ತ್ರ** — **ಸಂ. ಡಾ. ಕಾಶೀನಾಥ ಅಂಬಲಗೆ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೩

೩೩. **ಸೌಂದರ್ಯ ಮೀಮಾಂಸೆ** — **ಡಾ. ವಿ. ಕೃ. ಗೋಕಾಕ**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೭೩

೩೪. **ಸೌಂದರ್ಯ ಮತ್ತು ಸಮೀಕ್ಷೆ** — **ಡಾ. ಜಿ. ಎಸ್. ಶಿವರುದ್ರಪ್ಪ**
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು.
೧೯೬೫

೮೫. **ಹಚ್ಚೆ ಚಿತ್ರಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೮೬. **ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಶ್ವಕೋಶ ಲಲಿತಕಲೆಗಳ ಸಂಪುಟ** — **ಡಾ. ಪಿ. ಕೆ. ಖಂಡೋಬಾ**, **ಡಾ. ಎಸ್. ಸಿ. ಪಾಟೀಲ**
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ. ೨೦೧೨

೦೨. ಇಂಗ್ಲೀಷ್ ಗ್ರಂಥಗಳು

01. **Aesthetics** - **Yuri Barewe**
Progress Publisher,
Mascow

02. **Arts and the Man** - **Irwin Edman**
The New American Library,
New York. 1949

03. **Amarnatha Sehgal** - **Amit Mukhopadhyay**
Lalitkala Academy,
New Delhi
1993

04. **Bhagat** - **R. K. Bhatnagar**
Lalitkala Academy,
New Delhi
1964

05. **C Chandrashekara**
Exhibition of Computer and
Graphic prints (Paintings Catalough)
2007-08

06. **Cezanne** - **Elie Faure**
Les Edtions Braun & C.
Paris

07. **Devalakunda Vadiraj** - **Prof. S K Ramchandra Rao**
Directorate of Archaeology &
Museums, Govt of Karnataka.
1994

08. **Gaganendranath Tagore** - **R. K. Bhatnagar**
Lalitkala Academy,
New Delhi
1964

09. **Hebbar** - **Rekha Rao**
An artist's Quest **Rajani prasanna**
Ministry of Cultere
Government of India and
K K Hebbar's Art Foundation
2011

10. **Image & Impression** - **Chandrashekara C**
Paintings Catalough
2010

11. **Indian Painting** - **Percy Brown**
Y M C A Publishing House,
Calcutta
1960

12. **Jamini Roy** - **Jaya Appasamy**
Lalitkala Academy,
New Delhi
1973

13. **K. Venkatappa** - **Prof. S K Ramchandra Rao**
- The Man and his Art
Directorate of Kannada and Culture,
Govt of Karnataka.
1988

14. **M. Reddeppa Naidu** - **Amit Mukhopadhyay**
Lalitkala Academy,
New Delhi
1994

15. **Nicholas Rorich** - **Amit Mukhopadhyay**
Lalitkala Academy,
New Delhi
1992

16. **P. T Reddy** - **Amit Mukhopadhyay**
Lalitkala Academy,
New Delhi
1992

17. **Seven Days** - **Leonid Volynsky**
Progress Publishers, Moscow
1979

18. **The Legacy of Raja Ravi Varma** **-Edt. Prof. Ratan Parimoo**
Maharaja Fatesingh Museum Trust
Baroda. Gujrat
1998

19. **The Pocket History of American Painting** **James Thomas Flexner**
Pocket Books Inc., New York
1950

20. **The Great Artists 1 - Van Gogh**
Marshall Cavendish Partworks Ltd.
London
1993

21. **The Great Artists 7 - Blake**
Marshall Cavendish Partworks Ltd.
London 1993

22. **The Great Artists 8 - Gauguin**
Marshall Cavendish Partworks Ltd.
London
1993

23. **The Great Artists 10 - Goya**
Marshall Cavendish Partworks Ltd.
London. 1993

24. **The Nude** **- Kenneth Clark**
Pelican Book,
1970

25. **Vision and Creation** **-Nandalal Bose**
Centenary Publication, Kolkata
1999

ಅನುಬಂಧ - ೩

ಕಲಾಕೃತಿಗಳ ಸಂಗ್ರಹದ ನೆಲೆಗಳು

೦೧. ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ

೦೨. ರಾಷ್ಟ್ರೀಯ ಆಧುನಿಕ ಕಲಾಗ್ಯಾಲರಿ, ನವದೆಹಲಿ

೦೩. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೦೪. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೦೫. ವಲಯ ಲಲಿತಕಲಾ ಅಕಾಡೆಮಿ, ಚೆನ್ನೈ

೦೬. ಕೇರಳ ಲಲಿತಕಲಾ ಅಕಾಡೆಮಿ, ತಿರುವನಂತಪುರಂ

೦೭. ಕರ್ನಾಟಕ ಸರ್ಕಾರದ ವಸ್ತುಸಂಗ್ರಹಾಲಯ, ಬೆಂಗಳೂರು

೦೮. ಕಲಾಭವನ, ಶಾಂತಿನಿಕೇತನ, ಪಶ್ಚಿಮ ಬಂಗಾಳ

೦೯. ಸರ್ಕಾರಿ ಚಿತ್ರಕಲಾ ಕಾಲೇಜು, ದಾವಣಗೆರೆ

೧೦. ಮೂರಲ್–ಚಿತ್ರದುರ್ಗ, ರೈಲ್ವೆ ನಿಲ್ದಾಣ, ದಕ್ಷಿಣ ರೈಲ್ವೆ, ಚಿತ್ರದುರ್ಗ\

೧೧. ವಿವೇಕಾನಂದ ಲಲಿತಕಲಾ ಮಹಾವಿದ್ಯಾಲಯ, ರಾಯಭಾಗ

೧೨. ಕಲಾ ಕಾಲೇಜು, ಹೈದ್ರಾಬಾದ ಹಾಗೂ ದೇಶ–ವಿದೇಶಗಳ ಖಾಸಗಿ ಸಂಗ್ರಹಗಳಲ್ಲಿ

೧೩. ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅನುಬಂಧ - ೪

ಸಿ. ಚಂದ್ರಶೇಖರ ಅವರ ಜೀವನದ ಪ್ರಮುಖ ಹಂತಗಳು

ಜನನ ಮತ್ತು ಸ್ಥಳ	:	೧೯೪೭, ಬೆಂಗಳೂರು
ಚಿತ್ರಕಲಾ ಶಿಕ್ಷಣ	:	ಜಿ.ಡಿ ಆರ್ಟ್ ೧೯೭೩ – ಡಿಪ್ಲೊಮಾ ಇನ್ ಡ್ರಾಯಿಂಗ್ ಅಂಡ್ ಪೇಂಟಿಂಗ್ (೫ ವರ್ಷಗಳು) ಎ.ಎಂ. ೧೯೭೫ – ಆರ್ಟ್ ಮಾಸ್ಟರ್ ಕೋರ್ಸ್‌ನಲ್ಲಿ ಕಲಾಶಿಕ್ಷಕ ವ್ಯಾಸಂಗ (೨ ವರ್ಷಗಳು), ಕೆನ್ ಕಲಾಶಾಲೆ, ಬೆಂಗಳೂರು ಪಿ.ಡಿ.ಎಫ್.ಎ. ೧೯೮೦ – ಗ್ರಾಫಿಕ್ ಕಲೆಯಲ್ಲಿ ಸ್ನಾತಕೋತ್ತರ ಪದವಿ ೨ ವರ್ಷಗಳ ಪೋಸ್ಟ್ ಡಿಪ್ಲೊಮಾ, ವಿಶ್ವಭಾರತಿ ವಿಶ್ವವಿದ್ಯಾಲಯ, ಶಾಂತಿನಿಕೇತನ, ಪಶ್ಚಿಮ ಬಂಗಾಳ
ಪ್ರಶಸ್ತಿಗಳು	:	ರಾಜ್ಯೋತ್ಸವ ರಾಜ್ಯ ಪ್ರಶಸ್ತಿ, ಕರ್ನಾಟಕ ಸರ್ಕಾರ–೧೯೯೯; ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು–೧೯೯೯; ಕರ್ನಾಟಕ ಲಲಿತಕಲಾ ಅಕಾಡೆಮಿ ರಾಜ್ಯ ಪ್ರಶಸ್ತಿ – ೨೦೦೦
ಬಹುಮಾನಗಳು	:	ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಬಹುಮಾನ (ಚಿತ್ರಕಲಾ ಪರಿಷತ್ತಿನ), ಬೆಂಗಳೂರು, ೧೯೭೨; ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದ ಬಹುಮಾನ, ೧೯೭೨, ೭೯ ಮತ್ತು ೮೦; ಕರ್ನಾಟಕ ಲಲಿತಕಲಾ ಅಕಾಡೆಮಿಯ ೨ ವರ್ಷದ ಉನ್ನತ ವ್ಯಾಸಂಗ ಶಿಷ್ಯ ವೇತನ, ೧೯೭೯, ೮೧

ಪರಿಶ್ರಮ ಮತ್ತು ಸಾಧನೆಗಳು

ಏಕವ್ಯಕ್ತಿ ಕಲಾಪ್ರದರ್ಶನ

೧೯೮೦	:	ಗ್ರಾಫಿಕ್ ಕಲಾಕೃತಿಗಳ ಪ್ರದರ್ಶನ, ಕಲಾಭವನ, ಶಾಂತಿನಿಕೇತನ, ಪಶ್ಚಿಮ ಬಂಗಾಳ
೧೯೯೨	:	ರೇಖಾಚಿತ್ರಗಳ ಪ್ರದರ್ಶನ (ಏಕವ್ಯಕ್ತಿ), ಕೆನ್ ಕಲಾಶಾಲೆ, ಬೆಂಗಳೂರು
೧೯೯೮	:	ವರ್ಣಚಿತ್ರಗಳ ಪ್ರದರ್ಶನ, ಇಮೇಜಸ್ ಆರ್ಟ್ ಗ್ಯಾಲರಿ, ಬೆಂಗಳೂರು.

ಪ್ರಮುಖ ಸಾಮೂಹಿಕ ಪ್ರದರ್ಶನಗಳು

೧೯೭೧	:	ವಸಂತೋತ್ಸವ ಕಲಾಪ್ರದರ್ಶನ, ಬೆಂಗಳೂರು
೧೯೭೨, ೭೯, ೮೦	:	ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಚಿತ್ರಕಲಾ ಪ್ರದರ್ಶನ, ಬೆಂಗಳೂರು
೧೯೮೦	:	ಗ್ರಾಫಿಕ್ ಕಲಾಕೃತಿಗಳ ಪ್ರದರ್ಶನ, ರಾಣು ಮುಖರ್ಜಿ ಆರ್ಟ್ ಗ್ಯಾಲರಿ, ಕಲ್ಕತ
೧೯೮೦	:	ಗ್ರಾಫಿಕ್ ಕಲಾಕೃತಿಗಳ ಪ್ರದರ್ಶನ, ರಾಮ್ ನೀಲ್ ಆರ್ಟ್ ಗ್ಯಾಲರಿ, ಬೆಂಗಳೂರು
೧೯೮೧	:	“ರಿಧಂ” ಕಲಾಸಂಸ್ಥೆಯ ಸಾಮೂಹಿಕ ಕಲಾಪ್ರದರ್ಶನ, ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು.
೧೯೮೨, ೮೪, ೮೭, ೮೮ ಮತ್ತು ೯೬	:	ರಾಷ್ಟ್ರೀಯ ಕಲಾಪ್ರದರ್ಶನ, ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ
೧೯೮೩, ೮೪	:	ಕರ್ನಾಟಕದ ೧೬ ಪ್ರಮುಖ ಕಲಾವಿದರ ಕಲಾಕೃತಿಗಳ ಕರ್ನಾಟಕ ಕಲಾಯಾತ್ರೆ ಪ್ರದರ್ಶನ (ರಾಜ್ಯದ ೨೫ ಕೇಂದ್ರಗಳಲ್ಲಿ)
೧೯೮೬	:	ಅಮೇರಿಕಾದಲ್ಲಿ ನಡೆದ ಭಾರತೀಯ ಸಾಂಸ್ಕೃತಿಕ ಉತ್ಸವದಲ್ಲಿ ಗ್ರಾಫಿಕ್ ಕಲಾಕೃತಿಗಳ ಪ್ರದರ್ಶನ (ಪಾಲ್‌ಲಿಂಗ್ರನ್ ಅವರ ಆಯ್ಕೆ)

೧೯೮೭ : ಕರ್ನಾಟಕ ಉತ್ಸವ ಕಲಾಪ್ರದರ್ಶನ, ಮ್ಯಾನ್‌ಚೆಸ್ಟರ್

೧೯೮೮ : ಪ್ರತಿಷ್ಠಿತ ಅಂತಾರಾಷ್ಟ್ರೀಯ ಹವ್ವಾನಾ ಬೈನಾಲೆ ಚಿತ್ರಕಲಾ ಪ್ರದರ್ಶನ, ಕ್ಯೂಬಾ (ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿಯು ಆಯ್ಕೆ ಮಾಡಿದ ದೇಶದ ೫ ಜನ ಪ್ರಖ್ಯಾತ ಕಲಾವಿದರಲ್ಲಿ ಕರ್ನಾಟಕದ ಏಕೈಕ ಕಲಾವಿದನಾಗಿ)

೧೯೮೯ : ಅಂತಾರಾಷ್ಟ್ರೀಯ ಪ್ರಥಮ ಬೈನಾಲೆ ಪ್ರದರ್ಶನ, ಭಾರತ ಭವನ, ಭೂಪಾಲ

ಭಾಗವಹಿಸಿದ ಪ್ರಮುಖ ಕಲಾಶಿಬಿರಗಳು

೧೯೭೯ : ಕಲಾವಿದನಾಗಿ, ಅಮೇರಿಕಾದ ಸಾಂಸ್ಕೃತಿಕ ಸಂಸ್ಥೆಯು ಏರ್ಪಡಿಸಿದ್ದ ಅಮೇರಿಕಾದ ಕಲಾವಿದ ಶ್ರೀ ಕಠರಾಲ್ ಸಮ್ಮರ್ ನಿರ್ದೇಶನದ ಗ್ರಾಫಿಕ್ ಕಾರ್ಯಾಗಾರ, ಕಲ್ಕತ್ತ

೧೯೮೧ : ಕಲಾವಿದನಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಏರ್ಪಡಿಸಿದ್ದ ಚಿತ್ರಕಲಾ ಶಿಬಿರ, ಧಾರವಾಡ.

೧೯೮೧ : ಕಲಾವಿದನಾಗಿ, ರಾಜ್ಯ ಯುವಜನ ಕೇಂದ್ರವು ಏರ್ಪಡಿಸಿದ್ದ ರೇಖಾ ಚಿತ್ರಗಳ ಶಿಬಿರ, ಬೆಂಗಳೂರು.

೧೯೮೧ : ಕಲಾವಿದನಾಗಿ, ರಾಷ್ಟ್ರೀಯ ಗ್ರಾಫಿಕ್ ಶಿಬಿರ(ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ), ಶಾಂತಿನಿಕೇತನ

೧೯೮೧ : ಅಖಿಲ ಭಾರತ ರಿಯಲಿಸ್ಟಿಕ್ ಆರ್ಟಿಸ್ಟ್ ಕ್ಯಾಂಪ್ (ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು), ಮದ್ರಾಸ್

೧೯೮೨ : ಕಲಾನಿರ್ದೇಶಕನಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯು ಏರ್ಪಡಿಸಿದ್ದ ಯುವ ಕಲಾ ವಿದ್ಯಾರ್ಥಿ ಕಲಾಶಿಬಿರ, ಹಂಪಿ

೧೯೮೫ : ಕಲಾವಿದನಾಗಿ, ಅಮೇರಿಕಾದ ನಿವಾಸಿ ಕಲಾವಿದ ಡಾ॥ ಕೃಷ್ಣಾರೆಡ್ಡಿಯವರ ನಿರ್ದೇಶನದಲ್ಲಿ "ವಿಸ್ಕಾಸಿಟಿ" ಗ್ರಾಫಿಕ್ ಶಿಬಿರ, ಬೆಂಗಳೂರು

೧೯೮೭ : ಕಲಾವಿದನಾಗಿ, "ಸಾರ್ಕ್" ಸಮ್ಮೇಳನದ ಸಂದರ್ಭದಲ್ಲಿ ನಡೆದ ಅಖಿಲ ಭಾರತ ಸಾಂಸ್ಕೃತಿಕ ಉತ್ಸವದ ಅಖಿಲ ಭಾರತ ಗ್ರಾಫಿಕ್ ಶಿಬಿರ, ಬೆಂಗಳೂರು

೧೯೮೭	:	ಕಲಾವಿದನಾಗಿ, ಕೇರಳ ಲಲಿತಕಲಾ ಅಕಾಡೆಮಿ ಮತ್ತು ದಕ್ಷಿಣ ವಲಯ ಲಲಿತಕಲಾ ಅಕಾಡೆಮಿ ಸಂಯುಕ್ತ ಆಶ್ರಯ ದಕ್ಷಿಣ ಭಾರತದ ಗ್ರಾಫಿಕ್ ಕಲಾವಿದರ ಶಿಬಿರ, ತಿರುವನಂತಪುರ
೧೯೯೦	:	ನಿರ್ದೇಶಕನಾಗಿ, ಗ್ರಾಫಿಕ್ ಕಲಾವಿದರ ಶಿಬಿರ, ಕೆನ್ ಕಲಾಶಾಲೆ, ಬೆಂಗಳೂರು
೧೯೯೨	:	ಕಲಾವಿದನಾಗಿ, (ದಕ್ಷಿಣ ವಲಯ ಲಲಿತಕಲಾ ಅಕಾಡೆಮಿ) ಗ್ರಾಫಿಕ್ ಶಿಬಿರ, ಹೈದ್ರಾಬಾದ್
೧೯೯೩	:	ನಿರ್ದೇಶಕನಾಗಿ, ಯುವಕಲಾವಿದರ ಗ್ರಾಫಿಕ್ ಕಾರ್ಯಾಗಾರ (ಕರ್ನಾಟಕ ಲಲಿತಕಲಾ ಅಕಾಡೆಮಿ), ಹುಬ್ಬಳ್ಳಿ
೧೯೯೪	:	ಕ್ಯೂರೇಟರ್, 'ತುಳಿತಕ್ಕೊಳಗಾದವರು ಮತ್ತು ನಾವು' ಎಂಬ ಕಲಾಶಿಬಿರ (ಕ್ರಿಯಾಚೇತನ ಸಾಂಸ್ಕೃತಿಕ ಸಂಸ್ಥೆ), ಬೆಂಗಳೂರು
೨೦೦೪	:	ನಿರ್ದೇಶಕರಾಗಿ (ಕರ್ನಾಟಕ ಲಲಿತಕಲಾ ಅಕಾಡೆಮಿ) ಮಹಿಳಾ ಕಲಾವಿದರ ಕಲಾಶಿಬಿರ.

ಪ್ರಮುಖ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆ

೧೯೭೪–೮೩	:	ಚಿತ್ರಕಲಾ ಶಿಕ್ಷಕ (ಬೆಂಗಳೂರು ಮಹಾನಗರ ಪಾಲಿಕೆ ಪ್ರೌಢಶಾಲೆ)
೧೯೭೬–೭೮	:	ಕಾರ್ಯದರ್ಶಿ, ಬೆಂಗಳೂರು ವಿಭಾಗ ಚಿತ್ರಕಲಾ ಶಿಕ್ಷಕರ ಸಂಘ, ಬೆಂಗಳೂರು.
೧೯೮೩–೮೪	:	ಸಂಚಾಲಕ, ಕರ್ನಾಟಕ ಕಲಾಯಾತ್ರೆ, ಬೆಂಗಳೂರು.
೧೯೮೩–೮೬	:	ಪ್ರಧಾನ ಕಾರ್ಯದರ್ಶಿ, ೪ನೇ ಕರ್ನಾಟಕ ಕಲಾಮೇಳ, ಬೆಂಗಳೂರು
೧೯೮೩–೯೪	:	ಉಪಾಧ್ಯಕ್ಷ, ೫ನೇ ಕರ್ನಾಟಕ ಕಲಾಮೇಳ, ಬೆಂಗಳೂರು.
೧೯೮೬–೮೯	:	ಅಧ್ಯಯನ ಮಂಡಳಿಯ ಸದಸ್ಯ, ಲಲಿತಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

- ಪ್ರಮುಖ ಕಲಾ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ
- ಅಖಿಲ ಭಾರತ ಗ್ರಾಫಿಕ್ ಕಲೆಯ ಬಗ್ಗೆ ಪ್ರಬಂಧ ಮಂಡನೆ
- ವಿಶ್ವಕನ್ನಡ ಸಮ್ಮೇಳನದಲ್ಲಿ ಸಮಕಾಲೀನ ಕಲೆ ಮತ್ತು ಕೈಗಾರಿಕೆ ಬಗ್ಗೆ ಪ್ರಬಂಧ ಮಂಡನೆ
- ಹಾಸನ ಸಾಹಿತ್ಯ ಸಮ್ಮೇಳನದಲ್ಲಿ ಕಲೆ ಕುರಿತು ಉಪನ್ಯಾಸ
- ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಿಣಿತ ಕಲಾವಿದರಿಗೆ ನೀಡುವ ಗೌರವ ಮಾಸಾಶನ ಆಯ್ಕೆ ಸಮಿತಿಯ ಸದಸ್ಯರು
- ಕೇಂದ್ರ ಸರ್ಕಾರದ ದಕ್ಷಿಣ ವಲಯ ಅಂಚೆ ಇಲಾಖೆ ಹೊರತರುವ ಅಂಚೆ ಚೀಟಿಗಳ ಸಲಹಾ ಸಮಿತಿಯ ಸದಸ್ಯರು
- ವರ್ಣಶಿಲ್ಪಿ ವೆಂಕಟಪ್ಪ ಚಿತ್ರಕಲಾ ಪ್ರಶಸ್ತಿಯ ಆಯ್ಕೆ ಸಮಿತಿ ಸದಸ್ಯರು
- ಬೆಂಗಳೂರು ಮಹಾನಗರ ಪಾಲಿಕೆಯ ಸೌಂದರ್ಯೀಕರಣ ಮತ್ತು ಕನ್ನಡೀಕರಣ ಸಮಿತಿಯ ಸದಸ್ಯರು
- ಅನೇಕ ರಾಜ್ಯ ಮತ್ತು ವಲಯ ಕೇಂದ್ರಗಳ ಕಲಾಪ್ರದರ್ಶನಗಳ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ್ದಾರೆ.

